ಸಂವಾದ

೭

ಈ ಸಂಕಲನದ ಸಂಪಾದಕರು :

ರಾಘವೇಂದ್ರ ಪಾಟೀಲ

ಈ ಸಂಕಲನದ ಲೇಖಕರು :

ಡಾ|| ಹೆಚ್. ಎಸ್. ವೆಂಕಟೇಶಮೂರ್ತಿ, 101, ಗಣೇಶಮಂದಿರ ರಸ್ತೆ,
ಎರಡನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು–560028

ಜಿ. ಎಲ್. ರಾಮಪ್ಪ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ–577531

ಎಚ್. ಎಸ್. ಶಿವಪ್ರಕಾಶ್, ಗೃಹ ವಿಜ್ಞಾನ ಕಾಲೇಜು, ಪ್ಯಾಲೇಸ್ ರೋಡ್,
ಬೆಂಗಳೂರು–560001

ರಾಮಚಂದ್ರ ದೇವ, ಅಂಚೆ ಕಲ್ಮಡ್ಕ, ದಕ್ಷಿಣ ಕನ್ನಡ ಜಿಲ್ಲೆ–574257

ಎಂ. ಎಸ್. ಶ್ರೀರಾಮ್, ನಂ. 3, ನಾಲ್ಕನೇ ಮುಖ್ಯ ರಸ್ತೆ, ಚಾಮರಾಜಪೇಟೆ
ಬೆಂಗಳೂರು–5600018

ಎಸ್. ನಟರಾಜ ಬೂದಾಳು, ಶೀಘ್ರಲಿಪಿಗಾರರು, ಅಂಚೆ ಅಧೀಕ್ಷಕರ ಕಛೇರಿ,
ತುಮಕೂರು-572102

ಸತ್ಯನಾರಾಯಣರಾವ್ ಅಣತಿ, 'ರಚನ', ಮೈಕ್ರೋವೇವ್ ಸ್ಟೇಷನ್ ಹಿಂಭಾಗ
ವೈ. ಆರ್. ಪರಮೇಶ್ವರಪ್ಪ ನಗರ, ಶಿವಮೊಗ್ಗ-577201

ರಾಘವೇಂದ್ರ ಪಾಟೀಲ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ-577531

ಋತು ಸಂಹಾರ

ವಸಂತ ಋತು.

ಸರ್ಗ : ಆರು

ಡಾ|| ಹೆಚ್. ಎಸ್. ವೆಂಕಟೇಶಮೂರ್ತಿ

ಮೂಲ : **ಕಾಳಿದಾಸ**

ಚಿಗುರು ಮಾವಿನ ಹೊಳೆವ ಹೂಗಳೆ ಹರಿತ ಬಾಣಗಳಾಗಲು
ಝೇಂಕೃತಿಯ ದುರುದುಂಬಿ ಮಾಲೆಯೆ ಬಿಲ್ಲ ಹೆದೆ ಹುರಿಯಾಗಲು
ಕಾಮುಕಾತರರಂತರಂಗಕೆ ಶರಗಳೆಸೆಯುತ ಸೀಳಲು
ಬಂದನುಬ್ಬರದಿಂದಲಬ್ಬರಿಸುತ್ತ ಚೈತ್ರದ ಯೋಧನು ||೧||

ಮರದಲರಳಿವೆ ಹೂವು ಕೊಳದಲಿ ಕಮಲಗಳು ತೇಲುತ್ತಿವೆ
ರಾಗದಾವೇಗಕ್ಕೆ ಸಿಕ್ಕವರೆದೆಗಳಲಿ ಬೆದೆಯುಕ್ಕಿವೆ.
ಹಗಲು ಗೆಲುವಾಗಿಹುದು, ಸಂಜೆಯು ರಂಜನೀಯವು ಎನಿಸಿದೆ
ಚೈತ್ರ ಮಾಸವು ಜಗದ ಚೆಲುವಿಗೆ ಚೆಲುವಿನುಡುಗರೆ ನೀಡಿದೆ. ||೨||

ಕೊಳಗಳಿಗೆ ಮೊಲೆ, ಮೇಖಲೆಗೆ ನೆಲೆ, ತಿಂಗಳಿಗೆ ನಗೆಯಾಟವ
ಸ್ತ್ರೀಯರಿಗೆ ಕಾಮಾರ್ತತೆಯನಿಮ್ಮಾವಿಗೋ ಹೂ ಮಾಟವ
ಒಪ್ಪಿಸುವ ಈ ಚೈತ್ರ ಮಾಸವನೆಷ್ಟು ಮೆಚ್ಚಿಯು ಸಾಲದು
ಸೊಬಗಿಗಿದು ಸೊಬಗೀವ ಪರಿ ಪರಿಣಾಮಕಾರಕವಾದುದು ||೩||

ಹೊಸಕುಸುಬೆ ಹೂಬಣ್ಣದೊಸ್ಪಿನ ಪಟ್ಟೆ ಪೀತಾಂಬರಗಳ
ಒತ್ತಿ ಸುತ್ತುವರೀಗ ದುಂಡು ನಿತಂಬದುಬ್ಬಿನ ತೊಡೆಗಳ
ಹಳದಿಗೆಂಪಿನ ವಕ್ಷ ಬಂಧಗಳನ್ನು ಹೆಂಗಳು ತೊಟ್ಟರು
ಪುರುಷರೆದೆ ಹಾರಿಸುವ ಬಾವುಟದಂತೆ ಸೆರಗಿಳಿಬಿಟ್ಟರು ||೪||

ಕರ್ಣಿಕಾರಕ ಹೂವು ಪಡೆಯಿತು ಸೊಬಗನಾಕೆಯ ಕಿವಿಯಲಿ
ಅರಳು ಮಲ್ಲಿಗೆ ಬೆಳ್ಳಗಾಯಿತು ಚಂಚಲೆಯ ಮುಖ ಛವಿಯಲಿ
ಅಸುಗೆಗೇರಿತು ಬಣ್ಣ ಕನ್ನೆಯ ಚಾರುಗೆನ್ನೆಯ ಚೆಂಪಲಿ
ಚೆಲುವು ಕೈಹಿಡಿದೆತ್ತಿಕೊಂಡಿದೆ ಚೆಲುವ, ಚೈತ್ರದ ನೆಲೆಯಲಿ ||೫||

ಉಬ್ಬಿದೆದೆಗಳ ಮೇಲೆ ಚಂದನದಿಂದ ನೆಂದಿಹ ಮುತ್ತಿವೆ
ನೀಳ ತೋಳುಗಳನ್ನು ಚಿನ್ನದ ತೋಳು ಬಂದಿಗಳೊತ್ತಿವೆ
ಗೆಜ್ಜೆ ಕಟ್ಟಿದ ಸೊಂಟಪಟ್ಟಿಯು ಜಘನದೇರನು ಹತ್ತಿದೆ
ಅವಳ ಕಾಮಾರ್ತತೆಯು ತೊಟ್ಟಾಭರಣಗಳಿಗೂ ಗೊತ್ತಿದೆ. ||೬||

ಪತ್ರಲೇಖನ ಮಾಡಿದಾನನ ಸ್ವರ್ಣ ಕಮಲಗಳಂತಿವೆ
ಅಲ್ಲಿ ಮೂಡಿದ ಬೆವರಹನಿಗಳು ಮೆಲ್ಲಮೆಲ್ಲಗೆ ಹರಡಿವೆ
ರತ್ನದಾಭರಣಕ್ಕೆ ಮುತ್ತಿನ ಗುಂಡು ಕಟ್ಟಿರುವಂದದೆ
ಸ್ವೇದಬಿಂದುಗಳಿಂದ ಸುಂದರಗೊಂಡ ಹೆಂಗಳ ಮುಖವಿದೆ. ||೭||

ಸಡಿಲವಾದುವು ತೊಡವುಗಳು; ಸಡಿಲಾದುವಾಕೆಯ ತೊಡೆಗಳು
ಕಳಚಿಕೊಂಡವು ತಮಗೆ ತಾವೇ ನೀವಿ, ಸೀರೆಯ ನೆರಿಗಳು
ಕಾವುಗೊಂಡಳು ತರುಣಿ ರಾಗೋದ್ವೇಗದೇರಿಗೆ ಏರುತ
ಬಳಿ ಬರಲು ಪ್ರಿಯಕರನು ಇರುಳೊಳು ಮೈಥುನಕೆ ಕಾತರಿಸುತ ||೮||

ನಾರಿಯರ ಊರುಗಳ ಮಾರ ಸಪೂರ ಗೊಳಿಸಿದ, ಮೆರೆಸಿದ
ಬೆಳ್ಳಗಾಗಿಸಿ ದೇಹವನು ಅಲಸತೆಯ ಮನದಲ್ಲಿರಿಸಿದ
ಮತ್ತೆ ಮತ್ತೆ ಪ್ರಮತ್ತೆಯರು ಮೈಮುರಿದು ಅರೆಗಣ್ಣಾದರು
ಅಂಗಭಂಗಿಗೆ ರಸಿಕಜನ ಮನಸೋತು ಭಂಗಿತರಾದರು ||೯||

ಕಣ್ಣಿನಲಿ ಚಂಚಲತೆಯಾದನು; ಕೆನ್ನೆಯಲಿ ಬಿಳುಪಾದನು
ಎದೆಗಳಲಿ ಬಿರುಸಾದ; ನಿಮ್ನತೆಯಾದ ಕಟಿಯಲ್ಲಾತನು
ಅಡಿಗಡಿಗೆ ಕಂಪಿಸುವ ಜೋಡಿ ನಿತಂಬದಲ್ಲುಬ್ಬಾದನು
ಅಂಗದಲ್ಲೆಳವಟ್ಟ ನೀಪರಿ ಅಂಗವಿಲ್ಲದನಂಗನು ||೧೦||

ನಿದ್ರೆಯಲಸತೆಯಿಂದ ಪದಚಲನಕ್ಕೆ ದಕ್ಕಿಸಿ ವಕ್ರತೆ
ಮದಿರೆಯಲಸತೆಯಿಂದ ಮಾತಿನಗತಿಗೆ ಒದಗಿಸಿ ವಕ್ರತೆ
ಭ್ರೂಲತೆಯ ಬಳುಕಿಂದ ನೋಟಕ್ಕೊದಗಿಸುತ ಒಳಮುರಿಯನು
ಹೆಣ್ಣುಗಳ ಚೆಲುವನ್ನು ಇಮ್ಮಡಿಗೊಳಿಸಿದನು ಆ ಕಾಮನು ||೧೧||

ಹಲವು ಗಂಧಗಳಿಂದ ಬಂಧುರಗೊಳಿಸಿ ವಕ್ಷಸ್ಥಳಗಳ
ಕುಂಕುಮಾಂಕಿತಗೊಳಿಸಿ ಉಬ್ಬಿದ ಹಾಲು ಬಣ್ಣದ ಮೊಲೆಗಳ
ಚಂದನಾಗರು ಕತ್ತೂರಿಯ ತಣಿವಿಂದ ಬೇಗೆಯ ತಣಿಸುತ
ಕಾಯುತ್ತಿದ್ದರು ಪ್ರಿಯತಮರ ಆಗಮನವನು ಹಾರೈಸುತ ||೧೨||

ದಪ್ಪ ಬಟ್ಟೆಯ ತೊರೆದು ಧರಿಸಿದರಾಗ ಕಾಲಾಗರುವಿನ
ಧೂಪಕಟ್ಟಿದ ಬಣ್ಣ ಬಣ್ಣದ ತೆಳ್ಳನೆಯ ಮೇಲುದವನು
ಕುಸುಮದಾಸವ ಸೂಸುವಧರಗಳಲ್ಲಿ ಅರಳಿಸಿ ನಗುವನು
ಸೆಳೆಯುತಿದ್ದರು ಪ್ರಮದೆಯರು ಪ್ರಿಯತಮರುಗಳ ಅಳಿಮನವನು ||೧೩||

ಚೂತದಾಸವ ಹೀರಿ ರಾಗೋದ್ವೇಗಗೊಂಡಿದೆ ಕೋಗಿಲೆ
ಚಾಚಿ ಚುಂಚಿಗೆ ಚುಂಚು ಅರಸಿತಿಯನ್ನು ಚುಂಬಿಸುವಾಗಲೆ
ಇತ್ತ ಹೂಮಧುಮತ್ತ ಮಧುಕರ ಮುತ್ತನಿಟ್ಟಿದೆ ನಲ್ಲೆಗೆ
ಹೀಗೆ ಚೈತ್ರೋದಯವು ಸೆಳೆದಿದೆ ಸಗ್ಗವನು ಬುವಿಯಲ್ಲಿಗೆ ||೧೪||

ಹವಳಗೆಂಪಿನ ಚಿಗುರಲಂಪಿನ ಮಾವು ತುಸುವೇ ಬಾಗಿವೆ
ಹೂ ತಳೆದು ಚೆಲುವಾದ ರೆಂಬೆಗಳೆಲರು ಬೀಸಲು ಬೀಗಿವೆ
ಹೀಗಿರುವ ತೂಗಿರುವ ಮಾವುಗಳೀಗ ಮಹಿಳಾ ಲೋಕವ
ಏಕೊ ಕೆರಳಿಸಿ ಮೂಡಿಸಿವೆ ಮನದಲ್ಲಿ ರತಿಯುದ್ರೇಕವ ||೧೫||

ಮೂಲದಿಂದಲೆ ತಾಮ್ರಗೆಂಪಿನ ಚಿಗುರುಗಳ ಹೊರದೂಡಿದೆ
ಪುಷ್ಪಗುಚ್ಛಗಳನ್ನು ಆಮೂಲಾಗ್ರವಾಮರ ತಾಳಿದೆ
ಪಡ್ಡೆ ಪ್ರಾಯದ ಹೆಣ್ಣುಗಳು ಬೇಗುದಿಯ ಸಿಡಿಮಿಡಿ ಶೋಕವ
ಪಡೆದುದೇತಕೊ ಕಂಡಕೂಡಲೆ ಹೂತು, ಚಿಗುರಿದಶೋಕವ ||೧೬||

ಮಾಧವೀಲತೆ ಪಲ್ಲವಿಸಿ ತಿಳಿಗಾಳಿ ಬೀಸಿಗೆ ತೂಗಿವೆ
ಭ್ರಮರಗಳು ಸಂಭ್ರಮಿಸಿ ಹೂಮುಟಿ ಹೀರಿ ಚುಂಬನಗೊಳುತಿವೆ
ತನು ಬಳುಕು; ಎಳೆಚಿಗುರು; ಹೂಜೇನನ್ನು ಹೀರುವ ಅಳಿಗಳು
ಕಂಡು ಕಾತರಗೊಂಡು ಗಂಡರನಪ್ಪಿಕೊಂಡರು ಹೆಂಗಳು ||೧೭||

ಕಾಮಿನಿಯ ಮುಖ ಕಾಂತಿಯನ್ನಪಹರಿಸಿ ಕರುವಕ ಮರಗಳು
ಈಗ ತಾನೇ ಪ್ರಕಟಪಡಿಸಿವೆ, ಅರಳಿರಲು ಹೊಸ ಹೂಗಳು
ಕಂಡ ರಸಿಕರು ಹೇಗೆ ತಾವೇ ಕಾತರಿಸದಿರಬಲ್ಲರು ?
ಪುಷ್ಪ ಬಾಣದ ಹತಿಗೆ ಕಸಿವಿಸಿಪಟ್ಟು ನೊಂದರು ಎಲ್ಲರು. ||೧೮||

ಕಂಡ ಕಂಡಲ್ಲೆಲ್ಲ ಕಿಂಶುಕ ಮರಗಳಿಗೆ ಹೂ ಅರಳಿವೆ
ಗಾಳಿ ಬೀಸಿಗೆ ಉರಿಯನಾಲಗೆಯಂತೆ ಹೂಗಳು ತೂಗಿವೆ
ಅಂಥ ಹೂಮರದಿಂದ ಆವೃತವಾದ ಆ ಭೂಭಾಗವು
ಲೋಹಿತಾಂಬರವುಟ್ಟ ಮದುಮಗಳಂತೆ ಕಾಣುತ್ತಿರುವುದು. ||೧೯||

ಕಿಂಶುಕವು ಗಿಳಿಕೊಕ್ಕಿನಂದದ ಹೂವಿನಿಂದೆದೆ ಬಗಿದನು
ಸಾಲದೇ ಆ ಕರ್ಣಿಕಾರಕದಿಂದ ಹೃದಯವು ಸೀಳುದು
ಆಗಲೇ ನೊಂದಿರುವ ವಿರಹಿಗಳನ್ನು ಇನ್ನೂ ಹಿಂಡಲು
ಹಾಡಬೇಕೇ ಮತ್ತೆ ಸ್ವರವನ್ನೆತ್ತಿ ಈ ಕೋಗಿಲೆಗಳು ! ||೨೦||

ಹರ್ಷಗೊಂಡಾ ಗಂಡು ಕೋಗಿಲೆ ಹಿಂಡು ಕೂಜನ ಮಾಡಲು
ಮತ್ತ ಮಧುಕರ ಜಾಲ ಝೇಂಕರಿಸುತ್ತ ಹೂಗಳ ಕಾಡಲು
ಗೌರವಸ್ಥ ಕುಟುಂಬಗಳ ಕುಲವಧುಗಳೂ ಮೈಮರೆತರು
ನಾಚಿಕೆಯ ಬದಿಗಿಟ್ಟು ತಾವೇ ಪುರುಷರನು ರತಿಗೆಳೆದರು ||೨೧||

ಹೂತಳೆದ ಇಮ್ಮಾನ ಟೊಂಗೆಗಳನ್ನು ಮೆಲ್ಲಗೆ ತೊನೆಸುತ
ಕೋಗಿಲೆಯ ಕೂಜನದ ಅಲೆಗಳನೆಲ್ಲೆಡೆಗೆ ವಿಸ್ತರಿಸುತ
ಇಬ್ಬನಿಯ ಸೋಕಿರದ ಕಾರಣ ಹಿತ ಸಮೀರಣವೆನಿಸುತ
ಮಂದ ಮಾರುತ ಎಂದು ಬೀಸಿದೆ ರಸಿಕರೆದೆಗಳ ಸೆಳೆಯುತ ||೨೨||

ಚೆಲುವೆಯರ ನಗೆಯಂತೆ ಬೆಳ್ಳಗೆ ಹೊಳೆವ ಕುಂದದ ಹೂಗಳು
ತುಂಬಿ ತುಳುಕುವ ಬಯಲುಗಳನೊಳಗೊಂಡಿರುವ ಉಪವನಗಳು
ಸರ್ವಸಂಗ ತ್ಯಾಗಿಗಳ ವರ ಯೋಗಿಗಳ ಜಿತ ಮನವನು
ಸೆಳೆವವೆನ್ನಲು ಹೇಳಬೇಕೇ ಇನ್ನು ರಸಿಕರ ಗತಿಯನು ॥೨೩॥

ಹೊನ್ನಡಾಬುಗಳೀಗ ಜಾರಿವೆ, ಮುತ್ತು ಮೊಲೆಗಳಿಗಂಟಿವೆ.
ಕಾಮನುಪಟಳದಿಂದ ತೊಡೆಗಳು ಸಡಿಲಿ, ತುಟಿ ಮುಲುಗುಟ್ಟಿವೆ
ಇಂಥ ಹೆಣ್ಣುಗಳನ್ನು ಕಂಡವರನ್ನು ಗೆಲ್ಲನೆ ಮಾರನು ?
ಜೊತೆಗಿರಲು ಋತುರಾಜ, ಅಳಿಗಳ ಧಾಳಿ, ಕೋಗಿಲೆ ಗಾಯನ ? ॥೨೪॥

ಹಲವು ಬಗೆ ಹೂವಿಂದ ಸುಂದರವಾದ ಬಣ್ಣದ ತಪ್ಪಲು
ಹಲವು ಬಗೆ ಹಕ್ಕಿಗಳ ಇಂಚರದಿಂದ ತುಂಬಿದ ವನಗಳು
ಬಂಡೆ ಬಂಡೆಯ ಮೇಲು ಹಬ್ಬಿದ ಕಂಪೂಗೆವ ಶೈಲೇಯವು
ಇಂಥ ಪರ್ವತ ಈ ವಸಂತದಿ ಯಾರ ಮನವನು ಸೆಳೆಯವು ? ॥೨೫॥

ಒಂದು ಬಣ್ಣದ ಸಂಜೆ, ರವಿ ಮುಟ್ಟಿರಲು ಬೆಟ್ಟದ ತುದಿಯನು
ಕುಸುಮ ಸಂಪದದಿಂದ ಶೋಭಿಸುತಿರುವ ಮಾವಿನ ಮರವನು
ಸತಿ ವಿಯೋಗದಲಿರುವ ದಾರಿಗನೊಬ್ಬ ಕಂಡು, ವಿಷಣ್ಣನು
ಮುಚ್ಚಿ ಕಣ್ಣನು, ಒತ್ತಿ ಮೂಗನು, ಸುಮ್ಮನೇ ಅಳುತಿದ್ದನು ॥೨೬॥

ತುಂಬಿಗಳ ಝೇಂಕಾರ; ಸ್ವರವನ್ನೆತ್ತಿರುವ ಕೋಗಿಲೆಗಳು
ಹೂಗಿಡಿದ ಇಮ್ಮಾವು; ಅರಳಿದ ಕರ್ಣಿಕಾರಕ ಹೂಗಳು
ಇರಿಯುತಿವೆ ಮಾನಿನಿಯ ಮನವನು ಕುಸುಮದೆಸಳಿನ ಶರಗಳು
ಇದು ವಸಂತವು, ಕುಸುಮ ಮಾಸವು, ಯಾರಿಗಳವಿದ ಹೊಗಳಲು ? ॥೨೭॥

ಮಾವಿನ ಮರಗಳ ಹೂಗೊಂಚಲುಗಳು ಯಾರಿಗೆ ಹೂಡುವ ಶರವೋ
ಕಂಗೊಳಿಸುವ ಕಿಂಶುಕ ಸುಮಜಾಲವು ಯಾರಿಗೆ ಬಾಗಿದ ಬಿಲ್ಲೋ
ಆ ಅಳಿಮಾಲೆಯು ಯಾರಿಗೆ ಹೆದೆಯೋ ಯಾರಿಗೆ ಶಶಿಕರ ಕೊಡೆಯೋ
ಮಲಯಾನಿಲ ಯಾರಿಗೆ ಅಂಬಾರಿಯೋ ಯಾರ ವಂದಿ ಕೋಲಿಯೋ
ಆ ಮಾರನು ಈ ವಸಂತನೊಂದಿಗೆ ನೀಡಲಿ ನಿಮಗಾನಂದವನು ! ॥೨೮॥

'ಸಂತೃಪ್ತಿಯ ಉದ್ದೇಶ'ವೆಂಬ ಹೊಸ ಧರ್ಮದಲ್ಲಿ ಕ್ರಿಯಾಶೀಲತೆ ಮತ್ತು ಸಾಧನೆ.

● ಎಡ್ವರ್ಡ್ ಡಿಬೋನೋ/ಜಿ. ಎಲ್. ರಾಮಪ್ಪ

ಪರಿಚಯ

ಬದುಕಿನ ಗಂತವ್ಯ ಸಂತೃಪ್ತಿ. ಈ ಸಂತೃಪ್ತಿಯು ವ್ಯಕ್ತಿತ್ವದ ಪ್ರಾಮುಖ್ಯತೆಯ ಮೇಲೆ ನೆಲೆಗೊಂಡಿದೆ ಎನ್ನುವ ನಂಬಿಕೆಯ ಆಧಾರದ ಮೇಲೆ ಈ ಹೊಸ ಧರ್ಮವನ್ನು ಮಂಡಿಸಲಾಗುತ್ತಿದೆ.

ಸಂತೃಪ್ತಿಯ ಉದ್ದೇಶವು ಸಾಧ್ಯವಾಗುವುದು ವೈಚಾರಿಕತೆ, ಹಾಸ್ಯ ಪ್ರಜ್ಞೆ ಮತ್ತು ಆತ್ಮ ಗೌರವಗಳನ್ನು ಅಳವಡಿಸಿಕೊಳ್ಳುವುದರಲ್ಲಿದೆ. ಜೀವನದ ಆದರ್ಶವಾಗಿದ್ದ ಪ್ರೀತಿಗೆ ಬದಲು ಪರಸ್ಪರ ಗೌರವದ ಮೌಲ್ಯವನ್ನು ಆದರ್ಶವಾಗಿ ರೂಢಿಸಿಕೊಳ್ಳುವುದು ಹೆಚ್ಚು ಕಾರ್ಯಸಾಧುವಾದದ್ದಾಗುತ್ತದೆ.

ಈ ಹೊಸ ಧರ್ಮವನ್ನು ಸಾಮಾಜಿಕ ಸಂರಚನೆಯಂತೆ ಅಥವಾ ತತ್ವಜ್ಞಾನದಂತೆ ಉಪಯೋಗಿಸಿಕೊಳ್ಳಬಹುದು.

ಈ ಹೊಸ ಧರ್ಮವನ್ನು ಬದುಕಿನ ರೀತಿಯಂತಾದರೂ ಅಥವಾ ದೃಷ್ಟಿಕೋನದಂತಾದರೂ ಅಳವಡಿಸಿಕೊಳ್ಳಬಹುದು.

ಈ ಹೊಸ ಧರ್ಮವನ್ನು ಕೇವಲ ಇದನ್ನಷ್ಟೇ ಆಗಿ ಅಥವಾ ಬೇರೆ ಧರ್ಮಗಳ ಸಂಯೋಜನೆಯಲ್ಲಿಯೂ ಅಳವಡಿಸಿಕೊಳ್ಳಬಹುದು.

ಬೇರೆಯವುಗಳಂತಲ್ಲದೇ ಈ ಹೊಸ ಧರ್ಮವು ತನ್ನ ದೃಷ್ಟಿಯನ್ನು ಮನುಷ್ಯನ ಧನಾತ್ಮಕ ಗುಣಗಳಲ್ಲಿ ಕೇಂದ್ರೀಕರಿಸುತ್ತದೆ.

ಇಷ್ಟೆಲ್ಲ ಹೇಳುವಾಗ ಇದನ್ನು ಹೇಳಲು 'ಧರ್ಮ'ವೆಂಬ ಪದವನ್ನು ಉಪಯೋಗಿಸುವುದೇ ತಪ್ಪಾಗಿರಬಹುದು.

ಮಾಡಲು ಯೋಗ್ಯವಾದದ್ದು ಏನೂ ಇಲ್ಲವೆನ್ನುವುದಾದರೆ ಚೆನ್ನಾಗಿ ಮಾಡಬಹುದಾದದ್ದೆಲ್ಲವೂ ಯೋಗ್ಯವಾದದ್ದೇ. ಯಾಕೆಂದರೆ ಕ್ರಿಯಾಶೀಲತೆಯ ಮೂಲಕ ಯೋಗ್ಯತೆ ತನ್ನಿಂದ ತಾನೇ ಲಭ್ಯವಾಗುತ್ತದೆ.

ಮನುಷ್ಯನೆನ್ನುವವ ಜೀವಿ. ಜೀವಿಸುವಿಕೆ ಎರಡು ಅಂಶಗಳನ್ನು ಒಳಗೊಳ್ಳುತ್ತದೆ, ಮೊದಲಿನದು ಸ್ಪಂದಿಸುವದು-

ಸಂವೇದನಾಶೀಲನಾಗಿರುವುದು ಅಂದರೆ ಜೀವಿಸುವುದು. ಎರಡನೆಯದೆಂದರೆ ಕ್ರಿಯೆಯನ್ನು ನಡೆಸುವುದು- ಕ್ರಿಯಾಶೀಲನಾಗಿರುವುದೆಂದರೆ ಜೀವಂತವಾಗಿರುವುದು. ಸಂವೇದನಾಶೀಲನಾಗಿರುವುದು ಮತ್ತು ಕ್ರಿಯೆಯನ್ನು ನಡೆಸುವದು ಇವೆರಡೂ ಚಟುವಟಿಕೆ ಅಥವಾ ಕ್ರಿಯಾಶೀಲತೆಯ ವಿಧಗಳು. ಇವುಗಳ ಕ್ರಿಯಾಶೀಲತೆಯ ಎರಡು ರೀತಿಗಳನ್ನು ಗುರುತಿಸಬಹುದು.

ಟೆನಿಸ್ ಆಟ ಒಂದರಲ್ಲಿ ಸರ್ವ್ ಮಾಡುವವನ ಚೆಂಡು ಹೊಡೆಯುವ ಚಟುವಟಿಕೆ ಇದ್ದಂತೆ ಸರ್ವ್ ಮಾಡಿದ ಚೆಂಡನ್ನು ಎದುರಿಸಲು ನಿಂತ ಎದುರಾಳಿಯ ಚಟುವಟಿಕೆಯೂ ಇರುತ್ತದೆ. ತುದಿಗಾಲ ಮೇಲೆ ಅತ್ಯಂತ ಜಾಗ್ರತನಾಗಿ ಕಾಯುತ್ತಿರುವ ಇವನು ಹಾಗೆ ನೋಡಿದರೆ ಬಾಹ್ಯವಾಗಿ ಏನನ್ನೂ ಮಾಡುತ್ತಿರುವಂತೆ ಕಾಣುವುದಿಲ್ಲ. ಚಟುವಟಿಕೆಯ ಈ ವಿಧಗಳನ್ನು ಇನ್ನೊಂದು ಹೋಲಿಕೆಯಿಂದ ಸ್ಪಷ್ಟಪಡಿಸಬಹುದು ಇವು ಪ್ರಾಣಿ ಮತ್ತು ಸಸ್ಯಗಳ ಚಟುವಟಿಕೆಯಿದ್ದಂತೆ. ಪ್ರಾಣಿಗಳು ಅಲೆಯುತ್ತಾ ಹೊಂಚು ಹಾಕುತ್ತವೆ ಬೇಟೆಯಾಡುತ್ತವೆ. ಸಸ್ಯಗಳು ನಿಶ್ಚಲವಾಗಿದ್ದರೂ ಕೂಡ ತಮ್ಮ ಸ್ವಭಾವಕ್ಕೆ ಹೊಂದುವ ರೀತಿಯ ಚಟುವಟಿಕೆಯನ್ನು ನಡೆಸುತ್ತಿರುತ್ತವೆ.

ಜಡತ್ವ ಮತ್ತು ಕ್ರಿಯಾಶೀಲತೆ.

ಕ್ರಿಯಾಶೀಲತೆಯನ್ನು ಅದರ ವಿರುದ್ಧ ಗುಣಗಳಿಂದ ನಿರೂಪಿಸುವುದು ಸುಲಭ. ಕ್ರಿಯಾಶೀಲತೆಗೆ ವಿರುದ್ಧವಾದದ್ದು ನಿಷ್ಕ್ರಿಯತೆ; ಏನನ್ನೂ ಮಾಡದೇ ಯಾವು

ಜೋ ಘಟಿಸುತ್ತದೆಂದು ಕಾಯುವುದು. ಕ್ರಿಯಾಶೀಲತೆಗೆ ವಿರುದ್ಧವಾನದ್ದು ನಿರ್ಲಕ್ಷ್ಯಪೂರಿತ ಜಡತ್ವ: ಯಾವುದೂ ಮಾಡಲು ಮಹತ್ವದ್ದಾಗಿ ತೋರದೆ ಬೆಳೆದ ನಿರಾಸಕ್ತಿ. ಕ್ರಿಯಾಶೀಲತೆಗೆ ವಿರುದ್ಧವಾನದ್ದು ಸಮಯ ಸವೆಸುವುದು: ಏನನ್ನಾದರೂ ಮಾಡಬೇಕೆಂಬ ಯೋಚನೆಯನ್ನು ತೊಡೆದು ಹಾಕಿದಂತೆ - ನಿರುಂಬಳವಾಗಿ ಟೆಲಿವಿಜನ್ ಸೆಟ್ಟಿನ ಮುಂದೆ ಕುಳಿತುಕೊಂಡಂತೆ.

ಬೇಸರಿಕೆ

ಕಷ್ಟಗಳ ಕೋಟಲೆಗಿಂತ ಇಂದು ಬಹುತೇಕ ಮಾನವನಿಗೆ ಬೇಸರಿಕೆ ದೊಡ್ಡ ಸಮಸ್ಯೆಯಾಗಿ ಕಾಣುತ್ತಿದೆ. ಕಷ್ಟಗಳಿಗೆ ಪರಿಹಾರ ಕಾಣಲು ಧರ್ಮವ್ಯವಸ್ಥೆಗಳು ನಿರೂಪಿಸಿದ ನೀತಿ ಸಂಹಿತೆಗಳು ಬೇಸರಿಕೆಯ ಪರಿಹಾರಕ್ಕಾಗಿ ಪರಿಣಾಮಕಾರಿಯಾಗಿಲ್ಲ.

ಬೇಸರಿಕೆ ಇದ್ದದ್ದೇಕೆಂದರೆ ಜೀವನವೆಂಬುದು ಸರಳವಾಗಿ ಬಿಟ್ಟಿದೆ.

ಬೇಸರಿಕೆ ಇದ್ದದ್ದೇಕೆಂದರೆ ಸಾಧನೆ ಎಂಬುದು ಪ್ರಯತ್ನವಿಲ್ಲದೇಕಷ್ಟಕರವಾಗಿ ಮತ್ತು ಪ್ರಯತ್ನವೆಂಬುದು ಕಡು ಕಷ್ಟಕರವಾದದ್ದು

ಬೇಸರಿಕೆ ಇದ್ದದ್ದೇಕೆಂದರೆ 'ಒಳಗೊಳ್ಳದ' ನಿಷ್ಕ್ರಿಯ ಮನರಂಜನೆ ಮತ್ತು ಸಮಯ ಸವೆಸುವ ವಿಧಾನಗಳು ಅತಿ ಎತ್ತರಕ್ಕೆ ಬೆಳೆದುಬಿಟ್ಟವೆ.

ಬೇಸರಿಕೆ ಇದ್ದದ್ದೇಕೆಂದರೆ ಸಾಮಾಜಿಕ ಪಾಲುಗೊಳ್ಳುವಿಕೆ (ಜವಾಬ್ದಾರಿ) ಕಡಿಮೆಯಾಗುತ್ತ ಹೊಣೆಗಾರಿಕೆಯ ಅಪಾಯ ಕಡಿಮೆಯಾಗುತ್ತದೆ.

ಬೇಸರಿಕೆ ಇರುವುದೇಕೆಂದರೆ ಯಾಂತ್ರಿಕವಾದ ಮತ್ತು ಹಳಸಲಾದ ಸಂವೇದನೆಗಳನ್ನು ಹುಟ್ಟಿಸುವ ಸಮೂಹ ಮಾಧ್ಯಮಗಳ ಆಮಿಷ ವಿಪರೀತವಾಗಿದೆ.

ಕ್ರಿಯಾತ್ಮಕ ಚಟುವಟಿಕೆ.

ಚಟುವಟಿಕೆ ಎಂಬುದರ ಸಾಮಾನ್ಯ ಅರ್ಥವಿದು. ಇದು ಏನನ್ನಾದರೂ ಮಾಡುತ್ತಿವುದು- ಕಾಣುವಂತೆ ಏನನ್ನಾದರೂ ನಡೆಸುವುದು. ಇದು ಎಂಬ್ರಾಯಿಡರಿ ಮಾಡುವುದಾಗಬಹುದು, ರಾಜಕಾರಣ ಇಲ್ಲವೇ ಇಟ್ಟಿಗೆ ಹೊಯ್ಯುವುದು ಅಥವಾ ಪರ್ವತಾರೋಹಣ. ಯಾವುದಾದರೂ ಆಗಿರಬಹುದು. ಬೇರೇನನ್ನೋ ಮಾಡುವುದನ್ನು ತಪ್ಪಿಸಿಕೊಳ್ಳಲು ಮತ್ತು ಅದರಿಂದ ಉಳಿಸಿದ ಸಮಯವನ್ನು ಸವೆಸಲು ನಡೆಸುವ ಚಟುವಟಿಕೆಯನ್ನು ಹೊರತುಪಡಿಸಿದರೆ, ಹೊಸ ನೀತಿ ಸಂಹಿತೆಯು ಚಟುವಟಿಕೆಗಾಗಿ ಚಟುವಟಿಕೆ (ಚಟುವಟಿಕೆಯ ಗಂತವ್ಯ ಚಟುವಟಿಕೆಯೇ) ಎಂಬುದನ್ನು ಸಹ ಒಪ್ಪಿಕೊ

ಳ್ಳುತ್ತದೆ. ಚಟುವಟಿಕೆಯ ಗುರಿ ಆ ಚಟುವಟಿಕೆಯನ್ನು ಸಾರ್ಥಕವಾಗಿ ಕೊನೆಗೊಳಿಸುವುದು ಅಂತಾದರೆ ಯಾವುದನ್ನೇ ಆಗಲಿ ಚೆನ್ನಾಗಿ ಮಾಡುವುದು ಯೋಗ್ಯವಾದದ್ದಾಗುತ್ತದೆ– ಅದು ಮೊಟ್ಟೆ ಕುಕ್ಕುವ ಕಾಯಕವಾಗಲಿ ಅಥವಾ ಪಿಟೀಲು ನುಡಿಸುವ ಕೆಲಸವಾಗಲಿ. ಮಾಡಲು ಯೋಗ್ಯವಾದದ್ದು ಏನೂ ತೋಚದಿದ್ದಾಗ ಚೆನ್ನಾಗಿ ಮಾಡಬಲ್ಲದ್ದೆಲ್ಲವೂ ಯೋಗ್ಯವೆಂದಾಗುವದು ಆಗಲೇ. ಇಲ್ಲಿ ಮುಖ್ಯವಾಗುವುದೆಂದರೆ ಆ ಚಟುವಟಿಕೆ ಮತ್ತು ವ್ಯಕ್ತಿತ್ವ ಇವುಗಳ ನಡುವೆ ನಡೆಯುವ ಕೊಡುಕೊಳೆಗಳು. ಚಟುವಟಿಕೆ ಅಂದರೆ ಕ್ರಿಯೆಯಲ್ಲಿ ಲೀನವಾದ ಆತ್ಮ. ಈ ಸ್ವ-ತ್ವದ ಕ್ರಿಯೆಯಲ್ಲಿ ಲೀನಗೊಳ್ಳುವಿಕೆಯ ಪರಮಾನಂದವೇ ಚಟುವಟಿಕೆಯ ಗುರಿಯಾಗಿರುತ್ತದೆ.

'ಅರಿವಾ'ದ ಚಟುವಟಿಕೆ :

ಗ್ರೀಸಿನ ಒಂದು ಹಳ್ಳಿಯಲ್ಲಿ ಒಬ್ಬ ಮುದುಕಿ ರಸ್ತೆಯ ಬದಿಗೆ ನಿಶ್ಚಲವಾಗಿ ಗಂಟೆಗಟ್ಟಲೆ ಕುಳಿತು ಕೊಳ್ಳುತ್ತಾಳೆಂದುಕೊಳ್ಳಿ. ಆಕೆ ನಿಶ್ಚಲವಾಗಿದ್ದರೂ ಆಕೆಯ ಕಣ್ಣುಗಳು ಸುತ್ತಲಿನದನ್ನು ಭೇದಿಸುತ್ತಾ ಗಮನಿಸುತ್ತಾ ಪ್ರತಿಯೊಂದನ್ನೂ ಗ್ರಹಿಸುತ್ತಾ ಪ್ರಾಯಶ: ಅವಳು ಸುತ್ತಲಿನ ಜೀವನವನ್ನು ಮೆಚ್ಚುತ್ತಲಿರುತ್ತಾಳೆ. ಇಂಥ ವೀಕ್ಷಣೆ ಮತ್ತು ವಿವೇಚನೆಗಳು ಕೂಡ ಚಟುವಟಿಕೆಯ ರೂಪಗಳು. ಕ್ರಿಯಾಶೀಲತೆಯೆಂದರೆ ಬೀವರ್ ಪ್ರಾಣಿಯಂತಹ ಸತತ ದೈಹಿಕ ದುಡಿತವೇ ಆಗಬೇಕಿಲ್ಲ. ಅರಿವು ಮೂಡಿಸುವ ಮಾನಸಿಕ ಚಟುವಟಿಕೆಯೂ ಇದರಲ್ಲಿ ಸೇರುತ್ತದೆ. ವನವಿಹಾರಕ್ಕೆಂದು ನೀವು ಹೊರಟರೆ ನಿಮ್ಮ ನಡೆದಾಡುವ ಕ್ರಿಯೆಯು ವೀಕ್ಷಣೆ ಮತ್ತು ಸಂತೋಷಪಡುವಿಕೆಯ ಒಟ್ಟು ಕ್ರಿಯಾಶೀಲತೆಯ ಒಂದು ಅತ್ಯಂತ ಸಣ್ಣ ಭಾಗವಾಗಿರುತ್ತದೆ. ಹಾಗಿದ್ದರೆ ಫುಟ್‌ಬಾಲ್ ಆಟದ ವೀಕ್ಷಣೆಯು ಕ್ರಿಯಾಶೀಲತೆ ಆಗಬಲ್ಲುದೆ ? ಯಾಕಾಗಬಾರದು. ಆದರೆ ಅದು ಸಮಯ ಸವೆಸುವ ನೆವವಾಗಿರದಿದ್ದರೆ ಮಾತ್ರ. ಆದರೆ ಫುಟ್‌ಬಾಲ್ ನೋಡುವುದಕ್ಕಿಂತ ಆಡಬೇಕಾದ ಆಟ ಉದ್ದೇಶಪೂರಿತವಾಗಿ ಟೆಲಿವಿಜನ್ ಕಾರ್ಯಕ್ರಮಗಳನ್ನು ವೀಕ್ಷಿಸುವುದು ಕ್ರಿಯಾಶೀಲತೆಯಾದರೆ ಸಮಯ ಕಳೆಯುವುದಕ್ಕಾಗಿ ಟೆಲಿವಿಜನ್ ಮುಂದೆ ಕೂಡುವುದು ಕ್ರಿಯಾಶೀಲತೆಯಲ್ಲ. ಅರಿವಾದ ಕ್ರಿಯಾಶೀಲತೆಯು ದೈಹಿಕ ಚಟುವಟಿಕೆಗಿಂತ (ಕ್ರಿಯಾತ್ಮಕ ಕ್ರಿಯಾಶೀಲತೆ) ಹೆಚ್ಚಿನ ತೊಡಗುವಿಕೆಯನ್ನು ಅಪೇಕ್ಷಿಸುತ್ತದೆ. ಯಾಕೆಂದರೆ ಇಂಥ ಕ್ರಿಯಾಶೀಲತೆಯನ್ನು ನಾವು ಇಷ್ಟಪಟ್ಟು ಸಾಧಿಸಿಕೊಳ್ಳಲೇಬೇಕಾಗುತ್ತದಲ್ಲದೆ ಆಲಸ್ಯದಿಂದಾಗಿ ಅಲ್ಲ. ಪುಸ್ತಕದ ಒಂದು ನಿಜವಾದ ಓದು ಕ್ರಿಯಾಶೀಲತೆಯ ಉನ್ನತವಾದ ರೀತಿ ಆದರೆ 'ಶಬ್ದ'ಗಳನ್ನು ಕಾಣಿಸಿಕೊಳ್ಳುತ್ತಾ ಪುಟ ತಿರುಗಿಸುವುದು ಕ್ರಿಯಾಶೀಲತೆಯಾಗಲಾರದು

ಸಾಧನೆ :

ಎಲ್ಲ ಚಟುವಟಿಕೆಗಳ ತುದಿಗೆ 'ಸಾಧನೆ' ಎಂಬುದು ಹೊಂದಿಕೊಂಡಿದೆ. ಆದರೆ ಈ ಸಾಧನೆಯು ಎರಡು ರೀತಿಯದಾಗಿರಬಹುದು. ಒಂದು- ಗುರಿಯೊಂದನ್ನು ಸಾಧಿಸುವ ಸಾಧನೆ; ಇನ್ನೊಂದು- ನಿರ್ವಹಿಸುವದರ ಸಾಧನೆ. ಗುರಿಯ ಸಾಧನೆಯಲ್ಲಿ ನಿರ್ದಿಷ್ಟ ಗಮ್ಯ ಸ್ಥಾನವನ್ನು ಸೇರುವದು ಮುಖ್ಯವಾಗಿರುತ್ತದೆ. ಉದಾಹರಣೆಗಾಗಿ ಯಾರಿಂದಲೂ ಸೋಲದ ಟೇಬಲ್ ಟೆನಿಸ್ ಆಟಗಾರನೆಂಬ ಜಾಗತಿಕ ದಾಖಲೆ ಸ್ಥಾಪಿಸುವ ಗುರಿ ಇಟ್ಟುಕೊಂಡು ಅದನ್ನು ಸಾಧಿಸಲು ಆಡುವದು. ನಿರ್ವಹಣೆಯ ಸಾಧನೆಯಲ್ಲಿ ನಿರ್ವಹಣೆಯ ರೀತಿಯೇ ಮುಖ್ಯ. ಸ್ಕೀಯಿಂಗ್ ಮಾಡುತ್ತ ಜಾರಾಟವಾಡುವವನು ಯಾವುದೋ ಒಂದು ಸ್ಥಾನಕ್ಕೆ ಹೋಗಿ ತಲುಪಬೇಕೆಂದು ಸ್ಕೀಯಿಂಗ್ ಮಾಡುವುದಿಲ್ಲ. ಸ್ಕೀಯಿಂಗ್ ಮಾಡುವದು ಸ್ಕೀಯಿಂಗ್‌ನ ಖುಷಿಗಾಗಿ ಚರ್ಚಿಲ್ ಮಾಡಿದ ಪೇಂಟಿಂಗ್‌ಗಳಾಗಲಿ ಅಥವಾ ಅವನು ತನ್ನ ಕೈತೋಟದ ಗೋಡೆಗಾಗಿ ಇಟ್ಟಿಗೆ ಹೊಯ್ದುದ್ದಾಗಲೀ ಇದೇ ರೀತಿಯ ಸಾಧನೆಗಳು. ಚರ್ಚಿಲ್ ಇವುಗಳನ್ನು ಮಾಡಿದ್ದು ಇವುಗಳನ್ನು ಮಾಡುವಾಗ ದೊರೆಯುವ ಸಂತೋಷವನ್ನು ಪಡೆಯಲು. ಅನೇಕ ಸಲ ಈ ಗುರಿಯ ಸಾಧನೆ ಮತ್ತು ನಿರ್ವಹಣೆಯ ಸಾಧನೆಗಳು ಜೊತೆ ಜೊತೆಯಾಗಿಯೇ ಸಾಧ್ಯವಾಗುತ್ತವೆ. ಲೇಖಕನೊಬ್ಬ ಪುಸ್ತಕವನ್ನು ಬರೆಯುತ್ತಾ ಬರೆದು ಮುಗಿಸುವ ಗುರಿಯ ಸಾಧನೆ ಮತ್ತು ಬರೆಯುವ ಕ್ರಿಯೆಯ ಸಂದರ್ಭದ ಸಂತೋಷದ ಸಾಧನೆ ಎರಡನ್ನೂ ಒಟ್ಟಿಗೇ ಸಾಧಿಸುತ್ತಿರುತ್ತಾನೆ. ವಾಸ್ತು ಶಿಲ್ಪಿಯೊಬ್ಬ ಕಟ್ಟಡ ಬೇಗ ಪೂರ್ಣಗೊಳ್ಳುವುದನ್ನು ಬಯಸುತ್ತಲೇ ಕಟ್ಟುವ ಕ್ರಿಯೆಯ ಸಂತೋಷವನ್ನೂ ಪಡೆಯುತ್ತಿರುತ್ತಾನೆ. ಯುಗ ಯುಗಗಳಲ್ಲೆಲ್ಲಾ ನಿರ್ವಹಣೆಯ ಸಾಧನೆ- ಮಾರ್ಗಕ್ರಮಣವೇ- ಮುಖ್ಯವೆಂದು ಅನೇಕ ಧರ್ಮಗಳು ಬೋಧಿಸುತ್ತಿದ್ದರೂ ಗುರಿಯ ಸಾಧನೆಗೇ ಇನ್ನೂ ಪ್ರಾಮುಖ್ಯತೆ ದೊರೆಯುತ್ತಿದೆ. ಪ್ರಾಯಶಃ ಇದು ಸ್ಪರ್ಧೆಯ ಯುಗವಾಗಿರುವುದರಿಂದ ಗುರಿಯ ಸಾಧನೆಯೇ ಸ್ಪರ್ಧೆಗಳನ್ನು ಗೆಲ್ಲುವಂಥಾದ್ದಾಗಿರುವುದರಿಂದ ಹೀಗಿರಬಹುದು. ಉದಾಹರಣೆಗೆ ; ವಿಶ್ವವಿದ್ಯಾಲಯದ ಪದವಿ ಪಡೆಯುವುದು ಅಥವಾ ಮಹಾಕೃತಿಯೊಂದನ್ನು ರಚಿಸುವುದು ಸ್ಪರ್ಧೆಯನ್ನು ಗೆಲ್ಲಲು ಸಹಕಾರಿಯಾಗುತ್ತವೆ. ಸುತ್ತಲಿನವರ ಕಣ್ಣುಗಳಲ್ಲಿ ಮೂಡಬೇಕೆಂದರೆ ಏನನ್ನಾದರೂ ಗುರಿಯೊಂದನ್ನು ಸಾಧಿಸಿತೋರಿಸಬೇಕು ಮತ್ತು ಹೀಗೆ ಸಾಧಿಸುವ ಗುರಿಗೆ ಬಹುಮಾನವೂ ದೊರೆಯುತ್ತದೆ. ಅದಕ್ಕೇ ಗುರಿಯ ಸಾಧನೆ ಮುಖ್ಯವಾಗಿಬಿಡುತ್ತದೆ. ಹೊಸ ನೀತಿ ಸಂಹಿತೆಯಲ್ಲಿ ಗುರಿಯ ಸಾಧನೆಗಿಂತ ನಿರ್ವಹಣೆಯ ಸಾಧನೆಯೇ ಮಹತ್ವದ್ದೆಂ

ದು ಇನ್ನೊಂದಕ್ಕೆ ಒತ್ತುಕೊಟ್ಟು ಬಿಂಬಿಸಲಾಗುವುದು. ಇದೇನೂ ಪರಸ್ಪರ ವಿರೋಧಿಗಳೇನೂ ಅಲ್ಲ; ಆದರೆ ಗುರಿಯೊಂದನ್ನು ಸಾಧಿಸುವ ಸಲುವಾಗಿ ಯಾವ ಖುಷಿಯೂ ಇಲ್ಲದೇ ಸತತವಾಗಿ ಶ್ರಮಿಸುವುದು ನಿರರ್ಥಕ. ನಿರ್ವಹಣೆಯ ಸಂದರ್ಭದಲ್ಲಿಯೂ ಖುಷಿ ಕೊಡುವಂಥ ಪ್ರಯತ್ನವು ಗುರಿಸಾಧನೆಯ ಉದ್ದೇಶವಿಟ್ಟುಕೊಂಡಿದ್ದರೂ ಪರವಾ ಇಲ್ಲ. ಅಂಥ ಗುರಿಯ ಸಾಧನೆಯೂ ಮಹತ್ವದ್ದಾಗುತ್ತದೆ. ಸೈಕಲ್ಲನ್ನು ಎಲ್ಲಿಗೋ ಹೋಗಲು ಬಳಸುವುದಕ್ಕಿಂತ ಸೈಕಲ್ ಹೊಡೆಯುವ ಸಂತೋಷಕ್ಕಾಗಿ ಅದನ್ನು ಬಳಸುವುದು ಸಾಧ್ಯವಾಗಬೇಕು. ಬೇರೊಬ್ಬನೊಂದಿಗೆ ಏರ್ಪಟ್ಟ ಭೇಟಿಯು ನಮ್ಮಲ್ಲಿ ಖುಷಿಯನ್ನುಂಟುಮಾಡಬೇಕಲ್ಲದೇ ಈ ಮನುಷ್ಯ ನನ್ನಿಂದ ಏನನ್ನು ಪಡೆದುಕೊಳ್ಳಲು ಬಂದಿರಬಹುದೆನ್ನುವ ಪ್ರಶ್ನೆಯ ಬೇಚೈನಿನ್ನಲ್ಲ. ಅಲ್ಲದೇ ಗುರಿಗಳು ಎಂದೂ ತೃಪ್ತಿಯನ್ನು ಕೊಡಲಾರವು ಯಾಕೆಂದರೆ ಭಾವಾವೇಶದ ಮನರಂಜನೆಯಂತೆ ಇವುಗಳೂ ಇನ್ನಷ್ಟು ಗುರಿಗಳನ್ನು ಮುಂದೊಡ್ಡುತ್ತವೆ- ಕೊನೆ ಎಂಬುದಿಲ್ಲ.

ಸಾಧನೆ ಮತ್ತು ಜೀವನದ ಬೇಡಿಕೆಗಳು.

ಜೀವನದ ಅವಶ್ಯಕತೆಗಳ ಪೂರೈಕೆ ಮತ್ತು ಆತ್ಮ ತೃಪ್ತಿಗಾಗಿ ನಡೆಸುವ ಕ್ರಿಯೆಗಳ ಪರಿಣಾಮವನ್ನು ಬಿಂಬಿಸುವಂತೆ ಒಂದರೊಳಗೊಂದು ವೃತ್ತ ಬರೆದರೆ ಮೊದಲನೆಯದು ದೊಡ್ಡದಾಗಿರುವುದು. ಇಂಥ ಚಿತ್ರಗಳನ್ನು ಬೇರೆ ಬೇರೆ ಜೀವನದ ಸಂದರ್ಭಕ್ಕಾಗಿ ರಚಿಸಬಹುದು. ನಮ್ಮ ಸಾಮಾನ್ಯ ಉದ್ಯೋಗದ ಪರಿಸ್ಥಿತಿಯಲ್ಲಿ ಮಾನಸಿಕ ತೃಪ್ತಿ ಪೂರೈಸಬೇಕಾದ ಬೇಡಿಕೆ ಈ ಪ್ರಮಾಣದ ಅತ್ಯಂತ ಚಿಕ್ಕ ಸಂಖ್ಯೆಯಾಗಿರುತ್ತದೆ. ಕೌಟುಂಬಿಕ ಪರಿಸ್ಥಿತಿಯಲ್ಲಿಯೂ ಈ ಅನುಪಾತ ಸಂಖ್ಯೆಯು ಚಿಕ್ಕದಾಗಿರುತ್ತದೆ. ಆದರೆ ನಮ್ಮ ಹವ್ಯಾಸಗಳ ಸಂದರ್ಭದಲ್ಲಿ (ಆಹಾ ! ಗುಲಾಬಿ ಬೆಳೆಯುವುದು ಎಷ್ಟು ಸುಂದರ !) ಈ ಅನುಪಾತವು ಪೂರ್ಣತ್ವಕ್ಕೆ ತುಂಬಾ ಸಮೀಪಬರುತ್ತದೆ. ನಮ್ಮ ಮಾನಸಿಕ ತೃಪ್ತಿಗಾಗಿಯೇ ಅಂಥ ಚಟುವಟಿಕೆಗಳನ್ನು ಆಯ್ದುಕೊಂಡಿದ್ದರೂ ಸರಿಯೇ ಮಾನಸಿಕ ತೃಪ್ತಿ ನೀಡುವ ಚಟುವಟಿಕೆಗಳೆಲ್ಲವೂ ನಮ್ಮ ಆತ್ಮ ತೃಪ್ತಿಯ ವೃತ್ತದ ಪರಿಧಿಯನ್ನು ಹಿಗ್ಗಿಸುತ್ತವೆ. ನಮ್ಮ ಇಂಥ ಚಟುವಟಿಕೆಗಳು ನೂರು ನೆಲೆಯಲ್ಲಿ ಪ್ರಯೋಜನಶೀಲವಾದವುಗಳು:

ಅ. ಸಾಮರ್ಥ್ಯದ ಓಯಸಿಸ್ ನಿರ್ಮಾಣ. ಕನಿಷ್ಟ ವೈಯಕ್ತಿಕ ಭಾಗವಾದರೂ ತೃಪ್ತವಾಗಿದೆ. ಇಂಥ ಚಟುವಟಿಕೆಯ ಕ್ಷೇತ್ರವು ತನಗಿಷ್ಟವಾಗದ ಉಳಿದ ಬಂಜರು ಚಟುವಟಿಕೆಗಳ ನಡುವೆ ಓಯಸಿಸ್‌ನ ತಂಪು ಕರೆಯುವಂಥದು.

ಆ. ಆತ್ಮ ವಿಶ್ವಾಸ : ಇಂಥ ಚಟುವಟಿಕೆಯ ಸಂದರ್ಭದಲ್ಲಿನ ಮಾನಸಿಕ ತೃಪ್ತಿ/ಪೂರೈಸಬೇಕಾದ ಬೇಡಿಕೆ ಇವುಗಳ ಅನುಪಾತದ ಬೆಲೆಯು ಹೆಚ್ಚಾಗಿದ್ದು ಅದರ ಪರಿಣಾಮವು ಉಳಿದ ಕ್ಷೇತ್ರಗಳಿಗೂ ವಿಸ್ತಾರಗೊಳ್ಳಬಹುದು. ಶಾಲೆಗಳಲ್ಲಿ, ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳದ ವಿದ್ಯಾರ್ಥಿಗಳಿಗೆ ಯಾವುದೋ ಒಂದು ಕ್ಷೇತ್ರದಲ್ಲಿ ಉನ್ನತ ಸಾಧನೆಯ ಅವಕಾಶಮಾಡಿಕೊಟ್ಟು ಆತ್ಮವಿಶ್ವಾಸವನ್ನು ಮೂಡಿಸಿ ಅದು ಬೇರೆ ಕ್ಷೇತ್ರಗಳಿಗೂ ಹರಡುವಂತೆ ಮಾಡಿ ವಿದ್ಯಾರ್ಥಿಗಳ ಸಾಧನೆಯ ಮಟ್ಟವನ್ನು ಹೆಚ್ಚಿಸಬಹುದು.

ಇ ಅನುಪಾತೀಯ ಪರಿಣಾಮ : ಇಂಥ ಚಟುವಟಿಕೆಗಳು ಒಟ್ಟಂದದಲ್ಲಿಮಾನಸಿಕ ತೃಪ್ತಿ/ಬೇಡಿಕೆಗಳು ಇವುಗಳ ಅನುಪಾತವನ್ನು ಸುಧಾರಿಸುತ್ತವೆ. ಇದು ಹೇಗಾಗುತ್ತದೆಂದರೆ ಈ ಹೊಸ ಚಟುವಟಿಕೆಗಳು ಹೊಸ ಆಕಾಂಕ್ಷೆಗಳನ್ನು ಮೂಡಿಸುವ ಮೂಲಕ ಜೀವನ ಕ್ಷೇತ್ರ ವೃತ್ತದ ಪರಿಧಿಯನ್ನು ಹಿಗ್ಗಿಸುತ್ತವೆ. ಈ ಆಕಾಂಕ್ಷೆಗಳು ಹೊಸ ಅವಕಾಶಗಳನ್ನು ಅಥವಾ ಒತ್ತಡಗಳನ್ನು ಮೂಡಿಸುತ್ತವೆ. ಅದೇ ಸಂದರ್ಭದಲ್ಲಿಯೇ ಇವು ಇಷ್ಟಪಟ್ಟ ಚಟುವಟಿಕೆಗಳಾದ್ದರಿಂದ ಆತ್ಮ ತೃಪ್ತಿ ಕ್ಷೇತ್ರದ ವ್ಯಾಪ್ತಿಯೂ ಹೆಚ್ಚಾಗುತ್ತದೆ. ಇದರಿಂದ ಒಟ್ಟು ಆತ್ಮ ತೃಪ್ತಿ/ಬದುಕಿನ ಬೇಡಿಕೆಗಳ ಅನುಪಾತವು ಸುಧಾರಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ : ಇಂಥ ಒಂದು ಅನುಪಾತ ಆತ್ಮ ತೃಪ್ತಿ/ಬದುಕಿನ ಬೇಡಿಕೆ 5:10 ಇದೆ ಎಂದಿಟ್ಟುಕೊಂಡರೆ ಇವೆರಡೂ ಕ್ಷೇತ್ರಗಳು ನಮಗಿಷ್ಟವಾದ ಚಟುವಟಿಕೆಗಳಿಂದ +2 ನಿಂದ ಹೆಚ್ಚಾಗುತ್ತವೆ. ಎಂದಾದರೆ ಹೊಸ ಅನುಪಾತವು 5+2 : 10+2 ಅಂದರೆ 7:12 ಆಗುತ್ತದೆ. ಅಂದರೆ ಒಟ್ಟಂದದಲ್ಲಿ ಅನುಪಾತವು ಹೆಚ್ಚು ಹೆಚ್ಚು ಆತ್ಮ ತೃಪ್ತಿಯತ್ತ ವಾಲುತ್ತದೆ.

ಮಾಡುವಿಕೆಯನ್ನು ಇಷ್ಟಪಡುತ್ತಲೇ ಕೆಲಸವೊಂದನ್ನು ಮಾಡುವುದು ಸಂತೃಪ್ತಿಯ ಬದುಕಿಗೊಂದು ಖಾತ್ರಿಯಾದ ದಾರಿಯಾಗುತ್ತದೆ.

ಸಾಧನೆಗಾಗಿನ ನಿರ್ದೇಶನಗಳು :

ಸಾಧನೆ ಎಂತೆಂದರೆ ಏನನ್ನಾದರೂ ಒಂದನ್ನು ನಿರ್ಧರಿಸಿಕೊಂಡು ಅದನ್ನು ಸಾಧಿಸುವುದು ಹೀಗೆ ಸಾಧಿಸಬೇಕಾದುದನ್ನು ಗುರುತಿಸಿಕೊಳ್ಳುವ ಕ್ರಿಯೆ ಕ್ರಿಯಾತ್ಮಕವಾದ ಆಯ್ಕೆ, ಚಿಂತನೆಯ ಮೂಲಕ ಕಂಡುಕೊಂಡದ್ದು ಆಗಬೇಕೇ ಹೊರತು ನಿಷ್ಕ್ರಿಯವಾದ ಜರುಗುವಿಕೆಯಂತಾಗಬಾರದು ಮಾಡುವವ ತಾನು ಏನನ್ನು ಸಾಧಿಸಬೇಕೆಂಬು

ದನ್ನು ಸಾಧಿಸಬೇಕಾದ ತೃಪ್ತಿಯನ್ನು ತಾನೇ ನಿರ್ಧರಿಸಿಕೊಳ್ಳಬೇಕು. ಇದು ಹೇಗೆಂದರೆ ಚಿತ್ರದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ದೃಷ್ಟಿಯ ಕೇಂದ್ರೀಕರಣವನ್ನು ಚಲಿಸುವ ರೀತಿಯಂತೆ. ಸಾಧನೆಗಾಗಿ ಸಂತೃಪ್ತಿಗಾಗಿ ಯಾವದೇ ರೀತಿಯ ಚಟುವಟಿಕೆಯನ್ನು ಆಯ್ದುಕೊಳ್ಳಬಹುದು.

ಪರೋಪಕಾರವೆಂಬುದು ಸಾಧನೆಗಾಗಿ ಅನೇಕ ಧರ್ಮಗಳ ನೀತಿ ಸಂಹಿತೆಗಳು ಸೂಚಿಸುವ ಒಂದು ಕ್ಷೇತ್ರವಾಗಿದೆ. ಇಂದಿಗೂ ಕೂಡ ಈ ಕ್ಷೇತ್ರವನ್ನು ಸಾಧನೆಗಾಗಿ ಆರಿಸಿಕೊಳ್ಳುವ ಅವಕಾಶ ಫಲವತ್ತಾಗಿದೆ.

ಹವ್ಯಾಸಗಳು ಮತ್ತು ವಿಶೇಷ ಆಸಕ್ತಿಗಳು ಈಗಾಗಲೇ ಅನೇಕರ ಸಾಧನೆಯ ವಿಷಯಗಳಾಗಿಬಿಟ್ಟಿವೆ. ಕಲಿಯುವಿಕೆ ಮತ್ತು ಯಾವುದಾದರೊಂದು ವಿಷಯದಲ್ಲಿ ಪಾಂಡಿತ್ಯವನ್ನು ಪಡೆಯುವುದು ಕೂಡ ಇದೇ ಕಕ್ಷೆಯಲ್ಲಿ ಬರುತ್ತವೆ. ಕಲಾಭಿಜ್ಞತೆಯನ್ನು ರೂಢಿಸಿಕೊಳ್ಳುವುದು ಮತ್ತು ಕಲಾಕೃತಿಗಳ ಸಂಗ್ರಹಗಳು ಕೂಡ ಇದೇ ಜಾತಿಯ ಚಟುವಟಿಕೆಗಳು. ಆದರೆ ಇಲ್ಲಿನ ಅಪಾಯವೆಂದರೆ ಅಂತಿಮ ಗುರಿಯೊಂದನ್ನು ತಲುಪುವುದು ಅಂದರೆ ಅತ್ಯುಚ್ಚ ಪರಿಣತಿಯನ್ನು ಸಾಧಿಸುವುದೇ ಆದ್ಯತೆಯ ವಿಷಯವಾಗಿ ಬಿಡಬಹುದು.

ಕಾಯಕದ ಉದ್ಯೋಗ ಕ್ಷೇತ್ರವು ಸಾಮಾನ್ಯವಾಗಿ ಸಾಧನೆಯ ದೃಷ್ಟಿಯಿಂದ ಅತ್ಯಂತ ವಿಶಾಲವಾದ ಕ್ಷೇತ್ರ. ಏಕೆಂದರೆ ನಮ್ಮ ಬಹುಶೇಕ ಸಮಯವು ಈ ಕಾಯಕಕ್ಕೆ ವ್ಯಯವಾಗುತ್ತಿರುತ್ತದೆ. ಆದರೆ ಅನೇಕ ಸಂದರ್ಭದಲ್ಲಿ ಕಾಯಕ ಕೂಡ ಕಾಲ ಸವೆಸುವ ಕೆಲಸವಾಗಿ ಬಿಡಬಹುದು. ಬೇಸರಿಕೆಯು ಇದಕ್ಕೆ ಕಾರಣವಾಗಿರಬಹುದು. ತೊಡಗುವಿಕೆ ಸಾಧ್ಯವಾಗದಾಗಲೂ ಹೀಗೆಯೇ ಆಗುತ್ತದೆ. ಮತ್ತು ಈ ತೊಡಗುವಿಕೆ ಸಾಧ್ಯವಾಗದೇ ಹೋಗುವುದಕ್ಕೆ ಕಾಯಕವನ್ನು ಜೀವನದ ಒಂದು ಅನಿವಾರ್ಯ ಕಷ್ಟವೆಂದು ಪರಿಗಣಿಸಿರುವುದು ಮತ್ತು ಅದನ್ನು ತೃಪ್ತಿ ನೀಡುವ ಒಂದು ಅವಕಾಶವೆಂದು ಗ್ರಹಿಸಲು ಸಾಧ್ಯವಾಗದೇ ಹೋದದ್ದು.

ಸಾಂಘಿಕ ಚಟುವಟಿಕೆಗಳು ಮತ್ತು ಸಮೂಹಗಳಿಗಾಗಿನ ಚಟುವಟಿಕೆಗಳು ಸಾಧನೆಗಾಗಿ ಇರುವ ಇನ್ನೊಂದು ಗಮನಾರ್ಹವಾದ ಕ್ಷೇತ್ರವು. ಅದನ್ನು ಸಾಕಷ್ಟು ವಿಸ್ತಾರವಾಗಿ ಚರ್ಚಿಸುವ ಅವಕಾಶವಿದೆ.

ಆಂತರಂಗಿಕ ಚಟುವಟಿಕೆ :

ಇಷ್ಟರಲ್ಲಿ ಹೇಳಿದ್ದರಲ್ಲಿ ಭೌತಿಕ ವ್ಯಾಪಾರದ ಚಟುವಟಿಕೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟಂತೆ ತೋರುತ್ತದೆ. ಆದರೆ ಇದನ್ನು ಸರಿತೂಗಿಸುವಂತೆ ಆಂತರಂಗಿಕ ಚಟುವಟಿಕೆಯೂ ಇರಬೇಕಾಗುತ್ತದೆ ಆದರೆ ಆಂತರಂಗಿಕ ಚಟುವಟಿಕೆಗೆ ವಿಪರೀತ ಮಹತ್ವ ಕೊಟ್ಟು ಬಾಹ್ಯ ಚಟುವಟಿಕೆಗಳಿಗೆ ಕನಿಷ್ಟ ಮಹತ್ವ ನೀಡಿ ತಿರಸ್ಕರಿಸುವ ರೀತಿ ಸರಿಯಲ್ಲ. ಏಕೆಂದರೆ ಭೌತಿಕ ಚಟುವಟಿಕೆಯಿಂದ ಬಾಹ್ಯ ಜಗತ್ತಿಗೆ ಪ್ರಯೋಜನವಾಗುತ್ತದೆ ಮತ್ತು ಇಂಥ ದೈಹಿಕ ಚಟುವಟಿಕೆಗಳು ಸಂತೋಷ ಕೊಡುವ ಖಾತ್ರಿಯಾದ ಮಾರ್ಗ ಗಳಾಗಿರುತ್ತವೆ. ಹಾಗೆ ನೋಡಿದರೆ ಆಂತರಂಗಿಕ ಮತ್ತು ಬಾಹ್ಯ ಚಟುವಟಿಕೆಗಳು ಪರಸ್ಪರ ಪ್ರತ್ಯೇಕವಾದವುಗಳೇನಲ್ಲ. ಬಹುತೇಕ ಸಂದರ್ಭಗಳಲ್ಲಿ ಬಾಹ್ಯ ಚಟುವಟಿಕೆ ಯೊಂದನ್ನು ಆರಿಸಿಕೊಳ್ಳುವುದು ಅದು ಒದಗಿಸುವ ಆಂತರಂಗಿಕ ಚಟುವಟಿಕೆಗಾಗಿ. ಉದಾಹರಣೆಗಾಗಿ ಸಂಗೀತವಾದ್ಯವನ್ನು ನುಡಿಸುವ ಬಾಹ್ಯ ಚಟುವಟಿಕೆ. ಬಾಹ್ಯ ಮತ್ತು ಆಂತರಂಗಿಕ ಚಟುವಟಿಕೆಗಳ ಮಧ್ಯದ ಸಮತೋಲವು ಶಿಸ್ತು ಮತ್ತು ಪ್ರಯ ತ್ನದಿಂದ ರೂಢಿಸಿಕೊಂಡ ವೈಯಕ್ತಿಕ ಆಸಕ್ತಿಗಳನ್ನು ಅವಲಂಬಿಸಿರುತ್ತದೆ.

ಆಂತರಂಗಿಕ ಚಟುವಟಿಕೆಯು ಚಿಂತನೆಯನ್ನೊಳಗೊಂಡಿರುತ್ತದೆ ಇಂಥ ಚಿಂತನೆಯು ಚಿಂತನೆಯ ಸುಖಕ್ಕಾಗಿ ಆದದ್ದು ಆಗಿರಬಹುದು ಇಲ್ಲವೆ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳಲು ಏರ್ಪಟ್ಟ ಚಿಂತನೆಯಾಗಿರಬಹುದು. ಆಂತರಂಗಿಕ ಚಟುವಟಿಕೆಯು 'ಸ್ವತ್ವ'ದ ಬಗೆಗಿನ ಅರಿವನ್ನು ಮೂಡಿಸುತ್ತದೆ. ಇಂಥ 'ಸ್ವತ್ವ'ದ ಬಗೆಗಿನ ಅರಿವು ತಾನು–ಮತ್ತು ತನ್ನ ಅಂತರಂಗದ ತಣ್ಣನೆಯ ಪರಿವೀಕ್ಷಣೆಯಿಂದ ಸಾಧ್ಯವಾಗುವಂಥದು ಇದು ಒಟ್ಟು ವ್ಯವಹಾರಗಳ ಲೆಕ್ಕಾಚಾರ ನಡೆಸುವ ಕ್ರಿಯೆ ಇದ್ದಂತೆ. ಇದು ತಪ್ಪುಗಳನ್ನು ಎತ್ತಿತೋರಿಸುವ ಅಥವಾ ಅಂಥ ತಪ್ಪುಗಳ ಬಗ್ಗೆ ವಿಶೇಷ ಗಮನ ವಹಿಸುವ ಅಂತ ರಂಗದ ಪರೀಕ್ಷೆ ಎಂತಾಗಲೀ ಅಲ್ಲ.

ಅಂತರಂಗದ ಚಟುವಟಿಕೆಗಳು ಗ್ರಹಿಕೆಗಳ ಪರಿಷ್ಕಾರ ಮತ್ತು ಅವುಗಳ ಬದಲಾವಣೆ ಸಾಧಿಸಿಕೊಳ್ಳುವುದನ್ನು ಕೂಡ ಒಳಗೊಳ್ಳುತ್ತವೆ. ಸಂದರ್ಭಕ್ಕೆ ಹೊಂದಿಕೊಳ್ಳುವುದು ಅಥವಾ ಯೋಗ್ಯ ಸಂದರ್ಭಗಳನ್ನು ಸೃಷ್ಟಿಸಿಕೊಳ್ಳುವುದು ಮತ್ತು ಆ ಮೂಲಕ ತೃಪ್ತಿ ಯನ್ನು ಸಾಧಿಸಿಕೊಳ್ಳುವದು ಸಾಧ್ಯ. ಸಂದರ್ಭಕ್ಕೆ ಹೊಂದಿಕೊಳ್ಳುವಲ್ಲಿ ಕೇವಲ ಹಲವು ಬಾಹ್ಯ ಬದಲಾವಣೆಗಳನ್ನು ಸಾಧಿಸಿಕೊಳ್ಳುವುದು ಮಾತ್ರ ಎಂತಲ್ಲ. ಇದು ಭೌತ ಜಗತ್ತಿನ ಕೆಲವಂಶಗಳನ್ನು ಗ್ರಹಿಸುವ ವಿಧಾನದಲ್ಲಿನ ಬದಲಾವಣೆಯನ್ನೂ ಒಳಗೊ

ಳ್ಳುತ್ತದೆ. ಇನ್ನು ಹೊಸ ಸಂದರ್ಭವನ್ನೇ ಸೃಷ್ಟಿಸಿಕೊಳ್ಳುವದರಲ್ಲಿ ಸಾಕಷ್ಟು ಭೌತಿಕ ಚಟುವಟಿಕೆಗಳು ನಡೆಯುತ್ತಿದ್ದು ಅದರ ಹಿನ್ನೆಲೆಯಲ್ಲಿ ಅಂತರಂಗದ ಚಟುವಟಿಕೆಗಳ ಮೂಲಕ ಮೂಡಿ ಬಂದ ಅನೇಕ ಹೊಸ ವಿಚಾರಗಳು ಕ್ರಿಯಾಶೀಲವಾಗಿರುತ್ತವೆ.

ಪ್ರತಿ ಕ್ರಿಯಾತ್ಮಕ ಮತ್ತು ವಿಸ್ತೃತಗೊಂಡ ಕ್ರಿಯಾಶೀಲತೆ :

ಜೀವನ ವೃತ್ತದಲ್ಲಿ ಘಟಿಸುವ ಯಾವುದಕ್ಕೋ ಪ್ರತಿಕ್ರಿಯೆಯಾಗಿ ಚಟುವಟಿಕೆಯೊಂದು ರೂಪುಗೊಳ್ಳಬಹುದು. ಇಂಥದಕ್ಕೆ ಪ್ರತಿ ಕ್ರಿಯಾತ್ಮಕ ಚಟುವಟಿಕೆ ಎನ್ನಬಹುದು. ಸಮಸ್ಯೆಯೊಂದು ಹುಟ್ಟಿಕೊಂಡಾಗ ಅದನ್ನು ನಿವಾರಿಸಬೇಕಾದಾಗ ಅಥವಾ ಆಜ್ಞೆಯೊಂದನ್ನು ಪಾಲಿಸಲು ನಡೆಸುವ ಚಟುವಟಿಕೆಗಳು ಇಂಥವುಗಳು. ಇಂಥ ಪ್ರತಿಕ್ರಿಯಾತ್ಮಕ ಚಟುವಟಿಕೆಗಳಿಂದ ಕೂಡ ಸಂತೋಷವನ್ನು ಪಡೆಯುವ ಮಾನಸಿಕ ನಿಲುವನ್ನು ರೂಢಿಸಿಕೊಳ್ಳಲು ಸಾಧ್ಯವಿದೆ. ಇದಕ್ಕಾಗಿ, ಮಾಡಬೇಕಾಗಿ ಬಂದುದನ್ನು ಅಚ್ಚುಕಟ್ಟಾಗಿ ಚೆನ್ನಾಗಿ, ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಬೇಕು. ಜೀವನದಲ್ಲಿ ಇಂಥ ಪ್ರತಿಕ್ರಿಯಾತ್ಮಕ ಚಟುವಟಿಕೆಗಳ ಸಂತೆಯೇ ಇದ್ದು ನಮ್ಮ ಚಟುವಟಿಕೆಗಳೆಲ್ಲಾ ಬರೀ ಇಂಥವುಗಳೇ ಆಗಬಾರದು. ವ್ಯಕ್ತಿತ್ವವನ್ನು ವಿಸ್ತರಿಸುವ ಹೊಸ ಚಟುವಟಿಕೆಗಳು ವಿಶೇಷ ತೃಪ್ತಿಯನ್ನು ನೀಡುತ್ತವೆ. ಇಂಥವುಗಳನ್ನು ಇಷ್ಟಪಟ್ಟು ಆಯ್ದುಕೊಂಡು ನಮ್ಮಷ್ಟಕ್ಕೆ ನಾವೇ ಇವುಗಳಲ್ಲಿ ತೊಡಗಿಕೊಳ್ಳಬೇಕು.

ಉನ್ನತ ಗುರಿ ಮತ್ತು ಸ್ಪರ್ಧೆ :

ಇದನ್ನೆಲ್ಲಾ ಹೇಳುವಾಗ ಹೊಸನೀತಿ ಸಂಹಿತೆಯು ಉನ್ನತ ಗುರಿಯನ್ನಿಟ್ಟುಕೊಂಡ ಸ್ಪರ್ಧಾ ಮನೋಭಾವದಿಂದ ಕೂಡಿದ ಮಾನಸಿಕ ರೋಗಿಗಳನ್ನು ತಯಾರು ಮಾಡಲು ಹುಟ್ಟಿಕೊಂಡಂತೆನಿಸಿಬಿಡಬಹುದು. ಆದರೆ ಇಂಥ ಯಾವ ಉದ್ದೇಶವೂ ಇದಕ್ಕಿಲ್ಲ. ಇದಕ್ಕೆ ಬದಲಾಗಿ ಉನ್ನತ ಗುರಿ ಸಾಧನೆ ಮತ್ತು ಸ್ಪರ್ಧಾ ಮನೋಭಾವಗಳು ಬರೀ ಜೀವನದ ಬೇಡಿಕೆಗಳ ವೃತ್ತವನ್ನು ಹೆಚ್ಚಿಸುತ್ತವಲ್ಲದೇ ಆತ್ಮ ತೃಪ್ತಿಯ ವೃತ್ತವನ್ನು ವಿಸ್ತರಿಸಲಾರವು ಎನ್ನುವ ಅರಿವು ಇದಕ್ಕಿದೆ.(ಪೂರ್ಣ ಯಶಸ್ಸು ಸಿಕ್ಕುವವರೆಗೆ) ಇದರಿಂದ ಆತ್ಮ ತೃಪ್ತಿ/ಜೀವನದ ಬೇಡಿಕೆಗಳ ಅನುಪಾತವು ಇನ್ನಷ್ಟು ಕುಸಿಯುತ್ತದೆ. ಸ್ಪರ್ಧೆ ಎನ್ನುವುದು ಜಡತ್ವ ಮತ್ತು ನಿಷ್ಕ್ರಿಯತೆಯನ್ನು ತೊಡೆದುಕೊಳ್ಳುವ ಮಟ್ಟಿಗೆ ಉಪಯುಕ್ತವಾದುದು. ಆಟೋಟಗಳಲ್ಲಿನ ಸ್ಪರ್ಧೆಯು ಭಾಗವಹಿಸುವವರಿಗೆ ಮತ್ತು ಆಸಕ್ತ ನೋಟಕ ಇಬ್ಬರಿಗೂ ತೃಪ್ತಿ ನೀಡುವ ಅಂಶವಾಗಿರುತ್ತದೆ. ಆದರೆ ತುಂಬಾ ಮುಖ್ಯವಾದದ್ದೆಂದರೆ ಆತ್ಮತೃಪ್ತಿ ವೃತ್ತವು ಯಾವಾಗಲೂ ಸ್ಪರ್ಧೆಯಲ್ಲಿ ಜಯಗಳಿಸುವುದರ ಮೇಲೆ ಅವಲಂಬಿತವಾಗಿಲ್ಲದಿರುವುದನ್ನು ಅರಿತುಕೊಳ್ಳಬೇಕು.

ಸಾಧನೆಗಾಗಿ ಇಟ್ಟುಕೊಳ್ಳಬೇಕಾದ ಗುರಿಗಳೂ ಕೂಡ ಹೆಚ್ಚು ವಾಸ್ತವದ ಪ್ರಜ್ಞೆಯಿಂದ ಕೂಡಿದವುಗಳಾಗಿರಬೇಕು. ಸಾಧಿಸಲಾಗದ ನಕ್ಷತ್ರದೆತ್ತರದ ಗುರಿಗಳಿಗಿಂತ ಬಾಯಿಗೆಟಕುವ ಗುರಿಗಳನ್ನಿಟ್ಟುಕೊಳ್ಳುವುದು ಹೆಚ್ಚು ಸರಿಯಾದ ಕ್ರಮ. ಹೀಗೆಂದರೆ ಉನ್ನತ ಗುರಿಗಳನ್ನಿಟ್ಟುಕೊಳ್ಳಬಾರದೆಂದು ಅರ್ಥವಲ್ಲ. ಸಾಧಿಸುವವನ ಮಾನಸಿಕ ಸ್ಥಿತಿಯನ್ನನುಸರಿಸಿ ಗುರಿಗಳನ್ನು ರೂಪಿಸಿಕೊಳ್ಳಬೇಕೆನ್ನುವವಷ್ಟೇ ಇದರ ಅರ್ಥ. ನಿಮಗೆ ಗೊತ್ತೇ ಇದೆ-ಬಹುದೂರದ ಪ್ರವಾಸವನ್ನು ಚಿಕ್ಕ ಚಿಕ್ಕ ಕ್ರಮಣಗಳಲ್ಲಿ ಹೊಂದಿಸಿಕೊಳ್ಳುವುದು ಹೆಚ್ಚು ಮುದ ನೀಡಬಲ್ಲಂಥ ಕ್ರಿಯೆಯಾಗುತ್ತದೆ. ದಾರಿ ಕ್ರಮಿಸುವಾಗ ಪಡೆಯುವ ಸಂತೋಷವೇ ತುಂಬಾ ಮುಖ್ಯವಾದದ್ದು. ಹೀಗೆ ಮಾಗು ಮಾರು ನೆಗೆಯುತ್ತಾ ಎತ್ತರದ ಗುರಿಯತ್ತ ಕ್ರಮಿಸುವುದು ಹೆಚ್ಚು ಸೂಕ್ತವಾಗುತ್ತದೆ

ಪ್ರಾಪಂಚಿಕ ತೊಡಗುವಿಕೆ :

ಬೇರೆ ಬಹುತೇಕ ಧರ್ಮಗಳ ನೀತಿ ಸಂಹಿತೆಗಳು ಲೌಕಿಕತೆಯಿಂದ ನಿವೃತ್ತಿಗೊಳ್ಳುವುದನ್ನು ಬೋಧಿಸಿದರೆ ಈ ಹೊಸ ನೀತಿ ಸಂಹಿತೆಯು ಲೌಕಿಕ ವ್ಯಾಪಾರಗಳಲ್ಲಿ ಕ್ರಿಯಾತ್ಮಕವಾಗಿ ತೊಡಗುವುದನ್ನು ಬೋಧಿಸುತ್ತದೆ. ಈ ತೊಡಗುವಿಕೆ ವ್ಯವಹಾರ ಉದ್ದಿಮೆಗಳಲ್ಲಿನದಾಗಬಹುದು ರಾಜಕಾರಣದಲ್ಲಾಗಬಹುದು. ಈ ಕ್ಷೇತ್ರಗಳೆಲ್ಲ ಚಟುವಟಿಕೆಯ ಸಂತೃಪ್ತಿ ತರುವ ಕ್ಷೇತ್ರಗಳಾಗಬಹುದು. ಆದರೆ ಈ ಕ್ಷೇತ್ರಗಳು ನಮ್ಮ 'ಇಗೋ' (ಅಹಂ)ವನ್ನು ಪೋಷಿಸುವಂಥವುಗಳಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಇಲ್ಲವಾದರೆ ಈ ಕ್ಷೇತ್ರಗಳಲ್ಲಿ ಪಾಲುಗೊಳ್ಳುವ ಕ್ರಿಯೆಯೇ ಕ್ರಮೇಣ ಸಂತೃಪ್ತಿಯ ವಿರುದ್ಧದ ಚಟುವಟಿಕೆ ಆಗಬಹುದು. ಸಾಧಿಸುವದಕ್ಕಾಗಿಯೇ ಏನನ್ನಾದರೂ ಸಾಧಿಸಬೇಕೆಂದು ಹೊರಡುವ ವ್ಯಕ್ತಿ ನಿರರ್ಥಕವಾದ ಕಾರ್ಯ ಯೋಜನೆಯನ್ನು ಹೊಂದಿರುತ್ತಾನೆ. ಹೇಗೆಂದರೆ. ಅವನು ಸತತವಾಗಿ ತನ್ನ ಜೀವನದ ಬೇಡಿಕೆಯ ವೃತ್ತವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಿ ಆತ್ಮ ತೃಪ್ತಿಯ ವೃತ್ತವನ್ನು ಕಡೆಗಣಿಸುತ್ತಾ ಹೋಗುತ್ತಾನೆ. ಹೀಗೆ ಆತ್ಮ ತೃಪ್ತಿ/ಜೀವನದ ಬೇಡಿಕೆಗಳ ಅನುಪಾತವು ಸತತವಾಗಿ ಕುಗ್ಗುತ್ತಾ ಹೋಗುತ್ತದೆ.

ಮಧುರಚೆನ್ನರ ಕಾವ್ಯಯೋಗ

● ಹೆಚ್. ಎಸ್. ಶಿವಪ್ರಕಾಶ

೧

ಮಧುರಚೆನ್ನರಿಗೆ ಅನುಭಾವಿ ಕವಿ ಎಂಬ ಹಣೆಪಟ್ಟಿ ಅಂಟಿಸುವುದು ಸುಲಭ. ಅನುಭಾವದ ಸಾಧನೆಯ ಕ್ರಮ ಮತ್ತು ಉದ್ದೇಶ ಯೋಗ, ತಂತ್ರ ಮುಂತಾದ ಶಾಸ್ತ್ರಗಳಿಗೆ ಮತ್ತು ಸಾಧನಾ ಕ್ರಮಗಳಿಗೆ ಸಂಬಂಧಿಸಿದ್ದು. ಆದರೆ ಕಾವ್ಯವೆನ್ನುವುದು ನಮ್ಮ ಯುಗದಲ್ಲಿ ಒಂದು ಸ್ವತಂತ್ರ ಸಾಮಾಜಿಕ ಸಂಸ್ಥೆಯಾಗಿರುವುದರಿಂದ ಮಧುರ ಚೆನ್ನರ ಕಾವ್ಯವನ್ನು ಅಭ್ಯಾಸ ಮಾಡುವಾಗ ಹೇಗೆ ಯೌಗಿಕ ಮತ್ತು ಅನುಭಾವಿ ಆಶಯಗಳು ಕಾವ್ಯವಾಗಿ ಮಾರ್ಪಾಟು ಹೊಂದುತ್ತವೆ ಎಂಬುದೇ ನಮಗೆ ಮುಖ್ಯ.

ಕಾವ್ಯ ನಿರ್ಮಾಣವನ್ನು ಬೇಂದ್ರೆಯವರು ಒಂದು ಸ್ವತಂತ್ರವಾದ ಮತ್ತು ಸ್ವಯಂ ಪೂರ್ಣವಾದ ಯೋಗವೆಂದಿದ್ದಾರೆ. ಅದನ್ನು ಕಾವ್ಯಯೋಗ ಎಂದು ಕರೆದಿದ್ದಾರೆ. ಅವರು 'ಗೀತೆ'ಯನ್ನನುಸರಿಸಿ 'ಯೋಗ' ಶಬ್ದಕ್ಕೆ "ಕರ್ಮಸು ಕೌಶಲಂ" ಎಂಬ ಅರ್ಥ ಕೊಟ್ಟಿದ್ದಾರೆ ಆದ್ದರಿಂದಲೇ ಕಾವ್ಯ ನಿರ್ಮಿತಿಯ ಉತ್ಕಟ ಕ್ರಿಯೆ ಬೇಂದ್ರೆಯವರ ಕಾವ್ಯದಲ್ಲಿ ವಿಶೇಷವಾದ ಪ್ರಖರತೆಯನ್ನು ಪಡೆದುಕೊಳ್ಳುತ್ತದೆ. ಅದು ಪ್ರತಿಭೆಯ ಗರ್ಭದ/ವಿಶ್ವಕರ್ಮನ ಪ್ರತಿ ಸೃಷ್ಟಿ. ಆದರೆ ಮಧುರಚೆನ್ನರ ಕಾವ್ಯಯೋಗ ಇನ್ನೊಂದು ರೀತಿಯದು. ಅಲ್ಲಿ ಬೇಂದ್ರೆಯವರ ವಾಗ್ವೈಭವವಿಲ್ಲ. ತಮ್ಮ ಅಂತ ರಂಗದ ಅನುಭವವನ್ನು ಆದಷ್ಟು ಕಡಿಮೆ ಕಾವ್ಯ ಸಾಮಗ್ರಿಗಳ ಮೂಲಕ ನಮಗೆ ಮುಟ್ಟಿಸುವುದರ ಮೇಲೆ ಮಧುರಚೆನ್ನರ ಕಾವ್ಯಯೋಗ ಒತ್ತು ನೀಡಿದೆ. ಅದರ ಪರಿ ಣಾಮ : ಮಧುರಚೆನ್ನರ ಕಾವ್ಯದ ಸೃಷ್ಟಿ ಕ್ರಮಕ್ಕಿಂತ ಹೆಚ್ಚಾಗಿ ಅರ್ಥಗಳ ನಿಗೂ ಢತೆ ನಮ್ಮನ್ನು ಆಳವಾಗಿ ತಟ್ಟುತ್ತದೆ. ಇದನ್ನು ಬೇಂದ್ರೆಯವರು ಗಮನಿಸದೆ ಇಲ್ಲ. "ನನ್ನ-ನಿನ್ನ ನೋಟ ಮಾತ್ರ/ಬೇರೆ ಹಾದಿಗಿಳಿಟದೆ."

ಮಧುರಚೆನ್ನರ ಕಾವ್ಯ ಸಾಧನೆಯ ಮೂಲಕ 'ಅವರ ಆಶಯಗಳು ಕಾವ್ಯವಾಗಿ ರೂಪು ತಾಳುವ ಕ್ರಮವನ್ನು ಪರಿಕಿಸುವ ಮೊದಲು ಅವರ ಒಟ್ಟು ಕಾವ್ಯಕ್ಕಿರುವ ಒಳರಚನೆಯ ನಕಾಶೆಯನ್ನು ನಮ್ಮ ಮುಂದಿಟ್ಟುಕೊಳ್ಳುವುದು ಮೇಲು. 'ನನ್ನ ನಲ್ಲ' ಸಂಕಲನದ ಕೊನೆಗಿರುವ ಪೆಡಸಾದ ಸ್ತೋತ್ರ ಪದ್ಯಗಳನ್ನು ಹೊರತು ಮಾಡಿದರೆ ಅವರ ಶ್ರೇಷ್ಠ ಕವಿತೆಗಳೆಲ್ಲಾ Visionary ಕಾವ್ಯದ ರಚನೆಯನ್ನು ಹೊಂದಿವೆ. ಬ್ಲೇಕ್‌ನ ಕಾವ್ಯದ ಚರ್ಚೆಯೊಂದರಲ್ಲಿ Northrope Frye 'ಮುಗ್ಧತೆ, ಅನುಭವದ ದುರಂತ ಮತ್ತು ಪುನರ್ಜನ್ಮ' Visionary ಕಾವ್ಯದ ಮೂರು ಘಟ್ಟಗಳೆಂದು ಗುರುತಿಸುತ್ತಾನೆ. ಇಲ್ಲಿ ಮುಗ್ಧತೆಯೆಂಬುದು ಅನುಭವದ ದ್ವಂದ್ವಗಳನ್ನು ಕಾಣದ ಸ್ಥಿತಿ. ಅದರ ನಂತರ ಅನುಭವದ ಒಡಕುಗಳಿಂದ ಕವಿ ದುರಂತಕ್ಕೀಡಾಗುತ್ತಾನೆ. ಆದರೆ ಕೊನೆಯ ಘಟ್ಟದಲ್ಲಿ ಈ ದ್ವಂದ್ವಗಳನ್ನು ದಾಟಿ ಹೊಸ ಬೆಳಕನ್ನು ಕಾಣುತ್ತಾನೆ. ಜಗತ್ತಿನ ಶ್ರೇಷ್ಠ ಅನುಭಾವೀ ಕಾವ್ಯ ಈ ಮೂರು ಹಂತಗಳಲ್ಲಿ ಮೈತಾಳುತ್ತದೆ ಎಂಬುದಕ್ಕೆ ಹಾಫಿಜ್, ಅತ್ತಾರ್, ಸಂತ ಜಾನ್ ಆಫ್ ಕ್ರಾಸ್, ಬ್ಲೇಕ್, ಡಾಂಟೆ, ಎಲಿಯಟ್ ಮುಂತಾದವರ ಕೃತಿಗಳೇ ಉದಾಹರಣೆ. ಮಧುರಚೆನ್ನರ ಆತ್ಮ ಕಥನವು ಇದೇ ರಚನೆಯನ್ನು ಹೊಂದಿರುವುದನ್ನು ಇಲ್ಲಿ ಪೆಸೆಯಬಹುದು.

ಅನುಭಾವೀ ಕಾವ್ಯದ ಈ ರಚನೆಯ ಹಿನ್ನೆಲೆಯಲ್ಲಿ 'ಹೀಗೇಕೆ ಹುಟ್ಟೀ' 'ಬಾ'. 'ನರ್ತಕಿ ನೀನಾರೇ ?' ಯಂತಹ ಕವಿತೆಗಳನ್ನು ಮೊದಲ ಘಟ್ಟದಲ್ಲೂ, 'ಧ್ರುವ', 'ನೋಂಪಿ', 'ಸಲಿಗೆಯ ಸಲ್ಲಾಪ', 'ಮುಸುಕು', 'ಕೆಸರೊಳಗಿನ ಕಮಲ'. 'ಸಿಡಿಲು' ಮುಂತಾದ ಕವಿತೆಗಳನ್ನು ಎರಡನೆಯ ಘಟ್ಟದಲ್ಲೂ ಗುರುತಿಸಿಕೊಳ್ಳಬಹುದು. ಮಧುರಚೆನ್ನರ ಕೃತಿಸತಿಯ ಶಿರೋರತ್ನವಾದ 'ದೇವತಾ ಪೃಥಿವೀ' ಈ ಎರಡನೆ ಘಟ್ಟದ ಕೊನೆಗೆ ಮತ್ತು ಮೂರನೆಯ ಘಟ್ಟದ ಮೊದಲಿಗೆ ಬರುವಂಥದು ಅವರ 'ನನ್ನ ನಲ್ಲ' ಅವರ ಆಧ್ಯಾತ್ಮಿಕ ಪುನರ್ಜನ್ಮವನ್ನು ಕೇಂದ್ರವನ್ನಾಗಿಟ್ಟುಕೊಂಡು ಹಿಂದಿನ ಹಂತಗಳ ಸಿಂಹಾವಲೋಕನವನ್ನೂ ಮಾಡುತ್ತದೆ.

'ಸುಖ-ದುಃಖ' ಎಂಬ ಕವಿತೆಯಲ್ಲಿ ಈ ಮೂರೂ ಘಟ್ಟಗಳು ಸಂಕ್ಷಿಪ್ತವಾಗಿ ಮೂಡಿ ಬಂದಿವೆ. ಮೊದಲನೆಯ ಘಟ್ಟವನ್ನು 'ಸುಖವು ಬೀದಿಯ ನೆರಳ' ಎಂಬ ಮಾತಿನಲ್ಲಿ ಸೂಚಿಸಿದ್ದರೆ, ಎರಡನೆ ಘಟ್ಟವನ್ನು 'ದುಃಖವು ದೂಡುವ ಬಿಸಿಲ' ಎಂದು ಸೂಚಿಸ

ಲಾಗಿದೆ. ಕವಿತೆಯ ಮೊದಲರ್ಧ ಭಾಗವು (9 ನೇ ತ್ರಿಪದಿವರೆಗೆ) ದ್ವಂದ್ವಗಳ ನಡುವೆ ಜೀವ ತಲ್ಲಣಿಸುವ ಚಿತ್ರಗಳನ್ನು ನೀಡುತ್ತದೆ.

"ಹುತ್ತಾನೆ ತಟ್ಟೇವ । ಹಾವಾನೆ ಮೆಟ್ಟೇವ
ಹೆಡಿ ಜಜ್ಜಿ ಮಡಿದ ಮಿಡಿದಾಗ । ತಂಗೆವ್ವಾ
ನುಂಗೀದ ವಿಷವ ಕಕ್ಕೇತ

ಈ ದ್ವಂದ್ವಗಳನ್ನೂ ದುರಂತಗಳನ್ನೂ ದಾಟಿ ಮುಂದೆ ಹೋದಾಗ 'ಹುಲಿ' 'ಹೋರಿ ಗರು'ವಾಗಿ ಮುಂದಿನ ಹಾದಿ 'ಮುಂಜಾನೆ' ಆಗುತ್ತದೆ. ಆ ಕವಿತೆಯ ಮುಂದಿನ ಭಾಗವು ದ್ವಂದ್ವಗಳನ್ನು ಮೀರಿದ ನಿರ್ದ್ವಂದ್ವ ಸ್ಥಿತಿಯನ್ನು ಬಣ್ಣಿಸುತ್ತದೆ.

"ಒಳ ಹೊರಗ ನಮಗ ಹಿರಿಹಿಗ್ಗ ಆಗುವ ಆ ಸ್ಥಿತಿಯಲ್ಲಿ
"ಮೂರ್ಬೆಜ್ಜಿ ದಾಟಿದರ ಮುಂದಲ್ಲೆ ಗುಡಿಸಲವ
ಅಲ್ಲಿ ಮುನಿಗೋಳ ಅರಸೊತಿಗೆ । ತಂಗೆವ್ವಾ
ಅವರಂಥ ಸುಖವ ಅರಸರಿಯ"

ಜೀವ–ಜಗದೀಶರ ಪ್ರೇಮ ದರ್ಶನವನ್ನು ಕೇಂದ್ರವನ್ನಾಗಿಸಿಕೊಂಡ ಮಧುರಚೆನ್ನರ ಕವಿತೆಗಳಲ್ಲಿ ಜೀವ-ಪ್ರಕೃತಿಗಳಲ್ಲಿರುವ ಶಕ್ತಿಯ ಏಳಿಕೆ ಪ್ರಧಾನ ಆಶಯವಾಗಿಯು ದೈವೀ ಶಕ್ತಿಯ ಇಳಿಯುವಿಕೆ ಅಧೀನ ಆಶಯವಾಗಿಯೂ ಕೆಲಸ ಮಾಡಿವೆ. ಈ ಆಶ ಯಗಳು 'ಧ್ರುವ', 'ಮಧುರ ಗೀತ' ಮತ್ತು 'ನನ್ನ ನಲ್ಲ' ಕವಿತೆಗಳಲ್ಲಿ ನಾಟಕೀಯ ಘಟನೆಗಳ ಕಥನವಾಗಿ ರೂಪು ತಾಳಿದ್ದರೆ ನಾವು ಗಮನಿಸುವ ಇತರ ಕವಿತೆಗಳಲ್ಲಿ ನಾಟಕೀಯ ಸ್ವಗತಗಳಾಗಿ ಮೂಡಿ ಬಂದಿವೆ. ಮಧುರಚೆನ್ನರ ಎಲ್ಲಾ ಯಶಸ್ವೀ ಕವ ನಗಳಲ್ಲಿ ಅನುಭಾವ ಜೀವನದ ಸ್ಥಿತಿಗಳು ಮತ್ತು ಘಟನೆಗಳು ಮಾನವ ಲೋಕದ ಹೊರ ಘಟನೆಗಳ ಮತ್ತು ಒಳ ಘಟನೆಗಳ ಭಾವಗಳನ್ನು, ನಾಟಕೀಯತೆಯನ್ನು ಮೈ ಗೂಡಿಸಿಕೊಂಡು ಬರುತ್ತವೆ ಎಂಬುದು ಗಮನಾರ್ಹ.

೩

ಮಧುರಚೆನ್ನರ ಮೊದಲ ರಚನೆಗಳಲ್ಲೊಂದಾದ 'ಬಾ' ಎಂಬ ಕವಿತೆ ಒಂದು ನಾಟ ಕೀಯ ಸ್ವಗತವಾಗಿದೆ. ಇಲ್ಲಿ ಕನ್ಯೆಯೊಬ್ಬಳು ತನ್ನ ನಲ್ಲನನ್ನು ಒಳಗೆ ಕರೆಯುತ್ತಿ

ದ್ದಾಳೆ. ಆ ನಲ್ಲೆ 'ನಲಿದಾಡಿ, ಕುಣಿದಾಡಿ, ಸುಳಿದಾಡಿ ತುದಿಬೆರಳೊಡೆಸೇರಿಸಿ ಮುಜೋಕಗಳ ಕುಣಿಸಿ ಹಾರಿಸಿ ಪುಟಿಸಿ/ಸೆಂಡಾಡಿ ಸುಮಸ್ಮಾನವಾಂತು ಸೊಬಗಿಂ ಕುಣಿವ ಸವಿಗಾರ.'' ಈ ಕವಿತೆಯ ಪೂರ್ವಾರ್ಧದ ವಾರ್ಧಕ ಷಟ್ಪದಿ ಉತ್ತರಾರ್ಧದಲ್ಲಿ ಐದು ಮಾತ್ರೆಗಳ ದ್ವಿಪದಿಗಳಾಗಿ (ಯಾವ ಕಾವ್ಯೋದ್ದೇಶವೂ ಇಲ್ಲದೆ) ಛಂದಸ್ಸಿನ ಅನಿರ್ದಿಷ್ಟತೆ ವಿನಾಕಾರಣ ಬಂದಿದೆ. ಪ್ರೇಮ ಕಾವ್ಯದ ಹಳೇ ಸರಕುಗಳಾದ ''ಪಾಡುತಿಹ ಕೋಗಿಲೆ', 'ಮಲ್ಲಿಗೆ ಮಂಟಪ', 'ಹೊಸವಳಿರ ಹಾಸಿಗೆ' ಮುಂತಾದ ಪ್ರತಿಮೆಗಳ ಮೂಲಕ ವ್ಯಕ್ತವಾಗುವ ಈ ಕವಿತೆ ಹದಿಹರೆಯದ ಮುಗ್ಧ ಕನ್ಯೆಯೊಬ್ಬಳು ತನ್ನ ಇನಿಯನನ್ನು ಹಗಲುಗನಸಿನಲ್ಲಿ ಕರೆಯುತ್ತಿದ್ದಾಳೊ ಎಂದು ಭಾಸವಾಗುತ್ತದೆ.

ಒಟ್ಟು ಪರಿಣಾಮದಲ್ಲಿ ಸೋಲುವ ಈ ಕವಿತೆಯಲ್ಲಿ ಮಧುರಚೆನ್ನರ ಮುಂದಿನ ಕವಿತೆಗಳ ಆಶಯಗಳು ಮೊಳಕೆಯೊಡೆದಿವೆ. ಇಲ್ಲಿ ಜೀವ-ಜಗದೀಶರ ಸಂಬಂಧ ಸತಿ-ಪತಿ ಭಾವದಲ್ಲಿ ಪ್ರಕೃತಿಯ ಚಿತ್ರಗಳ ಮೂಲಕ ಮೂಡುತ್ತದೆ. ಮಾಧುರ್ಯ ಭಾವವನ್ನು ಮೂಲ ಕಾಳಜಿಯನ್ನಾಗಿಸಿಕೊಂಡ ಈ ಕವಿತೆಯಲ್ಲಿ ಮಧುರಚೆನ್ನರ ಮುಂದಿನ ಕವಿತೆಗಳ ಸ್ವರೂಪ ಬೀಜದೊಳಗಣ ವೃಕ್ಷದಂತೆ ಅಡಗಿದೆ.

ಆದರೆ ಈ ಕವಿತೆಯಲ್ಲಿನ ಕನ್ಯೆಯ ಸ್ನೇಹ ಸುಖ ದುಃಖಗಳ ಜೊತೆಗೆ ಮುಖಾಮುಖಿಯನ್ನು ಮಾಡದ ಮುಗ್ಧತೆಯಿಂದ ಕೂಡಿದ್ದು, ಇದೇ ಮುಗ್ಧತೆಯ ಬೆರಗಿನ ಮನಸ್ಥಿತಿಯ ಅಭಿವ್ಯಕ್ತಿಯನ್ನು 'ನರ್ತಕಿ ನೀನಾರೆ ?', 'ಹೀಗೇಕೆ ಹುಚ್ಚೀ !' ಕವಿತೆಗಳಲ್ಲೂ ನೋಡಬಹುದು.

ಮಧುರಚೆನ್ನರ ಮುಂದಿನ ಕವಿತೆಗಳಲ್ಲಿ ಜೀವ ಬೇರೆ ಬೇರೆ ಅವತಾರಗಳನ್ನು ಹೊತ್ತು ಬರುತ್ತದೆ. ಜಗದೀಶನೂ ಅಷ್ಟೆ. ಇನ್ನು ಮುಂದಿನ ಕವಿತೆಗಳಲ್ಲಿ ಸುಖ–ದುಃಖಗಳ ದ್ವಂದ್ವಗಳ ದುರಂತಮಯ ಚಿತ್ರಣ ಮತ್ತು ಅವುಗಳ ಮಧ್ಯೆಯೂ ಜೀವ ಸೋದರ ಬಯಸುವುದರ ಅಭಿವ್ಯಕ್ತಿಯನ್ನು ಕಾಣಬಹುದು. ಈ ಘಟ್ಟವನ್ನು ವಚನಕಾರರ ಲಿಂಗದ ವಿಕಳಾವಸ್ಥೆಗೆ ಹೋಲಿಸಬಹುದು.

'ಧ್ರುವ' ಕವಿತೆಯಲ್ಲಿ ಕೂಸು ಕಳೆದುಹೋಗುವುದು, ಅದರಿಂದ ತಾಯಿ ದಿಗ್‌ಭ್ರಾಂತಳಾಗುವುದು ಮುಖ್ಯ ಘಟನೆಗಳು. ಕೂಸು ಕಳೆದು ಹೋಗುವುದು ಮುಗ್ಧತೆ ಮಾಯವಾಗುವುದರ ಸಂಕೇತವೆಂದು ಬೇರೆ ಹೇಳಬೇಕಾಗಿಲ್ಲ. ''ಸುನೀತಿದೇವಿ ನಿದ್ದೆ ತಿಳಿದು ಎದ್ದು ಕುಳಿತಳು.'' ಎಂಬಲ್ಲಿ ಜೀವ ಶಕ್ತಿ ಜಾಗೃತವಾಗುವುದರ ಸೂಚನೆ ಇದೆ. ಆದರೆ

ಈ ಸ್ಥಿತಿಯನ್ನು ಮೀರಿ ಮೇಲೇರುವ ಸಾಮರ್ಥ್ಯವನ್ನು ಸುನೀತಿ ಇನ್ನೂ ಪಡೆದುಕೊಂಡಿಲ್ಲ. "ದೇವರೆನಗೆ ರೆಕ್ಕೆಗಳನು/ಡೇಗೆಯಂಥ ಕಣ್ಣುಗಳನು/ಯೋಗಿಯಂಥ ಮನವ ಕೊಡುವನೆ ?/ಕೊಟ್ಟರೀಗ–/ ಮುಗಿಲನೇರಿ ನೋಡಿ ಬರುವೆನೆ !" ಮುಂದಿ ಮಕ್ಕಳ ಆಳಲನ್ನು ಕೇಳಿ ಎಲ್ಲೆಲ್ಲೂ ಧ್ರುವನನ್ನು ಕಾಣುವ ಸುನೀತಿಯ ಸ್ಥಿತಿ "ಭ್ರಾಂತಿಯೇ." ಈ ಕವಿತೆ ಹೇಳುವ ಘಟನೆಯ ನಾಟಕೀಯ ವಿವರಗಳಲ್ಲಿ ಮತ್ತು ಮಾತೃವಾತ್ಸಲ್ಯದ ಮೂರ್ತ ಭಾವಗಳ ಮೂಲಕ ಆಪ್ತವಾಗುತ್ತಾ ಹೋಗುತ್ತದೆ.

ನಿದ್ದೆ ತಿಳಿದು ಎದ್ದು ಕೂರುವುದರ ಮುಂದಿನ ಸ್ಥಿತಿ 'ನೋಂಪಿ' ಕವಿತೆಯಲ್ಲಿದೆ. ಇಲ್ಲಿ ಜೀವಶಕ್ತಿ ತನ್ನ ನಲ್ಲನಿಗೋಸ್ಕರ ಉಗ್ರತಪೋನಿರತಳಾಗಿದ್ದಾಳೆ.

"ಹತ್ತೂ ನಿಟ್ಟಿಗೆ/ಹೊತ್ತಿಸಿ ಉರಿಯನು/ ನಿತ್ತೆನು ನಾ ಕಿತ್ತಡಿಯಾಗಿ/ಹತ್ತೂ ನಿಟ್ಟಿಗೆ/ಹೊತ್ತಿಸಿ ಉರಿಯನು/ಕುತ್ತೆನು ನಾ ಮಾಸತಿಯಾಗಿ/" ಈ ನೋಂಪಿ ಎಷ್ಟೇ ದೃಢವಾದರೂ ನನಸಿನ ಕೋರಿಕೆ ಕನಸಾಗಿಯೇ ಉಳಿದಿದೆ.

ಮಧುರಚೆನ್ನರ ಎಲ್ಲ ಕವಿತೆಗಳಲ್ಲೂ ಕೇಂದ್ರ ಪಾತ್ರಗಳು ಎರಡೇ ಎಂಬುದೂ ಈ ಕವಿತೆಯಲ್ಲಿ ಸೂಚಿತವಾಗಿವೆ. ಕೆಲವು ಸಲ ಈ ಪಾತ್ರಗಳು ಶಕ್ತಿಗಳಾಗಿ ಮಾರ್ಪಡುವುದನ್ನು ಮುಂದೆ ನೋಡೋಣ.

ಇದೇ ಸ್ಥಿತಿಯ ಬೇರೆ ಬೇರೆ ಭಾವಗಳು 'ಸಲಿಗೆಯ ಸಲ್ಲಾಪ' 'ಮುಸುಕು' ಕವಿತೆಗಳಲ್ಲಿ ರೂಪು ಪಡೆದಿವೆ.

ಜೀವಶಕ್ತಿಯ ಏಳಿಕೆಯ ಪ್ರಯತ್ನ ಧೃಡ ಸಂಕಲ್ಪವಿದ್ದರೂ ಕೂಡ ವಿಫಲವಾಗುವ ದುರಂತದ ನಾಟಕೀಕರಣವಷ್ಟೇ ಶಕ್ತಿಯುತವಾಗಿ ದೇವಶಕ್ತಿಯ ಇಳಿಯುವಿಕೆಯ ಸೋಲು 'ರೋಹಿಣೀ' ಮತ್ತು 'ಸಿಡಿಲು' ಕವಿತೆಗಳ ವಸ್ತುವಾಗಿದೆ.

'ರೋಹಿಣೀ' ಶಬ್ದವು ಮಧುರಚೆನ್ನರು ತಮ್ಮ ಪತ್ನಿ ಬಸಮ್ಮನವರಿಗೆ ಕೊಟ್ಟ ಹೆಸರೂ ಹೌದು, ರೋಹಿಣೀ ನಕ್ಷತ್ರದ ಸೂಚಕವೂ ಹೌದು. ಈ ಕವಿತೆಯಲ್ಲಿ ಜೀವಶಕ್ತಿ ಪತಿಯ ವೇಷ ತಾಳಿದ್ದರೆ ದೈವೀಶಕ್ತಿ ಸತಿಯಾಗಿದೆ. ಇದು ಸೂಫಿ ಕಾವ್ಯ ಪರಂಪರೆಯನ್ನೂ, ಮರುಳ ಶಂಕರದೇವನ ವಚನಗಳನ್ನೂ ನೆನಪಿಸುತ್ತದೆ. ಮೇಲ್ನೋಟಕ್ಕೆ 'ರೋಹಿಣಿ', ನಲ್ಲನು ತನ್ನ ನಲ್ಲೆಯನ್ನು ಕರೆಯುವ ಪ್ರೇಮಗೀತೆ. ಇದು ಅವರ

ಸಾರ್ವತ್ರಿಕ ಆಯಾಮ. ಗೆಳತಿ ಕದಾಗಿದಾ ಸೂಕಿಕೊಂಡು, ಚಿಲಕಾಗಿಲಕಾ ಹಾಕಿ ಕೊಂಡು ಅಟ್ಟ ಏರಿ ಒಳಗೆ ಕೂತಿದ್ದಾಳೆ. ಹೊರಗಿರುವ ಕೆಳಗಿರುವ ನಲ್ಲ ಅವಳನ್ನು ಕರೆಯುತ್ತಿದ್ದಾನೆ ಆದರೆ ಅವನಿಗೆ ಕಾಣುವುದು ಮಿಂಚಿನ, ಜರತಾರಿಯ, ತಾಟಮಾಟದ ಇಣುಕಿ ನೋಡುವ, ಮಾಟ-ಮೋಡಿ, ಕಳ್ಳೀ ಆಟಗಳ ಮೂಲಕ. "ನೀ ಕೂತಲ್ಲಿ/ಜ್ಯೋತಿಯ ಥಾಳ/ನಾ ಕೂತಲ್ಲಿ/ಕತ್ತಲೆ ಕಾಳ/ಕಂಡೂ ಕಂಡೂ ಕೂತೇಕೂತಿ/ತಿಳಿದೂ ತಿಳಿದೂ ಹಾಗೇ ಇರತಿ/ಅಲ್ಲೇ ಕುಳಿತಿ/ಬಾರೇ ಗೆಳತಿ!" ಈ ಇಬ್ಬರ ನಡುವೆ ಅನಂತ ದೂರವಿದ್ದರೂ ಒಂದಲ್ಲಾ ಒಂದು ದಿನ ಅವಳು ಇಳಿದೇ ಬರುತ್ತಾಳೆಂಬ ದೃಢ ವಿಶ್ವಾಸ ದಿಂದ ಕವಿತೆ ಮುಗಿಯುತ್ತದೆ. ಇಲ್ಲಿಯವರೆಗೆ ಪರೀಕ್ಷಿಸಿದ ಕವಿತೆಗಳಲ್ಲಿ ಬರೀ ಸಂಜ್ಞೆಯಾಗಿದ್ದ ಬೆಳಕಿನ ಅನುಭವ ಈ ಕವಿತೆಯಲ್ಲಿ ಮಿಂಚಿನ ಹಾಗೆ ಮೈದೋರಿದೆ. ಆದರೆ ಕವಿಗೆ ಇಷ್ಟು ಸಾಲದು. ಆ ಬೆಳಕು ಕೆಳಗೆ ಬರಬೇಕು, ತನ್ನೊಳಗೆ ಬೆರೆಯಬೇಕು.

ಮಿಂಚಾಗಿ ಕಂಡ ಬೆಳಕು ಸಿಡಿಲಾಗಿ ನೆಲಕ್ಕೆ ಬಡಿದರೂ ಕತ್ತಲೆಯ ಕಾವಳ ಕಳೆದು ಹೋಗುವುದಿಲ್ಲ ಎನ್ನುವುದು "ಸಿಡಿಲು" ಕವಿತೆಯ ಭಾವ. 'ಇಂದ್ರವನದ ಹಣ್ಣು' ಕೆಳಕ್ಕೆ ಬಿದ್ದಾಗ ಕ್ಷಣ ಕಾಲ ದೊಬ್ಬ ಹೊಸು, ದೊಡ್ಡದೊಂದು ಸಪ್ಪಳಾಗಿ, ಲೋಕ ಕಕ್ಕಾವಿಕ್ಕಿಯಾಗುತ್ತದೆ.

'ಗಗನ ಪೃಥ್ವಿ ಏಕವಾಗುವ' ಆ ಕ್ಷಣ ಅದನ್ನು ಸ್ವೀಕಾರ ಮಾಡಲು ಇನ್ನೂ ಅರ್ಹತೆಯನ್ನು ಪಡೆಯಕೊಳ್ಳದ ಜಗತ್ತಿನಲ್ಲಿ ಭೀತಿಯನ್ನು ಮಾತ್ರ ಬಿತ್ತಬಲ್ಲದು. ಹೀಗೆ ಬೆಳಕಿನ ಆಕಸ್ಮಿಕ ಬರವಿನಿಂದ ಅದು ಬೇಡದವರಿಗೆ ಸಿಕ್ಕು, ಬೇಡಿದವರಿಗೆ ದಕ್ಕದೆ ಹೋಗಬಹುದು. "ಬೇಡಿದಲ್ಲಿ ಬೀಳಲಿಲ್ಲ/ಬೇಡದಲ್ಲಿ ಬಿದ್ದಿತಲ್ಲ!/"

ಜೀವ ಶಕ್ತಿಯ ಮೇಲು ಪಯಣದ ಹಾಗೆ ದೇವಶಕ್ತಿಯ ಕೆಳಪಯಣವೂ ಉತ್ಕಟ ಆನಂದದ ಒಂದು ಕ್ಷಣವನ್ನು ನೀಡಿ ಆ ಬಳಿಕ ಜೀವ ಜಗತ್ತುಗಳನ್ನು ತಬ್ಬಲಿ ಮಾಡುವುದು 'ಸಿಡಿಲು' ಕವಿತೆಯ ಕೇಂದ್ರ ಅನುಭವ ಆದರೆ ಈ ರೀತಿಯ ಅನುಭವ ಅನುಭಾವಿಗಳಿಗೆ ಮಾತ್ರವಲ್ಲ, ಕವಿಗಳಿಗೂ ಆಗಬಹುದು. ತನ್ನ ಸಧ್ಯದ ಸ್ಥಿತಿಯನ್ನು ಸ್ಫೋಟಗೊಳಿಸುವ ವೈಯಕ್ತಿಕ ಮತ್ತು ಸಾಮಾಜಿಕ ಅನುಭವಗಳಿಂದ ಚೇತರಿಸಿಕೊಳ್ಳಲಾಗದ ಸ್ಥಿತಿ ರೊಮ್ಯಾಂಟಿಕ್ ಮತ್ತು ಆಧುನಿಕ ಕಲೆಯಲ್ಲಿ ಪುನರುಕ್ತಿ ಪಡೆದಿದೆ. ಕೋಲ್‌ರಿಜ್‌ನ 'ಏನ್‌ಶಿಯಂಟ್ ಮಾರಿನರ್' ನಲ್ಲಿ ಆಗುವುದು ಇದೇ. ಆದರೆ ನಮ್ಮ ಭಕ್ತಿ ಕಾವ್ಯ ಪರಂಪರೆಯ ಯಶಸ್ವೀ ಕವಿಗಳ ಹಾಗೆ, ಬ್ಲೇಕ್,

ವರ್ಡ್ಸ್‌ವರ್ತ್, ಎಲಿಯೆಟ್‌ರ ಹಾಗೆ ಮಧುರಚೆನ್ನರು ಈ ಸ್ಥಿತಿಯನ್ನು ದಾಟಿ ಹೋಗುತ್ತಾರೆ. ಇದನ್ನೇ ಬ್ಲೇಕ್ "Without Contraries no Progression" ಅಂದಿದ್ದು

ದ್ವಂದ್ವಗಳ, ವಿರೋಧಗಳ ಘರ್ಷಣೆಯೂ ಶಕ್ತ ಕಾವ್ಯದ ಮೂಲ ಸೆಲೆಯಾಗಬಹುದೆನ್ನುವುದಕ್ಕೆ ಬೇಂದ್ರೆ, ಅಡಿಗರ ಕಾವ್ಯ ಸಾಕ್ಷಿಯಾಗಿದೆ. ಮಧುರಚೆನ್ನರು ಕೇವಲ ಸತ್ಯಾತಿಶಯಗಳ ಮಟ್ಟದಲ್ಲಿ ಎದುರಿಸುವ ದ್ವಂದ್ವಗಳನ್ನು ಬೇಂದ್ರೆಯವರು ದಟ್ಟ ವಿವರಗಳ ಮಟ್ಟದಲ್ಲಿ ತಮ್ಮ ಕವಿತೆಗಳಲ್ಲಿ ಸೃಷ್ಟಿಸಿದ್ದಾರೆ. 'ಮಾಯಾ ಕಿನ್ನರಿ'ಯಂಥಾ ಅವರ ಉತ್ಕೃಷ್ಟ ಕವಿತೆಗಳಲ್ಲಿ ವಿರೋಧ ಶಕ್ತಿಗಳನ್ನು ಸೃಜನಶೀಲತೆಯ ಉತ್ಕಟ ಕ್ಷಣದಲ್ಲಿ ಹಿಡಿದಿಟ್ಟಿರುವುದರಿಂದ, ಆ ಕವಿತೆಗೆ ಸ್ಫೋಟಕ ಶಕ್ತಿ ಬಂದಿದೆ. ದಂಗುಬಡಿಸುವಷ್ಟು ದಟ್ಟ ವಿವರ, ಪ್ರತಿಮೆ, ಸಂಕೇತಗಳ ಮೂಲಕ ಅನೇಕ ರೀತಿಯ ವಿರೋಧಗಳಿಂದ ಕೂಡಿದ ವೈವಿಧ್ಯಮಯ ಪ್ರಪಂಚವನ್ನು ನಮ್ಮ ಮುಂದೆ ಪ್ರತ್ಯಕ್ಷಗೊಳಿಸುವುದು ಬೇಂದ್ರೆಯವರ ಕಾವ್ಯಯೋಗದ ದಾರಿ ಮತ್ತು ಗುರಿ. ಅಲ್ಲಮನ ವಚನದಲ್ಲಿ ಹುಲಿ ಮತ್ತು ಹುಲ್ಲೆಗಳು ಒಂದರ ತಲೆ ಒಂದರ ಬಾಯಾಗಿರುವಂತೆ ಅಲ್ಲಿ ವಿರೋಧಗಳು ಮನೆಮಾಡಿವೆ. ಆದರೆ ಮಧುರಚೆನ್ನರ ಕಾವ್ಯಯೋಗ ಮಿತವಾದ ವಿವರಗಳ ಮೂಲಕ ದ್ವಂದ್ವಗಳನ್ನು ಸೂಚಿಸಿ, ಅದರಾಚೆಗಿನ ಜಂಗಮ ಸಮತೋಲವನ್ನು ಸಾಧಿಸುತ್ತದೆ.

೪

ವಚನಕಾರರು 'ಲಿಂಗದ ವಿಕಳಾವಸ್ಥೆ' ಎಂದು ಕರೆದಿರುವ, ಸಂತಯಾನ್ ದಿ ಕ್ರೂಸ್ 'ಆತ್ಮನ ಕಾಳರಾತ್ರಿ' ಎಂದು ಕರೆದಿರುವ ಅನುಭಾವೀ ಕಾವ್ಯದ ಎರಡನೇ ಹಂತದ ಕೊನೆಯಲ್ಲಿ 'ದೇವತಾ ಪೃಥಿವೀ' ಕವಿತೆಯ ಸಂದರ್ಭವಿದೆ. ಈ ಕವಿತೆಯ ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳುವ ಮೊದಲು ಕೆಲವು ಮುಖ್ಯ ಅಂಶಗಳನ್ನು ಗಮನಿಸೋಣ

ಮಧುರಚೆನ್ನರು ಬೇಂದ್ರೆಯವರ ಹಾಗೆ ತಮ್ಮ ಕವಿತೆಗಳಿಗೆ ಭಾವ ಸಂದರ್ಭ ಸೂಚನೆಗಳನ್ನು ನೀಡಿಲ್ಲ. ಕವಿತೆಯ ಒಳ ವಿವರಗಳಿಂದಲೇ ಅದಕ್ಕೆ ಹಿನ್ನೆಲೆಯಾಗಿರುವ ನಾಟಕೀಯ ಸಂದರ್ಭವನ್ನು ನಾವು ಕಟ್ಟಿಕೊಳ್ಳಬೇಕಾಗಿದೆ. 'ದೇವತಾ ಪೃಥಿವೀ' ಕವಿತೆ ಭೂಮಿತಾಯಿಗೆ ಜೊತೆಗೆ ಮಾತಾಡುತ್ತಿರುವವನು ಅವಳ ಮಗ ಮಲಗಿರುವ ತಾಯಿಯನ್ನು ಎದ್ದೇಳುವಂತೆ ಅವನು ಪ್ರಾರ್ಥಿಸುತ್ತಿದ್ದಾನೆ. ಅವನು ಮೊಲೆಹಾಲಿ

ಗಾಗಿ ಹಲುಬುವ ಕಂದಮ್ಮನಲ್ಲ! ಅವಳ ಮನದ್ಹಾಲು ಬೇಡಲು ಬೆಳೆದು ನಿಂತವನಾಗಿದ್ದಾನೆ. ಆದರೆ ತಾಯಿ ಕೇಳಿಸಿಯೂ, ಕೇಳದ ಹಾಗೆ ಮಲಗಿದ್ದಾಳೆ. ಪ್ರಭುದೇವರ ವಚನದಲ್ಲಿ 'ಶಿಶು ತನ್ನ ತಾಯ ಹೆಣವ ಹೊತ್ತುಕೊಂಡು ಹೆಸರ ಹೇಳುತ್ತಿರ್ದ್ದಾನೆ' ಎಂದು ಬಣ್ಣಿಸುವ ಸ್ಥಿತಿಯನ್ನು ಇದು ನೆನಪಿಸುತ್ತದೆ.

ಈ ಕವಿತೆಯ ವಿಶ್ಲೇಷಣೆಗೆ ಮಧುರಚೆನ್ನರ ಸ್ವಂತ ಬದುಕಿನ ಒಂದು ವಿವರ ನೆರವು ನೀಡಬಲ್ಲದು. ಅವರ ತಾಯಿ ಅಂಬಕ್ಕನವರ ಜೊತೆಗೆ ಮಧುರಚೆನ್ನರ ಸಂಬಂಧ ಅನೇಕ ವರ್ಷಗಳ ಕಾಲ ಕಹಿಯಾಗಿತ್ತು. ಅವರು ಅಂಬಕ್ಕನಿಂದ ಆಡಿಸಿಕೊಂಡದ್ದನ್ನು ಬೇಂದ್ರೆಯವರು ನೆನೆದಿದ್ದಾರೆ. ಈ ವಿಷಯ ಸಂಬಂಧವನ್ನು ತಮ್ಮ ಸಮಾಧಾನ ಮತ್ತು ಐಕ್ಯ ಸಾಧನೆಯ ಮೂಲಕ ಮಧುರಚೆನ್ನರು ಮಧುರವಾಗಿಸಿಕೊಂಡರು. ಅನೇಕ ವರ್ಷಗಳ ಕಾಲ ಅವರು ಅಮ್ಮನ ಪ್ರೀತಿಯಿಂದ ವಂಚಿತರಾಗಿದ್ದರು. ತಾಯಿಯ ಜೊತೆಗಿನ ಸಂಬಂಧಕ್ಕೂ ಪ್ರಕೃತಿಯ ಜೊತೆಗಿನ ಸಂಬಂಧಕ್ಕೂ ಇರುವ ಸೌಮ್ಯತೆಯನ್ನು ಆಧುನಿಕ ಮನಃಶಾಸ್ತ್ರ ನಮ್ಮ ಗಮನಕ್ಕೆ ತಂದಿದೆ. ಈ ಕವಿತೆಯಲ್ಲಿ ಮಗ ಬೇಡುತ್ತಿರುವುದು ತನ್ನ ದೇಹ ಪೋಷಣೆಗೆ ಅವಶ್ಯವಾದ ಮೊಲೆ ಹಾಲನ್ನಲ್ಲ, ಮನದ್ಹಾಲನ್ನು ತಾಯಿ-ಮಗುವಿನ ದೈಹಿಕ ಸಂಬಂಧವನ್ನು ಮೀರಿದ ವಾತ್ಸಲ್ಯಭಾವಕ್ಕಾಗಿ ಅವನು ಹಸಿದಿದ್ದಾನೆ.

ತಮ್ಮ ಶ್ರೇಷ್ಠ ಕವಿತೆಗಳಲ್ಲಿ ಮಧುರಚೆನ್ನರು ಯೌಗಿಕ ಅಥವಾ ಅನುಭಾವೀ ಸಂಕೇತಗಳನ್ನು ಬಳಸುವುದು ಅಪರೂಪ ಆದರೆ ಈ ಕವಿತೆಯ 'ಪೃಥಿವೀ' ಮತ್ತು 'ಮಲಗಿರುವ ತಾಯಿ' ಶಬ್ದಗಳಲ್ಲಿ ಯೌಗಿಕ ಅರ್ಥಗಳೂ ಅಂತರ್ಗತವಾಗಿರುವಂತೆ ಕಾಣುತ್ತದೆ. 'ಪೃಥಿವೀ' ತತ್ವ ಸಾಧನೆಯಿಂದ ಜಾಗೃತಗೊಳಿಸಬೇಕಾದ ಮೂಲಾಧಾರ ಚಕ್ರದ ತತ್ವ. ಈ ಮೂಲಾಧಾರ ಚಕ್ರದಲ್ಲಿ ಕುಂಡಲಿನೀ ಶಕ್ತಿ ಸರ್ಪರೂಪಿಣಿಯಾಗಿ ಮಲಗಿಕೊಂಡಿರುತ್ತಾಳೆ. ಮೂಲ ಕುಂಡಲಿನಿಯನ್ನು ಮೇಲು ಮುಖವ ಮಾಡಿ ಕಾಲು ಕೋಣೆ ಕೋಣೆಯ ಹೊಗಿಸಿ ತಾಲು ಚಕ್ರದ ಮೇಲಣಾಲಯಕೆ ಕಳಿಸುವುದು ಯೋಗದ ಕ್ರಮವೆಂದು ಸಪ್ಪಣ್ಣಪ್ಪನವರು ಹೇಳಿದ್ದಾರೆ. ಯೌಗಿಕ ಅರ್ಥ ಪರಂಪರೆಯ ಇನ್ನೊಂದು ಶಬ್ದ 'ಏಳಮ್ಮ'ದಲ್ಲಿ ಅಡಗಿರುವ 'ಏಳು' ಬೇಂದ್ರೆಯವರ 'ಏಳು ಕನ್ನಿಕೆಯರು' ಕವಿತೆಯಲ್ಲೂ 'ಏಳು' ಶಬ್ದಕ್ಕೆ ಯೌಗಿಕ ಅರ್ಥಗಳಿವೆ ಮಲಗಿರುವ ಕುಂಡಲಿನಿ ಷಟ್‌ಚಕ್ರಗಳನ್ನು ದಾಟಿ ಸಹಸ್ರಾರವೆಂಬ ಏಳನೆಯ ಚಕ್ರದಲ್ಲಿ ಸದಾ ಸನ್ನಿಹಿತನಾಗಿ ಗುಹೇಶ್ವರನೊಂದಿಗೆ ಬೆರೆಯುತ್ತಾಳೆ. ಯೌಗಿಕ ಅರ್ಥ

ಛಾಯೆ ಇರುವ ಈ ಶಬ್ದಗಳನ್ನು ಮಧುರಚೆನ್ನರ ಕವಿತೆಯ ವಿಶಿಷ್ಟ ನಾಟಕೀಯ ಸಂದರ್ಭದಲ್ಲಿ ಇನ್ನೊಂದು ಅರ್ಥವನ್ನು ಪಡೆದುಕೊಳ್ಳುತ್ತದೆ.

"ಮೊಲೆಹಾಲು ಸಾಕಮ್ಮ ಸವಿಲಾಲಿ ಬೇಕಮ್ಮ
ಮುದ್ದಾಡಿ ರಮಿಸಿ ಮೈದಡೆವ/ಏಳಮ್ಮಾ
ಮಲಗಿರುವ ತಾಯಿ ಪೃಥಿವೀ ॥"

ಕವಿತೆಗೆ 'ದೇವತಾ ಪೃಥಿವೀ' ಎಂದು ಹೆಸರಿಟ್ಟಿದ್ದರೂ ಕವಿತೆಯೊಳಗಡೆ ಭೂಮಿತಾಯಿಯನ್ನು 'ತಾಯಿ ಪೃಥಿವೀ' ಎಂದು ಕರೆಯಲಾಗಿದೆ. ತಾಯಿಗೆ 'ಪೃಥ್ವಿ' ತತ್ವವನ್ನೂ ಪೃಥ್ವಿಗೆ ತಾಯಿತನವನ್ನೂ ಆರೋಪಿಸಲಾಗಿದೆ.

ದೈಹಿಕ ಹಸಿವೆಯನ್ನು ನೀಗಿಸುವ ಮೊಲೆಹಾಲು ಮಗನಿಗೆ ಬೇಕಾಗಿಲ್ಲ. ಅವನ ಮಾನಸಿಕ ಹಸಿವೆಯನ್ನು ನೀಗಿಸುವ ಮುದ್ದು, ಅಪ್ಪುಗೆ, ಮನದ್ಹಾಲು ಇವುಗಳಿಗಾಗಿ ಬೇಡುತ್ತಿದ್ದಾನೆ. ತಾಯಿ ಪೃಥಿವಿಯ ಮೈಚೆಲುವು. ಹೂವಿನ ಮಕರಂದ, ಹಣ್ಣಿನ ಮಾಧುರ್ಯ ಅವನ ದೈಹಿಕ ಹಸಿವೆಯನ್ನು ನೀಗಿಸಿದರೂ ಮಾನಸಿಕ ಹಸಿವೆಯನ್ನು ಹೆಚ್ಚಿಸಿವೆ.

"ಚಂದರನ ಚೆಲುವೀಕಿ ಇಂದರನ ಹೋಲೀಕೀ
ಮೈಹೀಂಗ ನಿನ್ನ ಮನಹ್ಯಾಂಗ । ಏಳಮ್ಮಾ
ಮಲಗಿರುವ ತಾಯಿ ಪೃಥಿವೀ ॥"

ಹಿಂದಿನ ಕಾರಿರುಳು, ಇಂದಿನ ಹೊಬಿಸಿಲು, ಹಿಂದಿನ ಮರೆವು, ಇಂದಿನ ಅರಿವು, ಕತ್ತಲೆಯ ಆ ಸೋಂಕು, ಹೊಬಿಸಿಲ ಈ ಮುಂಕು, ಕಪ್ಪು, ಬಿಳುಪು—ತಾನು ಕಂಡುಂಡ ಸಿಹಿ ಕಹಿ ಅನುಭವದ ದ್ವಂದ್ವಗಳೆಲ್ಲವೂ 'ಕುರುಡು'.

"ಕಾಣದ ಆ ಕುರುಡು ಕಾಣುವ ಈ ಕುರುಡು
ಕಂಡೇನು ಕಾಣದಿದ್ದೇನು । ಏಳಮ್ಮಾ
ಮಲಗಿರುವ ತಾಯಿ ಪೃಥಿವೀ ॥"

ಈ ದ್ವಂದ್ವಗಳ ನಡುವಿನ ಬಾಳು ಆಸೆ ತೀರಿಸದ ಅರಿವು, ಇದ್ದಿಲ್ಲದಂತೆ ಪರಿ ಮಗನ ಈ ಸ್ಥಿತಿ ಒಂದು ರೀತಿಯ ಅರಿಬಸುಕು

"ಕಿಂಭೂತ ಕೊರಡೊಂದು ತುಂಬೀತು ಕೊನರಾಗಿ
ಹೂವಾಗಿ ಹಣ್ಣು ಬಿಡಲಿಲ್ಲ । ಏಳವ್ವಾ
ಮಲಗಿರುವ ತಾಯಿ ಪೃಥಿವೀ ॥"

ಮಗ ಎಷ್ಟು ಹಲುಬಿದರೂ ತಾಯಿ ಮಲಗಿದ್ದಾಳೆ-ಸತ್ತ ಹಾಗೆ
"ಎಲ್ಲೀಯ ಈ ನಿದ್ದಿ ಕಾಳನ ಕರಿ ನಿದ್ದಿ
ಇದ್ದೇನು ಇಲ್ಲದಿದ್ದೇನು । ಏಳವ್ವಾ
ಮಲಗಿರುವ ತಾಯಿ ಪೃಥಿವೀ ॥"

ಇದು ಪ್ರಭುದೇವರ ಮಾತಿನಲ್ಲಿ, 'ಒಳಗೆ ಸತ್ತು ಹೊರಗೆ ಆಡುತ್ತಿತ್ತು' ಎಂಬಂತಹ ಸ್ಥಿತಿ. ಇದನ್ನೇ ಎಲಿಯಟ್ 'Life-In-Death, Death-In-Life' ಎಂದದ್ದು.

ಇಲ್ಲಿವರೆಗಿನ ನಾಟಕೀಯ ಸನ್ನಿವೇಶದಲ್ಲಿ ಮಗ ತಾಯಿ ಮಲಗಿರುವುದು ನಿದ್ದೆಯಿಂದಲೊ, ಸಾವಿನಿಂದಲೊ ಎಂದು ಹೆದರಿಯೋ ಏನೋ ದೂರ ಕೂತು ಹಲುಬುತ್ತಿದ್ದಾನೆ. ಆದರೆ ತನ್ನ ಅಸಹಾಯಕತೆಯ ತುಟ್ಟತುದಿಯನ್ನು ಮುಟ್ಟಿದಾಗ ನಿರ್ವಾಹವಿಲ್ಲದೆ ಅವಳನ್ನು ತಟ್ಟಿ ಅಲುಗಿಸಿ ಎಬ್ಬಿಸಲು ಮುಂದಾಗುತ್ತಾನೆ. ಇದು ಈ ಕವಿತೆಯಲ್ಲಿನ ಅಥವಾ ಯಾವುದೇ ಕವಿತೆಯಲ್ಲಿನ ಅತ್ಯಂತ ದಾರುಣಕ್ಷಣ.

'ತಟ್ಟಿದರು ಮಿಸುಕಿಲ್ಲ ಹಲುಬಿದರು ಉಲುವಿಲ್ಲ
ತುಟಿಯಲ್ಲಿ ತಟುಕು ಅಲುಗಿಲ್ಲ । ಏಳವ್ವಾ
ಮಲಗಿರುವ ತಾಯಿ ಪೃಥಿವೀ ॥'

ಆಗ ಮಗನಿಗೆ ಗೊತ್ತಾಗುತ್ತದೆ ಇದು ಮೃತ್ಯುವಲ್ಲ. ಮುಸುಕು ಮುಸುಕನ್ನು ಮಧುರಚೆನ್ನರು ಇನ್ನೊಂದು ಕವಿತೆಯಲ್ಲಿ "ನೀನು ನಿನ್ನ ತೋಟದಲ್ಲಿ ನಾನು ನನ್ನ ಕೊಂಪಿಯಲ್ಲಿ" ಎಂದು ಚಿತ್ರಿಸಿ ಅವರ ಕಾವ್ಯ ಭಾಷೆಯಲ್ಲಿ ಈ ಕದಕ್ಕೆ ಜೀವಶಕ್ತಿ ಮತ್ತು ದೇವಶಕ್ತಿಗಳ ನಡುವಿನ ದೂರ ಎಂಬ ಅರ್ಥವನ್ನು ನೀಡುತ್ತಾರೆ. ಈ ಕವಿತೆಯಲ್ಲಿ ಅದೇ ಮಲಗಿರುವ ತಾಯಿಯ 'ಮಾರೀಯ ಮುಸುಕು' ತನ್ನ ಜೊತೆ ಆಟವಾಡಲು ತಾಯಿ ಈ ಮುಸುಕು ಹಾಕಿಕೊಂಡಿದ್ದಾಳೆ, 'ನಿನಗಾಟ ನನಗ ಎದೆಗಿಚ್ಚ' ಆದರೂ ಅವಳಲ್ಲಿ ಅಂದು ಆಗಿಸಬಲ್ಲ, ನೆನೆದು ನಾಟಿಸಬಲ್ಲ ಕರ್ತೃತ್ವ ಶಕ್ತಿ ಕದ್ದು ಕೂತಿದೆ. ಇಷ್ಟು ಹೊತ್ತಿಗೆ ಇದು ಸಾವಲ್ಲ, ನಿದ್ದೆ ಎಂದು ಖಾತ್ರಿ ಮಾಡಿಕೊಂಡ ಮಗ ಬೇಡುತ್ತಾನೆ.

'ಹಾಲು ನಿದ್ದಿ ತೊರೆಯೆ ಜೇನು ನಿದ್ದಿ ತೊರೆಯೆ
ಸಕ್ಕರೆಯು ನಿದ್ದಿ ತೊರೆದೇಳು । ಏಳವ್ವಾ
ಮಲಗಿರುವ ತಾಯಿ ಪೃಥಿವೀ ॥'

ಆದರೀಗ ಆ ತಾಯಿ ಸವಿಗನಸನ್ನು ಕಾಣುತ್ತಾ ಮಗನ ಮೊರೆಯನ್ನು ಕೇಳಿಸಿಕೊಳ್ಳದ ಸ್ಥಿತಿಯಲ್ಲಿದ್ದಾಳೆ.

'ಕನ್ನಸೀನ ಕನ್ನಕ್ಕಿ ಮನಸೀನ ಮಾಯಮ್ಮ
ಎಚ್ಚತ್ತು ತಾಯಿ ಎಂನೆಬಿಚ್ಚ । ಏಳವ್ವಾ
ಮಲಗಿರುವ ತಾಯಿ ಪೃಥಿವೀ ॥"

ನಿದ್ದೆ ಕನಸುಗಳನ್ನು ತೊರೆದು ಅವಳು ಏಳುವ ತನಕ ಅವನ ಜೀವ ತಣಿಯುವುದಿಲ್ಲ. 'ಏಳದೆ ಜೀವ ಕೇಳದ' ಕೊನೆಗೆ ತಾಯಿ ಎಲ್ಲಿ ತಾನು ಸತ್ತಿದ್ದೇನೆಂಬ ಭ್ರಮೆಯಲ್ಲಿದ್ದಾಳೋ ಎಂಬ ಸಂಶಯ ಬಂದು ಅವಳ ಮೈಯಲ್ಲಿ ಉಸಿರು, ಕಾವು ಇನ್ನೂ ಇದೆಯೆಂದು ಮುಟ್ಟಿನೋಡಿ ತನಗೇ ಅವಳಿಗೆ ಇಬ್ಬರಿಗೂ ಆಶ್ವಾಸನೆ ನೀಡುತ್ತಾನೆ.

'ಈ ಗಾಳಿ ನಿನ್ನುಸಿರ ಈ ಬೆಂಕಿ ಮೈಗಾವ
ಮುದುಡೀದ ಮೊಗ್ಗಿ ಅರಳೀಸ । ಏಳವ್ವಾ
ಮಲಗಿರುವ ತಾಯಿ ಪೃಥಿವೀ ॥"

ಮುದುಡೀದ ಮೊಗ್ಗಿ ಅರಳುವುದರಲ್ಲಿ ತಾಯಿ ಎವೆಬಿಚ್ಚುವ, ಸೂರ್ಯೋದಯವಾಗುವ ಹಾರೈಕೆ ಇದೆ. ತಾಯಿ ಪೃಥಿವೀಯನ್ನು 'ದೇವತಾ ಪೃಥಿವೀ'ಯನ್ನಾಗಿಸುವ ಹೆಬ್ಬಯಕೆ ಇದೆ.

ಈ ಕವಿತೆಯಲ್ಲಿ ಅಸಹಾಯಕನಾದ ಮಗ ತಾಯಿಯನ್ನು ಮೊದಲು ದೂರದಿಂದ ಮಾತಾಡಿಸಿ ಆಮೇಲೆ ಹತ್ತಿರ ಹೋಗಿ, ಮುಟ್ಟಿ, ತಟ್ಟಿ ಎಬ್ಬಿಸಲು ಪ್ರಯತ್ನಿಸುವ ವಿವಿಧ ಆಂಗಿಕ ಕ್ರಿಯೆಗಳ (Gestures) ಮತ್ತು ಬಯಕೆ, ಭಯಗಳ ನಡುವೆ ತೂಗಯ್ಯಾಲೆಯಾದ ಮಗನ ಮಾನಸಿಕ ವ್ಯಾಪಾರಗಳು ಸೂಚನೆಗಳು ನಾಟಕೀಯ ಸನ್ನಿವೇಶವನ್ನು ಹೆಚ್ಚು ಗಾಢವಾಗಿಸುತ್ತವೆ.

ಕೇವಲ ಎರಡು ಪಾತ್ರಗಳ ಮೂಲಕ ಜೀವ-ಜಗತ್ತುಗಳ ಪುನಃ ಸೃಷ್ಟಿಯನ್ನು ಸೂಚಿಸುವ ಈ ಕವಿತೆಯ ದುರಂತಮಯ ಆನಂದದಲ್ಲಿ (Tragic Ecstasy) ಪುರಾಣ

ಸೃಷ್ಟಿಯ ಸರಳತೆಯುಳ್ಳ (Mythopoeic Simplicity) ಪ್ರತಿಮೆಗಳ ನಿರ್ವಹಣೆಯಲ್ಲಿ ಕವಿ ತೋರಿರುವ ಇತಿಮಿತಿಯ ಎಚ್ಚರ ಅಚ್ಚರಿಗೊಳಿಸುವಂತಾದ್ದು. ಅನುಭವದ ವೈವಿಧ್ಯಗಳನ್ನು ಅವುಗಳ ಮೂಲಭೂತ ಆಕಾರಗಳಿಗೆ ಇಳಿಸಿ ಕತ್ತಲು-ಬೆಳಕು, ನಿದ್ದೆ ಎಚ್ಚರ ನೊರೆಹಾಲು-ಮುಸದ್ದಾಲು ಕೊರಡು ಕೊನರುಗಳ ಮೂಲಕ ವ್ಯಕ್ತ ಮಾಡುವ ಕಾವ್ಯ ಪರಿಣತಿ ಗಮನ ಸೆಳೆಯುತ್ತದೆ. ಈ ಕವಿತೆಯಲ್ಲಿ ಪ್ರಧಾನವಾಗುವ ಬಣ್ಣಗಳು ಕಪ್ಪು, ಬಿಳುಪು ಮಾತ್ರ. ಅದು ಕತ್ತಲು-ಬೆಳಕುಗಳ ವೈಷಮ್ಯವನ್ನೇ ಪ್ರಧಾನವಾಗಿ ಮಾಡಿಕೊಂಡ ಚೀಣಾ ಮತ್ತು ಜಪಾನಿನ ಚಿತ್ರಕಾರರ ಮತ್ತು ಲಿಯೊನಾರ್ಡೋನ ತಂತ್ರವನ್ನು ನೆನಪಿಸುತ್ತದೆ. ವರ್ಣರಂಜಿತ ವೈವಿಧ್ಯಗಳ ಓಕುಳಿಯಾಡುವ ಬೇಂದ್ರೆಯವರ ಕಾವ್ಯ ಕೌಶಲಕ್ಕೂ, ಮಧುರಚೆನ್ನರ ಮಿತಬಳಕೆಯ ಕಾವ್ಯತಂತ್ರಕ್ಕೂ ಇರುವ ವ್ಯತ್ಯಾಸವನ್ನು ಕಂಡುಕೊಳ್ಳಲು ಈ ಕವಿತೆಯನ್ನು ಹೆಚ್ಚೂ ಕಡಿಮೆ ಇಂಥದೇ ವಸ್ತುವನ್ನುಳ್ಳ ಬೇಂದ್ರೆಯವರ 'ಮೊದಲಗಿತ್ತಿ' 'ಮನುವಿನ ಮಕ್ಕಳು' 'ಜಿಗಿಗಂಗಳ ಚಲುವೆ' ಕವಿತೆಗಳ ಜೊತೆಗಿಟ್ಟು ನೋಡಬೇಕು.

ಈ ಕವಿತೆಯನ್ನು ಪೃಥ್ವಿಯ ಆರಾಧನೆ ಎಂದು ಕರೆಯಲಾಗಿದೆ. ಆದರೆ ಮಧುರಚೆನ್ನರ 'ಕವಿತೆಗಳಲ್ಲಿ ಪೃಥ್ವಿಯ ಆಸ್ವಾದವೆ ಇದೆಯೆ ಹೊರತು ಆರಾಧನೆ ಎಲ್ಲೂ ಕಂಡುಬರುವುದಿಲ್ಲ. ಈ ವಿಶ್ಲೇಷಣೆಯ ಪ್ರಕಾರ ಈ ಕವಿತೆ ಪ್ರಕೃತಿಯಲ್ಲಿ ಅಡಗಿರುವ ಮಾನವೀಯ ಮತ್ತು ದೈವಿಕ ಶಕ್ತಿಗಳನ್ನು ಪ್ರಕಟಗೊಳಿಸುವ ಒಂದು ಉತ್ಕಟ ಪ್ರಾರ್ಥನೆಯಾಗಿದೆ.

ತ್ರಿಪದಿಯನ್ನು ಮಧುರಚೆನ್ನರು 'ಏಳಪ್ಪಾ ಮಲಗಿರುವ ತಾಯಿ ಪೃಥಿವೀ !' ಪದಪುಂಜದ ಪುನರುಕ್ತಿಯಿಂದ ಮಾರ್ಪಡಿಸಿಕೊಂಡು ಕವಿತೆಗೆ ಪ್ರಾರ್ಥನೆಯ ಉತ್ಕಟತೆಯನ್ನೂ, ಮಾಂತ್ರಿಕತೆಯ ಆಕರ್ಷಕ ಶಕ್ತಿಯನ್ನೂ ತಂದುಕೊಟ್ಟಿದ್ದಾರೆ.

ಅದಕ್ಕಿಂತಲೂ ಮಿಗಿಲಾಗಿ ಗಮನಿಸಬೇಕಾದುದು ಈ ಕವಿತೆ ಪ್ರಕಟಿಸುವುದು ಒಂದು ಸಾಮುಷ್ಠಿಕ ಆಶಯವನ್ನು. 'ಪೃಥ್ವಿ' ಮತ್ತು 'ಮಲಗಿರುವ ತಾಯಿ' ಶಬ್ದಗಳ ಯೌಗಿಕ ಅರ್ಥ ಛಾಯೆಯನ್ನು ಈಗಾಗಲೆ ಗಮನಿಸಿದ್ದೇವೆ. ಯೋಗಿಯೊಬ್ಬನು ಜಾಗೃತಗೊಳಿಸುವುದು ತನ್ನ ದೇಹದಲ್ಲಿನ ಪೃಥ್ವಿ-ತತ್ವವನ್ನು ಆದರೆ ಇಲ್ಲಿ ತಾಯಿ ಪೃಥಿವೀ ಹೊರಗಿದ್ದಾಳೆ. ಅವಳ ಜೈವಿಕ ಪ್ರೇಮಕ್ಕೆ ಬದಲಾಗಿ ಮಗನಿಗೆ ಅವಳ ಮಾನಸಿಕ ಪ್ರೇಮ ಬೇಕಾಗಿದೆ. ಮುದ್ದಾಡಿ ಮೈದಡವಿ ಮುದ್ದು ನೀಡುವುದು ಹಾಲುಣಿಸುವ ಜೈವಿಕ ಕ್ರಿಯೆಗಿಂತ ಭಿನ್ನವಾದ ಪ್ರೀತಿ. ಕಂಡೂ ಕಾಣದ ಹಾಗೆ ಬಳಸಿರುವ

ಯೌಗಿಕ ಸಂಕೇತಗಳಿಗೆ ಕವಿತೆಯಲ್ಲಿನ ಘಟನೆಯಿಂದ ವೈಯಕ್ತಿಕ ಪಾತಳಿಯ ಅರ್ಥಗಳು ಇಲ್ಲದಾಗಿ ಒಂದು ಸಾಮುಷ್ಟಿಕ ಅರ್ಥ ಪ್ರಾಪ್ತವಾಗುತ್ತದೆ. ಪೃಥ್ವಿ ಶಬ್ದದ ಸಾಂಕೇತಿಕ ಅರ್ಥದ ವಿಸ್ತರಣೆಯಿಂದ ಕವಿ ಇಡೀ ಜಗತ್ತನ್ನು ಇನ್ನೂ ಉನ್ನತ ಮಟ್ಟದ ಪ್ರೀತಿಯ ಮೇಲೆ ನಿಂತ ಬದುಕಿಗೆ ಪ್ರೇರೇಪಿಸುತ್ತಿದ್ದಾನೆ. ಆದ್ದರಿಂದಲೇ ಮಧುರಚೆನ್ನರು ಅನುಭಾವೀ ಕವಿಗಳೆಂಬ ಮಾತನ್ನು ನಮ್ಮ ಮನಸ್ಸಿನಿಂದ ಕಿತ್ತು ಹಾಕಿದರೂ 'ದೇವತಾ ಪೃಥಿವೀ' ತನ್ನ ಮಾನವೀಯ ತುಡಿತಗಳಿಂದಲೇ ಒಂದು ಅನರ್ಘ್ಯವಾದ ಕವಿತೆಯಾಗಿದೆ. ಈ ಕವಿತೆಯ ರಚನೆಯಾದದ್ದು ಸ್ವಾತಂತ್ರ ಪೂರ್ವ ಭಾರತದಲ್ಲಿ ಎಂಬುದನ್ನು ಗಮನಿಸಿದಾಗ ಈ ಅರ್ಥಗಳು ಇನ್ನೂ ಸ್ಪಷ್ಟವಾಗುತ್ತವೆ.

ಮಧುರಚೆನ್ನರ 'ನನ್ನನಲ್ಲ' ಕವನದ ಪೂರ್ವ ಸೂಚನೆ ಅವರ 'ಮಧುರಗೀತ'ದಲ್ಲಿದೆ, ಆದರೆ ಕವಿತೆಯ ಬಹುಪಾಲು ಪ್ರೇಮವನ್ನು ಕುರಿತ ತಾತ್ವಿಕ ವಿಚಾರಗಳ ಚರ್ಚೆಯನ್ನು ಪದ್ಯರೂಪದಲ್ಲಿ ನೀಡುವುದಕ್ಕೆ ಮೀಸಲಾಗಿದೆ. ಆ ಕವನದ ಕೊನೆಯ ಭಾಗದ ಚಿತ್ರಕ ಶಕ್ತಿ ಮಾತ್ರ ರಮ್ಯವಾದುದು.

> "ಮನದೊಳಗೆ ನಿನ್ನ ನೆನಪಾದರಾಕ್ಷಣದೊಳಗೆ
> ಮುಗಿಲೊಳಗೆ ಎಳೆಚಂದ್ರ ಮೂಡಿದಂತೆ
> ಬನದೊಳಗೆ ಕೇರಳದ ಕೋಗಿಲೆಯ ದನಿಯಂತೆ
> ಗರಿಬಿಚ್ಚಿ ಗಂಡು ನವಿಲಾಡಿದಂತೆ"

ಇನ್ನೊಂದು ವಿಶೇಷವೆಂದರೆ ದೇವ ಮಾನವ ಪ್ರೇಮವನ್ನು ಸೂಚಿಸಲು ಮಾನವ ಪ್ರೇಮವನ್ನು ಬಳಸಿಕೊಳ್ಳುವ ಮಧುರಚೆನ್ನರು ಈ ಕವಿತೆಯಲ್ಲಿ ನೇರವಾಗಿ ಮಾನವ ಸ್ನೇಹ ಸಂಬಂಧವನ್ನೇ ವಸ್ತುವನ್ನಾಗಿ ಇರಿಸಿಕೊಂಡರು. ಆದರೂ ಪ್ರಕೃತಿಯಲ್ಲಿ ದೇವತ್ವವನ್ನು ಕಾಣದ ಅವರು ಮಾನವ ಸಂಬಂಧದ ಮಾಧುರ್ಯವನ್ನು ಒಪ್ಪಿಯೂ ತಮ್ಮ ಗುರಿಯನ್ನೇ ಅದಕ್ಕಿಂತಲೂ ಮುಖ್ಯವನ್ನಾಗಿ ತೆಗೆದುಕೊಳ್ಳುತ್ತಾರೆ.

> "ಹೀಗೆ ನಾ ಬಾಡಿರಲು ನಿನ್ನ ಗಾಳಿಯು ಬಂತು
> ಸುಳಿಗಾಳಿಗಾಗನಾ ಚೇತರಿಸಿದೆ
> ಕೂಗಿ ಮಳೆ ಬೇಡಿದರೆ ಗಾಳಿಯಾದರೂ ಬಂತು
> ಇಷ್ಟಾರೆ ನಾ ಧನ್ಯ ಧನ್ಯನೆಂದೆ"

'ಪ್ರೀತಿಯಂಥಾ ವಸ್ತು ಭುವನದಲ್ಲಿ ಕಾಣೆ' ಎಂದ ಮಧುರಚೆನ್ನರು ಗೆಳೆಯರನ್ನು ಕುರಿತು

ಆಡಿದ ಮಾತುಗಳಿವು. ಸ್ನೇಹ, ದಾಂಪತ್ಯ ಎಲ್ಲವನ್ನೂ ತಮ್ಮ ಗುರಿಗಾಗಿ ಬಳಸಿಕೊಳ್ಳುತ್ತಾರೆಯೆ ಹೊರತು ಅವುಗಳನ್ನೇ ಗುರಿಯೆಂದು ಭಾವಿಸುವುದಿಲ್ಲ.

"ಇಲ್ಲಿ ಮಾತಿನ್ನೊಂದು ಹೇಳಬೇಕೆಂದರೆ
ಲ್ಲೆಲ್ಲಿಯೂ ಈ ಜೀವ ಕೇಳದಲ್ಲಾ
ನಲ್ಲೆ ವಾಸಂತಿ ತಾ ಜೀವದಾ ಜೊತೆಗಾರ್ತಿ
ಮೂವರೂ ಅಗಲದಾ ಪಥಿಕರಿಲ್ಲ"

"ಬೆಳದಿಂಗಳಿರುಳಲ್ಲಿ ನಟ್ಟ ನಡುರಾತ್ರಿಯಲಿ
ಸಪ್ಪಳಿಲ್ಲದ ಶಾಂತ ಸೃಷ್ಟಿಯಲ್ಲಿ
ಬಿಳಿಯ ಟೀವಕ್ಕಿ ಮತಾಡುತ್ತ ಹೊರಟಂತೆ
ನಾವಾತ್ಮ ಯಾತ್ರಿಕರನಂತದಲ್ಲಿ"

ಮಧುರಚೆನ್ನರ ಆತ್ಮಯಾತ್ರೆಯ ಪೂರ್ಣ ಕಥನ 'ನನ್ನ ನಲ್ಲ' ಕವನದಲ್ಲಿ ಕಾಣಸಿಗುತ್ತದೆ. ಕನ್ಯೆಯೊಬ್ಬಳು ಕಂಡರಿಯದ ಪ್ರಿಯತಮನನ್ನು ಅರಸಿಕೊಂಡು ಹೋಗುವ ಕಥಾಭಿತ್ತಿಯನ್ನು ಹೊಂದಿರುವ ಈ ಕವಿತೆಯಲ್ಲಿ ಅವಳ ಹುಡುಕಾಟದ ವಿವಿಧ ಭಾವಕ್ಷಣಗಳು ಮತ್ತು ಮೂರ್ತಾಮೂರ್ತ ಅನುಭವಗಳು ಮೂಡಿಬರುವ ರೀತಿ ಅತ್ಯಂತ ಕಲಾತ್ಮಕವಾಗಿದೆ. ಪರಿಸರದ ಪ್ರತಿಮೆಗಳು ಸಲಿಲಗತಿಯ ಲಯದಲ್ಲಿ ಸ್ಫುಟವಾಗಿ ರೂಪುತಾಳುತ್ತದೆ.

"ನಿಲ್ಲು ನಿಲಲಿ ನವಿಲೆ ನಿನ್ನ ಕಣ್ಣುಗಳೇಸು
ಕಣ್ಣ ಬಣ್ಣಗಳೇಸು ಎಣಿಸಲಾರೆ।
ಎಲ್ಲ ರೂಪಿಸಿದವನು ಎಲ್ಲಿ ತಾನಡಗಿದನೆ
ತಾಳಲಾರದು ಜೀವ ಹೇಳಬಾರೇ"

ಬೆಳದಿಂಗಳಿರುಳಲ್ಲಿ ನಟ್ಟ ನಡು ರಾತ್ರಿಯಲಿ
ಸಪ್ಪಳಿಲ್ಲದ ಗಪ್ಪುಗಾರಿನಲ್ಲಿ।
ಕೊಳದ ಬಾಂದಳದಲ್ಲಿ ಟಿಂವ್‌ಗುಡುವ ಟೀಂವಕ್ಕಿ
ನೀನಾರೆ ಬಲ್ಲೆಯಾ ನಲ್ಲನೆಲ್ಲಿ"

ಒಳಜಗತ್ತಿನ ಕಾಳಜಿಗಳನ್ನು ಹೇಳುವ ಈ ಕವದಲ್ಲಿ ಹಲಸಗಿಯ ಸುತ್ತಲ ವಿವರ

ಗಳು ಇಷ್ಟು ಸ್ಪಷ್ಟವಾಗಿ ಮೂಡಿರುವುದನ್ನು ನೋಡಿದಾಗ ಈ ಅನುಭಾವೀಕರಿಗೆ ಹೊರಜಗತ್ತಿನ ಮೇಲಿನ ಹಿಡಿತ ಎಷ್ಟು ಬಿಗಿಯಾಗಿದೆ ಎಂಬುದು ಗೊತ್ತಾಗುತ್ತದೆ ಐಕ್ಯಾನುಭವವನ್ನು ವಿವರಿಸುವ ನಾಲ್ಕನೆ ಎಸಳಿನಲ್ಲಂತೂ ಕವಿ ಶಬ್ದಗಳ ಮೂಲಕ ನಿಶ್ಶಬ್ದಗಳ ಲೋಕಕ್ಕೆ, ಇಂದ್ರಿಯಗಳ ಮೂಲಕ, ಅತೀಂದ್ರಿಯ ಜಗತ್ತಿಗೆ, ದಾಳಿ ಇಕ್ಕುವ ಕಾವ್ಯ ಪ್ರತಿಭೆ ರೂಪದಲ್ಲಿ ಬಯಲನ್ನು ಕಾಣಿಸುವ ಪ್ರಭುದೇವರ ಉಕ್ತಿಯ ಬೆಡಗನ್ನು ನೆನಪಿಸುತ್ತದೆ.

ಈ ಕವಿತೆಯ ಬಿಡಿ ಭಾಗಗಳ ದೀರ್ಘ ವಿಶ್ಲೇಷಣೆಗೆ ಕೈಹಾಕದೆ ಇಷ್ಟನ್ನು ಹೇಳಬಹುವುದು. ಅನುಭಾವಿ ಕಾವ್ಯ ಪರಂಪರೆಗೆ ಈ ಕವಿತೆ ಹಿಂದೆಂದಿಗಿಂತಲೂ ಹೆಚ್ಚಿನ ಸರಳತೆ ಮತ್ತು ಸ್ಪಷ್ಟತೆಯನ್ನು ತಂದುಕೊಟ್ಟಿದೆ ನಮ್ಮ ಪರಂಪರೆಯಲ್ಲಿ ಈ ಹಿಂದೆ ಮತಸಂಘಗಳ ಸಾಂಕೇತಿಕತೆ ಮತ್ತು ಪರಿಕಲ್ಪನೆಗಳ ಮೂಲಕ ನೈದಾಳುತ್ತಿದ್ದ ಅನುಭಾವೀ ಕಾವ್ಯದ ಅಭಿವ್ಯಕ್ತಿಯನ್ನು ಮಾನವ ಲೋಕದ ಇಂದ್ರಿಯ ಗ್ರಾಹ್ಯ ಮೂಲಭೂತ ವಿವರಗಳ ಮೂಲಕವೇ ಯಶಸ್ವಿಯಾಗಿ ಅಭಿವ್ಯಕ್ತಿಸಿ ಅನುಭಾವೀ ಕಾವ್ಯದ ಭಾಷೆಯನ್ನು ಸ್ವಚ್ಛಗೊಳಿಸಿದೆ. ಎಲ್ಲಾ ಮತ ಧರ್ಮ ಸಂಕೇತಗಳಿಂದ ಅನುಭಾವವನ್ನು ಮುಕ್ತವನ್ನಾಗಿಸಿದೆ. ನಮ್ಮ ಧರ್ಮ ನಿರಪೇಕ್ಷ ಯುಗದಲ್ಲಿ ಇದೊಂದು ದೊಡ್ಡ ಸಾಧನೆ. ಅಷ್ಟೇ ಅಲ್ಲದೆ ಈ ಮಹಾಕಾವ್ಯದಲ್ಲಿ ಜಾನಪದದ ಸಹಜತೆಯೂ ಭಕ್ತಿಕಾವ್ಯದ ಉತ್ಕಟತೆಯೂ, ಮಹಾಕಾವ್ಯ ಪರಂಪರೆಯ ಸಂಯಮವೂ ಮುಪ್ಪುರಿಗೊಂಡಿವೆ. 'ನನ್ನ ನಲ್ಲ'ದ ಭಾಷೆ ಈ ಹಿಂದೆ ಚರ್ಚಿಸಿದ ಕವಿತೆಗಳ ಭಾಷೆಗಿಂತಾ ಭಿನ್ನವಾಗಿದೆ. ಆ ಕವಿತೆಗಳು ಉಪಭಾಷೆಯನ್ನು ಬಳಸಿಕೊಂಡರೆ ಈ ಕವಿತೆ ಜಾನಪದ ಸೊಗಡಿನ ಶಿಷ್ಟ ಭಾಷೆಯನ್ನು ಆಶ್ರಯಿಸಿದೆ. ಮಧುರಚೆನ್ನರ ಕಾವ್ಯ ಪ್ರತಿಭೆ ಈ ಕವಿತೆಯಲ್ಲಿ ತನ್ನ ಶಿಖರವನ್ನು ಮುಟ್ಟಿದೆ. ಆದ್ದರಿಂದಲೇ ಇರಬಹುದು. ಆ ನಂತರ ಅವರು ಕಾವ್ಯ ರಚನೆಯಲ್ಲಿ ಯಾವುದೇ ರೀತಿಯ ಬೆಳವಣಿಗೆಯನ್ನೂ ತೋರಲಿಲ್ಲ.

"ಬುದ್ಧಿ ಭಾವದ ಸೀಮೆ ಇಲ್ಲಿಗಾಯಿತ್ತಯ್ಯ
ಮುಂದೆ ದೇವನ ದಿವ್ಯ ರಾಜ್ಯವಯ್ಯಾ
ಇಷ್ಟಷ್ಟು ಹಸ್ಮೆಲ್ಲ ಹಣ್ಣು ಹಣ್ಣಾಗುತಲೆ
ಕೈಮುಗಿದು ಶರಣು ಶರಣೆಂಬುದಯ್ಯಾ"

ಅಲ್ಲಿಂದಾಚೆಗೆ ಮಧುರಚೆನ್ನರು ಅದೇ ಮಟ್ಟದ ಕಾವ್ಯರಚನೆ ಮಾಡಲಿಲ್ಲವೆನ್ನುವುದಕ್ಕೆ ಕಾರಣಗಳನ್ನು ಅವರ ಜೀವನಚರಿತ್ರೆಯಲ್ಲಿ ಕಂಡುಕೊಳ್ಳುವುದು ಸುಲಭವಾದರೂ

ಒಂದು ಪ್ರಬಲವಾದ ಕಾರಣ ಅವರ ಕವಿತೆಗಳಲ್ಲೇ ಕಾಣಸಿಗುತ್ತದೆ. ಅವರ ತೂರ್ಯಾವಸ್ಥೆ 'ನನ್ನ ನಲ್ಲ'ದಲ್ಲಿ ಹೀಗೆ ಮೂಡಿದೆ :

ತಂದೆ ನೀ ಕಣ್ತೆರೆದಂದಿಗರುಣೋದಯವು
ಮುಂದೆ ಸೂರ್ಯೋದಯದ ಚಿಂತೆಯಿಲ್ಲ

ಆದರೆ ಕವಿ ಅಥವಾ ಯೋಗಿ ಈ ಸ್ಥಿತಿಗೆ ತಲುಪಿದಾಗ ಜಗತ್ತಿನಲ್ಲಿರುವ ಕ್ಷುದ್ರತೆ ಮಾಯವಾಗುವುದಿಲ್ಲ. ತಮ್ಮ ಒಂದು ಕವಿತೆಯಲ್ಲಿ ಮಧುರಚೆನ್ನರು ಹೇಳುತ್ತಾರೆ.

ಅವರಿವರಾ ಗಲಿಬಿಲಿಯದು ಜೀವಾ
ಅವರಿವರಲಿ ನೀನೇಕೋ ಜೀವಾ !

ಅವರ ಅಂತರಂಗದ ಹೋರಾಟದಲ್ಲಿ ಹೊರಜಗತ್ತಿನ ಕ್ಷುದ್ರತೆಗಳ ಜೊತೆಗಿನ ಹೋರಾಟಕ್ಕೆ ಜಾಗ ಅವರ ಯಾವ ಕವಿತೆಯಲ್ಲೂ ಸಿಕ್ಕಿಲ್ಲ ಅವರು ಎಲ್ಲ ಸಂಬಂಧಗಳಿಗೂ ಅರ್ಥ ನೀಡುವುದು ದೇವ ಮಾನವರ ಸಂಬಂಧದ ಬೆಳಕಿನಲ್ಲಿ ಮಾತ್ರ. ಕೇಡುಗಳನ್ನು ಕಂಡು ಕೆರಳದ ಪ್ರಶಾಂತ ಸ್ಥಿತಿ ಅವರ ಕಾವ್ಯದಲ್ಲಿ ಸರ್ವವ್ಯಾಪಿಯಾಗಿದೆ. 'ಸಲಿಗೆಯ ಸಲ್ಲಾಪ'ದಂಥ ಕವಿತೆಯಲ್ಲಿ 'ಧರ್ಮಗೇಡಿಗಳು ಜಗದಲಿ' ತುಂಬಿದ್ದಕ್ಕೆ 'ಧರ್ಮದ ತಂದೆ'ಯೇ ಕಾರಣವೆನ್ನುತ್ತಾರೆ. ಅವರ ಕವಿತೆಗಳಲ್ಲಿ ಕಾಣುವ ಮಾನವಪ್ರೇಮ, ಪ್ರಕೃತಿ ಪ್ರೇಮ ಈ ಎಲ್ಲವೂ ಅವರನ್ನು ದೇವನ ಬಳಿಗೊಯ್ಯುವ ಸಾಧನಗಳು. ಅವರ ಮಧುರಗೀತೆಗಳಲ್ಲಿ ಕಟು ಮಧುರ ಸಂಬಂಧಗಳಿಲ್ಲ; ಎಲ್ಲವೂ ಮಧುರ ಸಂಬಂಧಗಳೇ 'ಆತ್ಮ ಯಾತ್ರೆಯ ಎಲ್ಲ ಹಂತಗಳನ್ನೂ ಅಷ್ಟೊಂದು ಕಲಾತ್ಮಕವಾಗಿ ಕಾವ್ಯವನ್ನಾಗಿಸಿದ ಮೇಲೆ ಅವರ ಕಾವ್ಯಕ್ಕೆ ಪೋಷಕವಾದ ಆಹಾರ ಎಲ್ಲೂ ಸಿಕ್ಕಲಿಲ್ಲ.

ಈ ದೃಷ್ಟಿಯಿಂದ ಮಧುರಚೆನ್ನರು ನಮ್ಮ ಅನುಭಾವೀ ಕಾವ್ಯದ ಮುಖ್ಯ ಪ್ರವಾಹದಿಂದ ಭಿನ್ನರಾಗಿರುವುದು ತುರೀಯಸ್ಥಿತಿಯನ್ನು ತಲುಪುವ ಮೊದಲು ಮತ್ತು ನಂತರ ನಮ್ಮ ಮಹಾನ್ ಸಂತರೆಲ್ಲರೂ ಆತ್ಮೋದ್ಧಾರ ಮತ್ತು ಲೋಕೋದ್ಧಾರ ಎರಡನ್ನೂ ಕೈಗೊಂಡರು. ನಮ್ಮ ಯುಗದಲ್ಲಿ ಈ ಪರಂಪರೆಯ ಮುಂದುವರಿಕೆಯಾದ ಮಹಾತ್ಮ ಗಾಂಧಿಯವರು ಈ ಎರಡನ್ನೂ ಒಂದಾಗಿಸಿಕೊಂಡರು. ಆದರೆ ಮಧುರಚೆನ್ನರು ಪ್ರಭಾವಿತರಾಗಿದ್ದು ಮಹಾತ್ಮಗಾಂಧಿಯವರಿಂದ ಅಲ್ಲ ಮಹರ್ಷಿ ಅರವಿಂದರಿಂದ. ಅರವಿಂದರು ಜನರಾಜ ರಾಷ್ಟ್ರಗಳನ್ನು ಅಹಂಕಾರದ ಬೃಹದ್ರೂಪವೆಂದು ತಮ್ಮ ಶಿಷ್ಯ

ನೊಬ್ಬನಿಗೆ ಬರೆದಿದ್ದಾರೆ. ಅವರು ಬಸವಣ್ಣನಂತೆ ಗಣಸಹಿತ ಕೈಲಾಸಕ್ಕೆ ಹೋದರೆಂಬ ಬೇಂದ್ರೆಯವರ ಮಾತು ಅವರ ಕಾವ್ಯದ ಮಟ್ಟಿಗಂತೂ ನಿಜವಲ್ಲ.

ಕನ್ನಡ ಪರಂಪರೆಯಲ್ಲೇ ಅತ್ಯಂತ ವಿಶಿಷ್ಟವಾದ ಕವಿಗಳಲ್ಲೊಬ್ಬರಾದ ಮಧುರಚೆನ್ನರ ಮುಖ್ಯ ಆಶಯವಾದ ಜೀವಶಕ್ತಿಯ ಏರಿಕೆ ಅವರ ನಂತರದ ಕಾವ್ಯದಲ್ಲಿ ಮತ್ತೆ ಮತ್ತೆ ಮೈದಾಳಿರುವುದು ನಮ್ಮ ಪರಂಪರೆಗನುಸಾರವಾಗಿ ವೈಯಕ್ತಿಕ ಮತ್ತು ಸಾಮಾಜಿಕ ನಿಷ್ಠೆಗಳ ಹಿನ್ನೆಲೆಯಲ್ಲೇ.
ಅವರೇ ಹೇಳಿದ ಹಾಗೆ ಕಾವ್ಯ ಅನಂತವಾದುದು:

ಅನ್ನಬಹುದೇನಯ್ಯ ಹಾಡು ಮುಗಿದೀತೆಂದು
ಜನ್ಮದಾಕಾಶದಲ್ಲಿದರ ಬೇರು
ಕನ್ನಡಿಯೊಳಗೆಷ್ಟು ಕಂಡೀತು ಕನಕಾಚಲವು
ಕೊಡಕೆ ಹಿಡಿದೀತೆಷ್ಟು ಕಡಲ ನೀರು ।

ನನ್ನ ನೆನಪುಗಳು *

— ಆನಂದಕಂದ

ನನ್ನ ತಾಯಿ :

ನನ್ನ ಜೀವನವನ್ನು ಒಂದು ಬಗೆಯ ಮಾನವತೆಯ ಪ್ರಜ್ಞೆಯ ಬೆಳಕಿನಲ್ಲಿ ಮೊದಲಿನಿಂದಲೂ ನಡೆಯಿಸಿಕೊಂಡು ಬಂದವಳು ನಮ್ಮ ತಾಯಿ ರಾಧಾಬಾಯಿ. ಅಂತಹ ತಾಯಿ ನನಗೆ ದೊರೆಯದೇ ಹೋಗಿದ್ದರೆ ನಾನು ನನ್ನ ಇಂದಿನ ಜೀವನದ ರೀತಿಯನ್ನು ಕಾಣದೇ ಇರಬಹುದಾಗಿತ್ತು. ಅವಳ ಜೀವನದ ಪ್ರಭೆಯ ಬೆಳಕಿನಲ್ಲಿಯೇ ನಾನು ನನ್ನ ಇಂದಿನ ಜೀವನವನ್ನು ಸಾಗಿಸುತ್ತ ಬಂದಿದ್ದೇನೆ.

ಕಂಕಣವಾಡಿ ಒಂದು ದೇಸಗತಿಯ ಊರು-ಕೊಲ್ಹಾಪುರ ಸಂಸ್ಥಾನಕ್ಕೆ ಸೇರಿದ್ದು. ದೇಸಾಯರಿಗೆ ಮುತಾಲಿಕ ದೇಸಾಯರಾಗಿದ್ದ (ಮುಖ್ಯ ಕಾರ್ಯಭಾರಿಗಳು) ಮನೆತನವೇ ನಮ್ಮ ತಾಯಿಯ ತವರುಮನೆ. ಕೊಲ್ಹಾಪುರ ಮಹಾರಾಜರ ರಾಜ್ಯವನ್ನು ಬೆಳೆಸುವ ಆಸೆಗಾಗಿ ಕಂಕಣವಾಡಿಯ ದೇಸಗತಿಯೇ ಹಾಳಾಗಿ ಹೋಯಿತು ದೇಸಾಯರ ಜಮೀನು, ಭೂಸಂಪತ್ತಿಗಳು ಮಹಾರಾಜರ ಸ್ವತ್ತಾಗಿಬಿಟ್ಟವು. ದೇಸಾಯರು ಹೆಸರಿಗೆ ಮಾತ್ರ ದೇಸಾಯರಾಗಿ ಉಳಿದರು. ಜನರದೊಂದು ರೀತಿ. ಸಂಪತ್ತು ಅಧಿಕಾರಗಳಿದ್ದಾಗ ಮಾನ ಸನ್ಮಾನಗಳನ್ನು ವ್ಯವಸ್ಥಿತವಾಗಿ ಕೊಡುವರು. ಈಗ ದೇಸಾಯರ ಆಸ್ತಿಯೆಲ್ಲವೂ ಇಲ್ಲದಂತಾದುದರಿಂದ ಅವರನ್ನು ರೈತ ಜನರು ಹೇಗೆ ಲಕ್ಷಿಸಬೇಕು ? ಆದರೂ ಮೊದಲಿನ ಮಾನ ಸನ್ಮಾನಗಳ ಅಪೇಕ್ಷೆ ಹೊಂದಿದ ದೇಸಾಯರು

* ದಿ॥ ಬೆಟಗೇರಿ ಕೃಷ್ಣಶರ್ಮರವರ ಅಪ್ರಕಟಿತ ಆತ್ಮಕಥೆಯ ಕೆಲವು ಪುಟಗಳು-ಅವರ 81 ನೆಯ ವಯಸ್ಸಿನಲ್ಲಿ ಹೇಳಿ ಬರೆಸಿದ್ದು. —ಸಂ.

ಎಲ್ಲರನ್ನೂ ಕರೆದು ತಾವೇ ಮನ್ನಿಸಿ ಜನರಿಂದ ಸಲ್ಲದೇ ಹೋಗಿದ್ದ ಮಾನ ಮರ್ಯಾದೆಗಳನ್ನು ಪಡೆಯುತ್ತಿದ್ದರು ಎಂತಲೇ ಆ ಪ್ರದೇಶದ ಜನರೆಲ್ಲ– 'ಕಂಕಣವಾಡಿಯ ದೇಸಾಯರು ಕರೆದು ಮುಜುರೆ ಮಾಡಿಸಿಕೊಳ್ಳುವರು' ಎಂದು ಹಿಂದಿನಿಂದ ಗೇಲಿ ಮಾಡುತ್ತಿದ್ದರು. ದೇಸಾಯರ ಮೊದಲಿನ ವೈಭವವೆಲ್ಲ ನಷ್ಟವಾಗಿ ಹೋಗಿತ್ತು. ಅವರಿಂದ ಖುಷಿಯನ್ನು (ಮೆಚ್ಚುಗೆಯಿಂದ ಕೊಡುವ ಸಂಭಾವನೆ) ಪಡೆದ ಭಾಟರು, ಮೇಳವರು ಮಾತ್ರ ಅವರ ಹಿರಿಮೆಯನ್ನು ನಿರ್ವಾಹವಿಲ್ಲದೆ ಹಾಡಿ ಹೊಗಳುತ್ತಿದ್ದರು. ದೇಸಾಯರ ಗತಿಯೇ ಹೀಗಾದಾಗ ಅವರ ಮುತಾಲಿಕರ ಮನೆತನದ ಆರ್ಥಿಕ ಪರಿಸ್ಥಿತಿ ಹೇಗಾಗಿರಬೇಕು ?

ನಾರಾಯಣರಾಯರು ಮುತಾಲಿಕ ದೇಸಾಯರ ಮನೆಯಲ್ಲಿ ಹಿರಿಯರಾದವರು. ಅವರ ಐದನೆಯ ಮಗಳು ನಮ್ಮ ತಾಯಿ. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದುದರಿಂದ ಕೋಳವಿ ಗ್ರಾಮದಲ್ಲಿ ಇರುವ ತಮ್ಮ ಸೋದರತ್ತೆಯ ಮನೆಯಲ್ಲಿಯೇ ಎಳೆಯತನವನ್ನು ಕಳೆದವಳು. ಅವಳು ಇರುತ್ತಿದ್ದ ಮನೆಯಲ್ಲಿಯೇ ತುಳಸಮ್ಮನೆಂಬ ಕುರುಡು ವೃದ್ಧೆ ಇದ್ದಳು. ಅವಳು ಒಬ್ಬ ಬಾಲವಿಧವೆ. ಅವಳು ತನ್ನ ಜೀವನವನ್ನು ಒಂದು ಬಗೆಯಲ್ಲಿ ರೂಪಿಸಿಕೊಂಡವಳು. ಹರಿದಾಸರ ಹಾಡುಗಳನ್ನು ಹೇಳುವದರಲ್ಲಿಯೂ, ಗೋಕಾವಿಯ ಅನಂತಾದ್ರೀಶರ ಕವನಗಳನ್ನು ಮುಖಪಾಠವಾಗಿ ಅಂದು ತೋರಿಸುವದರಲ್ಲಿಯೂ, ವೈಷ್ಣವರ ತಾರತಮ್ಯದ ಆಚಾರ ವಿಚಾರಗಳಲ್ಲಿಯೂ ತುಂಬ ನಿಷ್ಣಾತಳು. ನಮ್ಮ ತಾಯಿ ಚಿಕ್ಕವಳಿದ್ದಾಗ ಅವಳಿಂದ ಪಡೆದ ಪ್ರತ್ಯಕ್ಷ ಶಿಕ್ಷಣವಷ್ಟೋ ಅಷ್ಟೇ. ಅಕ್ಷರಗಳನ್ನು ಕಲಿತವಳಲ್ಲ. ಆದರೂ ಅನೇಕ ಬಗೆಯ ಗೃಹಿಣಿ ಸಂಸ್ಕಾರಗಳನ್ನು ಎಳೆಯತನದಲ್ಲಿಯೇ ಅರಿತವಳು.

ನಮ್ಮ ನಾಡಿಗರ ಬಾಯಲ್ಲಿ ಸುಳಿದಾಡುವ ಒಂದು ಜಾನಪದ ಗೀತವನ್ನು ಅನೇಕ ಜನರು ಕೇಳಿರುತ್ತಾರೆ. ಅದರ ನೆನಪು ಮಾಡುತ್ತೇನೆ.

ಸಾವಿರ ಕೊಟ್ಟರೂ ಸವತಿರುವ ಮನಿಬ್ಯಾಡ,
ಸಾವಿರದಮ್ಯಾಲ ಐನೂರು । ಕೊಟ್ಟರೂ
ಮಲಮಕ್ಕಳಿರುವ ಮನಿಬ್ಯಾಡ ।।

ಇದು ಗೊತ್ತಿದ್ದರೂ ಪರಾಧೀನಳಾಗಿ ಬಾಳುವ ನಮ್ಮ ತಾಯಿ ಇವೆರಡನ್ನು ಅನಿವಾ

ಯವಾಗಿ ಎದುರಿಸಬೇಕಾಯಿತು. ಸವತಿ ಇರಲಿಲ್ಲವಾದರೂ ತನ್ನ ವಯಸ್ಸಿನಷ್ಟೇ ವಯಸ್ಸಿನ ಮಲಮಕ್ಕಳು ಇರುವ ಮನೆತನಕ್ಕೆ ಸೊಸೆಯಾಗಿ ಬರಬೇಕಾಯಿತು. ಇದರಿಂದ ನಮ್ಮ ತಾಯಿಯ ಬಾಳು ಸುಖದ್ದಾಗಿ ಏನೂ ಆಗಲಿಲ್ಲ. ಪಾಂಡವರ ತಾಯಿ ಕುಂತಿಯ ಜೀವನದಂತೆ ಕೊನೆವರೆಗೂ ವನವಾಸದ ಬಾಳನ್ನೇ ಬಾಳಿದಳು. ಆದರೆ ಅವಳ ಮನ ಸಂಸ್ಕಾರವು ಅವಳ ವನವಾಸವನ್ನು ದುಃಖದ್ದಾಗಿ ಎಂದೂ ಭಾವಿಸಲಿಲ್ಲ. ಅದು ಅವಳ ವ್ಯಕ್ತಿತ್ವವನ್ನೇ ಒಂದು ರೀತಿಯಿಂದ ಬೇರೆ ಮಾರ್ಗಕ್ಕೆ ಹಚ್ಚಿತೆಂದು ಹೇಳಬಹುದು.

ಮನೆಯಲ್ಲಿ ನಮ್ಮ ಚಿಕ್ಕಪ್ಪನ ಹೆಂಡತಿ ಓರಗಿತ್ತಿಯಾಗಿ ಇದ್ದಳು. ಅವಳ ಕೈಯಲ್ಲಿ ಈ ಹುಡುಗಿ ತನ್ನ ಜೀವನವನ್ನು ಸಾಗಿಸಬೇಕಾಗಿತ್ತು. ಗಂಡ-ಹೆಂಡಿರ ವಯಸ್ಸಿನಲ್ಲಿಯೂ ಇಪ್ಪತ್ತೆರಡು ಇಪತ್ತ್ಮೂರು ವರ್ಷಗಳಷ್ಟು ಅಂತರ. ಆದರೂ ಅವರಲ್ಲಿ ಪ್ರೀತಿಯ ಜೀವನಕ್ಕೇನೂ ಕೊರತೆಯಿರಲಿಲ್ಲ. ಆದರೆ ಇಬ್ಬರು ಮಲಮಕ್ಕಳ ವಿಷಮ ಭಾವನೆಯು ಮತ್ತು ಒಬ್ಬ ಓರಗಿತ್ತಿಯ ದಾಯಾದಿ ಮತ್ಸರ ಭಾವನೆಯು ಅವಳ ಜೀವನವನ್ನು ಸಮಸ್ಯಾಪೂರ್ಣವಾಗಿ ಮಾಡಿತ್ತು. ಗಂಡನೊಬ್ಬ ಸರಿಯಾಗಿ ಇರದಿದ್ದರೆ ಆಕೆ ಎಂದೋ ಆತ್ಮಹತ್ಯೆ ಮಾಡಿಕೊಳ್ಳಬಹುದಾಗಿತ್ತು. ಅಷ್ಟೊಂದು ದುಃಖದ ಕಾವು ಇವಳಿಗೆ

ಹಾಗೆ ನೋಡಿದರೆ ನನ್ನ ತಾಯಿ ತನ್ನ ಮಲಮಕ್ಕಳನ್ನು ಬೇರೆಯವರೆಂದು ಭಾವಿಸಲಿಲ್ಲ. ಹೊಟ್ಟೆಯ ಮಕ್ಕಳ ಪ್ರೀತಿಯಿಂದಲೇ ಅವರನ್ನು ಕಂಡವಳು. ಆ ಮಕ್ಕಳು ತಾಯಿಯ ಪ್ರೀತಿಯನ್ನು ಪಡೆದುಕೊಂಡು ಇದ್ದರಾದರೂ ಪರಿಸರವು ಅವರ ಮನಸ್ಸನ್ನು ಕಲಕುಮಲಕುಗೊಳಿಸದೆ ಬಿಡುತ್ತಿರಲಿಲ್ಲ. ಅವರ ಕಿವಿಯಲ್ಲಿ ಮಲತಾಯಿಯ ದ್ವೇಷದ ಮಂತ್ರವನ್ನು ಊದಿ ಆ ಮುಗ್ಧ ಜೀವಿಗಳನ್ನು ಮಂಕುಗೊಳಿಸಿಬಿಡುತ್ತಿದ್ದರು. ಇದರಿಂದ ನನ್ನ ತಾಯಿ ಒಂದೊಂದು ದಿನವನ್ನೂ ವಿಷಾದದಲ್ಲಿಯೇ ನೂಕುತ್ತಿದ್ದಳು. ಪ್ರಥಮ ಸಂಸಾರವೆಂಬುದರ ಸೌಖ್ಯವು ಅವಳಿಗೆ ದೊರೆಯಲೇ ಇಲ್ಲ.

ಮದುವೆಯಾದ ಮೇಲೆ ಮೂರು-ನಾಲ್ಕು ವರ್ಷ ಅವಳಿಗೆ ಮಕ್ಕಳಾಗಲೇ ಇಲ್ಲ. ಈಗ ಬಂಜೆತನದ ನಿಂದೆಯೊಂದು ಅವಳಿಗೆ ಅಂಟಿಕೊಂಡಿತು. ಜನರೆಲ್ಲ ಇದನ್ನೆತ್ತಿ ಅಣಕದ ಮಾತುಗಳನ್ನು ಆಡತೊಡಗಿದರಂತೆ. ಆಗಲೂ ಇದೊಂದು ಹೊಸ ದುಃಖವೆನಿಸಿ ಗಂಡನಿಗಾಗಿ ಇದನ್ನು ಸಹಿಸಿ ನಿತ್ಯದಂತೆ ತನ್ನ ಗರತಿಯ ಬಾಳನ್ನು ಬಾಳುತ್ತಿದ್ದಳು. ಇದ್ದುದಿದ್ದ ಹಾಗೆಯೇ ನಮ್ಮ ತಾಯಿ ಮೊದಲನೆಯ ಬಸಿರನ್ನು ಹೊಂದಿ ನಿಂದೆ ಮಾಡುವ ಜನರ ಬಾಯಿಗೆ ತಡ ಹಾಕಿದಳು. ಚೊಚ್ಚಲು ಬಸಿರಿನ ಸಂಪ್ರದಾಯಗಳೆಲ್ಲವೂ

ಯಥಾಸ್ಥಿತವಾಗಿ ನಡೆದವು. ಆ ದಿನಗಳೆಂದರೆ ಜೀವನದ ಕಾವಿನಲ್ಲಿ ಕಂಡ ತಂಪಾದ ದಿನಗಳಾಗಿದ್ದವು. ಸರಿ. ಮೊದಲನೆಯದಾಗಿ ಹೆಣ್ಣು ಕೂಸನ್ನು ಹೆತ್ತಳು. ಮುಂದೆ ಪ್ರತಿ ಎರಡು ವರ್ಷಕ್ಕೊಮ್ಮೆ ಬಾಣಂತಿತನಗಳು ನಡೆದವು. ಇಬ್ಬರು ಹೆಣ್ಣುಮಕ್ಕಳು ಇಬ್ಬರು ಗಂಡುಮಕ್ಕಳ ಮೇಲೆ ನಾನು ಐದನೆಯವನು. ಮಧ್ಯೆ ಒಂದು ಹೆಣ್ಣು ಒಂದು ಗಂಡು ಮಗು ಚಿಕ್ಕತನದಲ್ಲಿಯೇ ಅಸುವನ್ನು ನೀಗಿದ್ದವಂತೆ. ನನ್ನ ತರುವಾಯ ಇಬ್ಬರು ತಮ್ಮಂದಿರು, ಒಬ್ಬ ತಂಗಿ ಹುಟ್ಟಿದರು. ಒಟ್ಟು ನಾವು ಬದುಕಿ ಉಳಿದವರು ಮೂರು ಜನ ಹೆಣ್ಣು ಮಕ್ಕಳು ಐದು ಜನ ಗಂಡು ಮಕ್ಕಳು ನಮ್ಮ ತಾಯಿಗೆ. ಮಕ್ಕಳ ಮುಖವನ್ನು ನೋಡಿ ಅವಳು ತನ್ನ ಕರುಳನ್ನು ತಣಿಸಿಕೊಳ್ಳಬೇಕಿತ್ತೇ. ಹೆಚ್ಚಿನ ಸಂತೃಪ್ತಿಗೆ ಅವಕಾಶವೇ ಇರಲಿಲ್ಲ.

ಅವಳದು ತುಂಬ ಸಂಸ್ಕಾರ ಪಡೆದ ಮನಸ್ಸು. ದೇವರಲ್ಲಿ ಸಂಪೂರ್ಣವಾದ ಶ್ರದ್ಧೆ. ದೇವರ ಭಜನೆಯನ್ನು ಅವಳು ನಿತ್ಯವೂ ವಿಧ ವಿಧವಾಗಿ ಮಾಡುವಳು. ಬೆಳಗಿನ ಐದು ಗಂಟೆ ಸುಮಾರಿಗೆ ಎದ್ದವಳು ಗಜೇಂದ್ರ ಮೋಕ್ಷ, ಉದಯರಾಗ, ಅನೇಕ ದಾಸರ ಪದಗಳು, ಮನೆವಾಳ್ತಿಯ ಹಾಡು ಇವುಗಳಿಂದಲೇ ದಿನದ ಕಾರ್ಯ ಆರಂಭಿಸುವಳು. ಮಧ್ಯಾಹ್ನದಲ್ಲಿ ಸ್ನಾನವಾದ ಮೇಲೆ ಮಡಿಯಿಂದ ದೇವರ ಪೆಟ್ಟಿಗೆಯನ್ನು ಒಂದು ಪೀಠದ ಮೇಲಿಟ್ಟು ಪೂಜೆ-ಪ್ರದಕ್ಷಿಣೆ ನಮಸ್ಕಾರಗಳನ್ನು ಸಲ್ಲಿಸುವಳು. ಆಗ ಅವಳು ಹೇಳುತ್ತಿದ್ದ ಕನ್ನಡ ಮಂತ್ರಗಳನ್ನು ಇತ್ತೀಚೆಗೆ ನಾನು ಎಲ್ಲಿಯೂ ಕೇಳಿಲ್ಲ. ಅವೆಲ್ಲವೂ ನಮ್ಮ ಮನಸ್ಸಿನ ಸಂಸ್ಕೃತಿಯನ್ನು ಬೆಳೆಯಿಸುವಂತಹವು. ಆಧ್ಯಾತ್ಮಿಕ ಜೀವನದಲ್ಲಿ ಶ್ರದ್ಧೆಯನ್ನು ಹೆಚ್ಚಿಸುವಂತಹವು. ಅಲ್ಲದೇ ನಮ್ಮ ಪೌರಾಣಿಕ ಕಥೆಗಳನ್ನು ವಿವರವಾಗಿ ತಿಳಿಸುವಂತಹವು ಆಗಿರುತ್ತಿದ್ದವು. ಇವುಗಳನ್ನು ಕೇಳಿ ಕೇಳಿ ನಮ್ಮ ಮನಸ್ಸಿನಲ್ಲಿಯೂ ಒಂದು ಬಗೆಯ ಧಾರ್ಮಿಕ ಮುಗ್ಧ ಶ್ರದ್ಧೆಯು ಬೆಳೆಯುತ್ತಲಿತ್ತು.

ನಮ್ಮ ತಾಯಿ ಹೇಳುತ್ತಿದ್ದ ಅನೇಕ ಹಾಡುಗಳೂ, ಮಂತ್ರಗಳೂ ಅವಳ ಜೀವನದೊಂದಿಗೆ ಮರೆಯಾದವು. ನನ್ನ ಹದಿನೆಂಟು ವರ್ಷಗಳವರೆಗೆ ಅವಳು ಬದುಕಿದ್ದಳಾದರೂ ಸಾವಿನ ನೆಲೆಯನ್ನರಿಯದ ನನಗೆ ಅವುಗಳನ್ನು ಬರೆದಿಟ್ಟುಕೊಳ್ಳಬೇಕೆಂಬ ಬುದ್ಧಿ ಇರಲಿಲ್ಲ. ಅವುಗಳ ಹಾನಿ ಆ ಬದುಕಿನ ಕೊಂಡಿ ಕಳೆದುಕೊಂಡಂತಹದೆನಿಸುತ್ತದೆ. ನನಗೆ.

ನಮ್ಮ ಸಂಸಾರವೇನೂ ಆರ್ಥಿಕ ತೃಪ್ತಿಯನ್ನು ಪಡೆದಂತಹುದಲ್ಲ. ಆದರೂ ನಮ್ಮ

ತಾಯಿಯ ಬಗೆಯಾದ ಹಿತಿತದ ಕೈಯ ಮೂಲಕ ಇಡೀ ವರ್ಷದುದ್ದಕ್ಕೂ ನಾವು ಕೊರತೆಯನ್ನು ಅನುಭವಿಸಬೇಕಾಗಿ ಬರುತ್ತಿರಲಿಲ್ಲ. ಅನೇಕ ಬಗೆಯ ಸಂಪ್ರದಾಯಗಳು, ಹಬ್ಬ-ಹುಣ್ಣಿವೆ ಹರಿದಿನ ಇವೆಲ್ಲ ಯಾವ ಕೊರತೆ ಇಲ್ಲದೇ ಮನೆಯಲ್ಲಿ ಸಾಗುತ್ತಿದ್ದವು.

ಆಹಾರಕ್ಕೆ ಮುಖ್ಯವಾಗಿ ಬೇಕಾಗುವದು ಹಾಲು-ಹೈನು ಎಂಬುದು ನಮ್ಮ ತಾಯಿಗೆ ಚನ್ನಾಗಿ ಗೊತ್ತು. ಆದುದರಿಂದ ಮನೆಯಲ್ಲಿ ಒಂದೆರಡು ಆಕಳುಗಳು ಒಂದೆರಡು ಎಮ್ಮೆಗಳು ಯಾವಾಗಲೂ ಇರುತ್ತಿದ್ದವು. ನಾವು ಎಳೆಯತನದಲ್ಲಿ ಅನುಭವಿಸಿದ ಹೈನದ ಸೌಖ್ಯವನ್ನು ಮತ್ತೆ ಇದುವರೆಗೂ ನಾನು ಕಂಡಿಲ್ಲ. ಇಂದಿನ ಕಾಲದಲ್ಲಂತೂ ಊಹಿಸುವಂತಿಲ್ಲ. ನಮ್ಮ ತಾಯಿಯ ಸಾಮಾಜಿಕ ಬುದ್ಧಿಯು ಆಗ ನಮಗೆ ಬೇಡವಾಗಿ ಕಂಡರೂ ಇಂದು ಅನುಭವವಾದ ಮೇಲೆ 'ಆಕೆ ಎಷ್ಟೊಂದು ದೊಡ್ಡ ಹೃದಯದವಳು' ಎಂದು ಮತ್ತೆ ಮತ್ತೆ ಮನಸ್ಸಿಗೆ ಬರುತ್ತದೆ. ನಮ್ಮ ಹಳ್ಳಿಯಲ್ಲಿ ಒಂದು ಪರಂಪರೆಯ ವೈದ್ಯ ಮನೆತನವಿತ್ತು. ಆಯುರ್ವೇದದಲ್ಲಿ ಆ ವೈದ್ಯ ಮನೆತನದ ಹಿರಿಯರು ತುಂಬ ಪರಿಣಿತರು. ಅವರ ಹೆಂಡತಿಯೂ ಗಂಡನ ಸಹಚರ್ಯದ ಮೂಲಕ ವೈದ್ಯಶಾಸ್ತ್ರದಲ್ಲಿ ಅಲ್ಪ ಸ್ವಲ್ಪ ಪರಿಚಯ ಮಾಡಿಕೊಂಡವಳು. ಅವಳ ಗೆಳೆತನಮಾಡಿ ನಮ್ಮ ತಾಯಿಯೂ ಬಳಕೆಯ ರೋಗಗಳಿಗೆ ಎಂತಹ ಔಷಧಿಗಳನ್ನು ಕೊಡಬೇಕೆಂದು ಅರಿತುಕೊಂಡಿದ್ದಳು. ಮುಂದೆ ಆ ವೈದ್ಯ ಮನೆತನವು ನಮ್ಮ ಊರು ಬಿಟ್ಟು ಹೋಗಿ, ವೈದ್ಯರೇ ಇಲ್ಲದ ನಮ್ಮ ಹಳ್ಳಿಯಲ್ಲಿ ಊರವರಿಗೆಲ್ಲ ಇವಳೇ ಹಿರಿಯ ವೈದ್ಯಳಾಗಿ ಪರಿಣಮಿಸಿದಳು. ಆರೋಗ್ಯದ ಯಾವ ತೊಂದರೆಯೇ ಇರಲಿ ಊರ ಜನ ನಮ್ಮ ತಾಯಿಯ ಬಳಿ ಚಿಕಿತ್ಸೆಗಾಗಿ ಓಡೋಡಿ ಬರುತ್ತಿದ್ದರು. ಆಕೆಯ ಕೈಗುಣವೋ, ಔಷಧಿಯ ಪ್ರಭಾವವೋ ಕಾಣೆ. ರೋಗಿಗಳಲ್ಲಿ ಬಹುಜನರು ಗುಣಹೊಂದುತ್ತಿದ್ದರು ಮಧ್ಯಾಹ್ನ ಮೈತೊಳೆದುಕೊಂಡು ಮಡಿಯಾಗಿ ಅಡಿಗೆಗೆ ಕುಳಿತಿದ್ದರೂ ಯಾರಾದರೂ ರೋಗಿಗಳ ಕಡೆಯವರು ಕರೆಯಲು ಬಂದರೆ ಮೈಲಿಗೆಯಾಗಿ ಅವರ ಮನೆಯವರೆಗೆ ಹೋಗಿ ರೋಗಿಗಳನ್ನು ನೋಡಿ ರೋಗಕ್ಕೆ ತಕ್ಕ ಔಷಧೋಪಚಾರಗಳನ್ನು ಮಾಡಿ ಬಂದು ಆಮೇಲೆ ಮತ್ತೆ ಮೈತೊಳೆದುಕೊಂಡು ಮಡಿಯಿಂದ ಅಡಿಗೆ ಮಾಡಿ ನಮಗೆಲ್ಲರಿಗೆ ಊಟ ಬಡಿಸುತ್ತಿದ್ದಳು. ಇದರಿಂದ ನಾವು ಅನುಭವಿಸಿದ ಅನನುಕೂಲವೆಂದರೆ ನಮ್ಮ ಊಟಕ್ಕೆ ಒಂದು ವೇಳೆಯ ಮಿತಿಯೇ ಇರುತ್ತಿರಲಿಲ್ಲ. ಮಧ್ಯಾಹ್ನದ ಊಟವು ಇಳಿಹೊತ್ತಿಗೆ - ಸಂಜೆಯ ಊಟವು ಸರಿರಾತ್ರಿಗೆ ಆಗುತ್ತಿತ್ತು. ಇವೆಲ್ಲವನ್ನು ಸಮಾಜಹಿತಕಾರ್ಯವೆಂದು ನಮ್ಮ ಶ್ರೀ ನಮ್ಮ ತಾಯಿಯು

ನಂಬುಗೆ ಹುಟ್ಟಿಸಿದುದರಿಂದ ಅದನ್ನು ತಾಳಿಕೊಳ್ಳುತ್ತಿದ್ದೆವು. ನಮ್ಮ ತಾಯಿಯು ಇಂಥ ಚಟುವಟಿಕೆಗಳಿಂದ ಜನರ ವಿಶ್ವಾಸವು ನಮ್ಮ ಮನೆತನದ ಮೇಲೆ ಹೆಚ್ಚಾ ಗುತ್ತ ಹೋಯಿತು. ನಮ್ಮ ತಾಯಿ ಈ ಔಷಧಿಯ ಉದ್ಯೋಗದಿಂದ ಜನರ ಪ್ರೀತಿ ಪಡೆಯುತ್ತಿದ್ದಳಷ್ಟೇ ಹೊರತು ಆರ್ಥಿಕ ಲಾಭವನ್ನು ಅವಳು ಅಪೇಕ್ಷಿಸು ತ್ತಿರಲಿಲ್ಲ.

ನಮ್ಮ ತಾಯಿಯ ಮನೋಭಾವ ಮತ್ತು ನಮ್ಮ ಮನೆತನದ ಆರ್ಥಿಕ ಪರಿಸ್ಥಿತಿ ಇವೆರಡನ್ನೂ ಒಟ್ಟಿಗೇ ಹೇಳುವ ಒಂದು ಸಂದರ್ಭ ನೆನಪಿಗೆ ಬರುತ್ತದೆ. ಒಂದು ಸಲ– ಬೆಳಗಿನ ಎಂಟು ಗಂಟೆ. ಪಕ್ಕದ ಹಳ್ಳಿಯ ಕೂಸೊಂದು ಹೊಟ್ಟೆಯುಬ್ಬಿಕೊಂಡು, ಎರಡು ಮೂರು ದಿನ ಶೌಚಕ್ಕೆ ಆಗದೇ ಅನೇಕ ಉಪಚಾರದಿಂದ ಲೂ ಯಾವುದಕ್ಕೂ ಹಣಿಯದೆ ಇದ್ದುದರಿಂದ ಆ ಕೂಸಿನ ತಂದೆ ತಾಯಿಗಳಿಬ್ಬರೂ ಚಿಂತಾಮನಸ್ಕರಾಗಿ ಅದನ್ನು ಕರೆದುಕೊಂಡು ನಮ್ಮ ತಾಯಿಯ ಬಳಿಗೆ ಬಂದಿದ್ದರು. ಅವಳು ಬೆಳಗಿನ ಮನೆಗೆಲಸದಲ್ಲಿ ತೊಡಗಿದ್ದಳು. ಕೂಸಿನ ತಂದೆ ತಾಯಂದಿರು ದೀನ ಭಾವದಿಂದ ಕೂಸಿನ ತ್ರಾಸನ್ನೆಲ್ಲ ಹೇಳಿದರು. ನಮ್ಮ ತಾಯಿ ಕೂಸಿನ ಅಂಗಾಂಗಗಳನ್ನೆಲ್ಲ ಮುಟ್ಟಿ ಮುಟ್ಟಿ ನೋಡಿ ಪರೀಕ್ಷಿಸಿದಳು. ಆ ಕೂಸಿಗೆ ಮತ್ತೇನೂ ಆಗಿರಲಿಲ್ಲ. ತಾಯಿ ತಂದೆಗಳ ಅಲಕ್ಷ್ಯದಿಂದ ಯಾವುದೋ ಬಿರುಸು ಧಾನ್ಯವನ್ನು ನುಂಗಿದುದರಿಂದ ಅದು ಅಜೀರ್ಣವಾಗಿ ಹೊಟ್ಟೆಯಲ್ಲಿ ಉಬ್ಬಿಕೊಂಡಿದೆ ಎಂಬುದು ನಮ್ಮ ತಾಯಿಗೆ ತಿಳಿಯಿತು. ಕೂಡಲೇ ಅವಳು ಒಂದು ಗು ಂ ಸೀಗೇಕಾಯಿಯನ್ನು ತರಿಸಿ ಅದನ್ನು ಒಂದು ಕಲ್ಲಮೇಲೆ ತೇಯಿಸಿ ಬಂದ ರಾಡಿ ಯನ್ನು ಕೂಸಿನ ಗುದದ್ವಾರಕ್ಕೆ ಚನ್ನಾಗಿ ಲೇಪಿಸಿದಳು. ಮುಂದೆ ಎರಡೇ ನಿಮಿಷದಲ್ಲಿ ಹೊಟ್ಟೆಯಲ್ಲಿ ನೆನೆದು ಉಬ್ಬಿದ ಗೋವಿನ ಜೋಳದ ಕಾಳುಗಳು ಸಟ್ ....ಸಟ್....ಎಂದು ಸಿಡಿಯತೊಡಗಿದವು. ನಾಲ್ಕಾರು ಕಾಳುಗಳು ಸಿಡಿದ ಮೇಲೆ ಶೌಚವು ಸರಾಗವಾಗಿ ಕೂಸುವು ಆಡತೊಡಗಿತು.

ಕೂಸಿನ ತಂದೆ–ತಾಯಿಗಳು ಸಂತುಷ್ಟರಾಗಿ ಇದಕ್ಕಾಗಿ ತಾವೇನು ಕೊಡಬೇಕು. ಎಂದು ಕೇಳಿದರು. ತಾಯಿ ಬೇಡಿದಷ್ಟು ಅವರು ಕೊಡಬಹುದಿತ್ತು. ಆದರೆ ನಮ್ಮ ತಾಯಿ ಸಹಜ ಸ್ವರದಲ್ಲಿ "ಐದಾಣೆ ಕೊಟ್ಟು ಬಿಡ್ರಿ ಸಾಕು" ಅಂದಳು. ಇಷ್ಟೇನೇ ಅಂದುಕೊಂಡ ಆ ರೈತ ತಾಯಿ ತಂದೆಗಳು ಐದಾಣೆ ರೊಕ್ಕವನ್ನು ಎಣಿಸಿಕೊಟ್ಟು ಕೂಸಿನೊಂದಿಗೆ ನಗುನಗುತ್ತ ಹೋದರು. ನಮ್ಮ ತಾಯಿ ಐದಾಣೆ

ಕೇಳಿ ಪಡೆದದ್ದಕ್ಕೆ ನನಗೆ ಆಶ್ಚರ್ಯವಾಗಿ ಆ ರೈತರು ನಿನಗೆ ಕೇಳಿದಷ್ಟು ಹಣ ಕೊಡಬಹುದಿತ್ತು. ಏಕೆ ಕೇಳದೇ ಬಿಟ್ಟೆ ? ಎಂದು ಕೇಳಿದರೆ– 'ಇಷ್ಟು ಹಣ ತೆಗೆದುಕೊಂಡದ್ದು ನನಗೀಗ ತಪ್ಪೆನಿಸುವದು. ಇದು ನಮ್ಮ ಕರ್ತವ್ಯ ಇದ್ದಂತೆ ಕರ್ತವ್ಯಕ್ಕೆ ಪ್ರತಿಫಲ ಬಯಸಬಾರದು. ಈ ಐದಾಣೆ ನಾನು ತೆಗೆದುಕೊಂಡದ್ದು ನನ್ನ ಒಂದು ಅಡಚಣೆಗಾಗಿ. ನಾನು ಮೊನ್ನೆ ಬಳೆಯಿಟ್ಟುಕೊಂಡು ಬಂದೆ. ಬಳೆಗಾರನಿಗೆ ಐದಾಣೆ ಕೊಡಬೇಕಾಗಿತ್ತು. ನನ್ನ ಹತ್ತಿರ ಹಣ ಇರಲಿಲ್ಲ. ನಿರ್ವಾಹವಿಲ್ಲದೆ ಈ ಐದಾಣೆಗಳನ್ನು ತೆಗೆದುಕೊಂಡೆ. ಬಳೆಗಾರನ ಸಾಲಕೊಟ್ಟು ಮುಕ್ತಳಾಗುವೆನು. ಈ ಅನಿವಾರ್ಯಕ್ಕಾಗಿ ಬಂದ ಪಾಪಫಲವನ್ನು ನಾನು ಅನುಭವಿಸಬಲ್ಲೆ. ಆದರೆ ಇನ್ನೊಬ್ಬರ ಸಾಲದ ಹಣವನ್ನು ಹೆಚ್ಚು ದಿನ ನಿಲ್ಲಿಸಿಕೊಂಡು ಋಣಿಯಾಗಿರುವದು ಕಷ್ಟ' ಎಂದು ತಾಯಿ ನುಡಿದಳು....ಹೀಗೆ ನಮ್ಮ ತಾಯಿಯ ಒಂದೊಂದು ಗುಣವನ್ನು ಎತ್ತಿ ತೋರಿಸುತ್ತ ಹೋಗುವದೆಂದರೆ ಅನೇಕ ಪುಟಗಳೇ ಬೇಕಾಗುತ್ತವೆ.

ನಮ್ಮ ತಂದೆಯವರ ಬಗೆಗಿನ ಜನಾದರಣೆಯು ಬೆಳೆಯಲು ನಮ್ಮ ತಾಯಿಯ ಈ ಉಪಕಾರ ಬುದ್ಧಿಯೂ ಯೋಗ್ಯವಾದ ನೆರವನ್ನು ಕೊಡುತ್ತಿತ್ತು. ಇಂತಹ ಪ್ರೀತಿಯ ಫಲವಾಗಿಯೇ ನಮ್ಮ ಇಡೀ ಕುಟುಂಬವನ್ನು ಬರಗಾಲದ ಒಂದು ಸಂದರ್ಭದಲ್ಲಿ ಬಗರನಾಳದ ಜನತೆ ಒಂದು ವರ್ಷಕಾಲ ಅಂದರೆ ಮುಂದಿನ ಬೆಳೆ ಬರುವವರೆಗೆ ಅಂಗೈಯಲ್ಲಿ ಇಟ್ಟುಕೊಂಡು ಸಾಕಿದಂತೆ ಸಲಹಿದರು.

1919 ರಲ್ಲಿ ಭಾರತವನ್ನೇ ಗೀಳಂಕಿರಿಸಲು ಬಂದ ಇನ್‌ಫ್ಲುಯೆಂಜಾ ಬೇನೆಯು ನಮ್ಮ ಹಳ್ಳಿಯಲ್ಲಿಯೂ ಹರಡಿಕೊಂಡಿತು. 1500 ಜನಸಂಖ್ಯೆಯ ಆ ಹಳ್ಳಿಯಲ್ಲಿ ಒಂದೊಂದು ದಿನಕ್ಕೆ 25–26 ಜನರನ್ನು ಆ ರೋಗವು ನುಂಗಿಬಿಡುತ್ತಿತ್ತು. ರೋಗದ ಕಾಲದಲ್ಲಿ ನಮ್ಮ ತಾಯಿಗೆ ಪುರುಸೊತ್ತೇ ಇರಲಿಲ್ಲ. ಮನೆ ಮನೆಗೂ ರೋಗಿಗಳನ್ನು ನೋಡಲು ಹೋಗಿ ಅವರನ್ನು ಉಪಚರಿಸಿ ಬರುವದರಲ್ಲಿಯೇ ದಿನಗಳು ಕಳೆಯುತ್ತಿದ್ದವು. ನಮ್ಮ ತಾಯಿಯ ಔಷಧಿಯಿಂದ ಎಷ್ಟೋ ಜನರು ಬದುಕಿಕೊಂಡರು. ಆದರೆ ಆ ಇನ್‌ಫ್ಲುಯೆಂಜಾ ರೋಗವು ತನ್ನ ಬಾಯಿಯಿಂದ ಬಲಿಗಳನ್ನು ತಪ್ಪಿಸಿದ ದ್ವೇಷದಿಂದಲೋ ಎಂಬಂತೆ ನನ್ನ ತಾಯಿಗೆ ಅಂಟಿಕೊಂಡಿತು. ಅದರಲ್ಲಿಯೇ ಅವಳ ಜೀವನದ ಕೊನೆಯಾಯಿತು.

ಅಣ್ಣು ಮದುವೆ; ಆವನ ತಂಗಿಯ ಮದುವೆ

ನನ್ನ ಮೊದಲ ಕವನದ ನಾಯಕನಾದ ಅಣ್ಣೂನ ಹೆಸರನ್ನು ಈ ಮೊದಲೇ ಹೇಳಿ

ಷ್ಟಾಗಿದೆ. ಅವನಿಗೀಗ ಹದಿನಾರು ವರ್ಷ. ಅವನ ಇರುವಿಕೆಯಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ವಯಸ್ಸು ಮಾತ್ರ ಹದಿನಾರರ ಪ್ರಾಯವನ್ನು ಪಡೆದಿತ್ತು. ಹಿಂದೆ ಕಂಡ ಜೊಲ್ಲು ಸೋರುವ ಬಾಯಿ, ಗೂರಲು ಮುದುಕರಂತೆ ಎಡೆಬಿಡದ ಕೆಮ್ಮಲು. ಗಾರಿಗಾರಿ ಮತ್ತೆ ಮತ್ತೆ ಉಗುಳುವ ಕಫ. ಉಟ್ಟ ಪಂಜೆಯನ್ನೋ, ಹೊತ್ತ ಶಲ್ಯವನ್ನೋ, ಬಾಯಲ್ಲಿ ತುರುಕಿಕೊಂಡು ತಿನ್ನುತ್ತ ಎಂಜಲಿನಿಂದ ಉಂಟಾದ ಗಬ್ಬು ವಾಸನೆ. ಎಲ್ಲವೂ ಹಾಗೆಯೇ ಇದ್ದವು. ಅಪ್ಪನ ವಶೀಲಿಯಿಂದ ನಾಲ್ಕನೆಯ ಇಯತ್ತೆ ವರೆಗೆ ಕಲಿಸಿದ್ದರೂ ಅವನು ನಾಲ್ಕನೆಯ ಇಯತ್ತೆಯನ್ನು ದಾಟಿರಲಿಲ್ಲ. ಆದರೂ ಅವನ ಮದುವೆ. ಈ ವರ್ಷ ಅಂದರೆ ೧೯೭೦ ನೇ ವರ್ಷ ಬೇಸಗೆಯಲ್ಲಿ ಅವನ ಮದುವೆಯಾಗುವದೆಂದು ಹೆಣ್ಣಿನ ನಿಶ್ಚಯವಾಗಿತ್ತು. ಚಿಕ್ಕ ವಯಸ್ಸಿನ ನನಗೆ ಕೂಡ "ಅಬ್ಬಾ! ಅಣ್ಣನ ಮದುವೆಯೇ ?" ಎಂದು ಆಶ್ಚರ್ಯವೆನಿಸಿತು. ಹೆಣ್ಣನ್ನು ಕೊಡುವವರು ಯಾವ ನಿಗುಣಗಳನ್ನು ಕಂಡಿರಲಿಲ್ಲವೋ ಏನೋ! ಅಪ್ಪನ ಅಂತಸ್ತನ್ನು ನೋಡಿ ಮಗನಿಗೆ ಹೆಣ್ಣು ಕೊಡಲು ಒಪ್ಪಿದ್ದರು. ಅವರ ಅಪ್ಪ ರಾಮಣ್ಣ. ನಾವೆಲ್ಲರೂ ಹಾಗೆಯೇ ಕರೆಯುವೆವು. ದಾಯಾದಿ ಸಂಬಂಧದಲ್ಲಿ ಅವನು ನಮಗೆ ಅಣ್ಣನಾಗಬೇಕು. ಅವನ ಹಿರಿಯತನದಲ್ಲಿ ಆ ಮನೆತನವನ್ನು ನೋಡುವಂತಿತ್ತು. ಸಿರಿವಂತಿಕೆ ಅವರ ಮನೆಯಲ್ಲಿ ನಾಟ್ಯವಾಡುತ್ತಿದೆ ಎಂಬ ಭಾವನೆ ನಮಗೆಲ್ಲರಿಗೂ ಉಂಟಾಗುತ್ತಿತ್ತು ಕುಲಕರ್ಣಿಕೆ ಮಾಡುತ್ತಿದ್ದ ಕಾಲದಲ್ಲಿ ಯಾವುದೋ ಒಂದು ಪ್ರಕರಣದಲ್ಲಿ ಸಿಕ್ಕಿ ಸರಕಾರದ ಸೆರೆಮನೆ ಕಂಡವನಾದರೂ ಅವನ ಆ ಹಳ್ಳಿಯ ವಶೀಲಿಯ ಮೂಲಕ ಯಾವ ಘನತೆಯೂ ಕಡಿಮೆಯಾಗಿರಲಿಲ್ಲ. ಫೌಜದಾರಿ, ಸಿವ್ಹಿಲು–ಕೇಸುಗಳಿಗಾಗಿ ಜಮೀನು ಸಂಬಂಧದ ತಂಟೆಗಳ ನೆಪದಿಂದಾಗಲೀ, ಸಾಲದ ಹಣದ ಕಾಗದ–ಪತ್ರಗಳಿಗಾಗಲೀ, ಅವನು ಆಗಾಗ ತಾಲೂಕು ಸ್ಥಳವಾದ ಗೋಕಾವಿಗೆ ತಿರುಗಾಡಿ ಬರುತ್ತಿದ್ದನು. ಪ್ರತಿ ಸಲವೂ ಹಿಡಿತುಂಬ ಹಣವೂ ಅವರಿಗೆ ಸಲ್ಲುತ್ತಿತ್ತು. ಮನೆತುಂಬ ಬೇರೆ ಬೇರೆ ಸಾಮಾನುಗಳು ಬರುತ್ತಿದ್ದವು. ಮಕ್ಕಳು ತಂದ ಸಿಹಿ ಪದಾರ್ಥಗಳನ್ನು ತಿಂದು, ತಿಂದು ಸಾಕಾಗಿ, ನೆಲಕ್ಕೆ ಹಾಕಿ ತಿಕ್ಕುತ್ತಿದ್ದವು. ನಾವು ಸಣ್ಣವರಿದ್ದಾಗ ಅವನ ಮನೆಗೆ ಹೋಗಿ ಅವನ ಮಕ್ಕಳೊಂದಿಗೆ ಆಟವಾಡುತ್ತಿದ್ದೆವು. ಅವರ ಈ ಎಲ್ಲ ವ್ಯವಸ್ಥೆ ನಮಗೆ ಆಶ್ಚರ್ಯವನ್ನೂ, ಕುತೂಹಲವನ್ನೂ ಉಂಟು ಮಾಡುತ್ತಿತ್ತು. ಅವರ ಸಿರಿವಂತಿಕೆಗಾಗಿ, ಮುಕುಗೊಳ್ಳುವಂತೆ ಮಾಡುತ್ತಿತ್ತು.

ಇಂತಹ ರಾಮಣ್ಣನ ಮಗ ಅಣ್ಣುವಿಗೆ ಮದುವೆಯಾಗದೇ ನಿಂತೀತೇ ? ಅವನ

ಮದುವೆಯೊಂದಿಗೆ ನನ್ನ ಓರಗೆಯವಳಾದ ಅವನ ತಂಗಿ ವತ್ಸಲೆಗೂ ವರನನ್ನು ನೋಡಿ ಬಂದಾಯಿತು. ನಿಶ್ಚಯವೂ ಆಯಿತು. ವೈಶಾಖ ಮಾಸದಲ್ಲಿಯೇ ಮದುವೆಯ ಮುಹೂರ್ತವನ್ನು ನಿಯಮಿಸಿದರು. ಮದುವೆಯ ದಿನವು ಹತ್ತಿರ ಹತ್ತಿರಕ್ಕೆ ಬಂದಿತು. ವತ್ಸಲೆಗಾಗಿ ನಿಬ್ಬಣವನ್ನು ಕರೆತರಲು ಧಾರವಾಡಕ್ಕೆ ಐದಾರು ಚಕ್ಕಡಿಗಳನ್ನು ಕಳಿಸಲಾಗಿದ್ದಿತು. ಅಣ್ಣನ ಮದುವೆಯ ನಂಟರು ಗೋಕಾಕದಿಂದ ಬರುವವರಿದ್ದರಿಂದ ಅಲ್ಲಿಗೆ ಮೂರು-ನಾಲ್ಕು ಚಕ್ಕಡಿಗಳನ್ನು ಕಳಿಸಿಯಾಯಿತು. ಸಮಯಕ್ಕೆ ಸರಿಯಾಗಿ ಇಬ್ಬರೂ ಬೀಗರು ಬಂದರು. ಆಗ ಸಮೃದ್ಧಿಯ ಕಾಲ. ಮದುವೆ ಎಂದು ವರ್ತಮಾನ ತಿಳಿದರೆ ಸುತ್ತಮುತ್ತಣ ಹಳ್ಳಿಯ ವೈದಿಕ ಬ್ರಾಹ್ಮಣರೆಲ್ಲರೂ ತಾವಾಗಿಯೇ ಬಂದು ಸೇರುವರು, ರಾಮಣ್ಣನ ಮಕ್ಕಳ ವೈಭವದ ಮದುವೆ ಎಂದರೆ ಸುಮಾರು ನಾನೂರು ಜನಕ್ಕಿಂತ ಹೆಚ್ಚು ಜನ ಹಳ್ಳಿಯಲ್ಲಿ ಸೇರಿದರು.

ಮೊದಲ ದಿನದ ಎದುರುಗೊಳ್ಳುವ ಸಮಾರಂಭ ನಡೆಯಿತು. ಮದುಮಕ್ಕಳಿಬ್ಬರನ್ನು ಕುದುರೆಯ ಮೇಲೆ ಮೆರೆಸುತ್ತ, ಬಾಣ-ಬಿರುಸುಗಳ ಸಂಭ್ರಮದೊಂದಿಗೆ ಕರೆದುಕೊಂಡು ಬಂದು ಅವರನ್ನು ಅವರವರ ಬಿಡಾರಕ್ಕೆ ಕಳುಹಿಸಲಾಯಿತು. ಆಮೇಲೆ ಸೀಮಂತ ಪೂಜಾದಿಗಳು ವಿಧಿಪೂರ್ವಕವಾಗಿ ನಡೆದವು. ನಮಗೆ ಅದೆಲ್ಲ ಪೂಜಾದಿ ಗೊಂದಲದಲ್ಲಿ ಲಕ್ಷ್ಯವಿರಲಿಲ್ಲ. ರುಕೋತಿನ ಮಂಡಿಗೆಯೂಟದ ಆಕರ್ಷಣೆಯೇ ಹೆಚ್ಚಾಗಿದ್ದಿತು. ಎಲ್ಲರೊಡನೆ ಮಂಡಿಗೆಯೂಟದ ಸವಿಯನ್ನು ಅನುಭವಿಸಿದೆವು. ಗೋಕಾಕ ತಾಲ್ಲೂಕಿನ ಗೋಧಿಯ ಮಂಡಿಗೆ. ಮಾಡುವವರು ಸವದತ್ತಿ ತಾಲ್ಲೂಕಿನ ಸತ್ತಿಗೇರಿಯ ವಂಶಾನುಗತವಾದ ಅಡಿಗೆಯವರು. ಅವರು ಮಾಡಿದ ಮಂಡಿಗೆಯ ರುಚಿಯನ್ನು ಉಂಡೇ ಕಾಣಬೇಕು.

ಮರುದಿನ ಅಕ್ಷತಾರೋಪಣ. ಮದುಮಕ್ಕಳನ್ನು ತಂದು ಹಸೆ ಜಗುಲಿಯ ಮೇಲೆ ನಿಲ್ಲಿಸಿದರು. ನನಗೆ ಅಣ್ಣುವಿನ ಹೆಂಡತಿ ಹೇಗೆ ಇದ್ದಾಳೋ ಎಂದು ನೋಡುವ ಕುತೂಹಲ. ಗದ್ದಲದಲ್ಲಿಯೇ ಮುಂದೆ ಹೋಗಿ ಕನ್ಯೆಯ ಬಳಿಯಲ್ಲಿಯೇ ನಿಂತು, ಕಣ್ತುಂಬ ನೋಡಿದೆ. ಹುಡುಗಿ ಹತ್ತು-ಹನ್ನೆರಡು ವರ್ಷದವಳಿರಬಹುದು. ಅಪ್ಪಟವಾದ ಗೌರವರ್ಣದ ಮೈ. ಎಣ್ಣೆ ನೀರು ತೆಗೆದುಕೊಂಡುದರಿಂದ ಶೋಭಿಸುವ ಕಪ್ಪು ಬಣ್ಣದ ನಿಡಿದಾದ ಎಸಳುಗೂದಲು. ಕೆಂಪು ಬಣ್ಣದ ತುಟಿ. ಹೇಳಿ ಮಾಡಿಸಿದಂತಹ ಕೊನೆಮೂಗು. ತುಟಿ ಬಿಚ್ಚಿ ನಕ್ಕರೆ ಹೊಳೆಯುವ ಹಲ್ಲ ಸಾಲು

ವಜ್ರದ ಸರದಂತೆ ಕಾಣುವುದು. ನಾನು ನೋಡಿ–"ಅಣ್ಣನ ನಸೀಬ ಚನ್ನಾಗಿದೆ. ಅವನಿಗೆ ಎಷ್ಟೊಂದು ಚೆಲುವೆಯಾದ ಹೆಂಡತಿ ದೊರೆತಳು" ಎಂದುಕೊಂಡೆ. ಆಮೇಲೆ ವತ್ಸಲೆಯ ಬಳಿ ಹೋಗಿ ನಿಂತಾಗ ಅವಳಿಗಾಗಿ ಗೊತ್ತುಪಡಿಸಿದ ವರನೇನೋ ಸರ್ವೇ–ಸಾಮಾನ್ಯವಾಗಿ ಕಂಡ. ವಿಶೇಷ ಚುರುಕು ಬುದ್ಧಿಯ ಲಕ್ಷಣಗಳಾವುವೂ ಇರಲಿಲ್ಲ; ಆದರೆ ಧಾರವಾಡದಿಂದ ಬಂದ ಪಟ್ಟಣಿಗ. ಹಳ್ಳಿಗರ ಮನಸ್ಸಿನ ರೀತಿಗೂ ಪಟ್ಟಣಿಗರ ಮನಸ್ಸಿನ ರೀತಿಗೂ ಒಂದು ಬಗೆಯ ಬದಲಾವಣೆ. ಆ ಬದಲಾವಣೆಯ ಮೂಲಕ ಅವನಲ್ಲಿ ನಮಗೆ ವಿಶೇಷವಾದ ಆಕರ್ಷಣೆಯೇ ಉಂಟಾಯಿತು.

ಮದುವೆಯಾಯಿತು. ಹಿರಿಯರು ಮಂತ್ರಾಕ್ಷತೆಗಳನ್ನು ವಧೂ–ವರರ ತಲೆಯ ಮೇಲೆ ಚೆಲ್ಲಿದರು. ನಾವೆಲ್ಲ ಹುಡುಗರೂ ಕುಂಕುಮ ಹಚ್ಚಿದ ಅಕ್ಕಿ ಕಾಳನ್ನು ಆ ಗಂಡ ಹೆಂಡಿರ ತಲೆಯ ಮೇಲೆ ಹಾಕಿದೆವು. ಪರಸ್ಪರರ ಪಾಣಿಗ್ರಹಣ ವಿಧಿಯು ನೆರವೇರಿತು. ಮುಂದೆ ಹೊಗೆಯಿಂದ ಕಣ್ಣು ನೋಯಿಸಿಕೊಳ್ಳಬೇಕಾದ ಹೋಮ ಹವನಗಳಿಂದ ನಮಗೇನು ಪ್ರಯೋಜನ ? ಅದರ ಕಡೆಗೆ ನಾವು ವಿಶೇಷವಾದ ಲಕ್ಷ್ಯವನ್ನೇ ಕೊಡಲಿಲ್ಲ.

ಐದು ದಿನಗಳ ಮದುವೆ. ದಿನ ದಿನವೂ ಹೊಸ ಹೊಸ ಪಕ್ವಾನ್ನದ ಊಟ. ಕೂಡಿದ ವೈದಿಕ ಬ್ರಾಹ್ಮಣರೆಲ್ಲರೂ ಬಂದ ದಕ್ಷಿಣೆ, "ಇಷ್ಟ ಭೋಜನ"ದಿಂದ ದಿನವೂ ಸಂತೃಪ್ತರಾಗುತ್ತಿದ್ದರು. ಒಂದು ದಿನ ಧಾರವಾಡದಿಂದ ಬಂದ ಗಂಡಿನವರು ಬೀಗರಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದರು. ಅಂದು ನಮ್ಮ ಮನೆಯಿಂದ ಒಂದು ಹಿತ್ತಾಳೆಯ ದೊಡ್ಡ ಕೊಳಗದಪ್ಪಲೆಯನ್ನು ಅಡಿಗೆಗಾಗಿ ತೆಗೆದುಕೊಂಡು ಹೋದರು. ಅವರಲ್ಲಿಯ ಸಾಹಿತ್ಯ ಭಕ್ತರ ಮತ್ತು ಸಂಗೀತದವರ ಮೂಲಕ ನಮ್ಮ ಮನೆಯವರೊಂದಿಗೆ ಅವರು ಹತ್ತಿರದವರಾಗಿದ್ದರು. ಎಂತಲೇ ಆತ್ಮೀಯತೆಯಿಂದಲೇ ಆ ಕೊಳಗದಪ್ಪಲೆಯನ್ನು ತೆಗೆದುಕೊಂಡು ಹೋದರು.

ಮದುವೆಯ ಕಾರ್ಯವು ವೈಭವದಿಂದ ಮುಗಿಯಿತು. ಮದುವೆ ಕಾರ್ಯ ಮುಗಿದ ಮರುದಿನ ಧಾರವಾಡದ ಗಂಡಿನ ಬೀಗರೆಲ್ಲ ತಮ್ಮ ಊರಿಗೆ ಹೊರಟರು. ಅವರು ಹೋಗುವವರೆಗೆ ನಮಗೆ, ನಾವು ಕೊಟ್ಟ ಕೊಳಗದಪ್ಪಲೆಯ ನೆನಪು ಯಾರಿಗೂ ಉಳಿದಿರಲಿಲ್ಲ. ಗಡಿಬಿಡಿಯಲ್ಲಿ ಬೀಗರು ಹೊರಟುಹೋದ ಅರ್ಧ ತಾಸಿನ ಮೇಲೆ ನಮಗದು ಗೊತ್ತಾಯಿತು. ಮದುವೆಯ ಮನೆಯಲ್ಲೆಲ್ಲ ನಮ್ಮ

ಪಾತ್ರೆಯನ್ನು ಹುಡುಕಿದವು. ಸಿಕ್ಕದಾಗಲು ಬೇಗನೆ, ಕದ್ದುಕೊಂಡು ಹೋಗಿರುವ ರೆಂದು ನಿರ್ಣಯಿಸಿ, ದಾರಿಯಲ್ಲಿಯೇ ಹೊರಟ ನಿಬ್ಬಣವನ್ನು ತರುಬಿ, ಅವರ ಸಾಮಾನನ್ನು ತಪಾಸು ಮಾಡಿ, ಅವರು ಒಯ್ದ ಆ ಪಾತ್ರೆಯನ್ನು ಮರಳಿ ತೆಗೆದುಕೊಂಡು ಬರಬೇಕೆಂದು ಹೇಳಿ ಇಬ್ಬರು ಗಟ್ಟಿಮುಟ್ಟಾದ ಆಳುಗಳನ್ನು ನಮ್ಮ ಅಣ್ಣಂದಿರು ಧಾರವಾಡದ ದಾರಿಯಿಂದ ಕಳುಹಿಸಿಕೊಟ್ಟರು. ಆ ಆಳುಗಳು ವೇಗ ಗತಿಯಿಂದ ನಡೆದು, ಆ ಗಾಡಿಗಳು ನಾಲ್ಕೈದು ಮೈಲು ಹೋಗುವುದರಲ್ಲಿಯೇ ಗಾಡಿಗಳನ್ನು ಅಡ್ಡಗಟ್ಟಿ, ತರುಬಿ, "ನಮ್ಮ ಗೌಡರ ಮನೆಯ ಪಾತ್ರೆ ಕಳೆದಿವೆ. ಅವನ್ನು ನೀವೇ ತಂದಿದ್ದೀರಿ. ಸುಮ್ಮನೆ ಒಳ್ಳೇ ಮಾತಿನಿಂದ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ನಾವು ಈ ಗಾಡಿಯಲ್ಲೆಲ್ಲ ಅದನ್ನು ಹುಡುಕಿ ನೋಡುತ್ತೇವೆ" ಎಂದು ಗಟ್ಟಿಯಾಗಿಯೇ ಹೇಳಿದರಂತೆ. ಆಗ ಆ ಬೀಗರಲ್ಲಿ ಗುಣು ಗುಣು ಮಾತುಗಳು ಹೆಚ್ಚಿದವು. ಪಾತ್ರೆಯನ್ನು ತೆಗೆದುಕೊಂಡು ಹೋದುದನ್ನು, ಅದನ್ನು ತಮ್ಮ ಸಾಮಾನುಗಳೊಂದಿಗೆ ಕಟ್ಟಿ ಹಾಕಿದ ಮನುಷ್ಯ ಹೇಳಿದ. ಹಿರಿಯರು ಒಪ್ಪಿದರು. ಚೀಲವನ್ನು ಬಿಚ್ಚಿ ಅದನ್ನು ತೆಗೆದು ನಮ್ಮ ಆಳುಗಳ ಕಡೆಗೆ ಕೊಟ್ಟರಂತೆ. ಊಟದ ಸಮಯವಾದುದರಿಂದ ಆಳುಗಳಿಗೆ ಆ ಬೀಗರೇ ಊಟಕ್ಕೆ ಹಾಕಿದರಂತೆ. ಅಂದೇ ಸಂಜೆ ಕಡೆಗೆ ಆ ಆಳುಗಳು ನಮ್ಮ ಕೊಳಗದಪ್ಪಲಿಯನ್ನು ಹೊತ್ತುಕೊಂಡು ಬಂದು ನಮ್ಮ ಮನೆಯಲ್ಲಿಟ್ಟರು. ಅದು ಬಾರದೇ ಹೋಗಿದ್ದರೆ ಐದು ದಿನದ ಸವಿಯೂಟ ನಮಗೆ ಕಹಿಯಾಗಿ ಪರಿಣಮಿಸುತ್ತಿತ್ತು.

ಒಂದು ವಿಷಯ, ಆಮೇಲೆ ನಮಗೆ ಗೊತ್ತಾಯಿತು. ವತ್ಸಲೆಯನ್ನು ಕೊಟ್ಟ ಮನೆಯ ಯಜಮಾನ ಅಷ್ಟೊಂದು ಸ್ಥಿತಿವಂತನಾಗಿರಲಿಲ್ಲವಂತೆ. ಅಜ್ಞಾನ–ಸಂರಕ್ಷಕನಾದ ಅವನು ತನ್ನ ಮೊಮ್ಮಗನ ಪಾಲಿಗಿದ್ದ ಭೂಮಿ–ಸೀಮೆಗಳೆಲ್ಲ ತನ್ನವೆಂದು ತೋರಿಸಿದ್ದನಂತೆ. ಬ್ಯಾಂಕಿನಲ್ಲಿ ಹಣವಿದ್ದುದನ್ನು ಅವರಿಗೆ ವಿಶ್ವಾಸ ಹುಟ್ಟುವಂತೆ ಹೇಳಿ, ಮಗನಿಗೆ ಸಲ್ಲಬೇಕಾದ ವರದಕ್ಷಿಣೆಯ ಬೆಲೆಯನ್ನು ಹೆಚ್ಚಿಸಿಕೊಂಡಿದ್ದನಂತೆ.

ಆ ವರನೋ ನಾಲ್ಕೈದು ತರಗತಿಗಳನ್ನು ದಾಟಿರಲಿಲ್ಲ. ಅಷ್ಟೊಂದು ಆತನಿಗೆ ವಿದ್ಯೆ. ಆಗ ಧಾರವಾಡದಲ್ಲಿ ರೇಲ್ವೆ ವರ್ಕ್‌ಶಾಪ್ ಇದ್ದಿತು. ಅದರಲ್ಲಿ ಇಂಗ್ಲೀಷ್ ಸ್ವಲ್ಪಮಟ್ಟಿಗೆ ಬಂದ ಯಾರೂ ಲಂಚ ಕೊಟ್ಟರೆ ಅವರ ಲಂಚದ ತಾರತಮ್ಯದಂತೆ ಅವರಿಗೆ ನೌಕರಿಗಳು ದೊರೆಯುತ್ತಿದ್ದವು. ಈ ನಮ್ಮ ಹೊಸ ಅಳಿಯನು ರೇಲ್ವೆ ವರ್ಕಶಾಪಿನಲ್ಲಿ ಇಪ್ಪತ್ತೈದು ರೂ. ಸಂಬಳದ ನೌಕರನಾಗಿದ್ದನಂತೆ, ಈ ಮಾತುಗಳೆಲ್ಲ

ಕ್ರಮವಾಗಿ ತಿಳಿಯುತ್ತಾ ಬಂದಿತು. ನನ್ನ ಜೀವನದಲ್ಲಿ ನಾನು ಕಂಡ ಅತ್ಯಂತ ವೈಭವದ ಮದುವೆಯೆಂದರೆ ನಮ್ಮ ಅಣ್ಣುವಿನ ಮತ್ತು ವತ್ಸಲೆಯ ಮದುವೆಗಳು. ಆದರೆ ಇನೆರಡೂ ಸಂಬಂಧಗಳು ಸುಖವಾಗಲಿಲ್ಲನೆಂಬ ಕಥೆಯನ್ನು ಸಂದರ್ಭ ಬಂದಾಗ ವರಿಸುತ್ತೇನೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560002.

ಪ್ರಕಟಣೆಗಳು

	ಬೆಲೆ
ಕತೆ	
1984 (ಸಂ : ಕಾಳೇಗೌಡ ನಾಗವಾರ)	5—00
1985 (ಸಂ : ಶ್ರೀಕಂಠ ಕೂಡಿಗೆ)	5—00
1986 (ಸಂ : ಸುಧಾಕರ)	5—00
ಕವಿತೆ	
1984 (ಸಂ : ಎಚ್. ಎಸ್. ಶಿವಪ್ರಕಾಶ್)	3—00
1985 (ಸಂ : ವೇಣುಗೋಪಾಲ ಸೊರಬ)	3—00
1986 (ಸಂ : ದೊಡ್ಡರಂಗೇಗೌಡ)	3—00
ಸಾಹಿತ್ಯ ವಿಮರ್ಶೆ	
1984 (ಸಂ : ಎಚ್. ಎಸ್. ರಾಘವೇಂದ್ರರಾವ್)	5—00
1986 (ಸಂ : ಭಗವಾನ್)	5—00
1986 (ಸಂ : ಶಿವರಾಮು/ಕಾಡನಕುಪ್ಪೆ	5—00
ಮಕ್ಕಳ ಸಾಹಿತ್ಯ	
1984 (ಸಂ : ಸಿಸು ಸಂಗಮೇಶ)	3—00
1985 (ಸಂ : ಬಿ. ಎಸ್. ರುಕ್ಕಮ್ಮ)	5—00
1986 (ಸಂ : ಎ. ಕೆ. ರಾಮೇಶ್ವರ)	5—00
ಪ್ರಬಂಧ	
1985 (ಸಂ : ವೀರೇಂದ್ರ ಸಿಂಪಿ)	5—00
1986 (ಸಂ : ಎಚ್ಚೆಸ್ಕೆ)	5—00
ದಶವಾರ್ಷಿಕಗಳು—1974—83	
ಕವಿತೆಗಳು	12—00
Ten Years of Kannada Poetry	10—00
ಪ್ರಬಂಧಗಳು	16—00
ವಿಮರ್ಶೆಗಳು	16—00
ಸಣ್ಣ ಕತೆಗಳು	16—00

ಸೂಚನೆ: ಪುಸ್ತಕ ಮಾರಾಟಗಾರರಿಗೆ ಶೇ. 15 ರಷ್ಟು ರಿಯಾಯಿತಿ ನೀಡಲಾಗುವುದು

ಮತ್ತೆ ಹಿಂದಕ್ಕೆ

● ರಾಮಚಂದ್ರ ದೇವ

ವಾಸ್ತವಮಾರ್ಗದ ಕಥನ ಅಜಮಾಸು ಶತಕದ ಹಿಂದೆ ಸುರುವಾಗಿ ಹೆಗ್ಗ ಯಾದಾಗ ಅದು ಕನ್ನಡದಲ್ಲಿ ಮತ್ತು ಭಾರತದಲ್ಲಿ ಅದು ಮುಟ್ಟಿ ಇದ್ದ ಕಥನ ಪ್ರಾಕಾರದಿಂದ ತನ್ನ ಮುಂದುವರಿಕೆಯನ್ನು ತುಂಡರಿಸಿಕೊಂಡಿತು. ಉದಾಹರಣಗೆ ಕಾರಂತರ ಅಥವಾ ಮಾಸ್ತಿಯವರ ಕಥೆ–ಕಾದಂಬರಿಗಳಿಗೆ ಮತ್ತು ಪಾಶ್ಚಾತ್ಯರ ಕಥೆ–ಕಾದಂಬರಿಗಳಿಗೆ ನಡುವೆ ಇರುವ ಏಕ ಅಂಶಗಳು ಅವರ ಕಥೆ–ಕಾದಂಬರಿಗಳ ಮಧ್ಯೆ ಮತ್ತು ಕೆಂಪು ರಾಮಾಯಣ, ರಾಮಾಶ್ವಮೇಧ, ಪಂಚತಂತ್ರ, ಕಥಾ ಸರಿತ್ಸಾಗರ, ಮಹಾಭಾರತಗಳ ಮಧ್ಯೆ ಇಲ್ಲ. ಈ ಮಾತು ನವ್ಯ ಕಥೆ–ಕಾದಂಬರಿಗಳಿಗೆ ಸಮೇತ ಅನ್ವಯಿಸುತ್ತದೆ. ಇಪ್ಪತ್ತನೆಯ ಶತಮಾನದ ಕಥೆ–ಕಾದಂಬರಿಗಳು ಭಾರತೀಯ ಪ್ರಾಚೀನ ಸಾಹಿತ್ಯದ ಕಥಾ ಪ್ರಾಕಾರದೊಡನೆ ಸಂಬಂಧ ತುಂಡರಿಸಿಕೊಂಡು ಬೆಳೆದಿವೆ.

ಇಲ್ಲಿ ಒಂದೆರಡು ಅಪವಾದಗಳಿವೆ, ಸರಿ. ಕುವೆಂಪುರವರ ಧನ್ವಂತರಿಯ ಚಿಕಿತ್ಸೆ, ಜಿ. ಬಿ. ಜೋಶಿಯವರ ಜಡಭರತನ ಕನಸುಗಳು ಮುಂತಾದ್ದು ಹೆಸರಿಸಬಹುದು. ಇವು ಅಪವಾದ ಮಾತ್ರ. ಆದರೆ ಇಲ್ಲಿ ಲಕ್ಷಿಸುತ್ತಿರುವುದು ಕನ್ನಡ ಕಥಾ ಸಾಹಿತ್ಯದ ಮುಖ್ಯಧಾರೆಯನ್ನಾಗಿ. ಈ ಮುಖ್ಯ ಧಾರೆ ವಾಸ್ತವ ದಾರಿಯ ಕಥಾ ಸಾಹಿತ್ಯವಾಗಿದೆ. ಅಥವಾ ವಾಸ್ತವ ವಿವರ ಧ್ವನಿಶಕ್ತಿ ಪಡೆದುಕೊಂಡಾಗ ಆಗುವ ಸಾಂಕೇತಿಕ ಮಾರ್ಗದ್ದಾಗಿದೆ.

ಇಂತು ಬೆಳೆದ ಕಥೆ–ಕಾದಂಬರಿಗಳ ನಡುವಿನಲ್ಲಿರುವುದು ವ್ಯಕ್ತಿ-ಕೇಂದ್ರಿತ ಮನಸ್ಸು

ಮತ್ತು ವ್ಯಕ್ತಿ ಹಾಗೂ ಅನೇಕರ ನಡುವಣ ವಿಘಟನೆ. ವ್ಯಕ್ತಿ ಮತ್ತು ಸಮುದಾಯದ ನಡುವಿನ ಸಂಘರ್ಷದ ಕೇಂದ್ರದಲ್ಲಿ ಈ ಕಾದಂಬರಿಗಳು ಸುರುವಾಗಿ ಬೆಳೆಯುವುವು- ವ್ಯಕ್ತಿ ವಿಶಿಷ್ಟತೆಗೆ ಇವು ವಿಶೇಷ ಗಮನ ಕೊಡುತ್ತವೆ. ವ್ಯಕ್ತಿ ವಿಶಿಷ್ಟತೆಯನ್ನು ಒಜ್ಜಿಸುವ ಈ ಸಂವೇದನೆ ಪ್ರಾಚೀನ ಸಾಹಿತ್ಯದ ಕಥಾ ಪ್ರಾಕಾರದಿಂದ ದೂರ ಹೋದದ್ದು ಆಶ್ಚರ್ಯವಲ್ಲ.

ಆದರೆ ಇಂದು ನಮ್ಮ ಕಾಲದ ಸಂವೇದನೆ ಭಿನ್ನಿಸಿದೆ. ಇಂದು ಇಲ್ಲಿ ಮನುಷ್ಯನ ಸಮಾಜ ಮಾತ್ರವಲ್ಲದೆ ಪ್ರಾಣಿಗಳ ಸಮಾಜವನ್ನು ಸಮೇತ ನಾವು ಗುರುತಿಸುವೆವು. ಗಿಡಮರಗಳಿಗೆ ಸಮೇತ ಈ ನೆಲದಲ್ಲಿ ಬದುಕುವ ಹಕ್ಕಿದೆ; ಇದು ನಮ್ಮಂತೆಯೇ ಅಂತೇ ಸರಿ ಅವುಗಳದ್ದೂ ಆಗಿದೆ ಎನ್ನುವೆವು.

ಈ ಪರಿಯ ಸಂವೇದನೆಯನ್ನು ಹಿಂದೆ ವ್ಯಕ್ತಿಸಿದ್ದೆಂದರೆ ರಾಮಾಯಣ, ಮಹಾಭಾರತ, ಪಂಚತಂತ್ರ ಮುಂತಾದವು. ಈಗ ನಾವು ಮತ್ತೆ ಹಿಂದಕ್ಕೆ ಹೋಗಿ ಈ ಕಥನ ಪ್ರಾಕಾರಗಳಿಂದ ಕಲಿಯಬೇಕಾಗಿದೆ. ಹಾಗೂ ಅವುಗಳ ಮೂಲಕ ಈಗಿನ ಸಂವೇದನೆಗೆ ಬಾಯಿ ಕೊಡುವ ಹೊಸ ಕಥಾ ಪ್ರಾಕಾರವೊಂದನ್ನು ಸೃಷ್ಟಿಸಬೇಕಾಗಿದೆ. ಮತ್ತು, ಹತ್ತೊಂಬತ್ತನೇ ಶತಮಾನದಲ್ಲಿ ವಾಸ್ತವದಾರಿ ಸುರುವಾದಾಗ ಪ್ರಾಚೀನ ಸಾಹಿತ್ಯದ ಕಥಾ ಪ್ರಾಕಾರದೊಂದಿಗೆ ಕಡಿದುಕೊಂಡ ಸಂಬಂಧವನ್ನು ಮುಂದುವರಿಸಬೇಕಾಗಿದೆ.

ಈ ಸಂವೇದನೆಯನ್ನು ವಾಸ್ತವ/ಸಾಂಕೇತಿಕ ದಾರಿಯ ಕೃತಿಗಳಲ್ಲಿ ವ್ಯಕ್ತಿಸುವುದು ಆಗದು. ಯಾಕೆ ಹೇಳಿದರೆ, ವಾಸ್ತವ ದಾರಿಯ ಕೃತಿಗಳಲ್ಲಿ ಒಂದು ಪ್ರಾಣಿ ಅಥವಾ ಒಂದು ಮರ ಒಂದು ಸಂಗತಿಯಾದೀತು. ಪ್ರಾಚೀನ ಭಾರತೀಯ ಕಥನಗಳಲ್ಲಿ ಒಂದು ಮರವಾಗಲೀ ಒಂದು ಪ್ರಾಣಿಯಾಗಲೀ ಬರಿಯ ಸಂಗತಿ ಅಲ್ಲ. ಅದು ಅದರದ್ದೇ ಪ್ರತ್ಯೇಕ ಅಸ್ತಿತ್ವವಿರುವ ಪ್ರಪಂಚ. ಉದಾಹರಣೆಗೆ ರಾಮಾಯಣದ ಕ್ರೌಂಚಕಾಣೆ. ಅಥವಾ ಮಹಾಭಾರತದ ಅಶ್ವಮೇಧ ಪರ್ವತದಲ್ಲಿ ಅರ್ಧ ಮೈ ಚಿನ್ನಾಗಿ, ಇನ್ನರ್ಧ ಮೈ ಚಿನ್ನವಾಗಬೇಕೆಂದು ಪ್ರಯತ್ನಿಸುವ ಮುಂಗುಸಿ ಕಾಣೆ. ಈ ಪ್ರಾಣಿ ಪ್ರಪಂಚ ಬರಿಯ ಒಂದು ಸಂಗತಿ, ಸಂಕೇತ ಅಥವಾ ಅನ್ಯೋಕ್ತಿಯಾಗಿ ಇಲ್ಲ. ಮನುಷ್ಯ ಪ್ರಪಂಚಕ್ಕಿಂತ ಭಿನ್ನವಾದ ಪ್ರಾಣಿಗಳದ್ದೇ ಪ್ರತ್ಯೇಕವಾದ ಪ್ರಪಂಚವಾಗಿ ಅದು ಇದೆ.

೮

ರಾಘವೇಂದ್ರ ಪಾಟೀಲ ಮತ್ತು ವೈದೇಹಿಯವರ ಕೆಲವು ಕತೆಗಳು, ಸುಮತೀಂದ್ರ ನಾಡಿಗರ ಗಿಳಿ ಮತ್ತು ದುಂಬಿ, ಕೃಷ್ಣರಾಜು ಅವರ ಭೇತಾಳರಾಯು ಮತ್ತು ಇತರ ಕಥೆಗಳು, ಎಂ. ಎಸ್. ಕೆ. ಪ್ರಭು ಅವರ ಕಥೆಗಳು– ಸದರಿ ಲೇಖಕನ ಮೂಗೇಲ ಮತ್ತು ಇತರ ಕಥೆಗಳು– ಇಂತು ಪರಿಕಥನ ಪ್ರಾಕಾರದಲ್ಲಿ ಹಿಂದೆ ಹೋಗಲು ನಡೆಸಿದ ಪ್ರಯತ್ನಗಳಾಗಿವೆ. ಆದರೆ ಇವುಗಳಲ್ಲಿನ ಪ್ರಯೋಗ ಮುಖ್ಯವಾಗಿ ಕಾಲಕ್ಕೆ ಲಗಾವಾಗಿ ಇವೆ. ವಾಸ್ತವ ಅಥವಾ ಸಾಂಕೇತಿಕ ಕೃತಿಗಳಲ್ಲಿ ಕಾಲದ ಬಳಕೆ ಕಾಲಾನುಕ್ರಮಣಿಕವಾಗಿದ್ದರೆ, ಇವುಗಳಲ್ಲಿ ಮಾನಸಿಕ ಅಥವಾ ಕಾಲ್ಪನಿಕ– ಕಾಲ ಮತ್ತು ವಾಸ್ತವಿಕ ಕಾಲಕ್ಕೆ ವ್ಯತ್ಯಾಸವಿಲ್ಲ ಎಂಬ ಪರಿ ಬರೆವಣಿಗೆಯಿರುತ್ತದೆ.

ಗ್ರಾಮುಕಲೋಕದ ಅಂಶವನ್ನು ದಾಟಿ ಈ ಕತೆಗಳು ತಮ್ಮ ಸಂವೇದನೆಯಲ್ಲಿ ಹೆಚ್ಚಿನ ವಿಸ್ತಾರವನ್ನು ಪಡೆಯುವುದು ಅಗತ್ಯವಾಗಿದೆ. ಆದರೆ, ಮತ್ತೆ ಹಿಂದಿನ ಕಥನ ಪ್ರಾಕಾರಗಳಿಗೆ ಹೋಗಬೇಕೆನ್ನುವ ಒಂದು ಚಳವಳಿ ಕನ್ನಡ ಕಥನದಲ್ಲಿ ನಡೆಯುತ್ತಿದೆ ಎಂಬುದನ್ನು ಗುರುತಿಸುವುದು ಮಾತ್ರ ಅಗತ್ಯ. ಫ್ಯಾಂಟಸಿ ಎಂಬ ತಪ್ಪು ಹೆಸರಿನಿಂದ ಕರೆಯಲಾದ ಇವು ಪುರಾಣಗಳು–ಆಧುನಿಕ ಕಾಲದ ನರಕ ಮತ್ತು ಸ್ವರ್ಗಗಳಿಗೆ ತಮ್ಮನ್ನು ತೆರೆದುಕೊಂಡ ಪುರಾಣಗಳು. ಇವನ್ನು ಪುರಾಣ ಸಾಹಿತ್ಯ ಎಂಬ ಹೆಸರಿನಿಂದ ಕರೆಯುವುದೇ ಸೂಕ್ತವಾದದ್ದು.

ಕಥಾ ಸರಿತ್ಸಾಗರ, ಬೇತಾಳ ಕಥೆಗಳು, ಪಂಚತಂತ್ರ ಮೊದಲಾದವು ಸರ್ವೇತ ತಮ್ಮ ಕಾಲದ ಆಗು ಹೋಗುಗಳಿಗೆ ತೆರೆದುಕೊಂಡ ಪುರಾಣಗಳು ಎಂಬುದನ್ನಿಲ್ಲಿ ಲಕ್ಷಿಸಬೇಕು.

೦

ಪಂಜೆಯವರನ್ನು ಮತ್ತು ಮಾಸ್ತಿಯವರನ್ನು ನಾವು ಕನ್ನಡದಲ್ಲಿ ಸಣ್ಣ ಕಥೆಗಳ ಜನಕರೆಂದು ಕರೆಯುವೆವು. ಅವರು ವಾಸ್ತವದಾರಿಯ ಕತೆಗಳನ್ನು ಬರೆಯಲು ಪ್ರಾರಂಭಿಸಿದರು ಎಂಬ ಅರ್ಥದಲ್ಲಿ ಮಾತ್ರ ಇದು ಸರಿ. ಯಾಕೆ ಹೇಳಿದರೆ, ಕನ್ನಡದ ಮೊದಲನೆಯ ಕಥಾಸಂಗ್ರಹ 'ವಡ್ಡಾರಾಧನೆ'. ಸಣ್ಣ ಕಥೆಗಳ ಸಕಲ ಗುಣ ಇರುವ ಸಂಗ್ರಹ ಇದು. ಕನ್ನಡದ ಕೆಲವು ಸರ್ವೋತ್ತಮ ಕಥೆಗಳು ಸಹಾ ಈ ಸಂಗ್ರಹದಲ್ಲಿವೆ.

ಉದಾಹರಣೆಗೆ ವಿದ್ಯುಚ್ಚೋರನೆಂಬ ರಿಸಿಯ ಕತೆ ಕಾಣಿ. ಸುರುನೋಟಕ್ಕೆ ಇದು ಯಮದಂಡನೊಡನೆ ವಿದ್ಯುಚ್ಚೋರನೆಂಬ ರಿಸಿ ತಾನು ಕಟ್ಟಿದ ಪಂಥ ತೀರಿಸುವ

ಕಥೆ. ಆದರೆ ಅದಕ್ಕಿಂತ ಮುಂದೆ ದಾಟಿ ಇದು ಅನೇಕ ಅರ್ಥದ ಪದರಗಳನ್ನು ಕೊಡುವುದು. ಯಾಕೆ ಹೇಳಿದರೆ, ಈ ಕಥೆ ಒಬ್ಬ ವ್ಯಕ್ತಿಯ ಒಂದು ವ್ಯಕ್ತಿತ್ವದಲ್ಲಿ ಅಡಗಿರುವ ಭಿನ್ನ ಭಿನ್ನ ವ್ಯಕ್ತಿತ್ವಗಳ ಬಗ್ಗೆ ಇದೆ. ವಿದ್ಯುಜ್ಚೋರ ಅರಸ, ಕಳ್ಳ, ಸ್ನೇಹಿತ, ಗಂಡ, ತೊನ್ನಿಗ, ವಿಟ, ಋಷಿ– ಈ ಸಕಲ ಏಕಕಾಲಕ್ಕೆ ಆಗಿದ್ದಾನೆ. ಅರಸನಾಗಿದ್ದ ವಿದ್ಯುಜ್ಚೋರ ಕಳ್ಳತನ ಮಾಡಲು ನಿರ್ಧರಿಸಿ ಅದರಂತೆ ವರ್ತಿಸುವನು. ಅವನು ಹಗಲು ತೊನ್ನಿಗನಾದರೆ ರಾತ್ರಿ ಸುಂದರನಾಗಿ ವೇಶ್ಯೆಯರನ್ನು ಭೇಟಿಯಾಗುತ್ತಾನೆ. ಆತ ರಾಜನೂ ಕಳ್ಳನೂ ಏಕಕಾಲಕ್ಕೆ ಆಗಿದ್ದಾನೆ. ಯಾಕೆ ಹೇಳಿದರೆ, ಯಮದಂಡ ಆ ದೇಶ ಬಿಟ್ಟು ಬೇರೆ ದೇಶಕ್ಕೆ ಹೋಗುವುದೇ "–ಎನ್ನರಸ ಕಳ್ಳನಾನುಮಿಂ ಪೊಳಿಲೊಳ್ ತಳಾರಗೆಯ್ವನಿದು ಕಜ್ಜವೊಳ್ಳಿತ್ತಿಂಪೆನ ಗಂಜಿ". ಇದು ವೇಷಾಂತರ ಅಲ್ಲ. ಅರಸನ ಒಂದು ವ್ಯಕ್ತಿತ್ವದಲ್ಲೇ ಹುದುಗಿರುವ ಬೇರೆ ಬೇರೆ ವ್ಯಕ್ತಿತ್ವಗಳ ಕತೆ ಇದು. ವಿದ್ಯುಜ್ಯೋರನಿಗೆ ಶಿಕ್ಷೆ ಕೊಡುವಾಗ ಇದು ಸಬಲ ವ್ಯಕ್ತವಾಗುತ್ತದೆ. ಬಾಯಿ ಬಿಡಿಸಲೆಂದು ಕೊಟ್ಟ ಕಠೋರ ಶಿಕ್ಷೆಯನ್ನು ಒಬ್ಬ ನಿರ್ಮಮ ಭಾವದ ಋಷಿ ಸಹಿಸುವಂತೆ ಆತ ಸಹಿಸುವನು. ಮುಂದೆ, ಪ್ರತಿಮೆ ನಿಂದರ್ದ ದೇವತೆ ಅವನನ್ನು ಹರಿದು ತಿಂದಾಗ ಆದ ನೋವನ್ನು ಆತ ಸಹಿಸುವುದಕ್ಕೂ ಕಳ್ಳನೆಂದು ಕೊಟ್ಟಾಗಿನ ಶಿಕ್ಷೆಯನ್ನು ಸಹಿಸುವುದಕ್ಕೂ ಸಾಮ್ಯವಿದೆ. ಈ ಪರಿ ಋಷಿಯಂತೆ ನಿರ್ಮಮವಾಗಿ ಶಿಕ್ಷೆ ಅನುಭವಿಸುತ್ತಿರುವಾಗ ತಾನು ಕದ್ದಿಲ್ಲವೆಂದು ಸಾಮಾನ್ಯ ಕಳ್ಳನಂತೆ ಸುಳ್ಳನ್ನು ಸಹಾ ಹೇಳುತ್ತಿರುತ್ತಾನೆ. ಇಂತು, ಒಂದು ವ್ಯಕ್ತಿತ್ವ ಮಾನಸಿಕವಾಗಿ ಮತ್ತು ನಿಜಜೀವನವಲ್ಲಿ– ಬೇರೆ ಬೇರೆ ವ್ಯಕ್ತಿತ್ವಗಳಾಗಿ ಒಡೆದಿರುವುದು ಮತ್ತು ಅವುಗಳ ಪರಿಣಾಮಗಳ ಬಗ್ಗೆ ಈ ಕತೆ ಇದೆ.

ಯಮದಂಡನನ್ನು ಸಿಕ್ಕಿಸಿ ಹಾಕಿ ಸೋಲಿಸಲು ವಿದ್ಯುಜ್ಯೋರ ಪ್ರಯತ್ನಿಸಿದರೆ, ಯಮದಂಡ ವಿದ್ಯುಜ್ಯೋರನನ್ನು ಹಿಡಿದು ಶಿಕ್ಷಿಸಲು ಪ್ರಯತ್ನಿಸುವನು. ಇಂತು ಪರಸ್ಪರ ಹಿಡಿಯಲು ಪ್ರಯತ್ನಿಸುವುದು ಸುರುನೋಟಕ್ಕೆ ಕಣ್ಣುಮುಚ್ಚಾಲೆಯಾಟದಂತಿದೆ. ವಿದ್ಯುಜ್ಯೋರನ ವೇಷಾಂತರ ಪ್ರಾರಂಭವಾದದ್ದು ಅವನಿಗೆ ಮತ್ತು ಯಮದಂಡನಿಗೆ ಆಟದ ಸಮಯದಲ್ಲಿ ಆದ ಪ್ರತಿಜ್ಞೆಯ ಬಳಿಕ. ಆದರೆ ಆಟದಂತೆ ಪ್ರಾರಂಭವಾದ ಪಣ ಪರಸ್ಪರರ ಜೀವವನ್ನು ಸಹಾ ಅಪಾಯಕ್ಕೀಡುಮಾಡುತ್ತದೆ. ಜೀವಿಸುವಿಕೆಯ ಪ್ರಕ್ರಿಯೆಯಲ್ಲಿ ಆಟ ಮತ್ತು ಪ್ರಾಣಸಂಕಟಗಳ ವ್ಯತ್ಯಾಸ ಮರೆಯಾಗಿದೆ.

ಒಂದು ವ್ಯಕ್ತಿತ್ವದಲ್ಲಿ ಅಡಗಿರುವ ವಿವಿಧ ವ್ಯಕ್ತಿತ್ವಗಳ ಬಗ್ಗೆ ಶಿವಕೋಟ್ಯಾಚಾರ್ಯ ಲಿಖಿಸುವುದು ವಿದ್ಯುಚ್ಚೋರನೊಬ್ಬನ ಮೂಲಕ ಒಂದೇ ಅಲ್ಲ. ಇಲ್ಲಿ ರಾಣಿ, ಸೂಳೆಯರ ವ್ಯಕ್ತಿತ್ವದಲ್ಲಿ ಸಮೇತ ಅಂತರ್ಗತವಾಗಿರುವ ಇತರ ವ್ಯಕ್ತಿತ್ವಗಳಿವೆ. ಯಾಕೆ ಹೇಳಿದರೆ, "ಅರಸಿಯರ ಸೂಳೆಯರ ಕಣ್ಗಳೊಳ್ ಘಟಿಕಾಂಜನಗಳನಚ್ಚಿ ಪೊಡಸನಿಬರುಂ ತೊನ್ನೆಯಿರರ್ಪನ್ನೆಗಂ" ತೊನ್ನಿಗತನ ರಾಣಿ ಮತ್ತು ಸೂಳೆಯರಲ್ಲಿ ಅಂತರ್ಗತವಾಗಿರುವ ರೂಪ- ಅಂಜನ ಹಾಕಿದಾಗ ಅವರ ಒಳವ್ಯಕ್ತಿತ್ವ ಹೊರಗೆ ಬಂದು, ಪ್ರತಿ ಅಂಜನಕ್ಕೆ ಮತ್ತೆ ಮುಚ್ಚಿಕೊಳ್ಳುತ್ತದೆ. "ಅರಸಿಯರ, ಸೂಳೆಯರ" ಎಂದು ಒಂದೇ ಉಸಿರಲ್ಲಿ ಲಿಖಿಸುವುದು ಸಮೇತ ಈ ಹಿನ್ನೆಲೆಯಲ್ಲಿ ಮುಖ್ಯ.

ಕತೆ ಅತ್ಯುತ್ತಮಕ್ಕೆ ಉಪ್ಪರಿಸುವುದು ಅದು ಅಧಿಕಾರದ ಬಗ್ಗೆ ತಳೆಯುವ ಐರನಿಯ ನೋಟಕೋನದಿಂದಾಗಿ. ಕತೆಯಲ್ಲಿ ಅರಸ ಆಡಳಿತ ನಡೆಸುತ್ತಿರುವವನಲ್ಲ; ಆತ ಕಳ್ಳ– ಬೇಕೆಂದೇ ಕಳ್ಳತನ ಮಾಡಿ ಆಡಳಿತದ ಮತ್ತು ಜನರ ಸುಭದ್ರತೆಗೆ ಧಕ್ಕೆ ತರುವವ. ವಿದ್ಯುಚ್ಚೋರ ಋಷಿ ಪರಲೋಕದ ಶಿಕ್ಷೆಯನ್ನು ಮರ್ತ್ಯಲೋಕದ ಶಿಕ್ಷೆಯ ಜೊತೆ ಹೋಲಿಸುವಾಗ ಅಧಿಕಾರದ ಬಗೆಗಿನ ಈ ಐರನಿ ಉತ್ತುಂಗ ತಲುಪುವುದು. ಹಿಂದೊಮ್ಮೆ ಕೇಳಿದ ನರಕದ ವರ್ಣನೆಯ ನೆನಪು ತನಗೆ ಇಹಲೋಕದ ಶಿಕ್ಷೆಯನ್ನು ಸಹಿಸುವಂತೆ ಮಾಡಿತು ಎಂದು ವಿದ್ಯುಚ್ಚೋರ ಹೇಳುತ್ತಾನೆ. ನರಕಲೋಕದ ಶಿಕ್ಷೆಯೊಡನೆ ಅರಸಕೊಡುವ ಈ ಶಿಕ್ಷೆಯನ್ನು ಹೋಲಿಸುವುದು ಅರಸನ ಶಿಕ್ಷಾ ವಿಧಾನದ ಬಗೆಗಿನ ಕಟು ಟೀಕೆಯಾಗಿದೆ.

ಏಕ ಕಾಲಕ್ಕೆ ರಾಜಕೀಯ ಮತ್ತು ತಾತ್ವಿಕ ಅರ್ಥಗಳಿರುವ ಕೃತಿ ಇದು. ಒಂದು ವ್ಯಕ್ತಿತ್ವದಲ್ಲಿ ಅಂತರ್ಗತವಾಗಿರುವ ಅನೇಕ ವ್ಯಕ್ತಿತ್ವಗಳ ಬಗ್ಗೆ ಲಿಖಿಸುವ ಮುಖೇನ ಮನುಷ್ಯನ ಮನಸ್ಸಿನಲ್ಲಿ ಎಂಥಾ ಪಾತಾಳವಿದೆಯೆಂದು ಶಿವಕೋಟ್ಯಾಚಾರ್ಯ ಕಾಣಿಸುವನು. ಈ ಪಾತಾಳ ಎಂಥದೆಂದರೆ, ಸುಂದರನೇ ತೊನ್ನಿಗನೂ, ಅರಸನೇ ಕಳ್ಳನೂ ಆಗಿದ್ದಾನೆ. ಮತ್ತು, ಅವನೇ ಇವೆಲ್ಲವೂ ಸೇರಿದ ಮತ್ತು ಇವನ್ನು ಮೀರಿದ ಋಷಿಯೂ ಆಗಿದ್ದಾನೆ. ಅಂತೇ ಪರಿ ಅರಸೊತ್ತಿಗೆಗೆ ಸಹಾ ಅರ್ಥವಿಲ್ಲ. ಯಾಕೆ ಹೇಳಿದರೆ, ಆಡಳಿತ ನಡೆಸಬೇಕಾದ ಅರಸ ಆಡಳಿತವನ್ನು ಅರ್ಥಹೀನವಾಗಿಸುವ ಕಳ್ಳತನದಲ್ಲಿ ಸಹಾ ತೊಡಗಿದ್ದಾನೆ.

○

ಮತ್ತೆ ಹಿಂದಕ್ಕೆ ಹೋಗುವ ಈ ಮಾತು ಲಿಖಿಸುವಾಗ ನನ್ನ ಮನಸ್ಸಿನ ತೆರೆಯ ಮೇಲೆ ಇಬ್ಬರು ವ್ಯಕ್ತಿಗಳು ಬರುವರು–

ಅವರಲ್ಲಿ ಒಬ್ಬನು ಜುಟ್ಟು ಬಿಟ್ಟಿರುವವನು. ಹಣೆಗೆ ನಾಮಪ್ರಂಟು. ಕಿವಿಯಲ್ಲಿ ಹತ್ತಿಕಡಕ. ಪಟ್ಟೆ ಮಡಿ ಉಟ್ಟು ಬ್ರಹ್ಮೋಸ್ತ್ರ ಹೊದ್ದಿದ್ದಾನೆ. ಇವತ್ತು ಶನಿವಾರ ಷಷ್ಠಿ ಸಹಾ ಹೌದು. ಅವನ ಹೆಂಡತಿ ಮುಟ್ಟಾದ್ದರಿಂದ ಅಡಿಗೆಯನ್ನು ಸರ್ವೋತ್ರ ಇವನು ಮಾಡಿದ್ದಾನೆ. ಮುಟ್ಟಾದ್ದರಿಂದ ತಿಥಿಯೊಂದರಲ್ಲಿ ಸಿಕ್ಕಬೇಕಾದ ಕ್ಷಣಿ ತಪ್ಪಿ ಹೋಗಿದೆ. ದಕ್ಷಿಣೆ ಹತ್ತು ರೂಪಾಯಿಯಾದರೂ ಸಿಕ್ಕುತ್ತಿತ್ತು; ಜೋಯಿಸ ನಂತೆ ಘನಪಾಠಿಯಾದರೆ ಜಾಸ್ತಿ ದುಡ್ಡು ಸಿಕ್ಕೀತು ಎಂದು ಯೋಚಿಸುವನು. ಅಷ್ಟು ಹೊತ್ತಿಗೆ ಪಾಲದ ಹತ್ತಿರ ಒಂದು ಹಾವು ಕಂಡಿತು. ಭಯವಾಗಿ ಮೃತ್ಯುಂಜಯ ಜಪ ಹೇಳಿದನು. ಮಂತ್ರ ಸಿಲ್ಲಿಸುವಾಗ ಆಚೆ ಗೋಡೆಯಲ್ಲಿ ಒಬ್ಬ ಹೈದ ಕಂಡ. ಅವನ ಹೆಸರು ಪುತ್ತೀರ್ಯ. ಅವನು ಹರಿಜನ. ಇವನಿಗೇನಾದರೂ ಮಂತ್ರ ಕೇಳಿಸಿತೋ ಏನೋ ಎಂದು ಮಂತ್ರಪಠನವನ್ನು ಕುಣಿ ಕುಣಿ ಮಾಡಿ ಮನೆಗೆ ಬಂದನು. ಬಂದು, ಮಿಂದು, ಪಟ್ಟೆ ಉಟ್ಟು, ಸಂಧ್ಯಾವಂದನೆ ಮಾಡಿ, ಅನ್ನ ಬಿಸಿ ಮಾಡಿ, ತಾನು ಉಂಡು, ಹೆಂಡತಿಗೆ ಬಡಿಸಿ, ಮುಸುರೆ ಒತ್ತರೆ ಮಾಡಿ, ಸಂತಾನ ಪ್ರಾಪ್ತಿಗಾಗಿ ನವಗ್ರಹ ಹೋಮ, ಪೂಜೆ ಮಾಡಿಸ ಬೇಕೆಂದುಕೊಂಡು, ಚಾಪೆ ಹಾಸಿ ಮಲಗಿ, ಶ್ರೀ ರಾಮಂ ಹನುಮಂತಂ ದುಸ್ವಪ್ನಂ ತಸ್ಯನಶ್ಯತಿ ಹೇಳಿ ನಿದ್ದೆ ಹೋದನು. ಮುಟ್ಟಾಗಿದ್ದ ಅವನ ಹೆಂಡತಿ ಜಗಲಿಯ ಇನ್ನೊಂದು ತುದಿಯಲ್ಲಿ ಆವಳಿಗೆ ಕೊಟ್ಟಿದ್ದ ಕಂಬಳಿಯ ಮೇಲೆ ಮಲಗಿ ನಿದ್ದೆ ಹೋದಳು.

ಮತ್ತೆ ಹಿಂದಕ್ಕೆ ಹೋಗುವುದೆಂದರೆ ಇವನತ್ತ ಹೋಗುವುದಲ್ಲ. ಯಾಕೆ ಹೇಳಿದರೆ, ಮೇಲೆ ಉದ್ದೇಶಿಸಿ ಹೇಳಿದ ಭಾರತದ ಪರಂಪರೆಯುವ ಈತ ಇಲ್ಲ ಈತ ಆ ಪರಂಪರೆಯು ಹೆಣ. ಇವನು ದಯೆಗೆ ಮತ್ತು ಸುಧಾರಣೆಗೆ ಅರ್ಹ.

ಇನ್ನೊಬ್ಬನಿರುವನು. ಇವನು ಮೇಲೆ ಹೇಳಿದವನ ತದ್ವಿರುದ್ಧವನು. ಜಪತಪಾದಿಗಳಿಂದ ಅವನು ಖತಿಗೊಂಡಿರುವನು. ಸಿಟ್ಟಿಗೆ ಅವನು ಬೀಡಿ ಸಿಗರೇಟು ಸೇದುವನು. ಹೆಂಡ ಕುಡಿಯುವನು. ಇಂಗ್ಲಿಷರು ಮತ್ತೆ ಬಂದರೆ ಮಾತ್ರ ಈ ದೇಶ ಸುಧಾರಿಸೀತು ಎನ್ನುವನು. ಇಂಗ್ಲೀಷ್ ಮಾತಾಡುವನು. ಬುದ್ಧಿವಂತನಾದರೆ ಒಂದು ಪಿ.ಎಚ್.ಡಿ. ಮಾಡಿ ಅಮೆರಿಕಾಕ್ಕೆ ಹೋಗಿ ಅಮೆರಿಕಾದವರಂತೆ ಜೀವನ ಮಾಡಿಕೊಂಡು ಪೋರ್ ಬ್ಲಡಿ ಇಂಡಿಯನ್ಸ್ ಎಂದು ಮಾತಾಡುವನು ಇಲ್ಲೇ ಇರುವವನಾದರೆ ನಮ್ಮ ಜನಕ್ಕೆ ಬುದ್ಧಿ ಸಾಲದಯ್ಯ ಎಂದು ಗೊಣಗುವನು.

ಬ್ರಿಟಿಷರು ಬಿಟ್ಟು ಹೋದ ಪಳೆಯುಳಿಕೆಯಾದ ಇವನು ಸಹಾ ಆದರ್ಶ ಅಲ್ಲ. ಇವನೂ ಜೀವ ಇಲ್ಲದ ಜನ. ಇವನಿಗೆ ಸಮೇತ ದಯೆ, ಸುಧಾರಣೆ ಬೇಕಾಗಿದೆ.

ಭಾರತದ ಉತ್ತಮ ಪರಂಪರೆಯ ಮೊದಲ ಪ್ರತಿನಿಧಿಯೆಂದರೆ ಯುಧಿಷ್ಠಿರ. ಆರ್. ಸಿ. ಜೆಹ್ನರ್‌ನ ಮಾತುಗಳನ್ನನುಸರಿಸಿ ಲಿಖಿಸುವುದಾದರೆ, ಈತ ನಮ್ಮ ಸಾಹಿತ್ಯದ ಸುವುವಿನ ಮುಕ್ತ ಮನಸ್ಸಿನ ವ್ಯಕ್ತಿ. ಕ್ಷತ್ರಿಯ ಧರ್ಮದ ಪ್ರಕಾರ ನಡೆಯುತ್ತಾ ಅದು ತನ್ನ ಅಂತಃಸ್ಸಾಕ್ಷಿಗೆ ವಿರುದ್ಧವಾದದ್ದನ್ನು ಮಾಡುವಂತೆ ಬಲಾತ್ಕರಿಸಿದಾಗ ಆತ ಆ ಧರ್ಮವನ್ನು ಖಂಡಿಸುತ್ತಾನೆ. ಅರಸನಾಗಿದ್ದರೆ ಸಹಾ ಅರಸತ್ವದ ಬಗ್ಗೆ ಅನುಮಾನವಿದೆ ಅವನಿಗೆ. ಅಖೇರಿಗೆ ಅದನ್ನು ತ್ಯಜಿಸಿ ನಾರು ಮಡಿಯುಟ್ಟು ಒಂದು ನಿಷ್ಠ ನಾಯಿಯೊಂದಿಗೆ ಆತ ತನ್ನ ಅಂತಿಮ ಪಯಣವನ್ನು ಪಯಣಿಸುವನು. ದ್ವೈತ ವನಕ್ಕೆ ಬೆಂಕಿ ಹಿಡಿದಾಗ ಪಶುಪಕ್ಷಿಗಳು ತಮ್ಮನ್ನು ಉಳಿಸುವಂತೆ ಬೇಡಿಕೊಂಡ ಹಾಗೆ ಕನಸಾಗುತ್ತದೆ ಅವನಿಗೆ. ಸಾಮಾನ್ಯ ಅರಸು ಕುಮಾರನೊಬ್ಬ ಮುಕ್ತ ಮನಸ್ಸಿನ ವ್ಯಕ್ತಿಯಾಗಿ ಬೆಳೆಯುವುದೇ ಯುಧಿಷ್ಠಿರನ ಬೆಳವಣಿಗೆ.

ಭಾರತದ ಅತ್ಯುತ್ತಮ ಪರಂಪರೆ ಹೇಳಿದರೆ ಯುಧಿಷ್ಠಿರನ ಪರಂಪರೆ. ಬುದ್ಧ, ಮಹಾವೀರ, ಗಾಂಧಿ, ಅಲ್ಲಮ, ಬಸವ, ಅಕ್ಕ– ಇವರು ಸಕಲ ಯುಧಿಷ್ಠಿರನ ಪರಂಪರೆಯವರು.

ದೃಷ್ಟಿಕೋನ

● ಎಂ. ಎಸ್. ಶ್ರೀರಾಮ್

ಚಟ್ಟಿನವಿಸ್ ಮಂಗಳಮೂರ್ತಿ ತನ್ನ ಮನೆಯ ಬಳಿಯಿರುವ ಸಂಜೆಯೂ ಕೆಲಸ ಮಾಡುವ ಏಕೈಕ ಬ್ಯಾಂಕಿಗೆ ಹಣ ತೆಗೆಯಲೆಂದು ಹೋಗುತ್ತಾನೆ. ಆಗಲೇ ಅವನಿಗೆ ಆ ತೀವ್ರ ಕಂಗಳ ಜೋಡಿ ಕಂಡುಬರುತ್ತವೆ. ಬ್ಯಾಂಕಿನಲ್ಲಿ ಹಣ ತೆಗೆಯಲೆಂದು ಚೆಕ್ ಕೊಟ್ಟಾಗ ಮತ್ತೊಮ್ಮೆ ನೋಡುತ್ತಾನೆ. ತನ್ನ ದೇವರನ್ನೇ ಬಗೆದು ನೋಡುವಂತಹ ಕಂಗಳು. ಚಟ್ಟಿನವಿಸ್ ಮಂಗಳಮೂರ್ತಿಗೆ ಕಿರಿ ಕಿರಿಯಾಗುತ್ತದೆ. ಬರೀ ಒಂದು ದೃಷ್ಟಿಯಲ್ಲಿ ಇಂಥ ತೀವ್ರತೆ, ಭಯಾನಕತೆ ಇರಬಹುದೆಂದು ಅವನಿಗೆ ತಿಳಿದಿಲ್ಲ. ಹಣ ಎಣಿಸುತ್ತಾ ಬ್ಯಾಂಕಿನಿಂದ ಹೊರಬೀಳುವಾಗ ಬೇಡ ಬೇಡವೆಂದೆನಿಸಿದರೂ ಮತ್ತೊಮ್ಮೆ ತಿರುಗಿ ನೋಡುತ್ತಾನೆ. ಅದೇ ಕಂದು ಕಂಗಳು ಅವನನ್ನು ಬಗೆದು ನೋಡುತ್ತವೆ. ಚಟ್ಟಿನವಿಸ್ ಮಂಗಳಮೂರ್ತಿ ಬೆವರುತ್ತಾನೆ. ಧಾರಾಕಾರವಾಗಿ ಹರಿವ ಬೆವರು ಅವನ ಭಯದ ಫಲವೋ ಹೊರಗಿನ ವಾತಾವರಣದಲ್ಲಿನ ತೀವ್ರ ತಾಪದ ಫಲವೋ ಅರ್ಥವಾಗುವುದಿಲ್ಲ. ಒಮ್ಮೊಮ್ಮೆ ಹೀಗೇ ಯಾವುದೂ ಅರ್ಥವಾಗುವುದಿಲ್ಲ.

ಬ್ಯಾಂಕಿನಿಂದ ಹೊರಬಂದವನು ಮತ್ತೆ ಒಳಹೋಗುತ್ತಾನೆ. ಪಾಸ್ ಬುಕ್ ತರುವುದನ್ನಾತ ಮರೆತಿದ್ದಾನೆ– ಅಥವಾ ಆ ಕಣ್ಣುಗಳ ನೆನಪಿನಲ್ಲಿ ಅದು ಮರೆತುಹೋಗಿದೆ. ಆ ಕಂಗಳನ್ನು ಮತ್ತೊಮ್ಮೆ ಪರೀಕ್ಷಿಸಿ ನೋಡಲು ಅದು ಕಾರಣವೂ ಇದ್ದೀತು. ಮತ್ತೆ ಅದೇ ಕಣ್ಣುಗಳ ಭೇಟಿಯಾಗುತ್ತದೆ. ಆ ವ್ಯಕ್ತಿ ಕಿರುನಗೆ ನಕ್ಕು ಚಟ್ಟಿನವಿಸ್ ಮಂಗಳಮೂರ್ತಿಯ ಪಾಸ್ ಬುಕ್ ಹಿಂದಿರುಗಿಸುತ್ತಾನೆ. ಚಟ್ಟಿನವಿಸ್ ಮಂಗಳಮೂರ್ತಿಗೆ ಆ ಕಂಗಳು ಏಕೆ ಸೂಜಿಗಲ್ಲಿನಂತೆ ಸೆಳೆಯುತ್ತವೆ

ಎಂದು ಅರ್ಥವಾಗುವುದಿಲ್ಲ. ತನ್ನ ಯಾವುದೋ ಚರಿತ್ರೆಯನ್ನು ಬಗೆದುತೆಗೆವಂತೆ ಅವು ತನ್ನನ್ನು ದಿಟ್ಟಿಸುತ್ತವೆ. ಅವುಗಳು ಎಷ್ಟು ಭಯಾನಕವಾಗಿದ್ದರೂ ಅವುಗಳ ಬಳಿಗೆ ಹೋಗಲು ತಾನೇಕೆ ಮತ್ತೆ ಮತ್ತೆ ಪ್ರಯತ್ನಿಸುತ್ತಾನೆ ? ಹಂಬಲಿಸುತ್ತಾನೆ ? ಒಮ್ಮೊಮ್ಮೆ ಹೀಗೇ ಯಾವುದೂ ಅರ್ಥವಾಗುವುದಿಲ್ಲ.

ಮಂಗಳಮೂರ್ತಿ ಆ ಕಂಗಳ ಬಗೆಗೇ ಯೋಚಿಸುತ್ತಾ ಮನೆಯ ಬಳಿ ಬಂದಾಗ ತಾನು ನಿತ್ಯ ನೋಡುತ್ತಿದ್ದ ವಯೋವೃದ್ಧ ಹೆಂಗಸು, ಅವಳ ಕೈ ಹಿಡಿದು ನಡೆವ ಬುದ್ಧಿ ಮಾಂದ್ಯ ಹುಡುಗನ ಅದೇ ದೃಶ್ಯ ಮತ್ತೊಮ್ಮೆ ಮಂಗಳಮೂರ್ತಿಯ ಕಂಗಳಿಗೆ ಗೋಚರಿಸುತ್ತದೆ. ಹೌದು ಅವರ ಬಗ್ಗೆ ತಾನು ಬಹಳ ಆಲೋಚಿಸಿದ್ದುಂಟು. ಅವರುಗಳು ಒಬ್ಬರಿಗೊಬ್ಬರು ಅನಿವಾರ್ಯವೆಂಬಂತೆ ಬದುಕುತ್ತಿದ್ದಿರಬಹುದು. ಹೆಣ್ಣು ಅಜ್ಜಿ, ಹುಡಂಗ ಅವಳ ಮೊಮ್ಮಗ ಎಂದು ಅವನು ಊಹಿಸಿದ್ದುಂಟು. ಅಕಸ್ಮಾತ್ ಆ ಮುದುಕಿ ತೀರಿಕೊಂಡರೆ ? ಬುದ್ಧಿಮಾಂದ್ಯ ಹುಡುಗನಿಗೆ ಜತೆ ಯಾರು ? ಅಥವಾ ಹುಡುಗನೇ ತೀರಿಕೊಂಡರೆ ? ಅಜ್ಜಿ ಒಂಟಿಯಾದಾಳೇ ? ಅಜ್ಜಿ ಸಂಜೆಯ ವಾಯುವಿಹಾರವನ್ನು ನಿಲ್ಲಿಸಿಯಾಳೇ ? ಆರು ವರ್ಷಗಳಿಂದ ಚಿಟ್ನಿವಿಸ್ ಮಂಗಳಮೂರ್ತಿ ಈ ವಿಚಿತ್ರ ಜೋಡಿಯನ್ನು ನೋಡುತ್ತಲೇ ಇದ್ದಾನೆ. ಪ್ರತಿದಿನವೂ ಆರು ಘಂಟೆಗೆ ಆ ಜೋಡಿ ಕ್ರಮತಪ್ಪದೇ ಅಲ್ಲಿಯೇ ಹೋಗುತ್ತದೆ– ಮಂಗಳಮೂರ್ತಿ ಅಲ್ಲಿ ನಿಂತು ಅವರನ್ನು ನೋಡುವ ಕ್ರಮ ತಪ್ಪಿಸಿದರೂ ಅವರುಗಳು ಮಾತ್ರ ಕ್ರಮ ತಪ್ಪಿಸಿಲ್ಲ. ಆದರೆ ಆ ಜೋಡಿಯಲ್ಲೊಂದು ಜೀವಿ ಇಲ್ಲವಾದರೆ ಏನಾದೀತೆಂಬ ಮಂಗಳಮೂರ್ತಿಯ ಪ್ರಶ್ನೆಗೆ ಇನ್ನೂ ಉತ್ತರ ದೊರೆತಿಲ್ಲ. ಒಮ್ಮೊಮ್ಮೆ ಹೀಗೇ ಯಾವುದೂ ಅರ್ಥವಾಗುವುದಿಲ್ಲ.

ವಯೋವೃದ್ಧಳಾದ ಅಜ್ಜಿಯೇ ಮೊದಲು ಸಾಯಬಹುದು. ಹುಡುಗ ಬುದ್ಧಿಮಾಂದ್ಯನಾಗಿದ್ದರೂ ಆರೋಗ್ಯವಾಗಿಯೇ ಇದ್ದಾನೆ. ಆದರೂ ಆತ ಒಂಟಿಯಾಗಿ ಬೀದಿಗಳಲ್ಲಿ ಓಡಾಡಲಾರ. ಅಥವಾ ಅವನ ಮನೆಯವರು ಅದಕ್ಕೆ ಒಪ್ಪದಿರಲೂ ಬಹುದು. ಹುಡುಗ ಬಾರದ ದಿನ ಅಜ್ಜಿ ಸತ್ತಳೆಂದು ಭಾವಿಸಬಹುದೇ ? ದಿನವೂ ಏನನ್ನೋ ನಿರೀಕ್ಷಿಸುವಂತೆ ಮಂಗಳಮೂರ್ತಿ ಗೇಟಿನ ಬಳಿಯೇ ನಿಲ್ಲುತ್ತಾನೆ. ದಿನವೂ ಅವನ ನಿರೀಕ್ಷೆ ಹುಸಿಯಾಗುವಂತೆ ಆ ಜೋಡಿ ಖಚಿತವಾಗಿ ಬಂದೇ ತೀರುತ್ತದೆ. ಚಿಟ್ನಿವಿಸ್ ಮಂಗಳಮೂರ್ತಿಗೆ ಅಂತರ್ಯದಲ್ಲೇ ತನ್ನ ಭಾವನೆಗಳಿಗೆ ವಾಸ್ತವದ ರೂಪ ದೊರೆಯಲೆಂಬ ಹಂಬಲ. ಈ ಉದಾಹರಿತ ದಿನವಲ್ಲೂ ಅವರ

ಬ್ಬರೂ ಬಂದ ಹಾಗೆ ಮಂಗಳಮೂರ್ತಿಗೆ ಭಾಸವಾಗುತ್ತದೆ. ಅವನಿಗೆ ನಿರಾಶೆಯಾಗುತ್ತದೆ. ಅವರನ್ನೇ ದಿಟ್ಟಿಸಿನೋಡುತ್ತಾನೆ– ಈಗವನಿಗೆ ಆಶ್ಚರ್ಯವಾಗುತ್ತದೆ. ನಿರಾಶೆ ಇನ್ನೂ ತೀವ್ರವಾಗುತ್ತದೆ– ಏಕೆಂದರೆ ವಾಸ್ತವವಾಗಿ ಕಣ್ಣೆದುರಿಗೆ ಹಾಯ್ದು ಹೋಗುತ್ತಿರುವುದು ಮುದುಕಿಯೊಬ್ಬಳೇ. ಹುಡುಗ ಇಲ್ಲ. ರಸ್ತೆಯಂಚಿನಲ್ಲಿ ಬಂದಾಗ ಕಂಡದ್ದು ಯಾರು ? ಅದೊಂದು ಮಿಥ್ಯೆಯೇ ? ಅಥವಾ ದಿನವೂ ಆ ಜೋಡಿಯನ್ನು ನೋಡಿ, ನೋಡಿ ಬರಲೇ ಬೇಕೆಂಬ ಖಚಿತ ಅಭಿಪ್ರಾಯದಲ್ಲಿ ನಿಂತಿದ್ದರಿಂದ ಅವನೂ ಬಂದಿರಬೇಕೆಂದು ಊಹಿಸಿದೆನೇ ? ಇದೇಕೆ ಹೀಗಾಯ್ತು. ತನ್ನ ನಿರೀಕ್ಷೆಗೆ ಸಂಪೂರ್ಣ ವ್ಯತಿರಿಕ್ತನಾಗಿ ಇದೇನು ? ಇದೊಂದು ಕೇವಲ ಆಕಸ್ಮಿಕವಿದ್ದಿರಬಹುದು– ಒಮ್ಮೊಮ್ಮೆ ಹೀಗೇ ಯಾವುದೂ ಅರ್ಥವಾಗುವುದಿಲ್ಲ.

ಮುದುಕಿಯ ಬರದಿರುವಿಕೆ ನಿರೀಕ್ಷಿಸಿದ್ದವನಿಗೆ ಹುಡುಗನ ಬರದಿರುವಿಕೆ ಅರಗಿಸಿಕೊಳ್ಳಲಾಗಿಲ್ಲವೇ ? ಚಿಟ್ನವಿಸ್ ಮಂಗಳಮೂರ್ತಿ ಹುಡುಗನ ಕಂಗಳನ್ನು ಕಷ್ಟಪಟ್ಟು ನೆನಪು ಮಾಡಿಕೊಳ್ಳುತ್ತಾನೆ. ಇದ್ದಕ್ಕಿದ್ದಂತೆ ಅವನಿಗೆ ಹೊಳೆಯುತ್ತದೆ– ಬ್ಯಾಂಕಿನಲ್ಲಿ ನೋಡಿದ್ದು ಆ ಹುಡುಗನ ಕಂದುಗಂಗಳನ್ನೇ ! ಚಿಟ್ನವಿಸ್ ಮಂಗಳಮೂರ್ತಿಗೆ ಒಂದು ರೀತಿಯ ಭಯವಾಗುತ್ತದೆ. ಟಿ. ವಿ. ಯ ಮುಂದೆ ಕುಳಿತಾಗ ಕಾಣೆಯಾದವನ ಬಗೆಗಿನ ಪ್ರಕಟಣೆಯಲ್ಲಿ ಮತ್ತೆ ಅದೇ ಹುಡುಗನ ಮುಖ. ಇದೇನೂ ವಿಚಿತ್ರ ಎನಿಸುತ್ತದೆ. ಒಮ್ಮೊಮ್ಮೆ ಹೀಗೇ ಯಾವುದೂ ಅರ್ಥವಾಗುವುದಿಲ್ಲ.

ಹುಡುಗನಿಗೇನಾಯಿತು. ? ಬದುಕಿರಬಹುದೇ ? ಅಥವಾ ಇಲ್ಲದಿರಲೂ ಬಹುದು ನಾವುಗಳೆಷ್ಟಾದರೂ ಮನುಷ್ಯರು. ಹುಡುಗನೂ ಅಷ್ಟೇ. ಯಾರೂ ಕಾಲಾತೀತರಾಗಲು ಮರಣಾತೀತರಾಗಲು ಸಾಧ್ಯವಿಲ್ಲವಲ್ಲ ! ಆದರೆ ಮುದುಕಿ ಹುಡುಗನಿಲ್ಲದೆಯೇ ಮಾಮೂಲಾಗಿ ಓಡಾಡಿಕೊಂಡಿದ್ದಾಳೆ. ಅವಳು ಹಾಗಾದರೆ ಆ ಹುಡುಗನ ಮೇಲೆ ಆಧಾರಿತವಾಗಿರಲಿಲ್ಲ– ಹುಡುಗನೂ ಮುದುಕಿಯ ಸಹಾಯವಿಲ್ಲದೇ ಬೇರೆಲ್ಲೋ ಬದುಕಿರಬಹುದು. ಹೌದು– ಎಲ್ಲ ರೀತಿಯ ಸಾಧ್ಯತೆಗಳೂ ಇವೆ. ಮುದುಕಿ ಹುಡುಗ ಎರಡು ಪಾತ್ರಗಳೂ ತನ್ನ ಕನಸಿನ ಮಿಥ್ಯೆಯೂ ಇರಬಹುದು. ಆದರೆ ಈ ಆರು ವರ್ಷಗಳ ಕಾಲದಲ್ಲಿ ಆ ಪಾತ್ರಗಳ ಬಗೆಗೆ ಯೋಚಿಸಿದಾಗ ತನಗೆ ಕಂಡ ಸಾಧ್ಯತೆ ಒಂದೇ ಒಂದು. ಏಕೆ ಹೀಗೆ ? ಮಿಕ್ಕ ಸಾಧ್ಯತೆಗಳು ತನಗೇಕೆ ಗೋಚರಿಸಲಿಲ್ಲ– ಒಮ್ಮೊಮ್ಮೆ ಹೀಗೇ ಯಾವುದೂ ಅರ್ಥವಾಗುವುದಿಲ್ಲ.

ಚಟ್ಟಿನವಿಸ್ ಮಂಗಳಮೂರ್ತಿ ಕನ್ನಡಿಯ ಮುಂದೆ ನಿಲ್ಲುತ್ತಾನೆ. ಹುಡುಗನ ಚಿತ್ರವನ್ನು ಇನ್ನೊಮ್ಮೆ ಚೆನ್ನಾಗಿ ನೆನಪು ಮಾಡಿಕೊಂಡು ಕನ್ನಡಿಯತ್ತ ನೋಡಿದಾಗ ಆಶ್ಚರ್ಯವಾಗುತ್ತದೆ. ಕನ್ನಡಿಯಲ್ಲಿ ಕಂಡದ್ದೂ ಅದೇ ಹುಡುಗನ ಚಿತ್ರ ...ಇದು ತನ್ನ ಪೂರ್ವಾಗ್ರಹದ ಫಲವಿರಬಹುದು. ಆದರೂ ಅದೇ ತೀವ್ರ ಕಂದುಗಂಗಳು ಇವರಲ್ಲೆಲ್ಲಾ ಯಾವುದು ಸತ್ಯ, ಯಾವುದು ಮಿಥ್ಯೆ ತಿಳಿಯುವುದಿಲ್ಲ. ಕನ್ನಡಿಯೊಳಗಿನ ಪ್ರತಿಬಿಂಬ ಸತ್ಯವೇ ಅಥವಾ ಈಚೆ ಬದಿಯಲ್ಲಿರುವ ತಾನು ಸತ್ಯವೇ ? ಅಥವಾ ತಾನು ಸಹ ಬೇರೊಬ್ಬರ ಆಲೋಚನೆಗಳಲ್ಲಿನ ಪಾತ್ರಧಾರಿಯೇ ? ಶ್ರೀರಾಮ್ ಎಂಬ ಕಥೆಗಾರನ ಆಲೋಚನೆ ಏಕಿರಬಾರದು ? ಚಟ್ಟನವಿಸ್ ಮಂಗಳಮೂರ್ತಿ ಮತ್ತೊಮ್ಮೆ ಕಣ್ಣುಜ್ಜಿ ನೋಡುತ್ತಾನೆ– ಅದೇ ರೀತಿಯ ಕಂಗಳು ತಾನು ಈಚೆಗೆ ಓದಿದ ಅಂಧಲೇಖಕ ಬೊರೇಸ್‌ನನ್ನೊಳಗೊಂಡು ಅನೇಕ ಜನರಿಗೆ ಅನೇಕ ಪಾತ್ರಧಾರಿಗಳಿಗೆ ಇರಬಹುದಾದ ಸಾಧ್ಯತೆ ಕಂಡುಬರುತ್ತದೆ. ಎಲ್ಲವೂ ಸ್ವಲ್ಪ ಅಸ್ಪಷ್ಟವಾಗಿದ್ದರೂ ಅವನಿಗೆ ಈ ಬಾರಿ ಭೀತಿ ಉಂಟಾಗುವುದಿಲ್ಲ ಆದರೂ ಒಮ್ಮೊಮ್ಮೆ ಹೀಗೇ ಯಾವುದೂ ಅರ್ಥವಾಗುವುದಿಲ್ಲ.

ಕೆ. ಜಿ. ನಾಗರಾಜಪ್ಪನವರ 'ಮರುಚಿಂತನೆ'

ಒಂದು ಸಹಮತದ ನೋಟ.

● ಎಸ್. ನಟರಾಜ ಬೂದಾಳು

ಖಚಾಖಂಡಿತವಾದ ನಿಲುವುಗಳು ಮತ್ತು ಆಳವಾದ ಅಧ್ಯಯನದಿಂದೊಡ ಗೂಡಿದ ಪ್ರೊ. ಕೆ. ಜಿ. ನಾಗರಾಜಪ್ಪನವರ ಮರುಚಿಂತನೆ ಸಾಹಿತ್ಯಾಧ್ಯಯನದ ಹೊಸ ಹಾದಿಯೊಂದನ್ನು ತೆರೆದಿದೆ. ಸಾಹಿತ್ಯ ಮತ್ತು ಮತಧರ್ಮಗಳ ಸಂಬಂಧವನ್ನು ಕುರಿತಾದ ಒಟ್ಟು ಆರು ಪ್ರಬಂಧಗಳ ಈ ಸಂಗ್ರಹ 'ಕನಕದಾಸರ ಕೀರ್ತನೆಗಳು' ಎಂಬ ಲೇಖನವೊಂದನ್ನು ಬಿಟ್ಟರೆ ಉಳಿದ ಲೇಖನಗಳಲ್ಲೆಲ್ಲ ವೀರಶೈವ ಸಾಹಿತ್ಯದ ವಸ್ತುನಿಷ್ಠ ವಿಶ್ಲೇಷಣೆ ಇದೆ. ಜೊತೆಗೇ ಶೂದ್ರ ಸಂಸ್ಕೃತಿ ಅತ್ಯಂತ ಬಲಹೀನ ಸ್ಥಿತಿಯಲ್ಲೂ ವೈದಿಕ ಸಂಸ್ಕೃತಿಯೊಡನೆ ತನ್ನ ಹೆಜ್ಜೆ ಗುರುತುಗಳನ್ನು ಉಳಿಸಿಕೊಂಡು ಬಂದಿರುವ ಬಗ್ಗೆ ಬೆರಗುಗೊಳಿಸುವ ವಿಚಾರಗಳ ಅಧ್ಯಯನವೂ ಇದೆ. ಉದ್ದಕ್ಕೂ ಶೂದ್ರ ಸಂಸ್ಕೃತಿ ಹೇಗೆ ವೈದಿಕರಿಂದ, ಜೈನರಿಂದ, ವೀರಶೈವರಿಂದ ಜರಿಯಲ್ಪಟ್ಟಿತು ಎಂಬುದನ್ನು ವಿವರವಾಗಿ ಚರ್ಚಿಸಿದ್ದಾರೆ. ಕನ್ನಡದಲ್ಲಿ ಕಾವ್ಯ ಮತ್ತು ಜನಸಾಮಾನ್ಯರ ನಡುವೆ ಇಂದಿನವರೆಗೂ ಉಳಿದುಕೊಂಡು ಬಂದಿರುವ ಕಂದಕದ ಸ್ಪಷ್ಟ ಕಾರಣಗಳನ್ನು ಹುಡುಕಿದ್ದಾರೆ.

'ಕಾವ್ಯ ಹೊಸದೃಷ್ಟಿ' ಲೇಖನದಲ್ಲಿ ಮುಖ್ಯವಾಗಿ ಕನ್ನಡದಲ್ಲಿ ಕಾವ್ಯ (ಹಳಗನ್ನಡ ಮತ್ತು ನಡುಗನ್ನಡದಲ್ಲಿ) ಕೇವಲ ಧರ್ಮದ ಮುಖವಾಣಿಯಾದದ್ದು, ಮತನಿಷ್ಠೆಯೇ ಮುಖ್ಯವಾಗಿ ಗ್ರಂಥ ರಚನೆಯಾದದ್ದು, ವಿವರವಾಗಿ ಚರ್ಚಿತವಾಗಿದೆ. ಅತ್ಯಂತ ಬಲಿಷ್ಟವಾಗಿದ್ದ ವೈದಿಕ ಧರ್ಮದೊಡನೆ ಪೈಪೋಟಿ ಎದುರಿಸಬೇಕಾಗಿ ಬಂದ ಜೈನ ಮತ್ತು ವೀರಶೈವ ಧರ್ಮಗಳು ಮತಾಂತರಕ್ಕೆ ವಿಪುಲ ಅವಕಾಶ

ಗಳನ್ನು ಹೊಂದಿದ್ದರೂ ಮತ್ತವೇ ವರ್ಣವ್ಯವಸ್ಥೆಯನ್ನು ಸೂಕ್ತ ಬದಲಾವಣೆಗ ಳೊಂದಿಗೆ ಉಳಿಸಿಕೊಂಡೇ ಬಂದದ್ದು ಘೋರ ದುರಂತವೆಂದು ಗುರುತಿಸಲಾಗಿದೆ.

"ಜೈನಕವಿಗಳು ಪುಣ್ಯಪ್ರಾಪ್ತಿಗೆ, ವೀರಶೈವ ಕವಿಗಳು ಶಿವಲೋಕ ಸಾಧನೆಗೆ, ವೈದಿಕ ಕವಿಗಳು ಯಜ್ಞಫಲ ಪ್ರಾಪ್ತಿಗೆ ಕಾವ್ಯಗಳನ್ನು ರಚಿಸಿ ತಮ್ಮ ತಮ್ಮ ಪಂಥದ ಜನರನ್ನು ಬದುಕಿಸಿಕೊಂಡರು. ತೀರ್ಥಂಕರರಲ್ಲಿ ನೇಮಿನಾಥ, ಶರಣರಲ್ಲಿ ಬಸವಣ್ಣ, ವೈದಿಕರಲ್ಲಿ ಕೃಷ್ಣ- ಇವರೇ ಕನ್ನಡ ಸಾಹಿತ್ಯದ ಕೇಂದ್ರಬಿಂದು ವಾಗಿ ಕನ್ನಡ ಕವಿಗಳು ರಾಸಲೀಲೆ ನಡೆಸಿದರು" ಎನ್ನುತ್ತಾರೆ. ಅಲ್ಲದೆ "ಜೈನ ಮತ್ತು ವೀರಶೈವರಲ್ಲಿ ಅನ್ಯಮತ ನಿಂದೆಗೇ ಕಾವ್ಯಗಳು ರಚನೆಯಾದವು. ಆದರೆ ವೈದಿಕರು ಅನ್ಯಮತ ಖಂಡನೆಗೆಂದೇ ಕನ್ನಡದಲ್ಲಿ ಕಾವ್ಯ ರಚಿಸದೆ, ಸ್ವಮತ ಪ್ರ ಚಾರಕ್ಕೆ ಮಾತ್ರ ಕಾವ್ಯವನ್ನು ಮಾಧ್ಯಮವಾಗಿ ಬಳಸಿರುವುದು ಕಂಡುಬರುತ್ತದೆ" ಎನ್ನುವಲ್ಲಿ ಕೃಷ್ಣ-ರಾಮರನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ/ಪುನರ್ರಚಿ ತವಾದ ಕಾವ್ಯಗಳಲ್ಲಿ ಪರೋಕ್ಷವಾಗಿ ಶೈವ ನಿಂದೆ ಇದ್ದೇ ಇರುವುದನ್ನು ಗುರುತಿ ಸಬಹುದು.

ಮತಾಂತರೋತ್ತರ ಪರಿಣಾಮಗಳನ್ನು ಗುರ್ತಿಸುತ್ತಾ "ವೈದಿಕ ಮತದಿಂದ ಜೈನ ಮತಕ್ಕೆ ಮತಾಂತರವಾದ ಜೈನರ ವೈದಿಕ ಪ್ರಜ್ಞೆ, ವೈದಿಕ ಮತದಿಂದ ವೀರ ಶೈವ ಮತಕ್ಕೆ ಮತಾಂತರವಾದ ವೀರಶೈವರ ವೈದಿಕ ಪ್ರಜ್ಞೆ ತಮ್ಮ ಮೂಲ ಸಂಸ್ಕಾರವಾದ ವೈದಿಕ ಪ್ರಜ್ಞೆಯೊಂದಿಗೆ ತಮ್ಮನ್ನು ತಾವು ಅನ್ಯ ಮತಗಳಿಗೆ ಮತಾಂತರವಾದ ನಂತರವೂ ಕಂಡುಕೊಂಡದ್ದು ಉಚ್ಚ ವರ್ಗದ ಸಮಷ್ಟಿ ವೈದಿಕ ಪ್ರಜ್ಞೆಯಾಗಿ, ಇಡೀ ಕನ್ನಡ ಸಾಹಿತ್ಯದ ಪ್ರೇರಣೆಯ ಹಿನ್ನೆಲೆಯ ಶಕ್ತಿಯಾಗಿ ನಿಂತು ಕೆಳವರ್ಗದವರ ಸಂಸ್ಕೃತಿಯನ್ನು ತೀವ್ರವಾಗಿ ಖಂಡಿಸಿರುವುದು, ಮುಂದೆ ಎಂದೆಂದೂ ತುಂಬಲಾರದ ಕಂದರವನ್ನು ಕಾವ್ಯ ಮತ್ತು ಸಾಮಾನ್ಯ ಜನರ ನಡುವೆ ಸೃಷ್ಟಿಸಿತು." ಎನ್ನುತ್ತಾರೆ. ಬಹುಶಃ ಅಂದು ಉಂಟಾದ ಕಂದರ ಇಂದೂ ಅಷ್ಟೇ ವಿಶಾಲವಾಗಿ- ಅಂದರೆ ನವ್ಯದವರೆಗೂ ಉಳಿದೇ ಇದೆ ಎನ್ನಿಸುತ್ತದೆ. ದಲಿತ ಬಂಡಾಯ ಕಾವ್ಯದ ಧೋರಣೆ ಮಾತ್ರ ಈ ಕಂದರ ಕಿರಿದಾಗಿಸುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸು ಕಾಣಲಾರಂಭಿಸಿದೆ.

ಉಚ್ಚ ವರ್ಗದಿಂದ ಮತಾಂತರಗೊಂಡವರು ಅರ್ಹಂತರೂ ಜಂಗಮರೂ ಆಗಿ ಧಾ ರ್ಮಿಕ ನಾಯಕರೂ, ಭಾಷ್ಯಕಾರರೂ ಮತ್ತು ಒಡೆಯರೂ ಆದರು. ಕೆಳವರ್ಗ

ಹಿಂದೆ ಮತಾಂತರಗೊಂಡವರು ಭಕ್ತರೂ ಧರ್ಮನಿಷ್ಠರೂ ಆದರು. ಈ ಎರಡೂ ವರ್ಗಕ್ಕೆ ಸೇರದ ಬಹು ಸಂಖ್ಯಾತ ಮಂದಿ ವ್ಯವಸ್ಥೆಯನ್ನು ಒಪ್ಪಿ, ವರ್ಣಧರ್ಮದ ಶೂದ್ರರ ಗುಂಪಾಗಿ ನಾಲಗೆ ಇಲ್ಲದ ದುಡಿವ ಯಂತ್ರಗಳಾದರು. ಧ್ವನಿ ಇಲ್ಲದ ಇವರಿಗೆ ಕಾವ್ಯದಲ್ಲಿ ಪ್ರಾತಿನಿಧ್ಯವಿಲ್ಲದೇ ಹೋದದ್ದು ಮತ್ತೆ ಅದೇ ಬುದ್ಧಿಜೀವಿಗಳ ನಾಲಗೆ ಕಸರತ್ತಿಗೆ ಎದುರಾಳಿ ಇಲ್ಲದ ಅಖಾಡವಾಗಿ ತೀರಾ ಇತ್ತೀಚಿನವರೆಗೂ ಅನುಕೂಲಕರವಾಗೇ ಇತ್ತು.

ಹನ್ನೆರಡನೆಯ ಶತಮಾನ ಕನ್ನಡ ಕಾವ್ಯ ಪ್ರಪಂಚದಲ್ಲಿ ಹೊಸ ಅಲೆಯನ್ನು ಕಂಡದ್ದು ವಚನ ಸಾಹಿತ್ಯದಿಂದ. ವಚನ ಸ್ವರೂಪದಲ್ಲಿ ವಚನವೇ ಬೇರೆ ವಚನ ರಚನೆಯೇ ಬೇರೆ ಎಂದು ಸ್ಪಷ್ಟವಾಗಿ ಗುರ್ತಿಸುವ ನಾಗರಾಜಪ್ಪನವರು "ವಚನವೆಂದರೆ ಶಿವವಚನ, ಗುರುವಚನ ಮತ್ತು ಪುರಾತನರ ವಚನಮಾರ್ಗದಲ್ಲಿ ದೀಕ್ಷಾಬದ್ಧನಾದ ಶರಣ, ಸಾಧನೆಯಿಂದ ಅನುಭಾವಿಯಾಗುವುದು. ಅದು ಸ್ವಯಮಾನುಭವ, ಸಹಜ ಸಮಾಧಿ ತನ್ನಲ್ಲಿಯೇ ಇದ್ದುದನ್ನು ಸಾಧಿಸುವುದು. ವಚನ ನಿರ್ವಚನವಾಗುವುದು, ಶಬ್ದ ನಿಶ್ಶಬ್ದವಾಗುವುದು ವಚನದ ಸ್ಥಿತಿ. ಆದರೆ ವಚನ ರಚನೆಯಾದರೋ ಮಾತಿನಮಾಲೆ, ಶಬ್ದ ಸೋಪಾನ, ವಾಣಿಯ ಹಂಗು" ಎಂದು ವಚನಗಳ ಮೂಲಕವೇ ಸ್ಪಷ್ಟ ಪಡಿಸುತ್ತಾರೆ. ವಚನ ರಚನಕಾರರು ಬೋಧಕರು, ಅನುಭಾವಿಗಳಲ್ಲ. ಅವರು ಲಿಂಗಸಾಧಕರು ಅವರದ್ದು ಕಾವ್ಯಸಾಧನೆ. ಆದರೆ [illegible] ಜಂಗಮ ಸಾಧಕರು ಅನುಭಾವಿಗಳು ಅವರದ್ದು ಕಾವ್ಯ ಸಾಧನೆಗಿಂತ ಬೇರೆಯದೇ ಆದ ಶಬ್ದ–ನಿಶ್ಶಬ್ದವಾಗುವ ವಚನ–ನಿರ್ವಚನವಾಗುವ ಸಾಧನೆ.

ವಚನ ರಚನಕಾರರ ಸಂಪ್ರದಾಯವೇ ವೀರಶೈವ ಕಾವ್ಯ ರಚನೆಯ ಮಾರ್ಗ ಹಿಡಿದು, ವಚನಕಾರರ ಮುಕ್ತ ಚಿಂತನ, ಅನುಭಾವದ ವಿವಿಧ ಸ್ತರದ ಬದುಕು ಮುಂತಾದ ವಿಚಾರಗಳಿಗೆ ತೆರೆ ಎಳೆದು, ವಚನಕಾರರ ಐತಿಹಾಸಿಕ ಬದುಕೇ ಪುರಾಣದ ಸ್ವರೂಪ ಪಡೆದುಕೊಂಡು ವೀರಶೈವ ಪುರೋಹಿತ ವರ್ಗದ ಪಾಂಡಿತ್ಯ ಪ್ರತಿಭೆಗೆ ತನ್ನನ್ನು ತಾನು ಅರ್ಪಿಸಿಕೊಂಡು ದುರಂತಕ್ಕೆಡೆಯಾಯಿತು.

ತದನಂತರದ ವೀರಶೈವ ಪುರೋಹಿತ ವರ್ಗದ ಮೂಲ ಸಂಸ್ಕೃತ ವ್ಯಾಮೋಹ, ಒಂದು ರೀತಿಯಲ್ಲಿ ವೈದಿಕ ಸಂಸ್ಕೃತಿಯ ಶ್ರೇಷ್ಠತೆಯನ್ನು ಒಪ್ಪಿಕೊಳ್ಳುವಲ್ಲಿ ಪರ್ಯವಸಾನವಾದರೆ, ವೈದಿಕರಿಗೆ ವರ್ಣವ್ಯವಸ್ಥೆಯನ್ನು ಬಿಗಿಗೊಳಿಸಿಕೊಳ್ಳಲು ಅನಿವಾರ್ಯವೆನಿಸಿದ ಕನ್ನಡದ ಬಳಕೆಯಿಂದ ಅವರು ಯಶಸ್ವಿಯಾದರು. ಸಾಹಿತ್ಯ

ದಲ್ಲಿ ಸ್ಥಾಯಿಯಾದದ್ದು ಬ್ರಾಹ್ಮಣ–ಹೊಲೆಯ ಈ ಎರಡು ಧೃವಗಳ ಅಂತರದ ಬದುಕು ಬದಲಾದ ಸ್ವರೂಪಗಳೊಡನೆ.

ಸಂಗ್ರಹದ ಎರಡನೆಯ ಲೇಖನದಲ್ಲಿ ಅಲ್ಲಮನ "ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯ." ಈ ವಚನದ ಅರ್ಥವಿವರಣೆ ನೀಡಿದ್ದಾರೆ.

ವಚನಕಾರರ ಕಾಲದ ಕಲ್ಪನೆ, ಗುರುಶಿಷ್ಯ ಸಂಬಂಧ ವಿದ್ಯೆಕಲಿಸುವ ರೀತಿ ಈ ಹಿನ್ನೆಲೆಯಲ್ಲಿ ವಚನವನ್ನು ಅರ್ಥೈಸಲಾಗಿದೆ. ಯುಗಗಳು ಆತ್ಮೋನ್ನತಿಯ ಹಂತ ಗಳಾಗಿ, ಕಡಿಮೆಯಾಗುವ ಶಿಕ್ಷೆ ಆತ್ಮೋನ್ನತಿಗನುಗುಣವಾಗಿ ಗಳಿಸಿದ ಸಿದ್ಧಿಯ ಸಂಕೇತವಾಗಿ, ಗುರುಶಿಷ್ಯರಿಬ್ಬರೂ ಚಲನಶೀಲರಾಗಿ ಗುರುವೇ ಶಿಷ್ಯನ ಅರಿವಿನಲ್ಲಿ ಅಂತರ್ಗತನಾಗುವ, ಪರಮಾತ್ಮನನ್ನು ಸಾಧಿಸಿ ಕಾಲಾತೀತರಾಗುವ ಶಿವನ ಅಪೂರ್ವ ವಾದ ಕಾಲದ ಕಟ್ಟಳೆ ಅಲ್ಲಮನನ್ನು ಬೆರಗುಗೊಳಿಸುತ್ತದೆ.

"ಹಚ್ಚಿದ ಸಿಡಿಮದ್ದನ್ನು ಮಡಿಲಲ್ಲಿ ಕಟ್ಟಿಕೊಂಡೇ ಮತ್ತೊಂದು ಗೂಡಾರಕ್ಕೆ ಸಿಡಿಮದ್ದು ಹಚ್ಚುವ ಸಾಹಸವೇ ಶರಣರ ಚಳುವಳಿ. ಶಿವಭಕ್ತರ ಕುಲ ಒಂದೇ ಎಂದು ಸಾರಿದರೂ ಸಮಾನತೆಯ ಮೇಲೆ ವೀರಶೈವ ಸಮಾಜ ರೂಪುಗೊಳ್ಳ ಲಿಲ್ಲ." ಶ್ರೀ ನಾಗರಾಜಪ್ಪನವರ ಈ ಮಾತುಗಳು ಇಂದಿನ ಕೆಲವರನ್ನು ಸಿಟ್ಟಿಗೆಬ್ಬಿ ಸಬಹುದೆನಿಸಿದರೂ, "ಶರಣರು–ಏಕಮುಖ ಚಿಂತಕರು" ಎಂಬ ಈ ಲೇಖನದಲ್ಲಿ, ಬಹುಶಃ ಕೇವಲ ಆದರ್ಶವಾದದ (ಭಾವನೆಗಳ) ಪಾತಳಿಯ ಮೇಲೆ ಕಟ್ಟಿದ ಯಾವ ಧರ್ಮವೂ ಅಪರಿಪೂರ್ಣವಾದುದು. ಅದಕ್ಕೆ ವೀರಶೈವಧರ್ಮವೇನೂ ಹೊರತಲ್ಲವೆಂಬುದನ್ನು ಸಾಧಾರವಾಗಿ ತರ್ಕಿಸಿ ಸಿದ್ಧಮಾಡಿದ್ದಾರೆ.

"ಆತ್ಮದ ವಿಷಯದಲ್ಲಿ, ವೀರಶೈವಧರ್ಮ, ಸಮಾನತೆಯನ್ನು ಸಾರಿತೇ ಹೊರತು ಸಾಮಾಜಿಕ ಸಮಾನತೆಗೆ ಎಂದೂ ಹೋರಾಡಲಿಲ್ಲ. ಕೆಳ ವರ್ಗದವರ ಸಂಸ್ಕೃತಿ ಯನ್ನು ನಾಶಮಾಡುವುದಕ್ಕಾಗಿಯೇ ಅವರ ದೇವರನ್ನು ಹಾದರ, ಪರಿವಾರ ದೇವತೆ ಎಂದು ಕರೆದು, ಏಕ ದೇವತೋಪಾಸನೆಯನ್ನು ಸಾಮಾನ್ಯರಿಗೆ ಬೋಧಿ ಸಿತು. ಇದು ರಾಜಕೀಯವಾಗಿ ಒಬ್ಬ ಸರ್ವಾಧಿಕಾರಿಯನ್ನು ನಾಯಕನನ್ನಾಗಿ ಒಪ್ಪಿಕೊಳ್ಳುವಂತೆ ಒತ್ತಾಯಿಸುವ ತತ್ವಕ್ಕಿಂತ ಭಿನ್ನವಾದುದಲ್ಲ. ಜಾತ್ಯತೀತ

ಸಂಘಟನೆಯ ಹೆಸರಿನಲ್ಲಿ ಜಾತಿ ಜಾತಿಗಳನ್ನು ಒಡೆದು ದುರ್ಬಲಗೊಳಿಸಿ ಮುಂದೆಂದೂ ಕೆಳವರ್ಗದವರು ತಲೆ ಎತ್ತದಂತೆ ಮಾಡಿ, ಪುರೋಹಿತ ರಹಿತ ಕೆಳವರ್ಗದ ಸಮಾಜವನ್ನು ಜಂಗಮ ಪುರೋಹಿತ ಸರ್ವಾಧಿಕಾರದ ಒಡೆತನಕ್ಕೆ ಒಳಗುಮಾಡಿತು."

"ಪಂಚಾಚಾರ್ಯರು ಬಸವ ಜಯಂತಿಯನ್ನೂ, ಬಸವ ಸಂಘದವರು ಮಾದಾರ ಚನ್ನಯ್ಯ, ದೇವರ ದಾಸಿಮಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಸಿದ್ಧರಾಮ ಜಯಂತಿಯನ್ನು ಆಚರಿಸುವುದಿಲ್ಲ. ಆಯಾ ಜಾತಿಯ ಮುಖ್ಯಸ್ಥ ಶರಣರ ಜಯಂತಿಯನ್ನು ಆಚರಿಸಲು ಕಾರಣವೇನು ? ಎಲ್ಲ ಶರಣರ ದೋಷವನ್ನು ತಿದ್ದಿ ದೊಡ್ಡ ಅನುಭಾವಿಯಾಗಿದ್ದ ಅಲ್ಲಮನ ಜಯಂತಿಯನ್ನು ಎಷ್ಟು ಸಂಗಡದವರು ಆಚರಿಸುತ್ತಾರೆ ? ಇತರ ಶರಣರಂತೆ ಅಲ್ಲಮನ ಶತಮಾನೋತ್ಸವವನ್ನು ಸರ್ವ ಸಂಗಡವರು ಅದ್ದೂರಿಯಿಂದ ಆಚರಿಸದಿರಲು ಕಾರಣವೇನು ? ಸ್ಥಾವರ ವಿರೋಧಿ ಶರಣರ ಸ್ಥಾವರಗಳು ಅಸ್ತಿತ್ವಕ್ಕೆ ಬಂದು, ಅಲ್ಲಮನ ಹೆಸರಿನ ಸ್ಥಾವರಗಳು ಅಸ್ತಿತ್ವಕ್ಕೆ ಬರದಿರಲು ಕಾರಣವೇನು ?" ಮುಂತಾದ ಅತ್ಯಂತ ಸೂಕ್ಷ್ಮವಾದ ಅಷ್ಟೇ ಬಹುಮುಖ್ಯವಾದ ಪ್ರಶ್ನೆಗಳನ್ನೂ ಶ್ರೀ ನಾಗರಾಜಪ್ಪನವರು ಎತ್ತುತ್ತಾರೆ. ವಿಪರ್ಯಾಸವೆಂದರೆ ಇಂತಹ ವಸ್ತು ನಿಷ್ಠ ಪ್ರಶ್ನೆಗಳಿಗೆ ಆರೋಗ್ಯಮನಸ್ಸಿನ ಉತ್ತರವಾಗಲೀ ಪ್ರತಿಕ್ರಿಯೆಗಳಾಗಲೀ ವಿದ್ವಾಂಸ-ಸಂಶೋಧಕ ವರ್ಗದಿಂದ ನಿರೀಕ್ಷಿತ ಮಟ್ಟದಲ್ಲಿ ಬಾರದಿರುವುದು. ಬದಲಾಗಿ ಮತ್ತೆ ಅದೇ ಏಕಮುಖ ಚಿಂತನೆಯ ಹೊಂಡು ನಾದವೇ ಮುಂದುವರಿಯುತ್ತಲಿದೆ.

"ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ"ಎಂಬ ಲೇಖನದಲ್ಲಿ ಶ್ರೀ ನಾಗರಾಜಪ್ಪನವರು 'ಜಾತಿಯ ತಿರುಗಣೆಯ ಮೇಲೆ ನಿಂತು ರೂಪಾಂತರಗೊಂಡ ಧರ್ಮಗಳಲ್ಲಿ ಒಂದಾದ ವೀರಶೈವ ಧರ್ಮ' ಅತ್ತ ವೈದಿಕಧರ್ಮದೊಡನೆ ಸ್ಪರ್ಧಿಸುತ್ತ, ಇತ್ತ ವರ್ಣ ವ್ಯವಸ್ಥೆಯನ್ನು ಉಳಿಸಿಕೊಂಡೇ ಇರುವ ವ್ಯವಸ್ಥೆಯೊಡನೆ ಬೆಳೆದು ಬರಲು ನಡೆಸಿದ ಯತ್ನ, ತಾಕಲಾಟಗಳು, ಆಗಿನ ಕಾಲದ ರಾಜಕೀಯ ಸ್ಥಿತಿಗತಿಗಳು ಮತ್ತು ಕೆಳವರ್ಗದವರ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸುತ್ತಾರೆ.

"ಕನ್ನಡ ನಾಡಿನ ಸಾಹಿತ್ಯ ಚರಿತ್ರೆ ಎಂದರೆ ಧರ್ಮದ ಚರಿತ್ರೆಯೇ ಆಗಿದೆ. ಆಯಾ ಕಾಲದ ಧರ್ಮದ ಅಧ್ಯಯನ ನಡೆಸದೆ, ಆಯಾ ಕಾಲದ ಕನ್ನಡ ಸಾಹಿತ್ಯದ ಅರಿವು ಅಸಾಧ್ಯ. ಧರ್ಮದ ಮತ್ತು ಸಾಹಿತ್ಯ ವ್ಯಾಖ್ಯಾನ ಎರಡಕ್ಕೂ ಮೂಲ ಆಧಾರ

ವಾಗಿ ಒಂದೇ ಗ್ರಂಥರಾಶಿ ಪರಿಗಣಿಸಲ್ಪಟ್ಟಿರುವುದು ಒಂದು ವಿಪರ್ಯಾಸವೇ ಸರಿ." ಹೀಗೆ ಧರ್ಮದ ಅಧ್ಯಯನದ ಅನಿವಾರ್ಯತೆಯನ್ನು ಸಾಹಿತ್ಯಾಧ್ಯಯನ ಒಪ್ಪಿಕೊಳ್ಳುವಂತಾಗಿದೆ. ಎಲ್ಲ ಪಂಥಗಳನ್ನೂ ವಿರೋಧಿಸಿದ ವಚನಗಳಿಂದ ಧ್ವನಿಸಿದ ಖಚಿತ ಸಿದ್ಧಾಂತವಾದರೂ ಯಾವುದು ? ವೀರಶೈವ ಧರ್ಮದ ಜೀವ, ದೇವ ಮತ್ತು ಜಗತ್ತಿನ ಪರಿಕಲ್ಪನೆ ಯಾವುದು ? ಅದು ಹೇಗೆ ಅನ್ಯ ಪಂಥಗಳಿಂದ ಭಿನ್ನ ? ಅದರ ಮೌಲ್ಯಗಳೇನು ? ಮುಂತಾದ ಬಹುಮುಖ್ಯ ಪ್ರಶ್ನೆಗಳನ್ನೆತ್ತುತ್ತಾರೆ. ಹಾಗೇ ವಚನ ಸಾಹಿತ್ಯದ ಉಗಮದ ಬಗ್ಗೆ ವಿವರಿಸುವಾಗ, "ವೀರಶೈವ ಸಾಹಿತ್ಯ ಕೆಳವರ್ಗದಿಂದ ಪಡೆದುಕೊಂಡಿದ್ದನ್ನು ವೈದಿಕ ಧರ್ಮದಲ್ಲಿ ಕಸಿಮಾಡಿಕೊಂಡಿತು." ಎನ್ನುತ್ತಾರೆ.

ಕೆಳವರ್ಗದಿಂದ ಮತಾಂತರಗೊಂಡವರು ಸ್ಥೂಲವಾಗಿ ವಚನಕಾರರಾದರೆ ಮೇಲ್ವರ್ಗದಿಂದ ಮತಾಂತರಗೊಂಡವರು ವಚನ ರಚನಕಾರರಾಗಿದ್ದಾರೆ. ಕೆಳವರ್ಗದಿಂದ ಬಂದ ವಚನಕಾರರ ಚಿಂತನೆಯ ಧಾಟಿ ಮತ್ತು ಅಭಿವ್ಯಕ್ತಿಯಲ್ಲಿ ಭಿನ್ನತೆಯನ್ನು ಮೇಲ್ನೋಟಕ್ಕೆ ಗುರುತಿಸಬಹುದು ಮತ್ತು ಉಚ್ಚವರ್ಗದವರೊಂದಿಗೆ ಸ್ಪರ್ಧಿಸುವ ಆಂತರ್ಯವನ್ನೂ ಶ್ರೀ ನಾಗರಾಜಪ್ಪನವರು ಗುರ್ತಿಸಿದ್ದಾರೆ.

ಬಹುಮುಖ್ಯವಾದ ಸಂಶೋಧನೆಯ ವಿಷಯವೆಂದರೆ ವಚನ ರಚನೆಗೆ ಅದರ ಹಿಂದಿದ್ದ ಕಾವ್ಯಗಳ ಪ್ರಭಾವ. ಉದಾಹರಣೆಗಾಗಿ ನಯಸೇನನ ಧರ್ಮಾಮೃತದಿಂದ ಅನೇಕ ಪದ್ಯಗಳನ್ನು ವಚನಗಳೊಡನೆ ತೌಲನಿಕ ಅಧ್ಯಯನಕ್ಕೊಳಪಡಿಸಲಾಗಿದೆ. "ವೀರಶೈವ ಧರ್ಮ, ವೈದಿಕರ ಆತ್ಮ , ಅವೈದಿಕ ನಾಸ್ತಿಕ ಮತಗಳ ದೇಹ ಮತ್ತು ತಾಂತ್ರಿಕ ಮತಗಳ ಬದುಕಿನ ಗುರಿಯನ್ನು ಅಂತರ್ಗತಗೊಳಿಸಿಕೊಂಡು ರೂಪುಗೊಂಡಿರುವುದು ಸ್ಪಷ್ಟವಾಗಿದೆ. ಅಲ್ಲದೆ ಜೈನ ಮತ್ತು ವೀರಶೈವ ಧರ್ಮಗಳು ಬ್ರಾಹ್ಮಣರನ್ನು ತೀವ್ರವಾಗಿ ವಿರೋಧಿಸಿದರೂ, ಬ್ರಾಹ್ಮಣತ್ವವನ್ನು ಸಾಧಿಸುವುದನ್ನೇ ಪರಮಗುರಿಯಾಗಿ ಹೊಂದಿದ್ದವು. ಅಂದರೆ ಯಾವುದೇ ಸುಧಾರಣೆ ಅಥವಾ ಕ್ರಾಂತಿಯ ಮತ ಅಸ್ತಿತ್ವಕ್ಕೆ ಬಂದರೂ, ವರ್ಣಾಶ್ರಮ ವ್ಯವಸ್ಥೆಯ ಮಾಡೆಲನ್ನೇ ಅನುಕರಣ ಮಾಡಿ ಹೊಸತತ್ವಗಳನ್ನು ಬೋಧಿಸಿದುದು ಒಂದು ದುರಂತ" ಎನ್ನುತ್ತಾರೆ. ವಚನ ಸಾಹಿತ್ಯದ ಮೇಲೆ ಆಗ ಅಸ್ತಿತ್ವದಲ್ಲಿದ್ದ ತಾಂತ್ರಿಕ ಪಂಥದ ಮಾತುಗಳೂ ಕೂಡಾ ಬೀರಿರುವ ಪ್ರಭಾವ ಗಮನಾರ್ಹವಾಗಿದೆ. ತಾಂತ್ರಿಕ ಪಂಥಗಳ ಬೆಡಗಿನ ವಚನಗಳು ಇಂದಿಗೂ ಸಂಶೋಧನಕಾರರಿಗೆ ಕಬ್ಬಿಣದ

ಕಡಲೆಯಾಗಿದ್ದರೂ ಸಾಧಕರ ನಡುವೆ ಸಂವಹನದ ಹೆದ್ದಾರಿಗಳಾಗಿದ್ದುವೆಂಬುದಕ್ಕೆ ಪುರಾವೆಗಳನ್ನೊದಗಿಸಲಾಗಿದೆ. ಜೊತೆಗೇ ವಚನ ಸಾಹಿತ್ಯದ ಮೇಲೆ ಅವುಗಳ [illegible]ನ್ನೂ ಸ್ಪಷ್ಟವಾಗಿ ಗುರುತಿಸಲಾಗಿದೆ. ತದನಂತರ ವೀರಶೈವ ಧರ್ಮ ರಾಜಕೀಯ ಸಂಘಟನೆಗೆ ತೊಡಗಿದ್ದು ಗುಪ್ತ ಸಮಾಜದವರಿಗೆ ವಾಮತಂತ್ರವಾದಿ ಬೇಸರ ತರಿಸಿದ್ದು ಮತ್ತೆ ಅವರು ಗುಪ್ತ ಸಮಾಜಕ್ಕೇ ಹಿಂತಿರುಗಿದ್ದು ವಚನ ಸ್ವರೂಪ ಮಾಯವಾದುದಕ್ಕೆ ಕಾರಣವೆಂದು ಗುರುತಿಸುತ್ತಾರೆ.

"ವೀರಶೈವ ಧರ್ಮ ಲಿಂಗದೀಕ್ಷೆಯ ಮೇಲೆ ನಿಂತಿದೆ. ಲಿಂಗದೀಕ್ಷೆಯಾದವರು ಭಕ್ತರು, ಅಜಾತರು. ಲಿಂಗದೀಕ್ಷೆಯಾಗದವರು, ದೇವರಾಗಲೀ ಬ್ರಾಹ್ಮಣರಾಗಲೀ ಶೂದ್ರರಾಗಲಿ- ಅವರು ನರಕಿಗಳು, ಭವಿಗಳು, ಲಿಂಗವಂತರು ಅಪ್ಪಿತಪ್ಪಿಯೂ ಬಳಸಬಾರದವರು. ಪ್ರಾಮಾಣಿಕ ಭವಿ ಭವಿಯಾಗಿಯೇ, ಅನಾಚಾರಿ ಶಿವಭಕ್ತ ನಾಗಿಯೇ ಉಳಿಯುವುದು ವೀರಶೈವ ಧರ್ಮದ ಮೂಲತತ್ವ. ವೀರಶೈವ ಧರ್ಮ ಮಾನವರೆಲ್ಲ ಸಮಾನರು ಎಂದು ಬೋಧಿಸಲಿಲ್ಲ- ಲಿಂಗದೀಕ್ಷಾ ಬದ್ಧರೆಲ್ಲರೂ ಸಮಾನರು ಮತ್ತು ಶಿವಸಹೋದರರು ಎಂದು ಸಾರಿತು. ಶಿವದೀಕ್ಷೆ ಹೊಂದಿದ ಹೊಲೆಯ ಉತ್ತಮನಾದ. ಶಿವದೀಕ್ಷೆ ಹೊಂದದ ಬ್ರಾಹ್ಮಣ ಹೊಲೆಯನಾದ. ಶಿವದೀಕ್ಷೆ ಹೊಂದಿದ ಶರಣನ ಮಡದಿ ಮಕ್ಕಳೂ ಶಿವದೀಕ್ಷೆ ಇಲ್ಲದಿದ್ದರೆ ಭವಿಗ [illegible]ಖರ ಈ ಮಾತುಗಳೇ ಕೆಲವರನ್ನು ಈಗ ಕೆರಳಿಸುತ್ತಿರುವುವಾದರೂ ಈ ವಿಚಾರಗಳಿಗೆ ಪುಷ್ಟಿಕೊಡುವ ವಚನಗಳು, ಅಂದಿನ ರಾಜಕೀಯ, ಸಾಮಾಜಿಕ ಪರಿಸ್ಥಿತಿಯ ವಿಶ್ಲೇಷಣೆಯನ್ನೂ ಶ್ರೀ ನಾಗರಾಜಪ್ಪನವರು ಸಮರ್ಥವಾಗಿ ಮಾಡಿದ್ದಾರೆ.

ಶರಣರು ಲಿಂಗದೀಕ್ಷೆಯ ನಂತರವೂ ತಮ್ಮ ಪೂರ್ವಜಾತಿಯ ಕಾಯಕವನ್ನು ಮುಂದುವರಿಸಿದರು.- ಉಚ್ಚ ವರ್ಗದ ಬ್ರಾಹ್ಮಣ ಲಿಂಗದೀಕ್ಷೆಯಿಂದ ಚಪ್ಪಲಿ ಹೊಲಿಯುವ ಕಾಯಕಕ್ಕೆ ತೊಡಗಿದ ಪ್ರಸಂಗವಾಗಲೀ, ಲಿಂಗದೀಕ್ಷೆ ಪಡೆದ ಹೊಲೆಯ ಜಂಗಮನಾಗಿ ಉಚ್ಚವರ್ಗದವರಿಗೆ ದೀಕ್ಷೆ ಕೊಡುವ ಧಾರ್ಮಿಕ ನಾಯಕನಾದ ಪ್ರಸಂಗವಾಗಲೀ ವೀರಶೈವ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ. ಹಡಪದ ಅಪ್ಪಣ್ಣ, ಕುಂಬಾರ ಗುಂಡಯ್ಯ, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ ಮುಂತಾಗಿ ಅವರವರ ಪೂರ್ವಜಾತಿಗಳೇ ಶರಣರಾದ ಮೇಲೂ ಅಂಟಿ ಬಂದದ್ದು ಕಂಡುಬರುತ್ತದೆ." ಇದಕ್ಕೆ ಪೂರಕವಾಗಿ ಇಂದೂ ಉಳಿದು ಬಂದಿರುವ ಕುಂಬಾರ ಲಿಂಗಾಯಿತರು

ಗಾಣಿಗ ಲಿಂಗಾಯಿತರು, ಹಜಾಮ ಲಿಂಗಾಯಿತರು ಮುಂತಾದ ಜಾತಿಗಳನ್ನು ಗಮನಿಸಬಹುದಾಗಿದೆ.

ಕನಕದಾಸನ ಕೀರ್ತನೆಗಳ ಮತ್ತು ಬದುಕಿನ ಬಗೆಗೆ ಮತ್ತೊಂದು ವಿಮರ್ಶಾತ್ಮಕ ಲೇಖನ "ಕನಕದಾಸನ ಕೀರ್ತನೆಗಳು"

ಶೂದ್ರನಾಗಿ ಹುಟ್ಟಿ, ವ್ಯಾಸರಾಯರ ಅನುಗ್ರಹಕ್ಕೆ ಪಾತ್ರನಾಗಿ ದಾಸನಾಗಿ, ಸಾಧನೆ ಮಾಡಿದ ಕನಕದಾಸನ ಸ್ವತಂತ್ರ ಪ್ರಜ್ಞೆ, ಮತ್ತು ಅದರಿಂದುಂಟಾದ ತಾಕಲಾಟಗಳನ್ನೂ ಗುರುತಿಸುವ ಲೇಖನವಿದು.

ಕೊನೆಯದಾಗಿ ಇನ್ನೂ ವಿಪುಲವಾದ ಅಧ್ಯಯನಕ್ಕೆ ಅವಕಾಶವಿರುವ 'ನಾಮಧಾರಿ ಲಿಂಗಾಯಿತರ' ಬಗೆಗೆ ಸಂಶೋಧನ ಲೇಖನವಿದೆ. ಒಕ್ಕಲಿಗರಲ್ಲಿರುವ ನಾಮಧಾರಿ ಲಿಂಗಾಯಿತರು ಎಂಬ ಪಂಗಡದ ಪೂರ್ವೇತಿಹಾಸವನ್ನು ಗುರುತಿಸುವಲ್ಲಿ ಕೆಲವಾರು ಬೆರಗಿನ ಸಂಗತಿಗಳೂ ಹೊರಬರುತ್ತವೆ. ಲಿಂಗಾಯಿತರ ಅನೇಕ ಒಳಪಂಗಡಗಳ ಬಗ್ಗೆ ವಿವರವಾದ ಅಧ್ಯಯನವಿದೆ.

ಶ್ರೀ ನಾಗರಾಜಪ್ಪನವರದು 'ನನ್ನ ತೀರ್ಮಾನಗಳೇ ಅಂತಿಮ' ಎಂಬ ಧಾಷ್ಟ್ಯವಲ್ಲ. ಮುಕ್ತ ಚರ್ಚೆಗೆ ಬಿಚ್ಚುಮನದ ಆಹ್ವಾನವಿದೆ. ಭಿನ್ನಾಭಿಪ್ರಾಯಗಳಿಗೆ ಸ್ವಾಗತವಿದೆ. 'ಮರು ಚಿಂತನೆ' ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಒಂದು ಹೊಸ ಮಾರ್ಗ ತೆರೆದಿದೆ ಎಂಬುದೇ ನನ್ನ ನಮ್ರ ಅನಿಸಿಕೆ.

(ಓದಿ : "ಮರುಚಿಂತನೆ"
ಲೇ : ಪ್ರೊ : ಕೆ. ಜಿ. ನಾಗರಾಜಪ್ಪ
ಪ್ರಕಾಶಕರು : ಶ್ರೀಮತಿ ಹೆಚ್. ಸಾವಿತ್ರಿ, ಪ್ರಣತಿ ಪ್ರಕಾಶನ,
4321 'ಸಂಜಯ' ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ರಸ್ತೆ,
ಪಿ. ಹೆಚ್. ಕಾಲೋನಿ, ತುಮಕೂರು–572101
ಬೆಲೆ : ರೂ. **18-00**)

ಹಕ್ಕಿ ಜೋಗುಳ ಹಾಡಲಿಲ್ಲ.

● ಸತ್ಯನಾರಾಯಣ ಆಣತಿ

ಒಂದು ದಿನ ಸಂಜೆ
ಮನೆಯ ಅಂಗಳದ ಗಿಡಗಳಿಗೆ
ನೀರೆರೆಯುತಿದ್ದಾಗ

"ಈ ಹೂವಿಗೇಕೆ ಇಂತ ಬಣ್ಣ
ಅದಕೆ ಅಂತ ಬಣ್ಣ
ಮಣ್ಣು ಮಾಡುವ ಮೋಡಿ ಎಂಥದಣ್ಣ"
ಎನುತ, ಎಲೆಯ ಆಕಾರ ವಿಕಾರಗಳ
ಬಗ್ಗೆ ಪ್ರಶ್ನಿಸುತ್ತಿದ್ದ ಮಗ

ಪೋರ್ಟಿಕೋಗೆ ತೂಗುಹಾಕಿದ
ಪಾಟೊಂದರ ಕಡೆ ಕೈ ತೋರಿಸುತ್ತ
"ಪಾಟಿನಲಿ ಹಕ್ಕಿ ಗೂಡು ಕಟ್ಟಿದೆ"
ಎಂದವನೆ ಪುಟ ಪುಟನೆ ತಾರಸಿ
ಏರಿ, ಪೋರ್ಟಿಕೋಮೇಲಿಳಿದು
"ಅಪ್ಪ ಎರಡು ಮೊಟ್ಟೆ ಇಟ್ಟಿದೆ"
ಎಂದರಿಚಿದ.

ನಾನು ಮೇಲೇರಿ ನೋಡಿದೆ
ಕಸ ಕಡ್ಡಿ ಹುಲ್ಲು ಗರಿ ಹೊಂದಿಸಿ

ಹೆಣೆದ ಸುಂದರ ಗೂಡಿನಲಿ
ಇಟ್ಟ ಎರಡು ಮೊಟ್ಟೆ
ಇನ್ನು ಹಾಡಬೇಕಷ್ಟೆ
ಹಕ್ಕಿ ಜೋಗುಳ ಹಾಡು.

ಅಮ್ಮನ ಕೂಗಿ ಕರೆದ
ಆಜು ಬಾಜಿಗೆಲ್ಲ ಸಾರಿದ
ಬಂದ ಗೆಳೆಯರಿಗೆಲ್ಲ
ಹಕ್ಕಿಯ ಗೂಡು ಮೊಟ್ಟೆಗಳನು ತೋರಿಸಿ
"ಹಕ್ಕಿ ಕಾವು ಕೊಟ್ಟು ಮರಿ ಮಾಡುತ್ತೆ ಕಣ್ರೋ"
ಎಂದು ಹೇಳಿದ

"ಮೊಟ್ಟೆಯಿಂದ ಮರಿ ಹೇಗೆ ಹೊರಗೆ ಬರುತ್ತೊ ?"
ಎಂದೊಬ್ಬ ಪ್ರಶ್ನಿಸಿದ
"ಕಾವು ಕೊಡುದು ಅಂದ್ರೇನೊ !"
ಮಗುವೊಬ್ಬ ಕಣ್ಣರಳಿಸಿ ಕೇಳಿದ

"ಕಾವು ಕೊಡುದು ಗೊತ್ತಿಲ್ವೇನೊ !
ಅಮ್ಮ ಹಕ್ಕಿ ಮೊಟ್ಟೆ ಮೇಲೆ ಕೂತು
ಕಾವು ಕೊಟ್ಟು ಮರಿ ಮಾಡುತ್ತೆ
ಅಲ್ವೇನಪ್ಪ ?" ಎಂದಾಗ

ಮುಖ ಮುಖ ನೋಡಿ ನಕ್ಕರು
"ಕಾವು ಕೊಟ್ಟು ಮರಿ ಮಾಡುತ್ತೆ
ಕಾವು ಕೊಟ್ಟು ಮರಿ ಮಾಡುತ್ತೆ"
ಎಂದು ಹಾಡಿ ನಲಿದರು.

ಪಕ್ಕದಲಿ ಬಂದು ನಿಂತ
ಮಡದಿಯ ಮುಖ ನೋಡಿ
ಮುಗುಳು ನಕ್ಕೆ ನಾನು

ಮತ್ತೆ ಮೂರನೆಯ ದಿನ
ಮಧ್ಯಾಹ್ನದ ಹೊತ್ತು
ಪೋರ್ಟಿಕೋದಲ್ಲಿ ಹಕ್ಕಿ ಅರಚುತ್ತಿತ್ತು

ಮಗ ಹೊರಗೋಡಿದ
ಪೋರ್ಟಿಕೋ ಮೇಲೇರಿ
"ಅಪ್ಪ ಗೂಡಿನಲಿ ಮೊಟ್ಟೆಗಳಿಲ್ಲ
ಅಮ್ಮ ಹಕ್ಕಿ ಅರಚುತ್ತಿದೆ"
ಎಂದು ಕೂಗುತ್ತ
ಓಡೋಡಿ ಬಂದವನು

"ಮೊಟ್ಟೆ ಮರಿಯಾಗಿ ಹಾರಿತೇನಪ್ಪ"

"ಹಕ್ಕಿ ಏಕೆ ಅರಚುತಿದೆಯಪ್ಪ"

"ಹೇಳಪ್ಪ !"

ಮೌನ ಮುಸುಕಿದ ನನ್ನ
ಅಣಕಿಸುವ ಧಾಟಿಯಲಿ
"ಈ ಅಪ್ಪನಿಗೆ ಏನೂ ಗೊತ್ತಿಲ್ಲ"
ಎಂದಾಡಿ
ಹೊರಗೋಡಿದ.

ಸಂಪಾದಕರ ಟಿಪ್ಪಣಿಗಳು

ಹುಡುಕಾಟ–ನಾವೀನ್ಯದ ಆಕರ್ಷಣೆ ವಿಕರ್ಷಣೆ ಮುಂತಾಗಿ...........

ಎಲ್ಲ ಸಸ್ತನಿಗಳಲ್ಲಿಯೂ ಹುಡುಕಾಟದ– ಆವಿಷ್ಕಾರದ ತುರ್ತನ್ನು ಕಾಣುತ್ತೇವೆ. ಇಂಥ ತುರ್ತು ಕೆಲವು ಸಸ್ತನಿಗಳಲ್ಲಿ ಅತಿ ತೀವ್ರವಾಗಿರುತ್ತದೆ. ಜೀವ ವಿಕಾಸದ ಸಂದರ್ಭದಲ್ಲಿ ಆಯಾ ಪ್ರಾಣಿಗಳು ಎಷ್ಟರಮಟ್ಟಿಗೆ ವೈಶಿಷ್ಟ್ಯವನ್ನು (Specia-lisation) ಸಾಧಿಸಿಕೊಂಡಿವೆ ಎನ್ನುವ ವಾಸ್ತವದೊಂದಿಗೆ ಈ ಹುಡುಕಾಟದ ತುರ್ತು ನಿಕಟ ಸಂಬಂಧ ಹೊಂದಿರುತ್ತದೆ. ಒಂದು ವೇಳೆ ವಿಕಾಸಕ್ಕಾಗಿನ ಅವುಗಳ ಪ್ರಯತ್ನವೆಲ್ಲವೂ ಯಾವದೋ ಒಂದು ನಿರ್ದಿಷ್ಟ ಬದುಕುಳಿಯುವ ಯೋಜನೆಯ (Survivaltrick) ಸಾಧನೆಗಾಗಿಯೇ ವಿನಿಯೋಗವಾಗಿದ್ದರೆ ಅಂಥ ಪ್ರಾಣಿಗಳು ತಮ್ಮ ಸುತ್ತಮುತ್ತಲಿನ ಪ್ರಪಂಚದ ಸಂಕೀರ್ಣತೆಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗುವದಿಲ್ಲ. ಉದಾಹರಣೆಗಾಗಿ ಪ್ಯಾಂಗೋಲಿನ್ ಪ್ರಾಣಿ ವಿಕಾಸವ ಸಂಧರ್ಭದಲ್ಲಿ ಇರುವೆಗಳನ್ನು ತಿನ್ನುವ ತನ್ನ ಆಹಾರಭ್ಯಾಸದ ತಜ್ಞೀಕರಣಕ್ಕಾಗಿ ಕೋಲಾ ಕರಡಿಯು ಗಮ್ ಮರದ ಎಲೆಗಳನ್ನು ತಿನ್ನುವ ಆಹಾರಭ್ಯಾಸದ ವೈಶಿಷ್ಟ್ಯ ಗಳಿಸುವಲ್ಲಿ ಪ್ರಯತ್ನ ನಡೆಸಿದವು. ಇರುವೆಗಳಿರುವಷ್ಟು ಕಾಲ ಪ್ಯಾಂಗೋಲಿನ್‌ನ ಜೀವನ ನಿರುಂಬಳವಾದದ್ದು. ಸುತ್ತಲಿನ ವಿಚಿತ್ರ ಸಂಕೀರ್ಣ ಸಂಬಂಧಗಳ ಬಗ್ಗೆ ನಿರಾಸಕ್ತವಾದ ಅದರ ಜೀವನ ತೃಪ್ತವಾದದ್ದು. ಇದಕ್ಕೆ ವಿರುದ್ಧವಾಗಿ ವೈಶಿಷ್ಟ್ಯವನ್ನು ಸಾಧಿಸಿಕೊಳ್ಳದ ಪ್ರಾಣಿಗಳು ಒಂದು ಕ್ಷಣವೂ ನಿರುಂಬಳವಾಗಿರಲಾರವು. ಇವು ಸಮಯ ಸಾಧಕ ಪ್ರಾಣಿಗಳು– ಸದಾ ಎಚ್ಚರಾಗಿ ಕಾಯ್ದು ಸಮಯಸಾಧಿಸುತ್ತವೆ. ಇಂಥ ಪ್ರಾಣಿಗಳಿಗೆ ತಮ್ಮ ಮುಂದಿನ ಊಟ ಎಲ್ಲಿ ಹೇಗೆ ದೊರೆಯುತ್ತದೆನ್ನುವ ಬಗ್ಗೆ ಖಾತ್ರಿ ಇರುವದಿಲ್ಲ. ಅದಕ್ಕಾಗಿಯೇ ಎಲ್ಲ ಸಂದಿಗೊಂದಿಗಳನ್ನು ಅವು ತಿಳಿದುಕೊಳ್ಳಬೇಕು. ಎಲ್ಲ ಸಾಧ್ಯತೆಗಳನ್ನು ಪರೀಕ್ಷಿಸಬೇಕು ಮತ್ತು ಅವಕಾಶಗಳಿಗಾಗಿ ಕಣ್ಣುಬಿಟ್ಟು ಕೂತಿರಬೇಕು. ಇಂಥ ಪ್ರಾಣಿಗಳು ಹುಡುಕಾಡಬೇಕಾಗು

ತ್ತದೆ. ಆವಿಷ್ಕಾರವು ಇವುಗಳ ನಿತ್ಯದ ಬದುಕಾಗಬೇಕಾಗುತ್ತದೆ. ಆದರಿಂದಲೇ ಇಂಥ ಪ್ರಾಣಿಗಳು ಹೆಚ್ಚಿನ ಆಸಕ್ತಿಯನ್ನು ರೂಢಿಸಿಕೊಂಡಿರಬೇಕಾಗುತ್ತದೆ.

ಇಲ್ಲಿ ಕೇವಲ ಆಹಾರಾಭ್ಯಾಸ ಕುರಿತ ವೈಶಿಷ್ಟೀಕರಣದ ಕ್ರಿಯೆಯನ್ನು ಗಮನಿಸಿದೆವು. ಆತ್ಮರಕ್ಷಣೆಯ ಅವಶ್ಯಕತೆಯೂ ಪ್ರಾಣಿಗಳ ಮೇಲೆ ಇದೇ ರೀತಿಯ ಒತ್ತಡವನ್ನು ಹೇರುತ್ತದೆ. ಮುಳ್ಳುಹಂದಿಗಳಾಗಲೀ, ಹೆಡ್ಜ್ ಹಾಗ್‌ಗಳಾಗಲೀ ಸುತ್ತಲಿನ ಪ್ರಾಣಿ ಪರಿಸರವನ್ನು ಗಮನಿಸದೇ ಸದ್ದುಮಾಡುತ್ತ ಅಲೆದಾಡಬಹುದು. ವಿಶ್ರಮಿಸಬಹುದು. ಅವು ರಕ್ಷಣೆಯ ವಿಷಯದಲ್ಲಿ ತಜ್ಞೀಕರಣ ಸಾಧಿಸುವದರಿಂದ ಇದು ಸಾಧ್ಯವಾಗುತ್ತದೆ. ಆದರೆ ನಿರಾಯುಧವಾದ ಇತರ ಸಸ್ತನಿ ಪ್ರಾಣಿಗಳು ಹೀಗೆ ಇರಲಾಗದು. ಅವು ಎಚ್ಚರವಾಗಿರಬೇಕಾಗುತ್ತದೆ. ಹುಲಿಯ ವಾಸನೆ ಗ್ರಹಿಸಿಯೇ ಜಿಂಕೆಗಳು ತಾವು ತಿನ್ನುವ ಎಳೆಗರಿಕೆಯನ್ನು ಅಲ್ಲಿಯೇ ಬಿಟ್ಟುಕೊಟ್ಟು ಓಟ ಹೊಡೆಯಬೇಕಾಗುವಂತೆ ಇಂಥ ಸಸ್ತನಿಗಳು ಅಪಾಯದ ಬಗೆಗಿನ ಸೂಚನೆಗಳನ್ನು ಮತ್ತು ಬದುಕುಳಿಯಲು ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಇಂಥ ಪ್ರಾಣಿಗಳು ಮನೆ ಬಿಟ್ಟು ಹೊರಗೆ ಬಂದೊಡನೆ ಒಂದೊಂದು ಕ್ಷಣದಲ್ಲಿಯೂ ಮನೆಯಿಂದ ತನ್ನ ದಿಕ್ಕು ದೆಸೆಗಳನ್ನು, ಅದನ್ನು ತಲುಪಲು ಇರುವ ವಿವಿಧ ದಾರಿಗಳನ್ನು ಲೆಕ್ಕಾಚಾರಮಾಡುತ್ತಿರಬೇಕಾಗುತ್ತದೆ.

ಈ ದಿಕ್ಕಿನಿಂದ ಯೋಚನೆ ಮಾಡಿದರೆ ತಜ್ಞೀಕರಣ–ವೈಶಿಷ್ಟ್ಯತೆಯನ್ನು ಸಾಧಿಸಿಕೊಳ್ಳದಿರುವದು ದುರ್ಬಲವೆನ್ನಿಸಬಹುದು. ಸಮಯಕ್ಕಾಗಿ ಕಾಯುವ ಸಸ್ತನಿಗಗಳಾದರೂ ಯಾಕಿವೆ ? ಇದಕ್ಕೆ ಉತ್ತರವೆಂದರೆ– ಅತಿ ವೈಶಿಷ್ಟ್ಯದ ಜೀವನದ ರೀತಿಯು ತೀವ್ರವಾದ ಅಪಾಯಕ್ಕೆ ಸಿಕ್ಕಿಹಾಕಿಕೊಳ್ಳುವ ಅವಕಾಶವಿರುತ್ತದೆ. ಒಂದು ಪರಿಸರದಲ್ಲಿ ಬದುಕಲು ರೂಢಿಸಿಕೊಂಡಿರುವ ಅತಿ ವೈಶಿಷ್ಟ್ಯತೆಯಿಂದ ಕೂಡಿದ ಒಂದು ಪ್ರಾಣಿಯು ಆ ಪರಿಸರ ಇರುವವರೆಗೆ ಆರಾಮವಾಗಿ ಬದುಕಬಹುದು. ಆದರೆ ಆ ಪರಿಸರದಲ್ಲಿ ಸ್ವಲ್ಪ ಪಲ್ಲಟವಾದರೂ ಸಾಕು ಅದು ಸಾಧಿಸಿದ ವೈಶಿಷ್ಟ್ಯತೆ ನಿರುಪಯುಕ್ತವಾಗಿ ಆ ಪ್ರಾಣಿ ಅಸಹಾಯಕವಾಗಿ ಬಿಡುತ್ತದೆ. ತಮ್ಮ ಸ್ಪರ್ಧಿಗಳನ್ನೆಲ್ಲ ಹಿಂದೆ ಹಾಕಲು ವೈಶಿಷ್ಟ್ಯತೆಯ ಕೊನೆತುದಿಯನ್ನು ಮುಟ್ಟಿದ ಪ್ರಾಣಿಗಳು ಇಂಥ ಸಂದರ್ಭದಲ್ಲಿ ಮತ್ತೆ ಹಿಂದಕ್ಕೆ ಬರಲಾಗದೇ ಒಮ್ಮೆಲೇ ನಿರಾಯುಧವಾಗುತ್ತ ಅಪಾಯದ ಅಂಚಿಗೆ ಬಂದು ನಿಲ್ಲುತ್ತವೆ. ಗಮ್ ಮರದ ಕಾಡುಗಳ ನಾಶವಾದರೆ ಆ ಮರಗಳ ಎಲೆಗಳನ್ನಷ್ಟೇ ತಿನ್ನುವ ವೈಶಿಷ್ಟ್ಯದ ಕೋಲಾ ಕರಡಿಯ ಕೊನೆಯಾದಂತೆಯೇ. ಕೇವಲ ಮೈಮೇಲೆ ಮುಳ್ಳುಗಳನ್ನು

ಹೊಂದಿ, ಓಟದಲ್ಲಿ ವೇಗ ಮುಚ್ಚುಮರೆ ಸಾಧಿಸಿದ ಮುಳ್ಳು ಹಂದಿ ಬಿರುಸು ಬಾಯಿನ ಬೇಟೆಗಾರ ಪ್ರಾಣಿಯು ಮುಂಪೆ ತಲೆಬಾಗಬೇಕಾಗುತ್ತದೆ. ವೈಶಿಷ್ಟ್ಯತೆ ಇಲ್ಲದ ಸಮಯಸಾಧಕ ಪ್ರಾಣಿಗಳ ಜೀವನ ಯಾವಾಗಲೂ ಕಷ್ಟಸಾಧ್ಯವಾದುದಾದರೂ ಇಂಥ ಪ್ರಾಣಿಗಳು ಬಹುಬೇಗನೇ ತಮ್ಮ ಪರಿಸರದಲ್ಲಿ ಉಂಟಾಗುವ ವ್ಯತ್ಯಾಸಗಳಿಗೆ ಹೊಂದಿಕೊಳ್ಳುವ ಗುಣವನ್ನು ರೂಢಿಸಿಕೊಳ್ಳಬಲ್ಲವು. ಇಲಿ ಹೆಗ್ಗಣಗಳನ್ನು ತಿಂದು ಬದುಕುವ ಮುಂಗುಸಿಯು ಈ ಆಹಾರಗಳನ್ನು ಕಸಿದುಕೊಂಡು ಬಿಡಿ. ಮುಂಗುಸಿಗಳು ಉಪವಾಸ ಸಾಯುವದಿಲ್ಲ. ಅವು ಆ ಈ ಮೊಟ್ಟೆಗಳನ್ನು, ಕೊನೆಗೆ ಬಸವನ ಹುಳುಗಳನ್ನು ತಿಂದು ಬದುಕುತ್ತವೆ. ಮಂಗಗಳ ಕೈಗಳಲ್ಲಿನ ಹಣ್ಣುಗಳನ್ನು ಕಿತ್ತುಕೊಂಡರೆ ಅವು ಮರದ ಎಲೆ ಬೇರು ರೆಂಬೆಗಳನ್ನು ತಿಂದು ಬದುಕುತ್ತವೆ.

ವೈಶಿಷ್ಟ್ಯತೆ ರೂಢಿಸಿಕೊಳ್ಳದ ಸಸ್ತನಿಗಳಲ್ಲೆಲ್ಲ ಮಂಗ-ವಾ-ನರಗಳ ಗುಂಪು ಅತ್ಯಂತ ಸಮಯಸಾಧಕವಾದವು. ಈ ಇಡೀ ಗುಂಪೇ ವೈಶಿಷ್ಟ್ಯರಾಹಿತ್ಯದ ವೈಶಿಷ್ಟ್ಯ ಸಾಧಿಸಿದವುಗಳು. ಈ ಮಂಗ ವಾನರಗಳಲ್ಲಿಯೂ 'ನಗ್ನ ವಾನರನೆನ್ನಿಸಿಕೊಳ್ಳುವ (Naked Ape) ಮನುಷ್ಯ ಅತ್ಯಂತ ಸಮಯಸಾಧಕ ಪ್ರಾಣಿ. ಕಪಿಗಳ ಮರಿಗಳು ಕುತೂಹಲಿಗಳಾಗಿದ್ದು ಸುತ್ತಮುತ್ತಲಿನವೆಲ್ಲದರಲ್ಲಿ ಇಣುಕುತ್ತವೆ. ಆದರೆ ಅವುಗಳ ಆಸಕ್ತಿಯು ಕ್ರಮೇಣ ಕುಂದುತ್ತ ಬರುತ್ತದೆ. ಮನುಷ್ಯರಲ್ಲಿ ಎಳೆತನದ ಕುತೂಹಲವು ಸಾಮಾನ್ಯವಾಗಿ ಬಲಗೊಳ್ಳುತ್ತ ಪ್ರೌಢವಯಸ್ಸಿಗೂ ಅದು ಚಾಚಿಕೊಂಡಿರುತ್ತದೆ. ನಾವು ಕಂಡುಕೊಳ್ಳುವದನ್ನು ಎಂದೂ ಬಿಡುವುದಿಲ್ಲ. ಬದುಕಲು ಇಷ್ಟು ತಿಳಿದದ್ದು ಸಾಕು ಎನ್ನುವ ತೃಪ್ತಿ ನಮಗಿಲ್ಲ. ಪ್ರತಿಯೊಂದು ಪ್ರಶ್ನೆಗೆ ನಾವು ಕಂಡುಕೊಳ್ಳುವ ಉತ್ತರವು ನಮ್ಮಲ್ಲಿ ಇನ್ನೊಂದು ಪ್ರಶ್ನೆಯನ್ನು ಮೂಡಿಸಿರುತ್ತದೆ. ಈ ಗುಣಲಕ್ಷಣವೇ ಮನುಷ್ಯ ಪ್ರಭೇದದ ಬದುಕುಳಿಯುವ ಪ್ರಯತ್ನಕ್ಕೆ ಒಂದು ಒಳನೋಟವಾಗಿ ಒದಗಿ ಬಂದಿದೆ.

ಹೊಸದರ ಬಗ್ಗೆ ಮೂಡುವ ಕುತೂಹಲ ಅಂದರೆ ನಾವೀನ್ಯತೆಯ ಬಗೆಗಿನ ಆಕರ್ಷಣೆ (ನಿಯೋಫಿಲಿಯ) ಮತ್ತು ಹೊಸದರ ಬಗೆಗಿನ ವಿಕರ್ಷಣೆ (ನಿಯೋಫೋಬಿಯ) ಇವೆರಡೂ ಮನುಷ್ಯನನ್ನು ಎರಡು ವಿರುದ್ಧ ದಿಕ್ಕಿನಲ್ಲಿ ಸೆಳೆಯುವ ಬಗೆಗಳಾಗಿವೆ. ಹೊಸದು-ಅಪರಿಚಿತವಾದದ್ದು. ಬಹುಶಃ ಅಪಾಯಕಾರಿಯಾದದ್ದು. ಅದರ ಸಮೀಪಕ್ಕೆ ಹೋಗದಿರುವದೇ ಕ್ಷೇಮವೇನೋ ? ಆದರೆ ಅದನ್ನು ತಪ್ಪಿಸಿ ನಡೆದುಬಿಟ್ಟರೆ ಅದರ ಬಗ್ಗೆ ತಿಳಿಯುವದೆಂತು ? ನಾವೀನ್ಯಾಕರ್ಷಣೆಯ ತುಡಿತವು

ನಮ್ಮನ್ನು ಹೊಸವರತ್ತ ತಳ್ಳುತ್ತದೆ. ಅಪರಿಚಿತವಾದದ್ದು ಕ್ರಮೇಣ ಪರಿಚಿತವಾಗುತ್ತದೆ. ಪರಿಚಿತವಾದದ್ದು ನಮಗೆ ಕ್ರಮೇಣ ಹಳೆಯದಾಗುವತನಕ ಈ ಆಕರ್ಷಣೆ ಇದ್ದೇ ಇರುತ್ತದೆ. ಇಷ್ಟೆಲ್ಲ ಕುತೂಹಲದ ಸಾಗುವಿಕೆಯಿಂದ ನಮಗೆ ದೊರೆಯುವ ಅಮೂಲ್ಯವಾದ ಅನುಭವವು ನಮ್ಮ ಪ್ರಜ್ಞೆಗೆ ದಕ್ಕುತ್ತದೆ ಮತ್ತು ಇದು ಮುಂದಿನ ಜೀವನದ ಅನುಕೂಲತೆಗೆ ಒದಗಿ ಬರುತ್ತದೆ. ಬಾಲ್ಯಕಾಲದಲ್ಲಿ ನಡೆಯುವದು ಇದೇ. ಬಾಲ್ಯಕಾಲದಲ್ಲಿ ಇಂಥ ಕುತೂಹಲ ಎಷ್ಟು ಪ್ರಬಲವಾಗಿರುತ್ತದೆಂದರೆ ಇದನ್ನು ತಂದೆ ತಾಯಂದಿರು ನಿಗ್ರಹಿಸಬೇಕಾಗುತ್ತದೆ. ಆದರೆ ಪೋಷಕರ ನಿಗ್ರಹ ನಿರ್ದೇಶಗಳು ಮಕ್ಕಳಲ್ಲಿಯ ಕುತೂಹಲವನ್ನು ಪೂರ್ಣವಾಗಿ ತುಳಿದುಹಾಕಲಾರವು. ಮಗುವು ಬೆಳೆಯುತ್ತ ಬಂದಂತೆ ಅದರಲ್ಲಿಯ ಹುಡುಕಾಟ-ಆವಿಷ್ಕಾರದ ತುಡಿತಗಳು ಕೆಲವು ಸಲ ಮಿತಿ ಮೀರಿ ಬೆಳೆದು- ಇಂಥ ಬಾಲಕರ ಗುಂಪಿಗೆ ಹಿರಿಯರು 'ಪುಂಡ ಕಾಡು ಪ್ರಾಣಿಗಳ ಗುಂಪು' ಎಂದು ಬೈಯ್ಯುವದೂ ಉಂಟು. ಆದರೆ ನಿಜದಲ್ಲಿ ಹಿರಿಯರ ನಡವಳಿಕೆಯೇ ಕಾಡು ಪ್ರಾಣಿಗಳ ರೀತಿಯದಾಗಿರುತ್ತದೆ. ಹಿರಿಯ ಕಾಡುಪ್ರಾಣಿಗಳು ತಮ್ಮ ಮರಿಗಳ ಹುಡುಕಾಟದ ಆವಿಷ್ಕಾರದ ತುಡಿತಗಳನ್ನು ಮಿತಗೊಳಿಸುವ ಎಲ್ಲ ಪ್ರಯತ್ನಗಳನ್ನೂ ಮಾಡುವಂತೆ ಹಿರಿಯರೂ ಕೂಡ ಮಕ್ಕಳ ಹುಡುಕಾಟದ ಭಾವನೆಗೆ ಕಡಿವಾಣ ಹಾಕುವ ಕೆಲಸ ಮಾಡುತ್ತಿರುತ್ತಾರೆ. ಪುಣ್ಯವಶಾತ್ ಮನುಷ್ಯ ಪ್ರಭೇದದ ಅನೇಕ ಹಿರಿಯರು ತಮ್ಮ ಬಾಲ್ಯಕಾಲದ ಹುಡುಕಾಟದ ಬುದ್ಧಿ ಮತ್ತು ಕುತೂಹಲಗಳನ್ನು ಕಾಯ್ದುಕೊಂಡು ಬಂದಿರುವದರಿಂದ ಮಾನವ ಜನಾಂಗದ ವಿಸ್ತಾರ ಮತ್ತು ಪ್ರಗತಿ ಸಾಧ್ಯವಾಗುತ್ತ ಬಂದಿದೆ.

ಮನುಷ್ಯನ ವಿಶೇಷ ಮತ್ತು ಸಂಕೀರ್ಣ ಶಕ್ತಿಗಳಾದ ಚಿತ್ರಕಲೆ, ಶಿಲ್ಪಕಲೆ, ಸಂಗೀತ ಹಾಡುಗಾರಿಕೆ, ನೃತ್ಯ, ಜಿಮ್ನ್ಯಾಸ್ಟಿಕ್ಸ್, ಆಟಗಳು, ಬರವಣಿಗೆ ಮತ್ತು ಮಾತುಗಾರಿಕೆ ಇವೆಲ್ಲ ಆವಿಷ್ಕಾರ ಮತ್ತು ಪ್ರಯೋಗಶೀಲತೆಯ ಮೂಲಕ ಬೆಳೆದು ಬಂದವುಗಳು. ವಿಶೇಷ ತರಬೇತಿಯ ಮೂಲಕ ಕಲಾವಿದ ಅಥವಾ ಸಹೃದಯನಾಗಿ ರೂಪುಗೊಳ್ಳಬಹುದಾದ ನಾವು ಮನುಷ್ಯನ ಇಂಥ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳಬಹುದು. ಈ ಚಟುವಟಿಕೆಗಳ ಅನ್ವಯಿಕ ಉದ್ದೇಶಗಳನ್ನು (ಹಣಗಳಿಸುವದು, ಸ್ಥಾನಮಾನಗಳಿಸುವದು ಇತ್ಯಾದಿ) ಆಚೆಗಿಟ್ಟು ನೋಡಿದರೆ ಈ ಚಟುವಟಿಕೆಗಳೆಲ್ಲ ಮನುಷ್ಯನ ಜೈವಿಕ ಚಟುವಟಿಕೆಗಳಂತೆ- ಬಾಲ್ಯಕಾಲದ ತುಂಟಾಟಗಳ ಮುಂಚಾಚುವಿನಂತೆ ಮೂಡಿಬಂದವುಗಳು. ಇಲ್ಲವೇ ಪ್ರೌಢರ ತಿಳು

ವಳಿಕೆ ಮತ್ತು ಪರಸ್ಪರ ಸಂಸರ್ಗ ವ್ಯವಸ್ಥೆಯ ಮೇಲೆ ಬಾಲ್ಯಕಾಲದ 'ಆಟದ ನಿಯಮ'ಗಳ (Play-rules) ಪ್ರಭಾವದಿಂದ ಮೂಡಿ ಬಂದವುಗಳಂತೆ ತೋರುತ್ತವೆ

ಬಾಲ್ಯಕಾಲದ ಈ ಆಟದ ನಿಯಮಗಳನ್ನು ಲಿಸ್ಟ್ ಮಾಡಿ ಹೇಳುವದಾದರೆ–

i) ಅಪರಿಚಿತವಾದದ್ದು ಪರಿಚಿತವಾಗುವವರೆಗೆ ಅದನ್ನು ಶೋಧಿಸು.
ii) ಪರಿಚಿತವಾದದ್ದರ ಲಯಬದ್ಧ ಪುನರಾವರ್ತನೆಯನ್ನು ಸಾಧಿಸು.
iii) ಈ ಪುನರಾವರ್ತನೆಯ ಭಿನ್ನ ಭಿನ್ನ ರೀತಿಗಳನ್ನು ಪ್ರಯತ್ನಿಸು.
iv) ಈ ವಿಭಿನ್ನ ರೀತಿಗಳಲ್ಲಿ ಅತ್ಯಂತ ತೃಪ್ತಿಕರವಾದದ್ದನ್ನು ಆಯ್ದು ಉಳಿದವುಗಳನ್ನು ಬಿಟ್ಟುಕೊಟ್ಟು ಅದೊಂದನ್ನೇ ಬೆಳೆಸಲು ಪ್ರಯತ್ನಿಸು.
v) ಆ ಭಿನ್ನ ಭಿನ್ನ ರೀತಿಗಳನ್ನು ವಿವಿಧ ರೀತಿಯಲ್ಲಿ ಬೇರೆ ಬೇರೆ ಕ್ರಮದಲ್ಲಿ ಪ್ರಯತ್ನಿಸು, ಮತ್ತು
vi)) ಇಷ್ಟೆಲ್ಲವನ್ನೂ ನಿನ್ನ ಸಲುವಾಗಿ, ಇಷ್ಟೆಲ್ಲವನ್ನು ಮಾಡುವ ಸಲುವಾಗಿಯೇ ಮಾಡು.

ಒಬ್ಬ ಹುಡುಗ ಮರಳಿನಲ್ಲಿ ಗೀಚುವದಕ್ಕೆ ಅಥವಾ ಒಬ್ಬ ಪ್ರೌಢ ಸಂಗೀತಗಾರ ಒಂದು ಸಂಗೀತ ಕೃತಿಯ ರಚನೆಯಲ್ಲಿ ತೊಡಗುವದಕ್ಕೆ- ಹೀಗೆ ಒಟ್ಟು ಜೀವನದಲ್ಲಿನ ಎಲ್ಲ ಆವಿಷ್ಕಾರಗಳಿಗೂ ಈ ಆಟದ ನಿಯಮಗಳು ಅನ್ವಯವಾಗುತ್ತವೆ.

ಇವುಗಳಲ್ಲೆಲ್ಲ ಕೊನೆಯ ನಿಯಮವು ತುಂಬ ಮುಖ್ಯವಾದದ್ದು. ಆವಿಷ್ಕಾರದ ಈ ನಡಾವಳಿಕೆಗಳೆಲ್ಲ ಬದುಕುಳಿಯುವ ಮೂಲಭೂತ ರೀತಿಗಳಾದ ಆಹಾರಾಭ್ಯಾಸ ಸಂಘರ್ಷ, ಲೈಂಗಿಕ ಜೊತೆಯ ಆಯ್ಕೆ ಮುಂತಾದವುಗಳ ವಿಷಯದಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಆದರೆ ಇಂಥಲ್ಲಿ ಈ ನಡಾವಳಿಕೆಗಳು ಕೇವಲ ದೈಹಿಕ ಉದ್ದೇಶಗಳಿಗೆ ಮಿತಗೊಂಡಿರುತ್ತವೆ. ಅನೇಕ ಪ್ರಭೇದಗಳಲ್ಲಿ ಇಂಥ ದೈಹಿಕ ಉದ್ದೇಶಗಳಿಗೆ ಮಿತಗೊಳ್ಳುವಲ್ಲಿ ಇವುಗಳ ಕೊನೆಯಾಗುತ್ತದೆ. ಇದು ಆವಿಷ್ಕಾರಕ್ಕಾಗಿನ ಉದ್ದೇಶಕ್ಕಾಗಿನ ಆವಿಷ್ಕಾರವಲ್ಲ. ಆದರೆ ಅನೇಕ ವಿಕಾಸಗೊಂಡ ಪ್ರಾಣಿಗಳಲ್ಲಿ ಅದರಲ್ಲಿಯೂ ಮನುಷ್ಯನಲ್ಲಿ ಈ ನಡಾವಳಿಕೆಗಳು ದೈಹಿಕ ಉದ್ದೇಶದ ಮಿತಿಗಳಿಂದ ಬಿಡುಗಡೆ ಹೊಂದಿ ಇನ್ನೊಂದು ವಿಶಿಷ್ಟ ದಿಕ್ಕಿನಲ್ಲಿನ ತುಡಿತಗಳಾಗಿ ಬೆಳೆದುದನ್ನು ಕಾಣುತ್ತೇವೆ. ಇಂಥ ತುಡಿತದ ಉದ್ದೇಶ ನಮ್ಮ ಸುತ್ತಲಿನ ಪ್ರಪಂಚದ ಬಗ್ಗೆ

ಸಂಕೀರ್ಣವಾದ ಸಸೂಕ್ಷ್ಮ ಅನುಭವಗಳನ್ನು ಒದಗಿಸುತ್ತ ಅವುಗಳ ಹಿನ್ನೆಲೆಯಲ್ಲಿ ನಮ್ಮ ಸಾಧ್ಯತೆಗಳ ಅರಿವನ್ನು ನೀಡುವವು. ಈ ಅರಿವು ಬರೀ ಬದುಕುಳಿಯುವ ಬಗೆಗಿನ ನೋಟವಾಗಿಲ್ಲ. ಹೀಗೆ ಪಡೆದ ಈ ಅರಿವು ನಮ್ಮ ಬದುಕಿಗೆ ಯಾವದೇ ದೇಶ, ಕಾಲ ಸಂದರ್ಭಗಳಿಗೆ ಒದಗಿ ಬರುವಂಥ ನಿರಪೇಕ್ಷವಾದದ್ದು.

ಈ ವಿಶ್ಲೇಷಣೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯನ್ನು ಪರಿಗಣಿಸದಿರುವದಕ್ಕೆ ಮುಖ್ಯ ಕಾರಣವೆಂದರೆ ಬದುಕುಳಿಯುವದಕ್ಕಾಗಿ ಮೂಲಭೂತ ರೀತಿಗಳಾದ ಹೋರಾಟ (ಆಯುಧಗಳು) ಆಹಾರ ಪಡೆಯುವಿಕೆ (ಬೇಸಾಯ) ಗೂಡುಕಟ್ಟುವಿಕೆ (ವಾಸ್ತು ಶಿಲ್ಪ) ಮತ್ತು ಸ್ವಾಸ್ಥ್ಯ (ಔಷಧಿಗಳು) ಇವುಗಳ ಬಗೆಗೇ ಮೂಲಭೂತವಾದ ಬೆಳವಣಿಗೆಗಾಗಿ ತೊಡಗಿಕೊಂಡಿರುವದರಿಂದ. ಆದರೆ ಕಾಲವು ಗತಿಸುತ್ತ ಬಂದಂತೆ ತಾಂತ್ರಿಕ ಬೆಳವಣಿಗೆಗಳು ಒಂದಕ್ಕೊಂದು ಪರಸ್ಪರ ತಳುಕುಹಾಕಿಕೊಳ್ಳುವದಲ್ಲದೇ ನಿರಪೇಕ್ಷ ಅನ್ವೇಷಣೆಯ ತುಡಿತವು ವೈಜ್ಞಾನಿಕ ಕ್ಷೇತ್ರದೊಳಕ್ಕೂ ಚಾಚಿಕೊಂಡಿತು. ವೈಜ್ಞಾನಿಕ ಸಂಶೋಧನೆಯು re-search ಎನ್ನುವ ಶಬ್ದ ಸೂಚಿಸುವಂತೆ– ಲೀಲೆಯ ಮನೋವೃತ್ತಿಯನ್ನು ಅವಲಂಬಿಸಿದ್ದು ಅದು ಬಾಲ್ಯಕಾಲದ ಆಟದ ನಿಯಮಗಳ ಅನುಸಾರವಾಗಿಯೇ ನಡೆಯುವಂಥದು. ಶುದ್ಧ ಸಂಶೋಧನೆಗಳ ಸಂದರ್ಭದಲ್ಲಿ ವಿಜ್ಞಾನಿಯು ಒಬ್ಬ ಕಲಾವಿದನ ರೀತಿಯಲ್ಲಿಯೇ ತನ್ನ ಕಲ್ಪನಾಶಕ್ತಿಯನ್ನು ಬಳಸಿಕೊಳ್ಳುತ್ತಿರುತ್ತಾನೆ. ಅವನು ಮಾತಾಡುವದು ಸುಂದರ ಪ್ರಯೋಗದ ಬಗ್ಗೆಯೇ ಹೊರತು ಕಾಲಬಂಧಿತ ಪ್ರಯೋಜನಶೀಲತೆಯ ಬಗೆಗಲ್ಲ. ಕಲಾವಿದನಂತೆಯೇ ಅವನೂ ಅನ್ವೇಷಣೆಯ ಉದ್ದೇಶಕ್ಕಾಗಿಯೇ ಅನ್ವೇಷಣೆಗೆ ಬದ್ಧನಾದವನು. ಒಂದು ವೇಳೆ ಅವನ ಪ್ರಯೋಗದ ನಿರ್ಣಯಗಳು ಬದುಕುಳಿಯುವ ನಿರ್ದಿಷ್ಟ ರೀತಿಗೆ ಉಪಯುಕ್ತವೆಂದು ಕಂಡು ಬಂದರೆ ಒಳ್ಳೆಯದೇ ಆಯಿತು. ಸರ್ವೋದಯವಾಗಲಿ. ಆದರೆ ಈ ಪರಿಣಾಮಗಳು ಆನುಷಂಗಿಕವಾದದ್ದವು ಮಾತ್ರ. ಮೂಲೋದ್ದೇಶ ಇದು ಅಲ್ಲವೇ ಅಲ್ಲ.

ಇಂಥ ಅನ್ವೇಷಣೆಯ ನಡಾವಳಿಕೆಯಲ್ಲಿ- ಕಲೆಗೆ ಸಂಬಂಧಿಸಿದ್ದಾಗಲಿ ಇಲ್ಲವೆ ವೈಜ್ಞಾನಿಕ ರೀತಿಯದಾಗಿರಲಿ– ಇದರ ದಾರಿಯಲ್ಲಿ ನಿಯೋಫಿಲಿಯ (ನಾವೀನ್ಯಾಕರ್ಷಣೆ) ಮತ್ತು ನಿಯೋಫೋಬಿಯ (ನಾವೀನ್ಯ ವಿಕರ್ಷಣೆ) ಇವುಗಳ ತುಡಿತಗಳ ಸತತ ಯುದ್ಧ ನಡೆದಿರುತ್ತದೆ. ನಾವೀನ್ಯಾಕರ್ಷಣೆ ನಮ್ಮನ್ನು ಹೊಸ ಅನುಭವಗಳತ್ತ ನೂಕುತ್ತ ನವೀನವಾದದ್ದನ್ನು ಬಯಸಲು ಪ್ರೇರೇಪಿಸುತ್ತದೆ. ನಾವೀನ್ಯ ವಿಕರ್ಷಣೆಯು ನಮ್ಮನ್ನು ತಡೆದು ನಿಲ್ಲಿಸುತ್ತದೆ. ಹಳೆಯ, ಪರಿಚಿತವಾದದ್ದರಲ್ಲಿ

ಆಶ್ರಯ ಪಡೆಯುವಂತೆ ಪ್ರೇರೇಪಿಸುತ್ತದೆ. ಈ ಎರಡೂ ಎಳೆತಗಳು ನಮ್ಮನ್ನು ಸತತವಾಗಿ ಎಳೆಯುತ್ತ ಲಂಬಕದ ಗುಂಡಿನ ಸ್ಥಿತಿಗೆ ದೂಡುತ್ತವೆ. ಒಂದು ಪ್ರಚೋದನಾತ್ಮಕ ಹೊಸ ಅನುಭವಗಳ ಆಮಿಷ ಒಡ್ಡಿದರೆ ಇನ್ನೊಂದು ಸ್ನೇಹದ ಬೆಚ್ಚನೆಯ ಹಳೆಯ ಪರಿಚಿತ ಪರಿಸ್ಥಿತಿಯ ಆಸೆ ತೋರಿಸುತ್ತದೆ. ನಾವು ಒಂದು ವೇಳೆ ನಾವೀನ್ಯಾಕರ್ಷಣೆಯನ್ನು ಕಳೆದುಕೊಂಡರೆ ದರಿಗಟ್ಟುತ್ತೇವೆ-ಕೊಳೆಯುತ್ತೇವೆ. ಇನ್ನು ಒಂದು ವೇಳೆ ನಾವೀನ್ಯದ ವಿಕರ್ಷಣೆ ಕೈ ತಪ್ಪಿದರೆ ನಾವು ಕಂದಕದ ಆಳ ಅರಿತುಕೊಳ್ಳಲು ನೆಗೆಯುವಂತೆ- ವಿನಾಶದ ಆಳಕ್ಕೆ ನುಗ್ಗುತ್ತೇವೆ. ಈ ವಿರುದ್ಧ ಸೆಳೆತಗಳು ನಮ್ಮ ನಿತ್ಯ ಜೀವನದಲ್ಲಿನ ಫ್ಯಾಶನ್ನುಗಳ ಬದಲಾವಣೆಗೆ, ಬಟ್ಟೆ ಮತ್ತು ಕೇಶ ಶೈಲಿಯಲ್ಲಿನ ವ್ಯತ್ಯಾಸಗಳಿಗೆ, ಪೀಠೋಪಕರಣಗಳು ಮತ್ತು ಕಾರುಗಳ ವಿನ್ಯಾಸದ ಬದಲಾವಣೆಗಳಿಗೆ ಮಾತ್ರ ಕಾರಣವಾಗದೇ, ಅತ್ಯಂತ ಆಳವಾಗಿ ಇಡೀ ಸಾಂಸ್ಕೃತಿಕ ಪ್ರವಾಹಕ್ಕೆ ಕಾರಣವಾಗುತ್ತದೆ. ನಾವು ಅನ್ವೇಷಿಸುತ್ತೇವೆ. ಹಿಮ್ಮೆಟ್ಟುತ್ತೇವೆ. ನಾವು ಹುಡುಕಾಡುತ್ತಲೇ ನೆಲೆಗೊಳ್ಳುತ್ತೇವೆ. ಹಂತ ಹಂತವಾಗಿ ನಾವು ನಮ್ಮ ಸ್ವತ್ವದ ಬಗೆಗಿನ ಮತ್ತು ನಾವು ಬದುಕುವ ಸಂಕೀರ್ಣ ಪರಿಸರದ ಬಗೆಗಿನ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುತ್ತ ಹೋಗುತ್ತೇವೆ.

○

ಡೆಸ್ಮಂಡ್ ಮೊರಿಸ್‌ನು ಈ ಎಲ್ಲ ವಿಶ್ಲೇಷಣೆಯ ಹಿನ್ನೆಲೆಗೆ ಮಂಗ, ಚಿಂಪಾಂಜಿ ಮತ್ತು ಮಾನವ ಶಿಶುಗಳ ಮಾನಸಿಕ ಬೆಳವಣಿಗೆಯ ತುಲನಾತ್ಮಕ ಅಧ್ಯಯನ ನೀಡುತ್ತಾನೆ. ಈ ಎಲ್ಲ ಪ್ರಾಣಿಗಳಲ್ಲಿರುವ ಆವಿಷ್ಕಾರದ ತುಡಿತ ಮತ್ತು ಅದು ಸಾಧಿತವಾಗುವ ಮಾರ್ಗದಲ್ಲಿ ಅವು ನಿಯೋಫಿಲಿಯಾ- ನಿಯೋಫೋಬಿಯಾಗಳ ಒತ್ತಡಗಳಿಗೆ ಸಿಕ್ಕಿಹಾಕಿಕೊಳ್ಳುವ ಅನುಭವದ ಬಗ್ಗೆ, ಅವುಗಳ ಸಮತೋಲನದಲ್ಲಿ ಸಾಧಿತವಾಗುವ ಮಾನಸಿಕ ಸ್ವಾಸ್ಥ್ಯದ ಬಗ್ಗೆ ಚರ್ಚಿಸುವ ಮೋರಿಸ್‌ನ ಈ ಚರ್ಚೆ ನಮ್ಮ ಸದ್ಯದ ಸಾಂಸ್ಕೃತಿಕ ಸಂದರ್ಭಕ್ಕೆ ಒಂದು ವೈಜ್ಞಾನಿಕ ಹಿನ್ನೆಲೆಯನ್ನು ಒದಗಿಸಬಲ್ಲದೆಂದುಕೊಳ್ಳುತ್ತೇನೆ.

ಡೆಸ್ಮಂಡ್ ವಿವರಿಸುವ ನಾವೀನ್ಯದ ಬಗೆಗಿನ ಆಕರ್ಷಣೆ ವಿಕರ್ಷಣೆಗಳ (ನಿಯೋಫಿಲಿಯ-ನಿಯೋಫೋಬಿಯ) ಡಯಲೆಕ್ಟಿಕ್ಸ್ ಸಹಜವಾದದ್ದು. ಇದು ಬೆಳವಣಿಗೆಯ, ವಿಕಾಸದ ಒಂಧು ಭಾಗವಾಗಿ ಸಾಧ್ಯವಾಗುವಂಥದು. ಇದು ಜೀವಿಗಳ ಅಂತರಂಗದ ತುಡಿತದಂತೆ ಹೊರಹೊಮ್ಮುವಂಥದು. ಈ ಸಂಘರ್ಷ ಸಾಗಿಬರುವ ದಾರಿಯು

ಅನುಭವಗಳಿಂದ ಜೀವಿಗಳ ಪ್ರಜ್ಞೆಗೆ ಹೊಸತು ಸೇರುತ್ತ ಹೋಗುತ್ತದೆ. ಆದರೆ ನಮ್ಮ ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿನ ಹಳೆ ಹೊಸತುಗಳ ಸಂಘರ್ಷ ಇಷ್ಟು ಸರಳ-ಸಹಜವಾದದ್ದಲ್ಲ. ಯಾಕೆಂದರೆ ಬೆಳವಣಿಗೆಯ ಸಂದರ್ಭದಲ್ಲಿ ಶಿಶುಗಳಾಗಲೀ ವಿಕಾಸದ ಸಂದರ್ಭದಲ್ಲಿ ಮನುಷ್ಯ – ಪ್ರಾಣಿಗಳಾಗಲೀ ನಿರಪೇಕ್ಷವಾಗಿ ಪಾಲ್ಗೊಳ್ಳಲು ಸಾಧ್ಯವಾಗುವಂತೆ ಇಂದಿನ ನಮಗೆ ಸಾಧ್ಯವಾಗಲಾರದು. ನಾಗರೀಕತೆ ನಮ್ಮ ಮೇಲೆ ವಿಪರೀತವಾದ ಪರಿಣಾಮ ಬೀರಿದೆ. ಸೃಷ್ಟಿಯ ಸಹಜ ಲಯದೊಂದಿಗೆ ತಾದಾತ್ಮ್ಯ ಹೊಂದಿದ್ದ ಮನುಷ್ಯ ಇಂದು ಆ ಮೂಲಸ್ಥಿತಿಯಿಂದ ಬಹುದೂರಸಾಗಿ ಬಂದಿದ್ದಾನೆ. ಕಾಡು ಮರ–ನದಿಗಳ ಸಹಜ ಸ್ವಾತಂತ್ರ್ಯ ಅಪಹರಿಸಿದ ಮನುಷ್ಯ ಅಹಂಕಾರ ಪೀಡಿತನಾಗಿದ್ದಾನೆ. ಕ್ರೂರಿಯಾಗಿದ್ದಾನೆ. ಆರಂಭದಲ್ಲಿದ್ದ ಅವನ ಸ್ನಿಗ್ಧ ಮನಸ್ಸು ಇಂದು ಪೆಡುಸಾಗಿದೆ. ಇದಕ್ಕೊಂದಿಗೇ ತನ್ನ ಸುತ್ತಲಿನದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತ ಬೆಳೆಸಿಕೊಂಡ ತಾತ್ವಿಕ ನಿಲುವುಗಳು ಇಂದು ತಮ್ಮ ಮೂಲ ಉದ್ದೇಶದಾಚೆಗೆ ಬೆಳೆದು ಒಂದೊಂದೂ ಬದ್ಧತೆಯ ಗುಂಪುಗಳನ್ನು ಬೆಳೆಸಿವೆ. ಅದಕ್ಕೇ ಹಳೆ-ಹೊಸತುಗಳ ನಡುವಿನ ಸಂಘರ್ಷಕ್ಕೆ ಎರಡಕ್ಕಿಂತ ಹೆಚ್ಚಿನ ದಿಕ್ಕುಗಳು ಸೇರುತ್ತ ಅದು ಸಂಕೀರ್ಣ ಬಲೆಯಾಗುತ್ತಿದೆ.

ಹಳೆ ಹೊಸತುಗಳ ಸಂಘರ್ಷದ ಇಂದಿನ ಸ್ಥಿತಿ 'ಹೊಸ ಚಿಗುರು ಹಳೆ ಬೇರು' ಸೇರುವ ಕ್ರಿಯೆಯಲ್ಲ. ಇದು ಹುತ್ತಗಟ್ಟುತ್ತ ಕಟ್ಟಿಕೊಳ್ಳುವ ಕ್ರಿಯೆ. ಇದು ಭೂತದ ಭಾವೀಭವನ ಕ್ರಿಯೆ. ನೋಡಗಟ್ಟಿ ಮುಳಿಗೆರೆಯುವ ನೃತ್ಯಯಜ್ಞ. ಭೂತಕಾಲಕ್ಕೆ ಒದಗಿಬರುವ ಮಳೆಯ ವರ್ತಮಾನ. ಹಳೆಯದರ ನೆಲೆಗಟ್ಟನ್ನು ಸೀಳಿಕೊಂಡು ಹುಟ್ಟಿ ಬರುವ ಹೊಸ ಸೃಷ್ಟಿಗಾಗಿನ ಈ ಸಂಕೀರ್ಣ ಸಂಘರ್ಷ ನಮ್ಮಿಂದ ಅತ್ಯಂತ ಎಚ್ಚರದ ಪಾಲುಗೊಳ್ಳುವಿಕೆಯನ್ನು ಬಯಸುತ್ತದೆ. ಇದಕ್ಕೆ ಹಿನ್ನೆಲೆಯಲ್ಲಿ ನಡೆಯಬೇಕಾದ ಸಾಂಸ್ಕೃತಿಕ ಚರ್ಚೆ ವಾದ ವಿವಾದಗಳಿಗೆ ವೇದಿಕೆಯಾಗುವ ದಿಕ್ಕಿನಲ್ಲಿ ಸಂವಾದ ತನ್ನ ಆಶಯಗಳನ್ನು ತೊಡಗಿಸಿಕೊಂಡಿದೆ.

○

'ಸಂವಾದ'ದ ಮೊದಲ ವರ್ಷದ ಆರು ಸಂಚಿಕೆಗಳು ತಮ್ಮ ಮಿತಿಯಲ್ಲಿ ಇದೇ ದಿಕ್ಕಿನಲ್ಲಿ ಕೆಲಸ ಮಾಡಿವೆ ಎನ್ನುವ ಭಾವನೆ ನಮ್ಮದು. ಕೊರತೆಗಳಿದ್ದರೆ ಅವುಗಳನ್ನು ಸೂಚಿಸಿದರೆ ಸರಿಪಡಿಸಿಕೊಳ್ಳುವ ಅವಕಾಶಗಳಿದ್ದೇ ಇವೆ. ಈ ಬಗ್ಗೆ ಬರೆಯಲು ವಿನಂತಿಸುತ್ತೇವೆ. ಅಲ್ಲದೇ 'ಸಂವಾದ'ದ ಅನಿಯಮಿತತನಕ್ಕಾಗಿ ವಿಷಾದಿಸುತ್ತ ಅದಕ್ಕಾಗಿ ಕ್ಷಮೆ ಕೇಳುತ್ತೇವೆ. ಹಳ್ಳಿಯಿಂದ ಹೊರಬರುವ

'ಸಂವಾದ'ದ ಮುದ್ರಣ ಕೆಲಸದಲ್ಲಿ ಒದಗಿಬರುತ್ತಿರುವ ಅಡಚಣೆಗಳನ್ನು ಹೇಳುವಾಗ ಈ ಅನಿಯಮಿತತನವನ್ನು ನಿಯಮಿತಗೊಳಿಸಿಕೊಳ್ಳುತ್ತೇವೆಂದು ದಯವಿಟ್ಟು ಭಾವಿಸಬಾರದಾಗಿ ಕೇಳಿಕೆ. ನಮ್ಮ ಮಿತಿಗಳನ್ನು ಮೀರುವ ಸರ್ವಪ್ರಯತ್ನಗಳನ್ನು ನಾವು ಮಾಡುತ್ತಲೇ ಇದ್ದೇವೆ. ನಮ್ಮ ಪ್ರಯತ್ನದಲ್ಲಿ ನಿಮ್ಮ ಸಹಕಾರಕ್ಕಾಗಿ ಕೇಳಿಕೊಳ್ಳುತ್ತೇವೆ. ಚಂದಾದಾರರು ತಮ್ಮ ಉದ್ರಿಯನ್ನು ತೀರಿಸಿದರೆ, ಚಂದಾ ನವೀಕರಿಸಿಕೊಂಡರೆ ಮತ್ತು ಹೊಸ ಚಂದಾದಾರರನ್ನು ಒದಗಿಸಿಕೊಟ್ಟರೆ ನಮ್ಮ ಪ್ರಯತ್ನಗಳಿಗೆ ಖಂಡಿತವಾಗಿಯೂ ಬಲ ದೊರೆಯುತ್ತದೆ.


○

ಇದರೊಂದಿಗೇ ಸಂವಾದ ಪ್ರಕಾಶನವು ತನ್ನ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳುವ ಹವಣಿಕೆಯೊಂದನ್ನು ಮಾಡುತ್ತಿದೆ. ಅದೆಂದರೆ ಪುಸ್ತಕ ಪ್ರಕಟಣೆ. ಇದಕ್ಕೆ ನಿಮ್ಮೆಲ್ಲರ ಒತ್ತಾಸೆ ದೊರೆತರೆ ಇದನ್ನು ಒಂದು ವ್ಯಾಪಕ ಚಳುವಳಿಯಂತೆ ಬೆಳೆಸಬಹುದು. ಈ ಬಗ್ಗೆಯೂ ನಿಮ್ಮ ಸಹಕಾರಕ್ಕಾಗಿ ಸಲಹೆ ಸೂಚನೆಗಳಿಗಾಗಿ ಕೇಳಿಕೊಳ್ಳುತ್ತೇವೆ. ಸಂವಾದ ಪ್ರಕಾಶನದ ಮೊದಲ ಪುಸ್ತಕವಾಗಿ ಕನ್ನಡದ ಹೊಸಧ್ವನಿ, ಗೆಳೆಯ ಚಂದ್ರಶೇಖರ ತಾಳ್ಯರ ಕವನ ಸಂಕಲನ ಪ್ರಕಟಗೊಳ್ಳುತ್ತಿದೆ.

ನಮ್ಮ ಈ ಎಲ್ಲ ಸಾಂಸ್ಕೃತಿಕ ಪ್ರಯತ್ನಗಳಿಗೆ ನಿಮ್ಮ ಸಹಕಾರಕ್ಕಾಗಿ ಕೇಳಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ನಿಮ್ಮ



ಖಾಸಗೀ ಪ್ರಸಾರಕ್ಕಾಗಿ

ಸಂವಾದ

(೮)

ಈ ಸಂಕಲನದ ಸಂಪಾದಕರು :

ಡಿ. ಎಸ್. ನಾಗಭೂಷಣ

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ.

ವಿಳಾಸಗಳು

- **ಡಾ|| ಕೆ. ಶಿವರಾಮಕಾರಂತ,** 'ಸುಹಾಸ', ಸಾಲಿಗ್ರಾಮ, ದ. ಕ.
- **ಬೊಳುವಾರು ಮೊಹಮ್ಮದ್ ಕುಂಞ,** ಸಿಂಡಿಕೇಟ್ ಬ್ಯಾಂಕ್ ಪ್ರಧಾನ ಕಛೇರಿ, ಮಣಿಪಾಲ.
- **ಜಿ. ಪಿ. ಬಸವರಾಜು,** ಪ್ರಜಾವಾಣಿ ವರದಿಗಾರರು, ಮಿಲಾಗ್ರಿಸ್ ಕಟ್ಟಡ, ಮಂಗಳೂರು–1
- **ಪ್ರಭಾಕರ ಶಿಶಿಲ,** ಕನ್ನಡ ಅಧ್ಯಾಪಕ, ನೆಹರೂ ಸ್ಮಾರಕ ಕಾಲೇಜು, ಸುಳ್ಯ (ದ. ಕ.)
- **ಎಚ್. ಎಸ್. ಶಿವಪ್ರಕಾಶ್,** ಇಂಗ್ಲೀಷ್ ಅಧ್ಯಾಪಕರು, ಗೃಹ ವಿಜ್ಞಾನ ಕಾಲೇಜು, ಬೆಂಗಳೂರು
- **ಹರಿಯಪ್ಪ ಪೇಜಾವರ,** ಎಂ.ಎ., ವಿದ್ಯಾರ್ಥಿ, ಇಂಗ್ಲೀಷ್ ವಿಭಾಗ, ಮಂಗಳಗಂಗೋತ್ರಿ, ಕೊಣಾಜೆ (ದ. ಕ.)
- **ಕೆ. ಪಿ. ನಟರಾಜ್,** ಪ್ರೆಸ್‌ಷಾಪ್, ಎಚ್. ಎಂ. ಟಿ. ಕೈಗಡಿಯಾರ ಕಾರ್ಖಾನೆ, ತುಮಕೂರು
- **ಡಾ|| ಸಿ. ಆರ್. ಚಂದ್ರಶೇಖರ್,** ಮನೋವೈದ್ಯರು, ನಿಮ್ಹಾನ್ಸ್, ಬೆಂಗಳೂರು
- **ಎಂ. ಟಿ. ಜಯಣ್ಣ,** ಬಾನುಲಿ ಕೃಷಿ ಅಧಿಕಾರಿ, ಆಕಾಶವಾಣಿ, ಬೆಂಗಳೂರು_1
- **ಡಾ|| ಪುರುಷೋತ್ತಮ ಬಿಳಿಮಲೆ,** ಕನ್ನಡ ಅಧ್ಯಾಪಕರು, ಮಂಗಳಗಂಗೋತ್ರಿ, ಕೊಣಾಜೆ (ದ. ಕ.)
- **ರಹಮತ್ ತರೀಕೆರೆ,** ಕನ್ನಡ ಅಧ್ಯಾಪಕರು, ಡಿ.ವಿ.ಎಸ್. ಜೂನಿಯರ್ ಕಾಲೇಜು, ಶಿವಮೊಗ್ಗ–1
- **ಶ್ರೀ ಕೃಷ್ಣ ಚೆನ್ನಂಗೋಡ್,** ಅಡ್ಯನಡ್ಕ, (ದ. ಕ.)
- **ರಹಮಾನ್ ಪಾಷಾ,** ಕಾರ್ಯಕ್ರಮ ಸಂಯೋಜಕರು ಆಕಾಶವಾಣಿ, ಬೆಂಗಳೂರು–1
- **ಡಿ. ಎಸ್. ನಾಗಭೂಷಣ,** ಕಾರ್ಯಕ್ರಮ ನಿರ್ವಾಹಕ, ಆಕಾಶವಾಣಿ, ಬೆಂಗಳೂರು–1

ಕಾರಂತ ಸಂದರ್ಶನ

ಶಿವರಾಮ ಕಾರಂತರೊಂದಿಗೆ ಮಾತಾಡುವುದೆಂದರೆ, ವಾದ ಮಾಡುವು ದೆಂದರೆ ಗಂಧದೊಡನೆ ಗುದ್ದಾಡಿದಂತೆ. ಇತ್ತೀಚೆಗೆ ಮಂಗಳೂರು ಆಕಾಶವಾಣಿ ಪರವಾಗಿ ಸಾಹಿತ್ಯ–ಕಲೆ–ಸಂಸ್ಕೃತಿಗಳಲ್ಲಿ ಆಸಕ್ತಿಯುಳ್ಳ ಮೂರ್‍ನಾಲ್ಕು ಜನ ಯುವ ಜನರು ಅರ್ಧ ತಾಸು ಅವರೊಂದಿಗೆ ಪ್ರಶ್ನೋತ್ತರ ನಡೆಸಿದರು. ಈ ಕಾರ್ಯ ಕ್ರಮದ ಕೆಲವು ಭಾಗಗಳನ್ನು ಇಲ್ಲಿ ಕೊಡುತ್ತಿದ್ದೇವೆ.

–ಸಂ.

ಜಿ. ಪಿ. ಬಸವರಾಜು : ನೀವು ಅನೇಕ ಪ್ರಕಾರಗಳಲ್ಲಿ ಕೆಲಸ ಮಾಡಿದ್ದೀರಿ– ಯಕ್ಷಗಾನ, ಚಿತ್ರಕಲೆ, ಸಾಹಿತ್ಯ ಇತ್ಯಾದಿ. ಇವುಗಳಲ್ಲಿ ನಿಮಗೆ ಹೆಚ್ಚು ಪ್ರಿಯ ವಾದದ್ದು ಮತ್ತು ಹೆಚ್ಚು ವಿಶ್ವಾಸ ಮೂಡಿಸುವಂತಹ ಪ್ರಕಾರ ಯಾವುದು ?

ಕಾರಂತ : ನೀವು ಪ್ರಕಾರ ಅನ್ನುವುದನ್ನ ಯಾವುದಕ್ಕೆ ಉಪಯೋಗಿಸ್ತೀರಿ, ಮಾಧ್ಯಮಕ್ಕೋ... ನನ್ನ ಬದುಕಿನ ಭಾವನೆಗಳನ್ನ ಹೊರತೋಡಿಕೊಳ್ಳತಕ್ಕಂತಹ ವಿವಿಧ ರೀತಿಯ ಪ್ರಯತ್ನಗಳನ್ನ ಪ್ರಕಾರ ಅಂತ ತಕ್ಕೊಂಡ್ರೆ, ಆ ಭಾವನೆಗಳಿಗೂ ಪ್ರಕಾರಕ್ಕೂ ಸಂಬಂಧ ಹೇಳುವ ವಿಷಯಕ್ಕೂ ಅದಕ್ಕೂ ಸಂಬಂಧ ಇರುತ್ತೆ. ನಮ್ಮ ಪ್ರೀತಿ ಅಂತ ಮೆಚ್ಚಿ ಸಾಕಿದ ವಸ್ತು ಅದಲ್ಲ. ನನ್ನ ದೃಷ್ಟಿಯಲ್ಲಿ ನನ್ನ ಅನುಭವ ಇಂತಹ ರೀತೀಲಿ ಹೇಳಿದ್ರೆ ಪರಿಣಾಮಕಾರಿಯಾಗುತ್ತೆ, ಇಂಥ ವಸ್ತು ವನ್ನ ಯಾವುದೋ ಒಂದು ದೃಶ್ಯರೂಪಕದಲ್ಲಿ ಹೇಳಿದ್ರೆ ಪರಿಣಾಮಕಾರಿಯಾಗುತ್ತೆ, ಇಂಥವು ಬರವಣಿಗೆಯಲ್ಲಿ ಹೇಳಿದ್ರೆ ಪರಿಣಾಮಕಾರಿಯಾಗುತ್ತೆ, ಇಂಥದ್ದು ಬಾಯಿ ಮುಚ್ಚಿಕೊಂಡು ಅಭಿನಯದಲ್ಲಿ ಹೇಳಿದ್ರೆ ಪರಿಣಾಮಕಾರಿಯಾಗುತ್ತೆ– ಹೀಗೆ ಇದು ಯಾವುದರಲ್ಲಿ ಏನೇನು ಆಗುತ್ತೇಂತ ನಾನು ಪ್ರಯೋಗ ಮಾಡಿದ್ದ ರಿಂದ ಸ್ವಾಭಾವಿಕವಾಗಿ ಹತ್ತು ತರದಲ್ಲಿ ಮಾಡಿಕೊಂಡು ಹೋಗಿದ್ದೇನೆ. ಯಾವು

ಮ ಪ್ರೀತಿ ಅಂದ್ರೆ- ಬದುಕಿನಲ್ಲಿ ಇಷ್ಟರವರೆಗೆ ಸಾವಿರ ವಸ್ತುಗಳ ಮೇಲೆ ಪ್ರೀತಿ ಮಾಡಿಸ್ತೇವೆ, ಮರೀತೇವೆ. ಯಾವುದೊಂತ ಹೇಳೋದು ನಮಗೆ ಗೊತ್ತಿರೋದಿಲ್ಲ. ನಾನು ಸಣ್ಣವನಿದ್ದಾಗಿನ ಹಾಗೆ ಈಗ ಇದ್ದೀನಾ ? ನಿನ್ನೆ ಇದ್ದ ಹಾಗೆ ಇವೊತ್ತು ಇದ್ದೇನಾ ? ಇಲ್ಲ, ಗೊತ್ತಿಲ್ಲ. ಆದ್ದರಿಂದ ನಿರ್ದಿಷ್ಟವಾಗಿ ಹೇಳುವ ಮಾತಲ್ಲ ಅದು.

ಬೊಳುವಾರು ಮಹಮ್ಮದ್ ಕುಂಞ : ತಮಗೆ ವೈಯಕ್ತಿಕವಾಗಿ ಯಾವುದು ಹೆಚ್ಚು ಫಲ ಕೊಟ್ಟಿದೆ, ಅದರಿಂದ ಹೆಚ್ಚು ಜನಕ್ಕೆ ತಲುಪಲಿಕ್ಕೆ ಸಾಧ್ಯ ಆಗುತ್ತೇಂತ ತಮಗನ್ನಿಸಿದೆ ?

ಕಾರಂತ : ಇಲ್ಲಿ ಫಲಕೊಡುವ ವಿಚಾರ ಏನಿಲ್ಲ. ನನಗೆ ಮನಸ್ಸಿಗೆ ಬಂದದ್ದು ದುಃಖವೋ ಸುಖವೋ ಇನ್ನೊಬ್ಬನಿಗೆ ಹೇಳ್ತೇನೆ. ತೋಡಿಕೊಳ್ತೇನೆ. ಅದರಿಂದ ಅವನ ಮೇಲೆ ಏನು ಪರಿಣಾಮ ಆಯ್ತು ತಿಳಿದಾಗ ಮಾತ್ರ ಫಲ ಬಂತೋ ಇಲ್ವೋ ಅಂತ ನನಗೆ ಗೊತ್ತಾಗೋದು... ಅಲ್ಲದೆ ಯಾವುದನ್ನ ಯಾವುದರ ಮೂಲಕ ಹೇಳ್ತೇನೆ ಅನ್ನೋದು ಬರುತ್ತೆ. ಎಲ್ಲಿ ವಿಚಾರ ಪ್ರಧಾನ ಆಗ್ತದೋ ಮನಸ್ಸು ಕೆಲಸ ಮಾಡ್ತದೋ ಆವಾಗ ಗದ್ಯ ಹೆಚ್ಚು ಪ್ರಯೋಜನ ಕೊಡುತ್ತೆ. ಯಾಕೇಂದ್ರೆ ಇಂಥಾದ್ದೇ ಮಾಡ್ತೀರಿ ಅಂತ ನಿಮಗೆ ಗೊತ್ತಿರುತ್ತೆ... ಈ ಭೂಮಿ ಹೀಗೆ ಆಯ್ತು, ಜೀವ ಹೀಗೆ ವಿಕಾಸ ಆಯ್ತು ಅಂತ ಹೇಳುವಾಗ ಇದು ಬೇರೆ. ಇವಕ್ಕೆ ಸಂಬಂಧಪಟ್ಟ ಯಾವುದೋ ಒಂದು ಸುಖ ದುಃಖವನ್ನ ಒಂದು ನಾಟಕ ಆಡೋದು ಬೇರೆ. ಕಾದಂಬರಿ ಬರೆಯೋದು ಬೇರೆ. ನಾನು ಇದನ್ನೂ ಮಾಡಿದವ, ಅದನ್ನೂ ಮಾಡಿದವ; ಆದದ್ದರಿಂದ ಯಾವುದು (ಹೆಚ್ಚು ಫಲ ಕೊಟ್ಟಿದೆ) ಅಂದ್ರೆ, ಯಾವುದಕ್ಕೋಸ್ಕರ ಮಾಡಿದ್ದೇನೆ ಅಂತ ಕೇಳ್ಬೇಕು. ನಾನು ಕನ್ನಡದಲ್ಲಿ ವಿಜ್ಞಾನ ಪುಸ್ತಕ ಬರೆದಿದ್ದೇನೆ. ತಿಳುವಳಿಕೆ ಕೊಟ್ಟಿದ್ದೇನೆ. ಏನು ಕಾರಣ ನಾನು ಓದಿದೆ, ಇನ್ನೊಬ್ಬರಿಗೆ ಕೊಡಬೇಕು ಅಂತ ಕೊಟ್ಟಿದ್ದೇನೆ. ನಾನು ವಿಜ್ಞಾನಿ ಅಂತ ಅಲ್ಲ. ನಮ್ಮ ಜನಾನ ಅತ್ಲಾಗೆ ಇತ್ಲಾಗೆ ನೋಡಿದಾಗ ಏನೂ ಇಲ್ವಲ್ಲಾಂತ ನಾನು ಓದಿಕೊಂಡು ಕಲಿತುಕೊಂಡು ದಾಟಿದ್ದೇನೆ. ಈ ಕ್ಷೇತ್ರ ಬೇರೆ- ಕಥೆ ಕಾದಂಬರಿ ಕ್ಷೇತ್ರ ಬೇರೆ. ಇದು ಮಾಡುವ ಕೆಲಸ ಬೇರೆ ಅದು ಮಾಡುವ ಕೆಲಸ ಬೇರೆ.

ಪ್ರಭಾಕರ ಶಿಶಿಲ : ಕಾದಂಬರಿ ಬರೆದದ್ದಕ್ಕೆ ಒಂದು ಉದ್ದೇಶ ಇದೆಯಾ ?

ಕಾರಂತ : ಬದುಕಿದ್ದಕ್ಕೆ ಎಷ್ಟು ಉದ್ದೇಶ ಇದೆಯೋ ಅಷ್ಟೇ ಉದ್ದೇಶ ಕಾದಂಬರಿ ಬರೆದದ್ದಕ್ಕೆ. ಬದುಕದೆ ಇದ್ರೆ ಇಲ್ಲ. ಇನ್ನು ಎರಡನೇ ಉದ್ದೇಶ ನಾನು ಕಾದಂಬರಿಕಾರ ಅಂತ ತೋರಿಸಲಿಕ್ಕೆ ...ಅದನ್ನು ಬಿಟ್ಟು ನಾನು ಬದುಕಿನಲ್ಲಿ ಏನು ಕಷ್ಟ ಸುಖ ಅನುಭವಿಸಿದ್ದೇನೆ, ಹ್ಯಾಗೆ ಇತರರು ನನ್ನ ಹತ್ರ ಕಷ್ಟ ಸುಖ ತೋಡಿಕೊಳ್ತಾರೋ ಹಾಗೇ ನಾನೂ ನನ್ನ ಕಷ್ಟ ಸುಖವನ್ನ ಬೇಕಾಗಲೀ ಬೇಡವಾಗಲೀ, ನನ್ನ ತೀರ್ಮಾನ ಸರಿ ಆಗಲಿ ಆಗದೆ ಬಿಡಲಿ, ಭಾಷೆಯ ಮೂಲಕ ತೋಡಿಕೊಳ್ತೇನೆ- ಬದುಕಿನೊಂದಿಗೆ ಹೊಂದಿ ಕೊಂಡದ್ದನ್ನ.

ಬಸವರಾಜು : ಇದಕ್ಕೆ ಸಂಬಂಧಿಸಿದಂತೆ, ನೀವು ಕಾದಂಬರೀನೇ ಯಾಕೆ ಆಯ್ಕೆ ಮಾಡ್ಕೊಂಡಿರಿ ? ಕಾವ್ಯ ನಿಮ್ಮನ್ನು ಸೆಳೀಲಿಲ್ವಾ ಅಥವಾ ಸಣ್ಣ ಕಥೆ ಮಾಧ್ಯಮ

ಕಾರಂತ : ಅದು ಯಾಕೆ ಸೆಳೆಯಬೇಕೂ ಅನ್ನೋದನ್ನ ನನಗೆ ಹೇಳಿ. ಇಡೀ ಮನುಷ್ಯನಿಗೆ ಮಾತೇ ಮುಖ್ಯವಾದ ಸಂಪರ್ಕ ಸಾಧನ. ಆ ಮಾತಿಗೆ ಯಾವ ಆಕಾರ ಇದೆ, ಇದು ಕಾವ್ಯ ಇದೆಯೋ, ಗದ್ಯ ಇದೆಯೋ ? ಪದ್ಯ ಬರೆಯದೇ ಇದ್ದದ್ದಕ್ಕೆ ನೀನು ಮಾತಾಡುವುದನ್ನ ನಿಲ್ಲಿಸಿದ್ದೀಯಾ ? ಕಾವ್ಯದಿಂದ ಯಾಕೆ ಹೇಳ್ಬೇಕು ? ಅದು ಬೇಕಲ್ವೆ ? ಅದು ಚಂದ ಅಂತಲೇ ? ಚಂದ ಅಲ್ಲ ಅಂತಲೂ ಅಲ್ಲ. ನನಗೆ ಮನಸ್ಸಿನ ಭಾವನೆ ತೋಡಿಕೊಳ್ಳಬೇಕಾಗಿದೆ. ಅದಕ್ಕೆ ಅನುಕೂಲವಾದ ಸಾಧನ ಗದ್ಯ ಇತ್ತು. ನನ್ನಲ್ಲಿ ಹೇಳುವ ವಸ್ತು ಇದೆ. ಅದು ಕೇಳಿ ಬಿಡಿ. ನಂದು ಪ್ರಾಮಾಣಿಕವಾಗಿದ್ರೆ, ಹೇಳಿದ ರೀತಿ ಸರಿಯಾಗಿದ್ರೆ, ಅವನಿಗೂ ಸಾಧಾರಣ ಅದೇ ರೀತಿಯ ಅನುಭವ ಇದ್ರೆ ಅದನ್ನ ವಿಚಾರ ಮಾಡ್ತಾನೆ ಆವಾಗ. ನನ್ನನ್ನು ಒಪ್ಪಲಿ ಬಿಡಲಿ, ಈ ಒಂದು ಅನುಭವ ಅವನಿಗೂ ಇದೇ ಅಂತ ಆವಾಗ ಈ ಒಂದು ಸಾಹಚರ್ಯ ನಾವೂ ನೀವೂ ಒಂದಾಗುವಂತಹ ಸಾಧನವಾಗಿರುತ್ತೆ.

ಜೊಳುವಾಜು ; ಆರಂಭದಲ್ಲಿ ನೀವು ಕೆಲವು ಒಳ್ಳೆಯ ನಾಟಕಗಳನ್ನು ಬರೆದಿರಿ. ಅವು ಹೆಚ್ಚು ಪ್ರಯೋಗ ಆಗಲಿಲ್ಲಾಂತ ಬರಿಯೋದು ನಿಲ್ಲಿಸಿದ್ರಾ ಹೇಗೆ ?

ಕಾರಂತ : ನಾಟಕ ಅನ್ನಬೇಕಾದ್ರೆ ನಾನೊಬ್ಬನೇ ಆಡಲಿಕ್ಕೆ ಬರೋದಿಲ್ಲ. ಕಾದಂಬರಿ ನಾನು ಗೀಚಬಹುದು. ಇಡಬಹುದು. ನೀವು ಓದಬಹುದು ಬಿಡ

ಬಹುದು. ನಾಟಕ ಯಾವ ರೀತಿಯಿಂದ ಪ್ರಯೋಜನ ಅಂತ ನಾವು ಬದುಕಿ ನೋಡಿದ್ದೇನೋ ಅದನ್ನ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಅಂದ್ರೆ ಯಕ್ಷಗಾನ ಆಟ ನೋಡಿದ್ದೇನೆ. ಕಂಪ್ನಿ ನಾಟಕ ನೋಡಿದ್ದೇನೆ. ಪ್ರಯೋಗ ಮಾಡಿದ್ರೂ ಕೂಡಾ ಆ ಪ್ರಯೋಗ ಕೊನೇವರೆಗೂ ಮುಂದುವರಿಸಿಕೊಂಡು ಹೋಗಬೇಕಾದ್ರೆ ನನ್ನನ್ನ ಮಾತ್ರ ಹೊಂದಿಕೊಂಡಿಲ್ಲ ಅದು. ಹತ್ತು ಜನರ ಮೇಲಿದೆ. ಭಂಡವಾಳದ ಪ್ರಶ್ನೆ ಬೇರೆ. ನನ್ನ ಅಭಿಪ್ರಾಯವನ್ನ ಹತ್ತು ಜನರ ಮುಖಾಂತರ ಹಾಕಬೇಕಾಗುತ್ತೆ. ಅದು ಗದ್ಯದ ಮುಖಾಂತರವೋ ಪದ್ಯದ ಮುಖಾಂತರವೋ ಅಥವಾ ದೃಶ್ಯದ ಮುಖಾಂತರವೋ ಇವೆಲ್ಲಾ ಬರುತ್ತೆ. ಆದ್ದರಿಂದ ಒಂದೊಂದು ಕಾಲದಲ್ಲಿ ಏನೇನು ಅವಕಾಶ ನನಗೆ ಸಿಕ್ತಿತು, ಮನಸ್ಸಿಗೆ ಬಂತು ಅದನ್ನ ಮಾಡಿಕೊಂಡು ಹೋಗಿದ್ದೇನೆ.

ಬಸವರಾಜು : ಅಭಿವ್ಯಕ್ತಿ ಮಾಧ್ಯಮವನ್ನ ಹುಡುಕಬೇಕಾದ್ರೆ ಕೆಲವು ಪ್ರಯೋಗಗಳನ್ನು ಮಾಡಬೇಕಾಗುತ್ತೆ ...

ಕಾರಂತ : ಒಂದು ವಿಷಯ. ಇಲ್ಲಿ ಅಭಿವ್ಯಕ್ತಿಯ ಮಾಧ್ಯಮವನ್ನ ಹುಡುಕುವ ಪ್ರಶ್ನೆ ಇಲ್ಲ. ನನ್ನ ಕಣ್ಣ ಮುಂದೆ ಇರುವಂತಹ ಅಭಿವ್ಯಕ್ತಿ ಮಾಧ್ಯಮವನ್ನ ನಾನು ನೋಡಿದ್ದೇನೆ. ನಾಟಕ ನೋಡಿದ್ದೇನೆ. ಸಂಗೀತ ಕೇಳಿದ್ದೇನೆ. ಆದ್ದರಿಂದ ಆ ಮಾಧ್ಯಮ ಹೇಗಿದೆ, ಅದು ಏನು ಮಾಡಿದೆ ಅನ್ನೋದನ್ನ ತಿಳಕೊಂಡು ನಾನು ಪ್ರಯತ್ನ ಮಾಡ್ತೇನೆ. ಮಾತಿನ ಮಾಧ್ಯಮ ನೀವು ಹುಡುಕಲಿಕ್ಕೆ ಹೋಗ್ತಿರೇನು ? ಇನ್ನು ಇಲ್ಲಿ ಇಲ್ಲದೇ ಇದ್ದ ಒಂದೆರಡು ನಾನು ಮಾಡಿರಬಹುದು. ನಮ್ಮಲ್ಲಿ ಒಪೇರಾ ಇಲ್ಲ. ಆ ಮಾಧ್ಯಮದಲ್ಲಿ ಸಂಗೀತವನ್ನೇ ಬಳಸಿ ಹ್ಯಾಗೆ ಮಾಡಬಹುದು– ಇದು ಪ್ರಯೋಗ. ಬಾಕಿ ಉಳಿದದ್ದು ನಾವು ಕಂಡ ಮಾಧ್ಯಮವೇ ನಾನೇನೂ ಹುಡುಕಿದ್ದಲ್ಲ. ನನಗೆ ಯಾವುದು ಅನುಕೂಲ ಆಯ್ತು, ಆ ಘಳಿಗೆಯಲ್ಲಿ ನನಗೆಷ್ಟು ಗೊತ್ತಿತ್ತು, ಏನು ಸಹಾಯ ಆಯ್ತು ಅದನ್ನ ಆರಿಸಿದ್ದೇನೆ. ಅದರಿಂದ ಮೂರು ಜನರಿಗೆ ನಿದ್ರೆ ಬಂದಿರಬಹುದು. ಪ್ರೋತ್ಸಾಹ ಇಲ್ಲದೇ ಹೋಗಿರಬಹುದು. ನನಗೆ ಬೇರೆ ಇನ್ನೊಂದು ಚಾಳಿ ಹಿಡಿದಿರಬಹುದು. ಮಾಡಿದ್ದೇನೆ ಅಷ್ಟೇ.

ಬೊಳುವಾರು : ಸಾಹಿತ್ಯಕ್ಕಿಂತ ಒಂದು ನಾಟಕದ ಮೂಲಕ ಹೆಚ್ಚು ಜನರನ್ನ ತಲುಪಲಿಕ್ಕೆ ಸಹಾಯವಾಗುತ್ತೆ. ತಮ್ಮ ನಾಟಕಗಳನ್ನು ತಾವು ಪ್ರದರ್ಶನ

ಮಾಡದಿದ್ರೂ ಬೇರೆಯವರು ಪ್ರದರ್ಶನ ಮಾಡುವುದೂ ಕಮ್ಮಿಯಾಗಿತ್ತಲ್ಲ ಯಾಕೆ ?

ಕಾರಂತ : ಬೇರೆಯವರ ಮೇಲೆ ನನಗೆ ಯಜಮಾನಿಕೆ ಕೊಟ್ಟದ್ದು ಯಾರು ? ಸ್ವಾಮೀ, ನಾನು ನಾಟಕ ಕಂಪ್ನಿಯವರನ್ನೇ ಹಿಡಿದು ಬರೆದುಕೊಟ್ಟಿದ್ದೇನೆ. ಆ ಕಂಪ್ನಿ ಎರಡು ವರ್ಷಗಳಲ್ಲಿ ದಿವಾಳಿಯಾಗಿದೆ. ಒಂದು ಊರಿಂದ ಇನ್ನೊಂದು ಊರಿಗೆ ಹೋಗುವಾಗ ಅವರು ಯಾವುದು ಅನುಭವಿಸಿದ್ದಾರೆ ಏನು ಮಾಡಿದ್ದಾರೆ, ನಾನು ಸ್ವಂತ ಕಂಪ್ನಿ ನಡೆಸಿದ್ದೇನೆ ನೋಡಿದ್ದೇನೆ.

ಬಸವರಾಜು : ಜನರ ಅಭಿರುಚಿಯನ್ನು ತಿದ್ದುವಲ್ಲಿ ಲೇಖಕನಿಗೆ ವಿಶೇಷವಾದ ಜವಾಬ್ದಾರಿ ಏನಾದ್ರೂ ಇದೆಯಾ ?

ಕಾರಂತ ; ತಾನು ಬ್ರಹ್ಮ ಅಂತ ತಿಳಕೊಳ್ಳಬೇಕು ಅವನು ನಿಮ್ಮನ್ನು ನೀವು ತಿದ್ದಿಕೊಳ್ಳಿ. ನಂದು ನಾನು ತೋಡಿಕೊಳ್ತೇನೆ. ನಾನೋಡಿದ್ದು ಚೆಂದ ಆದ್ರೆ ನಾ ನಡೆದ ಹಾಗೆ ನೀವು ನಡೀತೀರಿ. ಇಲ್ಲದಿದ್ರೆ ಇಲ್ಲ. ಈ ತಿದ್ದೋದು ಮಾಡೋದು ಇದೆಲ್ಲಾ ಸ್ಕೂಲ್ ಮಾಸ್ಟರಿಗೆ ಬಿಡಿ. ನೀವು ನಿಮ್ಮ ವರ್ಚಸ್ಸಿನಿಂದ ನಡೆದಾಗ ಅಭಿರುಚಿ ತಂತಾನೇ ತಿದ್ದುತ್ತೆ. ಸಮಾಜ ಅದನ್ನ ನೋಡ್ಕೊಳ್ಳುತ್ತೆ. ಆದ್ದರಿಂದ ಅಭಿರುಚಿ ತಿದ್ದುವಂಥ ದೊಡ್ಡ ಹೊರೆ ಹೊರಬೇಡಿ. ನಿಮ್ಮ ಬದುಕನ್ನ ಸರಿಯಾಗಿ ನಿರ್ವಹಿಸಿ.

ಪದ್ಮಜಾ : ಜನಜೀವನದೊಂದಿಗೆ ಒಂದಾಗಿ ಬೆರೆತದ್ದೇ ತಮ್ಮ ಶ್ರೇಷ್ಠ ಕಾದಂಬರಿಗಳ ವಸ್ತುವಾಗಿರಬಹುದು. ಆ ಕುರಿತಾದ ಯಾವುದಾದರೊಂದು ಅನುಭವವನ್ನು ಹಂಚಿಕೊಳ್ಳಬಹುದೇ ?

ಕಾರಂತ : ಯಾವ ದಿವಸ ನಾನು ನಾನ್‌ಕೋಓಪರೇಷನ್ ಮೂವ್‌ಮೆಂಟ್ ತಕ್ಕೊಂಡು ಕಾಲೇಜ್ ಬಿಟ್ಟೆನೋ ಅಲ್ಲಿಂದ ತಿರುಗಾಡ್ತಾಲೇ ಇದ್ದೇನೆ. ಐದು ವರ್ಷ ಕಾಂಗ್ರೆಸ್ಸಿನ ಸಲುವಾಗಿ ಹಳ್ಳಿಯಲ್ಲಿ ಸುತ್ತಾಡುತ್ತಿದ್ದೆ. ಆ ಮೇಲೆ ನಾಟಕದ ಹುಚ್ಚಿನಿಂದ ಹತ್ತು ವರ್ಷ ಸುತ್ತಾಡ್ತಾ ಇದ್ದೆ. ಹೀಗೆ ಬೇರೆ ಬೇರೆ ಜನರ ಜೊತೆಯಲ್ಲಿ ಬೆರೆತದ್ದರಿಂದ ಒಂದು ವಿಶಾಲವಾದ ಆವರಣದ ಕಲ್ಪನೆ, ಜನರ ಸ್ಥೂಲವಾದ ಬದುಕಿನ ರೀತಿ ಇವರ ಪರಿಚಯ ಆದದ್ದರಿಂದ ವಸ್ತು ವೈವಿಧ್ಯವೋ ಇನ್ನೊಂದೋ ಆಯ್ಕೆ ಮಾಡಲಿಕ್ಕೆ ಸಿಗುತ್ತೆ. ಉದಾಹರಣೆಗೆ ಚೋಮ ಅನ್ನೋ

ವಾಗ ಆ ರೀತಿ ದುಡಿಬಾರಿಸಿ ತನ್ನ ದಾಟು ತೋಡಿಕೊಂಡವನನ್ನ ಕಣ್ಣಿಗೆ ಕಂಡಿದ್ದೇನೆ. ಇದು ಆ ಜೀವಂತ ವಸ್ತುಗಳ ಪ್ರೇರಣೆ.

ಶಾಲೆ ಬಿಡುವಾಗ ನನಗೆ 19 ವರ್ಷ. ಕಾಲೇಜ್ ಫಸ್ಟ್ ಇಯರ್‌ನಲ್ಲಿ ಬಿಟ್ಟೆ-ಕಾಲೇಜ್ ಬಿಟ್ಟು ಸೀದಾ ಖಾದಿ ಪ್ರಚಾರ, ಹರಿಜನ ಪ್ರಚಾರ, ಗಾಂಧಿ ಮೂವ್‌ಮೆಂಟ್ ಅಂತ ತಕ್ಕೊಂಡು ಕುಂದಾಪುರ ತಾಲ್ಲೂಕಿನಲ್ಲಿ ಪ್ರತಿ ಹಳ್ಳಿಗೂ ಸುತ್ತಾಡಿಕೊಂಡು ಗೋಡೆಗೂ ಉಪನ್ಯಾಸ ಮಾಡಿಕೊಂಡು ಖಾದಿ ಉತ್ಪನ್ನ ಮಾಡಿ ಬಣ್ಣ ಕೊಟ್ಟು ಮಾರಾಟಮಾಡಿ ಅದರಿಂದಲೂ ನಿರಾಶೆಯಾಡಿ....ಹಾಗೇ ಹಾಗೇ ಆಗ್ತಾ ಬಂತು. ಆಗ ನನಗೆ ಅನ್ನ ಹಾಕಿದ ಕೆಲವು ಸ್ನೇಹಿತರಿದ್ದರು. ಆದರ್ಶ ಗಾಂಧಿ.... ಮಾತು ಗೀತು ಅವರಿಂದಲೇ ಕಲಿತದ್ದು. ಯಂಗ್ ಇಂಡಿಯಾ ಓದಿಕೊಳ್ಳೋದು ಅವನೇ ನಾನು ಅಂತ ತಿಳಕೊಂಡು ಮಾತಾಡೋದು.

ಬೊಳುವಾರು : ನೀವು ಆಗಾಗ ಬಾಂಬೆಗೆ ಕೂಡಾ ಹೆಚ್ಚಾಗಿ ಹೋಗ್ತೀರಲ್ಲ.

ಕಾರಂತ : 1921 ನೇ ಇಸ್ವಿಯಿಂದ 1987 ನೇ ಇಸ್ವಿಯವರೆಗೆ ಪ್ರತಿ ವರ್ಷ ಬಾಂಬೆಕ್ಕೆ ಹೋಗಿದ್ದೇನೆ.

ಬೊಳುವಾರು : ಏನಷ್ಟು ಆಸಕ್ತಿ ಅಲ್ಲಿ ತಮಗೆ ?

ಕಾರಂತ : ಏನಷ್ಟು ಅಂದ್ರೆ ನಮ್ಮೂರಿನ ಜನ ಇದ್ದಾರೆ, ಸ್ನೇಹಿತರಿದ್ದಾರೆ. ಹೋದ್ರೆ ಅನ್ನ ಹಾಕ್ತಾರೆ. ಮತ್ತೆ ಬೇರೆ ತರದ ಕೆಲವು Influence-Cosmopolitan Influence, Art ಗೆ ಸಂಬಂಧಿಸಿದ Influence ನಮ್ಮಲ್ಲಿ ಇಲ್ಲಿ ನೋಡಲಾಗದ್ದು ಅಲ್ಲಿ ನೋಡಲಿಕ್ಕೆ ಸಿಗ್ತದೆ. ಆವಾಗ ನನಗೆ ನಾಟಕದ ಕೆಲವು ಮಾಡಲ್ಸ್ ಬಾಂಬೆ ಥಿಯೇಟರ್‌ನಲ್ಲಿ ಸಿಕ್ತು ಅಷ್ಟೇ ಗದ್ದಲ ಸಿಗ್ತದೆ ಆದರೆ Sympathy ಇದ್ದಂತಹ ಒಂದು ನಾಲ್ಕು ಜನ ಅಲ್ಲಿ ಹೋಗಿ ಇದ್ದವರು ನನ್ನ ಗೆಳೆಯರು ಇದ್ದಾರೆ. ಆದ್ದರಿಂದ ನಾನು ಹೋಗ್ತಾ ಇದ್ದೆ.

ಪದ್ಮಜಾ : ನಿಮ್ಮ ಈ ಸಂಚಾರಿ ಜೀವನವೇ ನಿಮಗೆ ಜೀವನದಲ್ಲಿ ಪ್ರಭುತ್ವ ಸಾಧಿಸಲಿಕ್ಕೆ ಸಹಾಯ ಮಾಡಿತೇ ?

ಕಾರಂತ : ಇದು ಪ್ರಭುತ್ವ ಅಂತ ಅನ್ನಿಸೋದೇ ಇಲ್ಲ. ಸಂಚಾರಿ ಜೀವನ ಜೀವನ ಅರ್ಥ ಮಾಡಿಕೊಳ್ಳೋಕೆ ಸ್ವಲ್ಪ ಸಹಾಯ ಮಾಡಿತು. ಪ್ರಭುತ್ವದ ಪ್ರಶ್ನೆಯೇ ಇಲ್ಲ . Victory in Death ಅಷ್ಟೆ ... ಏನಿದು ಯಾಕೆ ಮನುಷ್ಯ ಹೀಗೆ ಮಾಡ್ತಾನೆ ಇದನ್ನ ತಿಳಕೊಳ್ಳೋಕೆ ಅವಕಾಶ ಸಿಗುತ್ತೆ ಅಷ್ಟೆ.

ಬಸವರಾಜು : ನಿಮ್ಮ ಕಾದಂಬರಿಗಳಿಗೆ ದ್ರವ್ಯವೂ ಸಿಕ್ತಲ್ಲಾ ಸರ್.

ಕಾರಂತ : ಅದು ಹುಡುಕಿಕೊಂಡು ಹೋದದ್ದಲ್ಲ. ಪಾಶ್ಚಾತ್ಯರಲ್ಲಿ ಇನ್ನೊಬ್ಬರ ಬಗ್ಗೆ ಕಾದಂಬರಿ ಬರೀಬೇಕು ಅಂತ ಅಲ್ಲಿಗೆ ಹೋಗಿ ಇರ್ತಾರೆ. ನಾನು ಹಾಗೆ ಮಾಡಿದ್ದು ಕಡಿಮೆ. ಕುಡಿಯರ ಕೂಸು ಒಂದೇ ಹುಡುಕಿಕೊಂಡು ಹೋದದ್ದು. ನನ್ನ ಮೈಮೇಲೆ ಬಿದ್ದ ವಸ್ತುವನ್ನ ಅಥವಾ ಸನ್ನಿವೇಶವನ್ನ ತಕ್ಕೊಂಡು ಬರೀ ತೇನೆ. ಅದು ಇಲ್ಲದಿದ್ದರೆ ಬರೀಲಿಕ್ಕೆ ವಸ್ತು ಇಲ್ಲ.

ಬೊಳುವಾರು : ತಮ್ಮ ಇತ್ತೀಚಿನ ಕಾದಂಬರಿಗಳು ಹಿಂದಿನವುಗಳ ಹೋಲಿಕೆ ಯಲ್ಲಿ ಚೆನ್ನಾಗಿ ಇಲ್ಲ ಅನ್ನುವ ಆರೋಪ ಇದೆ.

ಕಾರಂತ : ಅವನನ್ನ ಶೂಲಕ್ಕೇರಿಸಿ ಶಿಕ್ಷೆ ಕೊಟ್ಬಿಡಿ.

ಬೊಳುವಾರು : ಯಾರನ್ನ ?

ಕಾರಂತ : ಬರೆದವನನ್ನ.... ಜನರ ಅಭಿಪ್ರಾಯಕ್ಕೆ ನಾನು ಹೊಣೆ ಅಲ್ಲ. ನಾನು ಬರಿಯೋದು ನನ್ನ ಅನುಭವ ಹೇಳಲಿಕ್ಕೆ. ನನ್ನ ಮನಸ್ಸಿಗೆ ಕಂಡದ್ದನ್ನು ನಾನು ತೋಡಿಕೊಂಡಿದ್ದೇನೆ– ನನ್ನ ತೃಪ್ತಿ ಅಲ್ಲಿ. ಓದುಗರಿಗೆ ಅವರವರ ಪ್ರಾಯದ ಮೇಲೆ, ಅವರವರ ವಿಚಾರ ಸರಣಿಯ ಮೇಲೆ, ಅವರವರಿಗೆ ಬೀಸಿದ ಗಾಳಿಯ ಮೇಲೆ ಹೋಗುತ್ತೆ ಅಭಿಪ್ರಾಯ.

ವಿಮರ್ಶಕರ ಅಭಿಪ್ರಾಯ ನಾನು ಹೆಚ್ಚಿಗೆ ತಲೆಗೆ ಹಚ್ಚಿಕೊಂಡಿಲ್ಲ. ಕೆಲವು ವಿಮ ರ್ಶಕರು ಯಾವ ವಿಷಯ ತನಗೆ ಗೊತ್ತಿಲ್ಲವೋ ಅದರ ಮೇಲೆ ಪ್ರಬುದ್ಧವಾಗಿ ಇದು ಒಳ್ಳೆಯದು ಎಲ್ಲರೂ ಓದಲೇ ಬೇಕಾದಂಥದ್ದು ಹೀಗೆ ಅದು ವಿಮರ್ಶೆ ಮಾಡಿದವನ ತೂಕದ ಮೇಲೆ ಹೊಂದಿಕೊಂಡಿರುತ್ತೆ. ವಿಮರ್ಶೆ ಮಾಡಿದ ಮನುಷ್ಯ

ನಾನು ನನ್ನ ಅಂತೆಯಲ್ಲಿ ನನಗಿಂತ ಬೆಳೆದವ ಅಂತ ಕಂಡಾಗ ಅವ ಏನು ಹೇಳಿದರೂ ನಾನು ತಲೆ ಹಾಕಬೇಕಾಗ್ತದೆ.

ಬೊಳುವಾರು : ನಮ್ಮಂತಹ ಅಂಬರೆ ಸಾಹಿತಿಗಳಿಗೆ ನೀವು ಏನಾದರೂ ಹೇಳೋದು ಇದೆಯಾ ಸರ್ ?

ಕಾರಂತ : ಇಲ್ಲಿ ನೀವು ಓದಿಕೊಳ್ಳಿ, ರೇಡಿಯೋ ಕೇಳಿ ಏನಾದ್ರೂ ಮಾಡಿಕೊಳ್ಳಿ ಜ್ಞಾನ ಸಂಪಾದನೆಗೆ. ಆದರೆ ನೀವು ನಿಮ್ಮ ಪಾಲಿಗೆ ಆಸಕ್ತಿ ಇರುವ ಬದುಕಿನ ಕ್ಷೇತ್ರ ಯಾವುದೊಂತ ಮೊದಲು ನೋಡಿಕೊಳ್ಳಿ. ಯಾಕೆಂದ್ರೆ ಎಲ್ಲವನ್ನೂ ನಾನು ತಿಳ್ಕೊಲಿಕ್ಕೆ ಹೋಗ್ತೇನೆ ಅಂದ್ರೆ ಏನೂ ಆಗೊಲ್ಲ.... ಆ ಕ್ಷೇತ್ರದಲ್ಲಿ ನೀವು ಸ್ವಂತ ವಿಚಾರ ಮಾಡಲಿಕ್ಕೆ ಕಲೀರಿ. ನಿಮಗೆ ಬೇಕಾದ ವಿಚಾರ ಅಲ್ಲ.... ಎಷ್ಟು ಭಿನ್ನ ಅಭಿಪ್ರಾಯಗಳಿದ್ದಾವೆ, ಎಷ್ಟು ವಿಷಯಗಳು ಅಡಕವಾಗಿದ್ದಾವೆ, ಯಾಕೆ ಹೀಗೆ ಮಾಡ್ತಾನೆ ಮನುಷ್ಯ ಅಂತ ನೀವು ವಿಚಾರ ಮಾಡಲಿಕ್ಕೆ ಕಲಿತಾಗ ನಿಮ್ಮ ಪಾಲಿನದೇನಾದ್ರೂ ಒಳ್ಳೆಯ ಮಾತು ಇನ್ನೊಬ್ಬರಿಗೆ ಹೇಳಲಿಕ್ಕೆ ಬರುತ್ತೆ. ಏನೂ ಗೊತ್ತಿರದೆ ವಿಚಾರ ಮಾಡಲಿಕ್ಕೆ ಹೊರಟರೆ ಏನೂ ಆಗೋದಿಲ್ಲ. ಯಾವ ಕ್ಷೇತ್ರಾನೇ ಆಗಲಿ, ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನ ವಿಚಾರ ಮಾಡಲಿಕ್ಕೆ ಕಲಿಯ ಬೇಕಾಗ್ತದೆ. ಕೇಳಿದ್ದನ್ನೆಲ್ಲಾ ನುಂಗಿಕೊಂಡು ಆವೇಶದಲ್ಲಿ ತಕ್ಕೊಂಡವನು ಏನೂ ಕೆಲಸ ಮಾಡಲಾರ. ಅವನು ನಾಲ್ಕು ಜನ ಹೊಡೀಲಿಕ್ಕೆ ಹೋದ್ರೆ ಬಾಕಿಯವರೊಟ್ಟಿಗೆ ಇವನೂ ಸೇರ್ತಾನೆ. ಇಲ್ಲದಿದ್ದರೆ ಇವನೂ ಇಲ್ಲ. ನಿಷ್ಕ್ರಿಯ.

ಇವೊತ್ತು ಏನು ಬರೆಯುವುದಕ್ಕೂ ಒಂದು ಜವಾಬ್ದಾರಿ ಇದ್ದು ಬರೀತೇವಾ ? ಯಾವ ಜವಾಬ್ದಾರಿಯೂ ಇಲ್ಲ. ಇವತ್ತು ಕಾಣುವಂತಹ ಬರವಣಿಗೆಯಲ್ಲಿ ಇನ್ನೊಬ್ಬರಿಗೆ ಒಳ್ಳೆ ಬೈದರೆ ಖುಷಿ ಆಗುತ್ತೆ. ಬರೇ ಅವನ್ನೇ ನೋಡಿಕೊಂಡು ಹೋಗ್ತೇವೆ. ಆವಾಗ ಸತ್ಯ ಸಿಗ್ತದಯೇ ನಮಗೆ ? ಹೊಗಳಲಿಕ್ಕಾಗಲೀ ಬೈಯಲಿಕ್ಕಾಗಲೀ– ಅದಷ್ಟು ನಮ್ಮ ಮಟ್ಟಿಗೆ ಯಾಕೆ ನಾನು ಕೈಎತ್ತಿದೆ ಅಂತ ನಮ್ಮ ಮಟ್ಟಿಗೆ ಗೊತ್ತಿರಬೇಕಾಗುತ್ತೆ. ಆ ವಿಚಾರ ಮಾಡಲಿಕ್ಕೆ ಕಲಿಯಬೇಕಾಗ್ತದೆ ಬದುಕು ಕಟ್ಟೋದಕ್ಕೆ. ಸಾಮಾನ್ಯವಾಗಿ ಜನರಿಗೆ ಬದುಕಿನ ಕಷ್ಟವೇ ಹೆಚ್ಚಾಗಿದ್ದಾಗ ಇದು ಮತ್ತೆ ತಲೆತಿನ್ನುವ ಹಾಗೆ ಆಗುತ್ತೆ.

(ಧ್ವನಿ ಮುದ್ರಣದಿಂದ ಹಸ್ತ ಪ್ರತಿಯನ್ನು ಸಿದ್ಧಪಡಿಸಿಕೊಟ್ಟ ಗೆಳೆಯ ಎಂ. ಬಿ. ಪಾಟೀಲರಿಗೆ ಸಂವಾದದ ಕೃತಜ್ಞತೆಗಳು)

‘ಷೇಕ್ಸ್‌ಪಿಯರ್ ಸ್ವಪ್ನ ನೌಕೆ’

‘ಷೇಕ್ಸ್‌ಪಿಯರ್ ಸ್ವಪ್ನ ನೌಕೆ’, ಎಚ್. ಎಸ್. ಶಿವಪ್ರಕಾಶ್ ಅವರ ಇತ್ತೀಚಿನ ನಾಟಕ. ಷೇಕ್ಸ್‌ಪಿಯರ್‌ನ ನಾಟಕ ಭಾಗಗಳ ಮೂಲಕವೇ ಷೇಕ್ಸ್‌ಪಿಯರ್‌ನ–ವ್ಯಕ್ತಿತ್ವವನ್ನೂ, ಆ ವ್ಯಕ್ತಿತ್ವವನ್ನು ರೂಪಿಸಿದ ಕಾಲದ ‘ವ್ಯಕ್ತಿತ್ವ’ವನ್ನೂ, ಇಂದಿಗೂ ಸಮಕಾಲೀನವೆನ್ನಿಸುವ ಅದರ ರಾಜಕೀಯ ಧ್ವನಿಗಳೊಂದಿಗೆ ಹಿಡಿದಿಡುವ ಪ್ರಯತ್ನ ಮಾಡಲಾಗಿರುವ ಈ ನಾಟಕದ ಆಯ್ದ ಒಂದು ಭಾಗವನ್ನು ಇಲ್ಲಿ ಕೊಡುತ್ತಿದ್ದೇವೆ.

–ಸಂ.

(ರಂಗದ ಒಂದು ಭಾಗ ಬೆಳಕಾದಾಗ ಅದು ಅರ್ಲ್ ಆಫ್ ಸೌದ್ಯಾಂಪ್ಟನ್ನನ ತೋಟವಾಗಿರುತ್ತದೆ. ಷೇಕ್ಸ್‌ಪಿಯರ್, ಅರ್ಲ್ ಆಫ್ ಸೌದ್ಯಾಂಪ್ಟನ್ನನಿಗೆ ವಿದಾಯ ಹೇಳಲು ಬಂದಿರುತ್ತಾನೆ.)

ಅರ್ಲ್ ಆಫ್ ಸೌದ್ಯಾಂಪ್ಟನ್–ವಿಲ್, ಇಷ್ಟು ಅನಿರೀಕ್ಷಿತವಾಗಿ ಎಲ್ಲಿ ಹೊರಟಿದ್ದೀಯ ?

ಷೇಕ್ಸ್‌ಪಿಯರ್–ಲಂಡನ್ನಿನ ತುಂಬಾ ಪ್ಲೇಗು. ತಾತ್ಕಾಲಿಕವಾಗಿ ಕಂಪನಿಗಳನ್ನ ಮುಚ್ಚಿದ್ದಾರೆ. ಇನ್ನೆಲ್ಲಾದ್ರೂ ಹಳ್ಳಿಗಾಡಿಗೇ ಹೋಗಿ ನಾಟಕ ಆಡಿ ಹೊಟ್ಟೆ ಹೊರಕೊಳ್ತೀವಿ.

ಅರ್ಲ್ ಆಫ್ ಸೌದ್ಯಾಂಪ್ಟನ್–ಏನು, ನಿನ್ನ ಹೊಟ್ಟೆಯೇ ನಿನ್ನ ಪ್ಲೇಗು ಅನ್ನೊ ಹಾಗೆ ಮಾತಾಡ್ತೀಯ ? ಈ ಲಂಡನ್, ಈ ಪ್ಲೇಗು, ನಿನ್ನ ಕಂಪನಿ ಎಲ್ಲಾ ಥೇಮ್ಸ್ ನದಿಯಲ್ಲಿ ಮುಳುಗಿಹೋಗಲಿ. ನೀನು ಮಾತ್ರ ನನ್ನ ಬಳಿ ಇರು.

ಷೇಕ್ಸ್‌ಪಿಯರ್–ಹಾಗಿದ್ದರೆ ಈ ಪ್ಲೇಗು- ನನ್ನ ಹೊಟ್ಟೆ ಪಾಡು ?

ಅರ್ಲ್ ಆಫ್ ಸೌದ್ಯಾಂಪ್ಟನ್–ನನ್ನ ಹೊಟ್ಟೆಯ ಪ್ಲೇಗುಗಳಿಗೆಲ್ಲ ನಿನ್ನ ಕವಿತೆಯೇ ಔಷಧಿ. ಇನ್ನು ಮೇಲೆ ನಿನಗು ಅಷ್ಟೆ.

ಷೇಕ್ಸ್‌ಪಿಯರ್-ಇದು ಬರೀ ನನ್ನ ಹೊಟ್ಟೆಪಾಡಿನ ಪ್ರಶ್ನೆ ಅಲ್ಲ, ಮೈಲಾರ್ಡ್ ನಿಮ್ಮ ಇಡೀ ಕಂಪನಿಯವರ ಹೊಟ್ಟೆಪಾಡು.

ಅರ್ಲ್ ಆಫ್ ಸೌದ್ಯಾಂಪ್ಟನ್-ಹಾಗಿದ್ರೆ ನೀನು ಹೊರಟು ಹೋಗ್ತಿಯ ? ನಾನೇನು ಮಾಡಲಿ ? ದಿನಕ್ಕೊಂದು ಸಲ ನಿನ್ನ ಹೊಸ ಕವಿತೆನ ಕೇಳ್ದೆ ಇದ್ರೆ ನನಗೆ ಜೀರ್ಣ ಆಗಲ್ಲ. ಒಂದು ಒಳ್ಳೆ ಕನಸೂ ಬೀಳೊಲ್ಲ. ನಿದ್ದೇನೇ ಬರೋಲ್ಲ.

ಷೇಕ್ಸ್‌ಪಿಯರ್-ಮೈ ಲಾರ್ಡ್ ನಾನು ಮತ್ತೆ ಆದಷ್ಟು ಬೇಗ ವಾಪಾಸ್ಸು ಬರುತ್ತೇನೆ.

ಅರ್ಲ್ ಆಫ್ ಸೌದ್ಯಾಂಪ್ಟನ್-ಎಷ್ಟು ಬೇಗ ?

ಷೇಕ್ಸ್‌ಪಿಯರ್-ಈ ಪ್ಲೇಗು ತೊಲಗಿದಷ್ಟು ಬೇಗ. ನಾನು ದೂರ ಹೋದ್ರೂ ನಿಮ್ಮ ಹತ್ತಿರನೇ ಇರ್ತೀನಿ. ನನ್ನ ಬಳಿ ನಿಮ್ಮ ಪ್ರೇಮದ ನಿಶಾನೆ ಈ ಉಂಗುರ ಹಗಲು-ರಾತ್ರಿ ಇದ್ದೇ ಇರುತ್ತೆ.

ಅರ್ಲ್ ಆಫ್ ಸೌದ್ಯಾಂಪ್ಟನ್-ಎಲ್ಲಿದ್ದರೂ ನನ್ನ ಮೇಲೆ ಕವಿತೆ ಬರೀತನೇ ಇರ್ತೀಯಾ ತಾನೆ ?

ಷೇಕ್ಸ್‌ಪಿಯರ್-ಖಂಡಿತ. ಆದ್ರೆ ನಾನೂ ಬರೊ ಹೊತ್ತಿಗೆ ನಿಮಗೆ ನಿಮ್ಮಂಥದೇ ಒಂದು ಮಗು ಆಗಿರುತ್ತೆ ತಾನೆ ?

ಅರ್ಲ್ ಆಫ್ ಸೌದ್ಯಾಂಪ್ಟನ್-ನಿನ್ನನ್ನು ಪ್ಲೇಗು ತಿಂದು ಹಾಕಲಿ. ತೊಲಗು ಇಲ್ಲಿಂದ.

(ಷೇಕ್ಸ್‌ಪಿಯರ್ ಹೋಗತೊಡಗುತ್ತಾನೆ)

ಅರ್ಲ್ ಆಫ್ ಸೌದ್ಯಾಂಪ್ಟನ್-ವಿಲ್, ವಿಲ್, ನಿಲ್ಲು. ಈ ಸಿಟ್ಟು ನನ್ನ ಪ್ರೀತಿಯ ಒಂದು ಮುಖ. ಹೋಗೋಕ್ಕೆ ಮೊದಲು ನನ್ನ ಮೇಲೆ ಒಂದು ಹೊಸ ಸಾನೆಟ್ಟು ಕಟ್ಟಿ ಹೋಗು-

ಷೇಕ್ಸ್‌ಪಿಯರ್-(ಸೌದ್ಯಾಂಪ್ಟನನ್ನು ನೋಡುತ್ತಾ ನಿಲ್ಲುತ್ತಾನೆ) ನನಗೆ ಮಾತೇ ಹೊರಡುತ್ತಾ ಇಲ್ಲ. ಇನ್ನು ಕವಿತೆ ಏನು ಕಟ್ಟಲಿ ?

ಅರ್ಲ್ ಆಫ್ ಸೌದ್ಯಾಂಪ್ಟನ್ ಪ್ರಯತ್ನ ಮಾಡು ವಿಲ್, ನೀನು ಇವತ್ತು ಕೊಡೋ ಕವಿತೆಯನ್ನ ನಾನು ಯಾವತ್ತೂ ಮರೆಯೋದಿಲ್ಲ. (ಜೇಬಿನಿಂದ ಒಂದು ಪುಸ್ತಕ ತೆಗೆದು) ಹೇಳು ನಾನು ಬರಕೊತೀನಿ.

ಷೇಕ್ಸ್‌ಪಿಯರ್-

ಎಲ್ಲ ಮುಗಿಸುವ ಕದನ ಕಣ್ಣು ಮನಗಳ ಮಧ್ಯೆ
ಹಂಚಿಕೊಳ್ಳುವುದು ಹೇಗೆ ಅವು ನಿನ್ನ ರೂಪವನ್ನು

ಕಣ್ಣು ಮನಸ್ಸಿಗೆ ಅಂತು- ನಿನಗಲ್ಲ ಆ ರೂಪ
ನನ್ನ ಹಕ್ಕು ಅಂತು ನನ್ನ ಹೃದಯ, ಪಾಪ.

ನನ್ನ ಹೃದಯ ಅಂತು ಹೊಕ್ಕಿರುವೆ ನೀ ಒಳಗೆ
ಯಾವ ರನ್ಧ್ರದ ಕಣ್ಣೂ ಹೋಗದಂತ ಒಳಕೋಣೆಯೊಳಗೆ
ತಿರಸ್ಕರಿಸುತ್ತಾನೆ ಕಣ್ಣು ಪಕ್ಷಿದಾರ- ತಪ್ಪು ಈ ವಾದ
ನೋಡು ನನ್ನೊಳಗಿದೆ ನಿನ್ನ ರೂಪದ ರೂಪ

ಈ ಮೊಕದ್ದಮೆಗೆ ತೀರ್ಪುಗಾರರು ಯಾರು ?
ಮನೋನಿವಾಸಿಗಳು ಚಿಂತೆಯೋಚನೆಗಳು.
ಅವರ ತೀರ್ಪಿನ ರೀತ್ಯಾ ತೀರ್ಮಾನವಾಗಿದೆ :
ಕಣ್ಣಿಗೊಂದು ವಿಭಾಗ, ಮನಸ್ಸಿಗೆ ಇನ್ನೊಂದು

ಇದು ತೀರ್ಪು : ನನ್ನ ಕಣ್ಣಿನ ಪಾಲು ನಿನ್ನ ಹೊರಗಿನ ರೂಪ
ನನ್ನ ಹೃದಯದ ಹಕ್ಕು ನಿನ್ನ ಹೃದಯದ ಪ್ರೇಮ.

(ರಂಗಕತ್ತಲು)
(ಮತ್ತೆ ಬೆಳಕಾದಾಗ ರಂಗದ ಇನ್ನೊಂದು ಭಾಗ ಪಾನಶಾಲೆಯಾಗಿರುತ್ತದೆ. ಷೇಕ್ಸ್‌ಪಿಯರ್, ಬೆನ್ ಜಾನ್ಸನ್, ಮೈಕೇಲ್ ಡ್ರೇಟನ್ ಮತ್ತು ಟಾಮಸ್‌ಕ್ವೀನಿ ಮಾತಾಡುತ್ತಿರುತ್ತಾರೆ.)

ಷೇಕ್ಸ್‌ಪಿಯರ್–ಆ ಭಯಂಕರ ವರ್ಷ ನಿಮಗೆಲ್ಲ ನೆನಪಿದೆಯೇನು ?

ಬೆನ್ ಜಾನ್ಸನ್–ಲಂಡನ್ನಿನಲ್ಲಿ ಪ್ಲೇಗು, ಹಳ್ಳಿಗಳಲ್ಲಿ ಕ್ಷಾಮ-ದಂಗೆ.

ಷೇಕ್ಸ್‌ಪಿಯರ್– ಒಂದು ರಾತ್ರಿ ನಮ್ಮ ತಂಡದವರು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುತ್ತಿದ್ದಾಗ-

(ರಂಗದ ಹಿಂದೆ ಬಿರುಗಾಳಿ, ಮಳೆ ಶಬ್ದ)

ಕಾಲುಮಿಂಚಿನಲ್ಲಿ ಈ ಪ್ರಪಂಚದ ಹೊಲಿಗೆ ಬಿಚ್ಚಿ ಹೋಗ್ತಾ ಇತ್ತು. ನಕ್ಷತ್ರಗಳು ನಾಶವಾದ ಹಾಗೆ ಗಾಢ ಕತ್ತಲು. ದೇವರು ಇನ್ನು ಮುಂದೆ ಜಲಪ್ರವಾಹವನ್ನು ತರೋಲ್ಲ ಅಂತ ನೋವಾನಿಗೆ ಕೊಟ್ಟ ಮಾತನ್ನ ಮುರಿದ ಹಾಗೆ ಕಾಣ್ತಾ ಇತ್ತು. ನಾವೆಲ್ಲ ನೆಂದು ತೊಪ್ಪೆಯಾಗಿ ಗಾಳಿಯಲ್ಲಿ ತಟ್ಟಾಡ್ತಾ ಇದ್ದಾಗ ನಮಗೆ ಆಶ್ರಯ ಸಿಕ್ಕಿದ್ದು ಒಂದು ಹಾಳು ಮಂಟಪದಲ್ಲಿ. ಪ್ರತಿಸಲ ಗುಡುಗು ಕೇಳಿದಾಗ ಈ

ಪುರುಕು ಮಂಟಪ ಎಲ್ಲ ಬಿರುಕು ಬಿಟ್ಟು ಚೂರು ಚೂರಾಗುತ್ತೋ ಅಂತ ನಮ್ಮ ಎದೆ ಝಲ್ಲೆನ್ನುತ್ತಾ ಇತ್ತು. ನನಗನ್ನಿಸಿತು ಇಂಥ ಪ್ರಳಯದಲ್ಲಿ, ಇಂಥ ಹಾಳು ಮಂಟಪದಲ್ಲಿ ಈ ಗೋಳಾಡ್ತಾ ಇರೋ ಅನಾಥರ ಮಧ್ಯ ಒಬ್ಬ ರಾಜ ಇರ್ಬೇಕು. ಒಬ್ಬ ದೇವರು ಇರಬೇಕು. ನಾನು ಅವರನ್ನು ತಮಾಷೆ ಮಾಡಬೇಕು, ಲೇವಡಿ ಮಾಡಬೇಕು.

ಮೈಕೇಲ್ ಡ್ರೈಟನ್–ವಿಲ್, ಲಿಯರ್ ನಾಟಕದ ವಿದೂಷಕನ ಹಾಗೆ ಮಾತಾಡ್ತಾ ಇದೀಯ.

ಷೇಕ್ಸ್‌ಪಿಯರ್–ಆ ರಾತ್ರಿಯೇ ಲಿಯರ್ ಹುಟ್ಟಿದ್ದು, ವಿದೂಷಕ ಹುಟ್ಟಿದ್ದು, ಕುರುಡು ಹುಟ್ಟಿದ್ದು, ಪ್ರಳಯ ಹುಟ್ಟಿದ್ದು.

ಬೆನ್ ಜಾನ್ಸನ್--ಅಂತಹ ಭೀಕರ ರಾತ್ರಿಗಳ ಜೊತೆ ಯಾರಿರುತ್ತಾರೆ ?

ಮೈಕೇಲ್ ಡ್ರೈಟನ್--ಲಿಯರ್‌ನಂಥವರು.

ಷೇಕ್ಸ್‌ಪಿಯರ್--ಆ ಗಳಿಗೆಗಳ ಹಾಗೆ ಕಲಕಿಹೋದ ಮನದವರು
ಮುನಿದ ಪಂಚಭೂತಗಳೊಡನೆ ಸೆಣಸುವಂಥವರು :
ನೆಲವನ್ನು ಕಡಲಿನೊಳಕ್ಕೆ ದೂಡು ಎಂದು ಗಾಳಿಗೆ
ಕಲಕಿಹೋದ ಜಲವನ್ನು ಸಮುದ್ರದಿಂದ
ಮೇಲಕ್ಕೆ ಉಬ್ಬರಿಸು ಎಂದು ನೀರಿಗೆ
ಹೇಳುವಂಥವರು. ಅಂಥವರಿಗೆ ಇಡೀ ಜಗತ್ತು
ಬದಲಾಗಬೇಕು ಇಲ್ಲಾ ಬಯಲಾಗಬೇಕು.

ಬೆನ್ ಜಾನ್ಸನ್--ನಮ್ಮ ವಿಲ್‌ಲಿಯರ್‌ನ ಹಾಗೆ ಕಾಣ್ತಾ ಇದ್ದಾನೆ.
(ಲಿಯರನನ್ನು ಅಭಿನಯಿಸುತ್ತಾ)

ಷೇಕ್ಸ್‌ಪಿಯರ್—ಊದಿ, ಬಾರಿಸಿ, ಗಾಳಿಗಳೇ,
ನಿಮ್ಮ ಕೆನ್ನೆ ಬಿರಿದು ಹೋಗುವವರೆಗೂ, ಉಬ್ಬು, ಅಬ್ಬರ.
ಜಲಪಾತಗಳೇ, ಬಿರುಗಾಳಿಗಳೇ ಮುಕ್ಕಳಿಸಿ ನೀರನ್ನು
ನಮ್ಮ ಗೋಪುರಗಳು ನೆನೆದು ಗಡಿಯಾರಗಳು ಮುಳುಗಿಹೋಗುವವರೆಗೂ
ಓಕ್ ಮರಗಳನ್ನು ಸಿಗಿದು ಹಾಕುವ ಸಿಡಿಲ ಹರಿಕಾರ,
ಓ ಅಗ್ನಿ,
ಸುಡು ನನ್ನ ಈ ಬಿಳೀ ತಲೆಯನ್ನು
ಎಲ್ಲವನ್ನೂ ಹಿಡಿದು ಅಲುಗಾಡಿಸುವ ಸಿಡಿಲೇ
ಬಡಿ, ಸಪಾಟು ಮಾಡು ಜಗತ್ತಿನ ಊತದ ಗಡ್ಡೆಯನ್ನು

ಪ್ರಕೃತಿಯ ಎಲ್ಲ ಅಚ್ಚುಗಳನ್ನೂ ಬಿಚ್ಚಿಬಿಡು
ಕೃತಘ್ನ ಮನುಷ್ಯನಿಗಾಗಿ ಬೆಳೆಯುವ
ಎಲ್ಲ ಬೀಜಗಳನ್ನೂ ಚಲ್ಲಾಪಿಲ್ಲ ಚದುರಿಸು
ಟಾಮಸ್ ಕ್ವೀನೀ–(ವಿದೂಷಕನಾಗುತ್ತ) ಮಾವ, ಮಾವ ಒಳಗೆ ಹೋಗಿ ನಿನ್ನ ಹೆಣ್ಣು ಮಕ್ಕಳ ಕ್ಷಮಾಪಣೆ ಕೇಳು. ಈ ರಾತ್ರಿಗೆ ಜ್ಞಾನಿಯ ಮೇಲೂ ಕರುಣೆ ಇಲ್ಲ, ಮೂರ್ಖನ ಮೇಲೂ ಕರುಣೆ ಇಲ್ಲ.
ಷೇಕ್ಸ್‌ಪಿಯರ್–(ಲಿಯರ್ ಆಗಿ) ಗುಡುಗು ಹೊಟ್ಟೆ ಬಿರಿಯುವವರೆಗೂ
ಉಗಿ ಬೆಂಕಿಯನ್ನು, ಸುರಿ ಮಳೆಯನ್ನು
ಆದರೆ ಮಳೆಗಾಳಿ ಗುಡುಗು ಬೆಂಕಿ–ನೀವು
ನನ್ನ ಹೆಣ್ಣು ಮಕ್ಕಳ ಹಾಗಲ್ಲ ನಿಮ್ಮ ನಿಷ್ಕರುಣೆಗಾಗಿ
ನಾನು ನಿಮ್ಮನ್ನು ನಿಂದಿಸುವುದಿಲ್ಲ ಪಂಚಭೂತಗಳೇ
ನಿಮಗಾಗಿ ನಾನು ಅಥವಾ ಮಕ್ಕಳ ಪಟ್ಟ ಕಟ್ಟಿಲ್ಲ
ನಮಗೂ ನಿಮಗೂ ಯಾವ ಋಣಾನು ಸಂಬಂಧವೂ ಇಲ್ಲ
ಕಾರಿಕೊಳ್ಳಿ ನಿಮ್ಮ ಮಹದಾನಂದವನ್ನು
ನಿಮ್ಮ ಗುಲಾಮನಾಗಿ ನಾನಿಲ್ಲಿ ನಿಂತಿದ್ದೇನೆ.
ನಡುಗುತ್ತಿರುವ ಬಡಕಲು ಮೈನ
ಯಾರಿಗೂ ಬೇಡವಾದ ಮುದಿಯ ಆದರೂ
ನೀವು ಕೂಡ ಬೆಣ್ಣೆ ಹಾಕುವ ಮಂತ್ರಿಗಳ ಹಾಗೆ
ವಿಷ ಪಾತಕಿಯರಾದ ಮಕ್ಕಳ ಜೊತೆ ಶೇರೀಕಾಗಿ
ಇಷ್ಟೊಂದು ಮುಪ್ಪಾದ, ಇಷ್ಟೊಂದು ನರೆತು ಬಿಳುಪಾದ
ನನ್ನ ತಲೆಯ ಮೇಲೆ ಘೋರ ಸಮರ ಸಾರಿದ್ದೀರ
ಓಹ್, ಎಷ್ಟು ಭೀಭತ್ಸ ಇದೆಲ್ಲಾ !
ಬೆನ್ ಜಾನ್ಸನ್–ನಾನೀಗ ಅರ್ಲ್ ಆಫ್ ಕೇಂಟ್ ಆಗುತ್ತೇನೆ. ಯಾರದು ?
ಷೇಕ್ಸ್‌ಪಿಯರ್–ನಾನೀಗ ತಾಳ್ಮೆಯ ಮಾದರಿಯಾಗುತ್ತೇನೆ. ತೆಪ್ಪಗಾಗುತ್ತೇನೆ.
ಬೆನ್ ಜಾನ್ಸನ್–ಯಾರದು ?
ಟಾಮಸ್ ಕ್ವೀನೀ–ಜ್ಞಾನಿ ಮತ್ತು ಮೂರ್ಖ.
ಬೆನ್ ಜಾನ್ಸನ್–ತಾಪ, ಬರೀ ತಲೆಯವನು. ಕರುಣಾಳು ಪ್ರಭು
ಇಗೋ ಪಕ್ಕದಲ್ಲೊಂದು ಮಂಟಪವಿದೆ.
ಈ ಬಿರುದಾಳಿಯಲ್ಲಿ ಅಲ್ಲಿ ತುಸು ಆಸರೆ
ಸಿಗುತ್ತದೆ.

ಷೇಕ್ಸ್‌ಪಿಯರ್–ನನಗೀಗ ಪ್ರಜ್ಞೆ ಮರಳುತ್ತಿದೆ. ಬಾ ಮಗು
ಹೇಗಿದ್ದೀಯ ಮಗು ? ತುಂಬಾ ಛಳಿ ನನಗಂತೂ
ನಮ್ಮ ಅಗತ್ಯಗಳ ಗತಿ ಅತಿ ಅತ್ಯುಚ್ಚವಾಗುತ್ತವೆ
ಒಮ್ಮೊಮ್ಮೆ ತುಚ್ಛವಾದವೂ
ಇಗೊ ಇಲ್ಲಿದೆ ಮಂಟಪ.
ಅಯೋಗ್ಯ ಮೂರ್ಖ,
ನಿನ್ನ ಬಗೆಗೂ ಕೂಡ
ಅಯ್ಯೋ ಎನ್ನುವ ಒಂದು ಭಾಗ
ನನ್ನ ಮನಸ್ಸಿನಲ್ಲಿದೆ
ಟಾಮಸ್ ಕ್ವೀನೀ ರವಷ್ಟಾದರೂ ಪ್ರಜ್ಞೆ ಇರುವನು
ಮಳೆಯೇ ಬರಲಿ ಗಾಳಿಯೇ ಇರಲಿ
ಸಮಾಧಾನಿಯಾಗುಳಿಯುವನು
ಹೊಡೆದರೂ ಮಳೆ ಪ್ರತಿದಿನವು

ಷೇಕ್ಸ್‌ಪಿಯರ್--ಸರಿಯಾಗಿ ಹೇಳಿದೆ ಮಗು. ನನ್ನನ್ನು ಮಂಟಪಕ್ಕೆ ಕರೆದೊಯ್ಯಿ

(ಕ್ವೀನೀ, ಷೇಕ್ಸ್‌ಪಿಯರ್‌ನನ್ನು ಕೈ ಹಿಡಿದು ಕುರ್ಚಿಯ ಮೇಲೆ ಕೂರಿಸುತ್ತಾನೆ)

ಮೈಕೇಲ್ ಡ್ರೈಟನ್–ನಿಜ ವಿಲ್, ಅಂದಗಳಂದಗೆಡುತ್ತವೆ ಒಂದೊಂದು ಸಲ ಹೀಗೆ

ಬೆನ್ ಜಾನ್ಸನ್--ಆ ಪ್ಲೇಗಿನ ವರ್ಷಗಳನ್ನ ನಾನು ಲಂಡನ್ನಿನಲ್ಲೇ ಕಳೆದೆ. ನನ್ನ ಬದುಕಿನಲ್ಲೇ ಅತ್ಯಂತ ದಾರಿದ್ರ್ಯದ ದಿನಗಳು. ಅದೇ ಸಮಯದಲ್ಲಿ ಪಾರ್ಲಿಮೆಂಟಿನವರು ಮಹಾರಾಣಿಯ ಜೀವಕ್ಕೆ ಅಪಾಯ ತಟ್ಟದ ಹಾಗೆ ಹೊಸ ಕಾಯಿದೆ ಜಾರಿಮಾಡಿದ್ದರು. ಫ್ರಾನ್ಸಿಸ್ ಡ್ರೇಕ್ ಅನ್ನೋ ಕಡಲುಗಳ್ಳ ತನ್ನ ಹಡಗಿನಲ್ಲಿ ವಿಶ್ವಪ್ರದಕ್ಷಿಣೆ ಮಾಡಿಕೊಂಡು ಬಂದು ಮಹಾರಾಣಿಗೆ ಪ್ರಿಯನಾದ. ಪ್ರತಿ ದಿನ ಬೀಳುತ್ತಿದ್ದ ರಾಶಿ ರಾಶಿ ಹೆಣಗಳ ಮಧ್ಯ ದೂರದೇಶಗಳ ಚಿನ್ನ-ಮುತ್ತು-ರತ್ನಗಳನ್ನ ಬಯಸಿ ಸಾಹಸಿಗರು ಯಾನ ಹೊರಟರು. ಆ ಅನುಭವದಲ್ಲೇ ನನ್ನ 'ಪಾಲ್ ಪೋಲ್' ಹುಟ್ಟಿದ್ದು.

ಷೇಕ್ಸ್‌ಪಿಯರ್–ಹಳ್ಳಿಗಳು ಸ್ಮಶಾನವಾಗಿದ್ದವು. ದಿನಾ ಸತ್ತು ಬೀಳುತ್ತಿದ್ದವರನ್ನ ಕಂಡು ಜನ ಬೇಸತ್ತು ಅಳುವುದಕ್ಕೂ ನಿತ್ರಾಣರಾಗಿದ್ದರು. ನಮ್ಮ ನಾಟಕ ಯಾರಿಗೆ ಬೇಕಾಗಿತ್ತು ? ನಮ್ಮ ತಂಡದವರೆಲ್ಲ ಚದುರತೊಡಗಿದರು. ಒಂದು ರಾತ್ರಿಯನ್ನು ಒಬ್ಬೊಂಟಿಯಾಗಿ ಹಾಳುಬಿದ್ದ ಸ್ಥಳದಲ್ಲಿ ಕಳೆಯಬೇಕಾಗಿತ್ತು. ಅದರ ಪಕ್ಕ ಒಂದು ಬೋಳು ಮರ, ಸಿಡಿಲು ಹೊಡೆದ ಶಿಲುಬೆ ಹಾಗೆ ಒಂಟಿತನ,

ನಿರಾಸೆ ನನ್ನ ಕತ್ತು ಹಿಸುಕುತ್ತಾ ಇತ್ತು. ಆ ಬೋಳು ಮರವನ್ನ ನೋಡಿದೆ.

ಅದೃಷ್ಟ ಕೈ ಕೊಟ್ಟು ಜನಕ್ಕೆ ಬಿಟ್ಟಾಗ
ಒಬ್ಬಂಟಿ ಬೈಯುತ್ತ ಬೇವಾರ್ಸಿತನವನ್ನು
ಕಿವುಡು ದೇವರ ಕರೆದು ಕೊರಗಿ ಪ್ರಾರ್ಥಿಸುವಾಗ
ಥೂ ! ಎಂದು ಶಪಿಸುತ್ತ ಹಣೆ ಬರಹವನ್ನು....

ಮತ್ತೆ ಆ ಮರವನ್ನ ನೋಡಿದೆ.

ಮೈಕೇಲ್ ಡ್ರೈಟನ್–ನೇಣು ಹಾಕಿಕೋಬೇಕು ಅಂತ ಮಾಡಿದ್ದೇನು ?

ಬೆನ್ ಜಾನ್ಸನ್–ವಿಲ್, ಯಾರು ? ಯಾರು ನಿನ್ನನ್ನು ಪಾರುಮಾಡಿದ್ದು ?

ಷೇಕ್ಸ್‌ಪಿಯರ್--ಒಂದು ನೆನಪು. ನನ್ನ ಪ್ರಿಯಕರನ ನೆನಪಿನ ನೆನಪು

(ಉಂಗುರವನ್ನು ತದೇಕಚಿತ್ತನಾಗಿ ನೋಡುತ್ತಾನೆ. ಇಬ್ಬರು ಮಕ್ಕಳು ರಂಗವನ್ನ ಪ್ರವೇಶಿಸುತ್ತಾರೆ. ಕೈ ಹಿಡಿದುಕೊಂಡು ಗರಗರನೆ ತಿರುಗುತ್ತಾ ಬರುತ್ತಾರೆ. ಒಂದು ಮಗುವಿಗೆ ಚಿನ್ನದ ಬಣ್ಣದ ರೆಕ್ಕೆ, ಇನ್ನೊಂದಕ್ಕೆ ಪಚ್ಚೆ ಬಣ್ಣದ ರೆಕ್ಕೆ.)

ಮಕ್ಕಳು ನಾವು ನಿನ್ನ ಉಂಗುರ
ನಿನ್ನ ಬೆರಳ ಉಂಗುರ
ಹಗಲಿನಲ್ಲಿ ಇರುಳಿನಲ್ಲಿ
ಹೊಳೆಯುವೆವು ಫಳಫಳ
ತೊಳಗುವೆವು ಥಳಥಳ

(ಇಬ್ಬರೂ ಬೇರೆ ಆಗುತ್ತಾರೆ)

ಮಗು ೧ -ಪ್ರೇಮಿಗಳ ಕಣ್ಣು ನಾವು
ಮಗು ೨ -ಕಣ್ಣಿನಲ್ಲಿ ಬೆಳಕು ನಾವು
ಇಬ್ಬರೂ–ಹೊಳೆಯುವೆವು ಫಳಫಳ
ತೊಳಗುವೆವು ಥಳಥಳ
ಮ ೧ -ನಿನ್ನ ಹಾಗೆ ನಾವು ಕೂಡ
ಮಣ್ಣಿನಿಂದ ಬಂದೆವು
ಚಿಕ್ಕೆಗಳ ಲೋಕದಿಂದ
ನಮ್ಮ ಹೊಳಪು ಸೆಳೆದೆವು
ಮ ೨ -ನಿನಗೆ ಬದುಕು ಸಾಕೇನು ?
ಬರಡು ಸಾವು ಬೇಕೇನು ?
ಇಬ್ಬರೂ –ಕೇಳು ನಮ್ಮ ಗೋಳು ಕತೆಯ
ಅದನು ಕೇಳಿ ತಾಳು ಧೈರ್ಯ

ಮ ೧ -ಉಂಗುರದ ಚಿನ್ನ ನಾನು
ಇರಡಿಯಾದ ಮಣ ಕೆಳಗೆ
ನೆಲದಾಳ ಕತ್ತಲೊಳಗೆ
ಕಪ್ಪು ಕಲ್ಲ ಬಸಿರಿನಲ್ಲಿ
ಹುಟ್ಟಿದೆನು ಅದಿರಾಗಿ
ಯಾರೊ ಒಬ್ಬ ನೆಲ ಅಗಿದು
ಕಪ್ಪು ಕಲ್ಲ ಎದೆಯ ಒಡೆದು
ನನ್ನ ತೆಗೆದು ಕಾಸಿ, ಸೋಸಿ
ಚಿನ್ನ ಮಾಡಿ ಕೊಟ್ಟನು
ಗಟ್ಟಿಯಾದ ಗಟ್ಟಿ ಮಾಡಿ
ನಿಮ್ಮ ನಾಡ ಹಡಗಿನಲ್ಲಿ
ಇಲ್ಲಿ ಕಳಿಸಿಕೊಟ್ಟ
ಮ ೨ -ಉಂಗುರದ ಕಚ್ಚೆ ನಾನು
ಅರೇಬಿಯಾ ಕಡಲಿನಲ್ಲಿ
ನೀಲಿ ನೀಲಿ ಆಳದಲ್ಲಿ
ನಾನು ಜೀವ ತಳೆದೆನು
ಯಾರೊ ಕಡಲ ತಳಕೆ ಮುಳುಗಿ
ಜೀವವೆಂಬ ಹಂಗು ತೊರೆದು
ನನ್ನ ತಡಕಿ ತೆಗೆದನು
ನಿಮ್ಮ ನಾಡ ಕಡಲುಗಳ್ಳ
ನಿನ್ನ ನಾಡಿನಿಂದ ನನ್ನ
ಕದ್ದು ಕೊಂಡು ಬಂದ ಮೇಲೆ
ನಿಮ್ಮ ನಾಡ ರೂವಾರಿ
ಬೆಲೆ ಕೊಟ್ಟು ಕೊಂಡನು
ಮ ೧ -ನನ್ನ ಕಾಸಿ ಸೋಸಿ ಸೋಸಿ
ಹೊಡೆದು ಬಡಿದು ಬಗ್ಗಿಸಿ
ಉಂಗುರದ ರೂಪ ಕೊಟ್ಟ
ಮ ೨ -ಅವಳ ಮೈ ತೊಗಲಿನೊಳಗೆ
ಬಿಚ್ಚಿದರೂ ಬರದ ಹಾಗೆ
ನನ್ನ ನೆಟ್ಟುಬಿಟ್ಟನು.

ಇ–ಎಷ್ಟು ಜನರ ಕೈ ದಾಟಿ
ಎಷ್ಟು ಕಣ್ಣು ಕುಕ್ಕಿ ಕೆಣಕಿ
ನೆಲ ಕಡಲು ದಾಟಿ ದಾಟಿ
ಕೊಳ್ಳೆಕಾರ ವಣಿಜರುಗಳ
ಕುಹಕತನ ಗೆದ್ದುಕೊಂಡು
ನಿನ್ನ ಪ್ರಿಯನ ಬೆರಳಿಗೆ
ನಮ್ಮ ನಾವು ಕೊಟ್ಟೆವು
ಮ ೧ –ಅವನು ನಮ್ಮ ನಿನಗೆ ಕೊಟ್ಟ
ಮ ೨ –ಬಳಿಕ ನೀನು ನಮ್ಮ ತೊಟ್ಟೆ
ಇ–ಏಸು ಸಾರಿ ಸತ್ತು ಹುಟ್ಟಿ
ಸಿಕ್ಕಿ ಸಿಕ್ಕಿ ಕಳೆದು ಕಳೆದು
ಏಸು ಕಷ್ಟ ದಾಟಿದರೂ
ನಮ್ಮ ಹೊಳಪು ಕುಗ್ಗಲಿಲ್ಲ
ಹೊಳೆಯುತಿಹೆವು ಫಳಫಳ
ತೊಳಗುತಿಹೆವು ಥಳಥಳ
ಷೇಕ್ಸ್‌ಪಿಯರ್–ಆದರೆ ನೀವು ನಿರ್ಜೀವ ವಸ್ತುಗಳು
ಮ ೧ –ಪ್ರೇಮಯಿರದ ಜಾಗದಲಿ
ಮ ೨ –ಪ್ರೇಮವಿರದ ತಾವಿನಲ್ಲಿ
ಇ–ನಮಗೆ ಜೀವ ಬರುವುದು
ನಿನಗೂ ಜೀವ ಕೊಡವುದು
ಭೂಲೋಕದ ಚುಕ್ಕೆ ಹಾಗೆ
ನಿನಗೆ ಬೆಳಕು ಕೊಡುವೆವು
ನಾವು ನಿನ್ನ ಉಂಗುರ
ನಾವು ನಿನ್ನ ಉಂಗುರ
ನೀನು ಸಾಯಿ ನೀನು ಬದುಕು
ಹೊಳೆಯುವೆವು ಫಳಫಳ
ತೊಳಗುವೆವು ಥಳಥಳ (ಮಕ್ಕಳು ನಿಷ್ಕ್ರಮಣ)

ಷೇಕ್ಸ್‌ಪಿಯರ್–ಅಷ್ಟು ಹೊತ್ತಿಗೆ ಸೂರ್ಯ ಹುಟ್ಟುತ್ತಿದ್ದ. ಬಾನಾಡಿ ಬಾನ ಗಡಿಯಲ್ಲಿ ನಿಂತು ತುಂಬುಗೊರಳಿನಲ್ಲಿ ಸ್ತೋತ್ರ ಪಠಿಸುತ್ತಿತ್ತು. ಆ ಬೆಳಕಿನಲ್ಲಿ ನಾನು ಮತ್ತೆ ಹುಟ್ಟಿದೆ.

ನಿನ್ನ ನೆನಪೇ ಮಧುರ–ಅದು ತಂದ ಸಂಪತ್ತು
ಸಾಕು, ಬೇಡ ನನಗಿನ್ನು ರಾಜರಾಜರ ಸ್ವತ್ತು.

—ಕತ್ತಲು—

ಕವಿ ಕಾವ್ಯ ಪರಿಚಯ......

ಕಾವ್ಯವನ್ನು ಆಸ್ವಾದಿಸುವ ನಮ್ಮ ಸಹೃದಯತೆ ಎಷ್ಟು ವ್ಯಾಪಾರೀಕರಣಕ್ಕೆ ಒಳಗಾಗಿದೆಯೆಂದರೆ ನಾಡಿನಾದ್ಯಂತ ಈಗ ಹಲವು ಮುಖ್ಯ ಕೇಂದ್ರಗಳಲ್ಲಿ ಪರಸ್ಪರ ವಿಮರ್ಶೆಯ ಸಂಘಗಳು ಸಕ್ರಿಯವಾಗಿದ್ದು, ಈ ಸಂಘಗಳ ಕನಿಷ್ಟ ಸಹಸದಸ್ಯರೂ ಆಗಲಾಗದವರ ಕಾವ್ಯ ಪ್ರಕಟವಾಗಿಯೂ ಬೆಳಕಿಗೇ ಬಾರದಂತಾಗಿದೆ. ವ್ಯಾಪಾರೀ ಸಂಸ್ಥೆಗಳಂತೆ ವಿಮರ್ಶಾ ಸಂಸ್ಥೆಗಳೂ ಬೆಳೆದು ನಿಂತಿದ್ದು, ಕಾವ್ಯ ಜಾಹೀರಾತಿಗೆ ಸಿಕ್ಕುವ ಸರಕಾಗುತ್ತಿದೆ, ಈ ವಿಮರ್ಶೆಗಳೆಂಬ ಜಾಹೀರಾತು ಗಳಿಸಲಾಗದ ಕಾವ್ಯ ಈ ಸ್ಪರ್ಧಿ ಪ್ರಪಂಚದಲ್ಲಿ ಕಾವ್ಯರಸಿಕರ ಗಮನಕ್ಕೇ ಬಾರದೆ, ಮೌಲ್ಯಮಾಪನಕ್ಕೆ ಒಳಗಾಗದೆ ಹಾಗೇ ನಶಿಸಿಹೋಗುತ್ತದೆ. ಆದರೆ ಹೀಗೆ ನಶಿಸಿಹೋಗಬಾರದ ಇಬ್ಬರು ಕವಿಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಹರಿಯಪ್ಪ ಪೇಜಾವರ ಹಾಗೂ ಕೆ. ಪಿ. ನಟರಾಜ್ ಈ ಇಬ್ಬರೂ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ ಮತ್ತು ಅವುಗಳಲ್ಲಿ ಕನ್ನಡ ಕಾವ್ಯ ಜಗತ್ತು ಸ್ವಲ್ಪ ಆಸಕ್ತಿಯಿಂದ ಗಮನಿಸಬೇಕಾದ ಎರಡು ವಿಶಿಷ್ಟ ಕವಿಚೇತನಗಳು ಕೆಲಸ ಮಾಡಿರುವುದನ್ನು ನೋಡಬಹುದಾಗಿದೆ.

—ಸಂ.

೧ ತಪ್ಪು ಸರಿಗಳ ರಾಜ್ಯದಲ್ಲಿ

—ಹರಿಯಪ್ಪ ಪೇಜಾವರ

ತಪ್ಪು ಸರಿ ನ್ಯಾಯ ಅನ್ಯಾಯ ಉಚ್ಚ ನೀಚ
ಇವು ಯಾವ ಮೂರ್ಖ ಸೃಷ್ಟಿಸಿದ ಯಾವ
ಶಬ್ದ ಕೋಶದ ಪದಗಳು ?

ಮಾವು ಒಗರೆ ಸಿಹಿಯೆ ?
ಎರಡೂ ಅಲ್ಲ-ನಿಸ್ಸ್ವತಿ ಗುಣವೆ ಮಾವಿನ ಮೂಲ ಸೆಲೆ
ಅವಕ್ಕೆಂವೆ ಅದು ಮಾವು ಹಾಗೆ ನಾವು, ಮನುಷ್ಯ
ಮುಖ್ಯ ಧ್ರುವನಿಸ್ಸ್ವತಿಯು ಒಟ್ಟು ಮೊತ್ತದ ಸಂಕೀರ್ಣ ಫಲ

ತಣ್ಣನೆ ನೆಳಲೀಯುವ
ಹೂ ಹಣ್ಣೀಯುವ ವೇಳೆಗೆ ಆಶ್ರಯ ಈಯುವ ಮರ
ಕೆಲವೊಮ್ಮೆ ಹುಚ್ಚು ಮಳೆ ಬಿರುಗಾಳಿಗೆ ತಲೆ ಮೇಲೆ ಮಗುಚಿ
ಪ್ರಾಣ ಹೀರುವುದು
ಹಾಲೀಯುವ ಕರು ಕೆಲವೊಮ್ಮೆ ಹಾಯುವುದಕ್ಕೂ ಬರುವುದುಂಟು:
ಗಾಳಿ ಕಿವಿ ಹೊಕ್ಕಾಗ, ಉನ್ಮತ್ತ ಕಾವು ವಿಕಾರ ಉಲ್ಬಣಿಸಿದಾಗ
ಕೆಲವೊಮ್ಮೆ ಹಸಿವೆಗೆ ಕೂಡ
ಆದರೂ ಮರ ಕೆಟ್ಟದ್ದಲ್ಲ. ಆಕಳು ಕೆಟ್ಟದ್ದಲ್ಲ ನಮಗೆ
ಹಾಡಿ ಹೊಗಳುವುದೂ ಇಲ್ಲ ನಾವು:
ಆಕಳು ಹಾಲಿತ್ತರೆ ಮರ ನೆಳಲಿತ್ತರೆ
ತಪ್ಪು ಸರಿಯು ಹಣೆ ಪಟ್ಟಿ ಕಟ್ಟಿ ಒಂವ ಇನ್ನೊಂದಕ್ಕೆ
ಸಮೀಕರಿಸುವುದಿಲ್ಲ

ಕಿತ್ತಳೆ ಮೂಸಂಬಿ ಅವು ಹಾಗಿರುವ ಖುಷಿಗೇ ಹಣ ಕೊಟ್ಟು
ಕೊಳ್ಳುತ್ತೇವೆ.
ಪದರು ಪದರು ನಿಧಾನ ಸಿಪ್ಪೆ ಸುಲಿದು ತೊಳೆ ಬಿಡಿಸಿ
ಒಂವೊಂದಾಗಿ ಬಾಯಿಗಿಟ್ಟು....ಸಿಹಿಯೊ ? ಹುಳಿಯೊ ?
ಎಲ್ಲ ನಂತರದ ಮಾತು; ನಾಲಿಗೆಯ ರುಚಿಯು ಮಾತು.
ಒಂದು ಹಣ್ಣಿನ ತೊಳೆ ಕೂಡ ಪೂರ ಸಿಹಿಯಿರುವುದಿಲ್ಲ
ಹಾಗೆಂದು ಹಳಿಯುತ್ತೇವೆಯೆ ನಾವು ಕಿತ್ತಳೆಯು ಹಾಗೆ ಹೀಗೆಂದು?

ಮತ್ತೆ ಸಿಹಿಪೂರ ಸಿಹಿಯಾಗಿದ್ದರೆ ಅದೂ ಕಷ್ಟ
ಮಧುಮೇಹ ಉದರಶೂಲೆ ಇತ್ಯಾದಿ ನೂರು ರಗಳೆ
ಸದಾ ವೈದ್ಯರ ಭೇಟಿ. ಕಿಸೆ ಖಾಲಿ ಕೈ ಖಾಲಿ ಮೈ ಮನ ಖಾಲಿ
ಅತಿ ಸಕ್ಕರೆಗೆ ಶಿಕ್ಷೆ. ಸಕ್ಕರೆಯೆ ಇಲ್ಲದ ಸಪ್ಪೆ ಕಾಫಿ

ಹಿರಣ್ಯಕಶಪನ ಸಾವಿಗೆ ಮೂಲ ಕಾರಣ :
ಆತನ ಬೇಡಿಕೆಯು ಧ್ರುವ ಲಕ್ಷಣ
ಭೂಮಿಯಲ್ಲ ಆಗಸವಲ್ಲ ಅಂತರಿಕ್ಷದಲ್ಲಿ ಸತ್ತ
ಹೊರಗಲ್ಲ ಒಳಗಲ್ಲ ಹೊಸ್ತಿಲಲ್ಲಿ ಸತ್ತ
ನರನಲ್ಲ ಮೃಗವಲ್ಲ; ನರಸಿಂಹ ಕೊಂದ ಹಿರಣ್ಯಕಶಿಪನ

ಧ್ರುವಗಳಲ್ಲೊ ಸದಾ ಹಿಮಪಾತ; ಚೈತನ್ಯ ನಾಶ
ರುಮುಗುಡುವ ಗಾಳಿ; ಶಕ್ತಿವಾತ
ಹರಿತ್ತಿಗೆ ಸಜ; ಹಕ್ಕಿಗಳಿಗೆ ರಜ; ಸೂರ್ಯನಿಗು ನಿದ್ದೆ.
ಮನೆ ಮನೆಗಳೋ ಒಂದೊಂದು ನಡುಗಡ್ಡೆ
ಸಮಶೀತೋಷ್ಣ ವಲಯದಲ್ಲಿ ಮಾತ್ರ
ಹಸಿರಿಗೆ ಉಸಿರು
ನಾಗರಿಕೆಯಲ್ಲಿ ಉನ್ನತಿ
ವಿಜ್ಞಾನದಲ್ಲಿ ಪರಿಣತಿ; ಆಗಸಕ್ಕೆ ಕ್ಷಿಪಣಿ

ಆಗೋ ನ್ಯಾಯಾಧೀಶರ ಹಿಂದಿಕ್ಕಿ ನ್ಯಾಯಾಲಯದಿಂದ
ತೂಗುವ ತಕ್ಕಡಿಯ ಸಮಭಾರ ರೇಖೆ ನಡುವಿಂದ
ಪರ ವಿರೋಧಿ ವಕೀಲರುಗಳ ನಡುವಣ ಅವಕಾಶದಿಂದ
ಒಬ್ಬ ಅಪರಾಧಿ ಹೊರಟಿದ್ದಾನೆ ಇತ್ತ
ನನ್ನ ಕಣ್ಣುಗಳಿಗೆ ಆತ ಮನುಷ್ಯನ ಹಾಗೆ ಕಾಣಿಸುತ್ತಿದ್ದಾನೆ
ನಿಮಗೆ ? ನಿಮ್ಮ ಚಾಳೀಸಿಗೆ ? ಹಲೊ ಮತ್ತೆ ನಿಮಗೆ ?

೨ ಅಸಾಮಾನ್ಯರನ್ನು ಗುರುತಿಸುವುದೆಂದರೆ........

ಕಾಯುತ್ತ ಕಣ್ಣುಗಳಲ್ಲಿ ಹೊಟ್ಟೆಯಾಚಿಸುತ್ತ
ಕುಳಿತಾಗ ಕವಿಗೆ
ನಮಗಿಂತ ನಿಮಗಿಂತ ಸಾಮಾನ್ಯರಿಗೆ ಹೊರತಾದ ಬೇರೆ ಭಂಗಿಯಿಲ್ಲ
ಉಪ್ಪಿನಕಾಯಿ ಕೆರಳಿಸಿದರೆ ಬಿಟ್ಟು ಚೀಪಬಲ್ಲ
ಮತ್ತೆ ಕಾಯಬಲ್ಲ ಯಾಚಿಸುತ್ತ

ಅನ್ನಕ್ಕೊ ಸಾಂಬಾರಿಗೊ ಅಥವ ಇನ್ನ್ಯಾವುದಕ್ಕೊ....
ಅಲ್ಲ! ಹಸಿವು ನಮ್ಮನ್ನು ಎಷ್ಟು ನಿಜವಾದ ಸಂದರ್ಭದಲ್ಲಿ ನಿಲ್ಲಿಸುತ್ತದೆ!
ಮಲಗಿ ಅಸಹ್ಯವಾಗಿ ಗೊರಕೆ ಹೊಡೆಯುತ್ತ ನಿದ್ರಿಸುವ ಕವಿಗೆ
ನಮಗಿಂತ ನಿಮಗಿಂತ ಸಾಮಾನ್ಯರಿಗೆ ಹೊರತಾದ ಬೇರೆ ಭಂಗಿಯಿಲ್ಲ
ಪ್ರಜ್ಞೆಯಲ್ಲಿ ಲೋಕ ಗೆಲ್ಲುವ ಕವಿ
ಇಷ್ಟು ಕೆಟ್ಟದ್ದಾಗಿ ಗೊರಕೆ ಹೊಡೆಯುತ್ತಾನೆಂದರೆ ಯಾರೂ
ನಂಬುವುದಿಲ್ಲ
ಅಲ್ಲ! ನಿದ್ದೆ ನಮ್ಮನ್ನು ಎಷ್ಟು ನಿಜವಾದ ಅರ್ಥದಲ್ಲಿ ಬಿಚ್ಚುತ್ತದೆ !
ಗಲ್ಲಿಯ ಸೂಳೆಯೊಂದಿಗೆ ಬೆತ್ತಲೆ ಹೊರಳುತ್ತ ಮಲಗಿದ ಕವಿಗೆ
ನಮಗಿಂತ ನಿಮಗಿಂತ ಸಾಮಾನ್ಯರಿಗೆ ಹೊರತಾದ ಭಂಗಿ ಬೇರೆಯಿಲ್ಲ
ಒಬ್ಬ ಕವಿಗೆ ತನ್ನ ಮಡದಿಗೂ ಮಿಕ್ಕಿದ ಕಾಮವಿದೆಯೆಂದರೆ
ಯಾರೂ ನಂಬುವುದಿಲ್ಲ

ಅಲ್ಲ! ಕಾಮ ನಮಗೆ ಕವಿಗೆ ಎಷ್ಟು ಸಮಾನ ಮುದ್ರೆಯೊತ್ತುತ್ತದೆ!
ಬೇರೆ ಸಂದರ್ಭದಲ್ಲಿ ನೀವು ಬೇರೇ ವ್ಯಕ್ತಿಯಾಗಿಬಿಡಬಹುದು
ಬಣ್ಣದ ವೇಷವೋ, ರಾಜನ ಸೋಗೋ, ರಾವಣ ರಾಡಿಯೊ....
ಇತ್ಯಾದಿ
ಒಂಟಿಯಾಗಿದ್ದಾಗ, ಹೊಟ್ಟೆ ಹಗುರಾಗಿ ಹದವಾಗಿದ್ದಾಗ
ಅಥವ ನಿಮ್ಮ ಕಣ್ಣು ಸಾರ್ವಜನಿಕವಾಗಿ ಎದುರಿಸಲೇಬೇಕಾಗಿ
ಬಂದಾಗ
ನಿಮ್ಮ ಸಂದರ್ಭವನ್ನು ಬಿಟ್ಟು ನೀವು ಹೊರಳಿಕೊಳ್ಳಬಹುದು
ಚರಿತ್ರೆಯ ಮಗ್ಗುಲಿಗೆ.
ಆದರೆ ಒಂದು ನಿದ್ದೆಯೊಂದಿಗೆ, ಒಂದು ಹಸಿವಿನೊಂದಿಗೆ ಅಥವ
ಒಂದು ಸೂಳೆಯೊಂದಿಗೆ ನೀವು ನಿಂತರೆ
ನೀವು ನಿಮ್ಮ ನಿಜವಾದ ಸಂದರ್ಭದಲ್ಲಿ ನಿಲ್ಲುತ್ತೀರಿ
ಮತ್ತು ಮನುಷ್ಯ–ಮೃಗದ ಮೂಲಭೂತ ಪ್ರವೃತ್ತಿಗೆ ಒಂದು
ಒಳ್ಳೆಯ ಪ್ರತೀಕವಾಗುತ್ತೀರಿ
ಆದುದರಿಂದ ಅಂಜುವವವರೇ ಕವಿಗಳಿಗೆ ಅಸಾಮಾನ್ಯರಿಗೆ ಅವರ
ಅಗಾಧ ಸೃಷ್ಟಿ ಕ್ರಿಯೆಗಳಿಗೆ

ಇರಿಸಿಬಿಡಿ ಅವರನ್ನು ಅವರ ನಿದ್ದೆಯೊಂದಿಗೆ, ಹಸಿವಿನೊಂದಿಗೆ
ಗಲ್ಲಿಯ ಅವರ ಸೂಳೆಯೊಂದಿಗೆ
ಯಾಕೆಂದರೆ ಪೂರ್ವನಿರ್ಧರಿತವಾಗಿ ಬಯಲಾಗಲೇ ಬೇಕಾದಾಗ
ನಾವೂ ಬಯಲಾಗಬಲ್ಲೆವು ನಮಗೆ ತಿಳಿದಂತೆ
ಹೊರಳಬಲ್ಲೆವು ನಮಗೆ ಬೇಕಾದಂತೆ ಚರಿತ್ರೆಯ
ಹೊರಗೂ ಒಳಗೂ ಮಗ್ಗುಲಿಗೆ.

ವಿಶೇಷವೇನಿಲ್ಲ.

೩ ವಾರದ ರಜಾ ಭಾನುವಾರ

ದಿನಗಳೇಳು ವಾರಕ್ಕೆ
ಮುಡಿ ಸೋಮವಾರ
ಅಡಿ ಭಾನುವಾರ: ವಾರವೆಂಬ ಹೆಣ್ಣಿಗೆ
ಎನ್ನುವರು ಎಲ್ಲ ಶೃಂಗಾರ ಪ್ರಿಯರು

ನಿಜಕ್ಕೂ ಏಳು ದಿನಗಳೆ ?
ಅಲ್ಲ ಆರೆನ್ನುವೆ ನನ್ನ ಕೇಳಿದರೆ
ರವಿವಾರ ವಾರಕ್ಕೆ ಹೊರಗಾದಂತೆ
ಮೇಜಿನ ಮೇಲೆ ಪ್ರತ್ಯೇಕ ಕತ್ತರಿಸಿ ತೆಗೆದಿಟ್ಟ ಸೇಬಿನ ಹೋಳಿನಂತೆ

ಶನಿವಾರ ಸೋಮವಾರದ ನಡು
ರವಿವಾರ ಏಳು ಸಮುದ್ರದಂತೆ
ಭೂಮಿಗಂಟಿಯೂ ಬೇರೆಯಾಗೇ ಉಳಿದ ಸಾಗರದಂತೆ

ಅದರ ಬಣ್ಣ ಕಾಮನಬಿಲ್ಲು; ಪರಿಮಳ; ಹೂ; ರುಚಿ:
ಪ್ರಪಂಚದ ಎಲ್ಲ ಸಿಹಿ ಖಾದ್ಯಗಳ ಮಿಶ್ರಣ
ಸ್ಪರ್ಶ; ಹೆಣ್ಣಿನ ಮೃದು ರೇಶಿಮೆ ಚರ್ಮ
ಕತ್ತಲೆ ಮೂಲೆಯ ವೇಗದ ಎದೆ ಬಡಿತ

ದೇವರು ನಮಗಾಗಿಯೆ ಪ್ರತ್ಯೇಕ ಕಳಿಸಿದ
ರವಿವಾರದ ವರ್ಣಮಯ ಕಂಬಳಿ.
ನೋಡಿ: ಸಾವಕಾಶ ಕೆಳಗಿಳಿದು ಬಂದ ಆ ಕಂಬಳಿಯ ಬಿಚ್ಚಿ ನೋಡಿ.
ನಾನು ಹೇಳಿದ್ದೆಲ್ಲ ಇಲ್ಲವೆ ರವಿವಾರದ ಗಂಟಿನಲ್ಲಿ?

ರಾತ್ರಿ ಹನ್ನೆರಡು ಬಡಿಯಿತೆಂದರೆ:
ಅಕಾ ಹಾರಿಹೋಗುವುದು ಮುಗಿಲಲ್ಲಿ ಕಾಣಿಸದವ
ನಮಗಾಗಿ ಇಳಿಸಿದ ರವಿವಾರದ ಕಂಬಳಿ
ನಿರಭ್ರ ಆಗಸದಲ್ಲಿ ಖಾಲಿತೇಲಿ,

ಹೋಗಲಿ ಮತ್ತೆ ಭರ್ತಿಯಾಗಿ ಬರಲಿ
ಶನಿವಾರದ ಝಗ ಝಗ ನಕ್ಷತ್ರ ಸಂಜೆಯಲ್ಲಿ

ಅಲ್ಲ! ರವಿವಾರವೂ ವಾರದ ದಿನವೇ ಆಗಿರುತ್ತಿದ್ದರೆ
ಅದನ್ನು ರವಿವಾರವೆಂದಾದರೂ ಏಕನ್ನುತ್ತಿದ್ದರು?
('ವ್ಯಕ್ತಿ ಮತ್ತು ವ್ಯಕ್ತ' ಸಂಕಲನದಿಂದ)

ಮೇಸ್ಟ್ರು ಮೂಡಲಗಿರಿಯಪ್ಪನವರು

ಕೆ. ಪಿ. ನಟರಾಜ್

ಜಯಮಂಗಲಿ, ಉತ್ತರಪಿನಾಕಿನಿ
ದಕ್ಷಿಣಪಿನಾಕಿನಿ, ಶಿಂಷಾ

ಸುಂದರ ಹೆಸರುಗಳ ಕಿವಿತುಂಬಿ ಹೋದ
ನರಗಳುಲ್ಲಾಸಕ್ಕೆ ನೆನಪ ಹೂ ಕೊಟ್ಟ
ಹೇಳಲಾಗದ ಸುಖ ನೋವ
ನನ್ನಲ್ಲಿ ಹರಿಬಿಟ್ಟ.

ನೀವು ಉತ್ತರಮುಖಿ

ದಿಕ್ಕೆಟ್ಟ ನಾವಿಕಗೆ ಹುರಿದುಂಬಿಸುವ ಸಖ
ಸತ್ವ ಸಂಪೂರ್ಣ.

ಮೇಸ್ಟ್ರು ಮೂಡಲಗಿರಿಯಪ್ಪನವರು
ಅಥವಾ ಹೊಣಕೆರೆಯ ಮೇಸ್ಟ್ರು
ಎಳೆಯುಂದ ಆ ಮಿದು ಮಣ್ಣಲ್ಲಿ
ಅ–ಆ, ಇ–ಈ ಗಳ ಮಿಡಿದವರು
ಕೃಷ್ಣಪಟಲದ ಮೇಲೆ
ಸ್ಥಿರ ಚಿತ್ರ ಬರೆದವರು.

ಒತ್ತು, ಹೊಕ್ಕಳ, ದೀರ್ಘ, ಹ್ರಸ್ವಗಳರ್ಥ
ಒತ್ತಿ ಹೇಳಿದವರು

ಕನ್ನಡದ ಭವ್ಯ ಬೀದಿಗಳಲ್ಲಿ
ಕರೆದೊಯ್ದು
ಅಪರಾಹ್ನ– ತಿಂಡಿಕೊಟ್ಟವರು
ಸಂಜೆಗೆ–ಸುಖವಾಗಿ ವಾಪಸ್ಸು ತಂದು ಬಿಟ್ಟವರು

ಅವರು:
ತಂಪು ಹೊತ್ತಲ್ಲಿ ನೆನಪಾಗಿ ನಡೆವರು
ಚಿಂತನೆಯ ಮೂಡಲ್ಲಿ
ಗಟ್ಟಿ ಹೆಜ್ಜೆಗಳಿಟ್ಟು

ಕೊಡೆಯ ಕೈಯಲಿ ತೂಗಿ
ಕಪ್ಪು ಚಪ್ಪಲಿ ಮೆಟ್ಟಿ
ಮುಂದಿನಂಧಕಾರಕ್ಕೆ....
ಬೆಳ್ಳಿ ಹುಡುಕುತ್ತಾ

ಹೆಡ್‌ಮಾಸ್ಟ್ರು ಕಣ್ಣಪ್ಪ ಬರಲು ಲೇಟಾದಾಗ
ಗಂಟೆ ಬಾರಿಸಿ ಬಂದು ಪಾಠ ಮಾಡಿದವರು
ಆಮೇಲೆ ಬಂದವನ ಮಾತಾಘಾತಕ್ಕೆ

ನೊಂದು ಕುಸಿದವರು
ಏಕ ವಚನಕ್ಕೆ
ಮರೆಯಲ್ಲಿ ಬೆವರೊರೆಸಿದವರು.

ಕಥೆಗಳಾಗರ !
ಆಹಾ ! ಅವರ ಕಥೆ ಚೆಂದ
ಅವರ ಲೋಕವೇ ಚೆಂದ
ವಿದರ್ಭ, ಧಾರಾನಗರಿ
ಕಳಿಂಗಾದಿ ರಾಜಧಾನಿಗಳಲ್ಲಿ
ಚಂದ್ರಹಾಸಾದಿ ರಾಜಕುವರರ ಸುತ್ತ
ದಟ್ಟ ಕಾಡಿನ ಹಸಿರವಿವರ ಮುಂಡಿಸುತ್ತ
ಮಾತ ವ್ಯಾಪ್ತಿಯು ಒಳಗೆ
ಹೊಸ ಗೂಢ ಲೋಕ
ಆಹಾ!................
ಅದೆಂಥ ಗಾಢ ತಲ್ಲೀನ
'ವಿಷಯ'—'ವಿಷ' ತಿದ್ದಿ ಬರೆದಿದ್ದ
ಮುಂಡಿಸಿದ ಪರಿಯೇನು
.........ನನಗೆ ಪ್ರೈಮರಿ ಸ್ಕೂಲಲ್ಲೆ ಪ್ರೇಮಪಾಠ
ಮಾನಸದ ಸುಪ್ತ ಭೂಮಿಕೆಯಲ್ಲಿ
ಬಿತ್ತಿದರು ಬಿಡಿಸಲಾಗದ
ಆ ಮಧುರ ಒಗಟ.

ಸಂಕಲನ, ವ್ಯವಕಲನ
ಎರಡೊಂದಲ ಎರಡರ ಮಗ್ಗಿ ಗಾನ
ಪ್ರತಿ ಸಂಜೆ ಶಾಲೆ ಬಿಟ್ಟಾಗ
ಆ ರಾಜಧಾನಿ, ಆ ರಾಜಕುವರಿ
ಆ ಕನಸ ಸಂದರ್ಭ, ಆ ಬೆಚ್ಚಗೆ........

ನೆನಪ ಪರಿಶೀಲಿಸಿದೆ
ಅಂಥ ಸಿಟ್ಟಿನ ಮೂರ್ತಿ

ಒಂದಾದರೂ ಪೆಟ್ಟು ಮುಟ್ಟಿಸಲಿಲ್ಲ
ಮನಸೆ ಕುಗ್ಗಿಸಲಿಲ್ಲ............
ಅವರು ನಡೆವೆಡೆಯಲ್ಲಿ ಹೂ ಸುರಿಯಲಿ
ಅವರ ನಂಬಿಕೆಯೇನೊ
ದೇವ ಮಂದಿರ ಬಿಟ್ಟು
ಪಾದಭೂಮಿಗೆ ಇಟ್ಟು
ಕಣ್ಮುಚ್ಚಿ ನಿಂತರು ಒಂದು ನಿಮಿಷ
ಎದುರಿತ್ತು ಗದ್ದೆ
ಆಚೆಗೆ ದಿಗಂತ ಚುಂಬಿಸುವ
ತೆಂಗತೂಗು !

ಹೋದಿರಿ ನೀವು........
ಆದರೆ ಉಳಿದಿದ್ದೀರಿ ಇನ್ನೂ
ನನ್ನಲ್ಲಿನ ಕೆಲವು ಎಚ್ಚರಗಳಾಗಿ
ನನ್ನ ಕವಿತೆಯ ಪ್ರೇರಣೆಯ ಬೇರುಗಳಾಗಿ
ಪ್ರೇಮದಡಿಗಲ್ಲಾದ ಪ್ರಾಮಾಣಿಕತೆಯಾಗಿ
ಇನ್ನೂ ಮೂರ್ತಗೊಳ್ಳದ
ಹಲವುಗಳು ಅಥವಾ ಕೆಲವುಗಳಾಗಿ

೨ ಆಹ್ವಾನ

ಬಾ ಗೆಳತಿ
ಶಾಖಮಯ ಅಪ್ಪುಗೆಗೆ
ಸರಳ ಸಂತಪ್ತತೆಗೆ
ಸುಖದ ಸಾಧ್ಯತೆಗಳಲ್ಲಿ
ಮುಳುಗಿ ಹೋಗೋಣ
ನಿನ್ನ ಕಾಲ್ಬೆರಳು ಸಹಕರಿಸಿ
ಕಿವಿಗಳೂ ಕೆಂಪಗರಳಿ
ಕೂಡುವ ಸ್ಪಷ್ಟತೆಯಿರಲಿ

ಮಿಂಚು ಕೂವಲಲಿ
ಎದೆ ಎದೆಗೆ ಒದಗಿ
ಬರಲೆನ್ನ ಬಾಹುಗಳಲಿ–
ನೀ, ನಿನ್ನ ಬಾಹುಗಳಲಿ
ನಾ, ಬಂಧಿಸಿ
ದೇಶ, ಕಾಲಗಳೆಲ್ಲ
ಪಲಾಯನ ಮಾಡಲಿ
ಪ್ರಜ್ಞೆಯು ಸೀಮೆಯಾಚೆ

ನಿನ್ನ ಭುಜ
ನಿನ್ನ ನಡು
ಪಾದ !
ಮೇಲೇರಿದಂತೆಲ್ಲ ಪಸರಿಸಿಹ
ಭವ್ಯಾರ್ಥ ಕೋಶವನು
ದಿವ್ಯ ಏಕಾಗ್ರತೆಯಿಂದ
ಅರ್ಥೈಸುತ್ತೇನೆ
ಒಲುಮೆ ಶಾಯಿ
ಮೆಲ್ಲ ಹರಿಸಿ
ನಿನ್ನ ಮೈನಲ್ಲಿ
ಬಿಚ್– ಅಗೆ

ಕಾವ್ಯ ಬಿಡಿಸುತ್ತೇನೆ
ಆಗ..................
ತೆರೆದಗಲ ಕಣ್ಣಲ್ಲಿ
ತುಳುಕಿ ಹೊಮ್ಮುವ ಬೆಳಕ
ಕುಮ್ಮಕ್ಕಿನಲ್ಲಿ
ನಿನ್ನ ತೆಳು ಕೆಂಪು ಕೆನ್ನೆಯಲಿ
ಪುಟ್ಟ ಮೊಡವೆಗಳಲ್ಲಿ
ಕೊರಳ ಬಳಿ

ಕೂದಲು ಮುಗಿವ ವಿಶಿಷ್ಟ ಪ್ರದೇಶದಲಿ
ನಲಿವಲಿ ಅಲೆಯುತ್ತೇನೆ.

ನಲ್ಲೆ –
ನಿನ್ನಪ್ಪುತ್ತ, ಅಪ್ಪಿ
ಕಣ್ಮುಚ್ಚಿ
ಜುಮ್ಮ ನರಳುತ್ತೇನೆ.
ಬಾ ಗೆಳತಿ
ಬಾ
ನಿನ್ನ ಹಾಡುಗಳೊಂದಿಗೆ
ಆ ಕಾಲದೊಂದಿಗೆ
ಸಕಲ ಸೌಭಾಗ್ಯಗಳೊಂದಿಗೆ
ಹೆಮ್ಮೆ ತುಂಬಿ
ಶಾಖಮಯ ಮಿಲನಕ್ಕೆ
ಸರಳ ಸಂತಪ್ತತೆಗೆ

೩ ವಿದಾಯ

ಚಿನ್ನದಂತ ಹುಡುಗಿ
ನಾವು ಬೇರ್ಪಡುವುದು ಸಹಜ
ಸೂರ್ಯ ಮುಳುಗಿದಷ್ಟೆ
ಭೂಮಿ ತಿರುಗುವಷ್ಟೆ

ಆಘಾತಗಳು ಅಸುಖಿಗಳಾಗಿ ಮಾಡುತ್ತವೆ
ಅಸ್ತಿತ್ವವನ್ನೇ ಹಿಡಿದು ಅಲುಗಿಸುತ್ತವೆ
ಮುಂದೆ ಒಂದು ಖಾಲಿ ಜಗತ್ತನ್ನೇ
ತಂದಿರಿಸಿ ನಗುತ್ತವೆ
ತಬ್ಬಿಬ್ಬಿಸಿ.

ಹೀ—ಗಾ—ಗಿ
ನಾ ಇಷ್ಟು ಕೇಳೋಣ ಎಂದಿದ್ದೇನೆ:
ನಿನ್ನ ಕನಸ ಹಾದಿ ಮೇಲೆ ನನ್ನ ಹೆಜ್ಜೆ ಗುರುತಿರಲಿ
ನಿನ್ನ ನೆನಪುಗಳಲ್ಲಿ ನನ್ನ ವಿಷಯ ಒಂದಿಷ್ಟಿರಲಿ
ನಿನ್ನ ದುಃಖಗಳಲ್ಲಿ ನನ್ನ ನೇವರಿಕೆ ಇರಲಿ
ನಿನ್ನ ಸುಖಗಳಲ್ಲಿ ನನ್ನ ಕಡೆಗೆ ಒಂದು
ಆ ಅತ್ಯಂತ ಸರಳ ಸುಂದರ ನೋಟವಿರಲಿ.

ಹಾಗೆಯೇ–
ನಿನ್ನವನ ಜೊತೆ ಹೆಜ್ಜೆ ಹಾಕುವಾಗ
ನನ್ನ ಅಸ್ಪಷ್ಟ ಸಾಂಗತ್ಯವಿರಲಿ
ಮತ್ತು, ಗೆಳತಿ:
ನಿನ್ನ ತೆರವಿರದ ರಾತ್ರಿಗಳಲ್ಲಿ
ನಿನ್ನ ನಗೆಯೀಚೆಯ ಲೋಕದಲ್ಲಿ
ನಾನು–
ನರಕದ ಸಂಗಾತಿಗಳ ಜೊತೆಗಿರುತ್ತೇನೆ
....
ಹಾಗೇನೂ ಬೇಸರಿಸಬೇಡ
ಅದಕ್ಕೆ ಮೊದಲು ನಾನೆ ತಾನೇ
ನಿನ್ನ ನೇವರಿಸಿ
ಚಿಕ್ಕಮಯ ರಾತ್ರಿಗೆ
ತಂಗಾಳಿಗೆ
ಕರೆತಂದು ಅವನತನಕ ಕಳಿಸಿದ್ದು ?
ಹಾಗೂ ಶುಭ ಆಶಿಸಿದ್ದು
ಹೇಗೂ ದೂರಾಗುತ್ತೇವೆ...............
ಈಗ ನನ್ನ ದುಃಖಮಯ ಸ್ವಗತ
ಎಂದರೆ :

"ನಾನೀ ವೈಶಾಲ್ಯದಲಿ ಉಳಿಯುತ್ತೇನೆಯೇ ?" ಎಂಬುದು
....

ಕಾಡುತ್ತೀಯಾ– ಆ ಕಣ್ಣುಗಳಿಂದ ?
ಮಾಡುತ್ತೀಯಾ– ಆ ನಗೆಸಹಿತ ಮೌನವ ಧರಿಸಿ ?
ಕಲಕುತ್ತೀಯಾ– ಆ ಎದೆತುಂಬುವ ಅಳು ಸಹಿತ ?
ಆಳುತ್ತೀಯಾ– ನನ್ನ ಖಿಲವ ಆವರಿಸಿ ?

('ಓ ಕಪ್ಪು ಹುಡುಗ' ಸಂಕಲನದಿಂದ)

ಉನ್ನತೋನ್ನತಿಯ ದಾಹ

● ಡಾ॥ ಸಿ. ಆರ್ ಚಂದ್ರಶೇಖರ್

ಬಹಳಷ್ಟು ಜನ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಉನ್ನತೋನ್ನತಿಯನ್ನು ಸಾಧಿಸಲು ಇಷ್ಟಪಡುತ್ತಾರೆ. ತಮ್ಮ ಮನೆಯವರು, ಆಪ್ತರು, ಸ್ನೇಹಿತರು ಅತ್ಯುನ್ನತ ಮಟ್ಟವನ್ನು ಮುಟ್ಟಲಿ ಎಂದು ಆಶಿಸುತ್ತಾರೆ. ತಾವು ಮಾಡು[illegible] ಪ್ರತಿಯೊಂದು ಕೆಲಸದಲ್ಲಿ ಪರಿಪೂರ್ಣತೆಯನ್ನು ಸಾಧಿಸಲಿಚ್ಛಿಸುವವರೂ ಇದ್ದ[illegible] ಕೆಲವರ ಪರಿಪೂರ್ಣತೆಯ ಬಯಕೆಗೆ ಮೇರೆಯೇ ಇರುವುದಿಲ್ಲ. ಅಷ್ಟು ಸಾಧಿಸಿದರೆ ಮತ್ತಷ್ಟು ಸಾಧಿಸಬೇಕು. ಮತ್ತಷ್ಟನ್ನು ಸಾಧಿಸಿದರೆ, ಮತ್ತೂ ಹೆಚ್ಚಿನದನ್ನು ಸಾಧಿಸಬೇಕೆಂಬ ಹಿಂಗದ ದಾಹ. ಈ ದಾಹವನ್ನು ತಣಿಸಲು ಎಲ್ಲಿಲ್ಲದ[illegible] ತ್ನ. ಸಾಧಾರಣವಾಗಿ ಇಂತಹ ಧೋರಣೆಯನ್ನು ಎಲ್ಲರೂ ಅನುಮೋದಿಸ[illegible] ಆದಷ್ಟು ಬೇಗ ನೀನು ಪರಿಪೂರ್ಣತೆಯನ್ನು, ಉನ್ನತೋನ್ನತಿಯ ಶಿಖರವನ್ನು ಮುಟ್ಟುವಂತಾಗಲಿ ಎಂದು ಹಾರೈಸುತ್ತಾರೆ. ಈ ಗುರಿಯನ್ನು ಹೊಂದಿದ ಪ್ರ[illegible] ಯೊಬ್ಬರ ಜೀವನದಲ್ಲಿ ಒಂದು ಹಂತದಲ್ಲಿ ಈ ಬಯಕೆ ಅತಿರೇಕವೆನಿಸಬಹುದು. ಅನಗತ್ಯದ್ದು ಎನ್ನಿಸಬಹುದು. ಅದುವರೆಗೆ ಸಾಧಿಸಿದ್ದುದರ ಬಗ್ಗೆ ತೃಪ್ತಿ, ಸಮಾಧಾನ, ಹೆಮ್ಮೆ ಪಡದೆ, ವ್ಯಕ್ತಿ ನೋವನ್ನು, ನಿರಾಶೆಯನ್ನು ಅನುಭವಿಸುವುದನ್ನು ಕಂಡಾಗ, ಆತ್ಮ ವಿಶ್ವಾಸವಿಲ್ಲದೆ, ಅಸಹಾಯಕನಂತೆ ವರ್ತಿಸಿದಾಗ, ಉನ್ನತೋನ್ನತಿಯ ಪರಿಪೂರ್ಣತೆಯ ಗುರಿ ಒಂದು ರೀತಿಯ ಹುಚ್ಚಲ್ಲವೇ ಎನಿಸದಿರದು. ಇದನ್ನು ಹುಚ್ಚು ಅಥವಾ ಅತಿರೇಕ ಎನ್ನುವುದಾದರೆ ಅದಕ್ಕೆ ಕಾರಣವೇನು ? ಮನಸ್ಸಿನೊಳಗೆ ಈ ಬಯಕೆ ಏಕೆ ಹುಟ್ಟುತ್ತದೆ. ಹೇಗೆ ಬೆಳೆಯುತ್ತದೆ ಅದಕ್ಕೇನಾದರೂ ಅರ್ಥವಿದೆಯೇ ಎಂಬುದನ್ನು ನೋಡೋಣ.

ಸಿಗ್ಮಂಡ್ ಫ್ರಾಯ್ಡ್‌ನ ಸಮಕಾಲೀನನಾದ ಆಲ್‌ಫ್ರೆಡ್ ಆಡ್ಲರ್, ಮನುಷ್ಯನನ್ನು 'ಒಂದು ಜೈವಿಕ ಉದ್ದೇಶಪೂರ್ವಕ ವ್ಯವಸ್ಥೆ. ಈ ವ್ಯವಸ್ಥೆಯ ಉದ್ದೇಶ ತನ್ನನ್ನು ತಾನು ಅರ್ಥಪೂರ್ಣಮಾಡಿಕೊಳ್ಳುವುದು ಹಾಗೂ ಸಾಮಾಜಿಕವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದು' ಎಂದು ವಿವರಿಸಿದ. ವ್ಯಕ್ತಿಯ ವ್ಯಕ್ತಿತ್ವ ಹೇಗೆ ವಿಕಾಸ ಹೊಂದುತ್ತದೆ ಎಂಬುದರ ಬಗ್ಗೆ ತನ್ನ ಸಿದ್ಧಾಂತವನ್ನು ಮಂಡಿಸುತ್ತಾ, ತಾನು ಬದುಕಿ ಉಳಿಯಲು ಹಾಗೂ ಬೆಳೆಯಲು ತಾಯಿಯನ್ನು ಅಥವಾ ಮತ್ತೊಬ್ಬರನ್ನು ಪೂರ್ಣವಾಗಿ ಅವಲಂಬಿಸಬೇಕಾದ ಮಗುವಿನಲ್ಲಿ, ಸಹಜವಾಗಿ ತೀವ್ರತರ ಕೀಳರಿಮೆ ಭಾವನೆಗಳಿರುತ್ತವೆ. ತಾನು ಸಣ್ಣವ, ಪರಾವಲಂಬಿ, ಅರಕ್ಷಿತ, ಅಸಹಾಯಕ ಎಂದು ಮಗು ತಿಳಿಯುತ್ತದೆ. ಈ ಭಾವನೆಗಳು ಅದಕ್ಕೆ ಸಾಕಷ್ಟು ಹಿಂಸೆಯನ್ನುಂಟು ಮಾಡುತ್ತವೆ. ಆದ್ದರಿಂದ ಈ ಭಾವನೆಗಳನ್ನು ತೊಡೆದು ಹಾಕಿ, ಆದಷ್ಟು ಬೇಗ ತಾನು ದೊಡ್ಡವನಾಗಬೇಕು, ಸ್ವಾವಲಂಬಿಯಾಗಬೇಕು, ಎಲ್ಲದರ ಮೇಲೆ ಪ್ರಭುತ್ವ ಸಾಧಿಸಬೇಕು. ತಾನು ಪರಿಪೂರ್ಣನಾಗಿ, ಉಳಿದವರೆಲ್ಲರಿಗಿಂತ ಉಚ್ಚ ಮಟ್ಟಕ್ಕೆ ಏರಬೇಕು ಎಂದು ಮಗು ಆಸೆ ಪಡುತ್ತದೆ. ತನ್ನನ್ನು ಅರಿತುಕೊಂಡು, ತನ್ನ ಅಸ್ತಿತ್ವವನ್ನೂ ಉಳಿಸಿ ಬೆಳೆಸಲು ಯೋಜನೆ ಹಾಕುತ್ತದೆ. ತನ್ನ ಅಸ್ತಿತ್ವ–ತನ್ನ ವ್ಯಕ್ತಿತ್ವ ಅದ್ವಿತೀಯವಾಗಿರಬೇಕು. ಅದಕ್ಕೆ ತನ್ನದೇ ಆದ ಛಾಪು ಇರಬೇಕು ಎಂದು ಬಯಸುತ್ತದೆ. ಇದೇ ಪ್ರತಿಯೊಬ್ಬ ವ್ಯಕ್ತಿಯ ಜೀವನ ಗುರಿಯಾಗುತ್ತದೆ. ಅಂದರೆ ಕೀಳರಿಮೆಯಿಂದ, ಮೇಲರಿಮೆಗೆ, (ಇನ್‌ಫೀರಿಯಾರಿಟಿಯಿಂದ ಸುಪೀರಿಯಾರಿಟಿ) ಅಸಹಾಯಕತೆಯಿಂದ ಅತಿ ಸಾಮರ್ಥ್ಯಕ್ಕೆ, ಸೋಲಿನಿಂದ, ಯಶಸ್ಸಿಗೆ ಮುನ್ನಡೆಯುವುದೇ ಜೀವನ ಧ್ಯೇಯ. ಈ ಪ್ರವೃತ್ತಿಯಲ್ಲಿ, ಇತರರಿಗಿಂತ ತಾನು ಪ್ರತ್ಯೇಕವಾಗಿ, ವಿಶಿಷ್ಟವಾಗಿ ನಿಲ್ಲಲು, ವ್ಯಕ್ತಿ ತನ್ನೆಲ್ಲಾ ಜಾಣ್ಮೆಯನ್ನೂ, ಸೃಜನಶೀಲತೆಯನ್ನೂ ಬಳಸುತ್ತಾನೆ. ಸ್ಪರ್ಧಾತ್ಮಕವಾಗಿ, ಪರಿಪೂರ್ಣತೆಯತ್ತ ಹೆಜ್ಜೆ ಹಾಕುತ್ತಾನೆ. ಇದರಲ್ಲಿ ಆತ ಎಷ್ಟು ಯಶಸ್ವಿಯಾಗುತ್ತಾನೆ ಹಾಗೂ ಯಾವ ಮಟ್ಟವನ್ನು ಮುಟ್ಟುತ್ತಾನೆ ಎನ್ನುವುದು ಆತನಿಗೆ ವಂಶಿಕವಾಗಿ ಜೀನುಗಳ ಮೂಲಕ ಬಂದ ಜೈವಿಕ ಬಳುವಳಿ ಹಾಗೂ ಸುತ್ತಲಿನ ಪರಿಸರದ ಕೊಡುಗೆಯ ಮೇಲೆ ನಿರ್ಧಾರವಾಗುತ್ತದೆ ಎಂದು ಹೇಳಿದ್ದಾನೆ. ಹೀಗೆ ಕೀಳರಿಮೆಯ ಸಂಕೋಲೆಗಳನ್ನು ಕಡಿದೊಗೆದು, ಮೇಲರಿಮೆಯ ವಿವಿಧ ಸ್ತರಗಳನ್ನೂ ಹಾಯ್ದು ಸದಾ ಪ್ರಯತ್ನ ಶೀಲನಾಗಿರುವುದೇ ಸಹಜ ಎಂಬುದು ಆಲ್‌ಫ್ರೆಡ್ ಆಡ್ಲರ್‌ನ ಸಿದ್ಧಾಂತದ ತಿರುಳು.

ಮನಸ್ಸಿನ ರಕ್ಷಣಾ ತಂತ್ರಗಳು.

ಮನಸ್ಸಿನ ರಚನೆಯನ್ನು ಸಿಗ್ಮಂಡ್ ಫ್ರಾಯ್ಡ್ ಹೀಗೆ ವಿವರಿಸಿದ್ದಾನೆ.

ಇದ್ : ಈ ಭಾಗದ ಮನಸ್ಸು ವ್ಯಕ್ತಿಯ ಹುಟ್ಟಾಸೆಗಳು ಅಥವಾ ಪ್ರಾಥಮಿಕ ಬಯಕೆಗಳ ಪೂರೈಕೆಗೇ ಒತ್ತು ಕೊಡುತ್ತದೆ. ಹಸಿವು, ಬಾಯಾರಿಕೆ, ಕಾಮ, ಖುಷಿ–ಆನಂದ ಪಡುವುದು ಇವು ವ್ಯಕ್ತಿಯ ಹುಟ್ಟಾಸೆಗಳು. ಅವನ ಅಸ್ತಿತ್ವಕ್ಕೆ ಅಗತ್ಯವಾದಂತಹವು. ಹೀಗಾಗಿ ಇವುಗಳನ್ನು ತೃಪ್ತಿಪಡಿಸಲು, ಇದ್ ಆದಷ್ಟು ಹತ್ತಿರದ ಸುಲಭ ಮಾರ್ಗಗಳನ್ನು ಹುಡುಕುತ್ತದೆ. ಸಕಾರಣವಾಗಿ ಯೋಚಿಸುವ ಗೋಜಿಗೆ ಹೋಗುವುದಿಲ್ಲ. ಹೇಗೋ ಬೇಡಿಕೆಯನ್ನು ಸಮಯಕ್ಕೆ ಸರಿಯಾಗಿ ಪೂರೈಸಿದರೆ ಸಾಕು ಎಂಬುದೇ ಅದರ ಧೋರಣೆ. ಇದ್ ಹುಟ್ಟಿದಂದಿನಿಂದಲೇ ಇರುತ್ತದೆ. ಅದೊಂದು ಅವ್ಯವಸ್ಥಿತವಾದ, ಶಕ್ತಿಯ ಕಣಜ. ವ್ಯಕ್ತಿಯ ನಡವಳಿಕೆಯನ್ನು ಬಲವಾಗಿ ನಿಯಂತ್ರಿಸಿ ನಿರ್ಧರಿಸುವ ಶಕ್ತಿ ಮೂಲ ಎಂದೇ ಫ್ರಾಯ್ಡ್ ಅಭಿಪ್ರಾಯ ಪಡುತ್ತಾನೆ. ಈ 'ಇದ್' ಆನುವಂಶಿಕವಾಗಿ ಬರುವಂಥದ್ದು.

ಈಗೋ : ಹುಟ್ಟಾಸೆಗಳು ಅಥವಾ ಪ್ರಾಥಮಿಕ ಬಯಕೆಗಳು ಮತ್ತು ಹೊರಗಿನ ಪ್ರಪಂಚದ ನಡುವೆ ದೂತನಾಗಿ ಕೆಲಸ ಮಾಡುತ್ತಾ, ಪರಿಸರದ ಇತಿಮಿತಿಗಳ ಒಳಗೇ ಪ್ರಾಥಮಿಕ ಬಯಕೆಗಳ ಪೂರೈಕೆಗೆ ಹೆಣಗುವ ವ್ಯವಸ್ಥಿತವಾದ ವ್ಯವಸ್ಥೆಯೇ ಈಗೋ. ಬಯಕೆಗಳ ಪೂರೈಕೆಯ ರಭಸದಲ್ಲಿ, ವ್ಯಕ್ತಿ ಕೊಚ್ಚಿಹೋಗಿ ನಾಶವಾಗದಂತೆ ತಡೆಯುವ ಶಕ್ತಿಯೇ ಈಗೋ. ಯಾವ ಬಯಕೆಯನ್ನು ಯಾವಾಗ, ಹೇಗೆ ಪೂರೈಸಬೇಕು. ಯಾವುದನ್ನು ಎಷ್ಟುಕಾಲ ಮುಂದೂಡಬೇಕು. ಹಾಗೂ ಯಾವುದನ್ನು ಸಾಕಷ್ಟು ಕಾಲ ತಡೆಯಬೇಕು ಎಂಬುದನ್ನು ಈಗೋ ನಿರ್ಧರಿಸುತ್ತದೆ. ವ್ಯಕ್ತಿಯ ನಡೆವಳಿಕೆ ಅರ್ಥಪೂರ್ಣವಾಗಿ ಹಾಗೂ ಅನುಕೂಲಕರವಾಗಿರುವಂತೆ ನೋಡಿಕೊಳ್ಳುತ್ತದೆ. ಅಂದರೆ ವ್ಯಕ್ತಿಯ ಇಂದ್ರಿಯ ಸಂವೇದನೆ ಶಾರೀರಕ ಚಲನೆ, ವಾಸ್ತವಿಕತೆಯ ಅರಿವು, ರಕ್ಷಣಾ ತಂತ್ರಗಳು ಈಗೋವಿನ ಹತೋಟಿಯಲ್ಲಿರುತ್ತವೆ. ಈಗೋ, ಮಗು ಹುಟ್ಟಿದ ನಂತರ, ಕ್ರಮೇಣ ವಿಕಾಸವಾಗುತ್ತದೆ.

ಸುಪರ್ ಈಗೋ : ಮಗು ಬೆಳೆಯುತ್ತಿದ್ದಂತೆ, ಈಗೋವಿಕಾಸವಾಗುತ್ತಿದ್ದಂತೆ, ಅದು ಸಾಮಾಜಿಕ, ನೈತಿಕ ಮೌಲ್ಯಗಳನ್ನು ಧಾರ್ಮಿಕ ರೀತಿರಿವಾಜುಗಳನ್ನು

ಕಲಿಯಬೇಕಾಗುತ್ತದೆ. ಯಾವುದು ಸರಿ, ಯಾವುದು ತಪ್ಪು, ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು. ಇತರರ ಒಳಿತಿಗೆ– ಅನುಕೂಲಕ್ಕೆ ತನ್ನ ಬೇಕು-ಬೇಡಗಳನ್ನು ತ್ಯಜಿಸುವುದು. ಧೀರ್ಘಕಾಲದ ಸುಖ–ಲಾಭಕ್ಕಾಗಿ ತತ್‌ಕ್ಷಣದ ಸುಖ-ಲಾಭಗಳನ್ನು ಬಿಡುವುದು – ಇವೆಲ್ಲವನ್ನೂ ವಿಶ್ಲೇಷಿಸಿ, ಸರಿ ನಿರ್ಧಾರಗಳನ್ನು ಕೈಗೊಂಡು, ಇದ್ ಮತ್ತು ಇಗೋಗಳ ಮೇಲೆ ಪ್ರಭಾವ ಬೀರುವುದು ಸೂಪರ್ ಈಗೋವಿನ ಕಾರ್ಯವಾಗುತ್ತದೆ. ಅಂದರೆ ಸದಾ ಒಂದಲ್ಲ ಒಂದು ವಿಷಯವಾಗಿ ಇದ್, ಈಗೋ ಮತ್ತು ಸುಪರ್ ಇಗೋಗಳ ನಡುವೆ ಘರ್ಷಣೆ, ಭಿನ್ನಾಭಿಪ್ರಾಯಗಳು, ದ್ವಂದ್ವಗಳು, ಅನಿಶ್ಚಯತೆಗಳು ಅನಿವಾರ್ಯವಾಗಬಹುದು.

ಇವು ಅಲ್ಪಮಟ್ಟದ್ದಾಗಿದ್ದರೆ, ಪರಿಹಾರ ಸುಲಭವಾಗಿದ್ದರೆ, ಜಾಗೃತ ಮನಸ್ಸಿಗೆ ಹಿಂಸೆ ಆಗುವುದಿಲ್ಲ. ಅದರ ನೆಮ್ಮದಿಗೆ ಭಂಗ ಬರುವುದಿಲ್ಲ. ಆದರೆ ಎಷ್ಟೋ ದ್ವಂದ್ವಗಳು, ಅನಿಶ್ಚಯತೆಗಳು, ನೋವು, ನಿರಾಶೆಗಳು ಪರಿಹಾರ ಕಾಣದೆ, ತೀವ್ರವಾಗಿದ್ದಾಗ, ಅವುಗಳ ಹಿಂಸೆಯಿಂದ ತಪ್ಪಿಸಿಕೊಳ್ಳಲು, ಜಾಗೃತ ಮನಸ್ಸು ಅವನ್ನು ನಮ್ಮ ಸುಪ್ತ ಮನಸ್ಸಿನೊಳಕ್ಕೆ ದಬ್ಬುತ್ತದೆ. ಅಲ್ಲಿನ ಹಗೇವುಗಳಲ್ಲಿ ಅವುಗಳನ್ನು ಸುಪ್ತಮನಸ್ಸು ಅದುಮಿಡಲು ಪ್ರಯತ್ನಿಸುತ್ತದೆ. ಅದರಲ್ಲಿ ಅದು ಯಶಸ್ವಿಯಾದರೆ, ತೊಂದರೆ ಇಲ್ಲ. ಅದುಮಿಡಲು ಅದು ವಿಫಲವಾದರೆ, ಮನಸ್ಸಿನ ನೆಮ್ಮದಿ ಸಮತೋಲನ ಏರುಪೇರಾಗುವ ಅಪಾಯ ಎದುರಾಗುತ್ತದೆ. ಈ ಅಪಾಯದ ವಿರುದ್ಧ ಮನಸ್ಸಿನ ವಿವಿಧ ರಕ್ಷಣಾ ತಂತ್ರಗಳು ಕೆಲಸ ಮಾಡುತ್ತವೆ. ಉದಾಹರಣೆಗೆ : ನಿರಾಕರಣೆ (ಡೆನಿಯಲ್) : ವಾಸ್ತವಿಕತೆಯನ್ನು, ನಿಜಸ್ಥಿತಿಯನ್ನು ಒಪ್ಪಲು ನಿರಾಕರಿಸುವುದು ವಿಕೃತಗೊಳಿಸುವುದು : ನಿಜಸ್ಥಿತಿಯನ್ನು ತಿರುಚಿ ವಿಕೃತಗೊಳಿಸಿ ವರದಿ ಮಾಡುವುದು ಅಥವಾ ತಾನೇ ನಂಬುವುದು ಮತ್ತೊಬ್ಬರನ್ನು ಅಥವಾ ಬೇರೊಂದನ್ನು ದೂರುವುದು. ಒಂದು ಸನ್ನಿವೇಶ್ ಅಥವಾ ಒಬ್ಬರ ಮೇಲಿನ ಕೋಪವನ್ನು, ಮತ್ತೊಂದು ಸನ್ನಿವೇಶದಲ್ಲಿ ಅಥವಾ ಮತ್ತೊಬ್ಬರ ಮೇಲೆ ತೋರಿಸುವುದು. ಬೆಳವಣಿಗೆಯ ಹಿಂದಿನ ಹಂತಕ್ಕೆ ಜಾರಿ, ಮಗುವಿನಂತೆ ವರ್ತಿಸುವುದು. ಊಹಾಪ್ರೋಹ ಮಾಡುತ್ತಾ ಭ್ರಮಾಲೋಕದಲ್ಲಿ ವಿಹರಿಸುವುದು. ಒಣ ವೇದಾಂತ ಅಥವಾ ಬೌದ್ಧಿಕ ಸಮಜಾಯಿಷಿ ಕೊಡುವುದು ಇತ್ಯಾದಿ. ಈ ಮನಸ್ಸಿನ ವಿವಿಧ ರಕ್ಷಣಾ ತಂತ್ರಗಳಲ್ಲಿ ಉತ್ತಮೀಕರಣವೂ (ಸಬ್ಲಿಮೇಶನ್) ಒಂದು.

ಒಂದು ಕ್ಷೇತ್ರದಲ್ಲಿ ಅಥವಾ ಒಂದು ವಿಚಾರದಲ್ಲಿ, ವ್ಯಕ್ತಿ ಸೋತಾಗ, ಹಿಂದೆ

ಬೇಕಾಗ ಅಥವಾ ನಿರೀಕ್ಷಿತ ಮಟ್ಟ ಮುಟ್ಟದಿದ್ದಾಗ, ಆತನ ಮನಸ್ಸು ಈ ಸೋಲು ನಿರಾಶೆಯನ್ನು ನಿಭಾಯಿಸಲು, ಮತ್ತೊಂದು ಕ್ಷೇತ್ರದಲ್ಲಿ ಅಥವಾ ವಿಚಾರದಲ್ಲಿ ತನ್ನೆಲ್ಲಾ ಸಾಮರ್ಥ್ಯ ಜಾಣ್ಮೆಯನ್ನು ವಿನಿಯೋಗಿಸಿ, ಅತ್ಯುತ್ತಮ ಮಟ್ಟ ಅಥವಾ ಸಾಧನೆಯನ್ನು ಮಾಡಿ ತೃಪ್ತಿಪಡಲು ಪ್ರಯತ್ನಿಸುತ್ತದೆ. ಪರಿಪೂರ್ಣತೆಯ ಗುರಿ ಇಟ್ಟುಕೊಂಡು ಅದಕ್ಕಾಗಿ ಕಷ್ಟಪಡುತ್ತದೆ. ಉದಾಹರಣೆಗೆ ಯಾವುದೇ ಕಾರಣ ದಿಂದ ಹೆಚ್ಚು ವಿದ್ಯಾವಂತನಾಗದ ವ್ಯಕ್ತಿ, ಯಾವುದಾದರೂ ಒಂದು ಲಲಿತ ಕಲೆ ಯಲ್ಲಿ ಪಾರಂಗತನಾಗಬಹುದು. ಶ್ರೇಷ್ಠ ಆಟಗಾರನಾಗಲು ಯತ್ನಿಸಬಹುದು. ಒಂದು ಹಂತದವರೆಗೆ, ಯಾವ ಮಹತ್ವಾಕಾಂಕ್ಷೆಯೂ ಇಲ್ಲದೆ, ಅಚ್ಚುಕಟ್ಟು ತನವಿಲ್ಲದೆ ಬಹಳ ಸಡಿಲವಾಗಿ ಜೀವನ ಮಾಡುತ್ತಿದ್ದ ವ್ಯಕ್ತಿ ಒಂದು ಸೋಲು ಅಥವಾ ಒಂದು ಅವಮಾನ ಅಥವಾ ಒಂದು ದುಃಖದ ಘಟನೆಯ ನಂತರ, ಮಹ ತ್ವಾಕಾಂಕ್ಷಿಯಾಗುವುದು, ವಿಪರೀತ ಸ್ಪರ್ಧಾ ಮನೋಭಾವವನ್ನು ಸೂಚಿಸುವುದು, ತನ್ನ ಇಚ್ಛೆಯ ಕ್ಷೇತ್ರ/ಚಟುವಟಿಕೆಯಲ್ಲಿ ಪರಿಪೂರ್ಣತೆಗಾಗಿ ಶ್ರಮಿಸುವುದನ್ನು ಕಾಣುತ್ತೇವೆ. 'ಆ ಘಟನೆಯ ನಂತರ, ಆತನ (ಆಕೆಯ) ಜೀವನ ಶೈಲಿಯೇ ಬದ ಲಾಗಿ ಹೋಯಿತು' ಎಂದು ಹೇಳುವಂತಾಗುತ್ತದೆ.

ವ್ಯಕ್ತಿತ್ವ–ವಿಶೇಷ

ವ್ಯಕ್ತಿಯ ಸಹಿ ಅವನಿಗೆ ಹೇಗೆ ವಿಶಿಷ್ಟವೋ, ಹಾಗೆಯೇ ವ್ಯಕ್ತಿತ್ವವೂ ಕೂಡ. ಯಾವುದೇ ಸನ್ನಿವೇಶದಲ್ಲಿ ಆತ ಹೇಗೆ ನಡೆದುಕೊಳ್ಳುತ್ತಾನೆ, ಯಾವುದೇ ವಿಷ ಯದಲ್ಲಿ ಅವನ ಧೋರಣೆ ನಂಬಿಕೆ ಏನು, ಆತನ ಜೀವನ ಶೈಲಿ ಮತ್ತು ಉದ್ದೇಶ ಯಾವುದು ಎಂಬುದು ವ್ಯಕ್ತಿತ್ವದ ಮೇಲೆ ನಿರ್ಧಾರವಾಗುತ್ತದೆ. ವ್ಯಕ್ತಿತ್ವದ ಬೆಳ ವಣಿಗೆ ಮತ್ತು ವಿಕಾಸದಲ್ಲಿ ಅನುವಂಶಿಕ ಅಂಶಗಳು, ತಂದೆ ತಾಯಿಗಳ ಲಾಲನೆ ಪಾಲನೆಯ ವೈಖರಿ, ಅವರು ಕೊಡುವ ಪ್ರೀತಿ, ಶಿಸ್ತು, ಶಿಕ್ಷೆಯ ಪ್ರಮಾಣ, ಪರಿಸರ, ಶಿಕ್ಷಣ, ಸಮಾಜ ಇವೆಲ್ಲವೂ ಪರಿಣಾಮ ಬೀರುತ್ತವೆ. ಹೀಗಾಗಿ ಅನೇಕ ಬಗೆಯ ವ್ಯಕ್ತಿತ್ವಗಳಿವೆ. ಅವುಗಳಲ್ಲಿ ಎರಡರಲ್ಲಿ, ಪರಿಪೂರ್ಣತೆ, ಉನ್ನತೋನ್ನತಿ ದಾಹ ಬಹಳವಾಗಿ ಕಾಣಿಸಿಕೊಳ್ಳುತ್ತದೆ.

ಟೈಪ್ ಎ ವ್ಯಕ್ತಿತ್ವ : ಈ ವ್ಯಕ್ತಿತ್ವವುಳ್ಳ ವ್ಯಕ್ತಿಗಳು ಕೆಳಕಾಣುವ ವಿಶೇಷ ಲಕ್ಷಣ ಗಳನ್ನು ಹೊಂದಿರುತ್ತಾರೆ.

1) ವಿಪರೀತ ಮಹತ್ವಾಕಾಂಕ್ಷೆ.
2) ಕೀರ್ತಿ ಮತ್ತು ಮಾನ್ಯತೆಗೆ ಹಾತೊರೆಯುವಿಕೆ
3) ಅತಿಯಾದ ಸ್ಪರ್ಧಾತ್ಮಕ ಮನೋಭಾವ
4) ದುಡುಕುತನ, ಆಕ್ರಮಣಕಾರಿ ಪ್ರವೃತ್ತಿ
5) ಯಾವಾಗಲೂ ಆತುರ, ಗಡಿಬಿಡಿ
6) ತನಗೆ ಮತ್ತು ಇತರರಿಗೆ ಸದಾ ಉನ್ನತಮಟ್ಟವನ್ನು ನಿಗದಿ ಮಾಡುವುದು.
7) ಪರಿಪೂರ್ಣತೆಗಾಗಿ ಪ್ರಯತ್ನಿಸುವುದು.

ಈ ವ್ಯಕ್ತಿತ್ವವುಳ್ಳವರು, ತಾವು ಮಾಡುವ ಪ್ರತಿಯೊಂದು ಕೆಲಸದಲ್ಲಿ, ತಮ್ಮ ಜೀವನದ ಪ್ರತಿಯೊಂದು ಚಟುವಟಿಕೆಯಲ್ಲಿ ಉನ್ನತೋನ್ನತಿಯನ್ನು ಪರಿಪೂರ್ಣತೆಯನ್ನು ಬಯಸುತ್ತಾರೆ. ಸುಲಭ ತೃಪ್ತರಲ್ಲ

ಈ ಬಗೆಯ ವ್ಯಕ್ತಿತ್ವ ಬೆಳೆಯಲು ಕಾರಣ ಅವರ ತಂದೆ ತಾಯಿಗಳು, ಬಾಲ್ಯದ ಪರಿಸರ ಮತ್ತು ಅವರ ಮೇಲೆ ಪರಿಣಾಮ ಬೀರುವ ಇತರ ವ್ಯಕ್ತಿಗಳು, ಅವರ ಮೇಲೆ ತರುವ ಒತ್ತಾಯ- ನೀನು ಮಹತ್ತರವಾದದ್ದನ್ನು ಸಾಧಿಸಲೇಬೇಕು. ಎಲ್ಲರೊಡನೆ ಸ್ಪರ್ಧೆ ಮಾಡು. ಮೊದಲನೆಯವನಾಗೇ ಬಾ, ಅತ್ಯುನ್ನತ ಯಶಸ್ಸನ್ನು ಪಡೆ. ಅಲ್ಪ ತೃಪ್ತನಾಗಬೇಡ. ಎಲ್ಲರಿಗಿಂತ, ಮೇಲೇರಿ ನಿಲ್ಲು. ಬದುಕು ಪರಿಪೂರ್ಣ ಆದರ್ಶ ಮತ್ತು ಅತ್ಯಂತ ಸಮರ್ಥಶಾಲೀ ವ್ಯಕ್ತಿಯಾಗಿ ಬಾಳು ಇತ್ಯಾದಿ. ಪ್ರತಿದಿನ, ವರ್ಷ, ಪ್ರತಿ ಹಂತದಲ್ಲಿ ಈ ಬಗೆಯ ಒತ್ತಾಯಕ್ಕೆ ಪಕ್ಕಾದ ಮಗು ಕ್ರಮೇಣ ಟೈಪ್ ಎ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾನೆ ಎಂದು ಹೇಳಲಾಗುತ್ತದೆ.

ಗೀಳು ಮನೋಭಾವದ ವ್ಯಕ್ತಿತ್ವ (ಅಬ್ಸೆಸಿವ್ ಪರ್ಸನಾಲಿಟಿ) :

ಈ ವ್ಯಕ್ತಿ ಬಹಳ ಎಚ್ಚರಿಗೆ ಸ್ವಭಾವದವನು. ಪ್ರತಿಯೊಂದನ್ನೂ ಸಾಕಷ್ಟು ಮೊದಲೇ ಚಿಂತಿಸಿ, ಏನು ಮಾಡಿದರೆ ಏನಾಗುತ್ತದೆ ಎಂದು ಲೆಕ್ಕಹಾಕಿ, ಯೋಜಿಸಿ ಮಾಡುವವನು. ತುಂಬಾ ಆಲೋಚನಾಪರ, ಪ್ರತಿಯೊಂದು ವಿಷಯದ ಬಗ್ಗೆ ತರ್ಕಬದ್ಧವಾಗಿ ಆಲೋಚಿಸುವವನು. ಭಾವನೆಗಳು, ಮನೋ ಸೂಚನೆಗಳಿಗೆ ಬೆಲೆಕೊಡದವನು, ಬುದ್ಧಿಗೇ ಹೆಚ್ಚು ಪ್ರಾಧಾನ್ಯತೆ ಕೊಡುವವನು, ಉತ್ಸಾಹಕ್ಕೆ ಲಗಾಮು ಹಾಕಿ ವಸ್ತು ನಿಷ್ಟವಾಗಿ ನಡೆಯಲಿಚ್ಛಿಸುವವನು, ಯಾವುದೇ ಕೆಲಸ ಮಾ

ಡಲಿ ಅದರ ವಿವರಗಳನ್ನು ಭೂತಕನ್ನಡಿಯಲ್ಲಿಟ್ಟು ನೋಡುವಂತೆ ನೋಡಿ ಅನುಸರಿಸುವವನು, ಸಂಪ್ರದಾಯ ಶೀಲ, ಕರಾರುವಾಕ್ಕಾಗಿ ನಿಯಮಗಳನ್ನು ಪಾಲಿಸುವವನು. ಊಹಾಪೋಹ ಮಾಡುವುದಾಗಲೀ, ನಿಶ್ಚಿತ ಮಾರ್ಗವನ್ನು ಬಿಟ್ಟು ದೂರ ಸರಿಯುವುದಾಗಲೀ, ಹೊಸ ರೀತಿಯಲ್ಲಿ ಮಾಡುವುದಾಗಲೀ ಇವನಿಂದಾಗದು.

ಇದಲ್ಲದೆ ಈತನಿಗೆ ಅಚ್ಚುಕಟ್ಟುತನ, ವ್ಯವಸ್ಥೆ ಮತ್ತು ಸ್ವಚ್ಛತೆಯಲ್ಲಿ ಅತಿಯಾದ ಮೋಹ. ಪ್ರತಿಯೊಂದು ವಸ್ತುವಿಗೂ ನಿಶ್ಚಿತವಾದ ಜಾಗವಿದೆ. ಪ್ರತಿ ಜಾಗದಲ್ಲಿ, ಇರಬೇಕಾದ ವಸ್ತು ನಿರ್ದಿಷ್ಟವಾಗಿದೆ ಎಂದು ನಂಬುವವ. ತಾನಿರುವ ಎಡೆಯಲ್ಲಿ ಒಂದಿನಿತೂ ಕಸ ಕೊಳೆ ಧೂಳು ಇರಬಾರದು. ಪ್ರತಿಯೊಂದು ವಸ್ತು ಇಸ್ತ್ರಿ ಮಾಡಿದಂತೆ ನೀಟಾಗಿರಬೇಕು. ಅವ್ಯವಸ್ಥೆ ಇನಿತೂ ಇರಬಾರದು ಎಂದು ಬಯಸುತ್ತಾನೆ. ಅದಕ್ಕಾಗಿ ಎಷ್ಟು ಕಷ್ಟಪಡಲೂ ಸಿದ್ಧ. ವಸ್ತುಗಳನ್ನು ತನ್ನ ಪರಿಸರವನ್ನು ಹಲವಾರು ಸಲ ಚೊಕ್ಕಟಮಾಡಲು, ಜೋಡಿಸಿಡಲು ಠಾಕೋಠೀಕಾಗಿರುವಂತೆ ಕಾಣುವಂತೆ ಮಾಡಲು ಈತ ಹಿಂಜರಿಯುವುದಿಲ್ಲ. ಇತರರ ಒತ್ತಾಯಕ್ಕೆ ಮಣಿಯುವುದಿಲ್ಲ. ನ್ಯಾಯ, ಪ್ರಾಮಾಣಿಕತೆ, ಕಷ್ಟಕರ ದುಡಿಮೆಗೆ ಎಲ್ಲಿಲ್ಲದ ಪ್ರಾಮುಖ್ಯತೆ ಕೊಡುತ್ತಾನೆ. ಇತರರು ಅದರಲ್ಲೂ ಆತನ ಆತ್ಮೀಯರು, ಮನೆಯವರು, ಸಹೋದ್ಯೋಗಿಗಳೂ ಪರಿಚಿತರು, ಆತನ ಇಷ್ಟದಂತೆ ನಡೆಯದಿದ್ದರೆ, ಅಚ್ಚುಕಟ್ಟುತನ ಸ್ವಚ್ಛತೆಯಲ್ಲಿ ಸಹಕರಿಸದಿದ್ದರೆ, ಬಹಳವಾಗಿ ನೊಂದುಕೊಳ್ಳುತ್ತಾನೆ, ದುಃಖಪಡುತ್ತಾನೆ. ಅವ್ಯವಸ್ಥೆಯ ಪರಿಸರದಲ್ಲಿ ನೀರಿನಿಂದ ಹೊರಬಿದ್ದ ಮೀನಿನಂತೆ ಚಡಪಡಿಸುತ್ತಾನೆ. ಪರಿಪೂರ್ಣತೆಗಾಗಿ ತನ್ನ ಜೀವವನ್ನು ಕೊಡಲೂ ತಯಾರಾಗುತ್ತಾನೆ.

ಈ ರೀತಿಯ ಅಬ್ಸೆಸಿವ್ ವ್ಯಕ್ತಿತ್ವ ಬೆಳೆಯಲು, ಕಾರಣವಾಗುವ ಅಂಶಗಳನ್ನು ಬಾಲ್ಯದಲ್ಲಿಯೇ ಗುರುತಿಸಲಾಗುತ್ತದೆ. ಮಗು ಎರಡರಿಂದ ನಾಲ್ಕು ವರ್ಷ ವಯಸ್ಸಿನವನಾಗಿದ್ದಾಗ, ಮಲ ಮೂತ್ರ ವಿಸರ್ಜನೆ ಮತ್ತು ಹತೋಟಿಯನ್ನು ಕಲಿಯಬೇಕಾಗುತ್ತದೆ. ತಾಯಿ ಅಥವಾ ತಂದೆ ಅಥವಾ ಪೋಷಕರು ಮಲ–ಮೂತ್ರ ವಿಸರ್ಜನೆ ಹತೋಟಿಯ ಬಗ್ಗೆ ತುಂಬಾ ಶಿಸ್ತು ಮತ್ತು ಸಮಯ ಪಾಲನೆಗಾಗಿ ಒತ್ತಾಯ ತಂದರೆ, ಗೀಳು ಮನೋಭಾವಕ್ಕೆ ಬೀಜಾಂಕುರವಾಗುತ್ತದೆ. ಹತೋಟಿ ಮಾಡದಿದ್ದರೆ ಶಿಕ್ಷೆ ಎಂದು ಹೆದರಿಸಿದರೆ ಅಥವಾ ಶಿಕ್ಷೆ ಕೊಡಲು ಪ್ರಾರಂಭಿಸಿದರೆ, ಈ ಬೀಜ ಮೊಳಕೆ ಒಡೆದು, ಬೆಳೆದು ಕಾಲಕ್ರಮೇಣ ಮರವಾಗುತ್ತದೆ.

ಗೀಳು ಮನೋರೋಗ (ಅಬ್ಸೆಸಿವ್ ಕಂಪಲ್ಸಿವ್ ನ್ಯೂರೋಸಿಸ್) ಕಾಣಿಸಿಕೊಳ್ಳುತ್ತದೆ. ಆಗ ಅಚ್ಚುಕಟ್ಟುತನ, ಸ್ವಚ್ಛತೆಯ ಗೀಳು ವಿಪರೀತವಾಗಿ ವ್ಯಕ್ತಿಯ ದೈನಂದಿನ ಕೆಲಸ ಕರ್ತವ್ಯಗಳಿಗೆ ಅಡ್ಡಿ ಬಂದು, ವ್ಯಕ್ತಿಗೆ ಮತ್ತು ಮನೆಯವರಿಗೆ ಹಿಂಸೆಯಾಗುವಷ್ಟರ ಮಟ್ಟಕ್ಕೆ ಹೋಗಿ, ಕಾಯಿಲೆ ಎಂದೆನಿಸಿಕೊಳ್ಳುತ್ತದೆ.

ಮಾನ್ಯತೆಯ ಹಸಿವು

ಮನುಷ್ಯನ ಅಗತ್ಯಗಳು ಅನೇಕ. ಕೆಲವು ಆತನ ಉಳಿಯುವಿಕೆಗೆ ಅತ್ಯಗತ್ಯವಾದರೆ ಕೆಲವು ಆತನ ಮಾನಸಿಕ ನೆಮ್ಮದಿ–ತೃಪ್ತಿಗೆ ಅಗತ್ಯವಾಗುತ್ತವೆ. 1909 ರಲ್ಲಿ ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿ ಜನಿಸಿದ ಅಬ್ರಹಾಂ ಮಾಸ್ಲೋ ಮನುಷ್ಯನ ಈ ಅಗತ್ಯಗಳನ್ನು ಕೊರತೆಗೆ ಸಂಬಂಧಪಟ್ಟವು (ಡೆಫಿಶಿಯನ್ಸಿ ನೀಡ್ಸ್) ಹಾಗೂ ಬೆಳವಣಿಗೆಗೆ ಸಂಬಂಧಪಟ್ಟವು (ಮೆಟಾನೀಡ್ಸ್) ಎಂದು ವಿಭಾಗಿಸಿದ್ದಾನೆ. ಆಹಾರ ನೀರು, ಕಾಮ, ಪ್ರೀತಿ ಸ್ವಾಭಿಮಾನ ಮಾನ್ಯತೆ ಮೊದಲ ಗುಂಪಿಗೆ ಸೇರಿದರೆ, ಆದರ್ಶ ಮತ್ತು ಉತ್ತಮ ವ್ಯಕ್ತಿ ಎನ್ನಲು ಬೇಕಾದ ಸ್ವಾತಂತ್ರ್ಯ ಪ್ರಿಯತೆ, ಸೌಂದರ್ಯ ಪ್ರಜ್ಞೆ, ಒಳ್ಳೆಯತನ, ಒಗ್ಗಟ್ಟು, ನ್ಯಾಯ, ಧರ್ಮ ಎರಡನೆಯ ಗುಂಪಿಗೆ ಸೇರುತ್ತವೆ. ಈ ಅಗತ್ಯಗಳನ್ನೆಲ್ಲಾ ಆತ ಕೆಳಗಿನಿಂದ ಮೇಲಿನ ಹಂತ ಎಂದು ವಿಂಗಡಿಸಿದ್ದಾನೆ.

1. ಹಸಿವು, ನೀರಡಿಕೆ, ಕಾಮ
2. ರಕ್ಷಣೆ
3. ಆಸರೆ, ಪ್ರೀತಿ, ವಿಶ್ವಾಸಗಳು
4, ಮಾನ್ಯತೆ–ಸ್ವಾಭಿಮಾನ, ಸ್ವಪ್ರತಿಷ್ಠೆ
5. ಜ್ಞಾನ
6. ಸೌಂದರ್ಯಾನುಭವ
7. ಆತ್ಮ ಸಾಕ್ಷಾತ್ಕಾರ

ಪ್ರತಿಯೊಬ್ಬರೂ ಈ ಅಗತ್ಯಗಳಲ್ಲಿ ಕೆಲವನ್ನು ಪೂರೈಸಿಕೊಂಡು, ಮತ್ತೆ ಕೆಲವನ್ನು ಪೂರೈಸಿಕೊಳ್ಳಲು ಹೆಣಗುತ್ತಾ ಜೀವನ ನಡೆಸುತ್ತಾರೆ. ಒಂದು ಹಂತದ ಅಗತ್ಯ ಪೂರೈಸಿದ ಮೇಲೆ, ಅದರ ಮೇಲಿನ ಹಂತದ ಅಗತ್ಯಗಳು ಮನುಷ್ಯನನ್ನು ಕಾಡುತ್ತವೆ. ನಾಲ್ಕನೇ ಹಂತದ ಅಗತ್ಯ-ಮಾನ್ಯತೆ, ಸ್ವಪ್ರತಿಷ್ಠೆಯ ಬಗ್ಗೆ ಹೇಳುವುದಾ

ದರೆ, ಎರಿಕ್ ಬರ್ನ್‌ನ 'ಮಾನ್ಯತೆಯ ಹಸಿವು' 'ರೆಕಾಗ್ನಿಶನ್ ಹಂಗರ್' ಪದ ನೆನಪಾಗುತ್ತದೆ. ಪ್ರತಿಯೊಬ್ಬನೂ ಮಾನ್ಯತೆಗಾಗಿ ಹಾತೊರೆಯುತ್ತಾನೆ. ಎಷ್ಟೋ ಬಾರಿ ಮಾನ್ಯತೆ ಪಡೆಯುವುದೇ ಆತನ ಜೀವನದ ಪರಮೋದ್ದೇಶವಾಗಿರುತ್ತದೆ ಎಂಬ ಎರಿಕ್ ಬರ್ನ್‌ನ ಉದ್ಗಾರ ಸಮಂಜಸವಾದುದು. ಮಾನ್ಯತೆ ವ್ಯಕ್ತಿಯ ಪ್ರಗತಿಗೆ, ಉನ್ನತಿಗೆ, ಸಾಧನೆಗೆ ವಿಟಮಿನ್ ಇದ್ದ ಹಾಗೆ. ಮಾನ್ಯತೆ ಸಿಗುತ್ತಿದ್ದಂತೆ ಇನ್ನಷ್ಟು ಮಾನ್ಯತೆಯನ್ನು ತಂದು ಕೊಡಬಲ್ಲ ಸಾಧನೆಗಳನ್ನು ವ್ಯಕ್ತಿ ಮಾಡುತ್ತಾನೆ. ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದ ವ್ಯಕ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯೋ, ಅಂತರರಾಷ್ಟ್ರೀಯ ಸಂಸ್ಥೆಯೋ ಕೊಡುವ ಪುರಸ್ಕಾರಕ್ಕೆ ಸಲ್ಲುವ ಹೊಸ ಪುಸ್ತಕವನ್ನು ಬರೆಯಬಹುದು. ಶೀರ್ಪುಗಾರರ ಮೆಚ್ಚುಗೆಯನ್ನು ಮಾತ್ರ ಪಡೆದ ಕಲಾವಿದ, ಮರು ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನೇ ಗಳಿಸಬಹುದು. ಮಾನ್ಯತೆ ಇಲ್ಲದಿದ್ದರೆ, ಯಾವುದೇ ವ್ಯಕ್ತಿ ಕಳಾಹೀನನಾಗಿ, ತನ್ನ ಕೆಲಸ ಕರ್ತವ್ಯದಲ್ಲಿ ಶ್ರದ್ಧೆ ಕಳೆದುಕೊಂಡು, ಸೃಜನ ಶೀಲತೆಯನ್ನೂ ಕಳೆದುಕೊಂಡು, ನಿಷ್ಕ್ರಿಯನಾಗಬಹುದು.

ಕೆಲವು ಸಲ, ಕೆಲವರ ಮಾನ್ಯತೆಯ ಹಸಿವು ಹಿಂಗುವುದಿಲ್ಲ. ಸ್ವಲ್ಪ ಸಿಕ್ಕಿದರೆ ಮತ್ತಷ್ಟು, ಮತ್ತಷ್ಟು ಸಿಕ್ಕಿದರೆ ಇನ್ನಷ್ಟು ಕೊನೆಗೆ ಇಡೀ ಪ್ರಪಂಚದ ಮಾನ್ಯತೆ ಅವರ ಗುರಿಯಾಗುತ್ತದೆ. ಮಾನ್ಯತೆ ಪಡೆಯುವ ಪ್ರಯತ್ನದಲ್ಲಿ, ತಾವು ಮಾಡುವ ಪ್ರತಿ ಕೆಲಸದಲ್ಲಿ ಪರಿಪೂರ್ಣತೆಗೆ ಒತ್ತುಕೊಡುತ್ತಾರೆ. ಇತರರಿಗಿಂತ ಉತ್ತಮರೆನಿಸಿಕೊಳ್ಳಲು ಇಷ್ಟಪಡುತ್ತಾರೆ.

ಹೀಗೆ ಉನ್ನತಿಯನ್ನು ಸಾಧಿಸುವುದು, ಪರಿಪೂರ್ಣತೆಯ ಗುರಿ ಇಟ್ಟುಕೊಳ್ಳುವುದು ಮಾನವ ಸಹಜ ಗುಣ. ಇದು ಅವಶ್ಯಕವೂ ಹೌದು. ವ್ಯಕ್ತಿ ಹಾಗೂ ವ್ಯಕ್ತಿಯ ಮೂಲಕ ಇಡೀ ಸಮುದಾಯ ಮುನ್ನಡೆಯಲು, ಮೇಲ್ಮಟ್ಟವನ್ನು ಸಾಧಿಸಲು ಸಾಧ್ಯವಾಗುತ್ತದೆ. ಆದರೆ ಇದು ಒಂದು ಗೀಳಾದರೆ, ವ್ಯಕ್ತಿ ಸದಾ ಇದರಲ್ಲಿ ಮಗ್ನನಾಗಿ, ತನ್ನ ಅದುವರೆಗಿನ ಸಾಧನೆಯನ್ನು ನಿರ್ಲಕ್ಷಿಸಿ, ತನಗೆ ಸದಾ, ಸಾಧಿಸಲಾಗದಂತಹ ಗುರಿಗಳನ್ನು, ಪರಿಪೂರ್ಣತೆಯನ್ನು ಹಮ್ಮಿಕೊಂಡು ಹಿಂಸೆ ಪಡಲಾರಂಭಿಸಿದರೆ, ಆಗ ಅದನ್ನು ಪುನರ್ಪರಿಶೀಲನೆ ಮಾಡಬೇಕಾಗುತ್ತದೆ. ಆದು ಇಂಗದ ದಾಹವಾದರೆ, ಅದರಿಂದ ಎಚ್ಚೆತ್ತುಕೊಳ್ಳಬೇಕಾಗುತ್ತದೆ.

●

ಹಸಿವು ಆವರಿಸಿದಾಗ

● ಲಕ್ಷ್ಮಣ ಬಾಪು ಮಾನೆ

ಮಹಾರಾಷ್ಟ್ರದ ಖ್ಯಾತ ದಲಿತ ಸಾಹಿತಿ ಲಕ್ಷ್ಮಣಬಾಪು ಮಾನೆ ಅವರ ಆತ್ಮಚರಿತ್ರೆ 'ಉಪಾರ' ದಿಂದ ಆಯ್ದ ಎರಡು ಉತ್ಕಟ ಸಂದರ್ಭಗಳ ಕನ್ನಡ ಅನುವಾದವನ್ನು 'ಹಸಿವು ಆವರಿಸಿದಾಗ' ಎಂಬ ಶೀರ್ಷಿಕೆಯಡಿ ಇಲ್ಲಿ ಕೊಡುತ್ತಿದ್ದೇವೆ.

'ಉಪಾರ', ದಯಾಪವಾರ್ ಅವರ ಆತ್ಮಚರಿತ್ರ 'ಬಲೂತೆ' ನಂತರ ಮರಾಠಿ ಸಾಹಿತ್ಯ ಕಂಡ ಶ್ರೇಷ್ಠ ಆತ್ಮಚರಿತ್ರೆಯೆಂದು ಪರಿಗಣಿತವಾಗಿದೆ, 'ಉಪಾರ' ಎಂದರೆ ಆಗಂತುಕ, ಅಪರಿಚಿತ ಅಥವಾ ಅನ್ಯ ಎಂದು ಕನ್ನಡದಲ್ಲಿ ಅನುವಾದಿಸಬಹುದು. ಕೊಂಕಣದ 'ಕೈಕಾಡಿ' ಎಂಬ ಅಸ್ಪೃಶ್ಯ ಅಲೆಮಾರಿ ಜನಾಂಗದ ಒಬ್ಬ ಹುಡುಗ ತನ್ನ ಜಾತಿಯ ನೋವು ಅವಮಾನ ಹಾಗೂ ಕತ್ತಲೆಯನ್ನು ಮೀರಿ ಸಮಾಜದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ನಡೆಸಿದ ಸಂಘರ್ಷಗಳ ಸರಮಾಲೆಯೇ 'ಉಪಾರ'. ಎಲ್ಲೂ ದೊಡ್ಡ ಧ್ವನಿಯಲ್ಲಿ ಮಾತನಾಡದೇ, ಘಟನೆಗಳನ್ನು ಅತಿಯಾಗಿ ಅಲಂಕರಿಸದೆ, ತನ್ನ ಹೋರಾಟದ ಸೋಲು ಗೆಲುವುಗಳೆರಡನ್ನೂ ಸಮಚಿತ್ತದಿಂದ ಹಿನ್ನೋಡುವ, ಸಹಜ ಸಿಟ್ಟು ಪ್ರೀತಿಗಳನ್ನು ನಿರ್ಲಿಪ್ತವಾಗಿ ಬೆರಸಿ ಸಾಮಾನ್ಯನ ಭಾಷೆಯನ್ನು ಸಾಹಿತ್ಯ ಮಾಡುವ ಸಹಜ ಸೌಂದರ್ಯ ಸೃಷ್ಟಿಯೇ ಈ ಪುಸ್ತಕದ ಹೆಗ್ಗಳಿಕೆಯೆಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ 1981 ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡಾ ಲಭಿಸಿದೆ.

—ಸಂ.

ಒಂದು ಔತಣಕ್ಕೆ ಆಹ್ವಾನ

ನಾವು ಒಂದು ಮುಸ್ಲಿಂ ಮೊಹಲ್ಲಾದಲ್ಲಿ ವಾಸ ಮಾಡುತ್ತಿದ್ದೆವು. ನಮ್ಮ ನೆರೆಮನೆಯವರ ಮಗಳ ಮದುವೆ ನಡೆಯುತ್ತಿದ್ದು ನಮ್ಮನ್ನು ಔತಣಕ್ಕೆ ಆಹ್ವಾನಿಸಿದ್ದರು. ಭರ್ಜರಿ ಊಟದ ಆಲೋಚನೆಯಿಂದಲೇ ಮತ್ತೇರಿದ ನಾವು ಯಾವಾಗ ಕರೆದಾರು ಎಂದು ಕಾತುರದಿಂದ ಕಾಯುತ್ತಿದ್ದೆವು. ಮನೆಯಲ್ಲಿ ಒಂದು ಕಾಳೂ ಇರಲಿಲ್ಲ. ರಾತ್ರಿ ಎಂಟು ಗಂಟೆಯಾಗುತ್ತಾ ಬಂದರೂ ಕರೆಯಲು ಯಾರೂ ಬರಲಿಲ್ಲ. ನಾವು ಚಪ್ಪರದ ಆಸುಪಾಸಿನಲ್ಲಿ ಅನಗತ್ಯವಾಗಿ ಸುಳಿದಾಡುತ್ತಿದ್ದೆವು.... ಆದರೂ ಯಾರೂ ನಮ್ಮತ್ತ ಕಣ್ಣೆತ್ತಿ ನೋಡಲಿಲ್ಲ.... ನಮ್ಮನ್ನು ಆಹ್ವಾನಿಸಿದ್ದ ಮನುಷ್ಯನ ಸುಳಿವೇ ಇರಲಿಲ್ಲ. ಆತ ತನ್ನ ಇತರೆ ಕೆಲಸಗಳಲ್ಲಿ ತೊಡಗಿದ್ದನೋ ಏನೋ. ಬಿರ್ಯಾನಿಯ ಮಸಾಲೆ ಪರಿಮಳ ಸುತ್ತ ಹಬ್ಬಿತ್ತಾದರೂ ನಮ್ಮ ಅದೃಷ್ಟ ಖುಲಾಯಿಸಿರಲಿಲ್ಲ. ನಮ್ಮ ಮೂಗುಗಳು ಪರಿಮಳವನ್ನು ಹೀರುತ್ತಿದ್ದ ಪಾದರೂ ನಾಲಿಗೆಗಳಿಗೆ ಏನೂ ಇರಲಿಲ್ಲ. ಯಾರಾದರೊಬ್ಬರು ಬಂದು ನಮ್ಮನ್ನು ಊಟಕ್ಕೆ ಕರೆಯುತ್ತಾರೆ ಎಂಬ ಆಸೆಯಿಂದ ಕಾಯುವುದರ ಹೊರತಾಗಿ ಮತ್ತೇನೂ ಮಾಡುವ ಸ್ಥಿತಿಯಲ್ಲಿ ನಾವಿರಲಿಲ್ಲ. ನನ್ನ ಕಿಸೆಯಲ್ಲಿ ನಾಲ್ಕಾಣೆ ಮಾತ್ರ ಇತ್ತು. ಕನಿಷ್ಟ ಎರಡು ಬಾಳೆಹಣ್ಣು ಕೊಂಡುಕೊಳ್ಳಬಹುದಿತ್ತು. ಆದರೆ ಬಹಳ ತಡವಾಗಿದ್ದುದರಿಂದ ಎಲ್ಲಾ ಅಂಗಡಿಗಳೂ ಮುಚ್ಚಿದ್ದು, ಈಗ ಅದೂ ಕೂಡಾ ಅಸಾಧ್ಯವಾಗಿತ್ತು. ನಾನು ಎಲ್ಲರನ್ನೂ ಇವರ ವಂಶ ನಿರ್ವಂಶವಾಗಲಿ ಎಂದು ಶಪಿಸಿದೆ. ಮನೆ ಬಾಗಿಲನ್ನು ಮುಚ್ಚಿಕೊಂಡು ನಾವು ಶನಿವಾರ ಚೌಕದತ್ತ ನಡೆದೆವು. ಕೊನೆಗೂ ಒಂದು ಸಿನಿಮಾ ಮಂದಿರದ ಬಳಿ ಚಾ ಸಿಕ್ಕಿತು. ಅರ್ಧರ್ಧ ಕುಡಿದು ಮನೆಗೆ ಹಿಂದಿರುಗಿದೆವು.

ನನಗೆ ಬಾಲ್ಯದಲ್ಲಿ, ಅತಿಥಿಗಳು ತಿಂದೆಸೆದ ಎಲೆಗಳ ಮೇಲೆ ನಾವು ಮುಗಿಬೀಳುತ್ತಿದ್ದುದು ನೆನಪಿಗೆ ಬಂತು. 'ಯಾಕಾಗಬಾರದು'? ಯೋಚಿಸಿದೆ. ಆದರೆ ಏಕೋ ಶಶಿ ಬಳಿ ಇದನ್ನು ಪ್ರಸ್ತಾಪಿಸುವಷ್ಟು ಧೈರ್ಯ ನನಗೆ ಬರಲಿಲ್ಲ. ಅವಳಿಗೆ ಏನೂ ಹೇಳದೆ ಹೊರಗೆ ನಡೆದೆ. ಮದುವೆ ಚಪ್ಪರದ ಬಳಿಗೆ ಬಂದಾಗ "ಆವ್ರೋ ... ಆವ್ರೋ" ಎಂದು ಅತಿಥಿಗಳು ಪರಸ್ಪರರೇ ಆಹ್ವಾನಿಸಿಕೊಂಡು ಕೂರುತ್ತಿರುವುದು ಕಂಡಿತು. ಅವರೆಲ್ಲಾ ಒಂದೇ ತಟ್ಟೆಯಲ್ಲಿ ಕೂತು ತಿನ್ನುತ್ತಿದ್ದರು. ನನಗದು ಆಗ ಹೊಳೆಯಿತು ! ಅಯ್ಯೋ ದೇವರೇ.... ಇವರೆಲ್ಲಾ ಸಾಬರು ! ನಮ್ಮಂತೆ ಅವರು ಬೇರೆ ಬೇರೆ ಎಲೆಗಳಲ್ಲಿ ತಿನ್ನುವುದಿಲ್ಲ.... ನಾನು ಮನೆಗೆ ಹಿಂದಿರುಗಿ ಒಂದು

ಚೊಂಬು ನೀರು ಕುಡಿದು ಬಿದ್ದುಕೊಂಡೆ. ನಂತರ ಲೈಂಗಿಕ ಕ್ರಿಯೆ.... ನಾನು ಮದುವೆಯಾಗಿದ್ದಾದರೂ ಅದಕ್ಕೇ. ಹಸಿದ ಹೊಟ್ಟೆಯಲ್ಲೇ ಮಲಗಿದೆ ಎಂದೇನೂ ಹೇಳಲಾರೆ. ಯಾಕೆಂದರೆ ಇಡೀ ರಾತ್ರಿ ನಾನು ಹಾಸಿಗೆಯಲ್ಲಿ ಹೊರಳಾಡುತ್ತಿದ್ದೆ. ಇಡೀ ಜಗತ್ತನ್ನು ಶಪಿಸುತ್ತಿದ್ದೆ. ಮನಸ್ಸಲ್ಲೇ ಇಡೀ ವ್ಯವಸ್ಥೆ ಮೇಲೆ ಉಚ್ಚೆ ಹೊಯ್ಯುತ್ತಿದ್ದೆ.

ಒಮ್ಮೆ ನನಗೊಂದು ಒಳ್ಳೇ ಯೋಚನೆ ಹೊಳೆದಿತ್ತು.... ದೇಶ ನಡೆಸುವ ಸರ್ಕಾರ ಎಲ್ಲಿದೆ ? ಮುಂಬೈನಲ್ಲಿ ? ದೆಹಲಿಯಲ್ಲಿ ? ಅಮ್ಮನವರ 'ಗರೀಬಿ ಹಟಾವೋ' ಘೋಷಣೆ ಜನ ಸಮೂಹವನ್ನು ಸಮ್ಮೋಹನಗೊಳಿಸಿತ್ತು. ಪಾರ್ಲಿಮೆಂಟ್ ಮೇಲೆ ಒಂದು ಬಾಂಬ್ ಹಾಕಿ ಈ ಇಸುಬಿಗೆ ಕೊನೆಕಾಣಿಸುವ ಅದಮ್ಯ ಒತ್ತಾಸೆ ನನ್ನನ್ನು ಕಾಡತೊಡಗಿತ್ತು. ಆ ರಾತ್ರಿ ನಾನು ಕನಸಿನಲ್ಲಿ ಪಾರ್ಲಿಮೆಂಟ್ ಮೇಲೆ ಬಾಂಬ್ ಹಾಕಿ, ನಮಗೆ, ದಲಿತರಿಗೆ ಋಣಿಯಾಗಿರುವ ಜನ ನೋವಿನಿಂದ ನರಳಿ ಸಾಯುತ್ತಿರುವುದನ್ನು ಕಂಡೆ. ಒಳಗಿನಿಂದಲೇ ದಮನಗೊಂಡ ಬೆಂಕಿಯಂತೆ ನಾನು ಉರಿಯುತ್ತಿದ್ದೆ. ಯಾರಾದರೂ ಮೀಸಲಾತಿಯ ಮಾತೆತ್ತಿದ್ದರೆ ಅವರನ್ನು ಅಲ್ಲೇ ಸಿಗಿದುಹಾಕುವಂತಾಗುತ್ತಿತ್ತು. ಎಲ್ಲವೂ ನಿಷ್ಪ್ರಯೋಜಕ ಅನ್ನಿಸುತ್ತಿತ್ತು. ಸುತ್ತ ಕಾಣುವ ಮುಖಗಳಿಂದ ಮುಖವಾಡಗಳನ್ನು ಹರಿದುಹಾಕಬೇಕೆನ್ನಿಸುತ್ತಿತ್ತು.

'ಮನುಷ್ಯ' ಎಂಬೊಂದು ಜಾತಿ

ನಿಜ ಹೇಳಬೇಕೆಂದರೆ, ನನಗೆ ಮನುಷ್ಯ ಜಾತಿ ಬಗ್ಗೆಯೇ ಮನುಷ್ಯತ್ವದ ಬಗ್ಗೆಯೇ ನಂಬಿಕೆ ಹೊರಟು ಹೋಗಿತ್ತು. ನನ್ನ ತಂದೆ ತಾಯಿಗಳೇ ನನ್ನನ್ನು ಕೈಬಿಟ್ಟಿರುವಾಗ ಸಹಾಯಕ್ಕಾಗಿ ನಾನು ಯಾರ ಕಡೆ ತಿರುಗಬಲ್ಲವನಾಗಿದ್ದೆ. ? ಆದರೆ ಕಾಳೆ ಆಶಾವಾದಿಯಾಗಿದ್ದ. ಹೀಗಾಗಿ ನಾನು ಇದನ್ನೂ ನೋಡೇಬಿಡೋಣ ಎಂದು ತೀರ್ಮಾನಿಸಿದೆ.

ನಾವು ಕರೆಗಂಟೆ ಒತ್ತಿದಾಗ ಒಬ್ಬ ತರುಣ ಬಾಗಿಲು ತೆರೆದು ಮುಖದ ತುಂಬಾ ಸ್ನೇಹದ ನಗೆ ಬೀರಿದ. ಕಾಳೆ ಆತನನ್ನು ನನಗೆ ಪರಿಚಯಿಸಿದ– "ಇವರು ಡಾ॥ ನರೇಂದ್ರ ದಾಭೋಳ್ಕರ್ ಅಂತ. ಯುವ ಸಮಾಜವಾದಿ ವೇದಿಕೆಗಾಗಿ ಕೆಲಸ ಮಾಡ್ತಾರೆ" ನಾವು ಲೋಕಾಭಿರಾಮವಾಗಿ ಅಂತರ್ಜಾತೀಯ ವಿವಾಹ ಇತ್ಯಾದಿಗಳ ಬಗ್ಗೆ ಮಾತನಾಡಿದೆವು. ನಂತರ ಆತ ನಾನು ಸದ್ಯಕ್ಕೆ ಎಲ್ಲಿ ಕೆಲಸ ಮಾಡುತ್ತಿರು

ವುದು, ನಮ್ಮೂರು ಯಾವುದು ಇತ್ಯಾದಿ ಕೆಲವು ವೈಯಕ್ತಿಕ ವಿಷಯಗಳನ್ನು ವಿಚಾರಿಸಿದರು. ಆದರೆ ನನ್ನ ಹರಕಲು ಬಟ್ಟೆ ಕುರುಚಲು ಗಡ್ಡ ಇತ್ಯಾದಿಗಳಿಂದಾಗಿ ಮುಜಗರಕ್ಕೊಳಗಾಗಿದ್ದೆ. ನನಗೆ ನನ್ನ ಬಗ್ಗೆಯೇ ನಾಚಿಕೆ ಬರತೊಡಗಿತ್ತು. ಏನೋ ಅಷ್ಟಿಷ್ಟು ವಿಷಯ ತಿಳಿಸಿದೆ. ಪೂರ್ತಿಯಾಗಿ ಎಲ್ಲ ಸತ್ಯವನ್ನೂ ಅವರ ಮುಂದಿಡುವುದು ನನಗೆ ಸಾಧ್ಯವೇ ಆಗಲಿಲ್ಲ. ಸ್ವಲ್ಪ ಹೊತ್ತಿನ ನಂತರ ಡಾ॥ ದಾಭೋಳ್ಕರ್, "ನಾನು ಪರೇಲ್‌ನಲ್ಲಿ ಕೆಲಸ ಮಾಡುವುದು.... ನೀವು ಮತ್ತೆ ಸಾಯಂಕಾಲ ಆರು ಗಂಟೆಗೆ ಬರ್ತೀರಾ ? ಆರಾಮವಾಗಿ ಮಾತಾಡಬಹುದು." ಎಂದರು. ಈತ ಒಬ್ಬ ಸಮಾಜವಾದಿ, ನನ್ನ ಒಡನಾಡಿಯೇ, ಈತ ನನಗಾಗಿ ಏನಾದರೂ ಒಂದಿಷ್ಟು ಮಾಡಬಹುದು ಅಂದುಕೊಂಡೆ. ಆಸೆಯನ್ನೂ ಒಡಲಲ್ಲಿಟ್ಟುಕೊಂಡು ಎದ್ದೆ. ಬರಿಗೈಯಲ್ಲಿ ಹಿಂದಿರುಗುತ್ತಿದ್ದೆನಾದರೂ ಆಶಾಕಿರಣ ಉಜ್ವಲಗೊಂಡಂತಿತ್ತು.

ನಾನು ರಾತ್ರಿ ಏಳೂವರೆ ಹೊತ್ತಿಗೆ ಮತ್ತೆ ಹೋದೆ. ಡಾ॥ ದಾಭೋಳ್ಕರ್ ರೋಗಿಯೊಬ್ಬರನ್ನು ನೋಡುತ್ತಿದ್ದರು. ಒಳಗೆ ಕೂತಿರಲು ನನಗೆ ಹೇಳಿದರು. ಮನೆಯಲ್ಲಿ ಒಬ್ಬ ಹಿರಿಯ ಹೆಂಗಸು ಮಾತ್ರ ಅತ್ತಿತ್ತ ಓಡಾಡುತ್ತಿರುವುದನ್ನು ಗಮನಿಸಿದೆ. ಇಂತಹ ಜನಾನುರಾಗಿ ವೈದ್ಯ, ನನಗಿಂತ ಸ್ವಲ್ಪ ದೊಡ್ಡವರು, ಇನ್ನೂ ಮದುವೆ ಆಗಿಲ್ಲವೇ ಎಂದು ನಾನು ಆಶ್ಚರ್ಯದಿಂದ ಯೋಚಿಸತೊಡಗಿದ್ದೆ. ಅಷ್ಟರಲ್ಲಿ ಅವರು ಒಳಗೆ ಬಂದರು. ನಮ್ಮ ಮಾತುಕತೆಯಿಂದ, ನಮ್ಮಿಬ್ಬರಿಗೆ ತುಂಬಾ ಜನ ಸಾಮಾನ್ಯ ಸ್ನೇಹಿತರಿರುವುದು ಗೊತ್ತಾಯಿತು. ಅಷ್ಟು ಹೊತ್ತಿನೊಳಗೇ ನಾವು ಪ್ರಾಣ ಸ್ನೇಹಿತರಂತಾಗಿ ಬಿಟ್ಟಿದ್ದೆವು. ಆತ ಎದ್ದು ಒಳಗೆ ಹೋದರು. ಆ ಹಿರಿಯ ಹೆಂಗಸಿನೊಂದಿಗೆ ಏನೋ ಪಿಸು ಮಾತಾಡುತ್ತಿರುವುದು ನನಗೆ ಕೇಳಿಸುತ್ತಿತ್ತು. ಒಂದು ಲೋಟ ಚಾ ಕೊಟ್ಟು ಕಳಿಸುವರು ಎಂದುಕೊಂಡೆ. ಆತ ಎರಡೂ ಕೈಗಳಲ್ಲಿ ನಾಲ್ಕಾರು ಚೀಲಗಳನ್ನು ಹಿಡಿದುಕೊಂಡು ಹೊರಬಂದರು. ಗೋಧಿ, ಅಕ್ಕಿ, ಜೋಳ, ಬೇಳೆ ಕಾಳುಗಳು, ಮನೆಯಲ್ಲಿ ಏನೇನಿತ್ತೋ ಅವೆಲ್ಲವನ್ನೂ, ಒಂದು ಡಬ್ಬಿ ಸೀಮೆ ಎಣ್ಣೆ ಹಾಗೂ ಇನ್ನೊಂದು ಡಬ್ಬ ಅಡಿಗೆ ಎಣ್ಣೆಯನ್ನು ಕೂಡಾ ನನ್ನ ಮುಂದೆ ಇಟ್ಟರು. ಇವೆಲ್ಲವೂ ನನಗೆ ಸಿಗುತ್ತವೆ ಎಂದು ಯಾರಾದರೂ ಕೆಲವೇ ನಿಮಿಷಗಳ ಹಿಂದೆ ಹೇಳಿದ್ದರೂ ನಾನು ಅದನ್ನು ಕ್ರೂರ ವ್ಯಂಗ್ಯವೆಂದಷ್ಟೇ ತಳ್ಳಿಹಾಕುತ್ತಿದ್ದೆ. ಚೀಲಗಳ ತುಂಬಾ ಧಾನ್ಯಗಳು ತುಂಬಿದ್ದವು. ಆತ ಕಿಸೆಯೊಳಗೆ ಕೈಯಾಡಿಸಿ ಇಪ್ಪತ್ತು ರೂಪಾಯಿ ನೋಟೊಂದನ್ನು ತೆಗೆದರು. ನಾನು ಅವರ

ಕೈಗೊಂಬೆಯಂತಾಗಿ ಹೋಗಿದ್ದೆ. ನಾನು ಕನಸು ಕಾಣುತ್ತಿದ್ದೇನೆ ಎಂದೆನಿಸತೊಡಗಿತ್ತು. ಅವರು "ಇವೆಲ್ಲವನ್ನೂ ತೆಗೆದುಕೊಳ್ಳಿ. ಇನ್ನೇನಾದರೂ ಬೇಕಾದರೆ ಯಾವುದೇ ಸಂಕೋಚವಿಲ್ಲದೇ ಬನ್ನಿ. ನಾನು ನೀವು ಬೇರೆ ಅಂತ ತಿಳಿದುಕೊಳ್ಳ ಬೇಡಿ" ಎಂದರು. ಈ ಋಣಭಾರದಡಿಯಲ್ಲಿ ನಾನು ಜರ್ಝರಿತನಾಗಿದ್ದೆ.

ಆ ಎಲ್ಲ ಸಾಮಾನುಗಳೊಂದಿಗೆ ಮನೆ ಹೇಗೆ ಮುಟ್ಟಿದೆನೋ ನನಗೆ ಗೊತ್ತಿಲ್ಲ. ಶಶಿಗೆ ಏನೂ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ, ಕಣ್ಣಲ್ಲಿ ನೀರು ಉಕ್ಕಿ ಬಂತಷ್ಟೆ. ಎಷ್ಟೋ ಹೊತ್ತು ನಾನು ಬಿಕ್ಕುತ್ತಾ ಮಲಗಿದ್ದೆ. ಆ ಬಿಕ್ಕುಗಳ ನಡುವೆಯೇ ಶಶಿಗೆ ಎಲ್ಲವನ್ನೂ ಹೇಳಿದೆ. ನಾನೆಂದೂ ದೇವರನ್ನು ನಂಬಿರಲಿಲ್ಲ, ಆದರೆ ದೇವರೆಲ್ಲಾದರೂ ಇದ್ದರೆ ಆತ ಆ ಚೀಲಗಳಲ್ಲಿದ್ದ. 'ಮನುಷ್ಯ' ಎಂಬೊಂದು ಜಾತಿ ಎಲ್ಲೋ ಇನ್ನೂ ಬದುಕಿದೆ ಎಂಬ ನಂಬಿಕೆ ನನಗೆ ಬರತೊಡಗಿತು. ಈವರೆಗೂ ಅಪರಿಚಿತನಾಗಿದ್ದ ಒಬ್ಬ ವ್ಯಕ್ತಿ ನನ್ನನ್ನು ಇಷ್ಟೊಂದು ನಂಬಿ ಹೀಗೆ ನನಗೆ ಅಸದೃಶ ರೀತಿಯಲ್ಲಿ ಯಾಕೆ ಸಹಾಯ ಮಾಡಬೇಕಿತ್ತು.? ಹಲವು ಆಲೋಚನೆಗಳು ನನ್ನ ಮನಸ್ಸನ್ನು ಮುತ್ತಿದವು. ನನಗೆ ಜೋರಾಗಿ ಅಳಬೇಕೆನಿಸಿತು.... ಈವರೆಗೆ ನಾನು ಎದುರಿಸಿದ್ದು ತಿರಸ್ಕಾರ ಮತ್ತು ದ್ವೇಷಗಳನ್ನು ಮಾತ್ರ.

ಹೊಸ ಓದು

ಡಾ॥ ಡಿ. ಆರ್. ನಾಗರಾಜ್ ಅವರ 'ಶಕ್ತಿ-ಶಾರದೆಯ ಮೇಳ'

1987
ಅಕ್ಷರ ಪ್ರಕಾಶನ, ಸಾಗರ.
ಬೆಲೆ ರೂ. : 60
ಪುಟಗಳು : 414

● ಪುರುಷೋತ್ತಮ ಬಿಳಿಮಲೆ

ಕನ್ನಡ ವಿಮರ್ಶೆ ಎಲ್ಲೋ ಒಂದೆಡೆ ಸ್ಥಗಿತವಾಗಿದೆ– ಎಂದು ಅನ್ನಿಸತೊಡಗುವ ಕಾಲದಲ್ಲಿ ಡಿ. ಆರ್. ನಾಗರಾಜ್ ಅವರ 'ಶಕ್ತಿ-ಶಾರದೆಯ ಮೇಳ' ಪ್ರಕಟವಾಗಿದೆ. ಆಧುನಿಕ ಕನ್ನಡ [illegible] ಗಳು ವ್ಯ[illegible] ಬಗೆಯನ್ನು [illegible] ವಿವೇಚಿಸಲಾಗಿದೆ. ಪ್ರಬುದ್ಧವಾದ ವಿವೇಚನೆಗೆ, ತಾತ್ವಿಕ ಖಚಿತತೆಗೆ, ಭಾಷಯ ಲವಲವಿಕೆಗೆ ಈ ಕೃತಿ ಒಂದು ಮಾದರಿ ಉದಾಹರಣೆ. ಭೂಮಿ–ಕಾಲ–ಕಾಮ–ಸಮಾಜಗಳ ಪರಿಶೀಲನೆಯನ್ನು ಕವನದ ಆಕೃತಿಯೊಳಗೆ ಇಟ್ಟು ಚರ್ಚಿಸುವಾಗಲೂ, ಅದು ಒಂದು ಕಾಲದ ಸಾಂಸ್ಕೃತಿಕ ಅರ್ಥವಂತಿಕೆಯ ಶೋಧ ಆಗುವುದರಲ್ಲಿ ಕೃತಿಯ ಮಹತ್ವ ಅಡಗಿದೆ. ನಾಗರಾಜ್ ಬರವಣಿಗೆಯ ಶೈಲಿಯೂ ಅಡಗಿದೆ. ಕೃತಿಯ ಶೀರ್ಷಿಕೆಯೇ ಅದಕ್ಕೆ ಸಾಕ್ಷಿ. ಅದರ ಬಗ್ಗೆ ನಾಗರಾಜ್ ಹೇಳುವುದು ಹೀಗೆ–

"ನನ್ನ ಪ್ರಕಾರ ಕಾವ್ಯ ಯಾವಾಗಲೂ ಶಕ್ತಿ-ಶಾರದೆಯ ಮೇಳದ ಹಾಗೆ. ಶಾರದೆ ಎಂದರೆ ಇಲ್ಲಿ ವಿದ್ಯೆ, ವೈಚಾರಿಕ ಜ್ಞಾನ. ಶಕ್ತಿ ಎಂದರೆ ವೈಚಾರಿಕ ಜ್ಞಾನದ ಆಚೆಗೆ ಇರುವ ಅನುಭವ, ಅಥವಾ ಎನರ್ಜಿ. ಬಹಳ ಬಾರಿ ಸಾಹಿತ್ಯವನ್ನು ಶಾರದೆ

ಯನ್ನಾಗಿ ಪಾತ್ರ ತೆಗೆದುಕೊಳ್ಳುವಂತೆ ಆಗಿ ಬಿಡುತ್ತದೆ. ಆದರೆ ಕಾವ್ಯ ಮುಖ್ಯವಾಗಿ ಶಕ್ತಿ. ಈ ಶಕ್ತಿ ರೂಪಕ್ಕೆ ವಿಮರ್ಶೆ ಪ್ರತಿಸ್ಪಂದಿಸಿ ತನ್ನ ಒಡಲಿನೊಳಕ್ಕೆ ಅದನ್ನು ಕರೆದುಕೊಳ್ಳಬೇಕಾಗಿದೆ." [ಪು : 8]

ಕನ್ನಡದ ಸಂದರ್ಭದಲ್ಲಿ ಇಂಥ ಯೋಚನೆಗೆ 'ಅನನ್ಯತೆ' ಪ್ರಾಪ್ತವಾಗುತ್ತದೆ. ಲೌಕಿಕ ಜಗತ್ತಿನ ಮಹಾನ್ ವಾಸ್ತವ ಮತ್ತು ಅಲೌಕಿಕ ಜಗತ್ತಿನ ಆದರ್ಶಗಳನ್ನು ಮುಖಾಮುಖಿಯಾಗಿಸುವಲ್ಲಿ ಮನುಷ್ಯ ತೋರುವ ವಿಕ್ರಮವನ್ನೇ ವಿಮರ್ಶಕನೂ ತೋರುತ್ತಾನೆ. ಇಲ್ಲಿ ವಿಮರ್ಶೆಯ ಹೊಣೆಗಾರಿಕೆ ಗುರುತರವಾದುದು. ನಾಗರಾಜ್ ಬರೆಹದ ಶ್ರೇಷ್ಠತೆಯನ್ನು ಅನಂತಮೂರ್ತಿಯವರು ನಾಲ್ಕು ರೀತಿಯಲ್ಲಿ ಗ್ರಹಿಸಿ ಸಿದ್ದಾರೆ.

ಒಂದು : ಪ್ರಬಂಧದ ವ್ಯಾಪ್ತಿ ದೊಡ್ಡದು– ಕನ್ನಡದ ಎಲ್ಲ ಆಧುನಿಕ ಕವಿಗಳ ಮೇಜರ್ ಅನ್ನಬಹುದಾದ ಕೃತಿಗಳೆಲ್ಲವೂ ಆಳವಾಗಿ, ಸೂಕ್ಷ್ಮವಾಗಿ ಒಂದು ಕೇಂದ್ರ ದೃಷ್ಟಿಕೋನದ ಪ್ರವೇಶಕ್ಕೆ ಸಿಕ್ಕುವಂತೆ ಚರ್ಚಿಸಲು ಪ್ರಬಂಧದಲ್ಲಿ ಅವಕಾಶ ಮಾಡಿಕೊಳ್ಳಲಾಗಿದೆ.

ಎರಡು : ಸಾಹಿತ್ಯ ವಿಮರ್ಶೆಯ ಎಚ್ಚರವನ್ನೂ, ತಾತ್ವಿಕ ವ್ಯಾಖ್ಯಾನಕ್ಕೆ ಅಗತ್ಯವಾದ ವೈವಿಧ್ಯದ ಉದಾರ ಗ್ರಹಿಕೆಯನ್ನು ಒಂದಕ್ಕೊಂದು ವಿರೋಧವಾಗದಂತೆ ಒಳಗೊಂಡಿರುವುದು.

ಮೂರು : ಕನ್ನಡದ ಹಲವು ಪದ್ಯಗಳ ಉತ್ತಮ ವಿಮರ್ಶೆ ಕೃತಿಯಲ್ಲಿದೆ.

ನಾಲ್ಕು : ಹಲವು ಆಕರಗಳಿಂದ ಜ್ಞಾನ ಸಂಪಾದನೆ ಮಾಡಿ ಅವೆಲ್ಲವನ್ನೂ ಸಾಹಿತ್ಯ ವಿಮರ್ಶೆಗೆ ದುಡಿಸಿಕೊಂಡಿದ್ದಾರೆ. [ಪು : III–VIII].

ಕಲಾಕೃತಿ–ಚರಿತ್ರೆ–ಸಿದ್ಧಾಂತ- ಈ ಮೂರರ ನಡುವಿನ ನಿಕಟ ಸಂಬಂಧದ ತಾತ್ವಿಕ ಗ್ರಹಿಕೆಯಲ್ಲಿ, ನಾಗರಾಜರ ವಿಮರ್ಶೆ ಅಂತಿಮವಾಗಿ ಕನ್ನಡದ ಸಾಂಸ್ಕೃತಿಕ ವಿಮರ್ಶೆಯೂ ಆಗಿರುವುದನ್ನು ಚನ್ನವೀರ ಕಣವಿಯವರೂ ಗುರುತಿಸಿದ್ದಾರೆ.
[ಪು : VIII]

ಕನ್ನಡ ನವೋದಯವು ವಸಾಹತೀಕರಣದ ಗರ್ಭದಿಂದಲೇ ಉದಿಸಿ ಬಂದಿದೆ. ಹಾಗಾಗಿ ನವೋದಯದ ಸೃಜನ ಶೀಲತೆಯ ನೆಲೆಗಳು ದೇಸಿ ಮತ್ತು ಪಾಶ್ಚಾತ್ಯ

ಮೂವರಿಗೆ ಮಿಶ್ರಣದಲ್ಲಿಯೇ ಇರುವುದು ಅನಿವಾರ್ಯವಾಯಿತು. ಡಿ. ಆರ್. ನಾಗರಾಜ್ ಈ ಮಿಶ್ರಣದ ಪುಟವೇಳುವಿಕೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಈ ಪ್ರಯತ್ನದಲ್ಲಿ ಬೇಂದ್ರೆ, ಪು.ತಿ.ನ., ಕುವೆಂಪು, ನರಸಿಂಹಸ್ವಾಮಿ, ವಿ. ಕೆ. ಗೋಕಾಕ, ಗಂಗಾಧರ ಚಿತ್ತಾಲ, ಶಿವರುದ್ರಪ್ಪ, ಚನ್ನವೀರ ಕಣವಿ, ರಾಮಚಂದ್ರ ಶರ್ಮ, ಚಂದ್ರಶೇಖರ ಕಂಬಾರ, ಚೆನ್ನಯ್ಯ ಮತ್ತು ಗೋಪಾಲಕೃಷ್ಣ ಅಡಿಗರು ವಿಶೇಷವಾದ ಚರ್ಚೆಗೆ- ವಿಶ್ಲೇಷಣೆಗೆ ಒಳಗಾಗಿದ್ದಾರೆ. ಜಿ. ರಾಜಶೇಖರ ಮತ್ತು ಆರ್ಕೆಯವರು ಈಗಾಗಲೇ ಗುರುತಿಸಿರುವಂತೆ 'ಎ. ಕೆ. ರಾಮಾನುಜನ್ನರ ಗೈರು ಹಾಜರಿ ಮಾತ್ರ ಕಣ್ಣಿಗೆ ಹೊಡೆದು ಕಾಣುವಂತಹದ್ದು' [ರಾಜಶೇಖರ : ತರಂಗ 3–1–88, ಪು : 56, ಆರ್ಕೆ : ಮುಂಗಾರು 10–1–88 ಪು : 3]. ಇದನ್ನು ಗಮನಿಸಿದರೆ ಕೃತಿಯಲ್ಲಿ ನವ್ಯಕ್ಕಿಂತ ನವೋದಯ ಸಂಪ್ರದಾಯವೇ ಲೇಖಕರನ್ನು ಹೆಚ್ಚು ಆಕರ್ಷಿಸಿರುವುದು ಸ್ಪಷ್ಟವಾಗುತ್ತದೆ.

ಕೃತಿಯ ತಾತ್ವಿಕ ಹಿನ್ನೆಲೆಯನ್ನು ಖಚಿತಪಡಿಸಿಕೊಂಡರೆ, ನಾಗರಾಜ ತಲುಪುವ ನೆಲೆಯ ಬಗ್ಗೆ ಸಮಸ್ಯೆ ಏಳುವುದೇ ಇಲ್ಲ. ಅಲ್ಲಿಂದ ಹೊರಟರೆ- ಅಲ್ಲಿಗೇ ತಲುಪಬೇಕು. ಆದರೆ ಎಲ್ಲೋ ಒಂದೆಡೆ ಭೂಮಿ-ಕಾಲ-ಕಾಮ- ಸಮಾಜಗಳೆಂಬ ವರ್ಗೀಕರಣವೇ ಪ್ರಶ್ನಾರ್ಹವಾದದು ಎನ್ನಿಸುತ್ತದೆ. ಏಕೆಂದರೆ ಮಾನವನ ಭಾವನಿರ್ಮಿತಿಯಲ್ಲಿ ಅವು ಒಂದಾಗಿಯೇ ಕ್ರಿಯಾಶೀಲವಾಗುತ್ತವೆ. ಭೂಮಿಯನ್ನೇ ಗಮನಿಸಿದರೂ ಸಾಕು– ಈ ಮಾತು ಸ್ಪಷ್ಟವಾಗುತ್ತದೆ. 'ಚರಿತ್ರೆಯು ಹಿಂಸೆ ಮತ್ತು ದುಷ್ಟ ಶಕ್ತಿಯನ್ನು, ಅದರ ಸಮಸ್ಯೆಯನ್ನು ಮುಂಡಿಸಿ, ಅದನ್ನು ದಾಟಿಸುವ ಶಕ್ತಿ ಇದೆ ಎಂದು ಹೇಳುವುದೇ ಭೂಮಿತತ್ವ ಪ್ರತೀಕದ ಆಶಯ. [ಪು : 19] ವೇದ–ಪುರಾಣ–ಪಾಶ್ಚಾತ್ಯರ ಬರೆಹಗಳನ್ನು ಆಧರಿಸಿದರೆ ಇದೇ ತೀರ್ಮಾನಕ್ಕೆ ಬರಲೇಬೇಕು. ಆದರೆ ನನಗನ್ನಿಸಿದ ಹಾಗೆ ಇವು ಯಾವುವೂ ಭೂಮಿ ತತ್ವವನ್ನು ಪ್ರತಿಪಾದಿಸಲಾರವು. ಭೂಮಿ ಜೊತೆ ನೇರ ಸಂಬಂಧ ಇರುವ ಜನಪದರು, ಶ್ರಮಜೀವಿಗಳು– ಅವರು ನಿರ್ಮಾಣ ಮಾಡಿಕೊಂಡ ಜಾನಪದದ ಅನೇಕ ಪ್ರಕಾರಗಳಲ್ಲಿ ಭೂಮಿ ತತ್ವದ ಪ್ರತೀಕ ಹೇಗಿದೆ ? ಅದು ವೈದಿಕ ರೀತಿಗಿಂತ ಭಿನ್ನವೇ ಹೌದು. ಇಂದ್ರನಿಗೆ ಬಂದ ಬ್ರಾಹ್ಮಣ ಹತ್ಯೆಯ ಪಾಪದ ಫಲವಾಗಿ ಭೂಮಿ ಮುಟ್ಟಾಗುವಳೆಂಬ ಪೌರಾಣಿಕ ನಂಬಿಕೆಗೂ, ಹೆಣ್ಣು ಮೈ ನೆರೆದು ಫಲವತಿಯಾದಳೆಂಬ ಖೆಡ್ಡಾಸದ ಆಚರಣೆಗೂ ಅಜಗಜಾಂತರ ವ್ಯತ್ಯಾಸವಿದೆ. ಪ್ರತೀಕಗಳು ಭಿನ್ನ ಭಿನ್ನ. ಜಾನಪದದಲ್ಲಿ ಭೂಮಿ ಪ್ರಕೃತಿಯಾಗಿ-ಹೆಣ್ಣಾಗಿ-ಕಾಮಿಸುವ ಅಪ್ರತಿಮ

ಸುಂದರಿಯೂ ಹೌದು. ಕಾಲ-ಭೂಮಿ-ಮಾನವ ಸಮಾಜ ಇದು ಅಭಿನ್ನವಾಗು ತ್ತದೆ. ಆಟ ತಿಂಗಳು ಇದಕ್ಕೆ ಮಾದರಿ ಉದಾಹರಣೆ. ಡಿ. ಆರ್. ನಾಗರಾಜ್ ವೈದಿಕ ರೀತಿಯ ಚಿಂತನಾ ಕ್ರಮವನ್ನು ಅವಲಂಬಿಸಿದ್ದೇ ಆದ್ದರಿಂದ ಅಂಥ ತೀರ್ಮಾನಗಳಿಗೆ ಬರುತ್ತಾರೆ. ವೇದ, ಪುರಾಣವನ್ನು ಬಳಸಿಕೊಳ್ಳುವವರು ಮೌಖಿಕ ಪರಂಪರೆಯ ಸತ್ವವನ್ನು ಯಾಕೆ ಮರೆತು ಬಿಡುತ್ತಾರೆಂಬುದೇ ಅರ್ಥವಾಗದ ವಿಷಯ. ಬಹುಶ: ಲಿಖಿತ ದಾಖಲೆಗಳ ಮೂಲಕ ಇತಿಹಾಸದ ಶಾಸ್ತ್ರೀಕತೆಯನ್ನು ರೂಪಿಸಿದ ವಸಾಹತು ಆಡಳಿತದ ಹೊಸ ಪರಿಣಾಮವೇ ಇದಾಗಿರಬೇಕು. ನವೋದಯದ ಮಧ್ಯಮ ವರ್ಗದ ಬ್ರಾಹ್ಮಣರ ಬರೆಹಗಳಿಗೂ ಇಂಥ ವೈದಿಕ ಚಿಂತನೆಗಳಿಗೂ ಗಾಢ ಸಂಬಂಧವಿದೆ. ಶ್ರೇಣೀಕೃತ ಜಾತಿ ಸಮಾಜದ ಮಡಿ- ಮೈಲಿಗೆಯನ್ನು ನಾಗರಾಜರು ಪರಿಗಣಿಸದೇ ಇರುವುದರಿಂದ ನವೋದಯದ ಮಹತ್ವದ ಬರಹಗಾರರ ಮಿತಿಗಳನ್ನು ಗುರುತಿಸಲು ಅವರು ವಿಫಲರಾಗುತ್ತಾರೆ. ಬದಲಾಗಿ 'ಬಿಲ್ಲು-ಬಾಣ ಮತ್ತು ಕಾಲ ಜ್ಞಾನಿಗಳಿಂದ ನಾವು ಬಂದೂಕುಗಳನ್ನು ಎದುರಿಸಬಹುದೆಂಬ ಪ್ರತಿಗಾಮಿ ನಿಲುವಿಗೆ ಬಂದು ನಿಲ್ಲುತ್ತಾರೆ.' [ರಾಜಶೇಖರ ; ತರಂಗ 3-1-88 ಪು : 56] 'ಲೋಕ ವಿಮರ್ಶೆ' ಎಂದರೆ ವೈದಿಕ ಲೋಕ ವಿಮರ್ಶೆ ಮಾತ್ರ ಅಲ್ಲ.

ಏನಿದ್ದರೂ ನಾಗರಾಜರ ಪ್ರತಿಭೆ ಇಡಿಯಾಗಿ 'ಶಕ್ತಿ-ಶಾರದೆಯ ಮೇಳ'ದಲ್ಲಿ ಅಭಿವ್ಯಕ್ತಿ ಹೊಂದಿದೆ. ಅದು ಜಡ ಹಿಡಿದ ತಲೆಗಳಿಗೆ ಜೀವ ಕೊಡಬಲ್ಲುದು. ಆ ಮೂಲಕ ಕನ್ನಡ ವಿಮರ್ಶೆ ಹೊಸದಾರಿ ಹಿಡಿಯಲು ಪ್ರಚೋದನೆ ನೀಡಲಾಗಿದೆ. ಕೃತಿ ಪ್ರಕಟಿಸಿದ ಅಕ್ಷರ ಪ್ರಕಾಶನ ಸಾಗರದವರಿಗೆ ಕನ್ನಡಿಗರು ಸದಾ ಕೃತಜ್ಞರಾಗಿರಬೇಕು.

'ಸಾರ್ವತ್ರಿಕದೆಡೆಗೆ'- ಹೊಸ ಕಾವ್ಯಕ್ಕೊಂದು ಹೊಸ ವಿಮರ್ಶನದನಿ

● ರಹಮತ್ ತರೀಕೆರೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯ ಕಾಣಿಸಿಕೊಳ್ಳಲು ಯಾಕೆ ಎಪ್ಪತ್ತರ ದಶಕದ ತನಕ ಕಾಯಬೇಕಾಯಿತು ಎಂಬ ಪ್ರಶ್ನೆಗೆ ಉತ್ತರವಾಗಿ ಒದಗಿಬರುವ ಸಾಮಾಜಿಕ ಕಾರಣಗಳೇ, ಮಹಿಳೆಯು ತನ್ನ ಬಿಡುಗಡೆಯ ಆಶಯಗಳೊಂದಿಗೆ ಕಾವ್ಯದಲ್ಲಿ ಕಾಣಿಸಿಕೊಳ್ಳಲು ತಡವಾದುದಕ್ಕೆ ಕಾರಣಗಳಾಗುತ್ತವೆ ಎನ್ನಬಹುದು. ತಕ್ಷಣವೇ ಅಕ್ಕಮಹಾದೇವಿ, ಹೊನ್ನಮ್ಮರಂಥ ಪ್ರಾಚೀನರು ನೆನಪಿಗೆ ಬರುವುದಲ್ಲದೆ, ಪರಿಸ್ಥಿತಿಯ ಒತ್ತಡಗಳಲ್ಲೂ ಅವರು ತೋರಿದ 'ಪ್ರತಿಭಟನೆ'ಯು ಐತಿಹಾಸಿಕವಾಗಿ ಮಹತ್ವದ್ದೆನಿಸಿದರೂ, ಪ್ರತಿಯಾಗಿ ಅವರು ಒಪ್ಪಿ–ಸಮರ್ಥಿಸಿದ ಆಧ್ಯಾತ್ಮಿಕ–ಧಾರ್ಮಿಕ ಆಶಯಗಳು, ಇಂಡಿಯಾದ ಸ್ತ್ರೀಸಮುದಾಯದ ಸಂದರ್ಭದಲ್ಲಿ ಯಾವ ಚಲನೆಗೂ ಪ್ರೇರಕವಾಗದೆ ಇದ್ದುದು ಸಹಜವಾಗಿದೆ. ಈ ಶತಮಾನದ ಆರಂಭದಿಂದ ಬಂದ- ಪ್ರಮಾಣದಲ್ಲಿ ಸಾಕಷ್ಟು ಎನ್ನಬಹುದಾದ- ಮಹಿಳೆಯರ ಬರಹವನ್ನು ಕಂಡಾಗ, ಕೆಲವೇ ಉದಾಹರಣೆಗಳನ್ನು ಬಿಟ್ಟರೆ ಮಿಗುವ ಬಹುತೇಕ ಲೇಖಕಿಯರು, ಜನಪ್ರಿಯ ಬರವಣಿಗೆಗೆ ಒಲಿದು ಅಪಾಯಕಾರಿಯಾದ ಪ್ರತಿಗಾಮಿ ನಿಲುವುಗಳನ್ನು ಸುಂದರವಾಗಿ ಹೆಣೆದುಹಾಕುತ್ತಾ, ತಾವು ಬರೆಯುತ್ತಿರುವುದೇ ಒಂದು ಸಂಭ್ರಮವೆಂಬ ಆತ್ಮರತಿಯಲ್ಲಿ ಮುಳುಗಿರುವ ದಯನೀಯ ಸ್ಥಿತಿ ಎದ್ದು ಕಾಣುತ್ತದೆ. ಈ ಸ್ಥಿತಿಯಲ್ಲಿ ಪ್ರತಿಭಟನೆಯ ಏರುದನಿಯೊಂದಿಗೆ ತಮ್ಮ ನ್ಯಾಯಬದ್ಧ ಅವಕಾಶಗಳನ್ನು ಸ್ಥಾಪಿಸಿಕೊಳ್ಳಲು ವ್ಯವಸ್ಥೆಯ ಎದೆಗೊದ್ದಂತೆ ಪ್ರಶ್ನೆಯಾಗಿ ಹುಟ್ಟುತ್ತಿರುವ ಮಹಿಳೆಯರ ಕಾವ್ಯವು, ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ತುಂಬ ಮಹತ್ವಾದ್ದಾಗಿಬಿಟ್ಟಿದೆ. ಇಂಥ ಕಾವ್ಯವನ್ನು

ವಿಮರ್ಶಕಿಯೊಬ್ಬರು ವಿಶ್ಲೇಷಿಸಿರುವ 'ಸಾರ್ವತ್ರಿಕದೆಡೆಗೆ' ಎಂಬ ಈ ಕೃತಿಯನ್ನು ನಮ್ಮ ಸಾಹಿತ್ಯಕ–ಸಾಮಾಜಿಕ ಹಿನ್ನೆಲೆಯಲ್ಲಿಟ್ಟು ಕೆಲವು ಮಾತುಗಳನ್ನು ಆಡ ಬಹುದಾಗಿದೆ.

ಇಲ್ಲಿ ಮೊದಲಿಗೆ ಗುರುತಿಸಬಹುದಾದುದೆಂದರೆ, ಕವನಗಳ ಅಂತರ್ಯದ ಮಿಡಿತ ವನ್ನು ಹಿಡಿದು ಅದರ ತಾತ್ವಿಕ–ಸಾಹಿತ್ಯಕ ಇತಿಮಿತಿಗಳನ್ನು ಚಾರಿತ್ರಿಕಪ್ರಜ್ಞೆಯಲ್ಲಿ ಗುರುತಿಸುವ ವಿಮರ್ಶನಾಸೂಕ್ಷ್ಮತೆ ಮತ್ತು ಪ್ರಬುದ್ಧತೆ. ಕವಿತೆಯ ಭಾಷೆ, ತಂತ್ರ, ಲಯ, ಕಲೆಗಾರಿಕೆಗಳನ್ನು ಕುರಿತ ಪ್ರಾಯೋಗಿಕ ವಿಮರ್ಶೆಯ ಹೊಳಹುಗಳಂತೂ ಗಮನಾರ್ಹವಾಗಿವೆ. ಆದರೆ 'ದಲಿತ'ದಂತೆಯೇ ಮಹಿಳಾ ಕಾವ್ಯವನ್ನೂ, ಸಾಹಿತ್ಯ ಕ್ಕಿಂತ ತಾತ್ವಿಕ ಪ್ರಧಾನ ದೃಷ್ಟಿಯಿಂದ ವಿವೇಚಿಸುವುದು ಹೆಚ್ಚು ಪ್ರಯೋಜನ ಕಾರಿಯೆಂದು ನನಗನಿಸುತ್ತದೆ; ಸಾಂಸ್ಕೃತಿಕ ನೆಲೆಗಳಿಂದ ಅದನ್ನು ನಿರ್ವಚಿಸದೆ ರೂಪನಿಷ್ಟೆಯಿಂದಷ್ಟೇ ವಿಮರ್ಶಿಸುವುದರಿಂದ, ಅದಕ್ಕೆ ನ್ಯಾಯಸಲ್ಲಿಸುವುದು ಕಷ್ಟ ವೆನಿಸುತ್ತದೆ. ಇಲ್ಲಿ 1974–84 ರ ಒಂದು ದಶಕಾವಧಿಯ ಕಾವ್ಯವನ್ನು ವಿಮರ್ಶೆ ಗೊಳಪಡಿಸಿದ್ದರೂ, (ಈ ಅವಧಿಯನ್ನು ಮೀರಿರುವುದೂ ಇದೆ,) ಭಾರತೀಯ ಸಮಾಜದಲ್ಲಿ ಹೆಣ್ಣಿನ ಬದುಕು ಹರಿದು ಬಂದ ಸ್ವರೂಪ ಮತ್ತಿತರ ಪೂರ್ವಭಾವಿ ಹಿನ್ನೆಲೆಗಳಿಲ್ಲದೆ ದಿಢೀರನೆ ಶುರುವಾದಂತೆನಿಸುವುದು, ಒಂದು ಲೋಪವೆಂದೇ ಹೇಳ ಬಹುದು. ಕಾವ್ಯದ ಮಿತಿಗಳನ್ನು ಗುರುತಿಸುವಾಗ ಇಲ್ಲಿನ ನಿಷ್ಪಕ್ಷಪಾತ–ನೈಷ್ಠು ರ್ಯಗಳು ತುಂಬ ಪ್ರಾಮಾಣಿಕವಾಗಿವೆಯಾದರೂ, ಸೈಮನ್‌ದಿಬೊವಾ ಬರೆವಂತೆ ನೋವಿನಿಂದ, ತನ್ಮಯತೆಯಿಂದ, ದುಃಖಪೊತ್ತಡದಿಂದ, ಪ್ರೀತಿಯಿಂದ, ಒಬ್ಬ ಋಷಿಯಂತೆ ಜಿಜ್ಞಾಸೆಯ ವಿಧಾನದಲ್ಲಿ ಬರೆಯುವುದು, ಈಗ ಬೇಕಾಗಿದೆಯೇ ನೋ? ಪುಸ್ತಕ ವಿಮರ್ಶೆ ರೀತಿಯ ಅಲ್ಪಾಕಾಂಕ್ಷೆಯನ್ನು ಮೀರುವಂತೆ, ಸ್ತ್ರೀ ಬದುಕಿನ ವ್ಯಾಖ್ಯಾನವಾಗುವಂತೆ, ವಿಮರ್ಶೆಯಿರಬೇಕೆಂದೂ ಸೂಚಿಸುವುದು ವಾತಾವರಣದ ಅಪೇಕ್ಷೆಯೇ ಆಗುತ್ತದೆ. ಎಪ್ಪತ್ತರ ದಶಕದ ಮಹಿಳೆಯ ಕಾವ್ಯ ಸೃಜನೆಯ ಮುಖ್ಯ ಆಶಯಗಳಿಗೆ ಬಂಡಾಯ ಚಳುವಳಿಗೆ ಪ್ರೇರಕವಾದ ಸಂಗತಿ ಗಳು ಎಷ್ಟರಮಟ್ಟಿಗೆ ಕಾರಣವಾಗಿವೆ, ಬಂಡಾಯದವರ ನಿಲುವಿನಲ್ಲಿ ಮಹಿಳೆಯ ನ್ನು ಕುರಿತಧೋರಣೆಗಳು (ಅವರ ಪ್ರಣಾಳಿಕೆಯಲ್ಲಿ ಇದರ ಪ್ರಸ್ತಾಪವಿದೆ). ಪ್ರಾಸಂಗಿಕವಾಗಿಯಾದರೂ ಇತರ ಭಾಷೆಗಳಲ್ಲಿನ ಮಹಿಳಾ ಕಾವ್ಯದ ನೆನಪು, ಇತ್ಯಾದಿಗಳನ್ನು ಸಾಪೇಕ್ಷವಾಗಿ ನೋಡಲಾಗದುದರಿಂದ ಕೂಡ, ಕಾವ್ಯಕ್ಕೆಂದೇ ಮಾಡಲಾದ ಇಲ್ಲಿನ ಅಧ್ಯಯನಕ್ಕೆ ಒಂದು ವಿವಿಕ್ತತೆ ಒದಗಿದಂತಾಗಿದೆ. ಆಯ್ತು

ಕವಿಗಳನ್ನು ಮಾತ್ರಗಮನಿಸಿರುವುದರಿಂದ, ಸಮಗ್ರ ಮಹಿಳಾ ಕಾವ್ಯ ಚಟುವಟಿಕೆಗಳನ್ನು ಕುರಿತಂತೆ ನಿರ್ಣಾಯಕವಾಗಿ ಏನನ್ನಾದರೂ ಹೇಳಲು ಅಥವಾ ಬೆಳವಣಿಗೆಯ ಗತಿಯನ್ನು ಸೂಚಿಸುವುದಕ್ಕೆ ಇಲ್ಲಿ ತೊಂದರೆಯಾಗಿದೆ; ಮಾಲತಿ ಪಟ್ಟಣಶೆಟ್ಟಿ, ಸುಕನ್ಯಾಮಾರುತಿ, ಗುಡಿಬಂಡೆ ಪೂರ್ಣಿಮಾ, ಮೀನಾಕ್ಷಿ ಹೆಂಗವಳ್ಳಿ, ಮೊದಲಾದವರ ಕವನಗಳಿಲ್ಲದಿರುವುದು ಪ್ರಾತಿನಿಧಿಕತೆಗೆ ವ್ಯತ್ಯಯವುಂಟುಮಾಡಿದೆ. ಅತ್ಯುತ್ತಮ ಕವಿಗಳನ್ನೇ ಆರಿಸಿಕೊಂಡರೆಂದು ಭಾವಿಸಿದರೂ, ಇನ್ನೂ ಚಿಂತನೆಯ ಮತ್ತು ಅನುಭವ ದ್ರವ್ಯದ ಪ್ರಾಥಮಿಕ ಸ್ಥಿತಿಗಳಲ್ಲೇ ಇರುವ ಹೊಸಬರಿಗೆ ಇದರಿಂದ ವಿಮರ್ಶೆಯ ಉಪಯೋಗ ಹೆಚ್ಚು ಸಿಗದಂತಾಗಿದೆಯೆಂದು ನನ್ನ ಭಾವನೆ. ಕೆಲವೊಮ್ಮೆ ಬಿಡಿಕವನಗಳ ವಿಶ್ಲೇಷಣೆಗಳಿಂದ ಒಟ್ಟು ಸಂಕಲನದ ಅಥವಾ ಕಾವ್ಯದ ತುಡಿತದಗತಿಯನ್ನು ಹಿಡಿದಿಡಲು ಇಲ್ಲಿ ಕಷ್ಟವಾಗಿದೆಯೆಂದೂ ತಿಳಿಯುತ್ತದೆ.

ಸುಮಿತ್ರಾಬಾಯಿ ಅವರು ಬಿಡಿಕವನಗಳ ಅತ್ಯುತ್ತಮ ವಿಶ್ಲೇಷಣೆಯನ್ನು ನೀಡುವುದುಂಟು. [ಪು : 13] ಆದರೆ ಸ್ತ್ರೀಶೋಷಣೆಯ ದನಿಯನ್ನು ಗುರುತಿಸುವ ಮೂಡಿನಲ್ಲಿ ಕೆಲವೆಡೆ ಸರಳೀಕರಣದವಸರವಾಗಿದೆಯೆಂದು ಅನುಮಾನವಾಗುತ್ತದೆ. ಉದಾಹರಣೆಗೆ, ಶಶಿಕಲಾವಸ್ತ್ರದರ 'ಮೇಣಬತ್ತಿ' ಕವನದಲ್ಲಿ 'ಸಂಪ್ರದಾಯದ ಸಂಕೋಲೆ' 'ದಾಸ್ಯ' 'ಬದುಕಿನ ಅರ್ಥಹೀನತೆ'- ಇತ್ಯಾದಿಗಳನ್ನು ಗುರುತಿಸುವಂತೆ, ಗಂಡಿಗರ್ಪಿಸಿಕೊಂಡು ಮೇಣಬತ್ತಿಯಂತೆ ಕರಗಿ ಸುಡುವಲ್ಲಿ ಕವನದ ನಾಯಕಿ ತನಗರಿವಿಲ್ಲದಂತೆ ಮೈಮರೆತು ಚಿಮ್ಮಿಸಿರುವ ಒಳಸಂತೋಷವನ್ನು ಗುರುತಿಸುವುದಿಲ್ಲ. (ಸಿದ್ಧಲಿಂಗಯ್ಯನವರ ಇತ್ತೀಚಿನ 'ರಾಣಿ ಪ್ರೇಮದ ಕಥೆ'ಯಲ್ಲೂ ಹೀಗೆ ವಿರುದ್ಧ ಪರಿಣಾಮ ಘಟಿಸಿದೆ.) ಅಂದರೆ ಅಲ್ಲಿ 'ಸುಡುವ'ನೋವು ಒಡಲಿನಾಳದಿಂದ ಬಂದಂತೆನಿಸುವುದಿಲ್ಲ. ಲೈಂಗಿಕ ಶೋಷಣೆ ಗಂಡಿನಿಂದಾಗುತ್ತಿರುವುದು ನಿಜವಾದರೂ ದಾಂಪತ್ಯದಲ್ಲಿ ಹೆಣ್ಣು ತನ್ನ 'ಸುಖ'ಕ್ಕಾಗಿಯೂ (ಪರಸ್ಪರ ಒಪ್ಪಿಸಿಕೊಳ್ಳುವ ಕ್ರಿಯೆಯಲ್ಲಿ) ಅರ್ಪಿಸಿಕೊಳ್ಳುವ ಸಂಗತಿಯನ್ನು ಆಕೆಯ ಇಚ್ಛೆಗೆ ವಿರುದ್ಧವಾಗಿ ಮಣಿಸುವ ಅಥವಾ ವಸ್ತುವಂತೆ ಬಳಸುವ ಸಂಗತಿಯಿಂದ ಬೇರೆಯಾಗಿಸಬೇಕಾಗುತ್ತದೆ. ಹೇಮಾ ಮತ್ತು ಮುಕ್ತಾಯಕ್ಕರ ಕಾವ್ಯದಲ್ಲಂತೂ ಈ ಒಪ್ಪಿಸಿಕೊಳ್ಳುವ ಸಂತೋಷಗಳ ಉತ್ಕಟತೆಯಿದೆ. ಆದರೆ ಹೇಮಾ ಅವರ ಕಾವ್ಯದ ತನ್ನನ್ನು ಲೈಂಗಿಕ ಆಕರ್ಷಣೆಯ ವಸ್ತುವಂತೆ ಚಿತ್ರಿಸಿಕೊಳ್ಳುವ ಲೋಲುಪತೆಯು ಹೆಣ್ಣು ಭೋಗವಸ್ತುವೆಂಬ ಗ್ರಹಿಕೆಯಿರುವ ಸಾಮಾಜಿಕ ಪರಿಸರದಲ್ಲಿ ಯಾವ ಪರಿಣಾಮ ತಂದೀತು ಎಂಬ ಬಗೆಗೆ, ಅಂದರೆ ಕಾವ್ಯ ಸಾಧಾರಣೀಕರಣಗೊಳ್ಳುವಾಗಿನ

ಸಾಮಾಜಿಕ ಪರಿಣಾಮಗಳ ಬಗೆಗೆ, ಚಿಂತನೆ ಮಾಡಬೇಕಾಗಿದೆ; ಈ ಕುರಿತು ಬೊವಾ ಚಿಂತನೆ ಮಾಡಿದ್ದಾಳೆ. ಲಲಿತಾನಾಯಕರ 'ವೇದಾವತಿ ನದಿಯಲ್ಲಿ ಸೂಳೆ ಮುಳುಗಿದ್ದು' ಕವನದ ಧ್ವನಿಯು, ಹೆಣ್ಣಿನ ದುರಂತ ಬದುಕಿನ ಪ್ರತಿಮೆಯಾಗಿ ಪಡೆವ ಆಯಾಮಗಳನ್ನು ಸರಿಯಾಗಿ ಗುರುತಿಸಿದಂತೆ ಕಾಣದು. ರಸವಿಮರ್ಶೆ ಯಂತೆ ಹೆಚ್ಚು ಹೆಚ್ಚಾಗಿ ಪದ್ಯಖಂಡಗಳನುದ್ಧರಿಸಿ ಸ್ವಾರಸ್ಯಮನವರಿಕೆಗೊಳಿಸುವ ರೀತಿಯು ಇಲ್ಲಿ ಸಾಮಾನ್ಯವಾಗಿದ್ದು, ಇದರಿಂದ ಸಾಮಾನ್ಯೀಕೃತವಾಗಿ ಆಶಯ ವನ್ನು ರೇಖಿಸಲು ಸಾಧ್ಯವಾಗಿಲ್ಲ. (ಪದ್ಯಗಳನ್ನು ಗದ್ಯದಂತೆ ಅಚ್ಚು ಹಾಕಿಸಿರು ವುದರಿಂದಂತೂ ಅವುಗಳ ವಾಚಕ ಕ್ರಿಯೆಯಿಂದ ಲಭಿಸುವ ಧ್ವನಿಪರಿಣಾಮಗಳು ಕುಗ್ಗಿವೆ ಎಂದು ನನ್ನ ತಿಳುವಳಿಕೆ.)

ನಮ್ಮ ಮಹಿಳಾ ಕವಿಗಳು ಸೀತೆ ಮತ್ತು ದ್ರೌಪದಿಯರನ್ನು ನಿರಾಕರಿಸುವುದನ್ನು ಕುರಿತು ಇಲ್ಲಿ ಚರ್ಚೆಯಿದೆ. ಆದರೆ ಈ ಎರಡೂ ವ್ಯಕ್ತಿತ್ವ ಪ್ರತಿಮೆಗಳು ಸಮನಲ್ಲ. ದ್ರೌಪದಿಯ ದಿಟ್ಟತನ, ನೈತಿಕ ದಾರ್ಢ್ಯ, ಪ್ರತಿರೋಧ ಗುಣ, ಪುರುಷ ಸಮಾಜ ಕ್ಕೆ ಆಕೆ ಹಾಕುವ ಪ್ರಶ್ನೆಗಳು (ಸಭಾಪರ್ವದಲ್ಲಿ,) ತುಂಬ ಅಪೂರ್ವವಾದವು. ಎಂತಲೇ ಭಾರತೀಯಸ್ತ್ರೀ ಸಾವಿತ್ರಿಯಂತಾಗದೆ ದ್ರೌಪದಿಯಂತೆ ಧೀರೆಯಾಗ ಬೇಕೆಂದು ಲೋಹಿಯಾ ಹೇಳುತ್ತಿದ್ದರು. ಅಂಬೆ, ಅಕ್ಕನಂಥವರನ್ನು, ಸೀತೆ-ಸಾವಿತ್ರಿ-ಅಹಲ್ಯೆಯರನ್ನು ಪ್ರತಿಭಟನೆಯ ಹಾಗೂ ಶೋಷಿತರ ಮಾದರಿಯಾಗಿಸಿ ಕೊಳ್ಳುವಾಗ, ಅವರ ವ್ಯಕ್ತಿತ್ವ-ವರ್ತನೆಗಳಲ್ಲೇ ಇದ್ದ ಮತ್ತೊಂದು ಮಗ್ಗುಲಿನ ಆಗಿನ ಸಾಮಾಜಿಕ-ರಾಜಕೀಯ ಒತ್ತಡಗಳಲ್ಲಿ ಅದು ಕಾರ್ಯನಿರ್ವಹಿಸಿದ್ದರೆ, ಸೂಕ್ಷ್ಮ ಅರಿವು ನಮ್ಮ ಕವಿಗಳಲ್ಲಿ ಕಾಣಬರುವುದಿಲ್ಲ. ಸ್ಥೂಲ ತಿಳಿವಿನ ಕೀರ್ತನೆ ಅಥವಾ ಸರಳ ನಿರಾಕರಣೆ ಮುಂದಾದಾಗ ಆ ವ್ಯಕ್ತಿತ್ವಗಳನ್ನು ರೂಪಿಸಿದ ವ್ಯವ ಸ್ಥೆಯ ಶಕ್ತಿಗಳನ್ನು ಅವಗಣಿಸಿದಂತಾಗುತ್ತದೆಂಬುದು ಇಲ್ಲಿನ ತಾತ್ಪರ್ಯವಾಗಿದೆ. ಇತಿಹಾಸವನ್ನು ಚೆನ್ನಾಗಿ ಗ್ರಹಿಸಿ ಅರ್ಥಪೂರ್ಣವಾಗಿ ಬಿಡಿಸಿಕೊಳ್ಳದಿದ್ದರೆ ತಪ್ಪು ಗಳು ಅನುರಣಿಸುವುದರಿಂದ, ಪ್ರಾಚೀನ ಪುರಾಣ ವ್ಯಕ್ತಿತ್ವಗಳನ್ನೂ ಕಪ್ಪು-ಬಿಳು ಪಿನ ಸರಳತೆಯಲ್ಲಿ ನಮ್ಮ ಕಾವ್ಯಗಳು ವಿಶ್ಲೇಷಿಸಿಕೊಳ್ಳುತ್ತಿರುವುದನ್ನು ವಿಮರ್ಶೆಯು ಜವಾಬ್ದಾರಿಯಿಂದ ಗುರುತಿಸಬೇಕಿದೆ, ತಡೆಯಬೇಕಿದೆ.

ಸಮಾಜದಲ್ಲಿ ಹೆಣ್ಣಿನ ವ್ಯಕ್ತಿತ್ವವನ್ನು ಗೌರವಿಸುವ ಪುರುಷರೇ ಇಲ್ಲವೆಂಬ ತಿಳಿವಿ ನಲ್ಲಿ ತಮ್ಮನ್ನು ಪ್ರತಿಪಕ್ಷದಂತೆ ಬೇರ್ಪಡಿಸಿಕೊಂಡು ಹೋರಾಡುವ ಧೋರಣೆಗಳು

ವ್ಯಕ್ತನಾಗುತ್ತಿರುವುದು ಎಷ್ಟು ಸರಿ ಎಂಬುದನ್ನು ಗಂಭೀರವಾಗಿ ಯೋಚಿಸಬೇಕಿದೆ. ಡಿ. ವಿಜಯಾ ಅವರ ಕಾವ್ಯದ ವಿಮರ್ಶೆಯ ಸಂದರ್ಭದಲ್ಲಿ ನಾಗವಾರರು ಇಂಥದೇ ಪ್ರಶ್ನೆಯನ್ನು ಎತ್ತಿದ್ದರು. ('ಸಾಹಿತ್ಯ ವಾರ್ಷಿಕ 1975.' ಬೆಂ. 1976 ಪು : 6) ಹೆಣ್ಣನ್ನು ವ್ಯಕ್ತಿತ್ವವೆಂದು ತಿಳಿಯದ ಪುರುಷಾಹಮಿಕೆಯಷ್ಟೇ, ಅವನೊಬ್ಬ ಶೋಷಕ ಮಾತ್ರನೆಂದು ಗುಮಾನಿಸುವ ನಂಬಿಕೆಗಳು ನಮ್ಮ ಚಿಂತನೆಯಲ್ಲಿ ದೊಡ್ಡ ನೇತ್ಯಾತ್ಮಕ ಸಂಗತಿಗಳಾಗಬಲ್ಲವು. ನಾವೆಲ್ಲ ಪರಿಸರದ ಕೂಸುಗಳಾಗಿರುವುದರಿಂದ, ವ್ಯಕ್ತಿಗಿಂತಲೂ ಮೂಲಭೂತವಾದ ಈ ವ್ಯವಸ್ಥೆಯ ಗ್ರಹಿಕೆಗಳ ಸ್ವರೂಪವನ್ನೇ ಬದಲಿಸುವ ಪರಿಣಾಮಕಾರಿ ಮತ್ತು ದೂರಗಾಮೀ ಕಾರ್ಯಕ್ಕೆ ನಮ್ಮೆಲ್ಲ ಸಾಂಸ್ಕೃತಿಕ ಪರಿಕರಗಳನ್ನು ದುಡಿಸಬೇಕಿದೆ ಎಂದು ನಾನು ತಿಳಿಯುತ್ತೇನೆ. 'ವ್ಯಕ್ತಿಯು ಪರಿಸರದಿಂದ ರೂಪಿತನಾಗಿರುವುದರಿಂದ ಆ ಪರಿಸರವನ್ನೇ ಮಾನವೀಯವಾಗಿಸಿ' ಎಂದ ಮಾರ್ಕ್ಸ್ ನಮಗೆ ಇಲ್ಲಿ ಬೆಳಕಾಗಬೇಕು. 'ಈಗ ನಿನ್ನ ಜಾತಿಯ ಕಂಡರೆ/ನನಗೆ ಮೈಉರಿ ಏಳುವುದು' ('ಗಂಡಸರು'. ದ್ರೌಪದಿಯ ಸ್ವಗತ, ಸರಸ್ವತಿಗೌಡ, ಮೈಸೂರು. 1983) ಎಂಬಂಥ ಕವನಗಳನ್ನು ಕುರಿತು ಇಲ್ಲಿ ಏನೂ ಹೇಳದಿರುವುದು ಸೋಜಿಗವಾಗಿದೆ.

ಹೀಗೆ, ಮಹಿಳಾ ಕಾವ್ಯದ ಸಂದರ್ಭದಲ್ಲಿ ಯೋಚಿಸಬೇಕಾದ ಬಹಳ ಸಂಗತಿಗಳಿವೆ. ಕೇವಲ ಮಧ್ಯಮ ವರ್ಗದ ನರಳಿಕೆಗಳಾಗಿರುವ ಕಾವ್ಯಕ್ಕೆ ದಲಿತ–ಶ್ರೀಮಂತ-ದಾರಿದ್ರ್ಯದ ಪದರಗಳಿಂದ ಹಾಗೂ ಮುಸ್ಲಿಂ ವರ್ಗದಿಂದ ದನಿಗಳು ಸೇರ್ಪಡೆಯಾಗದಿರಲು ಕಾರಣಗಳು ಅಥವಾ ಮಹಿಳಾ ಕಾವ್ಯವು ಇತ್ತೀಚೆಗೆ ಅಂತಾರಾಷ್ಟ್ರೀಯ ರಾಜಕೀಯ ಪ್ರಜ್ಞೆಯ ಮಾರ್ಕಿಸ್ಟ್ ಚಿಂತನೆಯನ್ನೊಳಗೊಂಡು ಗತಿಶೀಲವಾಗಿ ತನ್ನ ಆಯಾಮಗಳನ್ನು ವಿಸ್ತರಿಸುವುದು (ಉದಾಹರಣೆ : ಮಲ್ಲಿಕಾಘಂಟಿ) ... ಈಗಲೇ ನಿರ್ಣಾಯಕವಾಗಿ ಹೇಳದಂತೆ ಒಂದು ನಿಲುಗಡೆಗೆ ಬಾರದೆ ತನ್ನ ... ಹುಡುಕಾಟದಲ್ಲಿರುವುದರಿಂದ, ಸದ್ಯ ಬೆಳೆಯುತ್ತಿರುವ ದಿಕ್ಕುಗಳನ್ನು ಸ... ದರ ಜತೆಯಲ್ಲೇ ಆರೋಗ್ಯಕರ ಬೆಳವಣಿಗೆಗೆ ತಕ್ಕನಾದ ನಿರ್ದೇಶಕ ತತ್ವಗಳನ್ನು ಕುರಿತು ಚರ್ಚಿಸುವುದು–ಇತ್ಯಾದಿ. ಹೆಣ್ಣಿನ ಜಗತ್ತು ದಲಿತ ಜಗತ್ತಿನಂತೆಯೇ ಇನ್ನೂ ನಮ್ಮ ಸಾಂಸ್ಕೃತಿಕ ಲೋಕಕ್ಕೆ ಪೂರ್ಣ ಅನಾವರಣವಾಗದಿರುವ ಹಿನ್ನೆಲೆಯಲ್ಲಿ, ಈ ಹಿಂದಿನ ಸಂಕೋಚ-ಮಿತಿಗಳ ಕುರಿತು ಅನ್ವೇಷಿಸುವುದಂತೂ ಆಗಲೇಬೇಕಿದೆ. ಯಾಕೆಂದರೆ, ಈ ನೆಲದ ದಲಿತರ ಮತ್ತು ಹೆಣ್ಣಿನ ಅನುಭವಗಳು ಎಷ್ಟೇ ವೈಯಕ್ತಿಕವಿದ್ದರೂ ಅವಕ್ಕೆ ಸಾಮಾಜಿಕತೆಯ ಸ್ವರೂಪವಿದ್ದೇ ಇರುತ್ತದೆ.

ತಾತ್ತ್ವಿಕವಾಗಿ ತುಂಬ ಪ್ರಬುದ್ಧ ನಿಲುವನ್ನು, ಚಿಂತನೆಯ ಸೂಕ್ಷ್ಮತೆಯನ್ನೂ ಪ್ರಕಟಿಸುವ ವಿಜಯಾದಬ್ಬೆಯವರ ಕಾವ್ಯವು ನವ್ಯಾಭಿವ್ಯಕ್ತಿಯು ಒಲವಿಸಿಂದ ಸಂವಹನದಲ್ಲಿ ದುರಿಸುವ ಸಮಸ್ಯೆಗಳು ಅಥವಾ ಶಶಿಕಲಾ ಅವರಲ್ಲಿಯಂತೆ ವ್ಯಂಗ್ಯ ವಿಡಂಬನೆಗಳೇ ಪ್ರಧಾನವಾದಾಗ ಕಾವ್ಯವು ಪ್ರತಿಕ್ರಿಯಾತ್ಮಕವಾಗಿ ದ್ವಂದ್ವಾತ್ಮಕ ಚಿಂತನೆಯ ಆಳಕ್ಕೆ ಎರವಾಗುವುದು ಈ ಸಂಬಂಧವಾಗಿ ಇಲ್ಲಿ ಗುರುತಿಸಿಲ್ಲ. ಯಾವುದೇ ಕಾವ್ಯ ಸರಳೀಕರಣವಾಗದೆ ಸರಳವಾಗುವುದಾದರೆ, ಅದು ಯಾವುದೇ ಕಾವ್ಯದ ದೊಡ್ಡ ಸಾಧನೆ. ಈ ಮಾತು ಬೆಳೆಯುತ್ತಿರುವ ದಲಿತ ಮತ್ತು ಮಹಿಳಾ ಕಾವ್ಯಕ್ಕೆ ಒಟ್ಟಾಗಿ ಅನ್ವಯಿಸಬೇಕು. ಸದ್ಯದ ಸಾಹಿತ್ಯ ಸ್ವರೂಪದ ಬಗ್ಗೆ ಗಂಭೀರವಾದ ರಚನಾತ್ಮಕ ಅತೃಪ್ತಿಗಳನ್ನು, ಜತೆಯ ವಿಮರ್ಶೆಗಳು ವ್ಯಕ್ತಪಡಿಸಲೇಬೇಕಾಗುತ್ತದೆ. (ಸಿಮನ್ ದಿ ಬೊವಾಳ ಬರವಣಿಗೆಯಲ್ಲಿ ಈ ಬಗೆಯ ಕತ್ತಿಯಲುಗಿನ ಸ್ವವಿಮರ್ಶಾತ್ಮಕತೆಯಿದೆ.) ಕೀಳರಿಮೆಯಾಗದ ಅತೃಪ್ತಿಯೇ ಹೆಚ್ಚಿನ ಯಶೋದಿಗಂತಗಳ ಅನ್ವೇಷಣೆಗೆ ಸೃಜನಶೀಲ ತಹತಹವನ್ನು ಹುಟ್ಟಿಸುತ್ತದೆ. ತಮ್ಮ ಕ್ವಚಿತ್ ಇತಿಹಾಸದ ಬಗೆಗೆ ಮೈಮರೆವ ಆತ್ಮರತಿಯಿದ್ದರೆ- ನಮ್ಮ ಬಹಳ ಲೇಖಕಿಯರಲ್ಲಿ ಇದ್ದ ಇದೆ,- ಅದು ಭೋಳೇತನವಾಗಿ ಪರ್ಯಾವಸಾನವಾಗುವುದು ಸಹಜವೇ. ಸುಮಿತ್ರಾಬಾಯಿಯವರ ವಿಮರ್ಶೆಯಲ್ಲಿನ ನೈಷ್ಠುರ್ಯ-ದಿಟ್ಟತನಗಳು, ಈ ಕಾರಣಕ್ಕಾಗಿಯೇ ಇಲ್ಲಿ ಇತ್ಯಾತ್ಮಕವಾಗಿವೆ; ಎಷ್ಟೋ ಪ್ರಾಂಜಲವಾದ ಚಿಂತನೆಯ ಹೊಳಹುಗಳು ಈ ಕೃತಿಯಲ್ಲಿ ಇವೆ. ಕನ್ನಡದ ಲೇಖಕಿಯರಲ್ಲಿ ಈ ಪಟ್ಟಿನ ವಿಮರ್ಶನ ಪ್ರಜ್ಞೆ ತುಂಬ ಅಪೂರ್ವವೆಂಬುದು ಮತ್ತು ಕನ್ನಡ ವಿಮರ್ಶೆಯ ದಿಗ್ವಿಸ್ತರಣೆಗೆ ತಕ್ಕನಾದ ಮನಸ್ಸೊಂದು ಇಲ್ಲಿದೆಯೆಂಬುದೂ ಶ್ರುತಪಟ್ಟಿದೆ. ಸಿಮನ್ ದಿ ಬೊವಾ ಮೊದಲಾದವರ ಅನುವಾದಗಳ ಮೂಲಕ ನಮ್ಮ ಮಹಿಳಾ ಕವಿಗಳಿಗೆ ಒಂದು ತಾತ್ತ್ವಿಕನೆಲೆಗಟ್ಟನ್ನೊದಗಿಸಲು ಇವರು ಪ್ರಯತ್ನಿಸುತ್ತಿರುವುದಂತೂ ತುಂಬ ಮಹತ್ತ್ವದ ಸಂಗತಿಯಾಗಿದೆ.

ಹುಡುಕಾಡಿ ಬಂದ ಹೊನ್ನಿನ ಬದುಕು (ಕಾದಂಬರಿ)

ಲೇ : ಹೊರೆಯಾಲ ದೊರೆಸ್ವಾಮಿ

ಪ್ರ : ಸಮಾನತಾ ಪ್ರಕಾಶನ

ಪು : 111 ಬೆಲೆ : ರೂ. 12–00

● ಶ್ರೀಕೃಷ್ಣ ಚೆನ್ನಂಗೋಡ್

ಸಾಮಾಜಿಕ ಸಮಸ್ಯೆಯೊಂದನ್ನೆತ್ತಿಕೊಂಡು ಅದನ್ನು ಕಲಾಕೃತಿಯಾಗಿಸಲು ಹೊರಟವನಿಗೆ ಬರವಣಿಗೆಯ ದಾರಿಯಲ್ಲಿ ತೋರಿಬರುವ ತೊಡಕುಗಳು ಅನಿವಾರ್ಯ ಎಷ್ಟು ಪ್ರಮಾಣದಲ್ಲಿ ಆತ ಅವುಗಳನ್ನು ಮೀರಿ ತನ್ನ ವಿಚಾರಗಳಿಗೆ, ಭಾವನೆಗಳಿಗೆ ಶಾಬ್ದಿಕ ರೂಪವಿತ್ತಿದ್ದಾನೆ ಎನ್ನುವುದರ ಮೇಲೆ ಸಾಹಿತ್ಯ ಕೃತಿಯೊಂದರ ಗಟ್ಟಿತನವನ್ನು ನಿರ್ಧರಿಸಲು ಸಾಧ್ಯ. ವಸ್ತು, ತಂತ್ರ ಇವಿಷ್ಟೇ ಅಲ್ಲದೆ ಮೂಲರೂಪದಲ್ಲಿ ಇವೆಲ್ಲಕ್ಕೂ ಪ್ರಚೋದನೆಯಾಗಿರುವ ಮಾನವೀಯ ಕಾಳಜಿಯ ತಳಪಾಯದ ಮೇಲೆ ಕೃತಿಯೊಂದರ ನೆಳಲು ಬೆಳಕುಗಳತ್ತ ಗಮನ ಹರಿಸಬಹುದು.

ಮೇಲೆ ಹೇಳಿದ ವಿವರಗಳ ಹಿನ್ನೆಲೆಯಲ್ಲಿ ಹೊರೆಯಾಲ ದೊರೆಸ್ವಾಮಿ ಅವರ 'ಹುಡುಕಾಡಿ ಬಂದ ಹೊನ್ನಿನ ಬದುಕು' ಕಾದಂಬರಿಯನ್ನು ಓದಲು ಹೊರಟ ವ್ಯಕ್ತಿ ಮೊದಲಿನಿಂದ ಕೊನೆಯ ತನಕ ಓದಿದ ಬಳಿಕ ತನ್ನಷ್ಟಕ್ಕೆ ತಾನೆ ಯೋಚನೆಗೆ ತೊಡಗುವುದು ಸಹಜ. ಕಾದಂಬರಿಯಲ್ಲಿ ನಿರೂಪಿತವಾಗಿರುವ ವೇಶ್ಯೆಯರ ಬದುಕು. ಅಲ್ಲಿನ ಶೋಷಣೆ. ಕ್ರೌರ್ಯ ಜತೆಗೆ ವೇಶ್ಯೆಯೊಬ್ಬಳು (ಶಾರದ) ಅದೆಷ್ಟೇ ಕಷ್ಟ ಬಂದರೂ ಬದುಕನ್ನು ಎದುರಿಸಿ ಕೊನೆಗೆ ತನಗಿಷ್ಟ ಬಂದವನನ್ನು (ತನ್ನನ್ನು ಇಷ್ಟಪಟ್ಟವನೂ ಹೌದು) ವರಿಸುವುದು (ಶಿವನಂಜ) ಪ್ರಸ್ತುತ ಸಮಾಜದಲ್ಲಿ ಎಷ್ಟರ ಮಟ್ಟಿಗೆ ಸಾಧ್ಯ ಎನ್ನುವುದು ಪುನರ್ವಿಮರ್ಶೆಗೆ ದಕ್ಕುವ ಅಂಶ. ಪದವೀಧರನಾಗಿದ್ದರೂ ಬಡವನಾಗಿದ್ದುದರಿಂದ ಯಾವುದೇ ವಶೀಲಿಗಳನ್ನು ಹೊಂ

ದಿರವ ಶಿವನಂಜ ಕೆಲಸದ ಹುಡುಕಾಟದ ಕೊನೆಯಲ್ಲಿ ವೇಶ್ಯಾವಾಟಿಕೆಯೊಂದರ ರೂಮ್‌ಬಾಯ್ ಆಗಿ ನೇಮಕಾತಿ ಪಡೆಯುವಲ್ಲಿಂದ ಆತನ ಬದುಕಿಗೆ ಹೊಸ ಮಗ್ಗುಲು ತೆರೆಯುತ್ತದೆ. ಶಿವನಂಜ ಶಿವರುದ್ರನಾಗುತ್ತಾನೆ.

ಹುಡುಗಿಯೊಬ್ಬಳು (ಶಾರದ) ತನ್ನ ಕುಟುಂಬದ ಬಡತನ ನಿವಾರಣೆಗಾಗಿ, ಮುಂಬೈಯಲ್ಲಿ ಕೆಲಸ ಕೊಡಿಸುತ್ತೇನೆಂದ ವಂಚಕನ ಮಾತಿಗೆ ಬಲಿಬಿದ್ದು ವೇಶ್ಯಾವಾಟಿಕೆ ಸೇರುವುದು, ಅಲ್ಲಿಂದ ವಿವಿಧೆಡೆಗಳಿಗೆ ವರ್ಗಾಯಿಸಲ್ಪಡುವುದು-ಈ ಸಂಗತಿ ಕನ್ನಡ ವಾಚಕರಿಗೆ ಹೊಸದಲ್ಲವಾದರೂ ಲೇಖಕರು ನಿರೂಪಣಾ ಶೈಲಿಯಲ್ಲಿ ವಹಿಸಿದ ಎಚ್ಚರದಿಂದಾಗಿ ಗದ್ಯ ಹಲವು ಕಡೆಗಳಲ್ಲಿ ಕಾವ್ಯದ ನೆನಪನ್ನು ಹುಟ್ಟಿಸುತ್ತದೆ. ಶಾರದಾಳ ಬದುಕಿನ ಇತಿವೃತ್ತವನ್ನು ಆಕೆಯಿಂದಲೇ ತಿಳಿದ ಶಿವನಂಜ ಆಕೆಗೆ ಹೊಸ ಬದುಕು ಕೊಡಲು (ಮದುವೆಯಾಗುವುದರ ಮೂಲಕ) ಮುಂದಾದಾಗ ಆಕೆಯ ಸಂಭ್ರಮವನ್ನೂ, ಒಳತೋಟಿಯನ್ನೂ ಚಿತ್ರಿಸುವ ಲೇಖಕರು ಆಕೆಯ ಕಥೆಯನ್ನು ಕೇಳುತ್ತ, ಕೇಳುತ್ತಲೇ ಮಾನಸಿಕವಾಗಿ ಬೆಳೆಯುತ್ತಲೇ ಹೋಗುವ ಶಿವನಂಜನ ಅಂತರಂಗಕ್ಕೂ ಇನ್ನಷ್ಟು ಬೆಳಕು ಚೆಲ್ಲಬಹುದಿತ್ತು.

ವೇಶ್ಯಾವೃತ್ತಿಗಿಳಿಯಲು ಬಡತನವೇ ಪ್ರಮುಖ ಕಾರಣವಾಗಿದ್ದರೂ, ಅದೊಂದೇ ಕಾರಣವಲ್ಲವೆಂಬುದನ್ನು ಲೇಖಕರು ಸಂದರ್ಭಗಳ ಮುಖಾಂತರ ಧ್ವನಿಸುತ್ತಿದ್ದರೆ 'ಹುಡುಕಾಡಿ ಬಂದ ಹೊನ್ನಿನ ಬದುಕು' ಇನ್ನಷ್ಟು ಒಳ್ಳೆಯ ಕಾದಂಬರಿ ಆಗಬಹುದಿತ್ತಲ್ಲ.

...ವಧೇಶ್ವರಿ

...ೇ : ಶಂಕರ ಮೊಕಾಶಿ ಪುಣೇಕರ

...ಪ್ರ : ಗೀತಾ ಬುಕ್‌ಹೌಸ್, ಪು : 366, ಬೆಲೆ : ರೂ. 35/-

● **ಹೆಚ್. ಎಸ್. ಶಿವಪ್ರಕಾಶ್**

೧

ಪ್ರೊಫೆಸರ್ ಪುಣೇಕರ ಅವರು ಇವತ್ತಿನ ಕನ್ನಡ ಸಂಸ್ಕೃತಿಯಲ್ಲಿ ಅತ್ಯಂತ ಕುತೂಹಲಕಾರಿ ವಿದ್ವಾಂಸ-ಬರಹಗಾರರು. ಸಂದರ್ಭ ಸಿಕ್ಕಾಗಲೆಲ್ಲ ಇಂದಿರಾ ಗಾಂಧಿಯವರ ಬಗ್ಗೆ ಅಪಾರ ಭಕ್ತಿಯನ್ನು ವ್ಯಕ್ತಪಡಿಸುವುದರ ಮೂಲಕ (ಅವರು ಕೆಲ ವರ್ಷಗಳ ಹಿಂದೆ 'ರಾಗ್ ಇಂದಿರಾ' ಎಂಬ ಹೊಸ ರಾಗವನ್ನು ಸೃಜಿಸಿದರೆಂದೂ, ಅದನ್ನು ಶ್ರೀಮತಿ ಗಾಂಧಿಯವರ ಸನ್ನಿಧಾನದಲ್ಲಿ ಹಾಡಿ ತೋರಿಸಲು ವಿಫಲರಾದರೆಂದೂ ಹಬ್ಬಿರುವ ಗುಲ್ಲು ಎಷ್ಟು ನಿಜವೋ ಗೊತ್ತಿಲ್ಲ.); ಪಡುವಣ ದೇಶಗಳ ಸಿದ್ಧಾಂತ ಪರಿಕಲ್ಪನೆಗಳನ್ನು ಅಲ್ಲಗೆಳೆದು ಭಾರತೀಯ ಪರಂಪರೆಯ ಬಹುಮುಖ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುವುದರ ಮೂಲಕ ಎಷ್ಟೋ ಸಲ ಸಮಾಜವಾದೀ ಮೌಲ್ಯಗಳನ್ನು ಆರಾಧಿಸುವ, ಪಶ್ಚಿಮದ ಒಲವುಗಳಿಗೆ ಒಲಿದ ಬುದ್ಧಿ ಜೀವಿ ಬರಹಗಾರ ವಿಮರ್ಶಕ ಸಾಹಿತ್ಯಾಸಕ್ತರಿಗೆ ಬಿಸಿತುಪ್ಪವಾಗಿದ್ದಾರೆ. ಆದರೆ ಆಧುನಿಕತೆಗೆ ಮುಗಿಬಿದ್ದ ಅತ್ಯಂತ ಹರಿತವಾದ ಮನಸ್ಸುಗಳಿಗೂ ದುರ್ಭೇದ್ಯವಾದ ಸೂಕ್ಷ್ಮಗಳನ್ನು ಅಸೂಯೆ ಹಬ್ಬಿಸುವಷ್ಟು ಸುಲಭವಾಗಿ ಸೂಚಿಸಿಬಿಡಬಲ್ಲರು. ಅವರ ವಿಮರ್ಶೆ-ಭಾಷಣಗಳಲ್ಲಿ ಇಂತಹ ವಿಲಕ್ಷಣ ಹೊಳಹುಗಳು ತುಂಬಿರುತ್ತವೆ. ಒಂದು ರೀತಿಯಲ್ಲಿ ಸನಾತನಿಗಳು, ಆಧುನಿಕರು ಇಬ್ಬರಿಗೂ ಮುಜುಗರ ಉಂಟುಮಾಡುವ ವ್ಯಕ್ತಿ– ಅವರ 'ಏನು ಬಣ್ಣಿಸಲಿ ಗುರುರಾಯರ ಮಹಿಮೆಯು' ಎಂಬ ಕವಿತೆಯ ಹಾಗೆ.

ನವ್ಯ ಸಾಹಿತ್ಯದ ಸುಗ್ಗಿಯಲ್ಲಿ ವಿಚಿತ್ರವಾಗಿ ಕಾಡಬಲ್ಲ ಕೆಲವು ಕವಿತೆಗಳನ್ನು, 'ಗಂಗವ್ವ–ಗಂಗಾಮಾಯಿ'ಯಂತಹ ಶ್ರೇಷ್ಠ ಕಾದಂಬರಿಯನ್ನು ರಚಿಸಿದ ಪುಣೇಕರರು ಈಗ– ನವ್ಯದ ಮಾಗಿಯಲ್ಲಿ ತಮ್ಮ ಮಹತ್ವಾಕಾಂಕ್ಷೆಯ ಕಾದಂಬರಿ "ಅವಧೇಶ್ವರಿ'ಯನ್ನು ರಚಿಸಿದ್ದಾರೆ. ಕಥಾವಸ್ತು ಮತ್ತು ಪಾತ್ರನಿರ್ಮಿತಿಯಲ್ಲಿ ಈ ಕಾದಂಬರಿ ದೇವುಡು, ಬಿ. ಪುಟ್ಟಸ್ವಾಮಯ್ಯರನ್ನು ನೆನಪಿಸಿದರೂ, ಕೃತಿ ನಿರ್ಮಿತಿಯ ಜಾಣ್ಮೆಯಲ್ಲಿ ಅವರನ್ನೂ ಹಿಂದೆ ಹಾಕಿದೆ.

ಈ ಕಾದಂಬರಿಯ ರಚನೆಗೆ ಹಿನ್ನೆಲೆಯಾಗಿರುವ ವೈಚಾರಿಕ ಭಿತ್ತಿಯನ್ನು ಪುಣೇಕರರು ತಮ್ಮ ಮುನ್ನುಡಿಯಲ್ಲಿ ಅಡಕವಾಗಿ ನೀಡಿದ್ದಾರೆ. ಪ್ರಾಚೀನ ಭಾರತೀಯ ಇತಿಹಾಸದ ಬಗ್ಗೆ ಅವರು ತಳೆದಿರುವ ನಿಲುವುಗಳು ಯಥಾವತ್ತಾಗಿಲ್ಲವೆನ್ನುವುದನ್ನು ಅರಿಯಲು ನಾವು ಆ ಕ್ಷೇತ್ರದ ವಿದ್ವಾಂಸರೇನೂ ಆಗಿರಬೇಕಿಲ್ಲ. ಉದಾಹರಣೆಗೆ ಆರ್ಯರು ಹೊರಗಿನಿಂದ ಭಾರತಕ್ಕೆ ಬಂದರೆನ್ನುವುದು ಪುಣೇಕರರ ಪ್ರಕಾರ ಒಂದು ಇಂಗ್ಲೀಷ್–ಜರ್ಮನ್ ಕಟ್ಟುಕತೆ. ಸಿಂಧೂ ನದಿಯ ಕೊಳ್ಳದ ನಾಗರೀಕತೆಗೂ ವೈದಿಕ ಸಂಸ್ಕೃತಿಗೂ ಇರುವ ವ್ಯತ್ಯಾಸಗಳು ಅವರಿಗೆ ಕಾಣುವುದಿಲ್ಲ. ಅದೇನೇ ಇರಲಿ. ಇದು ಕರ್ತೃತ್ವಶೀಲ ಬರಹಗಾರರೊಬ್ಬರು ತಮ್ಮ ಕೃತಿಗೆ ಹಾಕಿಕೊಂಡ ಒಂದು ಪೌರಾಣಿಕ ಚೌಕಟ್ಟಾಗಿರುವುದರಿಂದ ಈ ವಿಚಾರಗಳನ್ನು ಎತ್ತಿಹಿಡಿಯುವುದೂ ಸಲ್ಲ, ಹೀಗಳೆಯುವುದೂ ಸಲ್ಲ. ಇದು ಸಂಶೋಧನೆಯಲ್ಲ, ಕಾದಂಬರಿ ಎಂದು ಪುಣೇಕರರೇ ಒತ್ತಿ ಹೇಳಿದ್ದಾರೆ. ಇಂತಹ ವಿಚಾರಗಳು ವೈಚಾರಿಕತೆಗೆ ಹೊರತಾದ ಸೃಷ್ಟಿ ಕ್ರಿಯೆಗಳ ಸಂಭೂತಿಯಲ್ಲಿ ಯಾವ ಅವತಾರ ತಳೆಯುತ್ತವೆ- ಇದು ಮುಖ್ಯ. ಹೀಗಾಗಿ ಆ ಕಾದಂಬರಿಯನ್ನೇ ಇನ್ನು ನಿಗಾ ಮಾಡೋಣ.

೨

ಮೊದಲ ಏಟಿಗೇ ನಮ್ಮನ್ನು ಹಿಡಿದುಕೊಳ್ಳುವುದು ಈ ಕಾದಂಬರಿಯ ನಿರೂಪಣೆಯ ಬಿರುಸು : ಘಟನೆಗೆ ಪುಟಕೊಟ್ಟು ಕತೆಯೊಳಗಿಂದ ಕತೆ ಚಿಮ್ಮುವ ಮುನ್ನೂ–ರೈವತ್ತು ಪುಟಗಳ ಈ ಕಾದಂಬರಿ ಎಲ್ಲೂ ಕುಂಟುವುದಿಲ್ಲ. ಎಡವುವುದೂ ಇಲ್ಲ. ಇಂಥ ಓದಿಸಿಕೊಳ್ಳುವಿಕೆ ಈಚಿನ ಕನ್ನಡ ಕಾದಂಬರಿಯಲ್ಲಿ -ಅಷ್ಟೇ ಯಾಕೆ, ಸಾರಸ್ವತ ಲೋಕದಲ್ಲಿ –ಒಂದು ದೊಡ್ಡ ಸಾಧನೆಯೇ. ಇಷ್ಟೇ ಸಮರ್ಪಕವಾದುದು ವೈವಿಧ್ಯಮಯ ಪಾತ್ರ ಸೃಷ್ಟಿ. ತಮ್ಮ ಕಾಲ್ಪನಿಕ ವೇದಯುಗದ ವೈವಿಧ್ಯ

ಮಯ ಜೀವಗಳನ್ನು ಈ ಕಾದಂಬರಿಯಲ್ಲಿ ತುಂಬಲಾಗಿದೆ. ಅವಧೇಶ್ವರಿ ಪುರುಕುತ್ಸಾನಿಯ ಪಾತ್ರವೇ ರೋಚಕವಾದುದು. ಲೈಂಗಿಕ ಅತೃಪ್ತಿಯಲ್ಲಿ ಶುರುವಾಗುವ ಆ ಪಾತ್ರ ರಾಜಕೀಯ ಮುತ್ಸದ್ದಿತನದಲ್ಲಿ ಗಂಡಸರನ್ನೂ ಮೆಟ್ಟಿ ನಿಲ್ಲುವ ಬೆಳವಣಿಗೆ ಹಂತ ಹಂತವಾಗಿ ನಮ್ಮ ಕಣ್ಣ ಮುಂದೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಕಂಚುಕಿಯಾಗಿದ್ದು ಒಬ್ಬ ಚತುರ ದಂಡನಾಯಕನ ಸಮರ ಶಾಸ್ತ್ರಜ್ಞನ ಮಟ್ಟಕ್ಕೆ, ಮೆಚ್ಚಿನ ಸೇವಕನಾಗಿದ್ದು, ಕೊನೆಗೆ ಮಹಾರಾಣಿಯ ಲೈಂಗಿಕ ಸಖನೂ ಆಗುವ ತಾರ್ಕ್ಷ್ಯನ ಪಾತ್ರ ಬೆರಗುಗೊಳಿಸುವಂಥ ಜೀವಂತಿಕೆಯಿಂದ ತುಂಬಿದೆ. ಮಿತ್ರಾವರುಣಯಾಗದಲ್ಲಿ ಬಂಜೆ ಪುರುಕುತ್ಸಾನಿಗೆ ಪುತ್ರ ಫಲವನ್ನು ಕೊಟ್ಟು ಕೊನೆಗೆ ಅವಳ ಮೋಹ ಜಾಲದಲ್ಲಿ ತಲೆಕೆಟ್ಟು ಸಾಯುವ ಋಗ್ವೇದಿ ವಿಷ್ಣುಭಟ್ಟನ ಪಾತ್ರ, ತನ್ನ ತಂದೆ ಯಾರೆಂದು ತಿಳಿಯದೆ ದಿಙ್ಮೂಢನಾಗುವ ತ್ರಸದಸ್ಯುವಿನ ಪಾತ್ರ ನೆನಪಿನಲ್ಲಿ ನೆಲೆಯೂರುವಂತವು. ಜೊತೆಗೆ ನೂರಾರು ಅಮುಖ್ಯ ಪಾತ್ರಗಳು ; ಸೇವಕರು, ಸೈನಿಕರು, ಕಾಡುಜನರು, ಶೆಟ್ಟಿಗಳು.... ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಪುಣೇಕರರು ತಮ್ಮ ಪಾತ್ರನಿರ್ಮಾಣ ಕೌಶಲವನ್ನು ಮೆರೆದಿರುವುದು ಬ್ರಾಹ್ಮಣರ ಚಿತ್ರಣದಲ್ಲಿ. ನಿಷ್ಠಾವಂತ ಋಗ್ವೇದಿಯಾಗಿದ್ದು ರಾಣಿಯ ತೊಗಲು ಸಂಪರ್ಕದಿಂದ ಹುಚ್ಚನಾಗಿ, ವಿಕೃತಕಾಮಿಯಾಗಿ ಕೆಟ್ಟ ಸಾವು ಸಾಯುವ ವಿಷ್ಣುಭಟ್ಟನ ಪತನದಲ್ಲಿ, ತಮಗೆ ಗೊತ್ತಿದ್ದೋ, ಗೊತ್ತಿಲ್ಲದೆಯೋ, ಬಹುಶ: ಗೊತ್ತಿಲ್ಲದೆ, ಪುಣೇಕರರು ಯಾವ ವೈದಿಕ ವಿರೋಧಿ ಸಾಹಿತಿಗಿಂತಲೂ ಚನ್ನಾಗಿ ವೈದಿಕ ಸಂಸ್ಕೃತಿಯ ದ್ವಂದ್ವವನ್ನು ಬಿಂಬಿಸಿದ್ದಾರೆ. ಇನ್ನು ಶಾಮಭಟ್ಟ, ವೃಶ, ಮುಂತಾದ ವೈದಿಕ ಪಾತ್ರಗಳು, ದೇವವಾಮ, ವೃಷಭದೇವರಂಥ ಋಷಿಗಳು, ವಿರುದ್ಧ ಸೆಳೆತಗಳಿಗೊಳಗಾದ ವೈದಿಕ ಸಮುದಾಯದ ಎರಡು ತುದಿಗಳು. ಇನ್ನು ಹೆಣ್ಣು ಪಾತ್ರಗಳು ಇಷ್ಟು ಸಮರ್ಪಕವಾಗಿ ಕನ್ನಡ ಕಾದಂಬರಿಯಲ್ಲಿ ಬಂದಿರುವುದು ಅಪರೂಪ.

ಇಂತಹ ಒಂದು ಭವ್ಯ ಕಾದಂಬರಿಯನ್ನೋದಿದಾಗ ಈ ಎಲ್ಲ ಶ್ರೀಮಂತಿಕೆಯ ಉದ್ದೇಶ ಅಥವಾ ಉದ್ದೇಶಗಳು ಏನು ಎಂಬ ಪ್ರಶ್ನೆ ಮೂಡುತ್ತದೆ. ಇಡೀ ಕಾದಂಬರಿಯ ಪ್ರಮುಖ ಘಟ್ಟಗಳಲ್ಲಿ ಇದು ವ್ಯಕ್ತವಾಗುತ್ತದೆ ಎಂದು ನಂಬುವುದು ಸಹಜ. ಅಸಂಖ್ಯಾತವಾದ ರೋಚಕ ಮತ್ತು ರಮ್ಯ ಘಟನೆಗಳ ಮಧ್ಯೆ ಓದುಗನ ಮನಸ್ಸಿನಲ್ಲಿ ನಾಟುವ ಘಟನೆಗಳು– ಇವನ್ನು ಈ ಕಾದಂಬರಿಯ ಕೇಂದ್ರ ಘಟನೆಗಳೆಂದು ಕರೆಯಬಹುದೇನೋ– ಕಾಣಸಿಗುತ್ತವೆ.

ದಶಾರ್ಣದ ರಾಣಿ ಯಾದವೀದೇವಿ ಆ ದೇಶದ ರಾಜನ ಎರಡನೆಯ ಹೆಂಡತಿ. ಅವಳು ಬಸುರಿಯಾಗಿರುವಾಗ ರಾಜನ ಮೊದಲ ಹೆಂಡತಿ ಅವಳಿಗೆ ವಿಷಪ್ರಾಶನ ಮಾಡಿದ ಕಾರಣ ಅವಳಿಗೆ ಕುಬ್ಜನಾಗಿರುವ ಮಗು ಹುಟ್ಟುತ್ತದೆ. ಆಕೆಗೆ ವಿಷ ತಿನ್ನಿಸಿದ ಆಕೆಯ ಭಾವನೈದ ದುರ್ಗಸಿಂಹ ಅವಳ ಕುಬ್ಜ ಪುತ್ರ ಭದ್ರಾಯುವಿನ ಕೈಗೆ ಸಿಕ್ಕಿಬೀಳುತ್ತಾನೆ. ಆಗ ಯಾದವೀದೇವಿ ತನ್ನ ಮಗನ ಸಂಗಡ ವೃಷಭ ದೇವರ ಆಶ್ರಯದಲ್ಲಿರುತ್ತಾಳೆ. ತನ್ನ ಮಗನ ಕುಬ್ಜತೆಗೆ ಕಾರಣನಾದ ಆ ದುಷ್ಟ ಸಿಕ್ಕಿಬಿದ್ದಾಗ ವೃಷಭದೇವರ ಸಮ್ಮುಖದಲ್ಲಿ ಅವನಿಗೆ ರಕ್ಷಣೆ ಇದೆ. ಆಗ ತನಗೆ ಬಂದ ಕಷ್ಟ ಪರಂಪರೆಗಳು ಕಾಡತೊಡಗಿ ಯಾದವೀದೇವಿ ಈ ಎಲ್ಲಕ್ಕೂ ಕಾರಣ ವೇನು ಎಂದು ವೃಷಭ ದೇವರನ್ನು ಕೇಳುತ್ತಾಳೆ. ಅವಳಿಗೆ ಕರ್ಮ, ಪ್ರಾರಬ್ಧ ಮುಂತಾದ ಅಸ್ಪಷ್ಟ ಉತ್ತರಗಳು ಬೇಕಾಗಿಲ್ಲ. ನೇರ ಉತ್ತರ ಬೇಕು. ಮೂಲ ಕಾರಣವನ್ನು ಕೆದಕುವ ಪ್ರಶ್ನೆಗಳು ಕೆಲಸಕ್ಕೆ ಬಾರದವೆಂದು, ಜನರ ಸಮಾಧಾನ ಕ್ಕೆ ಋಷಿಗಳು ಕರ್ಮ–ಪ್ರಾರಬ್ಧ ಮುಂತಾದ ಮಾತುಗಳನ್ನಾಡುತ್ತಾರೆಂದೂ, ವೃಷಭದೇವರು ಅವಳಿಗೆ ಕಟು ಸತ್ಯವನ್ನರುಹುತ್ತಾರೆ. ಅಷ್ಟೇ ಅಲ್ಲ, ನಮ್ಮ ಮುಂ ದಿರುವುದು ನಮಗೆ ಹೇಗೋ ಏನೋ ದಕ್ಕಿರುವ ಬದುಕು. ಅದನ್ನು ಉತ್ತಮ ಗೊಳಿಸುವುದರ ಕಡೆಗೆ ನಮ್ಮ ಗಮನವಿರಬೇಕು ಎಂದು ಅವಳಿಗೆ ಹೇಳುತ್ತಾರೆ. ಇದು ಇಡೀ ಕಾದಂಬರಿಯ ಅತ್ಯಂತ ಅರ್ಥಪೂರ್ಣ ಘಟನೆ. ಇಲ್ಲಿ ಅನುಭವ ಮತ್ತು ಅರ್ಥೈಸುವಿಕೆ ಪರಸ್ಪರಾವಲಂಬಿಯಾಗಿ ಏಕ ಕಾಲಕ್ಕೆ ಮೈ ತಾಳುತ್ತವೆ. ಆ ಘಟನೆಯ ದಟ್ಟ ಚಿತ್ರಣದ ಮೂಲಕ ಬದುಕಿನ ಬಗ್ಗೆ ಇರುವ ಅನುಭವ ನಿಷ್ಠವಲ್ಲದ ಕಲ್ಪನೆಗಳನ್ನು ಪಕ್ಕಕ್ಕೆ ಸರಿಸಿ ಆ ಅನುಭವದಲ್ಲೇ ಕಡೆದು ತೆಗೆದ ಅರ್ಥವನ್ನು ನೀಡುವ ರೀತಿ ಅಸಾಧಾರಣವಾದದು. ಈ ಅರ್ಥ ಅನುಭವ ನಿಷ್ಠ ವಾಗಿಯೂ ದುರಂತಗಳ ಮಧ್ಯೆಯೂ ಇತ್ಯಾತ್ಮಕವಾಗಿ ಉಳಿದಿದೆ ಎಂಬುದನ್ನು ಗಮನಿಸಬೇಕು. ಆದರೆ ಭದ್ರಾಯುವಿನ ಕತೆ ಈ ಕಾದಂಬರಿಯಲ್ಲಿ ಉಪಕತೆ ಮಾತ್ರ.

ಕಾದಂಬರಿಯ ಮುಖ್ಯಧಾರೆಯಾದ ಪುರುಕುತ್ಸಾನಿ--ತ್ರಯದಸ್ಯುಗಳ ಕಥನದಲ್ಲೂ ಉಪಕಥೆಯಲ್ಲಿರುವಂತೆ ಎರಡು ಜಗತ್ತುಗಳ ಮುಖಾಮುಖಿ ಇದೆ. ಒಂದು ಕಡೆ ಬರ್ಬರ ಸತ್ಯಗಳ ರಾಜಕಾರಣ, ಯುದ್ಧ, ದ್ರವ್ಯಾರ್ಜನೆಗಳ ಜಗತ್ತು ಇನ್ನೊಂದು ಕಡೆ ಈ ಜಗತ್ತಿನ ದ್ವಂದ್ವಗಳಾಚೆಗಿದ್ದರೂ ಆ ದ್ವಂದ್ವಗಳನ್ನು ದೂರ ದಿಂದ ಎದುರಿಸಿ ಬಗೆಹರಿಸಲೆತ್ನಿಸುವ ದೇವವಾಮ ಋಷಿಗಳ ಆಶ್ರಮ. ಉಪ ಕತೆ

ಯಲ್ಲಿ ಕಾಣುವ ಇನ್ನೊಂದು ಪ್ರಕ್ರಿಯೆಯನ್ನು ಮುಖ್ಯ ಕತೆಯಲ್ಲೂ ಕಾಣುತ್ತೇವೆ. ತಿಕ್ಕಾಟಗಳ ಜಗತ್ತಿನ ಅರ್ಥೈಸುವಿಕೆ ನಡೆಯುವುದು ಋಷ್ಯಾಶ್ರಮದಲ್ಲಿ. ಆದರೆ ಅನುಭವ ಮತ್ತು ಅರ್ಥೈಸುವಿಕೆಗಳ ಸಂಯೋಗ ಉಪಕತೆಯಲ್ಲಿ ನಡೆದಷ್ಟು ಸಮರ್ಪಕವಾಗಿ ಮುಖ್ಯಕತೆಯಲ್ಲಿ ನಡೆದಿಲ್ಲವೆನ್ನುವುದು ಈ ಕಾದಂಬರಿಯ ದೊಡ್ಡ ದೋಷವೂ ಅಂತಿಮ ಸೋಲೂ ಆಗಿರುವುದು ವಿಷಾದನೀಯ. ತ್ರಯದಸ್ಯು ತನ್ನ ತಂದೆ ಯಾರೆಂದು ಸಂಯಮದಿಂದ ಕಂಗೆಟ್ಟು ಆಶ್ರಮಕ್ಕೆ ಓಡಿಬರುತ್ತಾನೆ. ಅಷ್ಟು ಹೊತ್ತಿಗೆ ಅವನ ತಾಯಿ ಪುರುಕುತ್ಸಾನಿ ಕಾಮೋನ್ಮತ್ತ ಬ್ರಾಹ್ಮಣ ವಿಷ್ಣುಭಟ್ಟನ ಸೂಳೆಯಾಗಲು ತಯಾರಾಗುತ್ತಿರುತ್ತಾಳೆ. ತ್ರಯದಸ್ಯು ತಾನು ಯಾರ ಮಗ ಎಂಬ ಪ್ರಶ್ನೆಗೆ ನೇರವಾದ ಉತ್ತರವನ್ನು ತನ್ನ ತಾಯಿಯಿಂದಲೂ, ದೇವವಾಮರಿಂದಲೂ ಬೇಡುತ್ತಾನೆ. ಆಗ ದೇವವಾಮರು, 'ಎಲ್ಲರೂ ದೇವರ ಮಕ್ಕಳು' ಎಂಬ ಹಾರಿಕೆಯ ಉತ್ತರವನ್ನು ಕೊಟ್ಟಾಗ ಅದು ಆ ದಾರುಣ ಅನುಭವದ ಅರ್ಥೈಸುವಿಕೆಯೊ, ಅಣಕವೊ ಎಂಬ ಸಂಶಯ ಮೂಡುತ್ತದೆ. ಅಥವಾ ಕಾದಂಬರಿಕಾರರು ದೇವವಾಮರ ಪಾತ್ರವನ್ನು ಅಷ್ಟು ಎತ್ತರದಲ್ಲಿಡದಿದ್ದರೆ ಈ ಉತ್ತರ ತಮಾಷೆಯಾಗುತ್ತಿರಲಿಲ್ಲ. ಮುಂದೆ ತನ್ನ ತಾಯಿಗೆ ಆಪ್ತನಾದ ತಾರ್ಕ್ಷ್ಯನಿಗೆ ತ್ರಯದಸ್ಯು ಇದೇ ಪ್ರಶ್ನೆ ಹಾಕುತ್ತಾನೆ. ಆದರೆ ಇಷ್ಟು ಹೊತ್ತಿಗೆ ತಾರ್ಕ್ಷ್ಯನೂ ಅವನ ತಾಯಿಯ ಜೊತೆಗೆ ಮೈಸಲಿಗೆ ಮಾಡಿರುತ್ತಾನೆ. ತ್ರಯದಸ್ಯುವಿನ ಅನುಭವನಿಷ್ಟೆಯಿಂದ ಹೊರಡುವ ಈ ಪ್ರಾಮಾಣಿಕ ಪ್ರಶ್ನೆಯನ್ನು ತಾರ್ಕ್ಷ್ಯ, 'ನೀನು ಯಜ್ಞದಲ್ಲಿ ಹುಟ್ಟಿದವನು, ದೈವಾಂಶ ಸಂಭೂತ.' ಎಂದು ತೇಲಿಸಿಬಿಡುತ್ತಾನೆ. ವಿಚಿತ್ರವೆಂದರೆ, ತ್ರಯದಸ್ಯುವಿನ ಹುಡುಕಾಟ ಇಲ್ಲಿ ನಿಂತು ಅವನೂ ಅದನ್ನು ನಂಬುತ್ತಾನೆ. ಎರಡು ನಕ್ಷತ್ರಗಳ ಜ್ಯೋತಿ ಅವನ ಮೈ ಹೊಗುತ್ತದೆ. ಪ್ರಾಮಾಣಿಕ ಅನುಭವ ಮತ್ತು ಅನುಮಾನಗಳಿಗೆ ಸಿಕ್ಕುವ ಸಮಾಧಾನ ಯಜ್ಞದಂತಹ ಬಾಹ್ಯ ಕರ್ಮದ ಮೇಲೆ, ಒಂದು ಸ್ವಯಂ ಆರೋಪಿತ ದೈವೀ ಅನುಭವದ ಮೇಲೆ ನಿಂತದ್ದು. ಉಪಕತೆಯಲ್ಲಿ ವೃಷಭದೇವರಿಂದ ಸಿಕ್ಕುವ ಪ್ರಾಮಾಣಿಕ ಅರ್ಥೈಸುವಿಕೆ ಮುಖ್ಯ ಕತೆಯಲ್ಲಿ ಯಜ್ಞ ಯಾಗಗಳನ್ನು ವೈದಿಕ ನಂಬಿಕೆಗಳನ್ನು ಸ್ವೀಕರಿಸುವ ಮನಸ್ಸುಗಳಿಗೆ ಮಾತ್ರ ಒಪ್ಪಿತವಾಗುವಂತೆ ಕಾಣುವುದು ಈ ಕಾದಂಬರಿಯ ದೊಡ್ಡ ದೌರ್ಬಲ್ಯ. ಬರಹಗಾರನ ವೈಯಕ್ತಿಕ ನಂಬಿಕೆಗಳು ಹೇಗೆ ಕಲಾತ್ಮಕ ಶಕ್ತಿಗೆ ಮುಳುವಾಗಬಹುದು ಎಂಬುದಕ್ಕೆ ಒಳ್ಳೆಯ ಉದಾಹರಣೆ.

ಇಂತಹ ಉದಾಹರಣೆಗಳು ಇನ್ನೂ ಕೆಲವಿವೆ. ಆ ಕಾಲದ ಬದುಕನ್ನು ಕಾದಂಬರಿ

ಕಾರರು ಮೂಡಿಸುವುದು ಮುಖ್ಯವಾಗಿ ಕ್ಷತ್ರಿಯರ, ಬ್ರಾಹ್ಮಣರ ಮತ್ತು ಋಷಿಗಳ ಬದುಕಿನ ಮೂಲಕ. ಇದನ್ನು ಕಾದಂಬರಿಯ ಕಲಾತ್ಮಕ ದೋಷ ಎಂದು ಹೇಳಲಾಗದಿದ್ದರೂ ಈ ತೆರನ ದೃಷ್ಟಿಕೋನದ ಹಿಂದೆ ಚರಿತ್ರೆಯನ್ನು ಮಹಾಪುರುಷರ ಮತ್ತು ಮೇಲು ಸಮಾಜದ ಚರಿತ್ರೆಯೆನ್ನುವ ಅಪಾಯಕಾರಿ ದೃಷ್ಟಿಕೋನ ಕದ್ದು ಕೂತಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಜೊತೆಗೆ, ಈ ಚಾರಿತ್ರಿಕ ಕಾದಂಬರಿಯಲ್ಲಿ ಅನೇಕ 'anachronism' ಗಳು ಸಿಕ್ಕುತ್ತವೆ. ಆದರೂ ಇದು ಚರಿತ್ರೆಯಲ್ಲದೆ, ಕಾದಂಬರಿಯಾಗಿರುವುದರಿಂದ ಇದನ್ನು ಕಡೆಗಣಿಸಿಬಿಡಬಹುದು.

ಆದ್ದರಿಂದಲೇ ಏನೋ ಕಾದಂಬರಿ ನಮ್ಮನ್ನು ಆಳವಾಗಿ ಕೆಣಕಿದರೂ ಮೇಲು ಮಟ್ಟದ ರಸಾನುಭವ ಕೊಡುವುದರಲ್ಲಿ ತನ್ನೆಲ್ಲ ಗುಣಗಳ ಮಧ್ಯೆಯೂ ಎಡವುತ್ತದೆ.

'ಕತೆಗಾರನಾಗಿ ನನ್ನ ಅನುಭವ' *

● ರಾಘವೇಂದ್ರ ಪಾಟೀಲ

ಕಣ್ಣಿಗೆ ಕಾಣುವ ಬೆಟ್ಟವೊಂದು ಒಂದೊಂದು ದಿಕ್ಕಿನಿಂದ ಒಂದೊಂದು ಆಕಾರ ತೋರುತ್ತದೆ. ಯಾವದೇ ವಾಸ್ತವ ಸತ್ಯದ ವಿಚಾರವಾಗಿಯೂ ಹೀಗೆಯೇ. ಸತ್ಯದ ವಿಷಯವೇ ಹೀಗಿರುವಾಗ ಅವುಗಳಿಂದ ನಮಗೆ ದೊರೆಯುವ ಅನುಭವವೂ ಭಿನ್ನಭಿನ್ನವಾಗಿರುವ ಅವಕಾಶವಿರುತ್ತದೆ. ಅನುಭವಗಳು ಶುದ್ಧವಾದವುಗಳು (absolute) ಅಲ್ಲ. ವಾಸ್ತವ ಸತ್ಯದ ಒಂದೊಂದು ರೂಪವೂ ನಮ್ಮ ಮನಸ್ಸಿನ ಪಡಿಯಚ್ಚಿನಲ್ಲಿ ಗ್ರಹಿಸಲ್ಪಟ್ಟು ಭಿನ್ನಭಿನ್ನವಾದ ಅನುಭವಗಳನ್ನು ಮೂಡಿಸುತ್ತದೆ. ಮಾನಸಿಕ ಪೂರ್ವಾಗ್ರಹಗಳು ವಾಸ್ತವ ಸತ್ಯವು ನಮ್ಮಲ್ಲಿ ಉಂಟುಮಾಡುವ ಅನುಭವವೆಂಬ ಪರಿಣಾಮದ ಮೇಲೆ ಆಗಾಧವಾದ ಪ್ರಭಾವ ಬೀರುತ್ತವೆ. ಗಾತ್ರದಲ್ಲಿ ಅತಿ ದೊಡ್ಡದಾದ ಬೇರೆ ಬೇರೆ ಕೋನಗಳಲ್ಲಿ ಬೇರೆ ಬೇರೆ ಆಕಾರ ತೋರುವ ಬೆಟ್ಟವನ್ನು ಆಚೆಗಿಟ್ಟು ವೃತ್ತೀಯ ಸಾಂಗತ್ಯ (radial Symmetry) ತೋರುವ ಒಂದು ಪುಟ್ಟ ಹೂವನ್ನು ತೆಗೆದುಕೊಂಡರೆ ಈ ಹೂವು ಒಬ್ಬೊಬ್ಬರಲ್ಲಿ ಒಂದೊಂದು ರೀತಿಯ ಅನುಭವವನ್ನು ಹುಟ್ಟಿಸುವ ಸಂಗತಿ ನೋಡುತ್ತೇನೆ. ಸಸ್ಯ ಶಾಸ್ತ್ರಜ್ಞನಿಗೆ ಇದು ಸಸ್ಯದ ಸಂತಾನೋತ್ಪತ್ತಿಯ ಅಂಗ–ಬೀಜೋತ್ಪಾದನೆಯ ಕ್ಷೇತ್ರ. ಅದರ ವಾಸನೆ, ಬಣ್ಣ, ಆಕಾರ, ಇವಾವುವೂ ಇವನಲ್ಲಿ ಕೌತುಕವನ್ನುಂಟುಮಾಡಲಾರವು. ಈ ಅಂಶಗಳೆಲ್ಲ ಪರಾಗಸ್ಪರ್ಶ–ಗರ್ಭ ಕಟ್ಟುವಿಕೆ ಇತ್ಯಾದಿ ಶಾಸ್ತ್ರೀಯ

* ಮೈಸೂರು ಬ್ಯಾಂಕ್ ಕನ್ನಡ ಬಳಗ ಮತ್ತು ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆದ ಸಣ್ಣ ಕಥಾ ಶಿಬಿರದಲ್ಲಿ ಮಂಡಿಸಲಾದ ಪ್ರಬಂಧ.

ವಿಷಯವದ ಅವನ ಜ್ಞಾನಕ್ಕೆ ಬದ್ಧವಾಗಿ ಬಿಡುತ್ತವೆ. ಅದೇ ಹೂವು ಒಬ್ಬ ಕವಿಯಲ್ಲಿ ಕೋಮಲತೆ ಸೌಂದರ್ಯಗಳ ಅದ್ಭುತ ಸೃಷ್ಟಿ ಎಂದು ತೋರಿ ಸೃಷ್ಟಿಯ ಬಗೆಗೆ ಅಥವಾ ದೇವರ ಬಗೆಗೆ ಧನ್ಯತೆಯ ಅನುಭವವನ್ನು ಮೂಡಿಸಬಹುದು. ಎಲ್ಲ ಕವಿಗಳಲ್ಲಿಯೂ ಇದೇ ರೀತಿಯ ಅನುಭವ ಮೂಡಲಾರದು. ಕವಿಯೊಬ್ಬನಲ್ಲಿ ಹೂವು ಕ್ಷಣಿಕತೆಯ, ಅಶಾಶ್ವತೆಯ ಅಥವಾ ಸಾವಿನ ಕರಾಳ ಹಸ್ತದ ಅನುಭವವನ್ನು ಮೂಡಿಸುತ್ತದೆ. ಸೂರ್ಯೋದಯ ಒಬ್ಬ ಕವಿಗೆ ದೇವರ ದಯೆಯೆಂದು ತೋರಿದರೆ, ಇನ್ನೊಬ್ಬ ಕವಿಯಲ್ಲಿ ಮಾಂಸದಂಗಡಿಯ ಬಾಗಿಲು ತೆರೆದಂತೆ ತೋರಿದರೆ ಮತ್ತೊಬ್ಬ ಕವಿಯಲ್ಲಿ ಬೆಳಕಿನಿಂದ ಜಗವೆಲ್ಲಾ ತೊಯ್ದು ಹೋದಂತೆ ಭಾವಿಸಲ್ಪಡುತ್ತದೆ.

ವಾಸ್ತವ ಸತ್ಯದ ದ್ರವವು ಪಂಚೇಂದ್ರಿಯಗಳ ಮೂಲಕ ಮನಸ್ಸಿನ ಪಾತ್ರೆಯೊಳಗೆ ಸುರಿಯಲ್ಪಟ್ಟು, ಆ ಮನಸ್ಸಿನ ಪಾತ್ರೆಯ ಆಕಾರದಲ್ಲಿ ಅನುಭವಗಳಾಗಿ ಪರಿಣಾಮಗೊಳ್ಳುತ್ತವೆ. ಹಾಗಿದ್ದರೆ ಈ ಮನಸ್ಸಿನ ಪಾತ್ರೆಯ ಆಕಾರವನ್ನು ನಿರ್ಣಯಿಸುವ ಅಂಶಗಳಾವುವು ಎಂದು ಕೇಳಿದರೆ ಆಯಾ ವ್ಯಕ್ತಿಗಳು ನಂಬಿರುವ ನಂಬಿಕೆಗಳು ಅಥವಾ ಅವರ ಪೂರ್ವಾಗ್ರಹಗಳು– Prejudices- ಎಂದು ಹೇಳಬಹುದು. ಒಬ್ಬೊಬ್ಬ ವ್ಯಕ್ತಿಯಲ್ಲಿಯೂ ಭಿನ್ನ ಭಿನ್ನ ರೀತಿಯ ನಂಬಿಕೆಗಳು, ಒಂದೇ ರೀತಿಯ ಘಟನೆಗಳು ಅಥವಾ ವಾಸ್ತವ ಸತ್ಯಗಳು ಭಿನ್ನವಾದ ಭಾವಿಸುವಿಕೆ ಅಥವಾ ಅನುಭವಗಳನ್ನು ಮೂಡಿಸುವುದರಿಂದ ನಾವು ಅನುಭವಗಳನ್ನು ವ್ಯಕ್ತಿ ನಿಷ್ಠ ಅಥವಾ ವ್ಯಕ್ತಿ ವೈಶಿಷ್ಟ್ಯವಾದ ಅಂಶಗಳೆಂದು ಹೇಳಬಹುದು.

ಈ ಅನುಭವಗಳನ್ನು ರೂಪಿಸುವ ನಂಬಿಕೆಗಳನ್ನೇ ನಾವು ದೃಷ್ಟಿಕೋನ ಎಂದು ಹೇಳುವದು. ಒಬ್ಬ ಲೇಖಕ ತನ್ನ ಅನುಭವಗಳ ನಿರೂಪಣೆಯಲ್ಲಿ ಯಶಸ್ವಿಯಾಗಿದ್ದರೆ ಅದರಲ್ಲಿ ಅವನ ದೃಷ್ಟಿಕೋನವನ್ನು ಗುರುತಿಸಲು ಸಾಧ್ಯವಾಗುತ್ತದೆ. ಲೇಖಕ ತನ್ನ ಅನುಭವಗಳ ನಿರೂಪಣೆಯಲ್ಲಿ ಯಶಸ್ವಿಯಾಗಿದ್ದರೆ ಅದರಲ್ಲಿ ಅವನ ದೃಷ್ಟಿಕೋನವನ್ನು ಗುರುತಿಸಲು ಸಾಧ್ಯವಾಗುತ್ತದೆ. ಲೇಖಕನ ದೃಷ್ಟಿಕೋನವೇ ಕಥೆಯ ಕೇಂದ್ರವಾಗಿ ಬರುತ್ತದೆ. ಮೂಡಲ ಮನೆಯಾ ಮುತ್ತಿನ ನೀರಿನ ಎರಕವಾ ಹೊಯ್ದಾ, ನುಣ್ಣನ್ನೆರಕವಾ ಹೊಯ್ದಾ.... ಎನ್ನುವ ನಿರೂಪಣೆಯ ಹಿಂದಿರುವ ನಂಬಿಕೆ–ದೃಷ್ಟಿಕೋನಗಳು ನಮಗೆ ಹೊಳೆದು ಕಾಣುತ್ತವೆ. ಹೀಗೆ ಒಬ್ಬ ಕಥೆಗಾರ ತನ್ನ ಅನುಭವಗಳ ಬಗ್ಗೆ ಮಾತಾಡಬೇಕೆಂದರೆ ತನ್ನ ದೃಷ್ಟಿಕೋನದ

ಬಗ್ಗೆ ತನ್ನ ನಂಬಿಕೆಗಳ ಬಗ್ಗೆ ಮಾತಾಡಬೇಕಾಗುತ್ತದೆ. ಆದರೆ ಒಬ್ಬ ಕಥೆಗಾರನ ದೃಷ್ಟಿಕೋನದ ಬಗ್ಗೆ ಅವನ ಕಥೆಗಳೇ ಚೆನ್ನಾಗಿ ಹೇಳುತ್ತವೆ. ಆದ್ದರಿಂದ ನಾನು ಈ ಬಗ್ಗೆ ಹೆಚ್ಚು ಹೇಳದೇ ಇಂಥ ಅನುಭವಗಳನ್ನು ಕಥೆಯಾಗಿಸುವ ಕ್ರಿಯೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಇದು ಒಂದು ರೀತಿಯಿಂದ ಕಥೆಗಾರ ಕಥೆ ಬರೆಯುವಾಗಿನ ಅನುಭವ ಇದ್ದ ಹಾಗೆ.

ಈ ಬರೆಯುವ ಕ್ರಿಯೆ ವಿಚಿತ್ರ ಮತ್ತು ವಿಕ್ಷಿಪ್ತವಾದದ್ದು. ಇದು ವಿರೋಧಾಭಾಸಗಳನ್ನು ಒಳಗೊಂಡಿರುತ್ತದೆ. ನಾನು ಕಾಣುವ ಮುಖ್ಯ ವಿರೋಧಾಭಾಸ ಹೀಗಿದೆ.
1. ಕಥೆಗಾರನ ಆಸೆ ತನ್ನ ಸಂಕೀರ್ಣವಾದ ಅನುಭವಕ್ಕೆ ಅಭಿವ್ಯಕ್ತಿ ನೀಡುವದಾಗಿರುತ್ತದೆ. (ಆದರೆ ಬರೆಯುವ ಕ್ರಿಯೆಯೇ ಸರಳಗೊಳಿಸುವ ಒಂದು ಕ್ರಿಯೆಯಾಗಿರುತ್ತದೆ.) ಆದರೆ ಅಭಿವ್ಯಕ್ತಿಯ ಸಂದರ್ಭದಲ್ಲಿ ತರ್ಕವು ಮೇಲುಗೈ ಸಾಧಿಸಿ ಸಂಕೀರ್ಣ ಅನುಭವಗುಚ್ಛದಲ್ಲಿ ತರ್ಕಕ್ಕೆ ಹೊಂದುವ ಕೆಲವನ್ನು ಮಾತ್ರ ಆಯ್ದುಕೊಂಡು ಜೋಡಿಸುವ ಕೆಲಸ ನಡೆಯುವುದರಿಂದ ಬರೆಯುವ ಕ್ರಿಯೆ ಒಂದು ಸರಳಗೊಳಿಸುವ ಕ್ರಿಯೆಯಾಗಿ ಬಿಡುತ್ತದೆ.

ಇನ್ನು ತರ್ಕಕ್ಕೆ ಹೊಂದಿಕೊಳ್ಳುವಂತೆಯೇ ನಮ್ಮ ಅನುಭವ ಗುಚ್ಛದಲ್ಲಿನ ಹೊಂದುವ ಕೆಲವು ಅನುಭವಗಳನ್ನು ಆರಿಸಿಕೊಂಡ ಮೇಲೂ ಇನ್ನಷ್ಟು ಸರಳಗೊಳಿಸುವ ಕೆಲಸ ನಡೆಯುತ್ತದೆ– ನಾವು ಆಯ್ದುಕೊಂಡ ಅನುಭವ ಸಹಸ್ರಬಾಹುವಾ... ಅದು ಇನ್ನಿತರ ಅನುಭವಗಳೊಂದಿಗೆ, ಸಂದರ್ಭಗಳೊಂದಿಗೆ ಕೈಹಿಡಿದುಕೊಂಡು ಸಂಬಂಧದ ಸಂಕೀರ್ಣ ಸ್ಥಾಪಿಸಿರುತ್ತದೆ. ನಾವು ಆಯ್ದುಕೊಂಡ ಅನುಭವದ ಬೇರೆ ಬೇರೆ ದಿಕ್ಕುಗಳಲ್ಲಿನ ಕೈಗಳನ್ನು ಕತ್ತರಿಸಿ ಕೇವಲ ಒಂದು ದಿಕ್ಕಿನಲ್ಲಿಯ ಕೈಗಳನ್ನು ಮಾತ್ರ ನಾವು ಉಳಿಸಿಕೊಳ್ಳುತ್ತೇವೆ. ಹೀಗೆ ಅನುಭವ ಗುಚ್ಛದಿಂದ ಆಯ್ದುಕೊಂಡ ಒಂದು ಬಿಡಿ ಅನುಭವವೂ ಅಭಿವ್ಯಕ್ತಗೊಳ್ಳುವ ಸಂದರ್ಭದಲ್ಲಿ ಇನ್ನಷ್ಟು ಸರಳಗೊಳ್ಳುವ ಕ್ರಿಯೆಗೆ ಬಲಿಯಾಗಬೇಕಾಗುತ್ತದೆ.

ಪ್ರತಿಯೊಬ್ಬ ಲೇಖಕ ಎದುರಿಸಬೇಕಾದ ಒಂದು ಪ್ರಮುಖವಾದ ಸಮಸ್ಯೆ ಇದು. ಅನುಭವಗಳ ಸಂಕೀರ್ಣತೆಗೇ ಹೆಚ್ಚು ಒತ್ತು ಕೊಟ್ಟು ತರ್ಕದ ಕೇಳಿಕೆಯನ್ನು ಉಪೇಕ್ಷಿಸಿದರೆ ಕಥೆ ಕೇಂದ್ರದ ಎಳೆಯನ್ನು ಕಳೆದುಕೊಂಡು ಚೆಲ್ಲಾಪಿಲ್ಲಿಯಾಗುತ್ತದೆ. ಹಾಗೆಯೇ ತರ್ಕದ ಕೇಳಿಕೆಗೆ ಪೂರ್ಣವಾಗಿ ಕೊಟ್ಟುಕೊಂಡು ಬಿಟ್ಟರೆ ಅನು

ಭವಗಳು ತಮ್ಮ ಜೀವಂತಿಕೆಯನ್ನು ಕಳೆದುಕೊಂಡುಬಿಡುತ್ತವೆ. ಮತ್ತು ಅಂಥ ಕಥೆಗಳಲ್ಲಿನ ಪಾತ್ರಗಳು ರಟ್ಟಿನ ಬಿದಿರಿನ ಅಥವಾ ತೊಗಲಿನ ಬೊಂಬೆಗಳಾಗಿ ಬಿಟ್ಟು ಇಡೀ ಕಥೆ ಗೊಂಬೆಯಾಟ ಯಕ್ಷಗಾನವಾಗಿ ಬಿಡಬಹುದು.

2. ಇನ್ನೊಂದು, ಕಥೆಗಾರನ ಅನುಭವಗಳು ಕಥೆ ಬರೆಯುವ ಕ್ರಿಯೆಯಲ್ಲಿ ಹೊಂದಬೇಕಾಗುವ ಪರಿವರ್ತನೆಗಳು. ವಾಸ್ತವವಾದೀ (realistic) ಕಥೆಗಳಲ್ಲಿಯೇ ಅನುಭವಗಳು metamorphosis ನ ಚಿತ್ರಹಿಂಸೆಗೆ ಒಳಗಾಗುವವು ಇನ್ನಷ್ಟು ಕ್ರೂರವಾದ ವ್ಯಂಗ್ಯವು. ಇಲ್ಲಿನ ವಿರೋಧಾಭಾಸವೇನೆಂದರೆ– ಲೇಖಕನ ಆಸೆ ತಾನು ಪಡೆದ ಅನುಭವಗಳ ಮೂಲಕ ಇಡೀ ಸಂದರ್ಭವನ್ನು ಶೋಧಿಸುವದು–ಅರ್ಥಮಾಡಿಕೊಳ್ಳುವದು ಆಗಿರುತ್ತದೆ. ಹೀಗೆ ಹೇಳುವಾಗ ಲೇಖಕ ಅನುಭವಿಸಿದ ಅನುಭವಗಳ ಮೇಲೆ ಹೆಚ್ಚಿನ ಅವಲಂಬನೆ ಇರುವದನ್ನು ಕಾಣಬಹುದು. ಆದರೆ ಅಭಿವ್ಯಕ್ತಿಯ ಸಂದರ್ಭದಲ್ಲಿ ಸಂದರ್ಭವನ್ನು ಶೋಧಿಸುವ ಕ್ರಿಯೆಗೆ ಹೆಚ್ಚು ಒತ್ತು ಬಿದ್ದು ಅನುಭವಗಳನ್ನು ತಿರುಚುವ–ಪರಿವರ್ತಿಸುವ ಹಿಂಸೆಯ ಕೆಲಸ ನಡೆಯುತ್ತದೆ. ಸತ್ಯದ ಶೋಧನೆಗಾಗಿ ನಿಜವಾದ ಅನುಭವಗಳನ್ನು ಮಾರ್ಪಡಿಸುವ ಕೆಲಸ ಇಲ್ಲಿ ನಡೆಯುತ್ತದೆ.

ನಾನು ಕಾಣುತ್ತಿರುವ ಈ ಮುಖ್ಯ ವಿರೋಧಾಭಾಸಗಳನ್ನು ಮುಖ್ಯ ಅಂಶಗಳನ್ನಾಗಿಟ್ಟುಕೊಂಡು ಅವುಗಳನ್ನು ಕಥೆಯ ಮುಖಾಂತರ ನಾಟ್ಯೀಕರಿಸುವ ಯಶವಂತ ಚಿತ್ತಾಲರ 'ಕಥೆಯಾದಳು ಹುಡುಗಿ'ಯನ್ನು ಸ್ಥೂಲವಾಗಿ ಪರಿಶೀಲಿಸುವದು ಹೆಚ್ಚು ಫಲಪ್ರದವಾಗಬಲ್ಲದು. (ಚಿತ್ತಾಲರ) ಮಗಳು ಜಾನಕಿ ಹತ್ತು ಹನ್ನೆರಡು ವರ್ಷಗಳ ಉತ್ಸಾಹ ಚಿಮ್ಮುವ ಪುಟಾಣಿ ಹುಡುಗಿ. ಈಕೆಗೆ ರಕ್ತದ ಕ್ಯಾನ್ಸರ್ ಆಗಿ ಆಸ್ಪತ್ರೆ ಸೇರುತ್ತಾಳೆ. ತಾನು ಎಂಥ ಪ್ರಾಣಾಂತಿಕ ರೋಗದಿಂದ ಬಳಲುತ್ತಿದ್ದೇನೆಂಬ ಯಾವ ಅರಿವೂ ಇಲ್ಲದ ಹುಡುಗಿ–ಸಾವನ್ನು ಗೆಲ್ಲುವ ಹುನ್ನಾರವೋ ಎನ್ನುವಂತೆ ಕಥೆಗಾರ ತನ್ನಪ್ಪನಿಗೆ ತನ್ನ ಬಗ್ಗೆ ಕಥೆ ಬರೆಯಲು ಕೇಳುತ್ತಾಳೆ, ಒತ್ತಾಯಿಸುತ್ತಾಳೆ. ಜಾನಕಿಯ ಸಾವಿನ ನಂತರ ತಂದೆ ಕಥೆ ಬರೆಯುತ್ತಾರೆ. ಜಾನಕಿ ಕಥೆಯಾಗುತ್ತಾಳೆ. ಆದರೆ ಕಥೆಯಲ್ಲಿ ಮೂಡಿಬಂದ ಜಾನಕಿ ಮಗಳು ಜಾನಕಿಯ ಒಂದಿಷ್ಟು ನೆನಪನ್ನೂ ಹುಟ್ಟಿಸದಂಥ ಹುಡುಗಿಯಾಗಿ ಬಿಟ್ಟಿರುತ್ತಾಳೆ. ಅತ್ಯಂತ ಮಹತ್ವದ ಕಥೆ ಬರೆದದ್ದಕ್ಕಾಗಿ ಅಭಿನಂದಿಸಲು ಬರುವ ಗೆಳೆಯರು ಬೀರಿನ ಸಮಾರಾಧನೆಯನ್ನು ಪಡೆದು ಹೋದ ಮೇಲೆ ಕಥೆಗಾರನ

ಹೆಂಡತಿ– 'ಬೆಂಕಿ ಹಚ್ಚಿರಿ ನಿಮ್ಮ ಕಥೆಗೆ. ಜಾನಕಿಯ ಬಗ್ಗೆ ಅವಳ ಸೆನಪನ್ನೇ ಹುಟ್ಟಿಸದಂಥ ಅದೆಂಥಾ ಕಥೆ ಬರೆದಿದ್ದೀರಿ' ಎನ್ನುತ್ತಾಳೆ.

ಕಥೆಗಾರ ಇಲ್ಲಿ ಪರಿಭಾವಿಸಿದ ಮೂಲ ಅನುಭವ ಎಳೆಯ ಮಗಳ ಸಾವು. ಆದರೆ ಈ ಅನುಭವ ಕಥೆಗಾರನ 'ದೃಷ್ಟಿಕೋನ' ಮತ್ತು ತರ್ಕದ ಕೇಳಿಕೆಗಳಿಗೆ ಬದ್ಧವಾಗಿ ಜಾನಕಿ ತನ್ನ ಮಗಳಾಗದೇ ಫಸ್‌ನಾಲಾ ಗಣಿಯಲ್ಲಿ ದುಡಿಯುವ ಒಬ್ಬ ಕೂಲಿಯ ಮಗಳಾಗಿ ಮೂಡಿಬರುತ್ತಾಳೆ. ಜಾನಕಿ ರಕ್ತದ ಕ್ಯಾನ್ಸರ್‌ನಿಂದ ಸತ್ತಿದ್ದರೆ ಇಲ್ಲಿನ ಹದಿಹರೆಯದ ಹುಡುಗಿ ಗಣಿಗಳ ಮಾಲಿಕರ ಮಕ್ಕಳ ಲೈಂಗಿಕ ಅತ್ಯಾಚಾರಕ್ಕೆ ಬಲಿಯಾಗಿ ಸಾಯುತ್ತಾಳೆ. ಚಿತ್ತಾಲರ ಕಥೆಯ ಇಡೀ ದೇಹವು ಈ ಪರಿವರ್ತನೆಗಳಿಗೆ ಕಾರಣವಾಗುವ ಒತ್ತಾಯಗಳನ್ನು ಚಿತ್ರಿಸುತ್ತ ಕಥೆಗಾರಿಕೆಯ ಕ್ರಿಯೆಯಲ್ಲಿ ನಾವು ಎದುರಿಸುವ ವಿರೋಧಾಭಾಸಗಳನ್ನು ನಾಟ್ಯೀಕರಿಸುತ್ತದೆ– ಈ ಕಥೆಯಲ್ಲಿ ಹೇಳಿರುವ ಕಥೆಗಾರಿಕೆಯ ಸಮಸ್ಯೆಗಳು, ವಿರೋಧಾಭಾಸಗಳು ನನ್ನ ಸಮಸ್ಯೆಗಳನ್ನೂ ಹೇಳುತ್ತವೆ.

ಕಥೆಗಾರ ಕೆ. ಸದಾಶಿವ ಅವರು ತಮ್ಮ ಕಥೆಯೊಂದರಲ್ಲಿ ಬರೆಯುವದು ಮೈಯನ್ನು ಇಷ್ಟಿಷ್ಟೇ ಕತ್ತರಿಸಿ ತೆಗೆದಿಟ್ಟಂತೆ ನೋವಿನ–ಹಿಂಸೆಯ ಕೆಲಸ ಅನ್ನುತ್ತಾರೆ. ಅಂಥ ಬರೆಯುವ ನನ್ನ ಅನುಭವಗಳನ್ನು ಕುರಿತು ಮಾತಾಡುವುದು ಕೊಯ್ದುಕೊಂಡ ಮೈಯ ಗಾಯಗಳನ್ನು ಇನ್ನೊಮ್ಮೆ ನೋಡಿಕೊಂಡು ನೋಯುವ ಕೆಲಸ. ಅದಕ್ಕೇ ಚಿತ್ತಾಲರ ನೋವುಗಳನ್ನು ಗಾಯಗಳನ್ನು ನಿಮ್ಮ ಮುಂದೆ ಇಟ್ಟು ನನ್ನ ಗಾಯಗಳೂ ಹೀಗೆಯೇ ಇವೆ ಎಂದು ಹೇಳುತ್ತಿದ್ದೇನೆ. ಇದರಾಚೆಗಿನ ವೈಯಕ್ತಿಕ ಸಮಸ್ಯೆಗಳೂ ಇವೆ. ಅವೆಲ್ಲ ಅಭಿವ್ಯಕ್ತಿಯ ಮಿತಿಗಳು. ನನ್ನ 'ಉರುಳುವ ಗಾಲಿ ಗುಡುಗುಡು ಮುಗಿಲು' ಕಥೆಯನ್ನು ಓದಿ ಇಷ್ಟಪಟ್ಟು ಶ್ರೀ ಅನಂತಮೂರ್ತಿಯವರು ಪತ್ರ ಬರೆಯುತ್ತ –'ನಿಮ್ಮ ಕಥೆಗಳಲ್ಲಿ ಎಲ್ಲವೂ 'given' ಆಗಿ ಬರಬೇಕು' ಎಂದು ಹೇಳುತ್ತಾರೆ. ತಾತ್ವಿಕೀಕರಣ ಕ್ರಿಯೆಗೆ ಹೆಚ್ಚು ಒತ್ತು ಬೀಳುವ ನನ್ನ ಸಮಸ್ಯೆ ಇದರಿಂದ ಓದುಗರ ಮನ ಒಲಿಸುವ ನಂಬಿಸುವ ಕೆಲಸದ ಹೊರೆ ಬೀಳುತ್ತದೆ. ಅದಕ್ಕೇ ನನ್ನ ಪಾತ್ರಗಳ ಅಂಗಚೇಷ್ಟೆ–ಗೆಶ್ಚರ್ಸ್–ಗಳನ್ನೆಲ್ಲ ಹೇಳುತ್ತ–ದೈನಿಕ ಚಟುವಟಿಕೆಗಳನ್ನೆಲ್ಲ ವಿವರಿಸುತ್ತ ಹೋಗುತ್ತೇನೇನೋ ಎಂಬ ಅನುಮಾನ ಮೂಡುತ್ತದೆ. ನಾನು ಆಯ್ದುಕೊಂಡ ವಿವರಣಾತ್ಮಕ ರೀತಿಗೆ (narrative) ಇದು ಹೊಂದಿಕೊಂಡು ಹೋಗುತ್ತಿದಾದ್ದರಿಂದ ಅಂಥ ಗಾಢವಾಗಿ

ಕಾಡುವ ಮಿತಿಯಾಗುತ್ತಿಲ್ಲ ಎಂದುಕೊಂಡಿದ್ದೇನೆ. ಅಥವಾ ನಾನು ಆಯ್ದುಕೊಂಡ narrative ತಂತ್ರವೇ ನನಗೆ ಈ ಮಿತಿಯನ್ನು ವಿಧಿಸುತ್ತಿದೆಯೋ ? ನೋಡಿ– ಎಷ್ಟೊಂದು ಗೊಂದಲಗಳಿವೆಯಲ್ಲವೇ ! ಈ ಕಥೆ ಬರೆಯುವದರಲ್ಲಿ ಸೇರಿಕೊಂಡಿರುವ ಈ ಸುಳ್ಳುಗಳು- ನೋವುಗಳು– ವಿರೋಧಾಭಾಸ ಗೊಂದಲಗಳನ್ನು ನಿಮಗೆ Comm unicate ಮಾಡಲು ಸಾಧ್ಯವಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅದು ಸಾಧ್ಯ ವಾಗಿದ್ದರೆ ನನ್ನ ಕೆಲಸ ನಾನು ಮಾಡಿದ್ದೇನೆ ಎಂದುಕೊಳ್ಳುತ್ತಾ ನನ್ನ ಮಾತು ಗಳನ್ನು ಮುಗಿಸುತ್ತೇನೆ.

ನನ್ನ ಕೆಲವು ನೆನಪುಗಳು

● ಎಂ. ಟಿ. ಜಯಣ್ಣ

ಹಳೆ ಮೈಸೂರಿನ ಗ್ರಾಮಾಂತರ ಪ್ರದೇಶಗಳಲ್ಲಿ ಎಂ. ಟಿ. ಜಯಣ್ಣನವರ ಹೆಸರನ್ನು ಕೇಳದ ರೈತ ಬಾಂಧವರು ಅಪರೂಪವೆಂದೇ ಹೇಳಬೇಕು. ಆಕಾಶವಾಣಿಯ ಬೆಂಗಳೂರು ಕೇಂದ್ರದ ಕೃಷಿರಂಗ ಕಾರ್ಯಕ್ರಮದ ಮೂಲಕ ಕಳೆದ ಇಪ್ಪತ್ತು ವರ್ಷಗಳಿಂದ ನಮ್ಮ ಹಳ್ಳಿಗಾಡಿನ ಹೊಲ ಗದ್ದೆ ತೋಟಗಳಲ್ಲಿ ದುಡಿಯುವ ನೇಗಿಲಯೋಗಿಯೊಂದಿಗೆ ತಾದಾತ್ಮ್ಯ ಎಂದು ಕರೆಯಬಹುದಾದಂತಹ ಸಂಪರ್ಕ ಸಾಧಿಸಿಕೊಂಡು ಬಂದಿರುವವರು. ರೇಡಿಯೋ ಮಾಧ್ಯಮ ಹೇಗೆ ಜನಸಾಮಾನ್ಯರ ಸಂಪರ್ಕ ಮಾಧ್ಯಮವಾಗಿ ತನ್ನ ಸಾರ್ಥಕ್ಯವನ್ನು ಕಂಡುಕೊಳ್ಳಬಹುದೆಂಬುದನ್ನು, ಆ ಮಾಧ್ಯಮವನ್ನು ಸರಳವಾಗಿ, ಆದರೆ ಪರಿಣಾಮಕಾರಿಯಾಗಿ ಬಳಸಿತೋರಿಸಿರುವ ಈ ರೇಡಿಯೋ ಮನುಷ್ಯ ತಮ್ಮ ಕೆಲವು ನೆನಪುಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ,

—ಸಂ.

ಕೆಲವು ನೆನಪುಗಳನ್ನು ಬರೆದುಕೊಡಿ ಎಂದು ಆಪ್ತರು ಆಜ್ಞಾಪಿಸಿದರು. ಪ್ರಯತ್ನಗಳು, ಪ್ರಯೋಗಗಳು ಅವೆಷ್ಟೋ. ಅಂತೆಯೇ ನೆನಪುಗಳೂ. ಎಲ್ಲವನ್ನೂ ಹೇಳಹೊರಟರೆ ಗ್ರಂಥವೇ ಆದೀತು. ತಕ್ಷಣಕ್ಕೆ ನೆನಪಿಗೆ ಬಂದ ಕೆಲವನ್ನಷ್ಟೇ ಇಲ್ಲಿ ಗುರುತಿಸಿರುವೆ.

ಆಕಾಶವಾಣಿಯ ರೈತರ ಕಾರ್ಯಕ್ರಮದಲ್ಲಿ ಪ್ರಸಾರ ಮಾಡಲು ಸಂಬಂಧಪಟ್ಟ ಇಲಾಖೆಗಳವರು ಸುದ್ದಿ ಕಳುಹಿಸುತ್ತಾರೆ. ಕೃಷಿ ಇಲಾಖೆಯವರು ಕೆಲವು ಬೆಳೆಗಳ ಸಸ್ಯ ಸಂರಕ್ಷಣೆಗೆ ಬೇಕಾದ ಔಷಧಿಗಳನ್ನು ರೈತರಿಗೆ ರಿಯಾಯ್ತಿ ಬೆಲೆಗೆ

ಕೊಡುತ್ತಾರೆ. ಔಷಧಿಗಳಿವೆ, ಬೇಕಾದವರು ಅರ್ಧ ಬೆಲೆ ಕೊಟ್ಟು ಕೊಂಡು ಕೊಳ್ಳಬಹುದು ಎಂದು ಬರೆದು ಪ್ರಸಾರಕ್ಕಾಗಿ ಕಳುಹಿಸಿದ್ದರು. ಅದನ್ನು ತಪ್ಪದೆ ಮೂರು ದಿವಸ ಪ್ರಸಾರ ಮಾಡಬೇಕೆಂದು ಪತ್ರದಲ್ಲಿ ಸೂಚಿಸಿದ್ದರು. ಮೊದಲನೇ ಎರಡು ದಿವಸ ನನ್ನ ಸಹೋದ್ಯೋಗಿಗಳು ಪ್ರಸಾರ ಮಾಡಿದರು. ಮೂರನೆಯ ದಿನ ಬೆಳಗಿನ ಕಾರ್ಯಕ್ರಮದಲ್ಲಿ ನಾನು ಪ್ರಸಾರ ಮಾಡಿದೆ. ಅಂದೆ ಮಧ್ಯಾಹ್ನ ಕೃಷಿ ಇಲಾಖೆ ನಿರ್ದೇಶನಾಲಯಕ್ಕೆ ಕಾರ್ಯನಿಮಿತ್ತ ಹೋದೆ. ನನ್ನ ಆಪ್ತ ಸ್ನೇಹಿತರು ಆ ಔಷಧಿ ಮಾರುವ ವಿಭಾಗದಲ್ಲಿದ್ದರು. ವಿಶ್ವಾಸಕ್ಕಾಗಿ ನೋಡೋಣವೆಂದು ಹೋದೆ. ಅವರು ಕಾಫಿ ಕೊಡಿಸಿ "ಆಗಲೆ ಒಬ್ಬ ರೈತರು ಬಂದಿದ್ದರು ನಿನ್ನನ್ನು ಬಹಳ ಹೊಗಳಿದರು" ಎಂದರು. ಹೊಗಳಿಕೆ ಯಾರಿಗೆ ಪ್ರಿಯವಲ್ಲ. ನಾನು ಕುತೂ ಹಲದಿಂದ

"ಯಾರು ? ಏನದು ?" ಎಂದು ಕೇಳಿದೆ.

"ಇಲ್ಲಿ ಔಷಧಿ ದೊರೆಯುತ್ತದೆಂದು ರೇಡಿಯೋದಲ್ಲಿ ಹೇಳಿದೆಯಂತೆ"

"ಹೌದು"

"ಆ ರೈತರು ಬಂದು ಔಷಧಿ ಕೇಳಿದರು. ನಿನ್ನೆಯೇ ಮುಗಿದುಹೋಯ್ತೆಂದು ಹೇಳಿದೆ. ಅದಕ್ಕೆ ಅವರು ಏನು ಸ್ವಾಮಿ ಮತ್ತೆ ಅವನ್ಯಾವನೊ ಬೆಳಿಗ್ಗೆ ರೇಡಿ ಯೋದಲ್ಲಿ ನಾಯಿ ಬೊಗಳಿದ ಹಾಗೆ ಹಾಗೆ ಬೊಗಳಿದನಲ್ಲ" ಎಂದರು ಎಂದು ಹೇಳಿ ಗೊಳ್ಳನೆ ನಕ್ಕರು.

ಮತ್ತೆ ಯಾರಾದರು ಬಂದು "ಏನು ಸ್ವಾಮಿ ಕತ್ತೆ ಕಿರುಚಿದಂಗೆ ಕಿರುಚಿದನಲ್ಲ." ಎಂದಾರು ಎಂದು ಅಂಜಿ ಬಂದು ಸಾಯಂಕಾಲದ ಕಾರ್ಯಕ್ರಮದಲ್ಲಿ ಔಷಧ ಮುಗಿದಿದೆ ಎಂದು ಪ್ರಸಾರ ಮಾಡಿದೆ. ರೈತರಿಗಾದ ತೊಂದರೆಗೆ ಮರುಗಿ ಪ್ರಸಾರದ ಪರಿಣಾಮ ಅರಿತು ಒಳಗೊಳಗೆ ಸಂತೋಷವಾಯಿತು.

ಶಿಡ್ಲಘಟ್ಟ ತಾಲ್ಲೂಕಿನ ಮಳ್ಳೂರು ಗ್ರಾಮ ಹೈನುಗಾರಿಕೆಗೆ ನಾಂದಿ ಹಾಡಿದ ಗ್ರಾಮ. ಬಹಳ ಪ್ರಸಿದ್ಧಿ. ಆಗಿನ್ನೂ ಹೈನುಗಾರಿಕೆ ನಮ್ಮಲ್ಲಿ ಅಷ್ಟು ಬೆಳೆದಿರಲಿಲ್ಲ. ಮಳ್ಳೂರಿನ ಹೈನುಗಾರಿಕೆ ಕುರಿತು ಒಂದು ರೂಪಕ ಪ್ರಸಾರ ಮಾಡಿದೆ. ಆ ಗ್ರಾಮದ ಒಬ್ಬ ದುರ್ಬಲರು ಹಸು ಚನ್ನಾಗಿ ಸಾಕಿ 25 ಲೀಟರ್ ಹಾಲು ಕರೆದು ಸ್ಪರ್ಧೆಯಲ್ಲಿ ಒಂದು ಸಾವಿರ ರೂಪಾಯಿ ಬಹುಮಾನ ಪಡೆದಿದ್ದರು. "ಹೆಣ್ಣು ಮಕ್ಕಳ ತಲೆಗೆ ಎಣ್ಣೆ ತರಲು ಚೈತನ್ಯವಿಲ್ಲದೆ ಅವರ ತಲೆ ಬೋಳಿಸಿದ್ದೆ ಸ್ವಾಮಿ. ಈ ಹಸು ಬಂದ

ಮೇಲೆ ನನಗೆ ಭಾಗ್ಯ ಬಂತು" ಮುಂತಾಗಿ ಹೇಳಿದ್ದರು. ರೂಪಕದ ಮಧ್ಯದಲ್ಲಿ ಅವರ ಸಂದರ್ಶನ, ಇಳುವರಿ ಮುಂತಾದುವನ್ನೆಲ್ಲ ಸೇರಿಸಿದ್ದೆ. ರೂಪಕದ ಕೊನೆಯಲ್ಲಿ ಬೆಂಗಳೂರಿನಿಂದ ಮಳ್ಳೂರಿಗೆ ಹೋಗುವ ಮಾರ್ಗ ವಿವರಿಸಿದ್ದೆ. ಆ ರೂಪಕ ಕೇಳಿ ಮೈಸೂರಿನವರು ಮಳ್ಳೂರಿಗೆ ಹೋಗಿದ್ದಾರೆ. ಹಸು ಖರೀದಿ ಮಾಡಲು ಪ್ರಯತ್ನಿಸಿದ್ದಾರೆ. ಅದು ನಮ್ಮ ಭಾಗ್ಯಲಕ್ಷ್ಮಿ ಕೊಡುವುದಿಲ್ಲ ಎಂದಿದ್ದಾರೆ. ಮೈಸೂರಿನವರು ಮಳ್ಳೂರಿನ ಮುಖ್ಯಸ್ಥರನ್ನಿಡಿದು ಪಂಚಾಯಿತಿ ಮಾಡಿಸಿದ್ದಾರೆ. ಮಾಲೀಕರಿಗೆ ಇಕ್ಕಟ್ಟಿನ ಪ್ರಸಂಗವಾಯಿತು. ತಪ್ಪಿಸಿಕೊಳ್ಳಲು ದುಬಾರಿ ಬೆಲೆ ಹೇಳಿದ್ದಾರೆ. ಮೈಸೂರಿನವರಿಗೆ ಹಸುವಿನ ಮೇಲೆ ತುಂಬ ಖಾಯಿಷ್ಟಾಗಿದೆ. ಚೌಕಾಸಿ ಮಾಡದೆ, ಹೇಳಿದ ಬೆಲೆ ಕೊಟ್ಟು ಕೊಂಡು ಕೊಂಡು ಹೋದರು. ಮೈಸೂರಿನಲ್ಲಿ ಅವರ ಹಸು ಹಾಲಿನ ಇಳುವರಿ ಸ್ಪರ್ಧೆಯಲ್ಲಿ ಭಾಗವಹಿಸಿ ಅಲ್ಲಿಯೂ ಒಂದು ಸಾವಿರ ರೂಪಾಯಿ ಬಹುಮಾನ ಗಿಟ್ಟಿಸಿತು. ಮೈಸೂರಿನವರು ನಡದದ್ದನ್ನೆಲ್ಲ ವಿವರಿಸಿ 'ನಿಮಗೆ ವಂದನೆ' ಎಂದು ಪತ್ರ ಬರೆದರು. ಮಳ್ಳೂರಿನವರು 'ನಮ್ಮೂರಿನ ಹಸುಗಳ ವಿಷಯ ಪ್ರಸಾರ ಮಾಡಬೇಡಿ. ಬಹಳ ಜನ ಹಸುಗಳಿಗೆ ಬರುತ್ತಿದ್ದಾರೆ. ಊರಲ್ಲಿ ಹಸುಗಳು ಇಲ್ಲದಂತಾಗುತ್ತದೆ' ಎಂದು ಪತ್ರ ಬರೆದರು. ಅಮೃತ ಸೇವಿಸಿದಷ್ಟು ಆನಂದವಾಯಿತು.

* * *

ತೋಟದಲ್ಲಿ ಮನೆ ಕಟ್ಟಿಸಿಕೊಂಡು ಇರುವುದರ ಪ್ರಯೋಜನಗಳನ್ನು ಕುರಿತು ಕೆಲವು ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದ್ದೆವು. ಸೋರುಣಸೆ ಗ್ರಾಮದ ಶ್ರೀ ನಾರಾಯಣರೆಡ್ಡಿಯವರು ಊರಲ್ಲಿದ್ದ ಮನೆಯನ್ನು ಸೋದರನಿಗೆ ಮಾರಿ, ತೋಟದಲ್ಲಿ ಮನೆ ಕಟ್ಟಿಸಿ, ಒಂದು, ಭೂರಿ ಊಟಕ್ಕೆ ಆಹ್ವಾನಿಸಿದರು. ಮನೆ ಸುತ್ತ ಹೂವಿನ ಗಿಡಗಳು, ಜಮೀನಿನ ತುಂಬ ವಿವಿಧ ಬೆಳೆಗಳು. ಕಣ್ಮನ ತಣಿಸಿದುವು.

ಕನ್ನಡ ಸಾಹಿತ್ಯ ಪರಿಷತ್ತಿನವರು ರಾಜ್ಯಮಟ್ಟದ ಜಾನಪದ ಮೇಳವನ್ನು ಬೆಂಗಳೂರಿನಲ್ಲಿ ಏರ್ಪಡಿಸಿದ್ದರು. ಮೂರು ದಿವಸಗಳ ಅದ್ದೂರಿ ಕಾರ್ಯಕ್ರಮ. ನೂರಾರು ಜನ ಕಲಾವಿದರು. ಹಗಲೆಲ್ಲ ಮೆರವಣಿಗೆ ಮತ್ತು ವಿಚಾರಗೋಷ್ಠಿ. ಸಾಯಂಕಾಲ ಕೋಟೆ ಮೈದಾನದಲ್ಲಿ ಪ್ರದರ್ಶನಗಳು. ಕಿಕ್ಕಿರಿದು ಸೇರಿದ ನಾಗರಿಕರು. ಶ್ರೀ ಸಣ್ಣಲಿಂಗಪ್ಪ ಹೂವಿನಹಡಗಲಿಯ ನಾಟಕದ ಮೇಷ್ಟ್ರು. ಸುಮಾರು 60–65 ವರ್ಷ. ಒಂಟಂಚಿನ ಹಳೆ ಪಂಚೆ, ಹರಿದು ತೇಪೆ ಹಾಕಿದ ಜುಬ್ಬ, ಬೆಳೆದ

ಗಟ್ಟ, ಬೋಳು ತಲೆ, ಬರಿ ಕಾಲು. ಹಾಡಲು ಪ್ರಾರಂಭಿಸಿದರೆ ಅಬ್ಬಬ್ಬ ಎನಿಸು ತ್ತಿತ್ತು. ಅವರು ವಿಚಾರಗೋಷ್ಠಿಯಲ್ಲಿ "ಹನ್ನೆರಡು ವರ್ಷಗಳಿಂದ ನಾಟಕ ಅಭ್ಯಾಸ ಮಾಡಿ ಕಲಿಸುತ್ತಿದ್ದೇನೆ. ಹೊಟ್ಟೆ ಬಟ್ಟೆ ತುಂಬಲಿಲ್ಲ. ಇದ್ದೊಬ್ಬ ಮಗನಿಗೆ ನಾಲ್ಕು ಅಕ್ಷರ ಕಲಿಸಲು ಸಾಧ್ಯವಾಗಲಿಲ್ಲ. ಈಗ ಊಟಕ್ಕೆ ತಾಪತ್ರಯವಾಗಿದೆ. ಸರ್ಕಾರ ಒಂದು ಹಾರ್ಮೋನಿಯಂ ಕೊಡಿಸಿದರೆ ನಾಟಕದ ಹಾಡು ಕಲಿಸಿ ಜೀವನ ಕ್ಕೆ ಮಾರ್ಗ ಮಾಡಿಕೊಳ್ಳುತ್ತೇನೆ" ಎಂದು ಹೇಳಿದರು. ಪಕ್ಕದಲ್ಲಿ ಎಳೆ ವಯ ಸ್ಸಿನ ಮಗನು ಇದ್ದ. ಕೇಳಿದವರ ಕರುಳು ಕಿತ್ತು ಬರುವಂತಿತ್ತು. ಮೂರು ದಿವ ಸಗಳ ಎಲ್ಲ ಕಾರ್ಯಕ್ರಮಗಳ ತುಣುಕುಗಳನ್ನು ನೇಯ್ದು ಒಂದು ಗಂಟೆ ಕಾರ್ಯ ಕ್ರಮ ಪ್ರಸಾರಕ್ಕೆ ಸಜ್ಜು ಮಾಡಿದೆ. ಅದರಲ್ಲಿ ಒಂದು ಕಡೆ ಶ್ರೀ ಸಣ್ಣಲಿಂಗಪ್ಪ ನವರ ಸ್ವರ. ನಂತರ ಅವರು ಹೇಳಿದ ಮಾತುಗಳು, ಮತ್ತೆ ಸ್ವಲ್ಪ ಅವರ ಸ್ವರ ಸೇರಿಸಿದ್ದೆ. ಜಯನಗರದ ಡಾ॥ ಸುಬ್ರಹ್ಮಣ್ಯಂರವರು ಕಾರ್ಯಕ್ರಮ ಕೇಳಿ, ಆ ತಕ್ಷಣವೆ ನನಗೆ ಒಂದು ಪತ್ರ ಬರೆದಿದ್ದರು. ಕಾರ್ಯಕ್ರಮ ಬಹಳ ಸೊಗಸಾಗಿ ತ್ತು. ಎಲ್ಲ ಕಲಾವಿದರು ನನ್ನ ಹಾಸಿಗೆಯ ಪಕ್ಕದಲ್ಲೇ ಬಂದಂತೆ ಭಾಸವಾಯಿತು. ಶ್ರೀ ಸಣ್ಣಲಿಂಗಪ್ಪನವರ ಕಥೆ ಕೇಳಿ ತುಂಬ ವ್ಯಥೆಯಾಯಿತು. ಎಷ್ಟು ಹಣವಾ ದರು ನಾನು ಕೊಡುತ್ತೇನೆ. ಏರ್ಪಾಟು ಮಾಡಿ ಎಂದು ಪತ್ರದಲ್ಲಿ ಬರೆದಿದ್ದರು. ಪರಿಷತ್ತಿನ ಅಧ್ಯಕ್ಷರು ನಾನು ಸೇರಿ ಹಾರ್ಮೋನಿಯಂ ಮಾಡಿಸಿ ಬೆಲೆ ಎಂಟು ನೂರು ಎಂದು ಅವರ ಮನೆಗೆ ಹೋಗಿ ತಿಳಿಸಿದೆವು. ವಿಶ್ವಾಸದಿಂದ ಮಾತನಾಡಿಸಿ, ಕುಡಿಯಲು ಹಾಲು ಕೊಟ್ಟು, ಒಂದೂ ಮಾತೂ ಆಡದೆ, ಕಿಸೆಯಿಂದ ನೂರು ರೂಪಾಯಿಗಳ ಕಂತೆ ತೆಗೆದು ಪಟ ಪಟನೆ ಎಣಿಸಿ ಎಂಟು ನೋಟು ನೀಡಿದರು. ಒಂದು ವಿಶೇಷ ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಪ್ರಸಾರ ಮತ್ತು ವಾರ್ತಾ ಸಚಿವರಾಗಿದ್ದ ಶ್ರೀ ಎಲ್. ಕೆ. ಅಡ್ವಾನಿ ಅವರ ಅಮೃತ ಹಸ್ತದಿಂದ ಶ್ರೀ ಸಣ್ಣ ಲಿಂಗಪ್ಪನವರಿಗೆ ಒಪ್ಪಿಸಲಾಯ್ತು. ಡಾ॥ ಸುಬ್ರಹ್ಮಣ್ಯಂರವರನ್ನು ಸಮಾರಂಭಕ್ಕೆ ಆಹ್ವಾನಿಸಲು ಹೋದಾಗ "ಅದೆಲ್ಲ ಬೇಡ. ಅದರಿಂದ ಅವರ ಜೀವನಕ್ಕೆ ಸಹಾ ಯವಾದರೆ ಸಾಕು" ಎಂದರು. ಶ್ರೀ ಸಣ್ಣಲಿಂಗಪ್ಪನವರು ಡಾಕ್ಟರ ಮನೆಗೆ ಹೋಗಿ ನಮಸ್ಕರಿಸಿ ಬಂದರು. ಅವರು ಈಗಲು ಆಗಾಗ್ಗೆ ಪತ್ರ ಬರೆಯುತ್ತಿರುತ್ತಾರೆ.

ಶಿವಮೊಗ್ಗದ ದೇವಂಗಿ ಆರ್. ಪ್ರಫುಲ್ಲಚಂದ್ರರು ಒಬ್ಬ ಪ್ರಗತಿಪರ ರೈತರು. ಕಬ್ಬಿನ ಬೆಳೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಥಮ ಬಹುಮಾನಗಳನ್ನು ಪಡೆದಿದ್ದಾರೆ. ನಮ್ಮ ರಾಜ್ಯದ ಖ್ಯಾತ ಪತ್ರಿಕೆಯೊಂದು ಅವರೊಡನೆ ಸಂದರ್ಶನ ಕಾರ್ಯಕ್ರಮ ಪ್ರಕಟಿಸಿತ್ತು.

"ಅಸ್ವಸ್ಥನಾಗಿ ಆಸ್ಪತ್ರೆಯಲ್ಲಿ ಮಲಗಿದ್ದೆ. ರೇಡಿಯೊ ಪಕ್ಕದಲ್ಲಿಟ್ಟುಕೊಂಡಿದ್ದೆ. ಒಬ್ಬ ರೈತರು ಕಬ್ಬಿನ ಬೆಳೆ ವಿಷಯವಾಗಿ ಬಹಳ ಚನ್ನಾಗಿ ತಮ್ಮ ಅನುಭವ ಹೇಳುತ್ತಿದ್ದರು. ಅದನ್ನು ಕೇಳಿ ನನಗೂ ಸ್ಫೂರ್ತಿ ಬಂತು. ನಾನು ಏಕೆ ಪ್ರಯತ್ನಿಸಬಾರದೆಂದು ಪ್ರಯತ್ನಿಸಿ ಬೆಳೆಯಲು ಪ್ರಾರಂಭಿಸಿದೆ. ರಾಜ್ಯ, ರಾಷ್ಟ್ರಮಟ್ಟದ ಬಹುಮಾನಗಳು ದೊರಕಿದವು" ಎಂದು ಹೇಳಿದ್ದು ಆ ಸಂದರ್ಶನದಲ್ಲಿತ್ತು. ಶ್ರೀ ಪ್ರಫುಲ್ಲರು ಬೆಂಗಳೂರಿಗೆ ಬಂದಾಗಲೆಲ್ಲ ಆಕಾಶವಾಣಿಗೆ ಬರದೆ ಹಿಂತಿರುಗವುದಿಲ್ಲ.

* " *

ಒಂದು ಸಾರಿ ನಮ್ಮೂರಿನಿಂದ ಬೆಂಗಳೂರಿಗೆ ಬಸ್ಸಿನಲ್ಲಿ ಬರುತ್ತಿದ್ದೆ. ಜೋರಾಗಿ ಮಳೆ ಬಿದ್ದಿದೆ. ಬಸ್ಸಿನೊಳಗೆ ಜನವೋಜನ. ಬಸ್ಸಿನ ಮೇಲೆ ಭರ್ತಿ ಲಗ್ಗೇಜು. ಬಸ್ಸು ಕಿರಕಿರಾಂತ ಶಬ್ದ ಮಾಡುತ್ತದೆ. ಸ್ವಲ್ಪ ಹಳೇ ವಾಹನ. ಒಂದು ಹಳ್ಳ ಇಳಿದು ಏರಿ ಹತ್ತಬೇಕು, ಮುಂದಿನ ಒಂದು ಚಕ್ರ ಹೂತುಕೊಂಡಿತು. ಏನೇ ಮಾಡಿದರು ಮುಂದಕ್ಕೆ ಸಾಗಲಿಲ್ಲ. ಪ್ರಯತ್ನಿಸಿದಷ್ಟು ಚಕ್ರ ಮತ್ತಷ್ಟು ಕೆಳಗಿಳಿಯಿತು. ಮುಚ್ಚಂಜೆ ಸಮಯ. ಒಬ್ಬ ಪ್ರಯಾಣಿಕರು ಬಸ್ಸಿನಿಂದಿಳಿದು ಬಡ ಬಡನೆ ಓಡಿ ಹೋದರು. ಬಸ್ ಛಾರ್ಜ್ ಉಳಿಸಲು ಪ್ರಯತ್ನಿಸಿದರೇನೊ ಎನಿಸಿತು. ಎಲ್ಲರೂ "ಯೋ ಯೋ" ಎಂದು ಕೂಗಿದರು. ಸ್ವಲ್ಪ ಸಮಯದ ನಂತರ ಕೈಯಲ್ಲಿ ಸನಿಕೆ ಹಿಡಿದು, ಒಬ್ಬರನ್ನು ಜೊತೆಯಲ್ಲಿ ಕರೆದುಕೊಂಡು ಬಂದರು. ಸಮೀಪದಲ್ಲಿ ಗ್ರಾಮವೊಂದಿತ್ತು. ತಾವೆ ಸನಿಕೆ ಹಿಡಿದು, ಮಣ್ಣು ತೆಗೆದು, ವಾಹನ ಮುಂದೆ ಚಲಿಸುವಂತೆ ಮಾಡಿದರು. ಬಟ್ಟೆಯೆಲ್ಲ ಕೆಸರಾಯ್ತು, ನೋಡಲಾಗಲಿಲ್ಲ. ನಂತರ ಬಸ್ಸಿಗೆ ಪ್ರವೇಶಿಸಿದರು. ಬಸ್ಸು ಮುಂದೆ ಸಾಗಿತು. ನಾನು ಪ್ರಯಾಸಪಟ್ಟು ಸಮೀಪಕ್ಕೆ ಹೋಗಿ "ಏನ್ರಿ, ಏಕೆ ಓಡಿಹೋಗಿ ಆಯುಧ ತಂದು ಹಾಗೆ ಮಾಡಿದಿರಿ ? ಬೇರೆಯವರೆಲ್ಲ ಸುಮ್ಮನಿರಲಿಲ್ಲವೇ ? ನೀವೇಕೆ ಹಾಗೆ ಮಾಡಿದಿರಿ ? ಇದೇನಿದು ಅವಸ್ಥೆ ?" ಎಂದೆ. ಅದಕ್ಕೆ ಅವರು "ಬಸ್ಸಿನ ಮೇಲೆ ತರಕಾರಿ ಮೂಟೆ ಹಾಕಿದ್ದೇನೆ ಸಾರ್. ಒಂಭತ್ತು ಗಂಟೆ ಒಳಗೆ ಮಾರ್ಕೇಟ್ ಒಳಗೆ ಹೋಗದಿದ್ದರೆ, ಮಾರ್ಕೆಟ್ಟಿನ ಗೇಟ್ ಹಾಕಿ ಬಿಡುತ್ತಾರೆ. ಹೊರಗೆ ತರಕಾರಿ ಮೂಟೆ ಇಟ್ಟುಕೊಂಡು ಜೂಗರಿಸಬೇಕು. ಆಗ ರೌಡಿಗಳು ಎಲ್ಲಾ ಬಾಚಿಕೊಂಡು ಹೋಗ್ಬಿಡ್ತಾರೆ. ಅದಕ್ಕಾಗಿ ಬಸ್ಸು ವೇಗವಾಗಿ ಹೋಗ್ಲೀಂತ ಅಂಗೆ ಮಾಡಿದೆ" ಎಂದರು. ಆ ಮಾತು ಕೇಳಿ ನನಗಾದ ಸಂಕಟ ವರ್ಣಿಸುವಷ್ಟು ಶಕ್ತಿ ನನಗಿಲ್ಲ.

ಮರುದಿನದಿಂದ ಮೂರು ದಿವಸ ಕೃಷ್ಣರಾಜೇಂದ್ರ ಮಾರುಕಟ್ಟೆ ಗೇಟು ಬಳಿ

ರಾತ್ರಿ ಪತ್ತ್ರರವರೆಗೂ ನಿಂತು ಪರಿಸ್ಥಿತಿ ಗಮನಿಸಿದೆ. ಆಗ ಶ್ರೀ ಎಂ. ಚಂದ್ರಶೇಖರ್ ಪೋಲೀಸ್ ಕಮೀಷನರ್ ಆಗಿದ್ದರು. ಹೋಗಿ ಸಂದರ್ಶನಕ್ಕೆ ಆಹ್ವಾನಿಸಿ ಪ್ರಸಾರ ಮಾಡಿದೆ. ಅವರು ಪೋಲೀಸಿನವರನ್ನು ಕಳುಹಿಸಿ ಐವತ್ತು ಜನ ರೌಡಿಗಳನ್ನು ದಸ್ತಗಿರಿ ಮಾಡಿಸಿದರು. ತದನಂತರ ವಾರ ಕಾಲ ಅಲ್ಲಿ ಅಂತಹ ಹಾವಳಿ ಇರಲಿಲ್ಲ. ನಂತರ ಮತ್ತೆ ಪ್ರಾರಂಭವಾಯಿತು.

ಅದೇ ರೀತಿ, ಬೆಂಗಳೂರು ನಗರಸಭೆ ಕಮೀಷನರ್‌ರವನ್ನು ಸಂದರ್ಶನಕ್ಕೆ ಆಹ್ವಾನಿಸಲು ಪ್ರಯತ್ನಿಸಿದೆ. ಒಂದು ವರ್ಷವಾಯ್ತು ಶ್ರೀ ಎಸ್. ನಂಜುಂಡಯ್ಯನವರು ಕಮೀಷನರ್ ಆದಮೇಲೆ ದಯಮಾಡಿ ಬಂದರು. ಸಂದರ್ಶಿಸಿ ಪ್ರಸಾರ ಮಾಡಿದೆ. ಮಾರ್ಕೆಟ್ ಚೊಕ್ಕಟ ಮಾಡಲು ನನಗೆ ಸಮಯಬೇಕು. ಅದಕ್ಕಾಗಿ ಒಂಭತ್ತಕ್ಕೆ ಮುಚ್ಚುತ್ತೇವೆ ಎಂದರು. ಮಂಕರಿಗೆ ಒಂದು ಪೈಸೆ ಜಾಸ್ತಿ ಸುಂಕ ಹಾಕಿ. ಬರುವ ಹೆಚ್ಚಿನ ಹಣದಿಂದ ಹೆಚ್ಚು ಜನ ನೇಮಿಸಿ ಬೇಗ ಚೊಕ್ಕಟ ಮಾಡಿಸಿ. ಜಾಸ್ತಿ ಕಾಲ ಮಾರ್ಕೆಟ್ ಗೇಟ್ ತೆಗೆಸಿಡಿ ಎಂದು ಸಂದರ್ಶಿಸಿದೆ. ಸುಂಕ ಜಾಸ್ತಿ ಮಾಡದೆ ರಾತ್ರಿ ಹತ್ತು ಗಂಟೆವರೆಗು ತೆಗೆದಿಡುವಂತೆ ಆಜ್ಞೆ ಮಾಡಿದರು. ಅನೇಕ ರೈತರು ಆಕಾಶವಾಣಿಗೆ ಖುದ್ದಾಗಿ ಬಂದು ತುಂಬ ಉಪಕಾರವಾಯ್ತು ಎಂದು ಹೇಳಿದರು.

*   *   *

ತರೀಕೆರೆ ತಾಲ್ಲೂಕಿನಲ್ಲಿ ಒಮ್ಮೆ, ಒಬ್ಬ ರೈತರ ಮನೆಯಲ್ಲಿ ತಂಗಬೇಕಾಯ್ತು. ಊಟ ಮಾಡಿ ಕೂತು ಮಾತನಾಡುತ್ತಿದ್ದಾಗ "ಡ್ಯಾಮ್‌ನಲ್ಲಿ (ಭದ್ರಾಜಲಾಶಯದಲ್ಲಿ) ನೀರೆಷ್ಟಿದೆಯೊ ಗೊತ್ತಿಲ್ಲ. ಈ ಸಾರಿ ನೀರು ಕೊಡುತ್ತಾರೊ ಇಲ್ಲವೊ" ಎಂದು ಕೊರಗಿದರು. ಬೆಂಗಳೂರಿಗೆ ಹಿಂತಿರುಗಿದ ಮೇಲೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು, ಚರ್ಚಿಸಿ, ಎಲ್ಲ ಮುಖ್ಯ ಜಲಾಶಯಗಳಲ್ಲಿ ನೀರಿನ ಮಟ್ಟವನ್ನು ಪ್ರತಿದಿನ ಟೆಲಿಗ್ರಾಂ ಮೂಲಕ ಕಳುಹಿಸಿ ಕೊಡುವಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ವಿನಂತಿಸಿಕೊಂಡೆವು. ಒಪ್ಪಿ ಕಳುಹಿಸುತ್ತಿದ್ದಾರೆ. ಪ್ರತಿ ದಿನ ಅದರಲ್ಲೂ ಬೇಸಿಗೆಯಲ್ಲಿ ರೈತರಿಗೆ ಇದು ಒಳ್ಳೆ ಸುದ್ದಿ.

'ತಮಸ್' ನ ಜ್ಯೋತಿ

● ಗುಲ್‌ಶನ್ ತನೇಜಾ

ಭೀಷ್ಮ ಸಾಹ್ನಿಯವರ ಕಾದಂಬರಿಯನ್ನು ಆಧರಿಸಿ ಗೋವಿಂದ ನಿಹಲಾನಿ ನಿರ್ಮಿಸಿದ ಟೆಲಿಚಿತ್ರ ತಮಸ್ ಇತ್ತೀಚೆಗೆ ದೂರದರ್ಶನದಲ್ಲಿ ಧಾರಾವಾಹಿಯಾಗಿ ಪ್ರಸಾರವಾಗಿ ಅನೇಕ ಬಗೆಯ ವಾದ-ವಿವಾದ ಹಾಗೂ ಆಲೋಚನೆ- ಪ್ರತಿಕ್ರಿಯೆಗಳನ್ನು ಎದುರ್ಗೊಂಡಿದೆ, ಇವುಗಳೆಲ್ಲದರ ಹಿನ್ನೆಲೆಯಲ್ಲಿ, 'ತಮಸ್' ನಂತಹ ರಾಜಕೀಯ ಚಿತ್ರವನ್ನು ಅದರ ಧೋರಣೆ ಹಾಗೂ ಕಲಾತ್ಮಕತೆಗಳೆರಡನ್ನೂ ಗಮನದಲ್ಲಿರಿಸಿಕೊಂಡು ಅವಲೋಕಿಸುವ ಒಂದು ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ ಮೂಲ ಇಂಗ್ಲೀಷ್‌ನ ಈ ಲೇಖನವನ್ನು ಕನ್ನಡಿಸಿಕೊಟ್ಟವರು ಎಂ. ಅಬ್ದುಲ್ ರೆಹಮಾನ್ ಪಾಷಾ ಅವರು,

ಗೋವಿಂದ ನಿಹಲಾನಿ ಅವರ 'ತಮಸ್' ದೂರದರ್ಶನದಲ್ಲಿ ಇತ್ತೀಚೆಗೆ ಐದು ಗಂಟೆ ಅವಧಿಯ ಧಾರಾವಾಹಿಯಾಗಿ ಪ್ರಸಾರವಾಯಿತು. ಇದರ ಯಶಸ್ಸು ಇರುವುದು ಇದು ಭಾರತದ ಇತ್ತೀಚಿನ ಐತಿಹಾಸಿಕ ಸಂಗತಿಗಳ ಪ್ರಾಮಾಣಿಕ ಚಿತ್ರಣವಾಗಿತ್ತು ಎಂಬುದರಲ್ಲಾಗಲೀ, ಹೀಗೆ ಬೆತ್ತಲೆಗೊಂಡ ವಾಸ್ತವಗಳಿಂದಾಗಿ ವಿವಿಧ ಬಣ್ಣ, ಬಣ್ಣಗಳ ರಾಜಕೀಯ ಧಾರ್ಮಿಕ ವರ್ಗಗಳಲ್ಲಿ ಅದು ಉದ್ದೀಪನಗೊಳಿಸಿದ ಪ್ರಕೋಪದ ಪ್ರಮಾಣದಲ್ಲಾಗಲೀ ಅಲ್ಲ. ಸರ್ವೋಚ್ಚ ನ್ಯಾಯಾಲಯದವರೆಗೂ ಮುಟ್ಟಿದ ವಿವಾದಗಳ ಕಾವು ಹಾಗೂ ಸಾರ್ವಜನಿಕ ಪ್ರತಿಭಟನೆ ಮತ್ತು ರಾಜಕೀಯ ಮೆರವಣಿಗೆಗಳಿಗೆ ಪ್ರಚೋದನೆ ನೀಡಿದ ಜಾತೀಯ ಭಿನ್ನಾಭಿಪ್ರಾಯಗಳ ಅಬ್ಬರ ಅಡಗಿದಾಗ, ಮಾಧ್ಯಮಗಳ ತೀಕ್ಷ್ಣ ಬೆಳಕು ಕುಂದಿದಾಗ– 'ತಮಸ್' ಕೇವಲ ಪ್ರಸ್ತುತ ಸಾಮಾಜಿಕ ರಾಜಕೀಯ ವಾತಾವರಣಕ್ಕೆ ಒಂದು ಅಡಿ ಟಿ-ಣಿ ಮಾತ್ರ ಆಗಿರದೆ ಒಂದು ಮಹತ್ವಪೂರ್ಣ ಕಲಾಕೃತಿಯಾಗಿ ವಿಜೃಂಭಿಸುವುದ

ನ್ನು ಕಾಣುತ್ತೇವೆ. 'ತಮಸ್'ನ ಕಲಾತ್ಮಕ ಮತ್ತು ಚಲಚಿತ್ರಿಕ ಮೌಲ್ಯಗಳು ಗೊಡ್ಡು ಪ್ರತ್ಯೇಕತೆಯಲ್ಲಿ ನಿಲ್ಲುವುದಿಲ್ಲ ಎಂಬುದು ಗಮನಾರ್ಹ.

ಹರಿಜನ ಜಾತಿಗೆ ಸೇರಿದ ನತ್ಥು (ಓಂಪುರಿ) ತಾನು ಕದ್ದು ತಂದ ಹಂದಿಯನ್ನು ಅವುಚಿ ಹಿಡಿದುಕೊಂಡಿರುವ ದೃಶ್ಯದಿಂದ 'ತಮಸ್' ಆರಂಭವಾಗುತ್ತದೆ. ಠೇಕೆದಾರ (ಪಂಕಜ್‌ಕಪೂರ್) ಅವನಿಗೆ ಆ ಹಂದಿಯನ್ನು ಕೊಲ್ಲಲು ಹೇಳಿರುತ್ತಾನೆ. ಊರ ಆಸ್ಪತ್ರೆಯಲ್ಲಿ ಡಿಸೆಕ್ಷನ್‌ಗಾಗಿ ಬೇಕು ಎಂಬ ಕಾರಣ ನೀಡಲಾಗಿರುತ್ತದೆ. ನಂತರ ನೋಡಿದರೆ ಅದೇ ಹಂದಿಯ ತಲೆ ಕತ್ತರಿಸಿದ ಮುಂಡವನ್ನು ಒಂದು ಮಸೀದಿಯ ಮೆಟ್ಟಿಲುಗಳ ಮೇಲೆ ಎಸೆದಿರುವುದು ಕಂಡುಬರುತ್ತದೆ. ಪರಿಣಾಮ ಇಡೀ ಊರು ಮತ್ತದರ ನತದೃಷ್ಟ ವಾಸಿಗಳು ಕೋಮು ಸಂಕ್ಷೋಭೆಯ ಹಿಡಿತಕ್ಕೆ ಸಿಲುಕುತ್ತಾರೆ. ಕಂಗಾಲಾದ ನತ್ಥುಗೆ ತಾನು ತನಗೇ ಅರಿವಿಲ್ಲದೆ ಪುಂಡರ ಕೈಯ ಸಾಧನವಾದದ್ದು ತಿಳಿಯುತ್ತದೆ.

ಮಸೀದಿಯನ್ನು ಭ್ರಷ್ಟಗೊಳಿಸಿದುದರ ಪ್ರತಿಯಾಗಿ ಒಂದು ಹಸುವಿನ ಕೊಲೆಯಾಗುತ್ತದೆ. ಧರ್ಮದ ಪವಿತ್ರ ಕೇಂದ್ರಗಳು ಯುದ್ಧ ಶಿಬಿರಗಳಾಗುತ್ತವೆ. ಒಂದು ಜಾತಿಯವರು ಇನ್ನೊಂದು ಜಾತಿಯ ತಮ್ಮ ಹಳೆಯ ಗೆಳೆಯರ ಮೇಲೂ ದ್ವೇಷ ಕಾರಲು ತೊಡಗುತ್ತಾರೆ. ಒಬ್ಬ ಕರ್ಮಠ ಹಿಂದೂ ಯುವಕ, ಅತ್ತರು ಮಾರುವ ಒಬ್ಬ ಮುಸ್ಲಿಂ ಮುದುಕನನ್ನು ಇರಿದು ಕೊಲ್ಲುತ್ತಾನೆ. ಹಿಂದೂವೊಬ್ಬನ ಹೆಣ ಹೊಳೆಯ ಸೇತುವೆಯ ಮೇಲೆ ಸಿಗುತ್ತದೆ. ಊರು ಹೊತ್ತಿಕೊಂಡು ಉರಿಯುತ್ತದೆ.

ಜಲಾಲಬಾದ್ ಜ್ವಲಿಸುತ್ತಿರುವಾಗ ಬ್ರಿಟೀಷ್ ಅಧಿಕಾರಿಗಳು, ಕಾಂಗ್ರೆಸ್ಸಿಗರು ಮುಸ್ಲಿಂ ಲೀಗ್ ನಾಯಕರು, ನೆಮ್ಮದಿಯಾಗೇ ಇರುತ್ತಾರೆ. ಇತ್ತ ಜನರ ಸಾಮೂಹಿಕ ವಲಸೆ ಆರಂಭವಾಗುತ್ತದೆ. ನತ್ಥು ತನ್ನ ಮುದಿ ತಾಯಿ ಹಾಗೂ ಗರ್ಭಿಣಿ ಹೆಂಡತಿ (ದೀಪಾಸಾಹಿ)ಯೊಂದಿಗೆ ಊರು ಬಿಟ್ಟು ಹೊರಡುತ್ತಾನೆ. ದಾರಿಯಲ್ಲಿ ತಾಯಿ ಸಾಯುತ್ತಾಳೆ. ಹೆಂಡತಿ, ಕರ್ಮೊ ಬೆಳಿಗ್ಗೆ ಎದ್ದಾಗ ಅವಳ ಕೈ ಸತ್ತ ಮುದುಕಿಯ ಜಡ ಕೈಯ ಹಿಡಿತದಲ್ಲಿರುತ್ತದೆ. ತನ್ನ **ಕುರೊಸಾವಿಯ** ಔನ್ನತ್ಯದಿಂದಾಗಿ ಹಾಗೂ ಭಯ ಹುಟ್ಟಿಸುವ ವೈಶಾಲ್ಯದಿಂದಾಗಿ ಮಾನವ ದುರಂತವನ್ನು ನಿಕೃಷ್ಟ ಪ್ರಮಾಣಕ್ಕೆ ಇಳಿಸಿಬಿಡುವಂತಹ ನಿರ್ಜನ ಪ್ರದೇಶದಲ್ಲಿ ತಾಯಿಯ ಶವಸಂಸ್ಕಾರವಾಗುತ್ತದೆ.

ಈಗ ನತ್ಥು ಮತ್ತು ಕರ್ಮೊರಷ್ಟೆ ಅಸಹಾಯಕರಾದ ಇನ್ನಷ್ಟು ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಮುದುಕ ಸರ್ದಾರ್ ಹರನಾಮ್ ಸಿಂಗ್ (ಭೀಷ್ಮ ಸಾಹ್ನಿ) ಮತ್ತು ಆತನ ಹೆಂಡತಿ ಬಂಟೊ (ದೀನಾ ಪಾಠಕ್)– ಇವರು ತಮ್ಮ ಅಂಗಡಿಗೆ ಮನೆಗೆ ಬಂಡುಕೋರರು ಬೆಂಕಿ ಇಡುತ್ತಿರುವಾಗ ತಪ್ಪಿಸಿಕೊಂಡು, ಕಾಡಿನ ಮೂಲಕ ಓಡಿ, ತನ್ನ ಗರ್ಭಿಣಿ ಹೆಂಡತಿಗಾಗಿ ಸಹಾಯ ಬೇಡುತ್ತಾ ಕಂಗಾಲಾಗಿರುವ ನತ್ಥುವನ್ನು ಭೇಟಿಯಾಗುತ್ತಾರೆ. ಕೊನೆಗೆ ಅವರಿಗೆ ಸೈಯದ್‌ಪುರದ ಒಂದು ಗುರುದ್ವಾರದಲ್ಲಿ ಆಶ್ರಯ ಸಿಗುತ್ತದೆ.

ಪಕ್ಕದ ಹಳ್ಳಿಯಿಂದ ನುಗ್ಗಿಬರುವ ಗಲಭೆಕೋರರ ಗುಂಪೊಂದು ತಮ್ಮ ಸಾಂಪ್ರದಾಯಿಕ ಶತ್ರುಗಳಾದ ಸಿಖ್ಖರೊಂದಿಗೆ ಹಳೆಯ ಸೇಡನ್ನು ತೀರಿಸಿಕೊಳ್ಳುತ್ತಾರೆ. ಎರಡು ದಿನಗಳ ಕಾಲ ಹೊಡೆದಾಟ ನಡೆಯುತ್ತದೆ. ಅಲ್ಲಿಯ ಸಮುದಾಯದ ಹೆಚ್ಚು ಕಡಿಮೆ ಎಲ್ಲ ಗಂಡಸರೂ ಸಾಯುತ್ತಾರೆ. ಹೆಂಗಸರು ಹಳ್ಳಿಯ ಬಾವಿಗೆ ಹಾರಿ ತಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳುತ್ತಾರೆ.

ನಿರಾಶ್ರಿತರ ಶಿಬಿರದಲ್ಲಿ ಕರ್ಮೊ ನತ್ಥುವಿನ ಹೆಣವನ್ನು ಗುರ್ತಿಸುತ್ತಾಳೆ. ಸ್ವಲ್ಪ ಹೊತ್ತಿನಲ್ಲೆ ಅವಳು ಮಗುವಿಗೆ ಜನ್ಮ ನೀಡುತ್ತಾಳೆ. ಹಸುಳೆಯ ಅಳು 'ಅಲ್ಲಾ ಹೋ ಅಕ್ಬರ್', 'ಹರ ಹರ ಮಹಾದೇವ' ಘೋಷಣೆಗಳ ಭೀಕರ ಕೂಗಾಟದಲ್ಲಿ ಬೆರೆತು ಹೋಗುತ್ತದೆ.

'ತಮಸ್' ಚಿತ್ರದ ವಸ್ತು ಏನು ? ಅದು ಎಬ್ಬಿಸಿರುವ ಅಭೂತಪೂರ್ವ ಗದ್ದಲವನ್ನು ಬಿಟ್ಟರೆ ಅದರ ವಸ್ತುವಿನ ಕುರಿತು ಯಾವುದೇ ಅರ್ಥಪೂರ್ಣ ಚರ್ಚೆ ಆಗಿರುವುದು ಅಪರೂಪ. ಅದನ್ನು ಸಮಗ್ರ ಚೌಕಟ್ಟಿನಲ್ಲಿ ಇಟ್ಟು ವಿಶ್ಲೇಷಣೆ ಮಾಡುವುದರ ಬದಲಿಗೆ ಅದರ ಪ್ರತ್ಯೇಕ ಭಾಗಗಳ ಕುರಿತಾಗಿ ಮೇಲು ಮೇಲಿನ ಅಭಿಪ್ರಾಯಗಳು ಹಾಗೂ ಪೊಳ್ಳು–ಆದರೂ ತೀವ್ರವಾದ– ಪ್ರತಿಕ್ರಿಯೆಗಳು ಕಂಡುಬಂದಿವೆ.

ಪ್ರಖ್ಯಾತ ರಾಜಕೀಯ ವ್ಯಾಖ್ಯಾನಕಾರ ಎಂ. ಜೆ. ಅಕ್ಬರ್ ಬರೆಯುತ್ತಾರೆ:

'ಈ ಚಿತ್ರ ಕೋಮುವಾದಿಗಳ ಕುತಂತ್ರವನ್ನು ಪದರ ಪದರವಾಗಿ ಬಿಡಿಸಿ ತೋರಿಸುವ ಕೈದೀಪ ಅವರಲ್ಲಿ ಮೂಡಿರುವ ಭೀತಿ ಒಂದು ಅರ್ಥದಲ್ಲಿ ತುಂಬಾ ಕುತೂಹಲ

ಕರವಾದುದು. ಸತ್ಯದ ಎದುರು ಇವರೆಲ್ಲ ಹೇಗೆ ಕೌಚಿಕೊಂಡು ಬಿಡುತ್ತಾರೆ ನೋಡಿ! ಹೇಗೆ ಒಬ್ಬರ ಕೌದಿಯ ಅಡಿಯಲ್ಲಿ ಇನ್ನೊಬ್ಬರು ಆಶ್ರಯ ಪಡೆಯುತ್ತಾರೆ ನೋಡಿ! ಹಿಂದೂಗಳು, ಮುಸಲ್ಮಾನರು, ಸಿಖ್ಖರು ಇವರೆಲ್ಲರೂ ಒಂದು ಉದ್ದೇಶಕ್ಕಾಗಿ ಒಟ್ಟಾಗುತ್ತಾರೆ, ಅದೆಂದರೆ ಭಾರತದ ಜನತೆ ತಮ್ಮ ಕುರಿತು ನಿಜವನ್ನು ಅರಿಯದಂತೆ ತಡೆಗಟ್ಟಲು".

ಬೇರೆ ಬೇರೆ ಕಡೆ ಪ್ರಕಟವಾದ ಹಲವಾರು ಕಟು ಟೀಕೆಗಳು ಇದೇ ಜಾಡನ್ನು ಹಿಡಿದಿವೆ. ಕೋಮುವಾದಿ ಶಕ್ತಿಗಳನ್ನು ಒಂದೇ ಏಟಿನಲ್ಲಿ ಬಯಲು ಮಾಡಿದ ಅನನ್ಯ ಸಾಹಸಕ್ಕಾಗಿ ನಿಹಲಾನಿಯವರನ್ನು ಕೊಂಡಾಡಲಾಗಿದೆ ಕೂಡಾ.

ಪ್ರತಿಕ್ರಿಯೆ ರಾಜಕೀಯ ಪ್ರೇರಿತವಲ್ಲದಿರುವ ಕಡೆ ಅದು ಸಾಮಾಜಿಕ–ಮಾನಸಿಕ ರೂಪವನ್ನು ತಳೆದಿದೆ.

"ಈ ಧಾರಾವಾಹಿಯನ್ನು ನೋಡಿದ ಕೂಡಲೇ ಉಂಟಾಗುವ ಅತ್ಯುತ್ಸಾಹದಲ್ಲಿ.... ವೀಕ್ಷಕರಿಗೆ ಇದು ಈವರೆಗೆ ತಮ್ಮ ಅರಿವಿಗೆ ಬಾರದೆಯೇ ಇದ್ದಿದ್ದ ಸಂಗತಿಯೊಂದರ ಭೀಷಣ ಪುನಾರಚನೆಯಂತೆ ಭಾಸವಾಗುತ್ತದೆ" (ಅಮಲೇಂದು ದಾಸಗುಪ್ತ)
ಚಂದನ್‌ಮಿತ್ರ 'ತಮಸ್' ಅನ್ನು ನಿರರ್ಥಕ ಎಂದೂ ಕರೆದಿದ್ದಾರೆ. ಅವರ ಪ್ರಕಾರ: "ಚಿತ್ರ ತೀರಾ ಸರಳತೆಗಿಂತ ಆಚೆ ಹೋಗುವಲ್ಲಿ ಸೋಲುತ್ತದೆ. ಕೆಲವು ಒಳ್ಳೆಯ ಹಿಂದೂಗಳಿದ್ದರು, ಮುಸ್ಲಿಂ ಸ್ನೇಹಿತರನ್ನು ರಕ್ಷಿಸಿದರು. ಮತ್ತೆ ಕೆಲವು ಜನ ಒಳ್ಳೆಯ ಮುಸ್ಲಿಂರಿದ್ದರು. ಅವರು ತಮ್ಮ ಹಿಂದೂ ಸ್ನೇಹಿತರನ್ನು ಕಾಪಾಡಿದರು –ಇವಿಷ್ಟೇ ಈ ಚಿತ್ರ ಹೇಳುವುದು. ಕೋಮಿಲು ಸಂಘರ್ಷವೆಂಬುದು ದಿನನಿತ್ಯದ ಬದುಕಿನ ಒಂದು ಭಾಗವೇ ಆಗಿರುವಂಥ–ವಿನಾಕಾರಣ ನೂರಾರು ಮುಗ್ಧ ಜನರು ಪ್ರಾಣವನ್ನು ಕಳೆದುಕೊಳ್ಳುವಂಥ- ಜಂಗ್ಲಿ ಜೋಪಡಿಗಳಲ್ಲಿ, ಕೊಳೆಗೇರಿಗಳಲ್ಲಿ ವಾಸಿಸುವ ಜನರಿಗೆ 'ತಮಸ್' ತಮಾಷೆಯಾಗಿ ತೋರಬಹುದು".

ದೇಶದ ವಿಭಜನೆಯ ಕುರಿತಂತೆ ನಲವತ್ತು ವರ್ಷ ಹಳೆಯದಾದ ಸರಿ–ತಪ್ಪುಗಳ ವಿವಾದವನ್ನು ಮತ್ತೊಮ್ಮೆ ನೆನಪಿಸಿ ಜಾತಿ ಜಾತಿಗಳ ನಡುವೆ ಮತ್ತೊಮ್ಮೆ ವೈಷಮ್ಯದ ಬೀಜವನ್ನು ಬಿತ್ತಿದೆ ಎಂಬ ಟೀಕೆಗೂ 'ತಮಸ್' ವ್ಯಾಪಕವಾಗಿ ಗುರಿಯಾಗಿದೆ.

'ತಮಸ್' ಅನ್ನು ದೇಶದ ವಿಭಜನೆಯ ಕುರಿತಾದ ಚಿತ್ರ ಎಂದಾಗಲೀ, ಅಂದಿನ

ರಾಜಕೀಯ ಪಕ್ಷಗಳ ಪಾತ್ರ ಅಥವಾ ಸಮೂಹ ಮನೋವೃತ್ತಿಯ ಒಂದು ವಿಶ್ಲೇಷಣೆ ಕುರಿತಾದ ಒಂದು ಚಿತ್ರವೆಂದಾಗಲೀ ಪರಿಗಣಿಸುವುದು ಚಿತ್ರದ ಜಿಲ್ಯಾಟಿನ್ನಿನ ಮಟ್ಟಕ್ಕಿಂತ ಮೇಲೇರಲು ನಿರಾಕರಿಸಿದಂತೆಯೇ ಸರಿ. ಇದೊಂದು ರೀತಿ 'ಮ್ಯಾಕ್‌ಬೆತ್' ನಾಟಕವನ್ನು ಉತ್ತರಾಧಿಕಾರಕ್ಕಾಗಿ ನಡೆದ ಯುದ್ಧದ ಕಥೆಯೆಂದು ವರ್ಣಿಸಿದಂತೆ ಆದೀತು.

ಹಾಗೆಯೆ 'ತಮಸ್' ಅನ್ನು ಹುಚ್ಚು ಧೈರ್ಯ ಹಾಗೂ ಅತೀವ ಅನುಕಂಪಗಳ ಕೆಲಸಗಳಲ್ಲಿ ಪ್ರಕಟವಾಗುವಂತಹ ಮನುಷ್ಯನ ಮೂಲಭೂತ ಒಳ್ಳೆ ತನದ ವಿಜೃಂಭಣೆ ಎಂದು ಭಾವಿಸುವುದೂ ತಪ್ಪಾಗುತ್ತದೆ. ಏಕೆಂದರೆ ಅಂತಹ ನಿರ್ಣಯಕ್ಕೆ ಆಧಾರವಾಗಿರುವುದು ತೀರಾ ಕ್ಷುಲ್ಲಕವಾದ ವಿಷಯವಾಗಿರುತ್ತದೆ.

'ತಮಸ್' ಶೋಧಿಸುತ್ತಾ ಕ್ರಮಿಸುವ ಪ್ರತಿ ನಿಮಿಷವೂ ಮನುಷ್ಯನಲ್ಲಿ ಅಡಗಿರುವ ದುಷ್ಟತನವನ್ನು ಬಯಲು ಮಾಡುತ್ತಾ ಹೋಗುತ್ತದೆ. ಚಿತ್ರದ ಪ್ರಪ್ರಥಮ ದೃಶ್ಯದಲ್ಲಿಯೇ ಠೇಕೆದಾರ ಹಂದಿಯನ್ನು ಕೊಲ್ಲಲು ಹೇಳಿದಾಗಲೇ ನತ್ಥು ಆತನ ದ್ವೇಷವನ್ನು ಶಂಕಿಸುತ್ತಾನೆ. ಆದರೆ ಐದು ರೂಪಾಯಿಯ ಧಾರಾಳ ಸಂಪಾದನೆ ಅವನ ಅರಿವನ್ನು ಮಂಕುಗೊಳಿಸುತ್ತದೆ. ನಂತರ ತಾನು ಮಾಡಿದ ಕೆಲಸದ ಪರಿಣಾಮ ಏನಾಯಿತು ಎಂದು ಗಮನಿಸಿದಾಗ ಅವನಿಗೆ ತನ್ನ ಕಾರ್ಯದ ಸ್ವರೂಪ ಸಂಪೂರ್ಣ ಅರ್ಥವಾಗುತ್ತದೆ. ಆದರೆ ಅವನು ಕೂಡಲೇ ತನ್ನ ಜವಾಬ್ದಾರಿಯನ್ನು ಕಳಚಿಕೊಳ್ಳುತ್ತಾನೆ. ತಾನು ಬರೀ ಆಜ್ಞಾಪಾಲಕ ಎಂದು ವಾದಿಸುತ್ತಾನೆ. ಕರ್ಮೊ, ಪರಿಸ್ಥಿತಿಯ ಬಿಗುವನ್ನು ಅರಿತು ಹಂದಿಯನ್ನು ಕೊಂದುದರ ಬಗ್ಗೆ ಚಕಾರ ಎತ್ತದಂತೆ ಅವನನ್ನು ಎಚ್ಚರಿಸುತ್ತಾಳೆ. ಆದರೆ ಅವಳು ನತ್ಥುವಿನ ವಾದವನ್ನೆ ಸಮರ್ಥಿಸುತ್ತಾಳೆ. ಕೊಡಲಾದ ಹಣ ಆತ ಮಾಡಿದ ಕಷ್ಟದ ಕೆಲಸಕ್ಕೆ ದೊರೆತ ಸಂಭಾವನೆ ಎನ್ನುತ್ತಾಳೆ. ಗಂಡನ ಮೇಲಿನ ಪ್ರೀತಿ, ಅವನು ಮಾಡಿದ ಕೃತ್ಯದಿಂದ ಉಂಟಾದ ಆಘಾತವನ್ನು ಕಡಿಮೆಗೊಳಿಸುವ ಅವಳ ಬಯಕೆ– ಇವು ನತ್ಥುವಿನ ಕೆಲಸದ ಪರಿಣಾಮವನ್ನು ಅಲಕ್ಷಿಸುವಂತೆ ಮಾಡುತ್ತವೆ.

ಈ ದಂಪತಿಗಳ ನೈತಿಕ ಸೋಲಿರುವುದು ಅವರು ತಮ್ಮ ಕೃತ್ಯದ ಪರಿಣಾಮಗಳನ್ನು ಎದುರಿಸಲು, ಅದರ ಜವಾಬ್ದಾರಿ ಹೊರಲು ನಿರಾಕರಿಸುವುದರಲ್ಲಿ. ನತ್ಥುವಿನ ವಿಷಾದವಿರುವುದು ಮಸೀದಿಯನ್ನು ಅಪವಿತ್ರಗೊಳಿಸಿದ ಕುರಿತಾಗಿರದೆ ತಾನು ಅದರಲ್ಲಿ ಭಾಗಿಯಾಗಿದ್ದಕ್ಕೆ ಆಗಿರುತ್ತದೆ.

ತನ್ನ ಹಿಂದೂ ಸ್ನೇಹಿತರಿಗೆಲ್ಲ ಸಹಾಯ ಮಾಡುತ್ತಾ ಓಡಾಡುವ ಊರಿನ ಪ್ರಭಾವಿ ವ್ಯಕ್ತಿ ಶಹ್‌ನವಾಜ್‌ಗೆ ಮುಸ್ಲಿಂ ಒಬ್ಬನ ಹೆಣವನ್ನು ನೋಡಿದ ಕೂಡಲೇ ಕೋಪ ನೆತ್ತಿಗೇರುತ್ತದೆ. ಒಬ್ಬ ಹಿಂದೂ ಸ್ನೇಹಿತನಿಗೆ ಒಳಿತು ಮಾಡುತ್ತಿರುವ ಸಂದರ್ಭದ ನಡುವೆಯೂ ಆತನ ಅಂಗವಿಕಲ ಕೆಲಸದಾಳನ್ನು ಮೆಟ್ಟಿಲು ಮೇಲಿಂದ ಕೆಳಗೆ ಬೀಳುವಂತೆ ಒದೆಯುತ್ತಾನೆ.

ತಮ್ಮದೇ ಆದ ತರ್ಕವನ್ನು ಅನುಸರಿಸುವ ಗಲಭೆಕೋರರು, ಕೋಮುವಾದಿ ಜನ ಜಂಗುಳಿಯ ಬಗ್ಗೆಯಾಗಲೀ, ಅವುಗಳ ಭಾಗವಾದ ಹಯಾತ್ ಭಕ್ಷ್ (ಮನೋಹರ್ ಸಿಂಗ್), ರಣಬೀರ್ ಅಥವಾ ಠೇಕೇದಾರ್– ಇವರ ಬಗ್ಗೆಯಾಗಲೀ ಹೆಚ್ಚು ಹೇಳಬೇಕಾಗಿಲ್ಲ.

ನಿಹಲಾನಿ, ಮನುಷ್ಯ ಮೂಲಭೂತವಾಗಿ ಕೆಟ್ಟವನು, ಅತೀವ ಒಳ್ಳೆತನವನ್ನು ತೋರಲು ಅಸಮರ್ಥ ಎಂದೇ ಆಪಾದಿಸಲು ಬಯಸುತ್ತಾರೆ. ಒಳ್ಳೆಯ ಕಾರ್ಯಗಳೂ ಆಗುತ್ತವೆ. ಆದರೆ ನಿಹಲಾನಿ ಅವನ್ನು ಉಳಿದಂತೆ ಸಮರ್ಥವಲ್ಲದ ಪಾತ್ರಗಳ ಕೈಯಲ್ಲಿ ಮಾಡಿಸುತ್ತಾರೆ. ಮುದುಕ ಹರನಾಂಸಿಂಗ್ ಅನ್ನು ಮೂಲಭೂತವಾಗಿ ಒಬ್ಬ ಒಳ್ಳೆಯ ಮನುಷ್ಯನಂತೆ ತೋರಿಸಲಾಗಿದೆ. ಇನ್ನೇನೂ ಹಾನಿ ಮಾಡಲಿಕ್ಕಾಗದಷ್ಟು ಮುದುಕನಾಗಿದ್ದಾನೆ ಎಂಬ ಕಾರಣಕ್ಕೂ ಇರಬಹುದು. ಅದೂ ಅಲ್ಲದೆ ಉಳಿದವರ ಒಳ್ಳೇತನದಲ್ಲಿ ಆತನಿಗಿರುವ ವಿಶ್ವಾಸಕ್ಕೆ ಆತನಿಗೆ ಬಂದೂಕಿನ ಬೆಂಬಲ ಬೇಕಾಗುತ್ತದೆ. ಆತ ತನಗೆ ಆಶ್ರಯ ನೀಡಿದ ರಜ್ಜೋ ಮನೆಯಲ್ಲೂ ಅದನ್ನು ಬಿಟ್ಟಿರಲು ಇಷ್ಟಪಡುವುದಿಲ್ಲ. ಈ ರೀತಿ ಅದಕ್ಕೆ ಅಂಟಿಕೊಂಡೇ ಇರುವಂಥದ್ದು, ಭಯಗ್ರಸ್ತ ವ್ಯಕ್ತಿಯೊಬ್ಬ ಎಲ್ಲ ರೀತಿಯ ಸಂಕಷ್ಟಗಳನ್ನು ಎದುರಿಸಿಯೂ ಬದುಕಬೇಕೆಂಬ ನಿರ್ಣಯದ ಅಭಿವ್ಯಕ್ತಿಯಷ್ಟೆ ಅಲ್ಲ.... ಹರನಾಂಸಿಂಗ್‌ನ ಬದುಕುವ ಆಸೆ ಸದ್ಗುಣದ ಸಾಕಾರಮೂರ್ತಿಗಳಂತೆ ತೋರುವ ಜನರ ಮೂಲಭೂತ ಒಳ್ಳೆಯತನದಿಂದಲೂ ಭರವಸೆಯನ್ನು ಪಡೆಯುವುದಿಲ್ಲ! ಬಂದೂಕಿನ ಜೊತೆಗಿರುವಾಗ ಹರನಾಂ ಸಿಂಗ್‌ನನ್ನು ರಜ್ಜೊ ಸಂಶಯಿಸುವ ಹಾಗೆ ತನ್ನ ಬದಿ ಬಂದೂಕು ಇಲ್ಲದಾಗ ಹರನಾಂ ಸಿಂಗನೂ ಸಂದೇಹಿಸುತ್ತಾನೆ.

ಏಕಾಕಿ ಸಿಖ್ ಹೆಂಗಸೊಬ್ಬಳು ಒಬ್ಬ ಮುಸ್ಲಿಂ ಟೀಚರನ್ನು ಹಿಂದೂ ಮೊಹಲ್ಲದಲ್ಲಿಯ ಅವನ ಮನೆಯಿಂದ ರಕ್ಷಿಸಿ, ಓಣಿ ಓಣಿ ಸುತ್ತಿಕೊಂಡು ಮುಸ್ಲಿಂ ಮೊಹ

ಲ್ಲಾದ ಸುರಕ್ಷಿತತೆಗೆ ತಲುಪಿಸು ಘಟನೆ ಸಂಪೂರ್ಣ ಅಸಹಜವೆಂದೇ ನನ್ನ ಅನಿಸಿಕೆ. ನಿಹಲಾನಿ ಯುಕ್ತಾಯುಕ್ತತೆ ಯೋಚಿಸದೇ 'ತಮಸ್'ನಲ್ಲಿ ಈ ದೃಶ್ಯವನ್ನು ಸೇರಿಸಿರುವುದು ಅವರ ಅಕ್ಷಮ್ಯ ನಿರ್ವಿವೇಚನೆಯ ಒಂದು ಪ್ರಮುಖ ಉದಾಹರಣೆಯಾಗಿದೆ.

ವಿಧ್ವಂಸಕ ಕೃತ್ಯಗಳಲ್ಲಿ ತೊಡಗುವುದು ಯಾವಾಗಲೂ ಹಸಿದ ತೋಳಗಳಂತೆ ಗುಂಪುಕಟ್ಟಿ ನುಗ್ಗುವ ಉದ್ರೇಕಿತ ಜನರ ತಂಡ ಎಂದು ವಾದಿಸಲಾಗಿದೆ. ಈ ವಾದದ ಪ್ರಕಾರ ಅದೇ ಗುಂಪಿನ ಪ್ರತ್ಯೇಕ ವ್ಯಕ್ತಿಗಳು ಬೇರೆಯೇ ತರಹಾ ವರ್ತಿಸುತ್ತಾರೆ. ಆದರೆ ನಿಜವೆಂದರೆ ಕೋಮುವಾದಿ ಹಿಂಸಾಚಾರ ಅದರಲ್ಲಿ ಭಾಗ ವಹಿಸಿದವರನ್ನಷ್ಟೇ ಅಲ್ಲ, ಅಲ್ಲದವರನ್ನೂ ಅದರ ಗೋಜಿಗೇ ಹೋಗಲು ಬಯಸದವರನ್ನು ಹಾಳುಮಾಡಿ ಬಿಡುತ್ತದೆ. ಮನುಷ್ಯನ ಮೂಲಭೂತ ಸತ್ಪ್ರಜ್ಞೆಯ ಉತ್ತಮ ವಿಶ್ಲೇಷಣೆ ಮಾಡುತ್ತಾ ಕೆ. ಎಫ್. ರುಸ್ತುಂಜಿ ಒಂದೆಡೆ ಹೇಳುವಂತೆ "ಭೀಕರ ಅಪಾಯದ ದವಡೆಯಲ್ಲಿ ವ್ಯಕ್ತಿಗಳು ತೋರುವ ಧೈರ್ಯ ಹಾಗೂ ಅನುಕಂಪದ ಕ್ರಿಯೆಗಳು ಸಾಮಾನ್ಯವಾಗಿ ಪತ್ರಿಕೋದ್ಯಮದ 'ಸದುದ್ದೇಶದ ಸುಳ್ಳುಗಾರಿಕೆ ಆಗಿರುತ್ತದೆ.'' 'ಸಾಮಾನ್ಯ ಮನುಷ್ಯ'ನ 'ಮೂಲಭೂತ ಮಾನವೀಯತೆ'ಯ ಪ್ರತಿಪಾದನೆಗಳು ಎಷ್ಟೊಂದು ಅಪರೂಪವೆಂದರೆ ಅವುಗಳಿಂದ ಹೇಳಿಕೊಳ್ಳುವಂಥ ಯಾವ ಪರಿಣಾಮವೂ ಉಂಟಾಗುವುದಿಲ್ಲ. ಒಳ್ಳೆಯ ಉದ್ದೇಶವುಳ್ಳವರು ಸಾಮಾನ್ಯವಾಗಿ ನಿಶ್ಚೇಷ್ಟಿತಗೊಳಿಸುವ ಭಯಕ್ಕೆ ಶರಣಾಗಿ ಬಿಡುತ್ತಾರೆ. ನಗ್ನ ಭೀತಿ ತರ್ಕ ಬದ್ಧ ಚಿಂತನೆಯ ಸಾಮರ್ಥ್ಯವನ್ನು ಕೊಂದು ಬಿಡುತ್ತದೆ. "ಬೇಟೆಯಾಗುವುದು, ಬೇಟೆಯಾಡುವುದು, ಗೊಂದಲ ಗಲಭೆ, ಮತಿಹೀನಕೋಪ, ಸಾಂಕ್ರಾಮಿಕ ಭಾವಾತಿರೇಕ, ದ್ವೇಷ ಮತ್ತು ಅಮಾನವೀಯ ಕ್ರೌರ್ಯ ಇವಷ್ಟೇ ಇರುವುದು."

ಭಯ ಎಂಬುದು ಕ್ರಮೇಣ ವೃದ್ಧಿಸುತ್ತದೆ. ಅದು ದ್ವೇಷವನ್ನೇ ತಿಂದು ಬದುಕುತ್ತದೆ. ಭಯ ವಿವೇಚನೆಯನ್ನು ಧಿಕ್ಕರಿಸಿದಾಗ ದ್ವೇಷ ತನ್ನ ಅಧಿಕಾರವನ್ನು ಸ್ಥಾಪಿಸುತ್ತದೆ. ವಿಭಜನೆಗೆ ಮುಂಚೆ ಇಡೀ ಉಪಖಂಡದಲ್ಲಿ ಬ್ರಿಟೀಷ್ ವಿರೋಧಿ ದ್ವೇಷ ಹರಡಿತ್ತು. ಅದೇ ರಾಷ್ಟ್ರೀಯ ಚಳುವಳಿಗೆ ಮುಖ್ಯ ಪ್ರೇರಕ ಶಕ್ತಿಯೂ ಆಗಿತ್ತಲ್ಲದೆ ವಿವಿಧ ಕೋಮಿನ ಜನರನ್ನು ಒಂದಾಗಿಸುವ ಬಂಧಶಕ್ತಿಯೂಗಿತ್ತು. ಬ್ರಿಟೀಷರ ವಿರುದ್ಧ ಒಗ್ಗಟ್ಟಾಗುವ ಪ್ರಮೇಯವಿಲ್ಲದೆ ಇರುವಾಗ ದ್ವೇಷದ ಈ

ಆಯುಧವನ್ನು ಜನರು ಪರಸ್ಪರರ ವಿರುದ್ಧ ಬಳಸತೊಡಗಿದರು. ನೀರದ್ ಸಿ. ಚೌಧುರಿ ಹೇಳಿರುವಂತೆ:

"ಖಿಲಾಫತ್ ಚಳುವಳಿಯನ್ನು ಹಿಂದೂ ನಾಯಕರೂ ಕೂಡಾ ಬೆಂಬಲಿಸುವಂತೆ ಮಾಡಿದ ಹಿಂದೂ-ಮುಸ್ಲಿಂ ಮೈತ್ರಿಯಲ್ಲಿ ಪ್ರಾಮಾಣಿಕವಾಗಿ ಇದ್ದ ಒಂದೇ ಒಂದು ಅಂಶವೆಂದರೆ ಎರಡೂ ಕೋಮಿನವರು ಸಮಾನವಾಗಿ ಹಂಚಿಕೊಂಡಿದ್ದ ಬ್ರಿಟೀಶ್ ವಿರೋಧಿ ದ್ವೇಷ. ಈ ಹೊಸ ದ್ವೇಷದ ಉಬ್ಬರದಲ್ಲಿ ಅದಕ್ಕೂ ಹಿಂದಿನ ಬಹುಶಃ ಹೆಚ್ಚು ತೀವ್ರವಾಗಿದ್ದ ಹಿಂದೂ-ಮುಸ್ಲಿಂ ಸಮುದಾಯಗಳ ಪರಸ್ಪರ ವೈಷಮ್ಯವನ್ನು ಅದು ಅಲಕ್ಷಿಸುವಂತೆ ಮಾಡಿತು."

ದೇಶದ ವಿಭಜನೆ ಹೊತ್ತಿನಲ್ಲಿ ಈ ಉಪಖಂಡದ ಜನರಲ್ಲಿ ಆವರಿಸಿದ್ದ ದ್ವೇಷ ಭಾವ ವಿಭಜನೆಯ ನಂತರವೂ ಪೋಷಣೆ ಪಡೆದು ದೈತ್ಯಾಕಾರವನ್ನು ತಾಳಲು ಅವಕಾಶ ವಾಯಿತು. ಭಾರತದಲ್ಲಿ ಕೋಮುವಾದಿ ದೊಂಬಿಗಳು ಬ್ರಿಟೀಷರು ದೇಶವನ್ನು ವಿಭಜಿಸಿದುದರಿಂದಾಗಿ ಆರಂಭವಾದುವಲ್ಲ. ಅದಕ್ಕೆ ತುಂಬಾ ಹಿಂದಿನ ಇತಿಹಾಸವಿದೆ. ಬಹಳ ತೆಳುವಾದ ಪದರದ ಅಡಿಯಲ್ಲಿ ಅಡಗಿರುವ ಸ್ಫೋಟಕ ಭಾವನೆಗಳು ಕಾಲದ ಪೋಷಣೆಯಿಂದ ಕೊಬ್ಬಿ ಮೇಲುಕ್ಕಿ ಪಾಶವೀ ಕ್ರೌರ್ಯದ ರೂಪ ಪಡೆಯಲು ಕ್ಷುಲ್ಲಕ ಪ್ರಚೋದನೆಯೂ ಸಾಕಾಗುತ್ತಿತ್ತು. ಚೌಧುರಿ ಬರೆಯುತ್ತಾರೆ:

"ಭಾರತದ ಜನತೆಗೆ 1947, ಆಗಸ್ಟ್ 15 ರಂದು ರಾಜಕೀಯ ಸ್ವಾತಂತ್ರ್ಯ ದೊರೆಯಿತು. ಅದರ ಸ್ವಾಗತಕ್ಕಾಗಿ ಹಾಸಲು ಹಿಂದಿನ ಇಡೀ ವರ್ಷ ರತ್ನಗಂಬಳಿಯನ್ನು ನೇಯಲಾಗಿತ್ತು. 1946 ಹಾಗೂ 47 ರಲ್ಲಿ ಹಿಂದೂ, ಮುಸ್ಲಿಂ ಹಾಗೂ ಸಿಕ್ಖರು ನಡೆಸಿದ ಸಾಮೂಹಿಕ ಹತ್ಯೆಗಳ ಪ್ರಾಣ ತೆತ್ತ ನೂರಾರು, ಸಾವಿರಾರು ಜನ ಭಾರತೀಯರ ರಕ್ತದಲ್ಲಿ ಅದ್ದಿ ಈ ರತ್ನಗಂಬಳಿಗೆ ಬಣ್ಣ ಕಟ್ಟಲಾಗಿತ್ತು. ಹಾಗೆಂತ ಹೇಳಿ ಜಾತಿ ಜಾತಿಗಳ ನಡುವೆ ಯುದ್ಧವೇ ನಡೆಯಿತು. ಅಂತಾನೂ ಅಲ್ಲ. ಹಾಗಾದರೂ ಆಗಿದ್ದರೆ ಒಂದು ರೀತಿ ಚೆನ್ನಾಗಿರುತ್ತಿತ್ತು. ಅದನ್ನು ಬಹಳ ದಿನ ಮುಂದುವರಿಸಲು ದುಬಾರಿಯಾದ್ದರಿಂದ ಕಡಿಮೆ ಜನರಾದರೂ ಸಾಯುತ್ತಿದ್ದರು. ಆದರೆ ಆದದ್ದೆಂದರೆ ಹಿಂದುಗಳ ಬಾಹುಳ್ಯ ಇದ್ದ ಕಡೆ ಮುಸ್ಲಿಂಮರ ಕಗ್ಗೊಲೆ. ಇವರು ಹೆಚ್ಚಿದ್ದ ಕಡೆ ಅವರ ಸಾಮೂಹಿಕ ಹತ್ಯೆ."

(ಮುಂದುವರಿಯುವುದು)

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಮ್ಮ ಈ ಸಂಚಿಕೆ ನಿಮಗೆ ತಡವಾಗಿ ತಲುಪುತ್ತಿದೆ. ನಮ್ಮ ಕೈಮೀರಿದ ಕೆಲವು ಸಂಗತಿಗಳಿಂದಾಗಿ ಹೀಗೆ ತಡವಾಗುತ್ತಿರುವುದಕ್ಕಾಗಿ ಕ್ಷಮೆ ಇರಲಿ. ಈ ಮುಂದಿನ ಎರಡು ಸಂಚಿಕೆಗಳು ಸೆಪ್ಟೆಂಬರ್ ತಿಂಗಳ ಕೊನೆಯೊಳಗಾಗಿ ನಿಮಗೆ ತಲುಪಲಿವೆ. ಅದಕ್ಕಾಗಿ ನಮ್ಮೆಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಕನ್ನಡದಲ್ಲಿ ಸಾಹಿತ್ಯ–ಸಾಂಸ್ಕೃತಿಕ ನಿಯತಕಾಲಿಕ ತರುವ ಕಷ್ಟ ತಮಗೆಲ್ಲಾ ಗೊತ್ತೇ ಇದೆಯೆಂದು ನಾವು ಭಾವಿಸಿದ್ದೇವೆ. ಆದುದರಿಂದ ಚಂದಾ ಬಾಕಿ ಉಳಿಸಿಕೊಂಡಿರುವವರು ದಯವಿಟ್ಟು ಕೂಡಲೇ ಅದನ್ನು ಪಾವತಿ ಮಾಡುವಿರಾಗಿ ನಂಬಿದ್ದೇವೆ.

ಗೆಳೆಯ ಮಾಸಡಿಯ ಚಿತ್ರ 'ಅವಸ್ಥೆ' ನ್ಯಾಯಾಲಯಗಳ ಬಾಗಿಲು ದಾಟಿ ಈಗ ಮತ್ತೆ ಬಿಡುಗಡೆಗೊಂಡಿದೆ. ಮೊದಲು ಬಿಡುಗಡೆಗೊಂಡು ಎರಡೇ ದಿನಗಳು ಪ್ರದರ್ಶಿತವಾದ ಕಾರಣ ಬಹಳ ಜನ ನೋಡಿರಲಿಕ್ಕಾಗಿರಲಿಲ್ಲ. ಆದುದರಿಂದಲೇ. ಶ್ರೀಮತಿ ಗೋಪಾಲಗೌಡರ ವಾದ ಸರಿಯೋ, ಅನಂತಮೂರ್ತಿ ಮಾಸಡಿಯವರ ವಾದ ಸರಿಯೋ ಎಂದು ತಿಳಿಯಲು ಆ ಬಗ್ಗೆ ಕುತೂಹಲವಿದ್ದ ಬಹಳ ಜನಕ್ಕೆ ಸಾಧ್ಯವಾಗಿರಲಿಲ್ಲ. ಶ್ರೀಮತಿ ಗೋಪಾಲಗೌಡರ ವಾದ ನೇರ, ಸರಳ ಹಾಗೂ ಸ್ಪಷ್ಟವಾಗಿತ್ತು. ಗೋಪಾಲಗೌಡರ ಅಭಿಮಾನಿಗಳು ಮಂಡಿಸಿದ ವಾದ ವ್ಯಕ್ತಿನಿಷ್ಠವಾದುದೂ, ಅಭಿಮಾನ ಪ್ರೇರಿತವಾದುದೂ ಕೆಲವೊಮ್ಮೆ ಅತಿಶಯದಿಂದ ಕೂಡಿದುದೂ ಆಗಿದೆ ಎನ್ನಿಸಿದರೂ, ಚಿತ್ರ ನೋಡದ ಹೊರತು ಅವರ ನೋವು ವೈಚಾರಿಕ ನೆಲೆಗಳಿಂದ ಹುಟ್ಟಿದುದೋ ಅಲ್ಲವೋ ಎಂದು ಹೇಳಲಾಗುತ್ತಿರಲಿಲ್ಲ. ಹಾಗೆಯೇ ಅನಂತಮೂರ್ತಿ–ಮಾಸಡಿಯವರ ನಿವೇದನೆಗಳನ್ನು ಕೂಡಾ.

ಆದರೆ ಈಗ ಚಿತ್ರ ಸಾರ್ವಜನಿಕ ಪ್ರದರ್ಶನಕ್ಕಿದೆ. ಚಿತ್ರದ ಚಿತ್ರಗುಣದ ಬಗ್ಗೆ ಇಲ್ಲಿ ಹೇಳಬೇಕಾದ ಅಗತ್ಯವಿಲ್ಲ. ಹಳ್ಳಿಕೊಂಪೆಯೊಂದರಿಂದ ಬೆಂಗಳೂರಿಗೆ ಬಂದು

ಹಲವು ಕನಸು–ಹುಚ್ಚುಗಳನ್ನು ಹತ್ತಿಸಿಕೊಂಡು ಮುಳುಗಿ ತೇಲಿದ ಗೆಳೆಯ ಮೂಸಡಿ ಅದ್ಭುತ ಚಿತ್ರವನ್ನೇನೂ ಮಾಡಿರದಿದ್ದರೂ, ಎಪ್ಪತ್ತರ ದಶಕದಲ್ಲಿ ಕನ್ನಡದಲ್ಲಿ ಕಂಡುಬಂದ ಹೊಸ ಅಲೆಯ ಚಿತ್ರಗಳಂತೆ ಈ ಚಿತ್ರವೂ ತೇಪೆ ತೇಪೆಯಾಗಿ ಕಂಡರೂ ಸ್ವಲ್ಪ ವಿಭಿನ್ನವಾಗಿದ್ದು ಮೆಚ್ಚುಗೆ ಗಳಿಸುತ್ತದೆ. ಆದರೆ ಈ ಚಿತ್ರ ಗೋಪಾಲಗೌಡರನ್ನು ಕುರಿತ ಚಿತ್ರವಲ್ಲವೆಂದೂ, ಆದುದರಿಂದ ಶ್ರೀಮತಿ ಗೋಪಾಲ ಗೌಡರಿಗೆ ಹಾಗೂ ಗೋಪಾಲಗೌಡರ ಅಭಿಮಾನಿಗಳಿಗೆ ನೋವಾಗುವ ಪ್ರಮೇಯವೇ ಇಲ್ಲವೆಂದೂ ನಂಬುವುದು ಚಿತ್ರ ನೋಡಿದವರಿಗೆ ಕಷ್ಟವೆನಿಸುತ್ತದೆ.

ಅನಂತಮೂರ್ತಿಯವರು ತಮ್ಮ ಪರವಾಗಿ ಪತ್ರಿಕಾ ಹೇಳಿಕೆಗಳ ಮೂಲಕ, ಸಂಪಾದಕರ (ರುಜುವಾತು) ಟಿಪ್ಪಣಿಗಳ ಮೂಲಕ ಹಾಗೂ ನ್ಯಾಯಾಲಯದಲ್ಲಿನ ವಾದಗಳ ಮೂಲಕ ಅನೇಕ ನೆಲೆಗಳಲ್ಲಿ ವಾದವನ್ನು ಮಂಡಿಸಿದ್ದಾರೆ. ಚಿತ್ರ ನೋಡಿದ ಬಳಿಕ ನಮಗೆ ಅನಂತಮೂರ್ತಿ ಈ ವಾದಗಳ ಮೂಲಕ ಕೇವಲ ಲಾಯರ್‌ರಂತೆ- ಬಹಳ ಬುದ್ಧಿವಂತರಾದ ಲಾಯರ್‌ರಂತೆ ಕಾಣುತ್ತಾರೆ. ಚಿತ್ರದಲ್ಲಿ ಬರುವ ಕೃಷ್ಣಪ್ಪನ ಕಾಲ, ಕೌಟುಂಬಿಕ ಹಿನ್ನೆಲೆ, ಆಸಕ್ತಿ ವಿದ್ಯಾಭ್ಯಾಸ, ಸಹವಾಸ, ಚಳುವಳಿ, ರಾಜಕೀಯ ನಾಯಕತ್ವದ ಎಲ್ಲ ವಿವರಗಳೂ, ಘಟನೆಗಳೂ ಗೋಪಾಲ ಗೌಡರ ಬಗ್ಗೆ ನಾವು ತಿಳಿದ, ಕೇಳಿದ ವಿವರ, ಘಟನೆಗಳೇ ಆಗಿವೆ. ಅಷ್ಟೇ ಅಲ್ಲ. ಚಿತ್ರದಲ್ಲಿ ಬರುವ ಕೃಷ್ಣಪ್ಪನ ಹೆಂಡತಿ ನೋಡುವುದಕ್ಕೆ ಶ್ರೀಮತಿ ಗೋಪಾಲ ಗೌಡರಂತೆಯೇ ಕಾಣುತ್ತಾರೆ. ಆದರೂ ನಾವು ಇದನ್ನು ಗೋಪಾಲಗೌಡರನ್ನು ಕುರಿತು ವ್ಯಾಖ್ಯಾನ ಮಾಡುವ ಚಿತ್ರವಲ್ಲವೆಂದು ನಂಬಬೇಕು! ಯಾಕೆಂದರೆ ಅನಂತಮೂರ್ತಿಯವರ ವಿದ್ಯುತ್ ಪ್ರತಿಭೆಯ ಮೂಸೆಯಲ್ಲಿ ರೂಪುಗೊಂಡ ಸಾಹಿತ್ಯ ಮೀಮಾಂಸೆ ಯಾರ ತಲೆಯನ್ನಾದರೂ ತೂಗಿಸುವಷ್ಟು ಮೋಹಕವಾಗಿದೆ. ಓರ್ವ ಬರೆಹಗಾರನ ಸೃಜನಶೀಲ ಸ್ವಾತಂತ್ರ್ಯವನ್ನು ಪ್ರಶ್ನಿಸುವುದು ಅವಿವೇಕವಾದೀತಲ್ಲವೇ ಮತ್ತೆ ?

ಆದರೆ ಇಲ್ಲಿ ಬರೆಹಗಾರನೊಬ್ಬನ ಸೃಜನಶೀಲತೆಯ ಸ್ವಾತಂತ್ರ್ಯಕ್ಕಿಂತ ಮಹತ್ವದ್ದಾದ, ಪವಿತ್ರವೆನಿಸುವ, ಒಂದು ಕುಟುಂಬದ ಖಾಸಗಿ ಬದುಕಿನ ಪ್ರಶ್ನೆಯಿದೆ. ಚಿತ್ರದ ನಿರ್ಣಯಾತ್ಮಕ ವಿವರವೆಲ್ಲವೂ ಗೋಪಾಲಗೌಡರ ಬದುಕಿನ ಕಡೆಗೇ ಬೊಟ್ಟು ಮಾಡುವಂತಿರುವಾಗ, ಶ್ರೀಮತಿ ಗೋಪಾಲಗೌಡರಿಗಾಗಲೀ ಅಥವಾ ಗೋಪಾಲಗೌಡರ ಅಭಿಮಾನಿಗಳಿಗಾಗಲೀ 'ಇದು ಕಲೆ; ಇದರಲ್ಲಿ ನಿಮಗೆ ನೋವಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಹೇಳುವುದು ಆತ್ಮ ವಂಚನೆ ಮಾತ್ರ ಆಗುತ್ತದೆ. ಕಲೆಯ ಹೆಗ್ಗುರುತು ಹೃದಯವಂತಿಕೆಯೇ ಹೊರತು ಬುದ್ಧಿ

ವಂತಿಕೆಯಲ್ಲ.

ಚಿತ್ರ ಮಾಡಿದವರು ಚಿತ್ರದ ಆರಂಭದಲ್ಲಿ, ಚಿತ್ರದ ವಸ್ತು ಕಾಲ್ಪನಿಕವಾದುದೆಂದೂ ಇದರಲ್ಲಿ ಬರಬಹುದಾದ ಹೋಲಿಕೆಗಳು ಕಾಕತಾಳೀಯವೆಂದೂ ಹೇಳುವ ಮೂಲಕ ಕೈತೊಳೆದುಕೊಂಡಿರುವರಾದರೂ, ಅವರು ತೊಳೆದುಕೊಂಡಿರುವುದು ಕೈಗಳನ್ನು ಮಾತ್ರ ಎಂಬುದು ಚಿತ್ರದುದ್ದಕ್ಕೂ ಸಾಬೀತಾಗಿದೆ. ಇನ್ನೂ ಚರಿತ್ರೆಯಾಗಿ ಮಾಗದ ಪರಿಘಟನೆಯನ್ನು ಸೃಜನಶೀಲ ಸ್ವಾತಂತ್ರ್ಯದ ಧ್ವಜದಡಿಯಲ್ಲಿ ದಾರ್ಶನೀಕರಿಸಹೊರಡುವ ಬೌದ್ಧಿಕ ಹಾತೊರಿಕೆಯ ಫಲ ಇದಿರಬಹುದು.

ಹೀಗೆಯೇ ಇನ್ನೊಂದು ತೆರವಾಗಿ, ಸೃಜನಶೀಲ ಸ್ವಾತಂತ್ರ್ಯದ ಧ್ವಜದ ನೆರಳಿನಲ್ಲಿ ತಪಸ್ಸಿಗೆ ಕೂತಂತೆ ಕೂತು ಇತ್ತಿತ್ತಲಾಗಿ ಎಲ್ಲರನ್ನೂ ಕಂಗೆಡಿಸಿರುವ ಕೃತಿ ದೇವನೂರ ಮಹಾದೇವನ 'ಕುಸುಮ ಬಾಲೆ'. ಮಹಾದೇವ ಇದನ್ನು ವರ್ಷಾನುಗಟ್ಟಲೆ ಹೊಟ್ಟೆಯಲ್ಲಿಟ್ಟುಕೊಂಡು ಎಲ್ಲರ ಕುತೂಹಲ ಕೆರಳಿಸಿದ್ದ. ಈಗ ಕುತೂಹಲ ಮತ್ತೂ ಹೆಚ್ಚಾಗಿದೆ: ಯಾವ ಧೀರ ಮೊದಲು ಈ ಕಥಾಕಾವ್ಯವನ್ನು ಅರಗಿಸಿಕೊಂಡು ವಿಜಯದ ನಗೆ ಬೀರುತ್ತಾನೋ ಎಂದು ನೋಡಲು.

'ಕುಸುಮ ಬಾಲೆ' ನಿಜವಾಗಿಯೂ ಓದುಗನಿಗೆ ಅನೇಕ ಸವಾಲುಗಳನ್ನು ಒಡ್ಡುತ್ತದೆ; ಹಾಗೆಯೇ ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ– ಸಾಹಿತ್ಯ ಮೀಮಾಂಸೆಗೆ ಸಂಬಂಧಿಸಿದಂತೆ. ಸೃಜನಶೀಲ ಅಭಿವ್ಯಕ್ತಿಯ ಹಿಂದಿನ ಹಾತೊರಿಕೆ ಯಾವ ತೆರನದ್ದು ? ಅದು ಗುರಿ ಇಲ್ಲದ್ದೆ ? ಅಥವಾ ಗುರಿ ಇಲ್ಲದಿರುವಿಕೆಯೆಂಬ ಗುರಿಯುಳ್ಳದ್ದೇ ? ಇತ್ಯಾದಿ ಇತ್ಯಾದಿಯಾದ ರಾದ್ಧಾಂತವನ್ನೇ ಸೃಷ್ಟಿ ಮಾಡಲೆನಿಸುತ್ತದೆ. ಆದರೆ ಈ ಎಲ್ಲ ರಾದ್ಧಾಂತ ಮಾಡಿಕೊಳ್ಳದೆ ಸಾವಧಾನವಾಗಿ, ಧ್ಯಾನದಂತೆ ಇದನ್ನು ಓದತೊಡಗಿದಲ್ಲಿ ಅದರೊಳಗಿನ ಬೆಳಕು ಕಾಣತೊಡುಗುತ್ತದೆ. ಮೊದಲು, ಮಹಾದೇವ ಒಂದು ಭಾಷೆಯನ್ನು, ಆ ಭಾಷೆಯಿಂದಲೇ ಹುಟ್ಟಿದ ಬಂಧವನ್ನು ಹಾಗೂ ಆ ಬಂಧದ ಪ್ರಾಣದಂತಿರುವ ಲಯವನ್ನು ನಾಶಮಾಡಲೆಣಿಸುತ್ತಿದ್ದಾನೆ ಎನಿಸುತ್ತದಷ್ಟೇ ಅಲ್ಲ, ಆ ನಾಶಕಾರ್ಯದ ಶಬ್ದವನ್ನೂ ಕೇಳಬಹುದು. ಅಷ್ಟರೊಳಗೇ ಕೃತಿಯೂ ಮುಗಿದಿರುತ್ತದೆ ನಿಜ; ಆದರೆ ಆ ಮುಗಿಯುವುದರೊಂದಿಗೇ ಆ ನಾಶಕಾರ್ಯವೇ ತಿರುಗು ಮುರುಗಾದಂತೆ ನಾವು ಈವರೆಗೆ ಕೇಳದಿದ್ದ ಹೊಸದೊಂದು ಲಯ, ಆ ಲಯದಿಂದಲೇ ಒಂದು ಬಂಧ ಹಾಗೂ ಆ ಬಂಧದಿಂದ ಒಂದು ಭಾಷೆ ಹಾಗೂ ಅಂತಿಮವಾಗಿ ಆ ಭಾಷೆಯಿಂದ ಒಂದು ಕಥೆಯೂ ಮೂಡಿ ಬರುತ್ತದೆ. ಅವಳೇ

'ಕುಸುಮ ಬಾಲೆ'– ನಮ್ಮ ನಿಮ್ಮೆಲ್ಲರ ಒಳ ಹೊರಗುಗಳೆರಡನ್ನೂ ಚರಿತ್ರೆಯ ರೂಪದಲ್ಲಿ, ವರ್ತಮಾನದ ವಿರೂಪದಲ್ಲಿ ಮತ್ತು ಭವಿಷ್ಯದ ಕುರೂಪದಲ್ಲಿ ಕಾಡುತ್ತಿರುವ ಕುಸುಮ ಬಾಲೆ. ವಸ್ತುವಿನಿಂದ ರೂಪದಕಡೆ ಹೋಗುವುದು ಕಲೆ; ರೂಪದಿಂದ ವಸ್ತುವಿನ ಕಡೆ ಹೋಗುವುದು ದರ್ಶನ. ಆದರೆ ಈ ಎರಡೂ ಗಮನಗಳನ್ನು ಒಂದಾಗಿಸುವ ಕ್ರಿಯೆ ಎಂತಹುದು ? ಇದು ಕೇವಲ ಸಾಹಿತ್ಯ ಅಥವಾ ಕಲೆಯ ಪ್ರಶ್ನೆಯಾಗಿ ಉಳಿಯುವುದಿಲ್ಲ. ಇಂತಹ ಬಹು ದೊಡ್ಡ ಪ್ರಶ್ನೆಯನ್ನು ಎತ್ತುತ್ತದೆ ಈ ಪುಸ್ತಕ. ಅಷ್ಟನ್ನು ಮಾತ್ರ ಈ ಪುಸ್ತಕದ ಬಗ್ಗೆ ಸದ್ಯಕ್ಕೆ ಹೇಳಬಹುದು.

ವಿಶ್ವಾಸಕ

ಡಿ. ಎಸ್. ನಾಗಭೂಷಣ

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೬

ಈ ಸಂಕಲನದ ಸಂಪಾದಕರು

ಜಿ.ಪಿ. ಬಸವರಾಜು

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, (ಚಿತ್ರದುರ್ಗ ಜಿಲ್ಲೆ)

ಈ ಸಂಕಲನದಲ್ಲಿ....

O

ತಿದ್ದುಪಡಿ: 10ನೇ ಪುಟದ ಕವಿತೆಯ ಶೀರ್ಷಿಕೆಯನ್ನು 'ಮಡಿವಾಳಗಿತ್ತಿ ಸಂಕದ ಮೇಲೆ' ಎಂದೂ; 11ನೇ ಪುಟದ ಕವನದ ಶೀರ್ಷಿಕೆಯನ್ನು 'ಸಾನೆಟ್' ಎಂದೂ; 18ನೇ ಪುಟದಲ್ಲಿ ಕವಿಯ ಹೆಸರನ್ನು ಗುರುರಾಜ ಮಾರ್ಪಳ್ಳಿ ಎಂದೂ; 23ನೇ ಪುಟದ ಕೊನೆಯಲ್ಲಿರುವ ಉಲ್ಲೇಖದ ಕೊನೆಯ ಸಾಲನ್ನು—Shelly (A defence of Poetry) ಎಂದೂ; 60ನೇ ಪುಟದ ಕೊನೆಯ ಪ್ಯಾರಾದ ಮೊದಲ ಸಾಲಿನಲ್ಲಿರುವ 'ಅಪಾತ್ರಗಳಪರಾಧಿ' ಎನ್ನುವುದನ್ನು 'ಪಾತ್ರಗಳ ಅಪರಾಧಿ ಎಂದೂ ಓದಿಕೊಳ್ಳಬೇಕಾಗಿ ಕೋರಿಕೆ.

ಜೋಸೆಫ್ ಬ್ರಾಡ್‌ಸ್ಕಿ :

ಒಂದು ಪರಿಚಯ ಹಾಗೂ ಕೆಲವು ಕವಿತೆಗಳು

ಕೆ. ವಿ. ತಿರುಮಲೇಶ್

ಜೋಸೆಫ್ ಅಲೆಕ್ಸಾಂಡ್ರೋವಿಚ್ ಬ್ರಾಡ್‌ಸ್ಕಿ ರಶಿಯಾದ 'ದೇಶಭ್ರಷ್ಟ' ಲೇಖಕರ ಪರಂಪರೆಗೆ ಸೇರಿದ ಇನ್ನೊಂದು ಹೆಸರು. 1940ರಲ್ಲಿ ಒಂದು ರಶಿಯನ್ ಯೆಹೂದಿಕುಟುಂಬದಲ್ಲಿ ಜನನ. ಹದಿನೈದನೆ ವಯಸಿನಲ್ಲಿ ಶಾಲೆಯ ವಿದ್ಯಾಭ್ಯಾಸ ಅಂತ್ಯ. ಹದಿನೆಂಟನೆ ವರ್ಷದಿಂದ ಕವಿತೆ ಬರೆಯೋದಕ್ಕೆ ಆರಂಭ.

ಇಂಗ್ಲೀಷಿನ ಡನ್ ಮೊದಲಾದ ಮೆಟಾಫಿಸಿಕಲ್ ಕವಿಗಳ ರೀತಿಯ ಬರವಣಿಗೆ, ಸ್ವತಂತ್ರ ಮನೋಧರ್ಮ ಸೋವಿಯೆಟ್ ಅಧಿಕಾರಿಗಳ ಗಮನಕ್ಕೆ ಬೀಳದೆ ಇರಲಿಲ್ಲ. ಈ ಬಗ್ಗೆ ಅವನಿಗೆ ಸರಕಾರಿ ಮುನ್ಸೂಚನೆಗಳನ್ನು ಕೊಡಲಾಯಿತು. 1964ರಲ್ಲಿ 'ಸಾಮಾಜಿಕ ಪರೋಪಜೀವಿಯೆಂದು ಬಂಧನ, ವಿಚಾರಣೆ ಹಾಗೂ ಐದು ವರ್ಷ ಕಾಲ ಉತ್ತರ ಪ್ರಾಂತ್ಯವೊಂದರಲ್ಲಿ ಕಠಿಣ ಶಿಕ್ಷೆಗೆಂದು ರವಾನೆ. ಇಪ್ಪತ್ತು ತಿಂಗಳಲ್ಲಿ ಬಿಡುಗಡೆ. 1972ರಲ್ಲಿ ರಶಿಯಾ ಬಿಟ್ಟು ಹೋಗಲು ಸರಕಾರಿ ಸೂಚನೆ. ಕೆಲವು ಕಾಲ ಯುರೋಪಿನಲ್ಲಿ ಸುತ್ತಾಡಿ ನಂತರ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಆಗಮನ. ಅಂದಿನಿಂದ ಅಮೇರಿಕದ ಹಲವು ಯುನಿವರ್ಸಿಟಿಗಳಲ್ಲಿ ಪಾಠ ಪ್ರವಚನ, ರಶಿಯನ್ ಭಾಷೆಯಲ್ಲಿ ಬರವಣಿಗೆ ಮುಂದರಿಕೆ. ಈ ಮಧ್ಯೆ ಬ್ರಾಡ್‌ಸ್ಕಿ ಸ್ವ-ಪ್ರಯತ್ನದಿಂದ ಇಂಗ್ಲೀಷ್‌ನಲ್ಲಿ ಪಾಂಡಿತ್ಯವನ್ನು ಗಳಿಸಿಕೊಂಡ. ಅದೇ ರೀತಿ ರಶಿಯನ್ ಸಾಹಿತ್ಯ ಪರಂಪರೆಯನ್ನೂ ಅರಗಿಸಿಕೊಳ್ಳಲು ಅವನು ಮರೆಯಲಿಲ್ಲ.

ರಶಿಯಾದಲ್ಲಿ ಬ್ರಾಡ್‌ಸ್ಕಿಯ ಕವಿತೆಗಳು ಇನ್ನೂ ಸಾಕಷ್ಟು ಪ್ರಮಾಣದಲ್ಲಿ ಪ್ರಕಟಕ್ಕೆ ಬಂದಿಲ್ಲ, ಆದರೆ ಅಮೇರಿಕಾದಲ್ಲಿ ಪ್ರಕಟವಾಗಿವೆ. ಹಾಗೂ ಬ್ರಾಡ್‌ಸ್ಕಿಯ ಕವಿತೆಗಳು ಇಂಗ್ಲಿಷ್, ಫ್ರೆಂಚ್, ಇಟಾಲಿಯನ್, ಜರ್ಮನ್ ಮುಂತಾದ ಭಾಷೆಗಳಿಗೆ

ಅನುವಾದಗೊಂಡಿವೆ. 1973ರಲ್ಲಿ ಜಾರ್ಜ್ ಕ್ಲಿನೆಯ ಇಂಗ್ಲಿಷ್ ಭಾಷಾಂತರ JOSEPH BRODSKY : SELECTED POEMS ಎಂಬ ಹೆಸರಿನಲ್ಲಿ ಪ್ರಕಟವಾಗಿದ್ದು ಇದರ ಪೆಂಗ್ವಿನ್ ಪ್ರತಿ ಈಗ ಭಾರತದಲ್ಲಿ ಸಿಗುತ್ತದೆ. (ಇಲ್ಲಿ ಈಗ ಕೊಟ್ಟಿರುವ ಕನ್ನಡಾನುವಾದಗಳನ್ನು ಕ್ಲಿನೆಯ ಇಂಗ್ಲಿಷ್ ತರ್ಜುಮೆಯಿಂದ ಮಾಡಿದ್ದು.) ಹಾಗೂ ಕ್ಲಿನೆಯ ಪುಸ್ತಕಕ್ಕೆ ಡಬ್ಲ್ಯೂ. ಎಚ್. ಆಡೆನ್‌ನ ವಿಮರ್ಶಾತ್ಮಕ ಮುನ್ನುಡಿ ಕೂಡ ಇದೆ.

1987ರ ನೊಬೆಲ್ ಪಾರಿತೋಷಕ ಪಡೆದಬ್ರಾಡ್‌ಸ್ಕಿಯು ಸ್ವೀಕಾರ ಭಾಷಣ ಈಚೆಗೆ ಇಲಸ್ಟ್ರೇಟೆಡೆ ವೀಕ್ಲಿಯಲ್ಲಿ (ಫೆಬ್ರವರಿ 21, 1988) ಪ್ರಕಟವಾಗಿದೆ. ಈ ಭಾಷಣದಲ್ಲಿ ಬ್ರಾಡ್‌ಸ್ಕಿ, ಸಾಹಿತ್ಯ ಮತ್ತು ಸ್ವಾತಂತ್ರ್ಯ, ಸೌಂದರ್ಯ ಮತ್ತು ತತ್ವ, ಮನುಷ್ಯ ಜೀವನ ಮತ್ತು ಕಾವ್ಯ ಮುಂತಾದ ವಿಷಯಗಳ ಬಗ್ಗೆ ಹಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದಾನೆ. ಕಲೆಯೆನ್ನುವುದು ಮನುಷ್ಯಜೀವನ ಬೆಳವಣಿಗೆಗೆ ಪ್ರಾಸಂಗಿಕವಾಗಿ ಬಂದುದಲ್ಲ; ಕಲೆಯಿಂದಾಗಿ ಈ ಬೆಳವಣಿಗೆ ಸಾಧ್ಯವಾಯಿತು. ಪ್ರಾಣಿವರ್ಗದಿಂದ ಮನುಷ್ಯ ವರ್ಗವನ್ನು ಪ್ರತ್ಯೇಕಿಸುವುದು ಭಾಷೆಯೆಂದಾದರೆ, ಸಾಹಿತ್ಯ ಅರ್ಥಾತ್ ಕಾವ್ಯವೆನ್ನೋದು ಮನುಷ್ಯವರ್ಗದ ಅಂತಿಮ ಗುರಿ, ಎನ್ನುತ್ತಾನೆ ಬ್ರಾಡ್‌ಸ್ಕಿ. ಸಾಧಾರಣ ಜೀವನದಿಂದ ಸಾಹಿತ್ಯ ಯಾಕೆ ಭಿನ್ನದಾಗಿದೆಯೆಂದರೆ ಸಾಹಿತ್ಯ ಪುನರಾವರ್ತನೆಯನ್ನಾಗಲಿ, ಅನುಕರಣೆಯನ್ನಾಗಲಿ ಸಹಿಸುವುದಿಲ್ಲ. ಒಂದೇ ಜೋಕನ್ನು ಹಲವು ಬಾರಿ ಹೇಳಿ ಜನರನ್ನು ನಗಿಸಬಹುದು. ಆದರೆ ಸಾಹಿತ್ಯದಲ್ಲಿ ಇದನ್ನೇ ಕ್ಲೀಷೆ ಎನ್ನುತ್ತಾರೆ, ಸಾಹಿತ್ಯವನ್ನು ನಮ್ಮ ಇತಿಹಾಸವೆಂದು ಕರೆಯಲಾಗದು. ಸಾಹಿತ್ಯವು ಇತಿಹಾಸಕ್ಕೆ ಸಮಾನಂತರವಾಗಿ, ಅಥವ ತೂಕ ಮುಂದೆಯೇ ಹೊಗುವಂಥದು. ಆದ್ದರಿಂದಲೆ ಸಾಹಿತ್ಯ ಆಗಿಂದಾಗ್ಗೆ ನಮ್ಮ ಬೆಳವಣಿಗೆಗಿಂತಲೂ ಮುಂಡೆ ಹೋದಂತೆ ಕಾಣಿಸುವುದು.

ನಮ್ಮ ತಾತ್ವಿಕ ನೆಲೆಗಟ್ಟನ್ನು ಕೊನೆಗೂ ನಾವು ಕಂಡುಕೊಳ್ಳಬೇಕಾದ್ದು ಸಾಹಿತ್ಯದಲ್ಲೇ ಎನ್ನುವುದು ಬ್ರಾಡ್‌ಸ್ಕಿಯು ಮತ. ಯಾವ ರಾಜಕೀಯ ಸಿದ್ಧಾಂತಕ್ಕಿಂತಲೂ ಈ ವಿಷಯದಲ್ಲಿ ಸಾಹಿತ್ಯವೇ ಹೆಚ್ಚು ವಿಶ್ವಾಸಾರ್ಹವಾದುದು. ಸಾಹಿತ್ಯದ ವಿರುದ್ಧ ನಡೆಯುವಂಥ ಹಿಂಸಾಚರಣೆಗಳನ್ನು ತಡೆಯುವುದು ಸಾಧ್ಯವೇ? ಒಂದು ಸರಕಾರವು ಮಾಡಬಹುದಾದ ದಮನಕ್ಕಿಂತ ಓದುಗರು ಓದದೇ ಮಾಡುವ ದಮನವೇ ಹೆಚ್ಚು ಗಂಭೀರವಾದುದು. ಆದರೆ ಇಂಥ ಕಾರ್ಯದ ಶಿಕ್ಷೆ ಕೂಡ ಇದರಲ್ಲೇ ಇದೆ ಎಂಬುದನ್ನು ಮರೆಯಲಾಗದು. ಓದದೆ ಇರುವ ವ್ಯಕ್ತಿ ತನ್ನ ಬದುಕನ್ನೇ ಇದಕ್ಕೆ ದಂಡ ತೆರಬೇಕಾಗುತ್ತದೆ. ಅದೇ ಒಂದು ರಾಷ್ಟ್ರ ಹೀಗೆ

ಮಾಡಿದರೆ ತನ್ನ ಚರಿತ್ರೆಯನ್ನೇ ದಂಡ ತರಬೇಕಾಗುವುದು. ಆದರೆ ಬ್ರಾಡ್‌ಸ್ಕಿ ಕೇವಲ ಅಕ್ಷರಜ್ಞಾನದ ಬಗ್ಗೆಯಾಗಲಿ, ವಿದ್ಯಾಭ್ಯಾಸದ ಬಗ್ಗೆಯಾಗಲಿ ಈ ಮಾತನ್ನ ಹೇಳುತ್ತಿಲ್ಲ, ಲೆನಿನ್, ಸ್ಟಾಲಿನ್, ಮಾವೊ ಎಲ್ಲರೂ ವಿದ್ಯಾವಂತರೇ ಅಲ್ಲವೆ ? ಆದರೆ ಅವರ ಹಿಟ್‌ಲಿಸ್ಟು ರೀಡಿಂಗ್‌ಲಿಸ್ಟಿಗಿಂತಲೂ ಜಾಸ್ತಿಯಾಗಿತ್ತು.

ಕವಿತೆ ಬರೆಯುವ ಕ್ರಿಯೆ ಕವಿಗೆ ತನ್ನ ಪ್ರಜ್ಞೆಯನ್ನು ಉತ್ಕಟಸ್ಥಿತಿಗೆ ಕೊಂಡೊಯ್ಯುವಂಥ ವಿಧಾನ. ಒಮ್ಮೆ ಇದನ್ನು ಅನುಭವಿಸಿದವನು ಮತ್ತೆ ಮತ್ತೆ ಅನುಭವಿಸಲು ಯತ್ನಿಸುತ್ತಾನೆ. ಆದ್ದರಿಂದಲೆ ಕವಿಗೆ ಕವಿತೆಯಿಂದ ಬಿಡುಗಡೆಯಿಲ್ಲ–ಎನ್ನುತ್ತಾನೆ ಬ್ರಾಡ್‌ಸ್ಕಿ.

ಇಲ್ಲಿವೆ ಬ್ರಾಡ್‌ಸ್ಕಿಯ ಕೆಲವು ಕವಿತೆಗಳು :—

ಈ ನಿಯಸ್ ಮತ್ತು ಡೈಡೋ

ಆ ಮಹಾಮಾನವ ಕಿಟಕಿಯ ಹೊರ ನೋಡಿದನು ;
ಇತ್ತ ಇವಳ ಇಡಿಯ ಜಗತ್ತೇ ಅವನ ವಿಶಾಲ
ಗ್ರೀಶಿಯನ್ ಟ್ಯೂನಿಕಿನ ಅಂಚಿನಲಿ ಮುಗಿದಿತ್ತು, ಹಾಗೂ ಅದರ
ನಿರಿಗೆಗಳ ಸಮೃದ್ಧತೆಗೆ, ಎಷ್ಟೋ ವರ್ಷಗಳಿಂದ ನಿಶ್ಚಲ
ಗೊಂಡಸಮುದ್ರ ತರಂಗಗಳ ಘನೀಕೃತ ನೋಟವಿತ್ತು.
ಅವನಿನ್ನೂ ನೋಡುತ್ತಲೇ ಇದ್ದ
ವಿಶಾಲ ಕಿಟಕಿಯ ಹೊರಗೆ, ದೃಷ್ಟಿಯೂ ಎಷ್ಟೊಂದು ದೂರ:
ತುಟಿ ಮರಗಟ್ಟಿದಂತೆ ಹಾಗೂ ಕಡಲು ಚಿಪ್ಪಿಯ ರೂಪಿಸುವಂತೆ,
ಬಚ್ಚಿಟ್ಟುಕೊಂಡಂತೆ ಅಂತರಂಗದ ನಿಶ್ಶಬ್ದ ಗರ್ಜನೆಯು.
ತಳತಳಿಸುವ ದಿಗಂತವೂ ಕೈಯ ಗ್ಲಾಸಿನಲಿ
ತಟಸ್ಥ.
ಇವಳ ಅಪರಿಮಿತ ಪ್ರೇಮವೋ

ಒಂದು ಮೀನಾಗಿ ಕ್ಯಾಪಿಸಿತು; ಆದರೂ
ಅವನ ಹಡಗಿನ ಹಿಂದೆ ಅದೂ ಹಾರಬಹುದಲ್ಲ ಸಮುದ್ರಕ್ಕೆ,
ತನ್ನ ತೆಳ್ಳಗಿನ ಬಳುಕು ದೇಹದಲ್ಲಿ ತೆರೆಗಳನು ಕೊರೆಯುತ್ತ,

ಹೇಗಾದರೂ ಅವನ ಸೇರಿಕೊಳ್ಳಲುಬಹುದು-ಒಂದೇ,
ಆತನೀಗಾಗಲೇ ನಡೆದಿದ್ದಾನೆ ಒಣನೆಲದಲ್ಲಿ, ಮನದಲ್ಲಿ.
ಕಡಲಾಯ್ತು ಹೊಳೆವ ಕಣ್ಣೀರ ಕಡಲು.
ಆದರೂ, ಎಲ್ಲರೂ ತಿಳಿದಂತೆ, ನಮ್ಮ ಸಂಕಟದ
ಉತ್ಕಟ ಕ್ಷಣದಲ್ಲಿ ಹೊಸ ಗಾಳಿಗಳು ಬೀಸುವುವು.
ಆ ಮಹಾ ವ್ಯಕ್ತಿ ಕಾರ್ತೇಜನಿಂದ ತೆರಳಿದನು.

ಡೈಡೋ ಒಬ್ಬಳೇ

ನಿಂತಳು ಕೋಟೆಗೋಡೆಯ ಹೊರಗೆ ಸೈನಿಕರು
ಹಚ್ಚಿದ್ದ ಬೆಂಕಿಯ ಮುಂದೆ, ಹಾಗೂ ಅಲ್ಲಿ—
ಧಗೆ ಮತ್ತು ಹೊಗೆಯ ಮಧ್ಯದಲಿ ಕಂಪಿಸುವ
ಬಂದು ದೃಶ್ಯದಲಿ ಎಂಬಂತೆ—ನೋಡಿದಳು ಮಹಾ ಕಾರ್ತೇಜ್ ನಿಶ್ಯಬ್ದ
ಉರಿದು ಬೀಳುವುದನ್ನು,
ಕೇಟೋನ ಕಾಲಜ್ಞಾನಕ್ಕಿಂತ ಎಷ್ಟೋ ಕಾಲಗಳ ಮೊದಲು.

ಟೆಲಿಮಾಖಸ್‌ಗೆ ಬಿಡೀಸಿಯಸ್

ಪ್ರೀತಿಯ ಟೆಲಿಮಾಖಸ್,

ಟ್ರೋಜನ್ ಯುದ್ಧ

ಮುಗಿಯಿತು; ಯಾರು ಗೆದ್ದರೋ ನನಗೆ ತಿಳಿಯದು.
ಗ್ರೀಕರೇ ಖರೆ, ಅವರು ಮಾತ್ರವೇ ಅಷ್ಟು ಮಂದಿ ಸತ್ತವರ
ತೊರೆಯಬಲ್ಲರು ತಾಯ್ನಾಡಿನಿಂದ ಅಷ್ಟೊಂದು ದೂರ.
ಆದರೂ, ನನ್ನ ಗೃಹಾಗಮನವೊಂದೆ ಇಷ್ಟು ನಿಧಾನ.
ಅನಿಸುವುದು—ಸಾವಲ್ಲಿ ಕಾಲಹರಣವಗೈಯುತಿದ್ದಂತೆಯೇ
ಇಲ್ಲಿ ಈ ಹಳೆಯ ಪೋಸಿಡೋನ್ ಮೈ ಮುರಿದು ಚಾಚಿದ ಹಾಗೆ,

ಎಲ್ಲಿರುವೆ ಯಾವುದೀ ಜಾಗ ಗೊತ್ತಿಲ್ಲ.
ಯಾವುದೋ ಕೊಳಕು ದ್ವೀಪವೆ ಸರಿ,
ಪೊದೆಗಳೂ, ಬಿಡಾರಗಳೂ, ಘೀಳಿಡುವ ಹಂದಿಗಳೂ.

ಕಳೆ ಬೆಳೆದ ತೋಟ; ರಾಜ್ಞಿಯೋ ಯಜಮಾನಳಾದರೂ ಅಥವ.
ಹುಲ್ಲು, ಭಾರೀ ಶಿಲೆಗಳೂ.... ಟೆಲಿಮಾಖಸ್, ಮಗೂ!
ಅಲೆಮಾರಿಗೆಲ್ಲ ನಡುಗಡ್ಡೆಗಳೂ ಕಾಣಿಸುವುವು
ಒಂದೇ ತರ. ತೆರೆಯೆಣಿಸುತ್ತ ಮನಸ್ಸು
ಮುಗ್ಗರಿಸಿ ಬೀಳುವುದು. ಕಡಲ ಕ್ಷಿತಿಜವು ಚುಚ್ಚಿ
ಕಣ್ಣು ತುಂಬುವುದು. ನೀರ ಸೀರ್ಪಣಿ ಕಿವಿಗೆ ಗಿಡಿಯುವುದು.
ಯುದ್ಧ ಹೇಗಾಯಿತೋ ನನಗೆ ನೆನಪಿಲ್ಲ;
ನಿನ್ನ ವಯಸ್ಸೂ ಕೂಡ— ಈಗ ಗೊತ್ತಿಲ್ಲ.

ಬೆಳೀ, ಹಾಗಾದರೆ, ನನ್ನ ಟೆಲಿಮಾಖಸ್, ಗಟ್ಟಿಮುಟ್ಟಾಗಿ.
ದೇವರಿಗೇ ಗೊತ್ತು ಇನ್ನೊಮ್ಮೆ ನಾವು ಕಾಣುವೆವೋ
ಇಲ್ಲವೋ. ಮುಂಗಾಲ ಕೆರೆವ ಹೋರಿಗಳ ನಿನ್ನೆದುರು
ನಾನು ಪಳಗಿಸಿದಂದು ಶಿಶು ನೀನು— ಈಗ ಬೆಳೆದಿರುವೆ.
ಪಲಮನ್ನೈಡೀಸನ ಕಪಟ ಅಲ್ಲದಿರುತಿದ್ದರೆ
ಒಂದೆ ಮನೆಯಲಿ ನಾವು ಇರಬಹುದಾಗಿತ್ತು ಈಗಲೂ.
ಅಥವ ಅವನೇ ಸರಿಯಿದ್ದರೂ ಇರಬಹುದು; ನನ್ನಿಂದ ದೂರ
ನೀನೀಗ ಸಕಲ ಈಡಿಪಸ್ ಕಾಮನೆಗಳಿಂದ ಮುಕ್ತ
ಹಾಗೂ ನಿನ್ನ ಕನಸುಗಳು, ಟೆಲಿಮಾಖಸ್, ದೋಷರಹಿತ.

ಸಾಲುಗಾಡಿಗಳು

ಹೆಚ್ಚೆಚ್ಚು ನೆರಳುಗಳು ಚೆಲ್ಲಿದ ಹಾಗೆಯೇ
ಹೆಚ್ಚೆಚ್ಚು ದೂರ ಸಾಗುವುವು ಗಾಡಿಗಳು
ಕೊಯ್ಲಾದ ಗದ್ದೆಗಳ ನೋವ ಹಿಂದಕೆ ಬಿಟ್ಟು
ತೊರಚುಗಳು ಕೂಡ ಕೀರುವುವು ಹಾಗೆಯೇ
ಓಳಿಯಿಂದೋಳಿಗೂ ವಾಲುತ್ತ ಹೋಗುವುವು
ಹಸಿರು ಹೆಚ್ಚೆಚ್ಚು ದಟ್ಟೈಸಿದಂತೆಯೇ
ಸಮತಟ್ಟು ಬಯಲುಗಳೂ ಮಾಸಿ ಹೋಗುವುವು.
ಗಾಡಿಗಳು ಕಿರುಚುವುವು ಇನ್ನಷ್ಟು ಹಿರಿದಾಗಿ.

ಭೂರ್ಜವೃಕ್ಷಗಳ ಬೆತ್ತಲೆ ತುದಿಗಳೂ
ಹಳದಿ ಬರ್ಚ್ ಕುಂಚಗಳೂ ನೋಡುವುವು—
ತಮ್ಮ ಮೈ ನಡುಕ ನಿಂತಾಗ—
ಕಟ್ಟಿರುವ ಕಂತೆಗಳು ಹೇಗೆ
ತೆರೆದ ಆಕಾಶದ ಹರವ ಆಸೆಯಲಿ ದಿಟ್ಟಿಸುತ್ತವೆ ಎಂದು.
ಮತ್ತೊಮ್ಮೆ ತೊಡಕು ಗಾಲಿಗಳಿಗೇನೋ.
ಮರಗಳಿಗೆ ಕೇಳಿಸದು ಹಕ್ಕಿಗಳ ಚಿಲಿಪಿಲಿ.
ಕೇಳಿಸುವುದೊಂದೇ ಅರೆಗಾಲುಗಳ ಕೀರಾಟ
ಗಾಡಿ ಹೊಡೆವವರ ಬಯ್ಗಳದ ಒದರಾಟ.

ಮಡಿವಾಳಗಿತ್ತಿ ಸಂಕದ ಮೇಲೆ

ಮಡಿವಾಳಗಿತ್ತಿ ಸಂಕದ ಮೇಲೆ, ಎಲ್ಲಿ ನೀನೂ ನಾನೂ
ಮಧ್ಯರಾತ್ರಿಯ ಗಂಟೆ ಮುಳ್ಳುಗಳಂತೆ ಪರಸ್ಪರ ಅಪ್ಪಿ
ನಿಂತಿದ್ದೆವೋ, ಮರುಕ್ಷಣವೆ ದೂರ ಸರಿವವರು,
ಒಂದು ದಿನಕ್ಕಲ್ಲ, ಎಲ್ಲ ದಿನಕ್ಕೂ—ಇಂದು ಮುಂಜಾನೆ ನಮ್ಮ
ಸಂಕದ ಮೇಲೊಬ್ಬ ನಾರ್ಸಿಸ್ಟಿಕ್ ಬೆಸ್ತ,
ಗಾಳದ ಬೆಂಡ ಮರೆತು, ಬಿಡುಗಣ್ಣಿನಲಿ ನೋಡುವನು ತನ್ನ
ಅಸ್ಥಿರ ನದೀ ಬಿಂಬದ ಕಡೆಗೆ.

ಅಲೆಗಳ ಮೇಲೊಬ್ಬ ಮುದುಕ, ಅಲೆಗಳ ಮೇಲೊಬ್ಬ ಯುವಕ;
ಹುಬ್ಬಿಂದ ಹುಬ್ಬಿಗೆ ಸುಕ್ಕುಗಳ ಬಲೆ ಹರಿದು
ಯೌವನದ ಚಹರೆಯಲಿ ಕರಗುವುದು.
ನಮ್ಮ ಜಾಗವ ಹಿಡಿದು—ಯಾಕಿರದು ? ಅವನ ಹಕ್ಕು ಅದು.
ಈಚಿನ ವರ್ಷಗಳಲ್ಲಿ ಯಾವುದು ಏಕಾಕಿಯೋ
ಅದು ಬೇರೊಂದು ಕಾಲದ ಪ್ರತೀಕವೂ ಹೌದು.
ನೋಡಲಿ ಅವನ ಕೋರಿಕೆಯೋ ಜಾಗದ ಕುರಿತು,
ನೋಡಲಿ

ನೀರೊಳಗೆ, ಸ್ಥಿತಪ್ರಜ್ಞನಾಗಿ, ತನ್ನೊಳಗೆ,
ತನ್ನ ತಾನೇ ಅರಿವುದಾದರೆ ಅದೂ ಆಗಲಿ. ನದಿಯಂತೂ
ಇಂದು ಅವನಿಗೇ. ಹೊಸ ಒಕ್ಕಲು ಬಂದು
ಮನೆಯೊಳಗೆ ಕನ್ನಡಿ ಹೊಡೆದು
ಉಳಿದ ವಸ್ತುಗಳ ನಿನ್ನ ತಂದಿರದ ಹಾಗೆ.

ಸಾನೆಟ್

ಸೆರೆಮನೆ ಕಿಟಿಕಿಗಳ ಬದಿಯಿಂದ ಜನವರಿ
ಹಾರಿಹೋಯಿತು ಎಷ್ಟು ಬೇಗ. ಕೋಣೆಗಳ ಚಕ್ರವ್ಯೂಹದಲಿ
ಕೈದಿಗಳು ಹಾಡಿರುವುದ ಕೇಳಿರುವೆ:
"ನಮ್ಮೊಬ್ಬ ಬ್ರದರಿಗೆ ವಾಪಸು ಬಂತು ಸ್ವಾತಂತ್ರ್ಯ."
ಅವರ ಸಣ್ಣನೆ ದನಿ ಕೇಳಿಸುವುದೀಗಲೂ,
ಮಾತಿರದ ವಾರ್ಡನರ ಹೆಜ್ಜೆಗಳ ದನಿಯೂ,
ಅಲ್ಲದೆ ನೀ ಸಹಾ ಹಾಡುವಿಯಲ್ಲ ಮೌನದಲಿ :
"ಹೋಗು, ಜನವರಿಯೇ."
ಕಿಟಿಕಿ ಬೆಳಕಿಗೆ ಮುಖವಿರಿಸಿ
ಬೆಚ್ಚನೆ ಗಾಳಿಯನು ಗಳಗಳನೆ ಕುಡಿಯುವೀ.
ನಾ ಮಾತ್ರ ಇನ್ನೊಮ್ಮೆ ಹೊರಡುವೆನು, ಯೋಚನೆಯಲ್ಲಿ,
ಜಗಲಿಗಳ ಉದ್ದವೂ, ಹಿಂದಿನ ತನಿಖೆಯಿಂದ
ಮುಂದಿನದಕ್ಕೆ—ಆ ದೂರ ದೇಶಕ್ಕೆ
ಎಲ್ಲಿ ಮಾರ್ಚಿಯು ಇಲ್ಲ, ಫೆಬ್ರವರಿಯೂ ಇಲ್ಲ.

ನೂರು ಕವಿತೆಗಳು

ವೈದೇಹಿ

ಅಡುಗೆ ಮನೆಯ ಹುಡುಗಿ

ಇವೆಯಂತೆ ತರತರದ ಅರ್ಥ
ಅಡುಗೆ ಮನೆಗೆ— ತರತರದ ಪದಾರ್ಥಗಳಂತೆ
ಆದರೆ ಆ ಹುಡುಗಿಗಂತೂ ಇದೇ
ಇದೇ ಮನೆ ಅಡುಗೆ ಮನೆ ಆ ಮನೆ ಈ ಮನೆ

ಪ್ರತಿ ಪ್ರಾಣಿಗೂ ಒಂದು ಹೊಟ್ಟೆ ಇದ್ದ ಹಾಗೆ
ಅವಳ ಅಡುಗೆ ಮನೆ
ಯಾರ ಸಿದ್ಧಾಂತ ಪಾಕವೋ
ಬಾಗಿಲಿಲ್ಲ ಕಿಟಕಿಯಿಲ್ಲ
ಹೊಗೆನಳಿಗೆಯೂ ಇಲ್ಲ
ಕೊನೇ ಪಕ್ಷ ಒಂದು ಕಿಂಡಿಯಾದರೂ....
ಹಂಬಲಿಸುತ್ತಾಳೆ.

ಹುಡುಗಿ ಆಡುವಾಗ ಹೊರಗೆ
ಹಕ್ಕಿ ಪಕ್ಕಿ ಮತ್ತು ಮಕ್ಕಳಾಡುವ ಸದ್ದು
ಬಸ್ಸು ಕಾರು ಆಟೋ ದೂರಕೋ
                              ಕಡಲ ತೀರಕೋ

ಓಡುವ ಸದ್ದು.
ಮಸಾಲೆ ಕಡೆಯುತ್ತ ಕಡೆಗಣಿಸುತ್ತಾಳೆ.
ಅಭಾವವಿದ್ದರೆ ವೈರಾಗ್ಯ ತಾನೆ?

ಆವರೂ ಒಮ್ಮೊಮ್ಮೆ ಆಗಸದಲ್ಲಿ
ಕೇಳಿಸಿದರೆ ವಿಮಾನ !
ವಿಮಾನ ವಿಮಾನ ! ಇದ್ದ ಇದ್ದಲ್ಲೇ ಕೂಗುತ್ತಾಳೆ
ಎಷ್ಟೆಂದರೂ ಉಪ್ಪು ಹುಳಿ ವಯೋಮಾನ
ಕೇಳುವಳು– ಎತ್ತ ಪಯಣ?
ಇಪ್ಪತ್ತೊಂದನೆಯ ಶತಮಾನ? ಜೊತೆಗೆ
ಕರೆದೊಯ್ಯುವೆಯ ನನ್ನ?
ಕರಗುತ್ತದೆ
ಆಗಸದ ಸದ್ದು ನಿಧಾ....ನ.

ಕ್ರಿ ಪೂ ಅಡುಗೆಮನೆಯ ಹುಡುಗಿ
ಪೂ ಪೂ ಊ
ದುತ್ತ ಹಾಡುವಳು
ಇರಬಹುದು ಈ ವಿಮಾನದೊಳಗೂ ಒಬ್ಬ
ಹಗಲು ವೇಷದ ಯಜಮಾನ
ಇರುವಂತೆ ಪ್ರತಿ ಪ್ರಾಣಿಗೂ ಕದಿಯುವ ಮತ್ತು
ಆಳುವ ಜಾಯಮಾನ.

ಮತ್ತೆ ಬರಬಹುದು ಪುಷ್ಪಕದ ರೆಕ್ಕೆ ಬಡಿಯುತ್ತಾ
ಮಾಡನ್ನು ಸೀಳಿ
ಏಣಿ ಕಳಗಿಳಿಸಿ
ಸಾಂಬ್ರಾಣಿ ಸಿಪ್ಪೆ ಬಿಡಿಸುತ್ತಿರುವ ತನ್ನ
ಎತ್ತಿ ಒಯ್ದು ಪಟ್ಟರಾಣಿಯ ಮಾಡಿ
ರಾಮ ರಾಮಾ! ಲಂಕೆಗೋ, ಅಯೋಧ್ಯೆಗೋ?
ಛೆ! ಕೇಳಿ ಹಳಸಿದ ಅವವೇ ಊರುಗಳ ಹೆಸರುಗಳು,
ಕಂಡಿದ್ದೀರಾ ಯಾರೂ ಕಾಣದಂಥಾ ಲೋಕ?
ಹಾರಲಲ್ಲಿಗೆ— ಆಜ್ಞೆ ಮಾಡುವವಳು ತಾನು

ಹೀಗೆ—
ಹಾಡು ನೇಯುವಳು ಹುಡುಗಿ
ಮುರಿಯುತ್ತ ಮೆಣಸಿನ ಚೊಟ್ಟು
ಆಕಾಶದ ಸದ್ದಿಗೆ ಕಿವಿಯ ತೆರೆದಿಟ್ಟು
ಕಳೆಯುವಳು ಆಯುಷ್ಯ ಬೊಟ್ಟು ಬೊಟ್ಟು.

ಶಿವನ ಮೀಸುವ ಹಾಡು

ಅಭಿಷೇಕ ಮಾಡಿದಳು ಗೌರಿ
ತ್ರಿಲೋಕ ಸಂಚಾರಿಗೆ
ಕರೆದೊಯ್ದಳು ಶಿವನ
ಶುಭ್ರ ಸ್ನಾನಕ್ಕೆ

ಮೂಗಾಲು ಮಣೆಯಲ್ಲಿ ಮೂಗಣ್ಣನವನ
ಕುಳ್ಳಿರಿಸಿ ಪ್ರೀತಿಯೊತ್ತಿ
ಮೂಜಗದಲೋಡಾಡಿ ಎಂತು ದಣಿದವೋ ಪಾದ
ಎಂಬ ನೆಪತುದಿಯಿಂದ ಧೂಳನೆತ್ತಿ
ಯಾರ ಮನೆ ಬೀದಿಯದು ಪತ್ತೆ ಹಚ್ಚಿ
ನಗುವ ನಟರಾಜನನು ಕರೆವಳೋ ಸ್ನಾನಕ್ಕೆ
ದುಃಖ ಹತ್ತಿಕ್ಕಿ
ಮುಗಿಯಿತೇ ಬೇಟೆ? ಪ್ರಶ್ನೆ ಚುಚ್ಚಿ.

ಇದೋ ಈ ತಂಬಿಗೆ ನೀರು ಗಂಗೆಯುವತಾರಕ್ಕೆ
ಇದು ಇಗೋ ಆ ಮಣಿಕರ್ಣಿಕೆಗೆ
ಮಿಂದ ನದಿ ನೆನಪಿಗೆ ಒಂದೊಂದು ತಂಬಿಗೆ ನೀರು
ಕಡೆಯದಿಗೋ ನನ್ನ ಅನುದಿನದ ಬಡ ಕನಲು
ಎಂದಾಗ ನೀರೊಳಗೆ ಗೌರಿ ಕಂಬನಿ ಬಿಂದು
ಮಿಸಕ್ಕನೇ ಬೆರೆತು ಬಿಸಿಯಹಾಗಲು
'ಆಯ್' ಎಂದು ಶಿವ ಬೆದರಿ
"ನನ್ನನೇನೆಂದುಕೊಂಡೆ? ನಿನ್ನ ಬಿಟ್ಟರೆ ಶುದ್ಧ ಬೈರಾಗಿ"
ಈ ಮಾತಿಗೆ "ಶಿವನೇ, ನಾನೆಷ್ಟನೆಯ ನಾರಿ?"
ಎನ್ನುತ್ತ ಮೃದು ಚಿವುಟಿ ಮೀಸುವಳು ನಮ್ಮ ಗೌರಿ,
ಬೈರಾಗಿ ಬೂದಿ ತೊಳೆಯುತ್ತ ಹಚ್ಚಗೆ ನೋಡುವಳು
ಮೆತ್ತಗೆ ಮೈ ಒರೆಸಿ ತಂಬಾಲು ಕುಡಿಸಿ
ತೊಡೆ ಮೆತ್ತೆಯನು ನೀಡಿ ಕೋರುವಳು
ಶಿವ ಶಿವಾ!
ಎಲ್ಲ ನದಿಗಳ ನೆನೆದು ಮಲಗು ದೇವ!

ನುಡಿರೇಶಿವೆಯುಡಿ ನಂಜು ನುಂಗಿದ ಕಿರಾತ
ಹೃದಯುದಲಿ ಕಚಗುಳಿಯು ಹೂವು ಹರಿಗೋಲು
ಕಚಗುಳಿಯು ಹರಿಗೋಲು ಹರನ ಹತ್ತಿಸಿಕೊಂಡು
ಮತ್ತೆ ಸಾಗಿತು ಗೌರಿಯಿಂದ ದೂರ.

ಶಿವನಿದ್ದೂ ಶಿವನಿಲ್ಲದಂಥ ಚೋದ್ಯಗಳೆಲ್ಲ
ಹೊಸತೇನು ಶಿವಕಾಮಿಗೆ?
ಮಿಸುಕಾಡದೇ ಕುಳಿತು ತಲ್ಲಣವ ತಡೆಯುವ
ಅರ್ಥ ಗರ್ವದ ಹುಡುಗಿ ನಮ್ಮ ಗೌರಿ,

ಸಂಚಾರ ಮುಗಿಸಿ ಬರುವ ಈಶ್ವರ ಜೋಗಿ
ಗೌರಿ ಕರೆವಳು ಅವನ ಸ್ನಾನಕ್ಕಾಗಿ
ಮದ್ದಿನೆಣ್ಣೆಯು ಪೂಸಿ, ಬಿದ್ದ ಕಂಗಳ ಒರೆಸಿ
ಜ್ವರ ಹಿಡಿಸಿಕೊಂಡಿರುವ ಲೋಕ ಸಂಚಾರಿಗೆ
ಕಿರಾತ ಕಡ್ಡಿಯು ಕಷಾಯು ಕುಡಿಸಿ.

ನೋಡಬಾರದು ಚೀಲದೊಳಗನು

ವ್ಯಾನಿಟಿ ಬ್ಯಾಗಿನಲಿ ಕೈ ಹಾಕಿ ನೋಡುವುದು
ಎಂದಿಗೂ ಉಚಿತವಲ್ಲ ಪುರುಷರೇ
ವ್ಯಾನಿಟಿ ಹೆಸರಲ್ಲಿ ಏನೆಲ್ಲ ಇರಬಹುದು
ಬಯಲು ಮಾಡುವರೇ?

ಒಂದು ಕನ್ನಡಿ ಹಣಿಗೆ ಕಾಡಿಗೆ ಕರಡಿಗೆ
ಪೆನ್ನು ಪೌಡರು ಕ್ಲಿಪ್ಪು ಸೆಂಟು
ಬಿಳಿ ಹಾಳೆ ಮತ್ತು ನೂಲುಂಡೆ ಇರಬಹುದು
ಗುಂಡಿ ಸೂಜಿ ಮತ್ತು ಅಡಿಕೆ ಹೋಳೂ.
ಇರಬಹುದು ಹುಣಿಸೆ ಬೀಜಗಳೂ!
ವ್ಯಾನಿಟಿ ಬ್ಯಾಗಿನಲ್ಲಿ ಬಟಾಣಿಯೇ ಇರಬೇಕೆಂದು

ಉಂಟೇ ಯಾರ ರೂಲು?
ಇದ್ದೀತು ಶುಂಠಿ ಪೆಪ್ಪರಮಿಂಟೂ, ಕಂಫಿಟ್ಟೂ.

ಒಣಗಿ ರೂಹುಗಳಾದ ಎಲೆ–ಹೂಗಳಿರಬಹುದು
ಇರಬಹುದು ಯಾರದೋ ಮನೆ ದಾರಿ ನಕ್ಷೆ
ಮರದ ಮುಚ್ಚಿಗೆಯಡಿಯ ಕೆಂಪು ನೆಲದ ತಂಪು
ಟಿಕ್ಕಿ ಎಲೆ ಪರಿಮಳ
ಮರಿ ಇಡುವ ನವಿಲುಗರಿ
ಕಾಪಿಟ್ಟಿರಬಹುದು ಪುಟ್ಟ ದಿನಗಳನ್ನು
ಇರಬಹುದು ಎಲ್ಲಿನದೋ ಮರುಳು-ಮಣ್ಣು,

ಅರೆ ಬರೆದಿಟ್ಟ ಕವನ ತೆವಳುತ್ತಲಿರಬಹುದು
ಮುಗಿಯಲಾರದ ಕತ್ತಲಲ್ಲಿ
ಒಂದು ಬಿಸುಸುಯ್ಯಲು ಶರವಸ್ತ್ರದಲಿ ಅಡಗಿ
ಗುಸುಗುಟ್ಟುತಿರಬಹುದು ಗಂಟಲಲ್ಲೇ

ವಿಳಾಸ ಹೊತ್ತಿರುವ ಖಾಲಿ ಲಕೋಟೆಯಲಿ
ಕೆಂಪು ಸೂರ್ಯನ ಚಿತ್ರ ಮಾತ್ರವಿರಬಹುದು
ಬಂದ ಪತ್ರದ ಉಸಿರು ಒಗಟಾಗಿ ಇರಬಹುದು
ಚಂದದಕ್ಷರ ಬಂಧದಲ್ಲಿ
ಚಂದದಕ್ಷರ ಸುತ್ತ ನತ್ತು ಮುತ್ತಿನ ಚಿತ್ತು
ಉತ್ಕಂಠ ರಾಗದ ಮುಟ್ಟು ಇರಬಹುದು
ಕರಿಮೀಸೆಯಡಿಯಲ್ಲಿ ಮಿರಿಮಿಂಚು ನಗೆಯಲ್ಲಿ
ಹೆಸರಿಲ್ಲದ ಫೋಟೋ ಕೂಡ ಇರಬಹುದು!

ಬಾಲ್ಯಯೌವನ ವೃದ್ಧಾಪ್ಯ ನೆರಳುಗಳು
ಸೇರಿಕೊಂಡಿರಬಹುದು ಆ ಕೋಶದಲ್ಲಿ
ಗಾರ್ಹಸ್ಥ್ಯ ವೇಶ್ಯಾ ಅಭಿಸಾರ ವಾಸನೆಗಳು
ಧರ್ಮ ಲಕ್ಷಣ ಅವಸ್ಥಾಂತರ ವೇಷದಲ್ಲಿ

ಒಂದಕೊಂದಕೆ ಅರ್ಥಾರ್ಥವಿಲ್ಲದೆಯೂ
ಇಲ್ಲವೇ ಹಲವು ಜೊತೆಗಳು?
ಹಾಗೆಯೇ ಈ ಚೀಲದೊಳಗಿನ ಲೋಕಗಳು!

ಚೀಲದೊಳಗಿನ ಲೋಕ ಮತ್ತು ಮನಸಿನ ಲೋಕ
ಒಂದೇ ಎಂದೀಗ ತೂಗಿ ನೋಡುವಿರೇನು?
ಬೆಪ್ಪು ಕಾಪುರುಷರೇ
ವ್ಯರ್ಥ ಕೈ ನೋವೇಕೆ?
ತೂಗಲಾರಿರಿ ತಪ್ಪು ಸಮೀಕರಣವನು.

ಮನಸಿನೊಳಗಡೆ ಎಂದೂ
ಇಣುಕಲಾರಿರಿ ನೀವು. ಹುಡುಕಿ
ತೆಗೆಯಲಾರಿರಿ ಏನನೂ
ಇಣುಕಲಾದರೂ ಹಾಗೆ ಮಾಡಲಾಗದು ನೀವು
ಚೀಲದೊಳಗಿನ ತಿರುಳನು
ಹುಡುಕಿ ತೆಗೆಯಲಾದರೂ ಹಾಗೆ
ಮಾಡಲಾಗದು ನೀವು
ನೋಡಬಾರದು ಚೀಲದೊಳಗನು.

ಎರಡು ಪದ್ಯಗಳು

ಗುರುರಾಜ ಮಾರ್ಪಹಳ್ಳಿ

ಮಾರ್ಗದರ್ಶಿಯ ಸ್ಮೃತಿಗಳು

ಕಂಡೆ ಮನುಷ್ಯಾಕೃತಿಗಳೆ
ಅವಶೇಷಗಳಾಗಿ
ಅರಿತ ಆಪ್ತ ನೆರಳುಗಳೆ
ಅಸ್ಥಿ ಪಂಜರಗಳಾಗಿ
ಕಾಡುತ್ತವೆ—ಅಹೋರಾತ್ರಿ

ಉಳಿದಿದ್ದು ಕೇವಲ ದೇಹದ ಭಗ್ನಕೋಟೆ
ಯುಗಮಾನ ಕೇಳುವುದು ಆರ್ತನಾದ
ಹರಡಿವೆ ಒಳಗೆ ಮಾಂಸದ ಬಳ್ಳಿಗನಸು
ನೀರ ಮೃದುತೆರೆ–ಒತ್ತೆಯಿಟ್ಟು ಲಜ್ಜೆ
ವಿವಶವಾಗಿವೆ ಸುಖದ ಮುಖ
ಹಾಸಿದಂಥ ಹುಲ್ಲೂ ಮುಖಮುಲ್ಲು ಲೋಕಕ್ಕೆ
ದೇಹದೊಳಗಿನ ಹಸಿರಕ್ತ
ಮಾಸನೆಯ ರುಜುವಾತು

ಉಳಿದದ್ದು ಕೇವಲ.......
ಬೀದಿ ದೀಪದ ಬೆಳಕು

ಸಾಲುಮರಗಳ ನೆರಳು
ಇಲ್ಲೇ ತೊಟ್ಟಿಲು ನಮಗೆ ಇಲ್ಲೇ ಚಿತೆ
ಇತಿಹಾಸ ಗಾಥೆ
ಅದೇ ದಾರಿಯ ಧೂಳು
ಜನಜಾತ್ರೆಗಳ ನಡುವೆ ಒಂಟಿ
ಇರವು ಅರಿವಿನ ಮೈಮರೆತ ನಿರಂತರ ಯಾತ್ರೆ
ಅಭಾಧಿತ ಬಾಳು,

ಉರುಳುತ್ತಲಿವೆ ಯುಗಮಾನ,........
ಬಿಸಿಲು ಕುಣಿದ ದಾರಿಯಲ್ಲಿ
ಒಣಗುತ್ತಿವೆ ಹೂವು-ದಳಗಳು ಉದುರಿ ಒಂಟಿದಂಟು
ನೆರಳು ಕಳೆದಿದೆ ಮರ
ಸಾವೇರುತ್ತಿದೆ ಮರಳದಂಡೆ

ಉರುಳುತ್ತಲಿವೆ ಯುಗಮಾನ........
ರಾತ್ರಿ ಸ್ಮಶಾನ ಮೌನ
ಸುಖಪಡೆದು ಮರಳುತ್ತವೆ
ಹೆರಿಗೆ ಬೇನೆ
ಹಡೆದ ಮಕ್ಕಳು ತೊರೆದ ಕೋಮಲ
ಕರುಳ ಯಾತನೆ

ಉರುಳುತ್ತಲಿವೆ ಯುಗಮಾನ.. ....
ಕಾಂಡದೊಳಗಿನ ತಿರುಳು
ತೊರೆದು ಬಿಟ್ಟಿವೆ ಚಿಗುರು
ಅವುಗಳದೆ ಕನಸಲ್ಲಿ ನಕ್ಷತ್ರರಾಶಿ
ಬೇರುತೊರೆಯುತ್ತಿರುವ ತನ್ನ ಜೀವದ ಬದಲು
ಮುಖಮರೆಸಿ ನಗುತ್ತಲಿವೆ ಚಿಗುರುಮಿಸೆ

ಮಾಸುತ್ತಿದೆ ಮಸಿನುಂಗುತ್ತಿದೆ ಬಣ್ಣ
ಟಿಸಿಲೊಡೆಯುತ್ತಿದೆ ಏಕಧಾರೆ
ಗುರುತು ಮರೆತು
ತವರತೊರೆಯುತ್ತಲಿವೆ ಜೀವಂತ ನೆನಪುಗಳು

ಮಾಸುತ್ತಿದೆ ಬಣ್ಣ
ವಕ್ರವಾಗುತ್ತಲಿವೆ ಸರಳ ರೇಖೆಯು
ರತಿರಾಗ ದ್ವೇಷ ಪ್ರಿತಿ-ಅರಿತ ಆಪ್ತ
ನೆರಳುಗಳೆ ತಿರುಗಿ ನಿಂತಿವೆ ಭೂತಗಳಾಗಿ
ಮನುಷ್ಯರ ಮುಖವೇ
ರಕ್ತಪಿಪಾಸುಗಳಾಗಿ

ಉಳಿದಿದ್ದು ಕೇವಲ ದೇಹದ ಭಗ್ನ ಕೋಟೆ
ಯುಗಮಾನ ಕೇಳುವುದು ಆರ್ತನಾದ
ಒಳಗೆ ಕಾಪಿಡುವವನ ತದೇಕ ಹೆಜ್ಜೆ
ಕೋವಿ–ಗುಂಡಿನ ಮಳೆಗರೆವ ಸದ್ದು
ಕ್ರೂರವಾಗಿವೆ ನೋಟ
ಸಾವೆ ಬರೆಯುತ್ತಿರುವ ನಿತ್ಯ–ಬದುಕು
ಎದೆಗೆ ಎದೆ ಸೇತುವೆಯು ಮುರಳುಗಾಡು.

ಪ್ರಕೃತಿಗೆ.....

ನಿನ್ನ ಸೇವೆಗೆ ಸದಾ ಸಿದ್ಧ ಕಟಿಬದ್ಧ.
ನಿನ್ನದೆ ರಸ ರೂಪ ಗಂಧ ಸ್ಪರ್ಶ,
ನಿನ್ನದೆ ದಗ್ಧ ಇತಿಹಾಸ ವೇಷ,

ಬಿಸಿಲ ಹಬೆ ಚಳಿಯು ಮೊಗೆದೆತ್ತಿ ಚೆಲ್ಲಿಮಳೆ
ಋತುಮಾನ ರಸಿಕತೆಯು ಇಂದ್ರಧನುಸ್ಸನ್ನಿಟ್ಟೆ
ಕಾವುಕ್ಕೆ ಜ್ವಲಿಸಿ
ಚಿತ್ತಕ್ಕೆ ಕೋಟಿ ಟಿಸಿಲು ಕೊಟ್ಟೆ
ಎಳೆ ಬಿಸಿಲು, ಪ್ರಖರ ಉರಿ ಸಂಜೆ ನೆಳಲು
ತೊಗಲು ಬಿಡದ ಸುಪ್ತ ಎಚ್ಚರದ ಕಾವುಗಳಿಗಿಲ್ಲಿ
ನಿಂದದ್ದೆ ನೆಲೆ. ನೆಲದ ಉಯಿಲು ಬಯಲಾಗಿ
ಪಡೆದದ್ದೆ ಬದುಕು, ನಿನ್ನ ಸೇವೆಗೆ ಸದಾಸಿದ್ಧ ಕಟಿಬದ್ಧ.

ರೂಪರೂಪಾಂತರಕೆ ಕಾಯಕಾಯಾಂತರಕೆ
ನಿನ್ನ ದಿನಮಾನ ಉದಯಾಸ್ತಗಳ ಜತೆಗೆ
ಜ್ವಲಂತ ಉಲ್ಕೆಗಳ ನೆಗೆತಕ್ಕೆ ಜಲಪಾತ ಕಡಲುಗಳ ಬಡಿತಕ್ಕೆ
ಯಾವ ವೇಷಕ್ಕೆ ವೇಷಾಂತರಕ್ಕೆ
ನೀನೆ ಹೇಳುವಿಯಂತೆ ಅಜ್ಞಾತ ಸೂತ್ರ;
ನಿನ್ನ ಸೇವೆಗೆ ಸದಾ ಸಿದ್ಧ ಕಟಿಬದ್ಧ
ನಿನ್ನದೇ ರಸರೂಪ ಗಂಧ ಸ್ಪರ್ಶ
ದಗ್ಧ ಇತಿಹಾಸ ವೇಷ

ಕಾವ್ಯ ಆಡುಮಾತಿಗೆ ಸಮೀಪವಾಗಿರುವುದು ; ಆಡುಮಾತಿನ ಸತ್ವವನ್ನು ತುಂಬಿ ಕೊಳ್ಳುವುದು ; ಆಡುಮಾತನ್ನೇ ಬಳಸುವುದು-ಎಂಬ ಈ ಮಾತುಗಳು ಕಾವ್ಯಭಾಷೆ ಯನ್ನು ಕುರಿತ ಧೋರಣೆಗಳಾಗಿವೆಯೇ ಹೊರತು, ಅತ್ಯುತ್ತಮ ಕಾವ್ಯದ ಲಕ್ಷಣವನ್ನು ಹೇಳುತ್ತವೆಂದು ಭಾವಿಸಬಾರದು. ಕಾವ್ಯ ಆಡುಮಾತಿಗೆ ಹತ್ತಿರವಾಗುವುದು ಬೇರೆ, ಅದು ಉತ್ತಮ ಕಾವ್ಯವಾಗುವುದು ಬೇರೆ. ಒಬ್ಬ ಕವಿಯ ಭಾಷೆ ತನ್ನ ಕಾಲದ ಆಡು ನುಡಿಗೆ ಹೆಚ್ಚು ಸಮೀಪವಾಗಿದೆ ಎಂದರೆ, ಆ ಕವಿ ಉಳಿದವರಿಗಿಂತ ಬದುಕಿಗೆ ಹತ್ತಿರವಾಗಿದ್ದಾನೆ, ಸಮಕಾಲೀನತೆಯ ಬಗೆಗೆ ಎಚ್ಚರವಾಗಿದ್ದಾನೆ ಎಂದು ಅರ್ಥ. ಕವಿ ಬಳಸುವ ಭಾಷೆ ಪ್ರೌಢವಾದದ್ದೇ ಇರಲಿ, ಆಡುಮಾತಿಗೆ ಸಮೀಪವಾದದ್ದೇ ಇರಲಿ, ಅವನ ಭಾಷೆ ಅವನ ಉದ್ದೇಶಕ್ಕೆ ಅನುಗುಣವಾಗಿಯೇ, ತನ್ನ ಕಾಲದ ಸಮಗ್ರಾನುಭವಗಳನ್ನು ಓದುಗನಿಗೆ ಮುಟ್ಟಿಸುವುದರಲ್ಲಿ ಯಶಸ್ವಿಯಾಗಿದೆಯೇ ಎನ್ನುವುದು ಮುಖ್ಯ. ಕಾವ್ಯಭಾಷೆಯನು ಕುರಿತು ಕವಿಗಳು ವಿಮರ್ಶಕರ ಸ್ತರದಲ್ಲಿ ಯಾವ ಸಿದ್ಧಾಂತಗಳನ್ನು ಬೇಕಾದರೂ ರೂಪಿಸಲಿ; ಇಷ್ಟು ಮಾತ್ರ ನಿಜ: ಕಾವ್ಯದ ಭಾಷೆ ಜನಭಾಷೆಯಾದರೂ ಅದು ಕವಿ ಭಾಷೆಯೇ.

— ಡಾ|| ಜಿ. ಎಸ್. ಶಿವರುದ್ರಪ್ಪ

ಶತಮಾನದ ಮುಳ್ಳುಗಳು

ಆನಂದ ಝುಂಜರವಾಡ

ಈ
ಶತಮಾನದ ಮುಳ್ಳುಗಳು ಇವು,

ನೀವು ಹೇಗೆ ನೋಡಿದರೂ
ಚೂಪೂ ತುದಿ ಮೇಲೇ;
ರಕ್ತ-ರಂಜಿತ ಮೃದು-ಪಾದಗಳಿಗೆ ಹಸಿದ
ಈ ಮುಳ್ಳುಗಳನ್ನು,
ಅರಳದಂತೆ ಸತ್ಯದ ಪಕಳೆಗಳ ಸೆರೆಯಲ್ಲಿಟ್ಟು,
ಈ ಸುಳ್ಳುಗಳನ್ನು,
ಬರಿಗಾಲಿನಿಂದಲೇ ನಡೆದು ದಾಟಬೇಕಿದೆ
ಈ ಕಾಡನ್ನು;

ಈ ಮೊನಚುಗಳನ್ನು
ಯುಗದ ಮೈ-ಗೊಡೆದ ಕುಸಿರುಗಳೆಂದು ಬಣ್ಣಿಸುವ ಕವಿಗಳು;
ಮೊನೆಗೆ ಸಿಕ್ಕ ತಮ್ಮ ಸಂವೇದನೆಯ ರೇಶ್ಮೆಯ ಅರಿವನ್ನು
ಘಾಸಿಗೊಳ್ಳದಂತೆ ಬಿಡಿಸಿಕೊಳ್ಳಬಲ್ಲ ಬುದ್ಧಿಜೀವಿಗಳು,
ಅಥವಾ,
ಮುಳ್ಳುಗಳ ಮೇಲೆ ತಮ್ಮ ದೈತ್ಯ ಹೆಜ್ಜೆಗಳನ್ನಿಡಬಲ್ಲ ರಾಕ್ಷಸರು,
ನೆಲದ ಮೇಲೆ ಹೆಜ್ಜೆಯನ್ನೇ ಇಡದಂತೆ
ಮುಂದಿನ ಶತಮಾನಕ್ಕೆ ಅವಸರಿಸಿ ಹೊರಟ ಆಧುನಿಕರು,

ಎಲ್ಲರೂ
ಮುಳ್ಳಿನ ಜೊತೆ ಸುಳ್ಳು ಸಂಬಂಧವಿಟ್ಟುಕೊಂಡಿದ್ದಾರೆ;

ಭೂಮಿಯ ಮೇಲೆ
ಕಾಡಿದೆ—ಮುಳ್ಳಿದೆ—ಕತ್ತಲೆ ಇದೆ.
ಆಕಾಶದಲ್ಲಿ ಹಾರಾಡುವ ಅಣ್ವಸ್ತ್ರವಂತೂ ನಾವೇ ಕಳಿಸಿದುದೇ.
ನೆಲದ ಮೇಲೆ ನಡೆದರೆ ಮುಳ್ಳುಗಳು ಕಾಲಿಗೆ ಚುಚ್ಚುತ್ತವೆ.
ಆಕಾಶಕ್ಕೆ ಹಾರುವ ಕಳ್ಳರಿಗಂತೂ ಕಣ್ಣುಗುಡ್ಡೆಗಳನ್ನೇ ಒಡೆಯುತ್ತವೆ.

ಈ
ಮುಳ್ಳುಗಳನ್ನೆಲ್ಲ ಬಳಿದು
ಹೂಗಳನ್ನು ಹಾಸುವ
ನಿಜವಾದ ಹಸಿವು,
ಈ ಶತಮಾನದ ಮುಳ್ಳುಗಳ ಚುಚ್ಚುವ ನೋವುಗಳಿಗೆ ರಕ್ತ-ಕೊಟ್ಟವರಿಗೆ
ಮಾತ್ರ.

ಬನ್ನಿ:— ನೆಲಕ್ಕಿಳಿಯೋಣ
ಮುಳ್ಳುಗಳ ತೆರೆಯಿಂದ
ಮೃದು ಪಕಳೆಗಳನ್ನು ಬಿಡಿಸೋಣ; ●

The great secret of morals is love; or going out of our nature, and an identification of ourselves with the beautiful which exists in thought, action or person, not our own. A man to be greatly good must imagine intensely and comprehensively; he must put himself in the place of another and many others; the pains and pleasures of his species must become his own. The great instrument of moral good is imagination; and poetry administers to the effect by acting upon the cause.

Shelly (A Defence of Protry)

ಪುಸ್ತಕ ಪರಿಚಯ :

ಬಿಜಾಪುರದ ಸೂಫಿಗಳು

ಜಿ. ರಾಜಶೇಖರ್

Sufis of Bijapur 1300 – 1700 - Richard Maxwell Eaton - Princeton University Press - 1978 ಪುಟಗಳು **358 + 32**

ಕರ್ನಾಟಕದಲ್ಲಿ **ಭಕ್ತಿ**ಪಂಥದ ಪ್ರವರ್ತಕರಾದ ವಚನಕಾರರು ಮತ್ತು ಹರಿದಾಸರಿಗೆ ಕನ್ನಡ ಸಂಸ್ಕೃತಿಯ ಚರಿತ್ರೆಯಲ್ಲಿ ಇರುವ ಮಹತ್ವದ ಸ್ಥಾನವನ್ನು ಎಲ್ಲ ವಿದ್ವಾಂಸರೂ ಗುರುತಿಸಿದ್ದಾರೆ. ಭಕ್ತಿಪಂಥ ಅಖಿಲ ಭಾರತ ಹರಹುಳ್ಳ ಒಂದು ಸಾಂಸ್ಕೃತಿಕ ಚಳುವಳಿಯಾಗಿದ್ದರೂ ಕನ್ನಡದ ಭಕ್ತಿಪಂಥ ತನ್ನದೇ ಆದ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಪಡೆದಿರುವುದನ್ನೂ ಗುರುತಿಸಲಾಗಿದೆ. ಆದರೆ ತಮ್ಮ ಸಾಹಿತ್ಯಕ ರಚನೆಗಳಲ್ಲಿ ಹಾಗೂ ಪ್ರಾಪಂಚಿಕ ಧೋರಣೆಗಳಲ್ಲಿ ವಚನಕಾರರನ್ನು ಮತ್ತು ಹರಿದಾಸರನ್ನು ಹೋಲುವ, ಕರ್ನಾಟಕದ ಸೂಫಿ ಸಂತರ ಬಗ್ಗೆ ಕನ್ನಡದಲ್ಲಿ ಯಾವ ಮಹತ್ವದ ಕೃತಿಯೂ ಇದುವರೆಗೆ ಪ್ರಕಟವಾದಿಲ್ಲ. ಈ ಸಂತರೇನೂ ಬಹಳ ಪ್ರಾಚೀನರಲ್ಲ. ಹೆಚ್ಚು ಕಡಿಮೆ ಹದಿನಾರನೆಯ ಶತಮಾನದ ಹರಿದಾಸರಿಗೆ ಸಮಕಾಲೀನರಾಗಿದ್ದ ಇವರ ಬಗ್ಗೆ ಲಿಖಿತ ದಾಖಲೆಗಳು ಹೇರಳವಾಗಿವೆ; ಈ ಸೂಫಿಗಳು ನೆಲೆಸಿದ್ದ ಉತ್ತರ ಕರ್ನಾಟಕದ ಗ್ರಾಮೀಣ ಜನತೆಯ ಮೌಖಿಕ ಪರಂಪರೆಯಲ್ಲೂ ಇವರ ಚರಿತ್ರೆ ಐತಿಹ್ಯವಾಗಿ ಒಡಮೂಡಿದೆ. ಕರ್ನಾಟಕದಲ್ಲಿ ಆಗಿಹೋದ ಸೂಫಿ ಸಂತರ ಸಮಾಧಿಗಳು (ದರ್ಗ) ಇಂದಿಗೂ ಜನಪ್ರಿಯ ಯಾತ್ರಾಸ್ಥಳಗಳಾಗಿವೆ. ಹೀಗಿದ್ದೂ ಈ ಬಗ್ಗೆ ನಮ್ಮ ವಿದ್ವಾಂಸರ ಅಲಕ್ಷ್ಯಕ್ಕೆ ಕಾರಣವೇನು? ಕನ್ನಡದ ವಿದ್ವಾಂಸರಲ್ಲಿ ಸುಪ್ತವಾಗಿ ಇರುವ ಹಿಂದೂ ಮತೀಯವಾದಿ ಧೋರಣೆಯಿಂದಾಗಿ ಅವರ ಗಮನ ಕರ್ನಾಟಕದ ಸೂಫಿಗಳತ್ತ ಹರಿದಿಲ್ಲ ಎಂದು ಇತ್ತೀಚೆಗೆ

ಒಬ್ಬ ವಿಮರ್ಶಕರು ಬರೆದರು ('ವರ್ಧಮಾನ' ಪತ್ರಿಕೆಯ ಅಂಕಣದಲ್ಲಿ ಡಾ॥ ಡಿ. ಆರ್. ನಾಗರಾಜ್). ಡಾ॥ ಚಿದಾನಂದಮೂರ್ತಿಯಂತಹ ಸಂಶೋಧಕರು ಕೂಡ ಈ ವಿಷಯದ ಕುರಿತು ನಿರ್ಲಕ್ಷ್ಯ ತಳೆದಿರುವುದನ್ನು ಅವರು ಎತ್ತಿ ಹೇಳಿದ್ದಾರೆ. ಸಂಶೋಧನೆಯ ಕ್ಷೇತ್ರದಲ್ಲಿ ಇಂತಹ ನಿರ್ಲಕ್ಷ್ಯ ಆಕಸ್ಮಿಕವೂ ಅಲ್ಲ; ತನ್ನಷ್ಟಕ್ಕೆ ತಾನೆ ಹುಟ್ಟಿಕೊಳ್ಳುವುದೂ ಅಲ್ಲ; ಪ್ರಚ್ಛನ್ನ ಮತೀಯವಾದವಲ್ಲದೆ ಅದಕ್ಕೆ ಬೇರೆ ಕಾರಣಗಳಿಲ್ಲ ಎಂದೂ ಆ ವಿಮರ್ಶಕರು ಬರೆದಿದ್ದಾರೆ.

ಇವತ್ತು ನಮ್ಮ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುವ ಮಧ್ಯಯುಗದ ಚರಿತ್ರೆ ಎಂದರೆ ಮುಸ್ಲಿಂ ರಾಜರ ಆಳ್ವಿಕೆಯ ಚರಿತ್ರೆ ಮಾತ್ರ. ಇದೂ ಕೂಡಾ ಸುಳ್ಳು ಮತ್ತು ಅರ್ಧ ಸತ್ಯಗಳಿಂದ ತಿರುಚಲ್ಪಟ್ಟ ಚರಿತ್ರೆ. ಮಧ್ಯಯುಗದ ಭಾರತದ ಮುಸ್ಲಿಂ ಅರಸರ ರಾಜಕಾರಣಕ್ಕೂ ಇಸ್ಲಾಂ ಧರ್ಮಕ್ಕೂ ನಡುವೆ ಮತಭೇದ, ಬಿಕ್ಕಟ್ಟುಗಳು ಇರಲೇ ಇಲ್ಲ ಎನ್ನುವುದು ಒಟ್ಟಾರೆಯಾಗಿ ಇಂತಹ ಚರಿತ್ರೆಯ ಧೋರಣೆ. ಇಸ್ಲಾಂ ಧರ್ಮ ಆಕ್ರಮಣಶೀಲವಾಗಿದ್ದು ಈ ದೇಶದ ಇತರ ಮತಧರ್ಮಗಳನ್ನು ಅದು ಒಗ್ಗಟ್ಟಾಗಿ ಎದುರಿಸಿತ್ತು; ಹಾಗೂ ಆ ಧರ್ಮದ ಒಳಗೆ ಬಂಡಾಯಗಳೇ ಇರಲಿಲ್ಲ ಎನ್ನುವುದು ಕೂಡಾ ನಮ್ಮ ಚರಿತ್ರೆಯ ಪುಸ್ತಕಗಳಲ್ಲಿ ಅಂತರ್ಗತವಾಗಿ ಇರುವ ಧೋರಣೆ. ಆದರೆ ಈ ಧೋರಣೆ, ಮಧ್ಯಯುಗದ ಭಾರತದ ಅನೇಕ ಮುಖ್ಯ ಸಂಗತಿಗಳತ್ತ ಕುರುಡಾಗಿದೆ. ಮುಸ್ಲಿಂ ರಾಜಕಾರಣ ಮತ್ತು ಇಸ್ಲಾಂ ಧರ್ಮ, ಒಂದು ಇನ್ನೊಂದಕ್ಕೆ ಪರ್ಯಾಯವಲ್ಲ. ಇಸ್ಲಾಂ ಧರ್ಮದ ಒಳಗೆ ತಾತ್ವಿಕ ಸಂಘರ್ಷಗಳು ಇರಲಿಲ್ಲ ಎನ್ನುವುದು ಕೂಡಾ ಸತ್ಯವಲ್ಲ. ಆದರೆ ಪೂರ್ವಗ್ರಹದ ಕುರುಡುಪಟ್ಟಿ ಕಟ್ಟಿಕೊಂಡವರು ಚರಿತ್ರೆ ಮತ್ತು ವರ್ತಮಾನದ ಬದುಕಿನಲ್ಲಿ ತಮ್ಮ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಇರುವ ಸತ್ಯಗಳನ್ನು ಕಾಣಲಾರರು. ಕರ್ನಾಟಕದ ಮಧ್ಯಯುಗದ ಸೂಫಿ ಸಂತರ ಬಗ್ಗೆ ಕನ್ನಡದ ವಿದ್ವತ್ ಪ್ರಪಂಚದ ಗಾಢ ಅಜ್ಞಾನಕ್ಕೆ ಈ ಮತೀಯ ಪೂರ್ವಗ್ರಹವೇ ಕಾರಣ. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕದ ಸೂಫಿಗಳ ಬಗ್ಗೆ ಮಹಾ ಪ್ರಬಂಧವೊಂದನ್ನು ಇಂಗ್ಲೀಷ್ ಭಾಷೆಯಲ್ಲಿ ಅಮೇರಿಕದ ಚರಿತ್ರಕಾರರೊಬ್ಬರು ಬರೆದಿರುವುದು, ಇದ್ದುದರಲ್ಲಿಯೇ ನಾವು ಸಂತೋಷಪಟ್ಟುಕೊಳ್ಳಬಹುದಾದ ವಿಷಯ. ಆದರೂ ಕನ್ನಡದ ಪರಂಪರೆ ನಾವು ತಿಳಿದಿರುವುದಕ್ಕಿಂತಲೂ ಹೆಚ್ಚು ಉಜ್ವಲವೂ ವೈವಿಧ್ಯಪೂರ್ಣವೂ ಆಗಿದೆ ಎಂದು ನಮಗೆ ತಿಳಿಸಲು ಕೂಡಾ ಅಮೇರಿಕದಿಂದ ಒಬ್ಬರು ಬರಬೇಕಾಯಿತು ಎನ್ನುವುದು ನಿಜಕ್ಕೂ ವ್ಯಥೆ ಪಡಬೇಕಾದ ವಿಚಾರ. ಬಿಜಾಪುರದ ಸೂಫಿಗಳ ಬಗ್ಗೆ ಈಟನ್ ಬರೆದ ಪುಸ್ತಕದಂತಹ ಒಂದು ಪುಸ್ತಕ ಕನ್ನಡದಲ್ಲಿ ಯಾವತ್ತೋ ಪ್ರಕಟವಾಗಬೇಕಿತ್ತು. ಆದರೆ ಕಾಲ ಈಗಲೂ ಮೀರಿಲ್ಲ. ಕರ್ನಾಟಕದ

ಸೂಫಿ ಸಂತರ ಬಗ್ಗೆ ನಡೆಯಬೇಕಾದ ಸಂಶೋಧನೆಯ ಕೆಲಸ ಅಗಾಧವಾಗಿದೆ, ಕರ್ನಾಟಕದ ಮಧ್ಯಯುಗದ ರಾಜಕಾರಣದಲ್ಲಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಸೂಫಿ ಸಂತರು ನಿರ್ವಹಿಸಿದ ಪಾತ್ರವನ್ನು ಸ್ಥೂಲವಾಗಿ ವಿವರಿಸುವುದಕ್ಕೆ ಮಾತ್ರ ಈಟನ್ ತನ್ನ ಪುಸ್ತಕವನ್ನು ಮಿತಿಗೊಳಿಸಿದ್ದಾರೆ. ಬಿಜಾಪುರ ಸಂಸ್ಥಾನದ ಜನತೆಯು ಆಡು ಮಾತಾಗಿರುವ ಕನ್ನಡ, ತೆಲುಗು, ಮರಾಠಿ ಮತ್ತು ದಾಖ್ಣಿ (ಉರ್ದುವಿನ ಸ್ಥಳೀಯ ಪ್ರಬೇಧಗಳು) ಈಟನ್‌ಗೆ ತಿಳಿಯದ ಭಾಷೆಗಳು; ಸೂಫಿ ಸಂತರಿಗೂ ಕನ್ನಡ ಮತ್ತು ಮರಾಠಿಯ ಭಕ್ತಿ ಸಾಹಿತ್ಯಕ್ಕೂ ಇರುವ ಸಾದೃಶ್ಯಗಳನ್ನು ಈಟನ್ ತನ್ನ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದರೂ ಸ್ಥಳೀಯ ವಿದ್ವಾಂಸರು, ಇದರ ಬಗ್ಗೆ ಇನ್ನಷ್ಟು ಮಹತ್ವಪೂರ್ಣ ಸಂಗತಿಗಳನ್ನು ತಿಳಿಸಬಹುದು. ಈ ಸಂತರಿಗೆ ಸಮ ಕಾಲೀನರಾಗಿದ್ದ ಹರಿದಾಸರು-ಮುಖ್ಯವಾಗಿ ಪುರಂದರ ಮತ್ತು ಕನಕರಿಗೆ ಈ ಸಂತರ ಬದುಕು ಮತ್ತು ಚಿಂತನೆಗಳ ಪರಿಚಯವಿತ್ತು ಎಂದು ಊಹಿಸಲು, ಅವರ ರಚನೆಗಳಲ್ಲಿ ಹುಡುಕಿಕೊಂಡು ಹೋದರೆ ಆಧಾರಗಳು ದೊರೆಯುತ್ತವೆ; ಉದಾಹರ ಣೆಗೆ ಪುರಂದರರ (ಕ್ರಿ.ಶ.1484 – 1564) ಪದ, "ಮಾಡಿದ ಎನ್ನ ಫಕೀರನ ಸದ್ಗುರು........(ಪುರಂದರದಾಸರ ಪದಗಳು-ಸಂ: ಕಮಲದಾನಿ ಗುರುರಾಯರು- ಹುಬ್ಬಳ್ಳಿ, 1977–ಪುಟ 209). ಫಕೀರ ಎಂದರೆ ತಿರುಪೆ ಎತ್ತಿ ಜೀವನ ಸಾಗಿ ಸುವ ಭಕ್ತ. ಈ ಶಬ್ದ ಕನ್ನಡಕ್ಕೆ ಬಂದದ್ದೇ ಸೂಫಿಗಳಿಂದ; ಎಲ್ಲ ಸೂಫಿಗಳೂ- ರಾಜಾಶ್ರಯ ಪಡೆದು ಶ್ರೀಮಂತರಾದವರು ಕೂಡಾ-ತಮ್ಮನ್ನು ಕರೆದುಕೊಳ್ಳುವುದು ಫಕೀರರೆಂದೇ. ಬಡತನ, ಸರಳತೆ, ಮಿತವ್ಯಯ, ಹೆಚ್ಚು ಆಸೆಗಳು ಇಲ್ಲದಿರುವುದು- ಈ ಗುಣಗಳು ಸೂಫಿ ಚಿಂತನೆಯಲ್ಲಿ ಮುಖ್ಯ ಸ್ಥಾನ ಪಡೆದಿರುವುದರಿಂದಲೇ ಸೂಫಿ ಗಳು ತಮ್ಮನ್ನು ಫಕೀರರೆಂದು ಕರೆದುಕೊಂಡರು. ಮೇಲೆ ಹೇಳಿದ ಪುರಂದರನ ಪದ್ಯದಲ್ಲಿ 'ಫಕೀರ' ಎನ್ನುವ ಶಬ್ದ ಮಾತ್ರವಲ್ಲ, ಆ ಇಡೀ ಪದ್ಯವೇ ಸೂಫಿ ತತ್ತ್ವ ಗಳಿಂದ ಗಾಢವಾಗಿ ಪ್ರಭಾವಿತವಾಗಿದೆ. ಉದಾಹರಣೆಗೆ,"ಅನುಭವ ಖಪ್ಪರ ಹೃದಯದ ಜೋಳಿಗೆ ಎನ್ನಯ ಕಂಕುಳಲಿಟ್ಟು........ಬೋಧದ ಭಂಗಿ ಅಮೃತದ ಲಿಂಗಿ ಸಮಾನ ಗುಳಿಗೆಯನಿಟ್ಟ. ಈ ಪರಿ ಮಾಡಿ ಬಯಲನು ತೋರಿ......' ಪುರಂದರ ಮತ್ತು ಅವರ ಸಮಕಾಲೀನರಾಗಿದ್ದ ಕನಕರು ಸೂಫಿಗಳ ಜೊತೆ ಸಂಪರ್ಕ ವಿಟ್ಟುಕೊಂಡಿದ್ದರೆ ? ದಕ್ಷಿಣ ದೇಶದಲ್ಲೆಲ್ಲ ಸಂಚರಿಸಿದ, ಮುಕ್ತ ಮನಸ್ಸಿನ ಈ ಇಬ್ಬರು ಹರಿದಾಸರಿಗೆ ತಮ್ಮ ಕಾಲದ ಸೂಫಿ ಸಂತರ ಪರಿಚಯವಿದ್ದರೆ ಅದು ಸಹ ಜವೇ ಸರಿ. ಅವರ ಕಾಲಕ್ಕಾಗಲೇ ಕರ್ನಾಟಕದ ಸೂಫಿಗಳಲ್ಲಿ ಅಗ್ರಗಣ್ಯನಾದ ಗುಲ್ಬರ್ಗದ ಬಂದೇನವಾಜ್ ಗೀಸುದರಾಜ್ ತೀರಿಕೊಂಡು (ಕ್ರಿ.ಶ.1422) ಒಂದು ಶತಮಾನಕ್ಕೂ ಮಿಕ್ಕು ಹಲವು ವರ್ಷಗಳು ಕಳೆದಿದ್ದವು; ಮತ್ತು ತನ್ನ ಜೀವಿ

ಕಾಲದಲ್ಲಿಯೇ ಅಸಂಖ್ಯಾತ್ಯ ಅನುಯಾಯಿಗಳನ್ನು ಪಡೆದಿದ್ದ ಈ ಸಂತ ಒಂದು ದಂತಕಥೆಯಾಗಿ ಬಿಟ್ಟಿದ್ದ. (ಇಂದಿಗೂ ಗುಲ್ಬರ್ಗದಲ್ಲಿರುವ ಅವನ ಸಮಾಧಿ, ಕರ್ನಾಟಕದ ಮುಖ್ಯ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾಗಿದೆ). ಪುರಂದರ, ಕನಕರ ಕಾಲಕ್ಕೆ ಮೊದಲೇ ಸೂಫಿ ಪಂಥ ಉತ್ತರ ಕರ್ನಾಟಕದಲ್ಲಿ ಭದ್ರವಾಗಿ ಬೇರೂರಿತ್ತು.

ಹರಿದಾಸರಿಗೆ ಸೂಫಿ ಸಂತರ ಜೊತೆ ಸಂಪರ್ಕವಿತ್ತೆ ಎಂಬುದರ ಬಗ್ಗೆ ನಿಖರವಾದ ಮಾಹಿತಿ ಇನ್ನೂ ದೊರೆಯಬೇಕಾಗಿದೆ. ಆದರೆ ಸೂಫಿ ಸಂತನೊಬ್ಬನ ಪ್ರಭಾವಕ್ಕೆ ಒಳಗಾಗಿ ತನ್ನ ಪದವಿಯನ್ನೂ, ಪ್ರಾಪಂಚಿಕ ಮೋಹವನ್ನೂ ತೊರೆದು ಹರಿದಾಸರಾದ ಒಬ್ಬರ ಉದಾಹರಣೆ ನಮ್ಮ ಮುಂದೆ ಇದೆ. ಕ್ರಿ.ಶ. 1650ರ ಆಸುಪಾಸಿನಲ್ಲಿ ಜೀವಿಸಿದ್ದ ಕಾಖಂಡಕಿಯ ಮಹಿಪತಿರಾಯರು ಹರಿದಾಸರಾದದ್ದು ಸೂಫಿ ಪಂಥದ ಷಹಾನುಂಗ ಎಂಬ ಒಬ್ಬ ದೈವಿಕ ಉನ್ಮತ್ತನ ಪ್ರಭಾವದಿಂದ. ಮಹಿಪತಿರಾಯರು ಹರಿದಾಸರಾದ ಘಟನೆ ತುಂಬ ಸ್ವಾರಸ್ಯದ್ದಾಗಿದೆ. ಬಿಜಾಪುರದ ಸುಲ್ತಾನ ಮಹಮ್ಮದ್‌ಶಹನ ದರ್ಬಾರಿನಲ್ಲಿ ದೊಡ್ಡ ಪದವಿಯಲ್ಲಿದ್ದ ಮಹಿಪತಿ ರಾಯರು ಸಂಸ್ಕೃತ, ಕನ್ನಡ, ಉರ್ದು, ಪರ್ಶಿಯನ್ ಭಾಷೆಗಳನ್ನು ಬಲ್ಲವರಾಗಿದ್ದು ದೊಡ್ಡ ಪಂಡಿತರೆಂದು ಹೆಸರು ಮಾಡಿದ್ದರು. ರಸವತ್ತಾಗಿ ಪುರಾಣದ ಕಥೆಗಳನ್ನು ಹೇಳುವುದರಲ್ಲಿಯೂ ಜಾಣರಾಗಿದ್ದ ಅವರು, ಆ ಕಾರಣಕ್ಕಾಗಿಯೇ ಸುಲ್ತಾನನಿಗೂ ಮೆಚ್ಚಿನವರಾಗಿದ್ದರು. ಹೀಗೆ ಮೆರೆಯುತ್ತಿರಬೇಕಾದರೆ, ಷಹ ನುಂಗ ಬತ್ತಲೆಯಾಗಿ, ಅರೆಹುಚ್ಚನಂತೆ ಬಿಜಾಪುರದ ರಸ್ತೆಗಳಲ್ಲಿ ಒಡಾಡಿಕೊಂಡಿದ್ದ. ಅವನಿಗೆ ಒಂದು ಅಭ್ಯಾಸ; ಏನನ್ನು ಕಂಡರೂ "ಹೆಣದ ವಾಸನೆ" ಎಂದು ಕೂಗಿಕೊಳ್ಳುವುದು. ಒಮ್ಮೆ ಆತ ಸುಲ್ತಾನನ ಅರಮನೆಯ ಒಳಗೂ ನುಗ್ಗಿ "ಹೆಣದ ವಾಸನೆ ಹೆಣದ ವಾಸನೆ" ಎಂದು ಕಿರುಚುತ್ತ ಹೊರಗೆ ಓಡಿ ಬಂದಿದ್ದನಂತೆ. ಹೀಗಿರುತ್ತ ಒಂದು ದಿನ ಮಹಿಪತಿರಾಯರು ಮೇನೆಯಲ್ಲಿ ಕೂತು ದರ್ಬಾರಿಗೆ ಹೊರಟಾಗ ದಾರಿಯಲ್ಲಿ ಎದುರಾದ ಷಹಾನುಂಗ ಅವರ ಕೈಬೆರಳಲ್ಲಿದ್ದ ಮುದ್ರೆಯುಂಗರ ಬೇಡಿದ. ರಾಯರು ಎಂತಹದ್ದೋ ಮೋಡಿಗೆ ಒಳಗಾಗಿ ಅದನ್ನು ಆತನಿಗೆ ಕೊಟ್ಟರು. ಷಹಾನುಂಗ ಆ ಉಂಗುರವನ್ನು ಒಂದು ಕಂದಕದಿಂದ ಬೊಗಸೆ ತುಂಬ ಅಂತಹದ್ದೇ ಮುದ್ರೆಯುಂಗುರಗಳನ್ನು ತೆಗೆದು ರಾಯರಿಗೆ ಕೊಟ್ಟು "ಹೆಣದ ವಾಸನೆ" ಎನ್ನುತ್ತ ಅಲ್ಲಿಂದ ಹೊರಟುಹೋದ. ಈ ಪ್ರಸಂಗದಿಂದ ರಾಯರ ಒಳಗಣ್ಣು ತೆರೆದು, ತನ್ನ ಹುದ್ದೆ ತ್ಯಜಿಸಿ ಹರಿದಾಸರಾದರಂತೆ. ದಾಸರಾದ ಮೇಲೆ ಅವರು ಕನ್ನಡ, ಉರ್ದು ಭಾಷೆಗಳಲ್ಲಿ ಅನೇಕ ಪದಗಳನ್ನು ರಚಿಸಿದರು. ಲೋಕ ನಿಂದೆಗೆ ಹೆದರದೆ ವೈದಿಕ ಆಚಾರ ಕ್ರಮಗಳನ್ನೆಲ್ಲ ಉಲ್ಲಂಘಿಸಿ ಬದುಕಿದ ಅವರಿಗೆ ಬ್ರಾಹ್ಮಣರಲ್ಲದೆ ಲಿಂಗಾಯತರು ಮತ್ತು ಮುಸ್ಲಿಮರಲ್ಲಿಯೂ ಶಿಷ್ಯರಿದ್ದರು.

(ವಿವರಗಳಿಗೆ ನೋಡಿ-"ಶ್ರೀ ಕರ್ನಾಟಕ ಭಕ್ತವಿಜಯ"-ಬೇಲೂರು ಕೇಶವದಾಸ-1932-ಪುಟ 501-508, 512, 513, 519).

ಕನ್ನಡ ಸಂಸ್ಕೃತಿಗೆ ಸೂಫಿ ಪಂಥದ ಕೊಡುಗೆಗೆ ಮಹಿಪತಿ ದಾಸರಷ್ಟೇ ಉಜ್ವಲವಾದ ಇನ್ನೊಂದು ನಿದರ್ಶನ ಶಿಶುನಾಳ ಷರೀಫನದ್ದು. ಆತನ ಕಾವ್ಯ ವಚನಕಾರರು, ಹರಿದಾಸರು ಮತ್ತು ಸೂಫಿ ಸಂತರ ಕನ್ನಡ ದೇಶೀಯ ಪರಂಪರೆಯಿಂದಲೇ ಸ್ಫೂರ್ತವಾಗಿರುವಂತಹದ್ದು. ಸೂಫಿ ಸಂತರು ಸ್ವತಃ ತಾವೇ ರಚಿಸಿದ, ಅಥವಾ ಅವರ ಪ್ರಭಾವದಿಂದ ರಚಿತವಾದ, ಅನುಭಾವ ಪರವಾದ ಜೋಗುಳದ ಹಾಡುಗಳು, ಧಾನ್ಯ ಕುಟ್ಟುವ, ಕೇರುವ ಮತ್ತು ಒಕ್ಕುವ ಹಾಡುಗಳು, ರಾಟೆ ತಿರುಗಿಸುವ ಹಾಡುಗಳು, ಹತ್ತಿ ಹಿಂಜುವ ಮತ್ತು ನೇಯುವ ಹಾಡುಗಳು, ಹಿಟ್ಟು ಬೀಸುವ ಹಾಡುಗಳು, ಹಸೆಮಣೆಯ ಹಾಡುಗಳು, ಮಗಳನ್ನು ಗಂಡನ ಮನೆಗೆ ಕಳುಹಿಸುವ ಹಾಡುಗಳು ಮುಂತಾದ ಮೌಖಿಕ ರೂಪದಲ್ಲಿ ಕನ್ನಡ, ತೆಲುಗು, ಮರಾಠಿ ಭಾಷೆಗಳಲ್ಲಿ, ಈ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ಹೇರಳವಾಗಿದ್ದು ಅವು ಇನ್ನೂ ಬೆಳಕಿಗೆ ಬರಬೇಕಾಗಿವೆ ಎಂದು ಈಟನ್ ಹೇಳುತ್ತಾರೆ. ಈ ಹಾಡಿನ ನಮೂನೆಗಳೆಲ್ಲವೂ ಈಟನ್ ಸೂಚಿಸುವಂತೆ, ಹೆಂಗಸರ ದಿನ ನಿತ್ಯದ ದುಡಿಮೆ ಅಥವಾ ಸಾಂಸಾರಿಕ ಬದುಕಿಗೆ ಸಂಬಂಧಿಸಿದಂತಹವು. ಕನ್ನಡ ಜನಜೀವನದಲ್ಲಿ ಸೂಫಿ ಚಿಂತನೆ ಹೇಗೆ ಹಾಸುಹೊಕ್ಕಾಗಿ ಸೇರಿಕೊಂಡಿದೆ ಎನ್ನುವುದಕ್ಕೆ ಈ ಜಾನಪದವೂ ಒಂದು ನಿದರ್ಶನ. ಕರ್ನಾಟಕ ಸೂಫಿ ಪರಂಪರೆ, ಕನ್ನಡದ ವಿದ್ವಾಂಸರಿಗೆ ಬೇಡವಾದ ಸರಕಾದರೂ, ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ಅನಕ್ಷರಸ್ಥ, ಕೆಳ ಜಾತಿಗಳ ಬಡ ಹಿಂದೂ ಮತ್ತು ಮುಸ್ಲಿಂ ಜನತೆಯಲ್ಲಿ ಇಂದಿಗೂ ಜೀವಂತವಾಗಿದೆ. (ಸೂಫಿ ಸಂತರ ಬಗ್ಗೆ ನಮ್ಮ ಅಜ್ಞಾನಕ್ಕೆ ಮತೀಯ ಪೂರ್ವಗ್ರಹಗಳ ಜೊತೆಗೆ ವರ್ಗಮೂಲವಾದ ಉಪೇಕ್ಷೆಯೂ ಕಾರಣವಾಗಿರಬಹುದೆ ?) 16, 17ನೆಯ ಶತಮಾನದಲ್ಲಿನ ಸೂಫಿ ಸಂತರ ಸಮಾಧಿಗಳಿಗೆ ಈಗಲೂ ಈ ಬಡ ಜನರು ಭಕ್ತಿಯಿಂದ ನಡೆದು ಕೊಳ್ಳುತ್ತಾರೆ. ಈ ಸಂತರ ದೇಹತ್ಯಾಗದ ಪುಣ್ಯತಿಥಿಗಳನ್ನು ಆಚರಿಸುವ ಉರೂಸ್‌ಗಳು ಆ ಪ್ರದೇಶದ ಜನಪ್ರಿಯ ಹಬ್ಬಗಳಾದಿವೆ. (ಉರೂಸ್ ಎಂದರೆ ಅಕ್ಷರಶಃ ದೇವರೊಡನೆ ವಿವಾಹ ಎಂದು ಅರ್ಥ).

ಸೂಫಿಗಳು ಎಂದರೆ ಸ್ಥೂಲವಾಗಿ, ಇಸ್ಲಾಂ ಧರ್ಮದ ಅನುಭಾವಿಗಳು. ಇವರು ಇಸ್ಲಾಂ ಧರ್ಮದ ಚೌಕಟ್ಟಿನ ಒಳಗೆ ಇದ್ದುಕೊಂಡೇ, ಅದರ ಪುರೋಹಿತಶಾಹಿ (ಉಲೇಮಾ) ಯನ್ನು ಧಿಕ್ಕರಿಸಿದರು, ಈಟನ್‌ರ ಪುಸ್ತಕದ ವಸ್ತು ಅದರ ಹೆಸರೇ ಸೂಚಿಸುವಂತೆ, ಮಧ್ಯಯುಗದ ಬಿಜಾಪುರ ಸಂಸ್ಥಾನದ ಸೂಫಿಗಳು,

ತಮ್ಮ ಕೃತಿಯಲ್ಲಿ ಈಟನ್ ಇದುವರೆಗೆ ಯಾವ ವಿದ್ವಾಂಸನೂ ನೋಡಿರದ ಅನೇಕ ಹಸ್ತಪ್ರತಿಗಳನ್ನು ಮೂಲಗ್ರಂಥಗಳನ್ನೂ ಬಳಸಿಕೊಂಡಿದ್ದಾರೆ. ನಮ್ಮ ಸಂಸ್ಕೃತಿಯ ಬಗ್ಗೆ ಅನೇಕ ಮುಖ್ಯ ಸಂಗತಿಗಳನ್ನು ಮೊದಲ ಬಾರಿಗೆ ಎತ್ತಿ ತೋರಿಸಿದ ಶ್ರೇಯಸ್ಸು ಅವರದ್ದಾಗಿದೆ. 17ನೆಯ ಶತಮಾನದಲ್ಲಿ ಬಿಜಾಪುರ ಸಂಸ್ಥಾನದಲ್ಲಿ ಆದಿಲ್ ಶಾಹಿಯ ಆಳ್ವಿಕೆ ತನ್ನ ಉಚ್ಛ್ರಾಯದಲ್ಲಿದ್ದಾಗ, ಅದು ಭಾರತದಲ್ಲಿ ಮೊಘಲರಿಗೆ ಮಾತ್ರ ದ್ವಿತೀಯ ಸ್ಥಾನದಲ್ಲಿತ್ತು. 1686ರಲ್ಲಿ ಮೊಘಲರು, ಈ ಸಂಸ್ಥಾನವನ್ನು ಆಕ್ರಮಿಸಿದಾಗ ಸಂಸ್ಥಾನ ಪತನಗೊಂಡಿತು. (ಬಿಜಾಪುರದ ಮುಸ್ಲಿಂ ಆಳ್ವಿಕೆಯನ್ನು ಕೊನೆಗಳಿಸಿದವರು ದೆಹಲಿಯ ಮುಸ್ಲಿಂ ದೊರೆಗಳು ಎಂಬುದನ್ನು ಗಮನಿಸಬೇಕು). ಈ ಆಕ್ರಮಣದ ಒಂದು ತಲೆಮಾರಿನ ಒಳಗೆ, ಆ ಪ್ರದೇಶದಲ್ಲಿ ತಲೆದೋರಿದ ಪ್ಲೇಗು, ಭೀಕರ ಅನಾವೃಷ್ಟಿ ಮತ್ತು ಅತಿವೃಷ್ಟಿಗಳಿಂದ ಅಲ್ಲಿಂದ ಜನಜೀವನ ಜರ್ಝರಿತವಾಯಿತು. ಆ ವೇಳೆಗೆ ಸೂಫಿ ಅನುಭಾವ, ಒಂದು ಪಂಥವಾಗಿ ಬೆಳೆದು ಶಿಷ್ಯವೃತ್ತಿ ಅದರ ಒಂದು ಅಂಗವಾಗಿತ್ತು. ಸೂಫಿಗಳ ಜನಪ್ರಿಯತೆಯನ್ನು ಮನಗಂಡ ಮುಸ್ಲಿಂ ದೊರೆಗಳು, ಈ ಸಂತರಿಗೆ ಜಮೀನು ಕಾಣಿಕೆಗಳನ್ನು ಕೊಡಲು ಪ್ರಾರಂಭಿಸಿದ್ದು ಈ ಪ್ರಕ್ರಿಯೆಗೆ ಇನ್ನಷ್ಟು ಸಹಾಯಕವಾಯಿತು ಯಾರೇ ಆಗಲಿ, ಸಂಪತ್ತಿಗೆ ಒಡೆಯರಾದಾಗ, ಅವರ ನಂತರ, ಆ ಸಂಪತ್ತು ಯಾರಿಗೆ ಹೋಗಬೇಕು ಎನ್ನುವ ಪ್ರಶ್ನೆ ಬಂದೇ ಬರುತ್ತದೆ. ಸೂಫಿಗಳ ಜಮೀನು ಕಾಣಿಕೆಗಳ ಉತ್ತರಾಧಿಕಾರದ ಬಗ್ಗೆಯೂ ವಿವಾದಗಳು ತಲೆದೋರಿದವು. ಹೆಚ್ಚಿನ ಸಂದರ್ಭಗಳಲ್ಲಿ ಈ ಸಂತರ ವಂಶಸ್ಥರೇ ಅವರ ಆಸ್ತಿಪಾಸ್ತಿಗಳ ಉತ್ತರಾಧಿಕಾರಿಗಳಾದರು. ಪೂಜಾ ಕೇಂದ್ರಗಳಾದ ಸಂತರ ದರ್ಗಗಳ ಉಸ್ತುವಾರಿ, ಅವುಗಳ ಆದಾಯ ಇತ್ಯಾದಿ ಕೂಡ ವಂಶಪಾರಂಪರ್ಯವಾಗಿ ಅನುಭವಿಸುವ ಹಕ್ಕಾಯಿತು. ಹಿಂದೂ ಧರ್ಮದ ಮಠಮಾನ್ಯಗಳಂತೆ ಸೂಫಿ ಪಂಥ ಕೂಡ ಒಂದು ವ್ಯವಸ್ಥೆಯಾಯಿತು. ಎಲ್ಲಾ ವ್ಯವಸ್ಥೆಗಳಲ್ಲೂ ಆಗುವಂತೆ ಈ ವ್ಯವಸ್ಥೆಯಲ್ಲಿಯೂ ಕೂಡಾ ಮೂಲತತ್ವಗಳು ಬದಿಗೆ ಸರಿದು, ಆಚರಣೆಗಳು ಮತ್ತು ಕಟ್ಟುಪಾಡುಗಳು ವಿಜೃಂಭಿಸತೊಡಗಿದವು; ಬಿಜಾಪುರದಲ್ಲಿ ಸೂಫಿ ಪಂಥ ಈ ಘಟ್ಟವನ್ನು ತಲುಪಿದಾಗ ಅಂದರೆ ಸರಿಸುಮಾರು ಸಂಸ್ಥಾನದ ಪತನದ ವೇಳೆಗೆ, ಆ ಪಂಥದ ಒಳಗೇ ಮತ್ತೆ ಬಂಡಾಯ ಕಾಣಿಸಿಕೊಂಡಿತು, ಸಮಾಜದ ಯಾವ ಮರ್ಯಾದೆಯನ್ನೂ ಲೆಕ್ಕಿಸದೆ, ಎಲ್ಲವನ್ನೂ ಧಿಕ್ಕರಿಸುತ್ತ ಉನ್ಮತ್ತ ಉಚ್ಛೃಂಖಲತೆಯಲ್ಲಿ ತಾವೇತಾವಾಗಿ ಮೆರೆದ "ದರ್ವೇಶ್" ಸೂಫಿಗಳೇ, ಈ ಬಂಡಾಯದ ನಾಯಕರು; ರಾಜಕೀಯ ಅನಾಯಕತೆ, ಸಾಂಕ್ರಾಮಿಕ ರೋಗ, ಬರಗಾಲ, ಪ್ರವಾಹಗಳ ಹಾವಳಿಯಿಂದ ದಿಕ್ಕೆಟ್ಟ ಬಿಜಾಪುರ ಸಂಸ್ಥಾನದ ಮೂರಾಬಟ್ಟೆಯಾದ ಬದುಕಿಗೆ, ಈ ದರ್ವೆಶ್‌ಗಳ ವಿಲಕ್ಷಣ ಬದುಕು ಕನ್ನಡಿ ಹಿಡಿದಂತಿತ್ತು;

ಈಟನ್‌ರ ಪುಸ್ತಕ, ಕರ್ನಾಟಕದಲ್ಲಿ ಸೂಫಿ ಪಂಥದ ಈ ಬೆಳವಣಿಗೆಗಳನ್ನು ವಿವರವಾಗಿ ವಿಶ್ಲೇಷಿಸುತ್ತದೆ. ಬಿಜಾಪುರದ ಸೂಫಿಗಳು ಅವರ ಕಾಲದ ಉಲ್ಲೇಮಾಗಳು, ಅರಸರು ಮತ್ತು ಮುಸ್ಲಿಮೇತರ ಜನಸಮುದಾಯಗಳ ಜೊತೆ ಹೊಂದಿದ್ದ ಸಂಬಂಧಗಳನ್ನು ಈಟನ್ ವಿವರವಾಗಿ ಪರಿಶೀಲಿಸುತ್ತಾರೆ. ಇಸ್ಲಾಂನ ಪುರೋಹಿತಶಾಹಿಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡ ಸೂಫಿ ಪಂಥ ಕಾಲಾನುಕ್ರಮದಲ್ಲಿ ಸ್ವತಃ ತಾನೇ ಒಂದು ವ್ಯವಸ್ಥೆ ಆದದ್ದನ್ನು, ಆ ವ್ಯವಸ್ಥೆಯ ಒಳಗೆ ಮತ್ತೆ ಒಂದು ಬಂಡಾಯ ತಲೆದೋರಿದ್ದನ್ನೂ ಈಟನ್ ವಸ್ತುನಿಷ್ಠವಾಗಿ ಚಿತ್ರಿಸುತ್ತಾರೆ. ಈಟನ್ ತನ್ನ ಪುಸ್ತಕದಲ್ಲಿ ಎಲ್ಲಿಯೂ ಭಾವುಕತೆ, ಹಳಹಳಿಕೆ, ವೈಭವೀಕರಣಗಳ ವ್ಯಕ್ತಿನಿಷ್ಠ ಬರವಣಿಗೆಯ ಆಕರ್ಷಣೆಗೆ ಸಿಕ್ಕಿಕೊಳ್ಳುವುದಿಲ್ಲ. ಸಾಮಾಜಿಕ ಸಂಗತಿಗಳು ನಿರಂತರವಾಗಿ ಬದಲಾಗುತ್ತಲೇ ಇರುವಂತಹವು ಎಂಬುದು ಈಟನ್‌ರ ಚಾರಿತ್ರಿಕ ದೃಷ್ಟಿಕೋನ. ಬಿಜಾಪುರದ ಸೂಫಿ ಸಂತರು, ತಮ್ಮ ಕಾಲದ ಸಮಾಜದ ಮೇಲೆ ಮಾಡಿದ ಪರಿಣಾಮ ಮತ್ತು ಆ ಕಾಲದ ಸಾಮಾಜಿಕ ಬೆಳವಣಿಗೆಗಳು, ಸೂಫಿಗಳ ಬದುಕನ್ನು ಬದಲಾಯಿಸಿದ ಬಗೆ- ಈ ಪರಸ್ಪರ ಪರಿಣಾಮ, ರೂಪಾಂತರ ಪ್ರಕ್ರಿಯೆಯನ್ನು ಈಟನ್ ತಕ್ಕ ಚಾರಿತ್ರಿಕ ಆಧಾರಗಳೊಡನೆ ಚಿತ್ರಿಸುತ್ತಾರೆ.

ಕರ್ನಾಟಕದಲ್ಲಿ ಸೂಫಿ ಪಂಥ ಹಲವು ವಿರಿತಗಳನ್ನು ಕಂಡಿದೆ. ಜಾಗತಿಕವಾಗಿ ಕೂಡ ಸೂಫಿ ಪಂಥ ಒಂದೇ ಬಗೆಯ ತೀವ್ರತೆಯಲ್ಲಿ ಅವಿಚ್ಛಿನ್ನವಾಗಿ ಹರಿದುಬಂದ ಪರಂಪರೆಯಲ್ಲ. ಅದರಲ್ಲಿ ಮೂರು ಮುಖ್ಯ ಘಟ್ಟಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.

1. ಕ್ರಿ.ಶ. ಎಂಟನೆಯ ಶತಮಾನದಲ್ಲಿ ಮಧ್ಯ ಪ್ರಾಚ್ಯದ ಅಬ್ಬಾಸಿದ್ ಅರಸರ ಶ್ರೀಮಂತಿಕೆ, ಆಡಂಬರ, ಲೋಲುಪತೆಗಳಿಗೆ ಹೇಸಿಕೊಂಡು ಪ್ರವಾದಿ ಮಹಮ್ಮದನ ಸರಳ ಬದುಕು ಮತ್ತು ಬೋಧನೆಗಳಿಗೂ ಈ ಅರಸರ ವಿಲಾಸೀ ಬದುಕಿಗೂ ಇರುವ ವ್ಯತ್ಯಾಸವನ್ನು ಎತ್ತಿ ತೋರಿಸಿದ ಸಂತರೇ ಸೂಫಿ ಪಂಥದ ಆದ್ಯ ಪ್ರವರ್ತಕರು. ಇವರು ಸರಳ ಜೀವನ, ಭಕ್ತಿ, ವಿರಕ್ತಿ ಮತ್ತು ಆತ್ಮಾರಾಮದ ನಿರಂಕುಶತೆಯ ಮೌಲ್ಯಗಳನ್ನು ಪ್ರತಿಪಾದಿಸಿದರು ಮತ್ತು ಹಾಗೆಯೇ ಬಾಳಿದರು. ಇದು ಕನ್ಕಾಕೆ (Khanaquah) ಎಂದು ಕರೆಸಿಕೊಳ್ಳುವ ಮೊದಲ ಘಟ್ಟ.

2. ಸಂತರು ಶಿಷ್ಯರನ್ನು ಸ್ವೀಕರಿಸಿ, ಈ ಶಿಷ್ಯರು ಗುರುವಿನ ಉಪದೇಶಗಳನ್ನು ಮತ್ತು ಜೀವನ ಚರಿತ್ರೆಯನ್ನು ಮುಂದಿನ ತಲೆಮಾರಿನ ಅನುಯಾಯಿಗಳಿಗೆ

ಬೋಧಿಸುವುದು ಸೂಫಿ ಪಂಥದ ಎರಡನೆಯ ಘಟ್ಟ. ಇದನ್ನು ತಾರಿಕಾ (Tuariqua) ಎಂದು ಕರೆಯಲಾಗುತ್ತದೆ.

3. ಸೂಫಿ ಪಂಥದ ಮೂರನೆಯ ಘಟ್ಟದಲ್ಲಿ ಸಂತರು ರಾಜಮನ್ನಣೆಯನ್ನು ಮತ್ತು ಅದರ ಒಟ್ಟಿಗೇ ಬರುವ ಜಮೀನು ಕಾಣಿಕೆಗಳನ್ನು ಪಡೆದು, ಅವರ ವಂಶದವರೇ, ಅವರ ಪರಂಪರೆ ಮತ್ತು ಆಸ್ತಿ ಎರಡಕ್ಕೂ ವಾರಸುದಾರರಾಗಿ, ತತ್ವವೊಂದು ವ್ಯವಸ್ಥೆಯಾಗಿ ಮಾರ್ಪಡುವ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಈ ಹಂತದಲ್ಲಿ ಸೂಫಿ ಪಂಥ, ಭಕ್ತಿಪಂಥದ ಸರಳತೆ, ಜನಪ್ರಿಯತೆಗಳನ್ನು ಮೈಗೂಡಿಸಿಕೊಳ್ಳುತ್ತದೆ. ಸಂತರ ಅಪೌರುಷೇಯ ಶಕ್ತಿಗಳ ಬಗ್ಗೆ ಕಥೆಗಳು ಹುಟ್ಟಿಕೊಳ್ಳುವುದು ಕೂಡಾ ಈ ಹಂತದಲ್ಲಿಯೇ. ಸೂಫಿ ಪಂಥದ ಈ ಕಾಲಘಟ್ಟವನ್ನು ತಾಯಿಫಾ (Taifa) ಎಂದು ಕರೆಯುತ್ತಾರೆ. ಈಟನ್ ಪ್ರಕಾರ ಬಿಜಾಪುರದ ಸೂಫಿಗಳು, ಮೇಲೆ ಹೇಳಿದ ಕಡೆಯ ಎರಡು ಹಂತದವರು; ಅಂದರೆ ಜಾಗತಿಕವಾಗಿ ಸೂಫಿ ಪಂಥ ತನ್ನ ಮೊದಲ ದಿನಗಳ ಹುರುಪು, ಅನುಭಾವ, ಕಠೋರ ಏಕಾಗ್ರತೆ, ಬಡತನದ ವ್ರತಗಳನ್ನು ಕೈಬಿಟ್ಟು ಅಧಿಕಾರ, ಸಂಪತ್ತು, ಜನಪ್ರಿಯತೆಗಳತ್ತ ಸಾಗುತ್ತಿದ್ದ ಕಾಲಘಟ್ಟದವರು.

ಸೂಫಿ ಪಂಥ ಬಿಜಾಪುರವನ್ನು ಪ್ರವೇಶಿಸಿದ್ದು ಒಂದು ಆಕಸ್ಮಿಕ. ಉತ್ತರ ಭಾರತದಲ್ಲಿ ಮಹಮ್ಮದ್ ತುಗ್ಲಖ್ ಆಳುತ್ತಿದ್ದಾಗ, ಆತನಿಗೂ ಚಿಸ್ತಿ ಪಂಥದ ಸೂಫಿಗಳಿಗೂ ವಿರಸ ತಲೆದೋರಿತು. ಈ ಸಂತರು ತನ್ನ ಅಧೀನದಲ್ಲಿರಬೇಕು, ತಾನು ಕೊಟ್ಟ ಸಮವಸ್ತ್ರ ಧರಿಸಬೇಕು ಮತ್ತು ಇಸ್ಲಾಂ ಧರ್ಮ ಪ್ರಚಾರ ಮಾಡಬೇಕು ಎಂದು ತುಗ್ಲಖ್ ಬಯಸಿದ್ದ. ಇದು ಯಾವುದಕ್ಕೂ ಆ ಸಂತರು ಒಪ್ಪಲಿಲ್ಲ. ಕ್ರಿ.ಶ. 1327ರಲ್ಲಿ ತುಗ್ಲಖ್ ತನ್ನ ರಾಜಧಾನಿಯನ್ನು ದೆಹಲಿಯಿಂದ ದೌಲತಾಬಾದಿಗೆ ವರ್ಗಾಯಿಸಿದಾಗ ದೆಹಲಿಯ ಉಳಿದ ಪ್ರಜೆಗಳಂತೆ ಅಲ್ಲಿನ ಚಿಸ್ತಿ ಸಂತರೂ ದೌಲತಾಬಾದಿಗೆ ತೆರಳಬೇಕು ಎಂದು ಆಜ್ಞಾಪಿಸಿದ. ಈ ಕಾರಣದಿಂದ, ಸೂಫಿ ಸಂತರು ದಕ್ಷಿಣಕ್ಕೆ ಬಂದರು. 1347ರಲ್ಲಿ ಗುಲ್ಬರ್ಗದಲ್ಲಿ ಬಹಮನಿ ಸಾಮ್ರಾಜ್ಯ ಸ್ಥಾಪನೆಯಾದಾಗ ಈ ಸೂಫಿಗಳಿಗೆ ರಾಜಾಶ್ರಯವೂ ದೊರೆಯಿತು. ಬಹಮನಿ ಅರಸರಿಗೂ ತಮ್ಮ ಆಳ್ವಿಕೆಯನ್ನು ಬಲಪಡಿಸಲು, ಸೂಫಿ ಸಂತರ ಬೆಂಬಲ ಅವಶ್ಯವಾಗಿದ್ದಿತು.

ಉತ್ತರ ಕರ್ನಾಟಕಕ್ಕೆ ಸೂಫಿ ಸಂತರು ಬರುವುದಕ್ಕೆ ತುಗ್ಲಖ್‌ನ ಹುಚ್ಚ ನಿರ್ಧಾರವೊಂದು ತಕ್ಷಣದ ಕಾರಣವಾದರೂ, ಆ ಪಂಥ ಇಲ್ಲಿ ನೆಲೆಯೂರುವುದಕ್ಕೆ

ಬೇರ ಹಿನ್ನೆಲೆಯೂ ಇದೆ. ಈ ಪ್ರದೇಶ ಕನ್ನಡ, ಮರಾಠಿ ಮತ್ತು ತೆಲುಗುಗಳ ಭಾಷಿಕಸಂಸ್ಕೃತಿಯ ನೆಲೆಗಳ ಮಧ್ಯದಲ್ಲಿದ್ದು, ಹೊರಗಿನ ಪ್ರಭಾವಗಳಿಗೆ ಸದಾ ತೆರೆದುಕೊಂಡಿತ್ತು. ಜೊತೆಗೆ ಕನ್ನಡದ ವಚನಕಾರರ ಮತ್ತು ಹರಿದಾಸರ ಚಳವಳಿ ಮತ್ತು ಮರಾಠಿಯ ಭಕ್ತಿ ಚಳುವಳಿಗಳು ನಡೆದದ್ದು ಕೂಡಾ ಇಲ್ಲಿಯೇ. ಬಿಜಾಪುರ ನಗರಕ್ಕೆ ಬಸವನ ಬಾಗೇವಾಡಿ ಕೇವಲ 25 ಮೈಲಿ ದೂರದಲ್ಲಿದೆ; ಮರಾಠಿ ಭಕ್ತಿ ಪಂಥದ ಕೇಂದ್ರವಾದ ಪಂಡರಾಪುರ 65ಮೈಲಿ ದೂರದಲ್ಲಿದೆ; ಹರಿದಾಸರ ನೆಲೆ ಬೀಡಾಗಿದ್ದ ಹಂಪೆ ಕೂಡಾ ಈ ಪ್ರದೇಶದಿಂದ ಹೆಚ್ಚು ದೂರವಿಲ್ಲ. ಹೀಗೆ ಹಲವು ಭಾಷೆಗಳು ಮತ್ತು ವೈಚಾರಿಕ ಚಳವಳಿಗಳ ಕೇಂದ್ರದಲ್ಲಿದ್ದು 'ಸಂಸ್ಕೃತಿಯ ಕುಲುಮೆ' ಯಾಗಿದ್ದ ಈ ಪ್ರದೇಶಕ್ಕೆ ಈಗ ಸೂಫಿ ಪಂಥ ಕೂಡಾ ಆಗಮಿಸಿತು.

ತನ್ನ ಪುಸ್ತಕದಲ್ಲಿ ಈಟನ್, ಸೂಫಿ ಪಂಥದ ತಾತ್ವಿಕತೆ ಮತ್ತು ಬಿಜಾಪುರದ ಸೂಫಿಗಳ ಪ್ರಾದೇಶಿಕ ವೈಶಿಷ್ಟ್ಯಗಳ ಕುರಿತು ವಿಸ್ತಾರವಾಗಿ ಬರೆದಿದ್ದಾರೆ. ಸೂಫಿ ಎಂದರೆ, ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ನಂಬಿದವ; ಮತ್ತು ಆ ಅನುಭವಕ್ಕೆ ಸಿದ್ಧನಾಗಲು ಬೇಕಾದ ಪರವಶತೆಯನ್ನು ಪಡೆಯುವುದಕ್ಕೆ ಸಮಾಜದ ನಿಯಮಗಳನ್ನು ಧಿಕ್ಕರಿಸಿದವ. ಸೂಫಿ ಸಂತರಲ್ಲಿ ಭಂಗಿ ಸೇವನೆ, ಕುಡಿತ,ಹಾಡು, ನೃತ್ಯಗಳಲ್ಲಿ ಮೈಮರೆಯುವಂತಹವರೂ ಇದ್ದರು. (ಇಸ್ಲಾಂನಲ್ಲಿ ಇವು ನಿಷಿದ್ಧ). ಆದರೆ ಎಲ್ಲ ಸೂಫಿಗಳೂ ಇಂತಹವರಾಗಿರಲಿಲ್ಲ. ಉಲೇಮಾಗಳಿಗಿಂತಲೂ ಹೆಚ್ಚು ಸಂಪ್ರದಾಯ ಶರಣರಾದವರೂ, ಇಸ್ಲಾಂನೊಳಗೆ ನುಸುಳಿಕೊಂಡ ಇಸ್ಲಾಮೇತರ ಪ್ರಭಾವಗಳನ್ನು ಹೋಗಲಾಡಿಸಬೇಕು ಎಂದು ಪ್ರತಿಪಾದಿಸುತ್ತಿದ್ದವರೂ' ಈ ಪಂಥವಲ್ಲಿದ್ದರು. ಸೂಫಿಗಳಿಗೆ ರಾಜಾಶ್ರಯ ದೊರೆತಾಗ, ಅವರು ತಮ್ಮ ಬಂಡಾಯ ಮನೋವೃತ್ತಿಯನ್ನು ಬಿಟ್ಟುಕೊಟ್ಟದ್ದೂ ಕಾಣಿಸುತ್ತದೆ. ಆದರೆ ಎಲ್ಲ ಸೂಫಿಗಳೂ-ಅವರ ಯಾರ ಹಂಗಿಗೂ ಸಿಕ್ಕದೆ ತಿರುಕರಾದಿರಲಿ, ಅಥವಾ ರಾಜಾಶ್ರಯ ಪಡೆದ ಆಢ್ಯರಾಗಿರಲಿ-ದೇವರಿಗೂ, ಭಕ್ತರಿಗೂ ನಡುವೆ ತಾವು ಒಂದು ಸೇತುವೆ ಇದ್ದಂತೆ ಎಂದು ಭಾವಿಸಿದ್ದರು. ಇಸ್ಲಾಂನ ಸಂಪ್ರದಾಯ ದೇವರು ಮತ್ತು ಮನುಷ್ಯನ ನಡುವೆ ಇಂತಹ ಮಧ್ಯವರ್ತಿಗಳನ್ನು ಮನ್ನಿಸುವುದಿಲ್ಲ; ಇಸ್ಲಾಂನ ಉಲೇಮಾಗಳ ಬದಲು, ಸೂಫಿಗಳೇ ಪೀರ್-ಮುರೀದ್ (ಗುರು-ಶಿಷ್ಯ) ಪರಂಪರೆಯನ್ನು ಒಪ್ಪಿಕೊಂಡಿದ್ದರು. ಹೀಗಾಗಿ ಸೂಫಿಗಳು ಮತ್ತು ಅವರ ದರ್ಗಾಗಳು, ಉಲೇಮಾ ಮತ್ತು ಮಸೀದಿಗಳಿಗೆ ಪರ್ಯಾಯವಾದ ಒಂದು ಶ್ರದ್ಧಾಕೇಂದ್ರವಾಗುವುದು ಅನಿವಾರ್ಯವಾಗಿತ್ತು.

ಸೂಫಿಗಳು ಎಂತಹವರೇ ಆಗಿರಲಿ, ಅವರ ಪಂಥದ ಅಂತಃಸತ್ವ ಇರುವುದು ಅದರ ಅನುಭಾವೀ ದಾರ್ಶನಿಕತೆಯಲ್ಲಿ. ಅದು ಎತ್ತಿ ಹಿಡಿದ ಬಡತನದ ಬದುಕಿ

ನಲ್ಲಿ ಮತ್ತು ತನ್ನ ಒಳಧ್ವನಿಗೆ ಮಾತ್ರ ಶರಣಾಗಿ ನಡೆಯುವ ನಿರ್ಧಾರದಲ್ಲಿ. 14ನೇಯ ಶತಮಾನದ, ಚಿಸ್ತಿ ಪಂಥದ ಸುಪ್ರಸಿದ್ಧ ಸಂತ, ಶೇಕ್ ನಿಜಾಮ್ ಅಲ್‌ದಿನ್ ಔಲಿಯಾ ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿಯ ಬಗ್ಗೆ ಒಮ್ಮೆ ಹೀಗೆ ಹೇಳಿದ: "ನನ್ನ ಜೋಪಡಿಗೆ ಎರಡು ಬಾಗಿಲು ಇಡಿಸಿದ್ದೇನೆ; ಅಕಸ್ಮಾತ್ ಒಂದರ ಮೂಲಕ ಸುಲ್ತಾನ ಒಳಗೆ ಬಂದರೆ, ಇನ್ನೊಂದರ ಮೂಲಕ ನಾನು ಹೊರನಡೆಯುತ್ತೇನೆ". ಇದು ಸೂಫಿಗಳ ಮನೋಧರ್ಮಕ್ಕೆ ಪ್ರಾತಿನಿಧಿಕವಾಗಬಲ್ಲ ಮಾತು. ಚಿಸ್ತಿ ಪಂಥದಲ್ಲಂತೂ, ಸಂತರು ರಾಜರಿಂದ ಭೂಮಿ ಹಣಗಳನ್ನು ಬಹುಮಾನವಾಗಿ ಪಡೆಯುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿತ್ತು. ಚಿಸ್ತಿಗಳ ಕನ್ನಾಕಗಳು (ಬೋಧನೆಯ ಕೇಂದ್ರಗಳು) ಎಲ್ಲ ವರ್ಗದ ಜನರಿಗೂ ತೆರೆದಿದ್ದವು. ಗುಲ್ಬರ್ಗದ ಚಿಸ್ತಿ ಸಂತ ಬಂದೇನವಾಜ್ ಗೀಸುದರಾಜನ ಅನುಯಾಯಿಗಳಲ್ಲಿ "ಅರಸು ಮನೆತನದವರು, ಶ್ರೀಮಂತರು ಮತ್ತು ಉಚ್ಚ ಕುಲದವರು ಮಾತ್ರವಲ್ಲದೆ ದರ್ಜಿಗಳು, ಸಮಗಾರರು ಮತ್ತು ಕಮ್ಮಾರರು ಇದ್ದರು" ಎಂದು ಆ ಕಾಲದ ದಾಖಲೆಯೊಂದು ತಿಳಿಸುತ್ತದೆ.

ಬಿಜಾಪುರ ಸಂಸ್ಥಾನದಲ್ಲಿ ಸೂಫಿ ಪಂಥ ಉಚ್ಛ್ರಾಯದಲ್ಲಿದ್ದ ಸಮಯದಲ್ಲಿಯೇ ಸಂಸ್ಥಾನ ಹಿಂದೂ ಮುಸ್ಲಿಂ ಸಂಗಮ ಸಂಸ್ಕೃತಿಯ ಒಂದು ಕೇಂದ್ರವೂ ಆಯಿತು. ಈ ಬೆಳವಣಿಗೆಯನ್ನು ಹೃತ್ಪೂರ್ವಕವಾಗಿ ಪ್ರೋತ್ಸಾಹಿಸಿದ ಸುಲ್ತಾನರಲ್ಲಿ ಮುಖ್ಯನಾದವನು ಎರಡನೆಯ ಇಬ್ರಾಹಿಂ (1580-1627). ಹಿಂದೂ ಮತೀಯವಾದಿ ಚರಿತ್ರೆ ಇಬ್ರಾಹಿಂನನ್ನು ಅಲಕ್ಷಿಸಿದ್ದರೂ, ಆತ ನಿಸ್ಸಂದೇಹವಾಗಿ ಕರ್ನಾಟಕದ ಶ್ರೇಷ್ಠ ದೊರೆಗಳಲ್ಲಿ ಒಬ್ಬ. ಆಡಳಿತದ ಹಿರಿಯ ಹುದ್ದೆಗಳಿಗೆ ಪರ್ಷಿಯನ್ ಭಾಷೆ ಬಳಸುವ ಇರಾನಿನ ಮುಸ್ಲಿಮರನ್ನು ಮಾತ್ರ ನೇಮಿಸುವುದು ಅದುವರೆಗೆ ನಡೆದು ಬಂದ ಪದ್ಧತಿಯಾಗಿತ್ತು. ಇಬ್ರಾಹಿಂ ಅದನ್ನು ನಿಲ್ಲಿಸಿ, ಸ್ಥಳೀಯ ಮುಸ್ಲಿಮರನ್ನು ಮತ್ತು ಹಿಂದೂಗಳನ್ನೇ ಅಧಿಕಾರದ ಸ್ಥಾನಗಳಿಗೆ ನೇಮಿಸಿದ. ಇಬ್ರಾಹಿಂ ತನ್ನ ರಾಜ್ಯದಲ್ಲಿ ಇಸ್ಲಾಂ ಮಾತ್ರವಲ್ಲದೆ, ಹಿಂದೂ ಮತ್ತು ಕ್ರಿಶ್ಚಿಯನ್ ಧರ್ಮಗಳಿಗೂ ಅವಕಾಶ, ಪ್ರೋತ್ಸಾಹಗಳ ವಾತಾವರಣವನ್ನು ಕಲ್ಪಿಸಿದ್ದ. ಅವನು ವೈಯಕ್ತಿಕವಾಗಿ ಸೂಫಿ ಪಂಥದ ಅಭಿಮಾನಿಯೂ ಆಗಿದ್ದ. ಸಂಸ್ಕೃತ ವಿದ್ವಾಂಸನೂ ಆಗಿದ್ದ ಇಬ್ರಾಹಿಂ, 'ಕಿತಾಬ್-ಇ-ನವರಸ್' ಎಂಬ ಒಂದು ವ್ಯಾಖ್ಯಾನ ಗ್ರಂಥವನ್ನು ಸಂಗೀತದ ರಾಗಗಳು ಮತ್ತು ನವರಸಗಳ ಕುರಿತು ರಚಿಸಿದ್ದ. ಅವನ ಕಾಲದಲ್ಲಿ ಬಿಜಾಪುರದ ಹತ್ತಿರದ ಷಹಾಪುರದ ಗುಡ್ಡ, ಚಿಸ್ತಿ ಸೂಫಿಗಳ ಒಂದು ದೊಡ್ಡ ಕೇಂದ್ರವಾಗಿತ್ತು. ಆದರೆ ಷಹಪುರ ಗುಡ್ಡದ ಸೂಫಿಗಳು ಆದಿಲ್‌ಷಾಹಿಯ ರಾಜಕೀಯ ಪ್ರಭುತ್ವ ಮತ್ತು ಉಲೇಮಾಗಳ ಪುರೋಹಿತಷಾಹಿ—ಎರಡಕ್ಕೂ

ಬಂದಿದ್ದರು. ಇವರ ಕಾಲಾವಧಿಯಲ್ಲಿಯೇ ಉರ್ದು ಭಾಷೆಯ ಸ್ಥಳೀಯ ಪ್ರಭೇದವಾದ ದಾಖ್ನಿ ರೂಪುಗೊಂಡಿತು. ಉತ್ತರ ಭಾರತದಲ್ಲಿ ಉರ್ದು, ಪರ್ಷಿಯನ್ ಪ್ರಭಾವದಿಂದ ಬಿಡಿಸಿಕೊಂಡು ಸ್ವತಂತ್ರವಾದ ಭಾಷೆಯಾಗುವ ಬಹಳ ಮೊದಲೇ ಕರ್ನಾಟಕದಲ್ಲಿ ಈ ಪ್ರಕ್ರಿಯೆ ನಡೆದುಹೋಗಿತ್ತು. ಮೊಘಲರ ಹಿಡಿತದಿಂದ ಬಿಡಿಸಿಕೊಂಡು, ಸ್ಥಳೀಯ ಮುಸ್ಲಿಮ್ ಆಳ್ವಿಕೆಯ ಸಂಸ್ಥಾನವೊಂದು ಇಲ್ಲಿ ಸ್ಥಾಪಿತವಾದದ್ದು, ಸೂಫಿ ಪಂಥ ಇಲ್ಲಿ ಎಲ್ಲ ವರ್ಗಗಳಲ್ಲಿಯೂ ಜನಪ್ರಿಯವಾದದ್ದು ಮತ್ತು ದಾಖ್ನಿಯ ಆವಿಷ್ಕಾರ-ಇವೆಲ್ಲವೂ ಮೂಲಭೂತವಾಗಿ ವಿಕೇಂದ್ರೀಕರಣದ ಪ್ರಕ್ರಿಯೆಗಳು ಎಂಬುದನ್ನು ನಾವು ಗಮನಿಸಬೇಕು.

ಸೂಫಿ ಪಂಥದ ಅನುಯಾಯಿಗಳಲ್ಲಿ ಹೆಂಗಸರೂ ದೊಡ್ಡ ಸಂಖ್ಯೆಯಲ್ಲಿದ್ದರು. ಇವತ್ತಿಗೂ, ಸೂಫಿಗಳ ದರ್ಗಗಳಿಗೆ ಭಕ್ತಿಯಿಂದ ನಡೆದುಕೊಳ್ಳುವವರಲ್ಲಿ ಹೆಂಗಸರದ್ದೇ ಮೇಲುಗೈ. ಹೆಂಗಸರು, ಕೆಳಜಾತಿಯವರು ಮತ್ತು ಕೆಳವರ್ಗದವರು ಅಂದರೆ ಸಮಾಜದ ಅಂಚಿನಲ್ಲಿದ್ದವರನ್ನು ಸೂಫಿ ಪಂಥ ಹೆಚ್ಚಾಗಿ ಆಕರ್ಷಿಸಿತ್ತು. ದರ್ಗಾಗಳು, ಇಸ್ಲಾಂ ಮತ್ತು ಸ್ಥಳೀಯ ಧಾರ್ಮಿಕ ನಡಾವಳಿಗಳ ನಡುವೆ ಒಂದು ಸೇತುವೆಯಂತೆಯೂ ಕಾರ್ಯನಿರ್ವಹಿಸಿತ್ತು. ದರ್ಗಾಗಳಿಗೆ ಹರಕೆ ಹೇಳಿಕೊಳ್ಳುವುದು, ಊದುಬತ್ತಿ, ಸಿಹಿತಿಂಡಿ, ಹೂವು, ಹಣ್ಣು ಸಮರ್ಪಿಸುವುದು, ಸಮಾಧಿಗಳಿಗೆ ಸುತ್ತು ಬಂದು ನಮಸ್ಕರಿಸುವುದು-ಈ ಆಚರಣೆಗಳಲ್ಲೂ ಸ್ಥಳೀಯ ಪದ್ಧತಿಗಳ ಪ್ರಭಾವ ಸ್ಪಷ್ಟವಾಗಿದೆ. ಈಟನ್ ಹೇಳುವಂತೆ ಭಾರತದ ಈ 'ಜಾನಪದ ಇಸ್ಲಾಂ' ಆ ಧರ್ಮದ ಚಲನಶೀಲತೆಯ ಸಂಕೇತ. ಸೂಫಿಗಳು ತಮ್ಮ ಸೃಜನ ಬರವಣಿಗೆಯಲ್ಲೂ ಸ್ಥಳೀಯ ಪರಂಪರೆಯ ಉಪಮೆ, ರೂಪಕಗಳನ್ನೇ ಬಳಸಿದರು. ಸೂಫಿ ಪಂಥದ ಪ್ರಕಾರ ದೇವರ ಹೆಸರನ್ನು ಗಟ್ಟಿಯಾಗಿ ಮತ್ತೆ ಮತ್ತೆ ಹೇಳುವುದೂ ಆರಾಧನೆಯ ಮೊದಲ ಹಂತ; ಹೀಗೆ ಹೇಳುತ್ತ ಸ್ವಂತದ ಅರಿವನ್ನು ಕಳೆದುಕೊಳ್ಳುವುದು ಎರಡನೆಯ ಹಂತ. "ಮಿಂಚು ಕಂಡಂತೆ" ಪರಮಾತ್ಮನ ದರ್ಶನವನ್ನು ಪಡೆಯುವುದು ಸಾಧನೆಯ ಕೊನೆಯ ಹಂತ. ಚಿಸ್ತಿ ಸೂಫಿ ಸಂತರಲ್ಲಿ ಪ್ರಮುಖನಾದ ಬುರ್ಹಾನ್ ಅಲ್‌ದಿನ್, "ತಾವರೆ ಸೂರ್ಯನನ್ನು ಕಾಣುವಂತೆ, ಚಕೋರ ಚಂದ್ರಮನನ್ನು ಕಾಣುವಂತೆ, ಸಾಧುಗಳು ದೇವರನ್ನು ಕಾಣುವರು" ಎನ್ನುತ್ತಾನೆ. ಆ ಅನುಭವ "ದೀಪದ ಜ್ವಾಲೆಗೆ ಚಿಟ್ಟೆ ಬಲಿಯಾದಂತೆ; ಕರ್ಪೂರಕ್ಕೆ ಉರಿ ತಾಗಿದಂತೆ". ದೇವರು ಮತ್ತು ಭಕ್ತ, ತಾದಾತ್ಮ್ಯದಲ್ಲಿ ಒಂದೇ ಆಗುವುದನ್ನು ವರ್ಣಿಸುವ ಇಂತಹ ಉಪಮೆ, ರೂಪಕಗಳು ಕನ್ನಡದ ಭಕ್ತಿ ಸಾಹಿತ್ಯದಲ್ಲಿಯೂ ಹೇರಳವಾಗಿವೆ ಎಂಬುದನ್ನು ಇಲ್ಲಿ ನೆನೆಯಬೇಕು.

ಸೂಫಿ ಪಂಥ ಹಿಂದೂಗಳಲ್ಲಿಯೂ ಅನುಯಾಯಿಗಳನ್ನು ಪಡೆದದ್ದು ಮತ್ತು ಸೂಫಿಗಳು ಸ್ಥಳೀಯ ಸಂಸ್ಕೃತಿಯ ಪ್ರಭಾವಗಳಿಗೆ ತಮ್ಮನ್ನು ಒಡ್ಡಿಕೊಂಡದ್ದು -ಈ ಪ್ರಕ್ರಿಯೆ ಈಟನ್ ಪ್ರಕಾರ "ಮತಾಂತರ"ವಲ್ಲ. ಮತಾಂತರವೆನ್ನುವುದು, ಅದರ ಈಗಿನ ಅರ್ಥದಲ್ಲಿ, 19ನೆಯ ಶತಮಾನದ ಕ್ರಿಶ್ಚಿಯನ್ ಮಿಷನರಿಗಳಿಂದ ಬಳಕೆಗೆ ಬಂದ ಶಬ್ದ. ಮತಾಂತರದ ದೀಕ್ಷೆ ಕೊಡುವ ಧರ್ಮಗುರು ಮತ್ತು ಮತಾಂತರಕ್ಕೆ ಒಳಗಾಗುವ ಸಾಮಾನ್ಯ ಮನುಷ್ಯ ಇಬ್ಬರದ್ದೂ ಪ್ರಜ್ಞಾಪೂರ್ವಕವಾದ ಮತ್ತು ನಿಶ್ಚಿತ ಉದ್ದೇಶವುಳ್ಳ ಕ್ರಿಯೆಗಳು. ಆದರೆ ಸೂಫಿ ಸಂತರಿಗೆ ಕೆಳಜಾತಿಯ ಹಿಂದುಗಳು ಅನುಯಾಯಿಗಳಾದದ್ದು ಅಂತಹ ಪ್ರಕ್ರಿಯೆಯಲ್ಲ. ಈಟನ್ ಇದನ್ನು ಸಾಂಸ್ಕೃತೀಕರಣ — 'Acculturation' ದ ಪ್ರಕ್ರಿಯೆ ಎಂದು ಕರೆಯುತ್ತಾರೆ. ಬಿಜಾಪುರದ ಕೆಳಜಾತಿ, ಕೆಳವರ್ಗಗಳ ಈ ಸಾಂಸ್ಕೃತೀಕರಣ, ಇಂದಿಗೂ ಮುಂದುವರೆದುಕೊಂಡು ಬಂದಿರುವ ಪ್ರಕ್ರಿಯೆ ಎಂದೂ ಈಟನ್ ಅಭಿಪ್ರಾಯ ಪಡುತ್ತಾರೆ.

ಈ ನಾಡಿನ ಧರ್ಮ ಮತ್ತು ಸಂಸ್ಕೃತಿ, ಧರ್ಮ ಮತ್ತು ಪ್ರಭುತ್ವ, ಧರ್ಮಗಳ ಪುರೋಹಿತಶಾಹಿ ಮತ್ತು ಬಂಡಾಯಗಾರರು ಈ ಪ್ರಭೇಧಗಳನ್ನು ಈಟನ್ ಸರಿಯಾಗಿ ಗುರುತಿಸುತ್ತಾರೆ. ಇವುಗಳಲ್ಲಿ ಪರಸ್ಪರ ವ್ಯತ್ಯಾಸವೇ ಇಲ್ಲವೆಂಬಂತೆ ಯೋಚಿಸುವುದು ಮತ್ತು ಬರೆಯುವುದು ಆಲಸ್ಯ ಅಥವಾ ದಡ್ಡತನವಷ್ಟೇ ಅಲ್ಲ. ಅದು ಮತೀಯವಾದಿಗಳ ತರ್ಕವೂ ಆಗಿದೆ. ಈಟನ್‌ರ ಪುಸ್ತಕ, ಮತೀಯವಾದಿಗಳ ತಪ್ಪು ಗ್ರಹಿಕೆಗಳು ಮತ್ತು ಕುತರ್ಕಗಳನ್ನು ಬಯಲು ಮಾಡುವುದರ ಜೊತೆಗೆ ನಮ್ಮ ಸಂಸ್ಕೃತಿಯ ನೈಜ ನೆಲೆಗಳನ್ನು ಶೋಧಿಸುತ್ತದೆ. ಕನ್ನಡ ಸಂಸ್ಕೃತಿ ಎಂದರೆ ಹಿಂದೂ ವೈದಿಕ ಬ್ರಾಹ್ಮಣ ಸಂಸ್ಕೃತಿ ಮಾತ್ರವಷ್ಟೇ ಅಲ್ಲ; ಅದು ಬಹು ರೂಪಿಯಾದದ್ದು ಎಂದು ಈಟನ್ ನಮಗೆ ಮನವರಿಕೆ ಮಾಡಿಕೊಡುತ್ತಾರೆ, ರಂಜಾನ್, ಬಕ್ರಿದ್ ಮುಂತಾದ ವರ್ಷದ ನಾಲ್ಕು ಐದು ಹಬ್ಬದ ದಿನಗಳಂದು ಮಾತ್ರ ಈ ನಾಡಿನಲ್ಲಿ ಮುಸ್ಲಿಮರ ಪ್ರಜೆಗಳೂ ಇದ್ದಾರೆ ಎಂದು ನೆನಪು ಮಾಡಿಕೊಳ್ಳುವ ನಮ್ಮ ಬುದ್ಧಿಜೀವಿಗಳು ಈ ಪುಸ್ತಕದಿಂದಲಾದರೂ ಅರ್ಥ ಮಾಡಿಕೊಳ್ಳಬೇಕು. ವಚನಕಾರರು ಮತ್ತು ಹರಿದಾಸರ ಸ್ಮರಣೆಯ ಕಾರ್ಯಕ್ರಮಗಳನ್ನು ನಡೆಸುವ ನಮ್ಮ ಸರಕಾರದ ಸಂಸ್ಕೃತಿ ಇಲಾಖೆ, ಸಾಹಿತ್ಯ ಅಕಾಡೆಮಿ ಮುಂತಾದ ಸಂಸ್ಥೆಗಳು ಕರ್ನಾಟಕದ ಸೂಫಿಗಳತ್ತ ಕೂಡ ತಮ್ಮ ಗಮನವನ್ನು ಇನ್ನಾದರೂ ಹರಿಸಬೇಕು. ಕನ್ನಡದ ನೈಜ ಜನಪರ ಸಂಸ್ಕೃತಿಯನ್ನು ರೂಪಿಸುವಲ್ಲಿ ಸೂಫಿಗಳು ನಿರ್ವಹಿಸಿದ ಪಾತ್ರವನ್ನು ಮೊದಲಬಾರಿಗೆ ಬೆಳಕಿಗೆ ತಂದ ಈಟನ್‌ರಿಗೆ ಕನ್ನಡಿಗರು ಮಾತ್ರವಲ್ಲ; ಸಹಿಷ್ಣುತೆ, ಪ್ರಜಾಸತ್ತೆ, ವಿಕೇಂದ್ರೀಕರಣಗಳ ಮೌಲ್ಯಗಳಲ್ಲಿ ನಂಬಿಕೆ ಉಳ್ಳ ಎಲ್ಲರೂ ಕೃತಜ್ಞರಾಗಿರಬೇಕು. ●

ಸಮಗಾರ ಭೀಮವ್ವನ ಎದೆಹಾಲು *

ಲಕ್ಷ್ಮೀಶ ತೋಳ್ಪಾಡಿ

ನಾಗಲಿಂಗಯೋಗಿ ನಾಮರೂಪಗಳ ಕಾಲದೇಶಗಳ ಆಚೆಯೂ ಚಾಚಿರಬಹುದಾದ ಸತ್ಯದ ಅದಮ್ಯ ಸೆಳೆತವನ್ನು ಬಲ್ಲವನು. ಆತ ಭೀಮವ್ವನನ್ನು "ಸಮಗಾರ ಭೀಮವ್ವ" ಎಂದೇ ಕರೆಯುತ್ತಿದ್ದಾನೆ, ಜಾತಿ ಹಿಡಿದೇ ಕರೆಯುತ್ತಿದ್ದಾನೆ. 'ಸಮಗಾರ'ದ 'ಸಮ' ಪದ ಸಮತ್ವದ, ಸಮಾನತೆಯ ಅರ್ಥದ ಕಿರು ಅಲೆಗಳನ್ನೇನೋ ಸೃಜಿಸುತ್ತದೆ. ಜತೆಗೆ 'ಸಮದಾರ ಭೀಮವ್ವ, ಎದೆಹಾಲು ನೀಡವ್ವ' ಎಂಬ ಸಾಲು ಕವಿತೆಯ ಆಶಯವನ್ನೇ ಧ್ವನಿಸುವ ಸಾಲು.

ತನ್ನ ಇಷ್ಟದೈವದ ಮುಂದೆ ಆತ್ಮ ನಿವೇದನೆ ಮಾಡಿಕೊಳ್ಳುತ್ತಿದ್ದಾನೆ ಯೋಗಿ. ಹೀಗೆ ಆತ್ಮನಿವೇದನೆ ಮಾಡಿಕೊಳ್ಳುತ್ತ ಕೊಳ್ಳುತ್ತ ಅವಳನ್ನು ಇಷ್ಟದೈವವನ್ನಾಗಿಸುವ ಗಂಭೀರ ಆವಾಹನೆ ಇಲ್ಲಿ ಮೂರ್ತವಾಗುತ್ತದೆ. ಇಡಿಯ ಪದ್ಯ, ಯೋಗಿ ತನ್ನ ಆತ್ಮಶಕ್ತಿಯನ್ನು, ಪ್ರಾಣಶಕ್ತಿಯನ್ನು ಸುರಿಸುರಿದು ಇಷ್ಟದೈವವನ್ನು ಉದ್ದುದ್ಧಗೊಳಿಸುವ ಯೋಗದ ಆಚರಣೆಯಾಗಿದೆ. ಇಷ್ಟದೈವ ಮಾತಾಡುವುದಿಲ್ಲ, ಮಿಸುಕುವುದಿಲ್ಲ; ನಿತಾಂತ ಮೌನದಲ್ಲಿ ಅದ್ದಿದೆ. ಇಂಥಲ್ಲಿ ಸ್ಪಂದನದ ಅಲೆಯನ್ನು ಎಬ್ಬಿಸಬೇಕಾಗಿದೆ. ಜತೆಗೆ, ಯೋಗಿ ನಾಗಲಿಂಗನ ಆತ್ಮನಿವೇದನೆ ಬರಿಯ ಅಂತರ್ಮುಖ ಪರಿವೀಕ್ಷಣೆಯಾಗದೆ ಇತಿಹಾಸದ ಸಂಭವಗಳನ್ನೆಲ್ಲ ಆತ್ಮಸಾತ್ ಮಾಡಿಕೊಂಡು. ಇತಿಹಾಸವನ್ನೆ ನೈವೇದ್ಯವಾಗಿ ಇಷ್ಟದೈವದ ಮುಂದೆ ಇಟ್ಟಿದೆ. ನಾಗಲಿಂಗ ಮತ್ತು ಭೀಮವ್ವ ಇವರ ಸಂಬಂಧ ವೈಯಕ್ತಿಕ ನೆಲೆಯಿಂದ ಕಾಲದೇಶಗಳನ್ನು ಹಬ್ಬತೊಡಗುತ್ತದೆ. ಇದು ಒಂದು ಬಿಂದು. ಹಾಗೆಯೇ ಅತೀತದ ಹುಡುಕಾಟದಲ್ಲಿದ್ದ ಯೋಗಿ ಅತೀತವನ್ನು ಕಾಲದೇಶ ಬದ್ಧವಾಗಿಸಿ,

---

* ಎಚ್.ಎಸ್. ಶಿವಪ್ರಕಾಶ್ ಅವರ "ಸಮಗಾರ ಭೀಮವ್ವ" ಪದ್ಯದ ಒಂದು ಅಧ್ಯಯನ.

ಸದ್ಯವಾಗಿಸತೊಡಗಿದ್ದಾನೆ. ಇದು ಒಂದು ಬಿಂದು. ಇವೆರಡೂ ಸೇರುವ ಆಚರಣೆಯೇ ಕವನದ ಆಚರಣೆಯಾಗಿದೆ. 'ಯೋಗ' ಎಂದರೆ ಸೇರುವುದೇ ಅಲ್ಲವೆ?

ಭೀಮವ್ವನ ಎದೆಹಾಲು, ಮತ್ತು ಆ ಎದೆಹಾಲು ಮಾತ್ರವೇ ತನ್ನನ್ನು ಸಪ್ರಾಣಿಸಬಲ್ಲುದು ಎಂದು ನಾಗಲಿಂಗನ ನಂಬುಗೆ. ಹಾಗೆಯೇ, ನಾಗಲಿಂಗನಿಗೆ ಎದೆಹಾಲು ಊಡಿಸುವ ಮೂಲಕವೇ ಭೀಮವ್ವನೂ ಸಂಜೀವಿಸುವುದು ಸಾಧ್ಯ. ಹೀಗೆ ಇದು ಪರಸ್ಪರ ಸಂಜೀವಕ ಸಂಬಂಧ. ಆದರೂ ಭೀಮವ್ವನ ಮೊಲೆ ಬಿರಿದು ಎದೆಹಾಲು ಸುರಿಯುವುದು ಮೊದಲು; ಅದನ್ನಾಕೆ ಊಡಿ, ನಾಗಲಿಂಗ ಬದುಕುವುದು ಅವ್ಯವಹಿತ ಉತ್ತರಕ್ಷಣದ ಕ್ರಿಯೆ. ಅಂದರೆ, ಭೀಮವ್ವನ ಸ್ಪಂದನದಿಂದ ನಾಗಲಿಂಗನ, ಇತಿಹಾಸದ ಭಾರವನ್ನು ಹೊತ್ತ ನಾಗಲಿಂಗನ–ಉಜ್ಜೀವನ ಸಾಧ್ಯ. ಚಕ್ರ ಮುಂತಿರುಗುವುದು ಸಾಧ್ಯ. ಇಂಥದೊಂದು ಆಚರಣೆಯಲ್ಲಿ ಇಷ್ಟದೈವ ಮೌನವಾಗಿರುವುದು ಮುಖ್ಯ. ಈ ಮೌನ ಕೇವಲ ಮೌನ. ನಿತಾಂತ ಮೌನ. ಬಿರಿಯುವುದೋ ಇಲ್ಲವೋ ಎಂಬಂತಿರುವ ಮೌನದ ಮೊಟ್ಟೆ. ಏಕೆಂದರೆ ಇಂಥ ಮೌನ ಮಾತ್ರ, ಕಗ್ಗಲ್ಲಿನಂಥ ಸಾಕ್ಷೀಮೌನ ಮಾತ್ರ ಅಪಾರವಾದ ಸ್ಪಂದನ ಶಕ್ತಿಯನ್ನು ತನ್ನಲ್ಲಿ ಹಿಡಿದಿಟ್ಟುಕೊಳ್ಳಬಲ್ಲುದು. ಅಪಾರ ಶಕ್ತಿಯನ್ನು ತನ್ನ ಹೊಟ್ಟೆಯಲ್ಲಿ ಹೊತ್ತ ಅಣುವಿನಂತೆ. ಇಂಥ ಸಾಕ್ಷೀಭೂತ ಮೌನ ಮುದ್ರೆ. ಅದು ಯಾರೋ ಬೇರೆ ಭೀಮವ್ವನಿಗೆ ಅಲ್ಲ, ಸಮಗಾರ ಭೀಮವ್ವನಿಗೆ ಮಾತ್ರ. ಸಹಜ ಮುದ್ರೆ. ಆದ್ದರಿಂದಲೇ, "ಸಮಗಾರ ಭೀಮವ್ವ–ಎದೆಹಾಲು ನೀಡವ್ವ". ಯೋಗದ 'ಷೋಡಶೀ ಪೂಜೆ'ಯಂಥ ಆಚರಣೆಯಂತಿದೆ ನಾಗಲಿಂಗನ ಆತ್ಮನಿವೇದನೆ. ಭೀಮವ್ವ ಮದುವೆಯಾಗದವಳು; ಆದರೂ ತಾಯಿ; ತಾಯಿಯಾಗಬಲ್ಲವಳು. ಇಂಥವಳಿಗೆ ಮಾತ್ರ ಉದ್ಬೋಧ ಸಾಧ್ಯ. ಮದುವೆಯಾದವಳು ಕುಟುಂಬ, ದಾಂಪತ್ಯ ಎಂಬ ಸಂಸ್ಥೆಗೆ ಒಳಗಾದವಳು. ಮುರಿಯಲಾರಳು: ಕಟ್ಟಲಾರಳು. ಆದ್ದರಿಂದಲೇ ಭೀಮವ್ವನಂಥ ಷೋಡಶಿ ಹಾಡುವ ಜೋಗುಳದಲ್ಲಿ ಕ್ರಾಂತಿಯ ಆಕರ್ಷಣೆ ಇದೆ. ಅವಳ ಎದೆಹಾಲನ್ನುಂಡ ಮಗುವಿಗೆ ಮುರಿಯುವುದೂ, ಕಟ್ಟುವುದೂ ಒಂದು ಲೀಲೆ. ಹಾಗಾಗಿಯೇ, "ಸಮಗಾರ–ಭೀಮವ್ವ, ಎದೆಹಾಲು ನೀಡವ್ವ". ಯೋಗಿ ನಾಗಲಿಂಗ ಮರಳಿ ಶೈಶವಕ್ಕೆ ಮಗುಚಿಕೊಂಡನೇನೋ ಎನಿಸುತ್ತದೆ. ಎದೆಹಾಲಿಗೆ ಅಂಥ ಹಂಬಲ ಅವನದು. ಮರಳಿ ಬಾಲ್ಯಕ್ಕೆ ಹೊರಳುವ ಕ್ರಿಯೆ, ಒಂದು ಚಕ್ರೀಯ ಪ್ರಕ್ರಿಯೆಯಾಗಿದೆ. ಇದು ವಿಶಿಷ್ಟವಾಗಿ ಭಾರತೀಯ ಸಾಂಸ್ಕೃತಿಕ ಸಂಕೇತವೂ ಹೌದು. ಜಗತ್ತಿನ ನಾಗರಿಕತೆಗಳಲ್ಲೆಲ್ಲ ಚಕ್ರ-wheel-ಮೊದಲು ತಿಳಿದದ್ದು ಸಿಂಧೂ ನಾಗರಿಕತೆಗೆ ಅನ್ನುತ್ತಾರೆ. ಮೊಹೆಂಜೋದಾರೋ ಅಗೆತಗಳಲ್ಲಿ ಇದು ಕಂಡಿದೆ. ನಿಜಕ್ಕಾದರೆ ಚಕ್ರ ನೇರ ಪ್ರಗತಿಯ, ಚರಿತ್ರೆಯ ಮುಂದುವರಿಕೆಯ

ಸಂಕೇತವಾಗಬೇಕು. ಆದರೆ ಭಾರತೀಯ ಚಕ್ರ, ಯಾವ ಬಿಂದುವಿನಿಂದ ಹೊರಟವೋ ಅಲ್ಲಿಗೇ ಮರಳುವ ವರ್ತುಲವಾಗಿದೆ, ವೃತ್ತವಾಗಿದೆ. ತನ್ನ ಅಕ್ಷದಲ್ಲೇ ಬುಗುರಿಯಂತೆ ತಿರುಗುವ ಚಕ್ರ ಇದು. ನಮ್ಮ ಚತುರ್ಯುಗಗಳ ಕಲ್ಪನೆ; ಸಂವತ್ಸರಗಳ ಕಲ್ಪನೆ, 'ಧಾತಾ ಯಥಾ ಪೂರ್ವಂ ಅಕಲ್ಪಯತ್' ಎಂಬ ಸೃಷ್ಟಿ ಕಲ್ಪನೆ (ಈ ಮೊದಲು ಹೇಗಿತ್ತೋ ಅಂತೆಯೇ ವಿಧಾತನು ಸೃಷ್ಟಿಯನ್ನು ಮಾಡಿದನು) –ಇಲ್ಲೆಲ್ಲ ಈ ಚಕ್ರಗತಿ ಕಲ್ಪನೆ, ಹೊರಟಲ್ಲಿಗೆ ಮರಳುವ ಕಲ್ಪನೆ ಕಾಣುತ್ತಿದೆ. ('ವೃತ್ತ' ಎಂಬ ಪದಕ್ಕಿರುವ ಚರಿತ್ರೆ, ವ್ಯಕ್ತಿಯ ನಡವಳಿಕೆ ಮತ್ತು ವರ್ತುಲಗಳೆಂಬ ಮೂರರ್ಥಗಳೂ ಪರಸ್ಪರ ಸಂಬದ್ಧವಾಗಿ ಈ ಮೇಲಿನ ಕಲ್ಪನೆಯನ್ನೇ ಸೂಚಿಸುತ್ತವೆ.)

ಯೋಗಿಯ ಬದುಕಿನಲ್ಲೂ ಈ ಚಕ್ರ ಪ್ರಚಂಡವಾಗಿ ತಿರುಗುತ್ತಿದೆ; ಸಹಜವಾಗಿ ಅಂತರ್ಮುಖವಾಗಿ. ಚಕ್ರ ತಿರುಗಿದಂತೆ ಮರಳಿ ಬಾಲ್ಯಕ್ಕೇ ಮಗಚುವ, ಬಾಲನಂತೆ ನಿರಂತರ ಬೆರಗಿನಲ್ಲಿ, ಮುಗ್ಧತೆಯಲ್ಲಿ, ತಾದಾತ್ಮ್ಯದಲ್ಲಿ, ಆಲದೆಲೆಯ ಶಿಶುವಿನಂತೆ. ಬದುಕುವುದೇ ಯೋಗಿಯ ಉಚ್ಚಾಂಕ ಎನ್ನಲಾಗುತ್ತಿದೆ. ಇದನ್ನು ಉದ್ದೇಶಪೂರ್ವಕ ನೆನಪಿಸುವಂತೆ, 'ಸಮಗಾರ ಭೀಮವ್ವ, ಎದೆಹಾಲು ನೀಡವ್ವ' ಎಂಬ ಸಾಲುಗಳಿದ್ದರೂ, ಆನೋಲಿನ ಸಾಲುಗಳು ಯಾವುವೇ ಮುಗ್ಧಶ್ರದ್ಧೆಯನ್ನು ಸೂಚಿಸುವುದಿಲ್ಲ. ಪರಿಸರದ ಈ ಕರಾಳತೆಯನ್ನೇ ಸೂಚಿಸುತ್ತವೆ. (ಬೀಳ್ಬಿಡುವ ನವಲಗುಂದದ ಗಡ್ಡ, ಸುಡುವೆಲರ ಸುಯ್ಲಿನ ಊರು).. ಸೋಜಿಗವೆಂದರೆ ಪರಿಸರದ ಈ ಕರಾಳತೆಯನ್ನು ತನ್ನ ಮೈಯಲ್ಲೇ ತಾನು, ಯೋಗದ ಒಂದು ಸ್ಥಿತಿ ಎಂಬಂತೆ, ಯೋಗಿನಾಗಲಿಂಗ ಕಂಡುಕೊಂಡಿದ್ದಾನೆ–ತನ್ನ ಮೈ ಬೇಯುವ ಜ್ವರದಲ್ಲಿ; ಒಡಲು ಹಸಿವಿನ ಕುಂಡವಾದದ್ದರಲ್ಲಿ. ಅಂದರೆ ಅಂತರ್ಮುಖ ಇಲ್ಲಿ ಬಹಿರ್ಮುಖವಾಗಿದೆ; ಬಯಲಾಗಿದೆ. ಬಹಿರಂಗದ ಸುಡುಬಿಸಿಲ ಪ್ರತೀಕವಾಗಿಯೇ ಮೈಜ್ವರ ಕೆಂಡವಾಗಿದೆ ಎಂಬಂತೆ ಮೊದಲು ನವಲಗುಂದದ ಗುಡ್ಡದ ನೆತ್ತಿಗೇರಿದ ಬಿಸಿಲವರ್ಣನೆ ಇದೆ. ಇದು ಬಾಲ್ಯಕ್ಕೆ ಮರಳುವ ಚಕ್ರವಲ್ಲ. ಹಾಗೆ ಮರಳುವುದೇ ಪೂರ್ಣತೆ ಎನ್ನುವ ಚಕ್ರವಲ್ಲ. ಮುಂದಕ್ಕೆ ಉರುಳುತ್ತಿರುವ ಚಕ್ರ. ತನ್ನ ಅಕ್ಷದಲ್ಲೇ ತಿರುಗುತ್ತಿದ್ದರೂ ಸೂರ್ಯನನ್ನು ಸುತ್ತುತ್ತಿರುವ ಭೂಮಿಯಂತೆ. ಇದೀಗ ಸೋಜಿಗ. ತನ್ನಲ್ಲೇ ತಾನು ತಿರುಗದೆ ಚಕ್ರ ಮುಂದುವರಿಯಲಾರದು. ಚರಿತ್ರೆಯ ಭ್ರಮಣದಲ್ಲೇ ಆತ್ಮ ಭ್ರಮಣವೂ ಇದೆ. ಹಾಗೆಯೇ ಆತ್ಮಭ್ರಮಣದಲ್ಲಿ ಚರಿತ್ರೆಯ ಭ್ರಮಣವು ಇರಬೇಕಲ್ಲ. ಹಾಗೆ, ಬಾಯಾರಿ ಕಂಗೆಟ್ಟ ಬಾಲನಂತೆ, ಯೋಗಿ ಆರ್ತವಾಗಿ ಹಂಬಲಿಸುತ್ತಿದ್ದಾನೆ–"ಸಮಗಾರ ಭೀಮವ್ವ, ಎದೆಹಾಲು ನೀಡವ್ವ."

ಭೀಮವ್ವ ಮಹಾಮೌನಿ. ಆದರೆ ಆಕೆ ಮಾತಾಡಿದರೆ ಏನು ಮಾತಾಡಿಯಾಳು ಎಂದು ತಾನೇ ಊಹಿಸಿದ್ದಾನೆ. ಯೋಗಿ. ತನ್ನ ಜಾತಿಯನ್ನು ಭೀಮವ್ವ ಹೇಳಿಕೊಂಡಾಳು ಎದೆಹಾಲನ್ನು ಕೇಳಿದಾಗ. ಆದಕ್ಕೆ ನಾಗಲಿಂಗನ ಉತ್ತರ ಇದು: "ಅಜಾತನಿಗೆ ಜಾತಿಯಾವುದೆ ತಾಯಿ ?" ಭೀಮವ್ವನಿಗೆ ಆತ ಜಾತಿ ಎಂಬುದು ಹುಸಿ ಎಂದು ಹೇಳುತ್ತಿಲ್ಲ; ಹಾಗೆ ಹೇಳಿ ಅವಳನ್ನು ಉದ್ಬುದ್ಧಗೊಳಿಸುವುದು ಸಾಧ್ಯವೂ ಇಲ್ಲ. ತನ್ನನ್ನು ತಾನು 'ಅಜಾತ' ಎಂದು ಹೇಳಿಕೊಳ್ಳುತ್ತಿದ್ದಾನೆ; ಜಾತಿಯಲ್ಲಿ ತಾನು ಹುಟ್ಟಿಲ್ಲ ಎಂಬರ್ಥದಲ್ಲಿ, ತಾನು ಜಾತಿಯನ್ನು ಹರಿದಿದ್ದೇನೆ ಎಂಬರ್ಥದಲ್ಲಿ. ದಿಕ್ಕು ದೇಶ ಹರಿದು ಜ್ಯೋತಿಯನ್ನರಸುತ್ತ ಹೊರಟವನಿಗೆ ಜಾತಿಯನ್ನು ಹರಿಯುವುದೇನು ದೊಡ್ಡದು? ಇಂಥ ಅಜಾತನಿಗೆ, ಮದುವೆಯಾಗದ, ಮಕ್ಕಳಾಗದ ಭೀಮವ್ವನ ಎದೆಹಾಲಿನ ಬಾಯಾರಿಕೆ! ಎಂಥ ವಿಚಿತ್ರ ಸಂಯೋಗ! ಜೈವಿಕ ಮಿತಿಗಳನ್ನೂ, ತಾಂತ್ರಿಕತೆಯನ್ನೂ ಮೀರಬೇಕಾದ ಅನಿವಾರ್ಯವನ್ನು ಸೂಚಿಸುತ್ತಿದ್ದಾರೋ? 'ಅಜಾತ' ಎಂಬ ಪದವನ್ನು ವಾಚ್ಯಾರ್ಥದಲ್ಲಲ್ಲದೆ ಈ ಮೇಲಿನ ಅರ್ಥದಲ್ಲಿ ಟಂಕಿಸಿ, ಶಿವಪ್ರಕಾಶರು ತಮ್ಮ ಕಾವ್ಯಪ್ರಯೋಗ ಗಂಭೀರವಾದ್ದು ಎಂದು ತೋರಿಸಿದ್ದಾರೆ.

ಯೋಗಿಯ ಆತ್ಮಪಕ್ಷಿಗೆ ಯಾವುದೋ ಹರಿತವಾದ ಬಾಣ ನಾಟಿದೆ. ಹಕ್ಕಿ ನೆಲದಾಮೇಲೆ ಉರುಳಿದೆ; ರಾಮಾಯಣದ ಕ್ರೌಂಚದಂತೆ. ಆದರೆ ಕೆಡುಕಿನ (evil) ಮೂಲ ಎಲ್ಲಿದೆ? ಬೀಜ ಎಲ್ಲಿದೆ? ಬೇಡನಲ್ಲೆ? ಕೆಡುಕು ಕ್ಷಾಮದಲ್ಲದೆ; ಪ್ಲೇಗಿನಲ್ಲಿದೆ, ಸಾಮ್ರಾಜ್ಯಶಾಹಿಯಲ್ಲಿದೆ, ಶೋಷಣೆಯಲ್ಲಿದೆ, ಜಾತಿವ್ಯವಸ್ಥೆಯಲ್ಲಿದೆ. ಹಕ್ಕಿಗೆ ಹೊಡೆದ ಬಾಣಕ್ಕೂ ಈ ಎಲ್ಲದಕ್ಕೂ ಪರಸ್ಪರ ಸಂಬಂಧ ಇವೆ. ಆದ್ದರಿಂದ ಯಾರು ಬಾಣ ಹೊಡೆದ ಎಂಬುದು ಮುಖ್ಯವಲ್ಲ. ಹಾಗಾಗಿಯೇ, ಯೋಗಿ; ಜ್ಯೋತಿಯ. ನ್ನರಸುತ್ತ ಹೊರಟ ಯೋಗಿ, ಬಿರುಬಿಸಿಲಿಗೆ ಸಿಕ್ಕಿ, ಮಳೆಯನ್ನು ಅರಸುವ ಸಾಮಾನ್ಯವಾಗುತ್ತಾನೆ. ಏಕೆಂದರೆ ಮಳೆಯಿಂದ ಮಾತ್ರ ಕಾಮನಿವಾರಣೆ ಸಾಧ್ಯ. ಹಾಗೆ ಮಳೆಹನಿಯುವುದಕ್ಕೂ, ಭೀಮವ್ವನ ಎದೆಹಾಲು ಉಕ್ಕುವುದಕ್ಕೂ ಅವಿನಾಸಂಬಂಧ ಇದೆ. ದೇಸೀ ಪರಂಪರೆಗಳ fertility cult ಅನ್ನು ಇದು ನೆನಪಿಸುತ್ತದೆ.

ಯೋಗಿಗೆ ತನ್ನ projection ಮಾತ್ರ ಮುಖ್ಯ ಅಲ್ಲ. ಅವನು ಯಾವದನ್ನು ಬಯಸತ್ತಾನೋ ಅದು ಇಂದ್ರಿಯ ಗಮ್ಯವಾಗಿಯೇ ಸಿಗಬೇಕು ಅವನಿಗೆ. ತನ್ನ ಹಂಬಲದಲ್ಲೇ ತಾನು ರತನಾಗುವ ಭಕ್ತನಂತೆ ಅವನಲ್ಲ; ಅವನಾಗಲಾರ. ಆದ್ದರಿಂದಲೇ ಮೊಲೆ ಮೂಡದೆ (ಸರಿಯಾಗಿ) ಇರಲಿ, ಮದುವೆಯಾಗದೆ ಇರಲಿ, ನಾಗಲಿಂಗನಿಗೆ ಭೀಮವ್ವನ ಎದೆಹಾಲು ಬೇಕು. ಏಕೆಂದರೆ ಯೋಗಿಗೆ ಈಗ ತನ್ನ ಬೆಳಗಿನ ಮಾನಸಿಕ ಪ್ರಪಂಚವೇ ಕೇಂದ್ರವಾಗಿಲ್ಲ. ಹೊರ ಜಗತ್ತಿನ ಸಂಭವಗಳೇ ಕೇಂದ್ರವಾಗಿವೆ, ಅಥವಾ ಬೇರೆ ಮಾತುಗಳಲ್ಲಿ, ಯೋಗಿ ತನ್ನ ಸಾಕ್ಷಿಪ್ರಜ್ಞೆಯ ಕೇಂದ್ರದಿಂದ ಜಗಿದು

ಬಿಟ್ಟಿದ್ದಾನೆ. ಚರಿತ್ರೆಯೇ ಅವನ ಸಾಕ್ಷಿಯಾಗಿ ಬಿಟ್ಟಿದೆ. "ಶ್ರೀ ರಾಮನವಮಿಯ ದಿವಸ"ದ 'ಅಂತರಂಗದ ಸುರುಳಿಬಿಚ್ಚಿ ಸರ್ಟಿಫಿಕೇಟಲ್ಲಿ ಹೆದ್ದಾರಿ ಹಾಸಿದ್ದ ರಾಮ ಚರಿತ'ದಿಂದ ತೀರ ಭಿನ್ನವಾಗಿ ಚರಿತ್ರೆಯೇ ಹೆದ್ದಾರಿಯಾದದ್ದು, "ಸಮಗಾರ ಭೀಮವ್ವ"ಕ್ಕೆ ಅನನ್ಯತೆಯನ್ನು ತಂದುಕೊಟ್ಟಿದೆ.

18-19ನೇ ಶತಮಾನಗಳಲ್ಲಿ ಮೊದಲಿಟ್ಟ ಭಾರತೀಯ ಪುನರುಜ್ಜೀವನದ ಗತಿಯನ್ನು ಗಮನಿಸಿದರೆ ಅದರಲ್ಲಿ ಎರಡು ಎಳೆಗಳೂ ಪ್ರಧಾನವಾಗಿ ಬೆರೆತಿರುವುದು ತೋರುತ್ತದೆ. ದೃಷ್ಟಾಂತಕ್ಕೆ, ರಾಮಮೋಹನರಾಯ್ 'ಸತಿ'ಪದ್ಧತಿಯನ್ನು ತೊಡೆಯಲು ಶ್ರಮಿಸಿದಲ್ಲಿಂದ ನೋಡಬಹುದು. ರಾಯ್ ಪ್ರಯತ್ನದಿಂದ, ಈ ಸತಿ ವಿರೋಧ ಕಾನೂನು ಬಂದ ಕಾಲಘಟ್ಟದಲ್ಲೇ (ಸರಿಸುಮಾರು ಎರಡು ದಶಕಗಳ ಅಂತರ) ರಾಮಕೃಷ್ಣಪರಮಹಂಸರು ಪ್ರತಿಹೆಣ್ಣೂ ಜಗನ್ಮಾತೆಯ ಅಂಶ ಎಂದು ಧ್ಯಾನಿಸುತ್ತಿದ್ದರು. (ನಾಗಲಿಂಗ, ಭೀಮವ್ವನನ್ನು ಜಗನ್ಮಾತೆ ಎಂದೇ ಕರೆಯುತ್ತಿದ್ದನಂತೆ) ಒಂದು ಬಿಳಿ-ಕಪ್ಪುಗಳ, ಒಳಿತು-ಕೆಡಕುಗಳ ವಿವೇಕದ, ವಿಚಿಕಿತ್ಸೆಯ) ಮುಖ್ಯವಾಗಿ ಬೌದ್ಧಿಕವಾದ ವೈಚಾರಿಕ ಎಳೆ. ಇನ್ನೊಂದು ಸಮಗ್ರ ತಾದಾತ್ಮ್ಯದ, ಆಳ ಭಾವದ ಎಳೆ. (ಗಮನಿಸಿ-ಭಾವ ಎಂದರೆ ಇರುವಿಕೆ, ಅಸ್ತಿತ್ವ ಎಂದೇ ಅರ್ಥ, ಈ ಎರಡು ಎಳೆಗಳೂ ಕೆಲವೊಮ್ಮೆ ಬೆರೆತು, ಕೆಲವೊಮ್ಮೆ ಘರ್ಷಿಸಿ, ರೆನೆಸಾನ್ಸಿನ ಕೋಶವನ್ನೂ ಕಟ್ಟಿದ್ದಾವೆ. ಗಾಂಧೀಯವರಲ್ಲಿ ಇದರ ಪರಿಪಾಕವನ್ನು ಕಾಣಬಹುದು. ಸುಧಾರಕನ ವಿಚಿಕಿತ್ಸೆ. ಭಕ್ತನ ಸಮರ್ಪಿತ ಭಾವನಿರ್ಭರತೆ. ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ ರೆನೆಸಾನ್ಸಿನ ವಾಹಕವಾದ ಸಾಹಿತ್ಯದಲ್ಲೂ ಈ ಎಳೆಗಳ ಹೊಳಪು ಕಾಣುತ್ತಿದೆ. ಉದಾಹರಣೆ ತೆಗೆದುಕೊಳ್ಳಬೇಕಾದರೆ, ನಮ್ಮ 'ರಾಮಾಶ್ವಮೇಧ'ದ ಮುದ್ದಣ-"ಪದ್ಯಂ ವಧ್ಯಂ, ಗದ್ಯಂ ಹೃದ್ಯಂ-ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು" ಎಂದನಲ್ಲವೆ? ಏಕಿದ್ದೀತು? 19-20ರ ಶತಮಾನದ ಸಂದುಕಟ್ಟಿನ ಈ ಕವಿ, ಇನ್ನು ಮುಂದಿನ ಕವಿ ತನ್ನ ಸಂಕೀರ್ಣ ಅನುಭವಕ್ಕೆ ಮೈಕೊಡುವುದು ಗದ್ಯದಲ್ಲೇ ಸಾಧ್ಯ ಎಂದು ಸೂಚಿಸುತ್ತಿದ್ದಾನೆಯೆ ಹೇಗೆ? ಏಕೆಂದರೆ, ಸಾಂಸ್ಕೃತಿಕವಾಗಿ ಬಹಳ ಪ್ರಶ್ನೆ ಕೇಳಲು ಆಸ್ಪದವಿರುವ ಸೀತಾ ಪರಿತ್ಯಾಗದ ವಸ್ತುವನ್ನು ಆತ ಆರಿಸಿಕೊಂಡದ್ದು, ಸಾಮಾನ್ಯ ಹೆಣ್ಣಿನ ಪ್ರತಿನಿಧಿಯಾಗಿ ಮನೋರಮೆಯನ್ನು ತಂದು ಒಂದು ಮಿತಿಯಲ್ಲಿ ಪ್ರಶ್ನೆಗಳನ್ನು ಕೇಳಿಸುವುದು, ಗದ್ಯದಲ್ಲಿ ಬರೆದದ್ದು-ಇವೆಲ್ಲ ಪರಸ್ಪರ ಸೇರಿಕೊಂಡಿವೆಯಲ್ಲವೆ? ಆದರೆ ವಿಚಿತ್ರವೆಂದರೆ, ಮುದ್ದಣನ ಅನಂತರದ ಎರಡು ಮೂರು ದಶಕಗಳಲ್ಲಿ ಬೇಂದ್ರೆ ಬಂದರು; ಕುವೆಂಪು ಬಂದರು, ಕಾವ್ಯ ವೈಚಾರಿಕತೆಯನ್ನು ಮೀರಿ ಬೆಳೆಯಬಲ್ಲುದು ಎಂಬುದನ್ನು ತೋರಿದರು. ಇದನ್ನು ವಿವರಿಸುವ ಅಗತ್ಯ ಇಲ್ಲ ಎಂದುಕೊಂಡಿದ್ದೇನೆ. ಬೇಂದ್ರೆಗೆ ಕಾವ್ಯ ಕೇವಲ ನಡಿಗೆಯಲ್ಲ, ಅದು

ನೃತ್ಯ; ಕುಣಿತ. "ಜಗವೆಲ್ಲವು ಮೊರೆ ಇಡುತಿರೆ ಕುಣಿಯುತ್ತಿದೆ ಕೇಕೀ" ಎಂದರು ಬೇಂದ್ರೆ. ಮಳೆಗಾಗಿ ಜಗತ್ತೆಲ್ಲ ಕಾತರಿಸುತ್ತಿದೆ; ಮೊರೆ ಇಡುತ್ತಿದೆ. ಆದರೆ ಅದೇ ನವಿಲು ಕುಣಿಯುತ್ತಿದೆ. ಇದೇನೂ ವಿರೋಧವಲ್ಲ; ಏಕೆಂದರೆ ನವಿಲಿನ ಕಾತರ, ಮೊರೆ, ಆಶೆಗಳೆಲ್ಲ ಆ ಕುಣಿತದಲ್ಲಿವೆ: ಕೇವಲ ನವಿಲ ಮೊರೆ ಮಾತ್ರವಲ್ಲ, ಜಗತ್ತಿನ ಮೊರೆ ಎಲ್ಲ ಆ ನೃತ್ಯದಲ್ಲಿದೆ. (ಸಖೀಗೀತದಲ್ಲಿ ನೋಡಿ–"ಕರುಳಿನ ತೊಡಕನು ಕುಸುರಾಗಿ ಬಿಡಿಸಿಟ್ಟು ತೊಡವಾಗಿ ತಿರಗೊಮ್ಮೆ ನಾ ಧರಿಸಲೆ?") ಹಾಗೆ ನರ್ತಿಸುವುದು ಕಾವ್ಯ. ಉಳಿದದ್ದೆಲ್ಲ ಬರಿ ಮೊರೆ; ಗೋಳು.

ಪೋಲ್‌ವಾಲ್ಟ್ ಮಾಡುವ ಹುಡುಗ, ತನ್ನ ಕೋಲಿನ ಸಹಾಯದಿಂದ ಎತ್ತರಕ್ಕೇರುತ್ತಾನೆ. ಏರುತ್ತಾನೆ ಸರಿ, ಆದರೆ ಅದರಾಚೆ ಜಿಗಿಯಬೇಕಾದರೆ ತನ್ನನ್ನು ಅಷ್ಟು ಎತ್ತರಕ್ಕೇರಿಸಿದ ಕೋಲನ್ನು ಈಚೆ ಎಸೆದು, ತಾನೇ ಆಚೆಗೆ, ಅತೀತಕ್ಕೆ ಧುಮುಕ ಬೇಕಾಗುತ್ತದೆ. ಆ ಜಿಗಿತದ, ಡೈವಿಂಗ್ ಇಲ್ಲದಿದ್ದರೆ ಕೋಲನ್ನೂರಿ ಅಷ್ಟೆತ್ತರಕ್ಕೇರಿದ್ದಾದರೂ ಏಕೆ? ಇದೇನೂ ಅವೈಚಾರಿಕತೆಯ ಆರಾಧನೆಯಲ್ಲ. ವೈಚಾರಿಕತೆಯನ್ನು ಮೀರಿದ spontaneityಯ ಸ್ಪಂದನ ಇದು. ಒಂದರ್ಥದಲ್ಲಿ ತನ್ನೊಳಗೇ ತಾನು ಸುಳಿಯುತ್ತ ಇದ್ದ ಯೋಗಿ ನಾಗಲಿಂಗ ಸಮಗಾರ ಭೀಮವ್ವನ ಎದೆಹಾಲನ್ನು ಬಯಸುವುದೇ ಈ ಉತ್ಕಟ ಸ್ಪಂದನದಿಂದ. ಇಂಥ, ಹಾವು ಪೊರೆ ಬಿಟ್ಟಂಥ, ಹೊಸ ಹುಟ್ಟು ಪಡೆದಂಥ ಸ್ಪಂದನವನ್ನು ಮಂಡಿಸುವ ಕಾವ್ಯ, ಹೆಚ್ಚು 'ವಿಚಾರಪರ' ಎನಿಸಿ cerebral-ಅನಿಸುವುದೇಕೆ? ಹಾಗೆಯೇ cerebral ಆದ ವಿಚಾರವೊಂದನ್ನು ಮೂಡಿಸುವ (ನೋಡಿ-'ವಿಚಾರವೊಂದನ್ನು ಸಫಲ ಕವನವಾಗಿಸಿದ್ದಾರೆ'-ಶ್ರೀರಾಮುವಮಿಯ ದಿವಸ ಕುರಿತು ಅನಂತಮೂರ್ತಿ) ಶ್ರೀರಾಮನವಮಿಯದಿವಸ ಹೆಚ್ಚು ತಾದಾತ್ಮ್ಯದ ಅನುಭವವನ್ನು ಕೊಡುವುದೇಕೆ? ಇದು ಕವನಗಳ ಶಿಲ್ಪ-ಛಂದದ ವ್ಯತ್ಯಾಸವೆ? ಅಥವಾ ರೆನೆಸಾನ್ಸಿನ ಸದ್ಯದ ಗತಿಯನ್ನು ಇದು ಸೂಚಿಸುತ್ತದೆಯೊ? ●

(ಇದೇ ಜನವರಿ ತಿಂಗಳಲ್ಲಿ ಮದ್ರಾಸಲ್ಲಿ ನಡೆದ ಹೊರನಾಡ ಕನ್ನಡಿಗರ ಸಮ್ಮೇಳನದ ಸಾಹಿತ್ಯಗೋಷ್ಠಿಗಾಗಿ ರಚಿಸಿದ ಟಿಪ್ಪಣಿಗಳಿಂದ)

ಮರೀಚಿಕೆಯಾದ ಕರ್ನಾಟಕ ಭೂ ಸುಧಾರಣೆ

ಕ್ಷೀರಸಾಗರ

ಕರ್ನಾಟಕದ ಭೂಸುಧಾರಣೆ ತನ್ನ ಉದ್ದೇಶಗಳನ್ನು ಸಾಧಿಸಿದೆ; ಈಗ ಅದೊಂದು ಮುಗಿದ ಅಧ್ಯಾಯ ಎಂದುಕೊಳ್ಳುತ್ತಿರುವ ಸಂದರ್ಭದಲ್ಲಿ ಅದು ಎಷ್ಟು ಮಟ್ಟಿಗೆ ಗುರಿ ತಲುಪಿದೆ ಮತ್ತು ಈಗ ಪ್ರಸ್ತುತ ಸಮಯದಲ್ಲಿ ಅದು ಉಂಟು ಮಾಡಿರುವ ಗೊಂದಲಗಳೇನು ಅನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ.

ಈ ಲೇಖನದ ಮಿತಿಯೊಳಗೆ ಈಗ ಉಂಟಾಗಿರುವ ಭೂಸಮಸ್ಯೆಗಳ ಗೊಂದಲಗಳನ್ನು ಕುರಿತು ಅದರ ಎಲ್ಲ ಸೂಕ್ಷ್ಮತೆಗಳ ವಿವರಗಳನ್ನು ವಿವರಿಸಿ ಬರೆಯಲು ಸಾಧ್ಯವಾಗದಿದ್ದರೂ ಸ್ಥೂಲವಾಗಿ ಸಮಸ್ಯೆಯ ಸ್ವರೂಪವನ್ನು ಹೇಳಲು ಪ್ರಯತ್ನಿಸುತ್ತೇನೆ.

ಕರ್ನಾಟಕ ಭೂ ಸುಧಾರಣೆ ಅಂದರೆ ಏನು ಅನ್ನುವುದನ್ನು ಕೆಲವೇ ವಾಕ್ಯಗಳಲ್ಲಿ ಪರಿಚಯಿಸಲು ಭೂಸುಧಾರಣೆಯ ಮೈಲಿಗಲ್ಲುಗಳು ಅನಿಸಿಕೊಂಡ ಎರಡು ಕಾಯಿದೆಗಳ ಪರಿಚಯ ಮಾಡಿಕೊಳ್ಳಬೇಕಾಗುತ್ತದೆ.

ಭೂ ಸುಧಾರಣೆಯ ಮುಖ್ಯಾಂಶಗಳು

I. 1957ರಲ್ಲಿ ರಚಿಸಲ್ಪಟ್ಟ ಜತ್ತಿ ಕಮಿಟಿಯ ರಿಪೋರ್ಟು ವಾದ ವಿವಾದಗಳ ನಡುವೆ 1962ರಲ್ಲಿ ರಾಷ್ಟ್ರಪತಿಯವರ ಒಪ್ಪಿಗೆ ಪಡೆದು ಕಾಯಿದೆಯಾಗಿ ಜಾರಿಗೆ ಬಂದಿತು. ಇಲ್ಲಿರುವ ಪ್ರಮುಖ ಅಂಶಗಳೆಂದರೆ;

i) ಗೇಣಿದಾರರಿಗೆ ಭೂ ಒಡೆತನದ ಹಕ್ಕನ್ನು ದೊರಕಿಸಿಕೊಡುವುದು.

(ಆದರೆ ಭೂಮಾಲಿಕ 'ತಾನೇ ವ್ಯವಸಾಯ ಮಾಡುತ್ತೇನೆ' ಎನ್ನುವುದಾದರೆ ಗೇಣಿದಾರರನ್ನು ಒಕ್ಕಲೆಬ್ಬಿಸಲು ಕಾಯಿದೆ ಅನುವು ಮಾಡಿಕೊಟ್ಟಿತು. ಈ ಅವಕಾಶವಿದ್ದುದರಿಂದ ಬಹಳಷ್ಟು ಗೇಣಿದಾರರನ್ನು ಭೂಮಾಲೀಕರು ಒಕ್ಕಲೆಬ್ಬಿಸಿದರು)

2. ವಿಧವೆಯರು, ಅಂಗವಿಕಲರು, ಅಪ್ರಾಪ್ತವಯಸ್ಕರು, ಸಣ್ಣ ಭೂಮಾಲಿಕರು, ಮದುವೆಯಾಗದ ಹೆಣ್ಣು ಮಕ್ಕಳು ಮತ್ತು ರಕ್ಷಣಾ ಪಡೆಯಲ್ಲಿರುವವರು ಭೂಮಿಯನ್ನು ಗೇಣಿ ವ್ಯವಸಾಯಕ್ಕೆ ಕೊಟ್ಟರೂ ಗೇಣಿದಾರ ಭೂ ಒಡೆಯನಾಗಲಾರ. (ಆದ್ದರಿಂದ ಗೇಣಿ ವ್ಯವಸಾಯವನ್ನು ಇವರು ಮುಂದುವರೆಸಿದರು.)

3. ಕುಟುಂಬದ ಭೂಹಿಡುವಳಿಗಳಿಗೆ ಭೂ ಪರಿಮಿತಿಯನ್ನು ವಿಧಿಸಲಾಯಿತು.

ಸರ್ಕಾರದ ವಿಳಂಬ ನೀತಿಯಿಂದಾಗಿ ಈ ಕಾಯಿದೆಯಲ್ಲಿದ್ದ ಅಲ್ಪಸ್ವಲ್ಪ ಪ್ರಗತಿಪರ ಅಂಶಗಳೂ ನಾಶವಾದುವು. 1957ರಲ್ಲಿ ಬಿ.ಡಿ. ಜತ್ತಿ ಸಮಿತಿಯು ಮಂಡಿಸಿದ ಮಸೂದೆ 1962ರಲ್ಲಿ ರಾಷ್ಟ್ರಪತಿಯವರ ಒಪ್ಪಿಗೆ ಪಡೆದ ಮೇಲೂ ಈ ಕಾನೂನು ಕಾರ್ಯರೂಪಕ್ಕಿಳಿದದ್ದು 1965ರಲ್ಲಿ. ಒಂದೆಡೆ ಉಳುವವನಿಗೇ ಭೂಮಿ ಅನ್ನುವ ಆಶಯ ಹುಟ್ಟಿಸಿದ ಈ ಕಾಯಿದೆ ಗೇಣಿದಾರ ಭೂಮಾಲಿಕತ್ವದ ಸಿಹಿ ಕನಸು ಕಾಣುವಂತೆ ಮಾಡಿತು. ಇನ್ನೊಂದೆಡೆ ಕಾನೂನಿನ ಬಗ್ಗೆ ಎಚ್ಚರವಹಿಸಿದ ಭೂಮಾಲಿಕ ಗೇಣಿದಾರನನ್ನು ಬರಿಗೈಮಾಡಿ ಒಕ್ಕಲೆಬ್ಬಿಸಿ ಅನಾಥನನ್ನಾಗಿ ಮಾಡಿತು.

1961ರಿಂದ 71ರ ವರೆಗೆ ಶೇ 29.8ರಷ್ಟಿದ್ದ ಗೇಣಿದಾರರಲ್ಲಿ ಶೇ. 18.6 ರಷ್ಟು ಗೇಣಿದಾರರನ್ನು ಒಕ್ಕಲೆಬ್ಬಿಸಲಾಯಿತು ಅನ್ನುವುದು ಭೂಸುಧಾರಣೆಯ ದುರಂತ ಮುಖಗಳಲ್ಲೊಂದು. ಒಕ್ಕಲೆಬ್ಬಿಸಲ್ಪಟ್ಟ ಗೇಣಿದಾರರು ಭೂರಹಿತ ಕೃಷಿ ಕಾರ್ಮಿಕರಾಗಿ ಕೆಳಸ್ತರಕ್ಕೆ ತಳ್ಳಲ್ಪಟ್ಟರು. ಗೇಣಿದಾರರನ್ನು ಭೂಮಾಲಿಕರನ್ನಾಗಿ ಮಾಡುತ್ತೇವೆ ಎಂದು ಹೇಳುತ್ತಲೇ ಶೇ. 55ಮಂದಿ ಗೇಣಿದಾರರನ್ನು ಭೂವಂಚಿತರನ್ನಾಗಿ ಮಾಡಲಾಯಿತು.

ಈ ಕಾಯಿದೆಗೆ 1974ರಲ್ಲಿ ತರಲಾದ ತಿದ್ದುಪಡಿಯನ್ನು ಬಂಡವಾಳ ಮಾಡಿಕೊಂಡು ಮುಖ್ಯಮಂತ್ರಿ ಅರಸು ಒಂದು ದಶಕದವರೆಗೆ ತಮ್ಮ ಗದ್ದುಗೆಯನ್ನು ಸ್ಥಿರಗೊಳಿಸಿಕೊಂಡಿದ್ದು ಚಾರಿತ್ರಿಕ ಮಹತ್ವಪಡೆದ ಸಂಗತಿ. ಜನರ ಕಣ್ಣಿಗೆ ಮಣ್ಣೆರಚಿದ ಈ ತಿದ್ದುಪಡಿ ಶಾಸನ ಈಗಲೂ ಹಲವಾರು ರೀತಿಯ ಭೂ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿರುವುದನ್ನು ನಾವು ತೆರೆದ ಕಣ್ಣುಗಳಿಂದ ನೋಡಬೇಕಾಗಿದೆ.

II 1974ರ ತಿದ್ದುಪಡಿ:

1. ಮಾರ್ಚ್ 1, 1974ರ ನಂತರ ಯಾರೇ ಗೇಣಿಗೆ ಕೊಟ್ಟಿದ್ದರೂ ಅದು ಭೂಮಾಲಿಕನಿಗಾಗಲಿ ಗೇಣಿದಾರನಿಗಾಗಲಿ ದೊರಕದೆ ಸರ್ಕಾರದವಶಕ್ಕೆ ಹೋಗುತ್ತದೆ.

2. ಸೈನಿಕ ಮತ್ತು ನಾವಿಕರ ಹೊರತಾಗಿ 74ರ ನಂತರ ಯಾರೂ ಭೂಮಿಯನ್ನು ಗೇಣಿ ವ್ಯವಸಾಯಕ್ಕೆ ಕೊಡುವಂತಿಲ್ಲ. ಈ ಹಿಂದೆ ಕೊಟ್ಟಿದ್ದರೂ, ಭೂಮಾಲಿಕತ್ವ ಉಳಿಸಿಕೊಳ್ಳುವಂತಿಲ್ಲ.

ಅಂದರೆ ಈ ಹಿಂದೆ ಗೇಣಿ ವ್ಯವಸಾಯಕ್ಕೆ ಕೊಟ್ಟ ಭೂಮಾಲಿಕತ್ವ ಉಳಿಸಿಕೊಂಡಿದ್ದ ಸಣ್ಣ ಭೂಮಾಲಿಕರು, ವಿಧವೆಯರು, ಅಂಗವಿಕಲರು, ಮುಂತಾದವರು ತಮ್ಮ ಒಡೆತನ ಕಳೆದುಕೊಳ್ಳಬೇಕಾಯಿತು. ಹೀಗಾಗಿ ಭೂನ್ಯಾಯ ಮಂಡಲಿಗಳಲ್ಲಿ ದಾಖಲಾಗಿದ್ದ 8 ಲಕ್ಷ ಗೇಣಿ ಅರ್ಜಿಗಳಲ್ಲಿ 4 ಲಕ್ಷ ಅರ್ಜಿಗಳು ಗೇಣಿದಾರರ ಪರವಾಗಿಯೂ 4 ಲಕ್ಷ ಅರ್ಜಿಗಳು ಭೂಮಾಲಿಕರ ಪರವಾಗಿಯೂ ತೀರ್ಮಾನವಾದುವು. ಇವುಗಳಲ್ಲಿ ಗೇಣಿದಾರರಿಗೆ ದಕ್ಕಿದ ಬಹಳಷ್ಟು ಭೂಮಿ ಸಣ್ಣ ಭೂಮಾಲಿಕರು, ವಿಧವೆಯರು ಮತ್ತು ಅಂಗವಿಕಲರದು. ಶ್ರೀಮಂತ ರೈತರಿಂದ ಬಡ ಗೇಣಿದಾರರಿಗೆ ದಕ್ಕಿದ ಭೂಮಿ ಅತಿ ಕಡಿಮೆ.

3. ವ್ಯವಸಾಯೇತರ ಉದ್ಯಮಗಳಿಂದ ಬರುವ ವಾರ್ಷಿಕ ಆದಾಯ 12 ಸಾವಿರ ರೂ. ಗಳಿಗಿಂತ ಹೆಚ್ಚಿದ್ದರೆ, ಇನ್ನು ಮುಂದೆ ಆತ ಭೂಮಿಯನ್ನು ಪಡೆಯುವ ಹಕ್ಕಿಲ್ಲ.

4. ಪ್ರತಿಯೊಂದು ತಾಲ್ಲೂಕಿನಲ್ಲೂ ಕೊನೆಯ ಪಕ್ಷ ಒಂದೊಂದು ಭೂನ್ಯಾಯ ಮಂಡಲಿಗಳನ್ನು ರಚಿಸಲಾಯಿತು. ಈ ಭೂ ನ್ಯಾಯಮಂಡಲಿಗಳಲ್ಲಿ ಉಪವಿಭಾಗಾಧಿಕಾರಿ ಛೇರ್ಮನ್ನರಾಗಿಯೂ, ತಹಶಿಲ್ದಾರರು ಸೆಕ್ರೆಟರಿಯಾಗಿಯೂ ಇರುತ್ತಾರೆ. ಅಲ್ಲದೆ ನಾಲ್ವರು ಸ್ಥಳೀಯ ಸದಸ್ಯರಿರುತ್ತಾರೆ.

1974ರ ತಿದ್ದುಪಡಿಯಲ್ಲಿ ಭೂನ್ಯಾಯಮಂಡಲಿಗಳನ್ನು ಸ್ಥಾಪಿಸಿದ ಉದ್ದೇಶ ಆಗ ಆಳುವ ಕಾಂಗ್ರೆಸ್ (ಐ) ಪಕ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಬೇರೂರಲಿ ಎಂಬುದಾಗಿತ್ತು. ಯಾಕೆಂದರೆ ಭೂನ್ಯಾಯ ಮಂಡಲಿಗಳಾಗಿ ಆಡಳಿತ ಪಕ್ಷದ ಸ್ಥಳೀಯ ಪ್ರಭಾವೀ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡುವುದರಿಂದ ಈ ಉದ್ದೇಶ ಹೆಚ್ಚು ಯಶಸ್ವಿಯಾಗಬಹುದೆಂಬ ಆಶಯ ದೇವರಾಜ್ ಅರಸರಿಗಿತ್ತು ಅನ್ನುವುದನ್ನು 1972ರಲ್ಲಿ ಮೈಸೂರಿನಲ್ಲಿ ಭೂಸುಧಾರಣೆ ಕುರಿತು ನಡೆದ ಸೆಮಿನಾರ್ ಒಂದರಲ್ಲಿ ಅವರೇ ಹೇಳಿಕೊಂಡಿದ್ದಾರೆ. ಆದರೆ ಕೊನೆಕೊನೆಗೆ ಈ ಭೂನ್ಯಾಯ

ಮಂಡಲಿಗಳ ಕಾರ್ಯ ವೈಖರಿಯೇ ಆಡಳಿತದಲ್ಲಿದ್ದ ಕಾಂಗ್ರೆಸ್ಸನ್ನು ಕೆಳಗಿಳಿಸಲೂ ಕಾರಣವಾಯಿತು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ.

1981ರ ಕನ್ನಡ ರಾಜ್ಯೋತ್ಸವ ಸಮಾರಂಭ ನಡೆಯುವುದರೊಳಗೆ ಭೂನ್ಯಾಯ ಮಂಡಳಿಗಳಲ್ಲಿ ದಾಖಲಾಗಿರುವ ಎಲ್ಲ ಕೇಸುಗಳನ್ನೂ ಮುಕ್ತಾಯಗೊಳಿಸಬೇಕು ಎಂದು ರಾಜಕೀಯ ಒತ್ತಡ ಹೇರಿದಾಗ ತರಾತುರಿಯಲ್ಲಿ ಎಲ್ಲ ಕೇಸುಗಳನ್ನೂ ಮುಗಿಸಲಾಯಿತು. ಇಲ್ಲಿ ಸರಿಯಾದ ನ್ಯಾಯದೊರೆಯದೆ 50 ಸಾವಿರಕ್ಕಿಂತಲೂ ಹೆಚ್ಚು ಮಂದಿ ಹೈಕೋರ್ಟಿನಲ್ಲ ರಿಟ್ ಹಾಕಿಕೊಂಡಿದ್ದಾರೆ. ಇವು ಮತ್ತೆ ಭೂನ್ಯಾಯ ಮಂಡಳಿಗಳಿಗೆ ಹಿಂದಿರುಗಿ ತೀರ್ಮಾನವಾಗುತ್ತಲೇ ಇವೆ (ಈಗ ಭೂನ್ಯಾಯ ಮಂಡಳಿಯ ಸ್ವರೂಪವನ್ನು ಬದಲಾಯಿಸಲಾಗಿದೆ.)

ಭೂಸುಧಾರಣೆಯ ಮುಖ್ಯ ಉದ್ದೇಶಗಳು ಎರಡು:

1. ಗೇಣಿದಾರರಿಗೆ ಭೂ ಒಡೆತನ ದೊರಕಿಸಿಕೊಡುವುದು.

2. ಭೂ ಪರಿಮಿತಿಗಿಂತ ಹೆಚ್ಚಿನ ಭೂಮಿ ಹೊಂದಿದ್ದ ಭೂಮಾಲೀಕರಿಂದ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆದು ಭೂರಹಿತರಿಗೆ ಹಂಚುವುದು.

ಭೂ ಪರಿಮಿತಿ ಅನ್ನುವ ಬಿಸಿಲ್ಗುದುರೆ

1974ರ ಭೂಮಿತಿಯ ತಿದ್ದುಪಡಿ ಕಾಯಿದೆಯ ಪ್ರಕಾರ ಒಂದು ಕುಟುಂಬದ ಕನಿಷ್ಟ ಮಿತಿ ಹತ್ತು ಯೂನಿಟ್‌ಗಳು, ಅಂದರೆ 54 ಎಕರೆ ಒಣಭೂಮಿಗೆ ಸಮ. ಪ್ಲಾಂಟೇಶನ್ ಭೂಮಿ ಪರಿಮಿತಿಗೆ ಒಳಪಡದಿರುವುದರಿಂದ ಅತ್ಯಂತ ದೊಡ್ಡ ಪ್ಲಾಂಟರುಗಳು ಸಾವಿರಾರು ಎಕರೆ ಭೂಮಿಯನ್ನು ಹೊಂದಿದ್ದಾರೆ.

1957ರಲ್ಲಿ ಸರ್ಕಾರದ ಲೆಕ್ಕಾಚಾರದ ಪ್ರಕಾರ ದೊರೆಯಬೇಕಾಗಿದ್ದ ಭೂಮಿ ಈ ಕೆಳಕಂಡಂತಿದೆ:

ಹಿಡುವಳಿಗಳು (ಎಕರೆಗಳಲ್ಲಿ)	ವಿಸ್ತೀರ್ಣ (ಲಕ್ಷ ಎಕರೆಗಳಲ್ಲಿ)	ದೊರೆಯಬಹುದಾದ ಹೆಚ್ಚುವರಿ ಭೂಮಿ (ಲಕ್ಷ ಎಕರೆಗಳಲ್ಲಿ)
25ರಿಂದ 50	53.13	2.11
50ರಿಂದ 100	22 12	8.31
100ರಿಂದ 1000	27.34	9.03
ಒಟ್ಟು	102.59	19.45

19.45ಲಕ್ಷ ಎಕರೆಗಳಷ್ಟು ಹೆಚ್ಚುವರಿ ಭೂಮಿ ಸರ್ಕಾರದ ವಶಕ್ಕೆ ಬರಬೇಕಾಗಿತ್ತು. ಆದರೆ ದೊರಕಿದ ಹೆಚ್ಚುವರಿ ಭೂಮಿ ಎಂದರೆ 2.72ಲಕ್ಷ ಎಕರೆಗಳು ಮಾತ್ರ. ಇದರಲ್ಲಿ 95,965 ಎಕರೆಗಳು ಮಳೆ ನೀರನ್ನೇ ಅವಲಂಬಿಸಿದ ಜಿಲ್ಲೆಗಳಾದ ಬೆಳಗಾಂ, ಬಿಜಾಪುರ, ಧಾರವಾಡ, ಬೀದರ್, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಂದ ದೊರೆತ ಒಣಭೂಮಿ, ಫಲವತ್ತಾದ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡಲ್ಲೆಲ್ಲ ಭೂಮಾಲೀಕರು ಕೋರ್ಟುಗಳಲ್ಲಿ ರಿಟ್ ಅರ್ಜಿ ಹಾಕಿಕೊಂಡಿದ್ದಾರೆ. ಹೀಗಾಗಿ ಕೊನೆಗೆ ನಿಜವಾಗಿ ಕೈಗೆ ಸಿಕ್ಕಿದ್ದು 99,000 ಎಕರೆಗಳು ಮಾತ್ರ. ಇದರಲ್ಲಿ ಭೂ ರಹಿತರಿಗೆ ಹಂಚಿರುವ ಭೂಮಿ 59,870 ಎಕರೆಗಳನ್ನು ಮಾತ್ರ. ಭೂಪರಿಮಿತಿ ಕಾಯಿದೆ ಇಷ್ಟೊಂದು ಅಗಾಧ ಪ್ರಮಾಣದ ಸೋಲು ಅನುಭವಿಸಲು ಕಾರಣ, ದೊಡ್ಡ ಭೂಮಾಲೀಕರು ಈ ಕಾಯಿದೆಗಳಿಂದ ನುಸುಳಿಕೊಳ್ಳಲು ಕಾಯಿದೆಯಲ್ಲೇ ಅನುವು ಮಾಡಿಕೊಟ್ಟಿರುವ ಕಳ್ಳಗಂಡಿಗಳು ಅನ್ನುವುದು ಸರ್ವ ವಿದಿತ.

ಮುಂದುವರೆಯುತ್ತಿರುವ ಗೇಣಿ ಪದ್ಧತಿ

ಈಗಿನ ಆಡಳಿತ ಜನತಾ ಸರ್ಕಾರವು ಕರ್ನಾಟಕ ಭೂಸುಧಾರಣೆ ಒಂದು ಮುಗಿದ ಅಧ್ಯಾಯ ಎಂದು ತಪ್ಪಾಗಿರುವುದನ್ನು ನಾವು ಕಾಣಬಹುದು. ಆದರೆ ಪ್ರಸ್ತುತ ಕರ್ನಾಟಕದಲ್ಲಿ ಮತ್ತೆ ಬಹುಪಾಲು ಭೂಮಿ ಗೇಣಿ ಮತ್ತು ವಾರದ ವ್ಯವಸಾಯಕ್ಕೇ ಒಳಗಾಗಿರುವುದನ್ನು ಕಾಣಬಹುದು. ಗೇಣಿ ವ್ಯವಸಾಯಕ್ಕೆ ಭೂಮಿಯನ್ನು ಕೊಟ್ಟರೆ ಅದನ್ನು ನಾವು ಕಳೆದುಕೊಂಡುಬಿಡುತ್ತೇವೆ ಎನ್ನುವ ಹೆದರಿಕೆ ಕೂಡ ಈಗ ಭೂಮಾಲೀಕರಲ್ಲಿಲ್ಲ. ಹೀಗೆ ಹೆದರಿಕೆ ಇಲ್ಲದಿರಲು ಭೂಕಂದಾಯ ಇಲಾಖೆ ತಳೆದ ನಿರ್ಲಿಪ್ತ ಧೋರಣೆಯೂ ಕಾರಣವಾಗಿದೆ. ಉದಾಹರಣೆಗೆ 1974ರ ತಿದ್ದುಪಡಿ ಕಾಯ್ದೆಯ 58(1) 2ನೇ ಕಾಲಂ ಪ್ರಕಾರ 74ರ ನಂತರ ಭೂಮಿಯನ್ನು ಯಾರೇ ಗೇಣಿ ವ್ಯವಸಾಯಕ್ಕೆ ಕೊಟ್ಟರೂ ಆ ಭೂಮಿಯ ಒಡೆತನ ಸರ್ಕಾರದ್ದಾಗುತ್ತದೆ ಎನ್ನುವ ಕಾಯ್ದೆ ಇದ್ದರೂ ಅದು ಜಾರಿಗೆ ಬರದಿರುವುದಕ್ಕೆ ಕಾರಣವನ್ನು ನಾವು ಭೂಕಂದಾಯ ಇಲಾಖೆಯ ಸಿಬ್ಬಂದಿತನಕ್ಕೆ ವರ್ಗಾಯಿಸಬಹುದು.

ಗ್ರಾಮ ಲೆಕ್ಕಿಗರು ಪ್ರತಿವರ್ಷವೂ ಎಲ್ಲ ಭೂಕಂದಾಯದ ಭೂಮಿಗೆ ಸಂಬಂಧಪಟ್ಟು ಎಲ್ಲ ರೀತಿಯ ವಿವರಗಳನ್ನೊಳಗೊಂಡಂತೆ R.T.C. (Record of Tenency and Crop) ಬರೆಯಬೇಕಾಗುತ್ತದೆ. ಈ ಪಹಣಿ ಪತ್ರಿಕೆಯಲ್ಲಿ ಒಟ್ಟು 13 ಕಲಂಗಳಿರುತ್ತವೆ. ಇದರಲ್ಲಿ ಅತಿ ಮುಖ್ಯವಾಗಿರುವ ಕಲಂಗಳೆಂದರೆ 9

ಮತ್ತು 12. 9ರಲ್ಲಿ ಕಬ್ಜೆದಾರ ಅಂದರೆ ಭೂ ಒಡೆಯನ ವಿವರಗಳನ್ನೂ, 12ರಲ್ಲಿ ಹಾಲಿ ಆ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿರುವವರ ಹೆಸರನ್ನು ಬರೆಯಬೇಕಾಗುತ್ತದೆ. ಆದರೆ R.T.C. ಬರೆಯುವುದರಲ್ಲಿ ನಡೆಯುತ್ತಿರುವ ಮೋಸವೆಂದರೆ ಕಲಂ 9ರ ಭೂಮಾಲಿಕನ ಹೆಸರನ್ನೇ (ಬೇರೆಯವರು ವ್ಯವಸಾಯ ಮಾಡುತ್ತಿದ್ದಾಗ್ಯೂ ಕೂಡ) ಕಲಂ 12ರಲ್ಲಿ ತುಂಬಿಸಲಾಗುತ್ತದೆ. ಯಾರೇ ಗೇಣಿಗೆ ವ್ಯವಸಾಯ ಮಾಡುತ್ತಿದ್ದರೂ ಅದು ಅಸಿಂಧುವಾಗಿ, ಕಬ್ಜೆದಾರನೇ ವ್ಯವಸಾಯ ಮಾಡುತ್ತಿದ್ದಾನೆ ಎಂದು ತೋರಿಸಲಾಗುತ್ತದೆ. ಇಂತಹ ಧೋರಣೆಯಿಂದಾಗಿ ಗೇಣಿ ವ್ಯವಸಾಯ ಮಾಡುತ್ತಿರುವ ಸಣ್ಣ ರೈತರು ಹರಿಜನ ಗಿರಿಜನರು ಸಂಪೂರ್ಣವಾಗಿ ತಮ್ಮ ಮಾಲೀಕತ್ವವನ್ನು ಕಳೆದುಕೊಳ್ಳುತ್ತಿದ್ದಾರೆ. ಪ್ರತಿ ವರ್ಷವೂ ಬರೆಯಬೇಕಾದ R.T.C. ಯಲ್ಲಿನ ಈ ವಿವರಗಳ ಕುರಿತು ಯಾವುದೇ ಗ್ರಾಮ ಲೆಕ್ಕಿಗರನ್ನು ಕೇಳಿದರೂ "ನಮ್ಮ ಮೇಲಧಿಕಾರಿಗಳು 9 ಮತ್ತು 12ರ ಕಾಲಂ ಬೇರೆ ಬೇರೆಯಾಗಬಾರದೆಂದು ಬಾಯಿಮಾತಿನ ಆಜ್ಞೆ ಮಾಡಿದ್ದಾರೆ" ಎನ್ನುತ್ತಾರೆ. ಇದನ್ನು ಮನಗಂಡ ಭೂಮಾಲಿಕರು ಗೇಣಿ ಮತ್ತು ವಾರದ ವ್ಯವಸಾಯವನ್ನು ನಿರಾತಂಕವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಕರ್ನಾಟಕ ಭೂಸುಧಾರಣೆಯ ಮುಖ್ಯ ಧ್ಯೇಯೋದ್ದೇಶಗಳಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಭೂ ಒಡೆಯ ಅಥವಾ ಅವನ ಕುಟುಂಬದವರೇ ದೈಹಿಕ ಶ್ರಮ ಹಾಕಿ ವ್ಯವಸಾಯ ಮಾಡಬೇಕು; ಮಧ್ಯವರ್ತಿಗಳನ್ನು ನೇಮಿಸಿಕೊಳ್ಳಬಾರದು ಅನ್ನುವ ಆಶಯವಿತ್ತು. ಗೇಣಿದಾರ ಮಧ್ಯವರ್ತಿ ಅನ್ನುವ ಕಾರಣಕ್ಕಾಗಿ ಆತನನ್ನು ನೇಮಿಸಿಕೊಂಡರೆ ಆ ಭೂಮಿಯನ್ನು ಆತನಿಗೇ ಕೊಡಬೇಕು ಅನ್ನುವ ಕಾಯ್ದೆಯನ್ನು ತಂದಿತು. ಆದರೆ ನಾವಿಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವುದೆಂದರೆ ಭೂ ಒಡೆಯ ಸ್ವತಃ ತಾನು ದುಡಿಯದೆ i) ಕೂಲಿ ಆಳುಗಳನ್ನು, ii) ಜೀತಗಾರರನ್ನು, iii) ಮೇಸ್ತ್ರಿಗಳನ್ನು, iv) ವಾರದ ವ್ಯವಸಾಯಗಾರರನ್ನು, v) ಗೇಣಿದಾರರನ್ನು ನಿಯಮಿಸಿಕೊಂಡು ಕೆಲಸ ಮಾಡಬಹುದು. ಭೂ ಒಡೆಯ ಸ್ವತಃ ವ್ಯವಸಾಯ ಮಾಡದೆ ಈ ಐದು ಪಂಗಡಗಳ ಯಾರೇ ವ್ಯವಸಾಯ ಮಾಡಿದರೂ ಭೂಒಡೆತನದ ಹಕ್ಕು ಅವರಿಗೇ ಸೇರಬೇಕು ಎಂದು ಮಾಡಬಹುದಾಗಿತ್ತು. ಎಲ್ಲವನ್ನೂ ಕಡೆಗಣಿಸಿ ಗೇಣಿದಾರ ಮಾತ್ರ ಭೂಒಡೆಯನಾಗಬಲ್ಲ ಎಂದು ಮಾಡಿದ ಕಾನೂನು ಬಹಳ ಸೀಮಿತ ಉದ್ದೇಶದ್ದು ಅನ್ನುವುದು ಸ್ಪಷ್ಟ.

ಕರ್ನಾಟಕ ಭೂಸುಧಾರಣಾ 'ಕಾನೂನು ಉಳುವವನಿಗೆ ಭೂಮಿ' ಎನ್ನುವ ಆಶಯ ಹುಟ್ಟಿಸಿದ್ದರೂ ಉಳುವವನು ಯಾರು ಅನ್ನುವ ವ್ಯಾಖ್ಯಾನ ಮಾಡುವಾಗ

ಕೃಷಿಕಾರ್ಮಿಕರಾಗಲಿ, ಜೀತಗಾರರಾಗಲಿ ಉಳುವವರು ಅನ್ನುವ ಅರ್ಥದಿಂದ ಇವ ರನ್ನು ಹೊರಕ್ಕಿಟ್ಟಿದೆ. ಸ್ವಂತ ಸಾಗುವಳಿ ಅನ್ನುವುದರ ಬಗ್ಗೆ ಭೂಸುಧಾರಣೆಯ ವ್ಯಾಖ್ಯಾನಗಳನ್ನು ನೋಡಿ. "i) ತನ್ನ ದೇಹಶ್ರಮದಿಂದ ಇಲ್ಲವೆ ii) ತನ್ನ ಕುಟುಂಬದ ಯಾವುದೇ ಸದಸ್ಯರ ದೇಹಶ್ರಮದಿಂದ ಇಲ್ಲವೆ iii) ಬಾಡಿಗೆಯ ಮಜೂರರಿಂದ iv) ಅಥವ ತನ್ನ ಕುಟುಂಬದ ಸದಸ್ಯನ ಮೇಲ್ವಿಚಾರಣೆಯಲ್ಲಿ ಜಮೀನನ್ನು ಸಾಗುವಳಿ ಮಾಡಬಹುದು.

ಅಂದರೆ ಈ ಭೂಸುಧಾರಣಾ ಕಾನೂನಿನ ಪ್ರಕಾರ ಉಳುವವನೂ ನಿಜವಾದ ಭೂ ಒಡೆಯನಲ್ಲ. ಉಸ್ತುವಾರಿ ಮಾಡುವವನು ಒಡೆಯನಾಗುತ್ತಾನೆ. ಈ ವ್ಯತ್ಯಾಸ ವನ್ನು ಕಂಡುಕೊಳ್ಳದೆ ಎಡ ಹಾಗೂ ಇತರ ಪ್ರಗತಿಪರ ಪಕ್ಷಗಳು ಈ ಕಾನೂನನ್ನು ಪ್ರಗತಿಪರ ಎಂದು ಕರೆದಿರುವುದು ಅವರ ಅವಕಾಶವಾದಿತನವನ್ನು ಸೂಚಿಸುತ್ತದೆ,

ಮೇಲಿನಿಂದ ಹೇರಿದ ಸುಧಾರಣೆಗಳು

ಒಟ್ಟಾರೆ ಹೇಳುವುದಾದರೆ, ಕರ್ನಾಟಕ ಭೂಸುಧಾರಣೆಯು ಈ ಸಮಾಜದಲ್ಲಿ ರುವ ಶ್ರೇಣೀಕೃತ ಸಂಬಂಧಗಳನ್ನಾಗಲೀ ವರ್ಗ ಸಂಬಂಧಗಳನ್ನಾಗಲೀ ಮೂಲ ಭೂತವಾಗಿ ಬದಲಾಯಿಸಲು ಸೋತಿದೆ. ಅಲ್ಲದೆ ಸರ್ಕಾರದ ಉದ್ದೇಶ ಮೂಲ ಭೂತ ಬದಲಾವಣೆ ಮಾಡಬೇಕು ಎನ್ನುವುದಾಗಿರಲಿಲ್ಲ. ಅಂಥ ಉದ್ದೇಶಗಳನ್ನಿಟ್ಟು ಕೊಳ್ಳಲು ಬಂಡವಾಳಶಾಹಿ ಮತ್ತು ದೊಡ್ಡ ಭೂಮಾಲಿಕರ ಹಿತ ಕಾಯುವ ಸರ್ಕಾರಗಳಿಗೆ ಸಾಧ್ಯವೂ ಇಲ್ಲ. ವ್ಯವಸಾಯ ಕ್ಷೇತ್ರದಲ್ಲಿ ಈ ಕಾನೂನು ಕ್ರಾಂತಿ ಕಾರಕ ಬದಲಾವಣೆ ತರಬೇಕು ಎಂದು ಬಯಸುವುದು 'ಯುಟೋಪಿಯ' ಆಗುತ್ತದೆ. ಯಾಕೆಂದರೆ ಕರ್ನಾಟಕ ಭೂಸುಧಾರಣೆ ಜನರ ಕ್ರಾಂತಿಕಾರಕ ಹೋರಾಟದ ಒಂದು ಪರಿಣಾಮವಾಗಿರದೆ, ಆಡಳಿತದಲ್ಲಿರುವ ಸರ್ಕಾರಗಳು ಅವು ಬಲವಾಗಿ ಬೇರೂರಲು ಜನರ ಮೇಲೆ ಮೇಲಿನಿಂದ ಹೇರಿದ ಕಾನೂನುಗಳಾಗಿವೆ.

ಯಾವುದೇ ಕ್ಷೇತ್ರದಲ್ಲಿ ಮೂಲಭೂತ ಬದಲಾವಣೆಗಳಾಗಬೇಕಾದರೂ ಶೋಷಿತ ಜನಾಂಗ ಸಂಘಟಿತರಾಗಿ ಹೋರಾಟ ಮಾಡಬೇಕಾಗುತ್ತದೆ. ಆಳುವ ಸರ್ಕಾರಗಳು ತರುವ ಬದಲಾವಣೆ ಬಹಳ ಸೀಮಿತವಾದ್ದರಿಂದ–ಉತ್ತರ ಕನ್ನಡದ ಗೇಣಿ ರೈತರ ಹೋರಾಟ ಮತ್ತು ಕಾಗೋಡು ಸತ್ಯಾಗ್ರಹದಂತಹ ಹೋರಾಟಗಳು ಸತತವಾಗಿ ನಡೆಯುತ್ತಲೇ ಇರಬೇಕಾಗುತ್ತದೆ.

●

ಆತ್ಮಕಥೆಯ ಪುಟಗಳಿಂದ....

ಅರವಿಂದ ಮಾಲಗತ್ತಿ

1. ಹೆಣದ ದುಡ್ಡು ಮತ್ತು ಮದುವೆಯ ಊಟ

ನಮ್ಮೂರಲ್ಲಿ ಶ್ರೀಮಂತಿಕೆಗೆ ಹೆಸರಾದ ಮನೆತನಗಳೆಂದರೆ ಮೂರು. ಒಂದು ಶೇಠಜಿ, ಎರಡು ಮರಾಠಿಗರದು ಮೂರನೆಯದು ವೀರಶೈವರದು. ಶೇಠಜಿಯವರ ಮನೆತನದ ಕೆಲಸದಲ್ಲೆಲ್ಲಾ ವೀರಶೈವರದೇ ಕಾರುಬಾರು. ಮರಾಠಿಗರ ಮನೆತನದಲ್ಲಿ ಇಸ್ಲಾಮಿಯರದೇ ಕಾರುಬಾರು. ಈ ಮೂರೂ ಮನೆತನಗಳಲ್ಲಿ ಅವರವರಲ್ಲಿಯೇ ಸ್ಪರ್ಧೆ ಇತ್ತೆಂದು ತೋರುತ್ತದೆ, ಗೇಣಿಗೆ ಕೊಡುವುದರಲ್ಲಿ, ಮನೆಕಟ್ಟಿಸುವುದರಲ್ಲಿ-ಇದು ನಮಗೆ ಎದ್ದು ಕಂಡದ್ದು. ಅದಕ್ಕಿಂತ ನಮಗೆ ಅವರು ಶ್ರೀಮಂತರಾಗಿ ಕಾಣುವದು. ಅವರ ಮನೆಯಲ್ಲಿ ಯಾರಾದರೂ ಸತ್ತರೆ ಇಲ್ಲವೆ ಯಾರಾದರೂ ಹುಟ್ಟಿದರೆ. ಬೇರೆ ಮನೆತನಗಳೂ ಇವರಂತೆ ಸಂಪ್ರದಾಯ ಉಳ್ಳವರಾಗಿದ್ದರೂ ಇವರ ಹಾಗೆ ಎದ್ದು ಕಾಣುತ್ತಿರಲಿಲ್ಲ. ಹೀಗಿದ್ದಾಗ ಊರಲ್ಲಿ ಯಾರು ಸತ್ತರೂ ನಮಗೆ ಸಂತೋಷವೇ ಆಗುತ್ತಿತ್ತು.

ಅವತ್ತು ವೀರಶೈವರ ಮನೆಯಲ್ಲಿ ಯಾರೋ ಸತ್ತಿದ್ದರು. ಹೆಣ ಬೇಂಡ ಬಾಜಾದೊಂದಿಗೆ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಹೆಣದ ಮೇಲೆ ಹಣ ತೂರುವುದೊಂದು ಸಂಪ್ರದಾಯ. ಅದು ಅವರಿಗೆ ಪ್ರತಿಷ್ಠೆಯ ಹೆಗ್ಗುರುತು ಆಗಿರಬೇಕು. ನನ್ನಜ್ಜಿ ಯಾರ ಮನೆಯಲ್ಲಿ ಸತ್ತಿದ್ದಾರೆ, ಯಾರು ಆ ಸಂಪ್ರದಾಯವನ್ನು ಪಾಲಿಸುತ್ತಾರೆ ಎನ್ನುವುದು ಯಾವ ಮೂಲಗಳಿಂದ ತಿಳಿದುಕೊಳ್ಳುತ್ತಿದ್ದಳೋ ನಾನರಿಯೆ. ಇಂಥ ಆದಾಯ ಬರುವ ಮೂಲಗಳನ್ನು ನಮಗೆ ಹುಡುಕಿ ಕೊಡುತ್ತಿದ್ದಳು. ಹೆಣ ತೆಗೆದುಕೊಂಡು ಹೋಗುವಾಗ ಅವರು ನಮ್ಮನ್ನು ಅಷ್ಟೇ ಜಾಗರೂಕತೆಯಿಂದ ಗಮನಿಸುತ್ತಿದ್ದರೆಂದು ತೋರುತ್ತದೆ. ನಾವು ಬಂದಿರುವುದನ್ನು ಖಚಿತಪಡಿಸಿಕೊಂಡೇ ಹೆಣವನ್ನು ಮೇಲಕ್ಕೆ ಎತ್ತುತ್ತಿದ್ದರು. ಹೆಣದ ಮೇಲೆ ಅವರು ತೂರಿರುವ ಹಣ ನೆಲಕ್ಕೆ ಬಿದ್ದ ಮೇಲೆ ಕಚ್ಚಾಡಿ ಎತ್ತಿಕೊಳ್ಳುವುದು ದಲಿತರ ಕೆಲಸ.

ದಲಿತರು ಇರದೇ ಹೋದರೆ ಅವರು ತೂರುವ ಹಣಕ್ಕೆ ಬೆಲೆಯಾದರೂ ಏನು? ಅವರು ಹಣ ತೂರಬೇಕು. ತೂರಿದ ಹಣ ಉರುಳುತ್ತ (ಹಾಸುಗಲ್ಲಿನ ರಸ್ತೆ ಇದ್ದಾಗ) ಹೆಣ ಹೊತ್ತವರ ಕಾಲಲ್ಲಿ, ಹಿಂದೆ ಅಳುತ್ತ ಬರುವವರ ಕಾಲಲ್ಲಿ ಹೋಗಬೇಕು. ಅವರು ಅದನ್ನು ದಾಟಿ ಪಾಪ ಕಳೆದುಕೊಳ್ಳಬೇಕು. ಎಲ್ಲರೂ ತುಳಿದು ಹೋದ ಮೇಲೆ ನಾವು ಅದನ್ನು ಎತ್ತಿಕೊಳ್ಳಬೇಕು.

ವಯಸ್ಸಾದ ನಮ್ಮ ಜನ ಅವರೆಲ್ಲಾ ದಾಟಿ ಹೋಗುವುದೇ ತಡ ಸ್ಪರ್ಧೆಗಿಳಿದು ಆ ಪುಡಿಗಾಸನ್ನು ಆಯ್ದುಕೊಳ್ಳುತ್ತಿದ್ದರು. ಚಿಕ್ಕವರಾದ ನಾವು ಅವರ ನಿಯಮವನ್ನು ಮುರಿದು ನಮ್ಮ ಹಿರಿಯರಿಗಿಂತ ಮುಂದೆ ಹೋಗಿ ತೂರುವ ಹಣ ನೆಲಕ್ಕೆ ಬೀಳುವುದಕ್ಕಿಂತ ಮುಂಚಿತವಾಗಿಯೇ ಹಿಡಿಯಲು ಪ್ರಯತ್ನಿಸಿ ವಿಫಲರಾಗುತ್ತಿದ್ದೆವು. ಕಾಸು ನೆಲಕ್ಕೆ ಬಿದ್ದಾಗ ಅವರು ದಾಟುವ ಮುನ್ನವೇ ಅವರ ಕಾಲಲ್ಲಿ ಹೋಗಿ ಆ ನಾಣ್ಯ ಎತ್ತಿಕೊಳ್ಳುತ್ತಿದ್ದೆವು.

ಸತ್ತವರ ಮನೆಗೆ ಸಂಬಂಧಪಟ್ಟವರಲ್ಲವೆ ಇವರು? ಅವರ ಮುಖ ತುಂಬಾ ಗಂಭೀರವಾಗಿರುತ್ತಿತ್ತು. ಅವರು ನಮ್ಮನ್ನು ಬೆದರಿಸಲು ಸ್ವಾತಂತ್ರ್ಯವಿರಲಿಲ್ಲ ಎಂದು ತೋರುತ್ತದೆ. ಹಾಗಾಗಿ ನಾವೇ ಎಷ್ಟೋ ಬಾರಿ ಅವರ ಗಂಟು ಮುಖಕ್ಕೆ ಹೆದರಿ ಹಿಂದಕ್ಕೆ ಸರಿಯುತ್ತಿದ್ದೆವು. ಸಿಗದ ನಾಣ್ಯಕ್ಕೆ ಕೈ ಮುಗುಚಿಕೊಳ್ಳುತ್ತಿದ್ದೆವು, ಅವರ ಕಂಗಣ್ಣು ಕಂಡಾಗ ದೇಶಾವಾರಿ ನಗೆ ಬೀರಿ, ಲಜ್ಜೆ ತುಂಬಿ ನೀರಾಗುತ್ತಿದ್ದೆವು. ಅವರ ಕಾಲಡಿಯಲ್ಲಿ ಹೋಗಿ ಅವರಿಗೆ ತೊಡಕಾಲು ಬಿದ್ದಾಗ (ನೆಲಕ್ಕೆ ಬೀಳುವ ಸಂದರ್ಭ) ಅವರ ಗಾಂಭೀರ್ಯ ಅಲ್ಲಿಂದ ಓಡಿಹೋಗುತ್ತಿತ್ತು. ಕೆಲಸಲ ನಮ್ಮನ್ನು ಕಾಯುವುದಕ್ಕಾಗಿ ಕೋಲು ಹಿಡಿದ ಆಳುಗಳೂ ಇರುತ್ತಿದ್ದವು. ನಮಗೆ ಅದು ಸ್ಪರ್ಧೆಯ ಕ್ರೀಡಾಂಗಣವಾಗಿತ್ತು. ಆ ನಾಣ್ಯಕ್ಕಾಗಿ ನಮ್ಮ ನಮ್ಮಲ್ಲಿಯೇ ಕಚ್ಚಾಟಗಳು ಆಗುತ್ತಿದ್ದವು. ಈ ಕಚ್ಚಾಟ ಮೂಗು, ಕಣ್ಣು, ಮುಖದಲ್ಲಿಯೇ ಹೆಚ್ಚಿಗೆ ಸೀಮಿತ ಇರುತ್ತಿತ್ತು. ಕೆಲಬಾರಿ ಹೋರಿ ನೆಲ ಕೆದರಿದ ಹಾಗೆ ಸಿಟ್ಟು ಸಂಗ್ರಹವಾಗುತ್ತ ಹೋಗುವುದರಲ್ಲಿಯೇ ಹೆಣದ ಸವಾರಿ ಮುಂದಕ್ಕೆ ಹೋಗುತ್ತಿತ್ತು. ಕೊನೆಗೆ ನಾವು ಉಳಿದಾಗ ಜಗಳ, ಕುಸ್ತಿ ಪ್ರಾರಂಭವಾಗುತ್ತಿತ್ತು. ಆ ಮೇಲೆ ನಮ್ಮ ಹಿಂದಿನ ಹಣ ಆಯ್ದುಕೊಂಡು ಬರುವ ಹಿರಿಯರು ನಮ್ಮನ್ನು ದೂರಿಕರಿಸುತ್ತಿದ್ದರು. ಆಯ್ದ ಹಣದಲ್ಲಿ ಕೆಲವಷ್ಟು ಕದ್ದು ಚೊಣ್ಣದ ಕಳ್ಳ ಜೇಬಿನಲ್ಲಿ (ಮಡಿಚಿ ಹೊಲಿದ ಚೊಣ್ಣದ ನಡಪಟ್ಟಿ ಅಥವಾ ಕೆಳಗಿನ ಭಾಗದಲ್ಲಿ ಮಡಿಚಿ ಹೊಲಿದ ಅರಿವೆಗೆ ಚಿಕ್ಕದೊಂದು ನಾಣ್ಯ ಹೋಗುವಷ್ಟೇ ರಂಧ್ರ ತೆಗೆದು ಅದರಲ್ಲಿ ತುರುಕಿಕೊಳ್ಳುತ್ತಿದ್ದೆವು) ಇಳಿಸುತ್ತಿದ್ದೆವು. ಸಿಕ್ಕಿದ್ದು ಇಷ್ಟೇ ಎಂದು ಹೇಳಿ ಅಜ್ಜಿಗೆ

ಕೊಟ್ಟು 'ಕೈ ಖಾಲಿ' ಎಂದು ಅಲ್ಲಾಡಿಸುತ್ತಿದ್ದೆವು. ಕದ್ದ ಹಣದಿಂದ ಸಂತೆಯಲ್ಲಿ ಬಾಯಿ ಚಪಲ ತೀರಿಸಿಕೊಳ್ಳುತ್ತಿದ್ದೆವು.

ಹೆಣದ ಮೇಲೆ ಅವರು ಹಾರಿಸುವ ಪುಡಿಕಾಸೆಂದರೆ-ಐದು ಪೈಸೆಯ ನಾಣ್ಯ ಕೊನೆಯದು. ತೂತಿನ ದುಡ್ಡು, ಒಂದು ಪೈಸೆ, ಎರಡು ಪೈಸೆ, ಬಹಳ ಶ್ರೀಮಂತರಿದ್ದರೆ ಹತ್ತು ಪೈಸೆಯ ನಾಣ್ಯ. ನಾಣ್ಯದ ಮೌಲ್ಯ ಹೆಚ್ಚಿದ ಹಾಗೆ ಅವುಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುತ್ತಿದ್ದರು. ಹೆಚ್ಚಿನ ಮೌಲ್ಯದ ನಾಣ್ಯ ಸಿಕ್ಕಾಗ ಆದ ಸಂತೋಷಕ್ಕೆ ಎಣೆಯೇ ಇರುತ್ತಿರಲಿಲ್ಲ. ಅದಕ್ಕಾಗಿಯೇ ಹೆಚ್ಚಿನ ಜಗಳಗಳೂ ಕೂಡಾ.

ಸತ್ತವರ ತಿಥಿಯ ಊಟ ಬಿಟ್ಟು, ಜಾತ್ರೆ, ಮದುವೆ ಈ ಸಂದರ್ಭಗಳಲ್ಲಿ ಸಿಗುವ ಊಟಕ್ಕೆ ಹಾಜರಿ ಹಾಕುವುದು ಮತ್ತೊಂದು ಕೆಲಸ. ಮದುವೆ ಊಟವೇ ಆಗಲಿ, ಜಾತ್ರೆ ಊಟವೇ ಆಗಲಿ ಎರಡು-ಮೂರು ವಾರ ಮುಂಚಿತವಾಗಿ ಜನಜನಿತವಾಗುತ್ತಿತ್ತು. ಅಂತಹದೇ ಒಂದು ಸಂದರ್ಭ ಶೇಠಜಿಯವರ ಏಕೈಕ ಪುತ್ರಿಯ ಮದುವೆ.

ಇಡೀ ಊರಿಗೆ ಊಟ ಹಾಕತಾರಂತೆ!

ಬೂಂದೆ ಊಟ!

ಮೈಸೂರ ಪಾಕ್, ಅನ್ನಾಸಾರು.

ನುಚ್ಚು ರೊಟ್ಟಿ ತಿನ್ನುವ ನಮಗೆ (ನಮ್ಮ ಕೇರಿಗಳಲ್ಲೇ ನಮ್ಮ ಮನೆ ದೊಡ್ಡದು. ಸ್ವಲ್ಪ ಘನತೆ ಗೌರವಕ್ಕಾಗಿ ಹಾತೊರೆಯುವ ಮನೆಯೂ ಆಗಿತ್ತು) ಅನ್ನ, ಸಾರು (ಅಕ್ಕಿ) ಎಂದರೂ ಅದು ನಮಗೆ ಆಗ ಹಬ್ಬದ ಊಟವೇ. ನಮ್ಮ ಮನೆಯಲ್ಲಿ ಅದು ದೀಪಾವಳಿಗೋ ನಾಗರಪಂಚಮಿಗೋ ವರ್ಷಕ್ಕೆ ಒಂದೆರಡು ಬಾರಿ ಮಾತ್ರ ಸಿಗುತ್ತಿತ್ತು.

ಶೇಠಜಿಯವರ ಮಗಳ ಮದುವೆಗೆ ಸುತ್ತ–ಮುತ್ತ ಊರಿನ ದಲಿತರೂ ಬಂದಿದ್ದರು. ಅಂದ್ರೆ ಊಟಕ್ಕೆ. ಹೀಗಾಗಿ ದಲಿತರ ಸಂಖ್ಯೆ ಅಂದು ಹೆಚ್ಚೇ ಆಗಿ ಬಿಟ್ಟಿತ್ತು. ಶೇಠಜಿಯವರ ಅಡ್ಡೆ (ವಠಾರ) ತುಂಬಾ ದೊಡ್ಡದು. ಅದಕ್ಕೆ ಎರಡು ಗೇಟು–ಒಂದು ಹಿಂದಿನ ಗೇಟು ಇನ್ನೊಂದು ಮುಂದಿನ ಗೇಟು. ಮುಂದಿನ ಗೇಟಿನಲ್ಲಿ ನಮಗೆ ಪ್ರವೇಶವಿರಲಿಲ್ಲ. ನನ್ನಜ್ಜಿ ಸ್ವಲ್ಪ ಬಾಯಿ ಬಡಕಿ, ಶಕ್ತಿವಾನಳೂ ಕೂಡಾ. ಹೀಗಾಗಿ ಮೊಮ್ಮಕ್ಕಳನೆಲ್ಲಾ ಕೋಳಿಯಂತೆ ಕರೆಯುತ್ತ, ಎಳೆಯುತ್ತ, ನಮ್ಮನ್ನು ಪಕ್ಕದಲ್ಲಿಯೇ ಇರಿಸಿಕೊಳ್ಳುತ್ತಿದ್ದಳು.

ಶೇಠಜಿಯವರ ದರ್ಶನ ದೇವರ ದರ್ಶನವಿದ್ದಂತೆ. ಅಲ್ಲಿ ದರ್ಬಾರು ವೀರ ಶೈವರಿಗೆ ಸಂಬಂಧಪಟ್ಟದ್ದು ಎಂದೆನಲ್ಲವೆ? ಅವರೇ ಕೈಯಲ್ಲಿ ಕೋಲು ಹಿಡಿದು ನಿಂತಿರುತ್ತಿದ್ದರು. ನಾಯಿ ಹಂದಿಗಳಿಗೂ ಹೊಡೆಯಲು ಬಳಸುವುದೂ ಅದೇ ಕೋಲು ನಮಗೆ ಬಳಸುವುದು ಅದೇ ಕೋಲೇ ಆಗಿರುತ್ತಿತ್ತು. ಊರ ಜನರ ಎಲ್ಲರ ಊಟ ಮುಗಿದಾದ ಮೇಲೆ ಕೊನೆಯಲ್ಲಿ ದಲಿತರನ್ನು ಬಿಡಲಾಗುತ್ತಿತ್ತು. ಎಷ್ಟು ದಲಿತರು ಅಂದು ಸೇರಿದ್ದರೆಂದರೆ ಅಜ್ಜಿ ಹೇಳುತ್ತಿದ್ದಳು.

'ಇವತ್ತು ಕಂಡಾಪಟಿ ಮಂದಿ.

ಏನಿಲ್ಲಂದ್ರ ಮೂರ ಪಂಕ್ತಿರ ಆಕ್ಕದ' ಎನ್ನುತ್ತಿದ್ದಳು.

ನಮಗಿಂತಲೂ ಕೀಳಾದ ಇನ್ನೊಂದು ತಂಡವೂ ಅಲ್ಲಿತ್ತು. ಅದು ಎಲ್ಲರಿಗಿಂತಲೂ ಕೊನೆಯದು. ಆದರಲ್ಲಿ ಅಡಿಚೆಂಚರು, ಲೋಲ್ಯಾರು, ಕುಂಚಿಕೊರ್‍ರು ಇವರನ್ನು ನೋಡಿ ನಾವು ಹೇಸುತ್ತಿದ್ದವು. ಇವರಲ್ಲಿ ಹೆಚ್ಚಿಗೆ ಬೇಡಿ ತಿನ್ನುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು.

ಈ ಬಗೆಯ ಊಟದ ವ್ಯವಸ್ಥೆಯಲ್ಲಿ ಕೆಲವೊಂದು ನಿಯಮಗಳನ್ನು ಪಾಲಿಸಲಾಗುತ್ತಿತ್ತು. ಈ ನಿಯಮಗಳನ್ನು ಗೇಟು ಕಾಯುವ ದಂಡನಾಯಕ ನಮಗೆ ಹೇಳಿ ಒಳಗೆ ಬಿಡುತ್ತಿದ್ದ.

–ತಟ್ಟೆಗೆ ಹೆಚ್ಚಿಗೆ ಹಾಕಿಸಿಕೊಳ್ಳಬಾರದು.

–ನಿಮಗೆ ತಿನ್ನಲು ಎಷ್ಟು ಸಾಧ್ಯವೋ ಅಷ್ಟನ್ನೇ ನೀಡಿಸಿಕೊಳ್ಳಬೇಕು.

–ಮನೆಗೆ ಕಟ್ಟಿಕೊಂಡು ಹೋಗಕೂಡದು.

–ತಟ್ಟೆ, ನೀರು ಕುಡಿಯಲು ತಂಬಿಗೆ ನೀವೇ ತರಬೇಕು.

(ಊರವರಿಗೆ ಈ ನಿಯಮ ಇರಲಿಲ್ಲ. ಅವರಿಗೆ ಎಲೆಹಾಕಿಕೊಡುತ್ತಿದ್ದರು)

ಊಟ ಮುಗಿಸಿ ಹೋಗುವಾಗ ಪಾತ್ರೆಯಲ್ಲಿಟ್ಟ ಬಣ್ಣದಲ್ಲಿ ಕೈ ಅದ್ದಿ ಹೋಗಬೇಕು.

(ಈ ನಿಯಮ ಊರಜನರಿಗೆ ಅನ್ವಯಿಸದು. ಒಮ್ಮೆ ಊಟ ಮಾಡಿ ಹೋದವರು (ದಲಿತರು) ಎರಡನೇ ಬಾರಿ ಬರಬಾರದು ಎನ್ನುವುದಕ್ಕಾಗಿ ಈ ನಿಯಮ)

ಈ ನಿಯಮಗಳನ್ನು ಮುರಿಯುವದರಲ್ಲಿ ದಲಿತರು, ನಿಸ್ಸೀಮರು. ಬಣ್ಣದಲ್ಲಿ ಕೈ ಅದ್ದುವ ಸಂದರ್ಭ ಬಂದಾಗ ಅದರಿಂದ ತಪ್ಪಿಸಿಕೊಳ್ಳಲು, ಅಜ್ಜಿ ಬೇರೆ ಬೇರೆ ತಂತ್ರಗಳನ್ನು ಹುಡುಕುತ್ತಿದ್ದಳು. ಎಂದೋ ಒಮ್ಮೆ ಎಣ್ಣೆ ಕಾಣುವ

ತಲೆ ಅಂದೂ ಅವಶ್ಯವಾಗಿ ಎಣ್ಣೆ ಕಾಣುತ್ತಿತ್ತು. ಊಟ ಮುಗಿದಾದ ಮೇಲೆ ಬಣ್ಣದಲ್ಲಿ ಕೈ ಅದ್ದುವ ಸಂದರ್ಭ ಬಂದಾಗ, ಕೈ ತಲೆಗೆ ತಿಕ್ಕಿ ಎಣ್ಣೆ ಹಚ್ಚಿಕೊಂಡು ಬಣ್ಣದ ಪಾತ್ರೆಯಲ್ಲಿ ಕೈ ಅದ್ದುವಂತೆ ಅಜ್ಜಿ ಮೊದಲೇ ಹೇಳಿರುತ್ತಿದ್ದಳು. ಮೊದಲು, ಹಾಗೆಯೇ ತಪ್ಪಿಸಿಕೊಂಡು ಹೊರಬರಲು ಪ್ರಯತ್ನಿಸುವದು, ಯಾರಾದರು ಹಿಡಿದರೆ ಈ ತಂತ್ರ ಬಳಸುತ್ತಿದ್ದೆವು. ಹೊರಗೆ ಬಂದಾಕ್ಷಣ ಕೈ ಚೊಣ್ಣಕ್ಕೆ ಒರೆಸಿಕೊಂಡಾಗ ಬಣ್ಣ ಹೊರಟು ಹೋಗುತ್ತಿತ್ತು. ನಂತರ ಊಟಕ್ಕೆ ಕೊನೆಯ ಸರತಿಯಲ್ಲಿ ಹಾಜರಾಗುತ್ತಿದ್ದೆವು. ಕೆಲಬಾರಿ ಸಿಕ್ಕಿಬಿದ್ದಾಗ ಹೊರಕ್ಕೆ ದಬ್ಬುತ್ತಿದ್ದರು. ದೇಶ್ಯಾವಾರಿನಗೆ ಬೀರುತ್ತ ಕೆಲಬಾರಿ ಅಳುತ್ತ ಹೊರಗೆ ಬರುತ್ತಿದ್ದೆವು.

ಸರತಿಯಲ್ಲಿ ಊಟಕ್ಕೆ ಕುಳಿತಾಗ ನೀಡುವವನಿಗೆ ಅಜ್ಜಿ ಹೇಳುತ್ತಿದ್ದಳು, 'ಅಯ್ಯಪ್ಪ ನನ್ನ ಮೊಮ್ಮಕ್ಕಳು ಸಣ್ಣೂ ಅದಾವ. ಸವಕಾಸ ತಿಂತಾವು ಇನ್ನೂ ಸ್ವಲ್ಪ ಹಾಕ್ಯಪ' ಎಂದು ಹೇಳಿ ಹಾಕಿಸಿಕೊಳ್ಳುತ್ತಿದ್ದಳು. ಊಟ ಮುಗಿಸಿ ಗೇಟು ದಾಟುತ್ತಿರಬೇಕಾದರೆ ಕಳ್ಳರನ್ನು ಹಿಡಿಯಲು ನಿಂತ ದಂಡನಾಯಕ ಬಂದ. ಬಂದವನೇ ನಮ್ಮನೆಲ್ಲಾ ತಡೆದ. ಅಜ್ಜಿಯ ಸೀರೆಹೊಟ್ಟೆಯ ಭಾಗದಲ್ಲಿ ಸ್ವಲ್ಪ ಉಬ್ಬಿತ್ತು, ಅದನ್ನು ನೋಡಿದ ಆತ ಏ ಮುದಕಿ ಏನದು ಕಟಿಗೊಂಡ ಹೊಂಟಿಯೆನು ? ಎಂದ. 'ಏಯ್ಯ ಇಲ್ಲ ಬಿಡಪ.' ಅಜ್ಜಿ ನಗುತ್ತಲೇ ಹೇಳಿದಳು. ನಮ್ಮನ್ನೆಲ್ಲಾ ಮುಂದಕ್ಕೆ ಹೋಗಲು ಹೇಳಿ ಕಳಿಸಿದಳು. ಅವನು ಸೀರೆ ಮುಟ್ಟಲು ಬಂದಾಗ ಸ್ವಲ್ಪ ಧ್ವನಿ ಹೆಚ್ಚಿಗೆ ಮಾಡಿ 'ಏ ನಿಂದೇನು ? ಏನಿಲ್ಲಂತ ಹೇಳಿತೀನಿ ಅಲ್ಲೇನು ? ಬಾಳಿಗಂಟ ಹಾಕಿ ಸೀರಿ ಕಟ್ಟೇನಿ ಹಂಗಕಾಣತದ' ಎಂದಳು. 'ತಗಿ ನೋಡೊನಾ' ಎಂದು ಹತ್ತಿರ ಬಂದಾಗ ಶೆರಗು ಸರಿಸಿ ತೋರಿಸಿದಳು. ಅಷ್ಟರಲ್ಲಿ ಜನ (ಊಟ ಮುಗಿಸಿದವರು) ಸೇರ ತೊಡಗಿದರು, ಆಗ ಅಜ್ಜಿ ಬಾಳೆಗಂಟಿನಿಂದು ಸಣ್ಣದೊಂದು ಗಂಟು ತೆಗೆದೊಗೆದವಳೇ–

'ಲಟ್ಟು ಏನತಾನು ಸೌಕಾರ ಆಗ್ಯಾನ.ಊಟ ಹಾಕದವರ್ರು ದೌಳವು ಎಲ್ಲೈದಾರೋ ಏನೋ, ಇವನದೆಷ್ಟು ನೋಡ' ಎಂದು ಬೈಯುತ್ತ ಹೊರ ಬಂದಳು. ಗೇಟು ದಾಟಿ ಹೊರಕ್ಕೆ ಬಂದಾಗ ಅಜ್ಜಿಯ ಮುಖ ನಗು ಮುಖವಾಗಿತ್ತು 'ನಾನು ಗೆದ್ದೆ' ಎನ್ನುವ ಗೆಲುವಿತ್ತು ಅವಳ ಮುಖದಲ್ಲಿ. ಅಜ್ಜಿ ತಾನಷ್ಟೇ ತೆಗೆದುಕೊಳ್ಳದೇ ನಮ್ಮ ತಲೆಯ ಮೇಲಿರುವ ಟೋಪಿಯ ಅಡಿಯಲ್ಲೂ ಇಟ್ಟಿದ್ದಳು, ಅವೆಲ್ಲಾ ಒಟ್ಟುಗೂಡಿಸಿ,

'ಹುಡಕಾಕ ಬರ್‍ತಾನ ಐನೋರೆ
ತಿನ್ನನ್ನು ಚಳ್ಳ ಹಣ್ಣ' ಎಂದಳು.

ನುಣುಪಾಗಿ ಬೋಳಿಸಿಕೊಳ್ಳುವ ನಮ್ಮ ತಲೆ ಎಣ್ಣೆ ಮತ್ತು ಟೋಪಿ ಎಂದೂ ಮರೆಯುತ್ತಿರಲಿಲ್ಲ....

2. ನಾಕಿನ ಕಸದ ಪಾಳಿ : ಮಾಲಕತ್ತಿ

ನಮಸ್ಕರಿಸಿದಂತೆ

ನಿಮ್ಮ ಹಿಂಗೈಗಳನ್ನು ಪರಸ್ಪರ ಒಂದಕೊಂದು ಮುಟ್ಟಿಸಿ, ಆಮೇಲೆ ಒಂದರಿನ್ನೊಂದರ ಮಧ್ಯ ಬೆರಳುಗಳನ್ನು ಸೇರಿಸಿ. ಆಯಿತೆ?

ಈಗ ನಿಮ್ಮ ಬಲಗೈ ಬೆರಳುಗಳು ಎಡಗೈ ಅಂಗೈಯಲ್ಲಿ, ಎಡಗೈ ಬೆರಳುಗಳು ಬಲಗೈ ಅಂಗೈಯಲ್ಲಿ ಬಂದಿವೆತಾನೆ? ಸರಿ.

ಈಗ ಭೂಮಿಗೂ ನಿಮ್ಮ ಕಾಲುಗಳಿಗೂ ಸಾಕಷ್ಟು ಅಂತರವಿರುವಂತೆ ಎತ್ತರದ ಗೋಡೆಯ ಗೂಟಕ್ಕೆ ತೂಗು ಹಾಕಿಸಿಕೊಳ್ಳಿ. ನಿಮ್ಮ ಬಿಡಿಸದ ಕೈಗಳ ಬೆರಳಿನ ಮಧ್ಯ ಗೂಟ ಬರಲಿ. ಹೀಗೆ ತೂಗಿದರೆ ಎಷ್ಟು ಕಾಲ ನೀವು ಕಣ್ಣಿನಲ್ಲಿ ನೀರು ತಾರದೆ ತೂಗಬಹುದು?

ಪ್ರಾಥಮಿಕ ಶಾಲೆ ಓದುವಾಗ ನನಗೆ ಸಿಕ್ಕ ಶಿಕ್ಷೆ ಇದು. ಅಲ್ಲಲ್ಲ; ನನ್ನಂತೆ ನನ್ನ ಕೇರಿಯ ಸ್ನೇಹಿತರೂ ಉಂಡಿದ್ದಾರೆ. ಹೀಗೆ ತೂಗುಹಾಕಿದಾಗ ಕೈಗಳನ್ನು ಜಾರಿಸಿ ನೆಲಕ್ಕೆ ಬೀಳಲೂ ಬರುತ್ತಿರಲಿಲ್ಲ. ಅಳಬೇಕು ಗೋಗರಿಯಬೇಕು ಕಾಡಿ ಬೇಡಿದರೂ ಪ್ರಯೋಜನವಿರುತ್ತಿರಲಿಲ್ಲ. ನಾವು ಗೋಗರೆದಷ್ಟೂ ನಮ್ಮ ಗುರೋತ್ತಮರಿಗೆ ಹಲ್ಲು ಕಡಿಯುವಷ್ಟು ಕೋಪ ಬರುತ್ತಿತ್ತು. ಕೈಯಲ್ಲಿ ನುಣುಪಿಲ್ಲದ ಉದ್ದನೆಯ ಬಡಿಗೆ ಗೋಡೆಗೆ ಮುಖಮಾಡಿ ಗೂಟಕ್ಕೆ ತೂಗು ಹಾಕಿದ ಮೇಲೆ ಅವರಿಗೆ ಹೊಡೆಯಲು ಸಿಕ್ಕುವದು ಉಬ್ಬಿಸಿಂತ ನಮ್ಮ ಕುಂಡೆಯ ದಡಗಳು.

'ಸೂಳೆ ಮಗನ ಕುಂಡೆಂದ್ರ ತಬಲಾ ಆಗ್ಯಾವ ನೋಡ ಸಾಲಿ ಉಪ್ಪಿಟ್ಟು ತಿಂದ ತಿಂದ, ಎನ್ನುವದು, ಬಾರಿಸುವದು. ಕೆಲವೊಮ್ಮೆ ಕುಂಡೆಯ ದಡಗಳನ್ನು ವಿಜಾಪುರದ ಗೋಲಗುಮ್ಮಟಕ್ಕೂ ಹೋಲಿಸುತ್ತಿದ್ದರು. ಅವರು ನಮಗೆ ತಿನ್ನಲು ಹಾಕುವ ಉಪ್ಪಿಟ್ಟಿಗಿಂತ ಅವರು ಮನೆಗೊಯ್ಯುವದೇ ಹೆಚ್ಚಿರುತ್ತಿತ್ತು.

ನಾವು ತೊಡುವ ಚೊಣ್ಣಗಳಿಗೆ ಗುಂಡಿಯೇ ಇರುತ್ತಿರಲಿಲ್ಲ. ಇದ್ದರೂ ಪ್ರಯೋಜನವಿರುತ್ತಿರಲಿಲ್ಲ. ಒಂದು ಚೊಣ್ಣದ ಸಡದ ಸುತ್ತಳತೆಯಲ್ಲಿ ನನ್ನಂಥ ನಾಯಿಯ ಸೊಂಟದವರು ಸರಿಯಾಗಿ ನಾಲ್ಕು ಜನ ಇಳಿಯ ಬಹುದಿತ್ತು. ಅವು

ಪೋಲಿಸರ ಅರ್ಧ ತೊಡೆಕಾಣುವ ಚೊಣ್ಣಗಳು. ಅದಕ್ಕಾಗಿ ಆ ಚೊಣ್ಣ ಉಡು ದಾರದ (ನಡದಾರ) ಆಸರೆ ಪಡೆಯುತ್ತಿತ್ತು, ಇಲ್ಲವೆ ಸಣಬಿನಿಂದಲೂ ಸೀರೆಯ ಪಡಿಯಿಂದಲೂ ಬಿಗಿಯಲಾಗಿರುತ್ತಿತ್ತು. ಗುರೋತ್ತಮರು ಜೋಡು ಗುಮ್ಮಟದ ನಗಾರಿಯನ್ನು ಬಾರಿಸುತ್ತಿರಬೇಕಾದರೆ ವಿಲಿವಿಲನೆ ಒದ್ದಾಡುತ್ತಿದ್ದೆ. ಗೋಡೆಯ ಗೂಟಕ್ಕೆ ತೂಗು ಹಾಕಿದ್ದರಿಂದ, ಮೂಗು ತರಕು ಬರಕಾದ ಗೋಡೆಗೆ ಉಜ್ಜಿ ಉರಿಯುತ್ತಿತ್ತು. ಗೂಟಕ್ಕೆ ಜೋಡುಬಿದ್ದಿರುವುದರಿಂದ ಹೊಟ್ಟೆತೆಳಗಾಗಿ ನಡಕ್ಕೆ ಕಟ್ಟಿದ ಆ 'ದೊಗಲಂ ಪೊಗಲಂ ಪೋಲಿಸ್ ಚೊಣ್ಣ' ಹೊಡೆತ ಬಿದ್ದಂತೆ ನಿಧಾನವಾಗಿ ಕೆಳಗಿಳಿಯುತ್ತಿತ್ತು. ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ಅದೊಂದು ಸಿನಿಮಾ ಆಗಿತ್ತು, ಬಿದ್ದು ಬಿದ್ದು ಅವರು ನಕ್ಕಂತೆ, ನನ್ನ ಅಳುವು ಹೆಚ್ಚಿದಂತೆ ಹೊಡೆತ ಇನ್ನೂ ಜೋರಾಗುತ್ತಿದ್ದವು. ಕುಂಡೆ ತುಂಬಾ ಬಾಸುಂಡೆ. ಕೊನೆಗೆ ನಮ್ಮ ಕರಿಕುಂಡೆ ನೋಡಲಾಗದೆ 'ಥೂ' ಎಂದು ನೆಲಕ್ಕುಗಿದು ದೂರ ಸರಿದಾಗ ಅವರ ದೃಷ್ಟಿ ಹೊರಳುವದು ನನ್ನ ಕೇರಿಯ ಸ್ನೇಹಿತರ ಮೇಲೆ. ಅದರ ಅರ್ಥ, ಅವರಿಗೆ ತಕ್ಷಣವೇ ಆಗುತ್ತಿತ್ತು. ಓಡಿ ಬಂದವರೇ ಗೂಟದಿಂದ ನನ್ನನ್ನು ಅವರು ಕೆಳಗಿಳಿಸುತ್ತಿದ್ದರು. ಹೀಗೆ ನಾನೂ ನನ್ನ ಕೇರಿಯ ಸ್ನೇಹಿತರಿಗೆ ಕೆಳಗಿಳಿಸಿದ ಸಂದರ್ಭಗಳಿವೆ.

ಇದಕ್ಕಿಂತ ಕಠಿಣ ಶಿಕ್ಷೆ ಮತ್ತೊಂದು:

ಅದು, ಕುರ್ಚಿಯ ಹಾಗೆ ಮೊಣಕಾಲು ಅರ್ಧ ಮಡಿಚಿ ನಿಂತುಕೊಳ್ಳಬೇಕು. ಹೀಗೆ ಬಹಳ ಹೊತ್ತು ನಿಲ್ಲಲಾಗದು. ಸ್ವಲ್ಪ ಸಮಯದ ನಂತರ ಮೊಣಕಾಲು ಮಡಿಚಿ ನೆಲಕ್ಕೆ ಕುಳಿತುಬಿಡಬೇಕಾಗುತ್ತದೆ. ಹೀಗೆ ಕುಳಿತು ಕೊಳ್ಳಬಾರದೆಂದು ಮೊಣಕಾಲ ಭಾಗದ ಹಿಂದಿನ ಸಂದಿಯಲ್ಲಿ ದಪ್ಪಾದ ಮತ್ತು ಚೂಪಾದ ಕಟ್ಟಿಗೆಯ ತುಂಡನ್ನು ಇಡಲಾಗುತ್ತಿತ್ತು. ಅವರು ತಿಳಿಸಿದ ಪ್ರಮಾಣಕ್ಕಿಂತ ಹೆಚ್ಚಿಗೆ ಕಾಲು ಮಡಿಚಿದರೆ ಕಟ್ಟಿಗೆ ನಟ್ಟು ರಕ್ತವೇ ಬರುತ್ತಿತ್ತು!

ಪಟ್ಟಿ ಕೊಡುತ್ತಾ ಹೋದರೆ ಇನ್ನೂ ಇವೆ. ಈ ಪರಿಯ ಶಿಕ್ಷೆಯಿಂದ ನಮ್ಮ ದೇಹ ಕೊರಡಾಗಿ ಹೋಗಿತ್ತು. ಶಿಕ್ಷೆಯ ಕಾಲ ಬಂದಾಗ ಅವರು ಹೇಳುವದಕ್ಕಿಂದ ಮುಂಚೆಯೇ ನಾವು ಆಸನ ಹಾಕುತ್ತಿದ್ದೆವು. ಆಸನ ಹಾಕುವದರಲ್ಲಿ ತಡವಾದರೂ ಹೊಡೆತ. ಬೇಗನೆ ಹಾಕಿದರೆ-'ಎಷ್ಟು ಹೂರವು ನೋಡ ಮಗನಿಗೆ' ಎನ್ನುವದು, ಹೊಡೆತ. ಆದರೆ ಆ ಗುರೋತ್ತಮರ ಕೈ ಹೊಡೆತ ತಿನ್ನುವ ಭಾಗ್ಯ ನಮಗೆ ಬರಲೇ ಇಲ್ಲ.

ಇವೆಲ್ಲಾ ಶಿಕ್ಷೆಗಳು ಯಾವ ಕಾರಣಕ್ಕಾಗಿ ಗೊತ್ತೆ? ನಾವು ಮನೆಯಲ್ಲಿ ಹೇಳಿದ ಪಾಠ ಒದಿಕೊಂಡು ಬರಲಿಲ್ಲ ಎಂದಲ್ಲ. ನಮ್ಮ ಕೊಳಕುತನಕಾಗಿ ಅಲ್ಲ, ಶಾಲೆ

ಯಲ್ಲಿ ಪ್ರಾರ್ಥನೆಯಾಗುವದಕ್ಕಿಂತ ಮುಂಚೆಯೇ, ನಾವು ಬಂದು ತರಗತಿಯ ಕಸ ಗುಡಿಸಬೇಕು. ಬೇಗನೆ ಬಂದು ಕಸಗುಡಿಸದಿದ್ದರೆ ಈ ಪರಿಯ ಶಿಕ್ಷೆ!

ನಮ್ಮ ಕೇರಿಯವರು ಒಟ್ಟು ತರಗತಿಯಲ್ಲಿ ನಾಲ್ಕು ಜನ. ದೇವಪ್ಪ, ಮಲ್ಲಪ್ಪ, ಬಸವಂತಪ್ಪ, ಮತ್ತು ನಾನು. ನಾಳೆ ಕಸದ ಪಾಳಿ ಯಾರದಿದೆ ಎಂಬುದು ಕರಿ ಹಲಿಗೆಯ ಮೇಲೆ ಬರೆಯಲಾಗುತ್ತಿತ್ತು. ನಮ್ಮ ಹೆಸರುಗಳನ್ನು ಕರಿ ಹಲಿಗೆಯ ಮೇಲೆ ಯಥಾಸ್ಥಿತಿಯಲ್ಲಿ ಬರೆಯುವದಕ್ಕೆ ಅವರು ಹೇಸುತ್ತಿದ್ದರೆಂದು ತೋರುತ್ತಿತ್ತು. ಹಿಗಾಗಿ ಅವರು ದೇವ್ಯಾ, ಮಲ್ಲ್ಯಾ, ಬಸ್ಯಾ ಎಂದೇ ಇರುವ ಹೆಸರನ್ನು ಮುಗುಚಿ ಬರೆಯುತ್ತಿದ್ದರು. ಹೆಸರು ಬರೆಯುವ ಕೆಲಸ ಮೊದಲು ಗುರೋತ್ತಮರು ಮಾಡುತ್ತಿದ್ದರು. ನಂತರ ಆ ಕೆಲಸ ತರಗತಿಯ ಮಂತ್ರಿವರ್ಯರಿಗೆ ವರ್ಗಾವಣೆಯಾಯಿತು. ಕಸಗುಡಿಸುವ ಕೆಲಸ ದಲಿತರಾದ ನಮ್ಮ ನಾಲ್ಕು ಜನಗಳಿಗೆ ಮಾತ್ರ ಸೀಮಿತ ಇತ್ತು.

ನಾಲ್ಕು-ಐದು ಜನ ಒಟ್ಟಿಗೆ ಕುಳಿತುಕೊಳ್ಳಬಹುದಾದ ಉದ್ದನೆಯ ಕಟ್ಟಿಗೆಯ ಹಾಸುಮಣೆಗಳಿದ್ದವು. ಇವುಗಳನ್ನು ಸರಿಸಿ ಕಸ ಗುಡಿಸಲು ತೊಂದರೆ ಎನಿಸುತ್ತಿತ್ತು. ಜೊತೆಗೆ ಸಿಟ್ಟೂ ಬರುತ್ತಿತ್ತು. ಯಾಕೆಂದರೆ ಈ ಮಣೆಗಳು ಕುಳಿತುಕೊಳ್ಳಲು ನಮಗಿರಲಿಲ್ಲ. ನಾವು ನಾಲ್ಕು ಜನ ಕೊನೆಯಲ್ಲಿ ನೆಲದ ಮೇಲೆ ಕುಳಿತುಕೊಳ್ಳಬೇಕಾಗುತ್ತಿತ್ತು. ಹೀಗಾಗಿ ಕೂಡ್ರಲು ನಮಗಿಲ್ಲದ ಆ ಮಣೆಗಳನ್ನು ಕಸ ಗುಡಿಸುವಾಗ ಎತ್ತಿ ನೆಲಕ್ಕೆ ಕುಕ್ಕರಿಸುತ್ತಿದ್ದೆವು. ಯಾರಾದರೂ ನೋಡಿದರೆ ಕೈ ಜಾರಿದಂತೆ ನಟಿಸುತ್ತಿದ್ದೆವು.

ಒಂದು ಬಾರಿ, ನಾನು ಶಾಲೆಗೆ ಹೋಗಲಾರೆ ಎಂದು ಹಟ ಮಾಡಿದೆ. ಯಾಕೆ ಎಂದು ಅಜ್ಜಿ ಕೇಳಿದರೆ ನಾ ಕೊಟ್ಟ ಕಾರಣ: 'ಅವರೆಲ್ಲಾ ಮಣೆಮ್ಯಾಲಿ ಕುಂದರ ತಾರ, ನಮಗೆ ನೆಲದ ಮ್ಯಾಲಿ ಕುಂದರ್ಸ್ತಾರ ನಾಪಲ್ಲ್ಯಾ ಹೋಗೋದಿಲ್ಲಾ' ಎಂದಿದ್ದೆ. ಅದಕ್ಕೆ ನನ್ನಜ್ಜಿ: 'ಕಟಗಿ ಮಣಿ ಏನ ಮಾಡುದು, ಕುಂತ್ರ ನಡತೈತಿ ನಿನಗ ಸಣ್ಣ ಕೌದಿ ಹೊಲ್ದು ಕೊಡ್ತೀನಿ' ಎಂದಳು. ಅದು ಕೀಳಾಗಿ ಕಂಡಿದ್ದರಿಂದ ಅದನ್ನು ನಿರಾಕರಿಸಿದೆ. 'ಹೊಸು ತಟ್ಟಿ ಕೊಡ್ತೀನಿ ತಗೊಂಡು ಹೋಗು' ಎಂದಳು. (ತಟ್ಟು: ಕತ್ತರಿಸಿದ ಸೆಣಬಿನ ಚೀಲ) ಒಪ್ಪಿಕೊಂಡು ಮರುದಿನ ಠೀವಿಯಿಂದ ತಟ್ಟು ತೆಗೆದುಕೊಂಡು ಹೋಗಿ ಹಾಸಿಕೊಂಡು ಗೆಲುವಿನ ಮುಖದಲ್ಲಿ ಕುಳಿತಿದ್ದೆ. ಹಾಸುಮಣೆಯ ಮೇಲೆ ಕುಳಿತುಕೊಳ್ಳುವ ಜನ ಇದನ್ನು ನೋಡಿ ಅವಾಕ್ಕಾಗುತ್ತಾರೆ ಎಂದು ಬಯಸಿದ್ದೆ. ಆದರೆ ಆದದ್ದು ತದ್ವಿರುದ್ಧ. ಅವರೆಲ್ಲಾ ನನ್ನನ್ನು ನೋಡಿ ಅಪಹಾಸ್ಯ ಮಾಡಿ ಚಪ್ಪಾಳೆ ತಟ್ಟಿ ನಗತೊಡಗಿದರು.

'ಅವನ ಚೊಣ್ಣ ಹೊಲಸಾಗತದಂತಲೇ, ಭಾರಿ ಚೊಣ್ಣ' ಎನ್ನುತ್ತಿದ್ದರು, ನನ್ನ ದೊಗಲಂ ಬೊಗಲಂ ಕೊಳಕು ಚೊಣ್ಣ-ತಟ್ಟು ಎಲ್ಲದರ ಮೇಲೂ ಸಿಟ್ಟು ಬಂತು. ಏನೂ ಮಾಡಲಾಗದೆ ಕಣ್ಣಲ್ಲಿ ನೀರು ತರಿಸಿತಷ್ಟೇ.

ಕರಿ ಹಲಗೆಯ ಮೇಲೆ ನನ್ನ ಹೆಸರನ್ನು ಅವರು ಮುಗುಚಿ ಬರೆಯಲಿಲ್ಲ. ಹೆಸರು 'ಅರವಿಂದ' ಎಂದಿರುವುದರಿಂದ ಅದು ಹೇಗೆ ಮುಗುಚಿ ಹೇಳಿದರೂ ಅವರಿಗೆ ತೃಪ್ತಿಯಾಗಿ ಕಂಡಿರಲಿಕ್ಕಿಲ್ಲ. ಅದಕ್ಕಾಗಿ ಅವರು ನನ್ನ ಅಡ್ಡ ಹೆಸರನ್ನು ಬಳಸಿಕೊಳ್ಳುತ್ತಿದ್ದರು.

ಪಾಳಿನ ಕಸದ ಪಾಳಿ (ಸರತಿ): 'ಮಾಲಕತ್ತಿ'

ಎಂದು ಬರೆಯುತ್ತಿದ್ದರು. ಕೆಲವೊಮ್ಮೆ 'ಕತ್ತಿ' ಎಂದಷ್ಟೇ ಬರೆಯುವ ಮನಸ್ಸು ಮಾಡುತ್ತಿದ್ದರು.

ಒಮ್ಮೆ, ಬರೆದ ಹೆಸರನ್ನು ತಿದ್ದುವ ಸಾಹಸವೂ ಮಾಡಿದ್ದೆ. ಆದರೆ ಅಂದಿನ ಅವತಾರವೇ ಬೇರೆಯಾಗಿ ಹೋಗಿತ್ತು. ನಮ್ಮೂರ ಪಕ್ಕದಲ್ಲಿ ಬಸರಕೋಡ ಜಾತ್ರೆ ಹೆಸರುವಾಸಿ. ನಮ್ಮ ಮನೆಯವರು ಅಲ್ಲಿಗೆ ಹೋಗುತ್ತಿದ್ದರು. ಅಂದು ನಾನೂ ಹೋಗಬೇಕಾಗಿತ್ತು. ಅದಕ್ಕಾಗಿ ಮಂತ್ರಿವರ್ಯರಿಗೆ ಹೇಳಿದ್ದೆ:

'ನಾಳೆ ನಾನು ಜಾತ್ರೆಗೆ ಹೋಗತೀನಿ, ಅದ್ಕ ಇವತ್ತೊಂದ ದಿನ ಸಾಲಿ ಬಿಡಣ ಕಸಾ ಹೊಡಿತೀನಿ' ಎಂದೆ.

ಮುಂಚಿತವಾಗಿ ಕಸಗುಡಿಸುವ ವ್ಯವಸ್ಥೆ ಇಲ್ಲದೆ ಹೋದರೂ ಅಂದು ಗುರುಗಳ ಅನುಮತಿ ಪಡೆದು ಮಂತ್ರಿ ಅವಕಾಶ ಕೊಟ್ಟಿದ್ದ. ಶಾಲೆ ಬಿಟ್ಟದ್ದರಿಂದ ತರಗತಿಯಲ್ಲಿ ಯಾರೂ ಇರಲಿಲ್ಲ. ನಾನೊಬ್ಬನೇ ಇದ್ದೆ. ಆಗ ಕರಿ ಹಲಿಗೆಯ ಮೇಲೆ ಹೆಸರು ಕಂಡಿದ್ದು. ಎದೆ ಹೊಡೆದುಕೊಳ್ಳುತ್ತಿದ್ದರೂ, ಎದ್ದು ಗುರುಗಳು ಕೂಡ್ರುವ ಕುರ್ಚಿಯನ್ನು ಸರಿಸಿ ಅದರ ಮೇಲೆ ನಿಂತು 'ಮಾಲಕತ್ತಿ' ಇದ್ದದ್ದನ್ನು 'ಕ' ಅಳಿಸಿ 'ಗ' ಬರೆಯಲು ಪ್ರಯತ್ನಿಸುತ್ತಿದ್ದೆ. ಎಲ್ಲಿದ್ದರೋ ಗುರೋತ್ತಮರು ತರಗತಿ ಒಳಗೆ ಬಂದರು. ನೋಡಿದವರೆ ಗೂಟಗಳ ಮೇಲಿದ್ದ ಕಟ್ಟಿಗೆಯನ್ನು ಹಿರಿದರು. ಅವರನ್ನು ನೋಡಿದಾಕ್ಷಣವೇ ನನ್ನ ನಡಕ ಪ್ರಾರಂಭವಾಯಿತು. ಕೆಳಗಿಳಿದು 'ಕತ್ತಿ' ಎಂದು ಬರೆದಿದ್ದಾರೆ ಎಂದು ವಿವರಣೆ ಕೊಡುವುದರಲ್ಲಿಯೇ ಥಳಿಸುವುದಕ್ಕೆ ಪ್ರಾರಂಭಿಸಿದರು.

ಕತ್ತಿ ಅಂತ ಬರೆದ್ರ ಏನಾಯ್ತು? ಗತ್ತಿ ಅಂತ ಮಾಡಾಕ ಹೋಗಿದ್ಯಾ? ಮಗು, ಬಸ್ಯಾಕ ಬಾತು ಅಂದ್ರ ತಿದ್ದಾಕ ಹೋಗ್ಯಾನ ...ಕತ್ತಿ....ಕತ್ತಿನೇ....ಕತ್ತೆಲ್ಲರ ಕುದುರ್ಯಾಕದೇನ?....ಕತ್ತಿಗೆಲ್ಲಾ ಕತ್ತಿಗೆಲ್ಲಾ ಯಾಕ ಬೇಕು ಹತ್ತಿಕಾಳ ನೀರ?.... ಎಂದು ಮನ ತುಂಬುವವರೆಗೆ ಹೊಡೆದರು. ಅನಂತರ ಅಳುತ್ತ ನನ್ನ ಅಂಗಿ ಕಳೆದು ಅವರ ಕುರ್ಚಿಯನ್ನು ಒರೆಸಿದ್ದು. ಅಚ್ಚಳಿಯದ ನೆನಪು. ●

‘ತಮಸ್’ನ ಜ್ಯೋತಿ*

ಗುಲ್ಷನ್ ತನೇಜಾ

‘ತಮಸ್’ ಪ್ರತಿನಿಧಿಸುವ ಕಾಲಾವಧಿ ಶುದ್ಧ ವೈರದಿಂದ ತುಂಬಿದ್ದ ಕಾಲ. ಯಾವುದೇ ತಕ್ಷಣದ ಉದ್ದೇಶವಿಲ್ಲದ ಅಪ್ಪಟ ದ್ವೇಷ, ಘಾಸಿಗೊಂಡ ಗೌರವಗಳು, ಗಾಯಗೊಂಡ ಅಹಂಭಾವಗಳು, ದಿದಿಲುಗೊಂಡ ಆತ್ಮಗೌರವಗಳು—ಇಂತಹ ಉದ್ರಿಕ್ತ ವಾತಾವರಣ.

ಹೀಗೆ ನಿಹಲಾನಿ ನಿರೀಕ್ಷಿತವಾದ, ಭಾವಾತಿರೇಕವನ್ನು ಬದಿಗಿಡುತ್ತಾರೆ ಮತ್ತು ಬಹುವ್ಯಾಪಿ ದುಷ್ಟತನದ ಭೀಕರ ಹಿನ್ನೆಲೆಯಲ್ಲಿ ಮಾನವೀಯ ಸದ್ಗುಣವನ್ನು ಎತ್ತಿ ತೋರಿಸುವ ಗೋಜಿಗೆ ಹೋಗುವುದಿಲ್ಲ. ಅವರು ಎಲ್ಲ ವ್ಯಕ್ತಿಗಳೂ ದುಷ್ಟತನದ ಸಾಕಾರ ಮೂರ್ತಿಗಳೆಂಬಂತೆ ಚಿತ್ರಿಸಿದ್ದಾರೆ. ತಮ್ಮ ನಿರ್ಣಯಕ್ಕೆ ಯಾವುದೇ ವಿವರವನ್ನೂ ನೀಡದೆ ಈ ಆಪಾದನೆಯನ್ನು ಮಾಡುತ್ತಾರೆ. ಅಲ್ಲದೆ ಅದನ್ನು ನಾವೂ ಒಪ್ಪಿಕೊಳ್ಳಬೇಕು ಎಂದೂ ನಿರೀಕ್ಷಿಸಿರುತ್ತಾರೆ.

ನಿಹಲಾನಿಯವರ “ದುಷ್ಟತನ”ದ ಕಲ್ಪನೆಗೂ ಶೇಕ್ಸ್‌ಪಿಯರನ ನಾಟಕಗಳಲ್ಲಿ ಬರುವ ಇಂತಹ ಕಲ್ಪನೆಗೂ ಸಾಮ್ಯವನ್ನು ಕಾಣುತ್ತೇವೆ. ಗ್ರೀಕ್ ದುರಂತ ನಾಟಕಗಳಲ್ಲಿ ಕೇಡು ಏಕಮುಖವಾಗಿ ಸಾಗುತ್ತದೆ. ಒಂದು ಪಾತ್ರವನ್ನು ಆಕ್ರಮಿಸಿದರೆ ಅದರ ಬೆನ್ನ ಮುಂದಿನ ಪಾತ್ರಕ್ಕೂ ತಾಗುತ್ತದೆ. ಆದರೆ ಶೇಕ್ಸ್‌ಪಿಯರನ ನಾಟಕಗಳು ಆಗುವುದು ಬೇರೆ. ಕೇಡು ಒಂದು ಕಡೆ ಅಂಕುರಿಸಿ ಎಲ್ಲ ದಿಕ್ಕುಗಳಲ್ಲಿ ಹರಡಿಕೊಳ್ಳುತ್ತದೆ. ಎಲ್ಲರನ್ನೂ ಆಕ್ರಮಿಸುತ್ತದೆ. ಇಡೀ ವಾತಾವರಣವನ್ನು ಆವರಿಸಿ ಬಿಡುತ್ತದೆ.

---

* ಕಳೆದ ಸಂಚಿಕೆಯಿಂದ ಮುಂದುವರೆದದ್ದು

ನಿಹಲಾನಿಯವರು 'ತಮಸ್'ನ ಕೇಂದ್ರ ವಸ್ತುವನ್ನು ಇಂಥ ಶೇಕ್ಸ್‌ಪೀರಿಯನ್ ಮಾದರಿಯಲ್ಲಿ ಬೆಳೆಸುತ್ತಾ ಹೋಗುತ್ತಾರೆ. ಮನುಷ್ಯನಲ್ಲಿರುವ ಅಮಾನವೀಯತೆಯನ್ನು ಬಹಳ ಕಾಲ ದ್ವೇಷಿಸಿದರೆ ಅದು ಎಲ್ಲರನ್ನೂ ನಾಶಪಡಿಸಿಬಿಡುತ್ತದೆ. ಈ ಪಾಶವೀಯತೆಯ ನಿರ್ದಯಿ ಸುಳಿಯಲ್ಲಿ ಮುಗ್ಧ ಜನರ ಜೀವಗಳಷ್ಟೇ ಅಲ್ಲ, ಹೆಣ್ಣುಗಳ ಶೀಲ, ಯುವ ಹೃದಯಗಳ ಕನಸುಗಳೂ ಸಿಕ್ಕು ನಾಶವಾಗುತ್ತವೆ.

ಚಿತ್ರದಲ್ಲಿ ಕಾಣಿಸಿಕೊಳ್ಳುವ ಹಿಂಸಾಚಾರ ತುಂಬಾ ಕಡಿಮೆ. ಆದರೆ ಇರುವಂತಹ ದೃಶ್ಯಗಳ ಮಾನಸಿಕ ಪರಿಣಾಮ ಯಾವುದೇ ಭೀಕರ ರಕ್ತಪಾತದ ಆಘಾತವನ್ನೂ ನಾಚಿಸುವಂಥಾದ್ದು. 'ಮ್ಯಾಕ್‌ಬೆತ್'ನಲ್ಲಿ ಆಗುವ ಹಾಗೆಯೇ 'ತಮಸ್'ನಲ್ಲೂ ಮೌಲ್ಯಗಳ ಹಿನ್ನಡೆಯನ್ನು ತೋರಿಸಲಾಗಿದೆ. ಓರ್ವ ಹಿಂದೂ ದಂಪತಿಗಳು ತಮ್ಮ ಕಳೆದುಹೋದ ಮಗಳು ಸಿಕ್ಕಾಗ ಅವಳನ್ನು ಹಿಂದಿರುಗಿ ಕರೆಸಿಕೊಳ್ಳಲು ಸಿಗುವ ಎಲ್ಲ ಸಹಾಯಗಳನ್ನು ನಿರಾಕರಿಸುತ್ತಾರೆ. ಮುಸಲ್ಮಾನರು ಅವಳಿಗೆ ಮಾಂಸ ತಿನ್ನುವಂತೆ ಒತ್ತಾಯಿಸಿರಬಹುದು, ತಮ್ಮ ಮನೆಗೆ ಬರಲು ಅವಳು ಅಯೋಗ್ಯಳು ಎಂದು ಭಾವಿಸುತ್ತಾರೆ. ಮುಸ್ಲಿಂ ಬಂಡುಕೋರರಿಂದ ತಪ್ಪಿಸಿಕೊಂಡು ಶೀಲ ಕಾಪಾಡಿಕೊಳ್ಳಲು ಬಾವಿಗೆ ಹಾರಿ ಪ್ರಾಣ ಕಳೆದುಕೊಂಡ ಮಹಿಳೆಯ ದುಃಖತಪ್ತ ಪತಿ, ಅವಳ ಕೈಯಲ್ಲಿದ್ದ ಚಿನ್ನದ ಬಳೆಗಳನ್ನು ಪಡೆದುಕೊಳ್ಳಲು ನಿರಾಶ್ರಿತರ ಶಿಬಿರದ ಅಧಿಕಾರಿಗೆ ಲಂಚ ಕೊಡುತ್ತಾನೆ. ಇಂತಹ ಕೃತ್ಯಗಳಿಗೆ ಹೋಲಿಸಿದಾಗ ರಕ್ತದಾಹಿ ದೊಂಬಿಯ ಹಿಂಸಾಚಾರ ಸಪ್ಪೆಯಾಗಿ ತೋರಬಹುದು.

ವಿಚ್ಛಿನ್ನತೆ, ಅವ್ಯವಸ್ಥೆ, ನಿರಾಕರಣೆ ಇವೇ ಕೇಂದ್ರ ವಸ್ತುವಾಗಿದ್ದು, ಮೌಲ್ಯಗಳು ಶಂಕಿತವಾಗಿ, ಮಾನವೀಯತೆ ಅವಮಾನಿತವಾಗಿ ತೋರಿಸುವ 'ತಮಸ್,' ತನ್ನನ್ನು ತಾನು ಒಂದು ಮಹತ್ವದ, ಅಂತೆಯೆ ಜವಾಬ್ದಾರಿಯುತ ಕಲಾಕೃತಿ ಎಂದು ಹೇಗೆ ಸಮರ್ಥಿಸಿಕೊಳ್ಳುತ್ತದೆ?

ಈ ಸಂದರ್ಭದಲ್ಲಿ ಕಲಾವಿದನ-ನಿರ್ದೇಶಕನ–ಉದ್ದೇಶ ನಿರಾಕರಣೆ ಮತ್ತು ಅರಾಜಕತೆಯ ವಿಚಾರವನ್ನು ಹೇಳುವುದು. ಆತ ತನ್ನ ಮೌಲ್ಯ ಸಾಮಗ್ರಿಯನ್ನು ತೆಗೆದುಕೊಂಡು ಅದನ್ನು ಒಂದು ಕಲಾಕೃತಿಯಾಗಿ, ಅನನ್ಯ ಕ್ರಿಯಾತ್ಮಕತೆಯ ಒಂದು ಸಿನಿಮಾ-ಸಾಕ್ಷ್ಯವಾಗಿ ಪರಿವರ್ತಿಸಿದ್ದಾನೆ. 'ತಮಸ್' ಪ್ರಸ್ತುತಪಡಿಸಿರುವುದು ಇತಿಹಾಸದ ಬರಿಯ ಪುನರ್‌ವರದಿಯನ್ನಲ್ಲ; ಬದಲಿಗೆ ಆ ಅನುಭವದ ಕಲಾತ್ಮಕ ಪುನರ್‌ಸೃಷ್ಟಿಯನ್ನು. ಅದೂ ಭೀತಿಯ ದವಡೆಯಲ್ಲಿ ಮುದುಡಿಕೊಂಡು ಬಿಡುವ ಮಾನವ ದೌರ್ಬಲ್ಯದ ನೆಲೆಯಿಂದಲ್ಲ; ಆತನ ಅಂತಃಸತ್ವದ ದೃಷ್ಟಿಕೋನ

ದಿಂದ ಮಾಡಿದ ಪುನರ್‌ಸೃಷ್ಟಿಯ ಮೂಲಕ. ಈ ಅನುಭವದ ಅಂಶಗಳೇ ಆದ ವಿಚ್ಛಿನ್ನತೆ, ನಿರಾಕರಣೆ, ಮೌಲ್ಯಗಳಹಿನ್ನಡೆ-ಎಲ್ಲವೂ ಒಂದು ಅರ್ಥವತ್ತಾದ ವಿನ್ಯಾಸದಲ್ಲಿ ಕೂಡುವಂತೆ ಮಾಡಲಾಗುತ್ತದೆ. ದುಷ್ಟತನವನ್ನು ಎತ್ತಿ ತೋರಿಸಿದೆ; ಆದರೆ ನಿಖರ ವ್ಯಾಖ್ಯಾನ, ನಿರೂಪಣೆ ಮತ್ತು ಅರ್ಥವಿವರಣೆ ಮೂಲಕ ಅದರ ಮೇಲೆ ಗೆಲುವನ್ನೂ ಸಾಧಿಸಲಾಗಿದೆ. ನಿಹಲಾನಿ ತಾವು ಪ್ರತಿಪಾದಿಸಿದ ಅವ್ಯವಸ್ಥೆಯನ್ನೂ ಒಂದು ಕಲಾಕೃತಿಯ ಶಿಸ್ತಿಗೆ ಅಳವಡಿಸಿದ್ದಾರೆ.

'ತಮಸ್'ನ ಅಂತರ್ಗರ್ಭದಲ್ಲಿರುವ ಅನುಭವ ನಮಗೆ ಎಲ್ಲ ಕಾಲಕ್ಕೂ ಮಹತ್ವವಾದದ್ದು. ಇಂದಿನ ಕಾಲಕ್ಕಂತೂ ಅದು ಹೆಚ್ಚು ಪ್ರಸ್ತುತ. ಈ ಅನುಭವದ ಅರಿವನ್ನು ರಾಷ್ಟ್ರೀಯ ಪ್ರಜ್ಞೆಯ ಒಂದು ಭಾಗವನ್ನಾಗಿಸಿದ್ದಕ್ಕಾಗಿ ನಾವು ನಿಹಲಾನಿಯವರಿಗೆ ಋಣಿಯಾಗಿರಬೇಕು.

'ತಮಸ್' ಚಿತ್ರಕ್ಕೆ ಆಧಾರ ಅದೇ ಹೆಸರಿನ ಕಾದಂಬರಿ. ಆದರೆ ನಿಹಲಾನಿಯವರ ಅದರ ಮೇಲಿನ ಅವಲಂಬನೆ ಬರೀ ಮೇಲ್ಪದರದ ವಿವರಗಳಿಗಷ್ಟೆ ಸೀಮಿತವಾಗಿದೆ ಎನ್ನಬಹುದು. ಭಿಷಮ್ ಸಾಹ್ನಿಯವರು ತಮ್ಮ ಕಾದಂಬರಿಯಲ್ಲಿ ಪಾತ್ರಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ, ತುಂಬ ಪರಿಣಾಮಕಾರಿಯಾದ ಘಟನೆಗಳನ್ನು ನಿರೂಪಿಸಿದ್ದಾರೆ. ಆದರೂ ಚಿತ್ರವೀಕ್ಷಣೆಯಿಂದ ಉಂಟಾಗುವ ಪರಿಣಾಮದ ಒಂದಂಶವೂ ಕೃತಿ ವಾಚನದಿಂದ ಆಗುವುದಿಲ್ಲ. ಹೀಗೆ ಹೇಳುವಾಗ ನಾನು ದೃಶ್ಯ ಮಾಧ್ಯಮದ ಹೆಚ್ಚುಗಾರಿಕೆ ಕುರಿತು ಹೇಳುತ್ತಿಲ್ಲ.

ಸಾಹ್ನಿಯವರ ಕಾದಂಬರಿಯಲ್ಲಿ ಒಂದು ಸಮಗ್ರತೆ ಕಂಡು ಬರುವುದಿಲ್ಲ. ಕಾದಂಬರಿಯ ಕಥಾವಸ್ತುವೇ ಅದನ್ನು ಸಾಧಿಸಲಿ ಎಂದು ಅವರ ನಿರೀಕ್ಷೆಯಾಗಿದೆ. ನಿಹಲಾನಿಯವರು ಇದನ್ನ ಚಲನಚಿತ್ರ ಮಾಡಿದಾಗ ಹಲವಾರು ಕಲಾತ್ಮಕ ನಿಯಂತ್ರಣಗಳ ಮೂಲಕ ಅದರಲ್ಲಿ ಬಿಗಿಯನ್ನು ಸಾಧಿಸಿದ್ದಾರೆ. ಆಕ್ರಮಣಕಾರಿ ದೌಷ್ಟ್ಯದ ಒಟ್ಟು ಭಾವಕ್ಕೆ ಒತ್ತುಕೊಡುವ ವಾತಾವರಣವನ್ನು ಯಶಸ್ವಿಯಾಗಿ ಸೃಷ್ಟಿಸಿದ್ದಾರೆ. ಸೃಜನಶೀಲ ಬೆಳಕು ವಿನ್ಯಾಸ, ಕೆಲವು ಉತ್ಕೃಷ್ಟವಾದ ಸಿನಿಮೀಯ ಪರಿಣಾಮಗಳಿಂದಾಗಿ ಚಿತ್ರದ ಸಾವಯುವ ಸಮ್ಯಕ್ತತೆ ಸಾಧಿತವಾಗಿವೆ.

ಸಾಹ್ನಿ ಮಾಡುವ ಹಾಗೆ ನಿಹಲಾನಿಯವರು ತಮ್ಮ ಅಪಾತ್ರಗಳಪರಾಧಿತನದ ಬಗ್ಗೆ ಆಡಿಕೊಳ್ಳುವುದಿಲ್ಲ. ದುರ್ಬಲವಾದ ಸಂದರ್ಭಗಳನ್ನು ಸೃಷ್ಟಿಸುವುದಿಲ್ಲ ಕ್ಷಮೆಯಾಚಿಸುವುದಾಗಲೀ ಸಮರ್ಥನೆ ನೀಡುವುದಾಗಲೀ ಮಾಡುವುದಿಲ್ಲ. ಸೃಜನಶೀಲ ಕಲ್ಪನೆಯಿಂದ ಚಿತ್ರನಿರ್ದೇಶಕ ತನ್ನ ಪಾತ್ರಗಳಲ್ಲಿ ರಕ್ತ-ಮಾಂಸ ತುಂಬಿ

ಜೀವ ನೀಡುತ್ತಾನೆ. ಕೆಲವನ್ನು ಬಿಟ್ಟರೆ ಉಳಿದೆಲ್ಲ ಪಾತ್ರಗಳು ಶುದ್ಧ ಸಂವೇದನೆಯ ಗುಚ್ಛಗಳು. ನತ್ಥುವಿನ ಒರಟು ಹೊರಕವಚದ ಒಡಲಲ್ಲಿ ಹೆಂಡತಿ ಕುರಿತಾದ ಅಮಿತವಾದ ಪ್ರೀತಿ ಅಡಗಿರುತ್ತದೆ. ಎಳೆಯ ಹರೆಯದ ಮುಗ್ಧ ಹುಡುಗಿ ಕರ್ಮೊ ಸಮಯ ಬಂದಾಗ ಪ್ರಬುದ್ಧವಾದ ಪ್ರೀತಿಯನ್ನೂ ತೋರಬಲ್ಲಳು. ಹರ ನಾಂಸಿಂಗ್ ಇತರರನ್ನು ನಂಬುವ ರೀತಿ, ಹೆಂಡತಿ ಕುರಿತಾದ ಆತನ ಅನುರಾಗ ಎರಡೂ ಹೃದಯಸ್ಪರ್ಶಿ, ತೇಜಾ ಸಿಂಗನ ಮುಖದ ಮೇಲೆ ತನ್ನ ಕೋಮಿನವರ ಕುರಿತಾದ ಕಾಳಜಿ ಅಚ್ಚೊತ್ತಿದಂತಿರುತ್ತದೆ. ಬಕ್ಷೀಜಿ (ಎ.ಕೆ.ಹಾನ್‌ಗಲ್) ತನ್ನ ಉದ್ವೇಗದಲ್ಲಿ ವಿವೇಚನೆಯನ್ನು ಮರೆಯುತ್ತಾನೆ. ರಜ್ಜೊನ ಅನಿಶ್ಚಿತತೆ, ರಣ ಬೀರನ ದಾರಿ ತಪ್ಪಿದ ಬದ್ಧತೆ,ಜರ್‌ನೈಲ್ ಸಿಂಗನ ಭಾವಾತಿರೇಕ-ನಿಹಲಾನಿಯವರ ಪಾತ್ರಗಳು ತಮ್ಮದೇ ಆದ ಜೀವಂತಿಕೆಯನ್ನು ಪಡೆದಿವೆ.

ಪರಿಪೂರ್ಣ ಪಾತ್ರಗಳು, ಉತ್ತಮ ಛಾಯಾಗ್ರಹಣ, ವನರಾಜ್ ಭಾಟಿಯಾರ ಗುಂಗು ಹತ್ತಿಸುವ ಸಂಗೀತ (ಚಿತ್ರದ ಒಂದು ಅತ್ಯಮೂಲ್ಯ ಅಂಶ), ಬಿಗಿ ನಿರೂಪಣೆ, ಎಲ್ಲದಕ್ಕೂ ಹೆಚ್ಚಾಗಿ ಭಾವನೆಗಳನ್ನು ಸರಳೀಕರಿಸುವುದರಲ್ಲಿ ಅಲ್ಲ, ಬದುಕಿನ ಮುಖ್ಯ ದ್ವಂದ್ವಗಳಿಗೆ ಸುಲಭ ಪರಿಹಾರಗಳನ್ನು ಕಂಡುಕೊಳ್ಳುವಂಥ ಸತರ್ಕಚಿಂತನೆಯಿಂದ ಸಾಧಿತವಾಗುವ ಅತೀವ ನಿಯಂತ್ರಣದಿಂದಾಗಿ 'ತಮಸ್' ಅತ್ಯಂತ ಉತ್ಕೃಷ್ಟ ಸೃಜನಾತ್ಮಕತೆಯನ್ನು ಮೆರೆಯುತ್ತದೆ.

ಚಿತ್ರದ ಕೊನೆಯಲ್ಲಿ ಕರ್ಮೊಗೆ ಮಗು ಹುಟ್ಟುತ್ತದೆ. ಇದರ ಉದ್ದೇಶ"........ ನಂತರ ಎಲ್ಲರೂ ಬಹಳ ಕಾಲ ಸುಖವಾಗಿದ್ದರು" ಎಂದು ಅಜ್ಜಿ ಕತೆ ತರಹ ಹೇಳುವುದಲ್ಲ. ಇಲ್ಲಿ ಇರುವ ಸಂದೇಶವೆಂದರೆ ಸುಖಾಂತವಾದುದೆಲ್ಲವೂ ಸುಖಕರವಾದುದಲ್ಲ ಎಂಬುದು. ಏಕೆಂದರೆ ನವಜಾತ ಶಿಶುವಿನ ಅಳು 'ಅಲ್ಲಾ ಹು ಅಕ್ಬರ್' ಮತ್ತು 'ಹರ ಹರ ಮಹಾದೇವ್' ಎಂಬ ಘೋಷಣೆಗಳ ಅಬ್ಬರದಲ್ಲಿ ಬೆರೆತು ಹೋಗುವುದನ್ನು ನೋಡುತ್ತೇವೆ. ಆದರೆ ಬದುಕೆಂದರೆ ಇದೇ ಅಲ್ಲವೇ-ಏಕಕಾಲಕ್ಕೆ ಪವಿತ್ರ ಹಾಗು ಪಾಷಂಡ; ಬರ್ಬರ ಆದರೂ ಕೋಮಲ; ಮೂಲಭೂತವಾಗಿ ಕ್ರೂರ, ಆದರೂ ಜೀವಿಸುವ ಎಲ್ಲ ಸಾಧ್ಯತೆಗಳನ್ನು ತೆರೆದಿಟ್ಟಿರುವಂತಹದು? ●

(ಕೃಪೆ: "ಡೀಪ್ ಫೋಕಸ್")

ಕನ್ನಡಕ್ಕೆ : ಎಂ. ಅಬ್ದುಲ್ ರೆಹಮಾನ್ ಪಾಷಾ

ಹೊಸ ಓದು

ಅಧ್ಯಯನ (ವಿಮರ್ಶಾ ಲೇಖನಗಳು) ಲೇ : ರಾಜೇಂದ್ರ ಚೆನ್ನಿ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ಪುಟ:130 + 8, ಬೆಲೆ : ರೂ. 17

ರಾಜೇಂದ್ರ ಚೆನ್ನಿಯವರ ಒಂಭತ್ತು ವಿಮರ್ಶಾ ಲೇಖನಗಳ ಸಂಕಲನ 'ಅಧ್ಯಯನ" ಸಾಹಿತ್ಯಪ್ರಿಯರಿಗೆ ಸಂತೋಷವನ್ನುಂಟುಮಾಡುವ ಗ್ರಂಥ. ಈ ಸಂಕಲನದಲ್ಲಿ ಮೊದಲನೆಯ ಲೇಖನವನ್ನೊಂದನ್ನು ಬಿಟ್ಟರೆ ಉಳಿದೆಲ್ಲವೂ ಆಧುನಿಕ ಕನ್ನಡ ಸಾಹಿತ್ಯಕ್ಕೆ–ವಿಶೇಷವಾಗಿ ಕಾದಂಬರೀ ಪ್ರಭೇದಕ್ಕೆ ಸ್ಪಂದಿಸುತ್ತವೆ. ಐದು ಲೇಖನಗಳು ಕನ್ನಡದ ಪ್ರಮುಖ ಕಾದಂಬರಿಗಳನ್ನು –ಕುವೆಂಪು ಅವರ ಕಾದಂಬರಿಗಳು, "ಮೃತ್ಯುಂಜಯ", "ಮುಸ್ಸಂಜೆಯ ಕಥಾ ಪ್ರಸಂಗ", "ಚಿದಂಬರ ರಹಸ್ಯ" ಮತ್ತು "ಕುಸುಮಬಾಲೆ" ಇವುಗಳನ್ನು ವಿಶ್ಲೇಷಿಸುತ್ತವೆ ಮತ್ತು ವ್ಯಾಖ್ಯಾನಿಸುತ್ತವೆ. ಉಳಿದ ಪ್ರಬಂಧಗಳು ಮಹಾದೇವಿಯಕ್ಕನವರ ವಚನಗಳು, ಬೇಂದ್ರೆಯವರ ಕಾವ್ಯ, ಮಾಸ್ತಿಯವರ ಸಣ್ಣಕತೆಗಳು ಮತ್ತು ಶಿವಪ್ರಕಾಶರ "ಮಹಾ ಚೈತ್ರ"ವನ್ನು ಕುರಿತಾಗಿವೆ.

ಮೊದಲು ಚೆನ್ನಿಯವರ ವಿಮರ್ಶಾಪದ್ಧತಿಯನ್ನು ಕುರಿತೊಂದೆರಡು ಮಾತುಗಳು ಸೂಕ್ತ. ಚೆನ್ನಿಯವರು ಒಂದು ಕೃತಿಯನ್ನು ವಿಶ್ಲೇಷಿಸುವ ಮೊದಲು ಆ ವಿಶ್ಲೇಷಣೆಗೆ ಪೂರಕವಾಗಿ ಒಂದು ಯೋಗ್ಯ ವೈಚಾರಿಕ ಚೌಕಟ್ಟನ್ನು ಹಾಕಿಕೊಳ್ಳುತ್ತಾರೆ. ಕೃತಿಯ ಅಧ್ಯಯನ ಮತ್ತು ಮೌಲ್ಯಮಾಪನ ಇವೆಲ್ಲವೂ ಆ ಚೌಕಟ್ಟಿನೊಳಗಡೆಯೇ ನಡೆಯುವುದರಿಂದ ಇವರ ವಿಮರ್ಶೆಗೆ ಒಂದು ಶಿಸ್ತು ದೊರಕುತ್ತದಲ್ಲದೆ ಇವರು ವ್ಯಕ್ತಪಡಿಸುವ ವಿಚಾರಗಳನ್ನು ಕುರಿತು ಪೂರ್ಣ ಸಂವಾದವೊಂದು ಸಾಧ್ಯವಾಗುತ್ತದೆ. ಅಲ್ಲದೆ, ಒಂದು ಕೃತಿಯನ್ನು ವಿಶ್ಲೇಷಿಸುವ ಮೊದಲು ಅದೇ ಲೇಖಕನ/ಲೇಖಕಿಯ ಇತರ ಕೃತಿಗಳ ಸ್ಥೂಲ ಪರಿಚಯವನ್ನೂ ಮಾಡಿಕೊಡುವುದರಿಂದ ಮುಖ್ಯ ಕೃತಿಯ ಅಧ್ಯಯನಕ್ಕೆ ಒಂದು ಸಾರ್ಥಕ ಪಾರ್ಶ್ವಭೂಮಿಯೂ ಒದಗುತ್ತದೆ. ಎಲ್ಲದಕ್ಕಿಂತ ಅತಿ ಮುಖ್ಯವಾಗಿ ಒಂದು ಕೃತಿಯ ವಿಶ್ಲೇಷಣೆಯ

ಮೂಲಕ ಒಂದು ಖಚಿತ ವಾದವನ್ನು ಇವರು ತರ್ಕಬದ್ಧವಾಗಿ ಮಂಡಿಸುವುದರಿಂದ ಇವರ ವಿಮರ್ಶೆ ಕೇವಲ ವೈಯಕ್ತಿಕ ಅನಿಸಿಕೆಗಳಾಗದೇ ಅಥವಾ ತಮ್ಮ ಯಾವುದೋ ಒಂದು ಮತವನ್ನು ಮಂಡಿಸಲು ಕೃತಿ ಕೇವಲ ನೆಪವಾಗದೆ ಕೃತಿಯ ಗಂಭೀರ ಅಧ್ಯಯನ ಸಾಧ್ಯವಾಗುತ್ತದೆ.

ಈಗ ಚೆನ್ನಯ್ಯನವರು ತಮ್ಮ ವಿವಿಧ ಲೇಖನಗಳಲ್ಲಿ ಮಂಡಿಸಿರುವ ಮುಖ್ಯ ವಿಚಾರಗಳನ್ನು ಸ್ಥೂಲವಾಗಿ ಗಮನಿಸೋಣ. "ಮಹಾದೇವಿಯಕ್ಕ ಮತ್ತು ವಚನ ಸಂಪ್ರದಾಯ" ಲೇಖನದಲ್ಲಿ ವಚನ ಸಂಪ್ರದಾಯದಲ್ಲಿ ಕಂಡು ಬರುವ ಮುಖ್ಯ ಕರ್ಷಣ ಹೇಗೆ ವೀರಶೈವ ಧರ್ಮದಲ್ಲಿಯೇ ಮೂಲತಃ ಅಡಗಿದೆಯೆಂದು ಗುರುತಿಸಿ ('ಇರುವಿಕೆ' ಮತ್ತು 'ಆಗುವಿಕೆ' ಇವುಗಳಿಂದುಂಟಾಗುವ ಕರ್ಷಣ) ಅನಂತರ ವಚನ ಸಂಪ್ರದಾಯದಲ್ಲಿ ಒಡೆದು ಕಾಣುವ ಮಹಾದೇವಿಯಕ್ಕನ ಸ್ವಂತಿಕೆಗೆ ಮುಖ್ಯ ಕಾರಣ "ಅಕ್ಕ ತನ್ನ ಹೆಣ್ತನವನ್ನೇ ತೀಕ್ಷ್ಣವಾದ ಸ್ವೋಪಜ್ಞತೆಯಿಂದ ಬಳಸಿಕೊಂಡದ್ದು" (ಪು.7) ಎಂದು ವಾದಿಸುತ್ತಾರೆ. "ಬೇಂದ್ರೆ ಕಾವ್ಯ"ದಲ್ಲಿ ಬೇಂದ್ರೆ ಒಂದು ಜನಾಂಗದ ಭಾವಜೀವವನ್ನು ಭಾಷೆಯಲ್ಲಿ ಮೂರ್ತಗೊಳಿಸುವ "ಆರ್ಫಿಕ್ ಪೊಯಟ್" ('Orphic Poet') ಎಂದು ಗುರುತಿಸಿ ಬೇಂದ್ರೆ ಕಾವ್ಯದಲ್ಲಿ ಹೇಗೆ ಮೊದಲಿನಿಂದಲೂ-ಕೇವಲ ಎರಡನೇ ಹಂತದ ಪದ್ಯಗಳಲ್ಲಲ್ಲ-ಲೌಕಿಕ-ಅಲೌಕಿಕದ ಸಾಮರಸ್ಯ ಕಂಡು ಬರುತ್ತದೆ ಎಂದು ಚರ್ಚಿಸುತ್ತಾರೆ. "ಕುವೆಂಪು ಮತ್ತು ಕನ್ನಡ ಕಾದಂಬರಿ" ಪ್ರಬಂಧ ಕುವೆಂಪು ಅವರ ಕಾದಂಬರಿಗಳಲ್ಲಿನ ನಿರೂಪಕನ ಅಸ್ತಿತ್ವದ ಸಾಹಿತ್ಯಕ- ಸಾಮಾಜಿಕ ಮಹತ್ವವನ್ನು ಗುರುತಿಸಲು ಪ್ರಯತ್ನಿಸುತ್ತದೆ. ಶ್ರೇಣೀಕೃತ ಸಮಾಜ ವ್ಯವಸ್ಥೆಯ ಸ್ವರೂಪವನ್ನು ಬಯಲುಗೊಳಿಸುವುದರೊಂದಿಗೆ ನಾಯಕ ಮೆನೆಪ್ಟಾನ ಮಾನಸಿಕ ಬೆಳವಣಿಗೆಯನ್ನು ದಾಖಲಿಸುವುದೂ ನಿರಂಜನರ "ಮೃತ್ಯುಂಜಯ" ಕೃತಿಯ ಸಾರ್ಥಕ ಉದ್ದೇಶ ಎಂದು "ನಿರಂಜನರ ಮೃತ್ಯುಂಜಯ" ಲೇಖನದಲ್ಲಿ ಸ್ಪಷ್ಟಪಡಿಸುತ್ತಾರೆ. ಹೀಗೆ ತಮ್ಮ ಪ್ರತಿಯೊಂದು ಲೇಖನದಲ್ಲಿಯೂ ವಸ್ತುನಿಷ್ಠರಾಗಿ, ಸತರ್ಕಿಕವಾಗಿ, ಕೃತಿಸಾಕ್ಷ್ಯದ ಆಧಾರದ ಮೇಲೆ ಪ್ರತಿಯೊಂದು ಕೃತಿಯ ಮುಖ್ಯ ಪದರುಗಳನ್ನು ಚರ್ಚಿಸಿ ಆ ಚರ್ಚೆಯ ಆಧಾರದ ಮೇಲೆ ಕೃತಿಯ ಮೌಲ್ಯಮಾಪನ ಮಾಡುತ್ತಾರೆ. ಆದರೆ ಇಲ್ಲಿ ಒತ್ತಿ ಹೇಳಬೇಕಾದ ಮಾತೆಂದರೆ ಚೆನ್ನಯ್ಯನವರಿಗೆ ಮುಖ್ಯವಾಗುವುದು ಕೃತಿಯ ವಿಶ್ಲೇಷಣೆ ಹಾಗೂ ಅರ್ಥವ್ಯಾಪಕತೆಯೇ ವಿನಃ ಕೇವಲ ಮೌಲ್ಯಮಾಪನವಲ್ಲ-ಅದು ಆನುಷಂಗಿಕ ಅಷ್ಟೇ.

ನನ್ನ ದೃಷ್ಟಿಯಲ್ಲಿ ಉತ್ತಮ ವಿಮರ್ಶೆಯ ಒಂದು ಮುಖ್ಯ ಗುಣ ಅದು ಒಂದು ಕೃತಿಯನ್ನು ಕುರಿತು ಯಾವ ಹೊಸಬೆಳಕನ್ನು ಚೆಲ್ಲುತ್ತದೆ-ನಮಗಿದು

ವರಿಗೂ ಗೋಚರಿಸದಿದ್ದ ಕೃತಿಯ ಯಾವ ವೈಶಿಷ್ಟ್ಯವನ್ನು ವಿಮರ್ಶೆ ನಮಗೆ ಕಾಣಿಸುತ್ತದೆ ಎನ್ನುವುದು. ಈ ದಿಕ್ಕಿನಲ್ಲಿ ಚೆನ್ನಿಯವರ "ಅಧ್ಯಯನ" ಬಹಳಷ್ಟು ಸಫಲವಾಗಿದೆ. ಈ ಹೇಳಿಕೆಗೆ "ಮಾಸ್ತಿ ಕಥೆಗಳು" ಲೇಖನ ಒಂದು ಉತ್ತಮ ಉದಾಹರಣೆ. ಮಾಸ್ತಿಯವರು ತಮ್ಮ ಕಥೆಗಳಲ್ಲಿ ಸೂಚಿಸಿರುವ ಜೀವನದೃಷ್ಟಿ ಮತ್ತು ಪ್ರತಿಪಾದಿಸುವ ಮೌಲ್ಯಗಳು ಅವರಿಗೆ ಭಾರತೀಯ ಸಂಪ್ರದಾಯದಿಂದ ಮತ್ತು ಸಂಸ್ಕಾರದಿಂದ ಕೊಡಲ್ಪಟ್ಟವು ಎಂಬ ವಾದವನ್ನು ತಿರಸ್ಕರಿಸುತ್ತಾ, ತಮ್ಮ ವಾದಕ್ಕೆ ಪೂರಕವಾಗಿ "ವೆಂಕಟಿಗನ ಹೆಂಡತಿ" ಕತೆಯನ್ನು ವಿಶ್ಲೇಷಿಸುತ್ತಾ ಚೆನ್ನಿ ಹೀಗೆ ಹೇಳುತ್ತಾರೆ: "ಇಲ್ಲಿ ಕುತೂಹಲ ಹುಟ್ಟಿಸಬೇಕಾದ ಸಂಗತಿಯೆಂದರೆ ಇಂತಹ ನೈತಿಕ ನಿರ್ಧಾರದ ಕ್ಷಣಗಳಲ್ಲಿ ಮಾಸ್ತಿಯವರ ಪಾತ್ರಗಳು ತೀರಾ ವ್ಯಕ್ತಿನಿಷ್ಠವಾಗಿ ನಡೆದುಕೊಳ್ಳುವುದು....ಸಾಂಪ್ರದಾಯಿಕ ಸಂವೇದನೆಯ ಮಿತಿಯಲ್ಲಿಯೇ ಬರೆಯುತ್ತಾರೆಂದು ನಾವಂದುಕೊಳ್ಳುವ ಮಾಸ್ತಿಯವರ ಎಲ್ಲಾ ಮುಖ್ಯ ಕತೆಗಳಲ್ಲಿಯೂ ಈ ನಿರ್ಧಾರಕ ಕ್ಷಣಗಳಲ್ಲಿ ಪಾತ್ರಗಳು ಇನ್ಯಾವ ಹೊರಗಣ ಚೌಕಟ್ಟನ್ನೂ ಅವಲಂಬಿಸದೇ ಒಂದು ರೀತಿಯಲ್ಲಿ ಮುಕ್ತರಾಗುತ್ತಾರೆ, ಆಗತಾನೇ ತಮ್ಮಲ್ಲಿ ಏನನ್ನೋ ಗುರುತಿಸಿಕೊಂಡವರಾಗುತ್ತಾರೆ, ತಮ್ಮ ಸ್ವಭಾವ ಸಂಸ್ಕಾರದ ಬೆಳಕಿನಲ್ಲಿ ಮಾತ್ರ ಈ ನೈತಿಕ ನಿರ್ಧಾರಗಳನ್ನು ಕೈಕೊಳ್ಳುವುದೇಕೆ?" (ಪು. 38). ಮಾಸ್ತಿಯವರ ಕತೆಗಳನ್ನು ಕುರಿತಾದ, ಅವರ ವ್ಯಕ್ತಿನಿಷ್ಠ ಮೌಲ್ಯಗಳು ಮತ್ತು ಸಾಂಪ್ರದಾಯಿಕತೆ ಇವುಗಳ ಕರ್ಷಣವನ್ನು ಕುರಿತಾದ ಇಂತಹ ವಿಶ್ಲೇಷಣೆ ಚೆನ್ನಿಯವರ ಅತ್ಯಂತ ಮೌಲಿಕ ಕೊಡುಗೆಯೆಂದು ನನಗೆ ತೋರುತ್ತದೆ. ಅಷ್ಟೇ ಮೌಲಿಕ ಅವರು "ಮುಸ್ಸಂಜೆಯ ಕಥಾಪ್ರಸಂಗ" ವನ್ನು ಕುರಿತು ಹೇಳುವ ಈ ಮಾತುಗಳು: "ವ್ಯಂಗ್ಯ, ಜಾಣತನ ಕೂಡಾ ಒಂದು ಮುಸುಕಾಗಿದ್ದು ಕಾದಂಬರಿಯ ನಿಜವಾದ ಉದ್ದೇಶ 'ಬದುಕಿನ ತುಡಿತ'ವನ್ನು ಶೋಧಿಸುವುದೇ ಆಗಿದೆ. ...ಕಾದಂಬರಿಯ ಒಂದು ಕೊರತೆಯೆಂದರೆ ಜಾಣತನ ಮತ್ತು ಬದುಕಿನ ತುಡಿತಗಳು ವಿವಿಧ ಪಾತ್ರಗಳಿಗೆ ಬೇರೆಬೇರೆಯಾಗಿ ಅನ್ವಯವಾಗುವುದರಿಂದ ಇವೆರಡರ ಮಧ್ಯೆ ಇರಬೇಕಾದ ಬೆಸುಗೆ ಇಲ್ಲದಂತಾಗಿದೆ" (ಪು 84) ಹೀಗೆಯೇ 'ಕುಸುಮಬಾಲೆ'ಯಲ್ಲಿ ಕಾಣಬರುವ 'ಮೋಟಿಫ್'ಗಳ ವಿನ್ಯಾಸ ಮತ್ತು "ಮಹಾಚೈತ್ರ" ನಾಟಕದ ಸಂಕೀರ್ಣ ಬಂಧ ಇವುಗಳನ್ನು ಕುರಿತು ಚೆನ್ನಿಯವರು ಆಳವಾಗಿ ಸ್ವಂತಿಕೆಯಿಂದ ಚರ್ಚಿಸುತ್ತಾರೆ.

ಈ ಸಂಕಲನದಲ್ಲಿನ ಎರಡು ದೀರ್ಘ ಪ್ರಬಂಧಗಳೆಂದರೆ "ಬೇಂದ್ರೆ ಕಾವ್ಯ: ಕೆಲವು ಟಿಪ್ಪಣಿಗಳು" ಮತ್ತು "ಕುವೆಂಪು ಮತ್ತು ಕನ್ನಡ ಕಾದಂಬರಿ". ಇವೆರಡೂ ಲೇಖನಗಳು ನನ್ನ ದೃಷ್ಟಿಯಲ್ಲಿ ಸೋತಿವೆಯಾದ್ದರಿಂದ ಇವುಗಳ ಸೋಲಿಗೆ ಕಾರಣವನ್ನು ಚರ್ಚಿಸುವುದರ ಮೂಲಕ "ಅಧ್ಯಯನ"ದ ಇತಿ–ಮಿತಿಗಳನ್ನು ಗುರುತಿಸ

ಬಹುದು. ಸಾಧಾರಣವಾಗಿ ಹೇಳಬಹುದಾದರೆ ಚೆನ್ನಿಯವರಲ್ಲಿ ನವ್ಯವಿಮರ್ಶೆಯ ಉತ್ತಮ ಗುಣಗಳೆಲ್ಲಾ ಇವೆ. ಆದರೆ ಚೆನ್ನಿಯವರು ಈ ಸಂಕಲನದಲ್ಲಿ ನವ್ಯ ವಿಮರ್ಶೆಯ ಹರಹನ್ನು ವಿಸ್ತರಿಸಲು ಇತರ ಮಾರ್ಗಗಳನ್ನು–ಮುಖ್ಯವಾಗಿ ಸಾಮಾಜಿಕ ಮತ್ತು ಮನೋವೈಜ್ಞಾನಿಕ–ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಾಣುತ್ತದೆ. ಇಂತಹ ಪ್ರಯತ್ನ ಅನೇಕ ಕಡೆ ವೈಚಾರಿಕವಾಗಿ ವಿರೋಧಾಭಾಸಕ್ಕೆಡೆ ಗೊಡುತ್ತದೆಂದು ಕಾಣುತ್ತದೆ, ಉದಾಹರಣೆಗೆ ಬೇಂದ್ರೆಯವರ ಕಾವ್ಯವನ್ನು ಕುರಿತಾದ ಇವರ ಲೇಖನವನ್ನು ನೋಡೋಣ. ಈ ಲೇಖನದ ವೈಚಾರಿಕ ಬೆನ್ನೆಲುಬು ಎಲಿಯಟ್ ಪರಂಪರೆಯ ಬಗ್ಗೆ, 'ಕ್ಲಾಸಿಕ್' ಬಗ್ಗೆ ("What is the classic?") ಮತ್ತು 'ಕಾವ್ಯದ ಮೂರು 'ಧ್ವನಿ'ಗಳ ಬಗ್ಗೆ ("Three Voices of doetry") ಮಾಡಿರುವ ವಿಚಾರಗಳು.ಎಲಿಯಟ್ ಪರಂಪರೆಯನ್ನು ಕುರಿತು ಹೇಳುವ ವಿಚಾರಗಳನ್ನು ಒಪ್ಪಿಕೊಳ್ಳುವುದೇ ಕಷ್ಟ (ಎಲಿಯಟ್‌ನ ದೃಷ್ಟಿಯಲ್ಲಿ ಹೋಮರ್‌ನಿಂದ ಇದುವರೆಗಿನ ಯೂರೋಪ್ ಕಾವ್ಯದಲ್ಲಿ ಒಂದೇ ಒಂದು ಪರಂಪರೆ ಇರುವಂತೆ ತೋರುತ್ತದೆ). ಹಾಗಿರುವಾಗ ಚೆನ್ನಿಯವರು ಎಲಿಯಟ್‌ನ ವಿಚಾರಗಳನ್ನು ಏನೂ ಪ್ರಶ್ನಿಸದೆ ಒಪ್ಪಿಕೊಂಡು ಆ ವಿಚಾರಗಳೊಡನೆ ಹೆರಲ್ಡ್ ಬ್ಲೂಮ್‌ನ ವಿಚಾರಗಳನ್ನು ಸೇರಿಸಿ (ಒಬ್ಬ ಮಹಾನ್ ಕವಿಯ ಪ್ರಭಾವವನ್ನು ತಪ್ಪಿಸಿಕೊಳ್ಳಲು ಅನಂತರದ ಕವಿಗಳು ಕಂಡುಕೊಳ್ಳುವ ಉಪಾಯಗಳು: ನೋಡಿ ಬ್ಲೂಮ್‌ನ *Anxiety of Influence* ಅವುಗಳನ್ನು ಸಮಾಜಶಾಸ್ತ್ರಗಳ ಪರಿಕಲ್ಪನೆಯಾದ 'ಜೆಶ್ಚರ್' (jesture) ನೊಡನೆ ಬೆರೆಸುತ್ತಾರೆ. ಇದರ ಪರಿಣಾಮವೇನೆಂದರೆ ಒಂದು ಸ್ಥಿರ ತಾತ್ವಿಕ ನೆಲೆಯಿಲ್ಲದೆ ಪ್ರಬಂಧ ಜಾಳುಜಾಳಾಗುತ್ತದೆ. ಅಷ್ಟೇ ಅಲ್ಲದೆ ಇನ್ನೂ ಅನೇಕ ಪರಿಕಲ್ಪನೆಗಳನ್ನು "ಪೊಯಟ್ರಿ ಅಫ್ ಏಟ್" ಮತ್ತು "ಪೊಯಟ್ರಿ ಅಫ್ ಎನರ್ಜಿ" ಹಾಗೂ "ಆರ್‌ಫಿಕ್ ಪೊಯಟ್" ಇತ್ಯಾದಿ—ವಿನಾಕಾರಣ ಪ್ರಬಂಧದಲ್ಲಿ ಬಳಸಿರುವಂತೆ ಕಾಣುತ್ತದೆ. "ವಿನಾಕಾರಣ" ಏಕೆಂದರೆ ಇವೆಲ್ಲಾ ಅತ್ಯಂತ ಅಸ್ಪಷ್ಟ ಪರಿಕಲ್ಪನೆಗಳು ಮತ್ತು ಅವುಗಳ ಮೂಲಕ ಬೇಂದ್ರೆಯವರ ಕಾವ್ಯವನ್ನು ಕುರಿತು ಯಾವ ಹೊಸ ಮಾತನ್ನೂ ಹೇಳಲು ಸಾಧ್ಯವಾಗಿಲ್ಲ. (ಯಾರದೋ ಕಾವ್ಯವಿರಲಿ ಅದನ್ನು 'ಶಕ್ತಿಯ ಕಾವ್ಯ, ಸಂಕಲ್ಪ ಬಲದ ಕಾವ್ಯ ಅಲ್ಲ' ಎಂದು ಹೇಗೆ ಹೇಳಲು ಸಾಧ್ಯ? ಕವಿ ಬರೆಯಬೇಕೆಂದು ಕಾಗದ-ಲೇಖಣಿ ತೆಗೆದುಕೊಂಡು ಕೂತಾಗಲೇ ಅಲ್ಲಿ ಸಂಕಲ್ಪ ಬಂತು. ಮತ್ತು 'ಶಕ್ತಿ', 'ಎನರ್ಜಿ'–ಓದುಗರ ಸ್ಪಂದನಶಕ್ತಿಯನ್ನವಲಂಬಿಸಿದೆ. ನನಗನ್ನಿಸುತ್ತದೆ ಎಲಿಯಟ್, ಡನಲ್ಡ್ ಡೇವಿ ಇಂತಹವರ ವಿಚಾರಗಳನ್ನು ಆದಷ್ಟು ಕಮ್ಮಿ ಉಪಯೋಗಿಸುವುದು ಭಾರತೀಯ ವಿಮರ್ಶೆಗೆ ಆರೋಗ್ಯಕರವೆಂದು.

ಹೀಗೆಯೇ "ಕುವೆಂಪು ಮತ್ತು ಕನ್ನಡ ಕಾದಂಬರಿ" ಲೇಖನವೂ ಅಸ್ಪಷ್ಟ ಅಮೂರ್ತ ವಿಚಾರಗಳಿಂದ ಸೋಲುತ್ತದೆ. "Flanbert ನನ್ನು ಮಾದರಿಯಾಗಿಟ್ಟುಕೊಂಡ ನವ್ಯ ವಿಮರ್ಶೆ ಇಲ್ಲಿ ನಿಷ್ಪ್ರಯೋಜಕವಾಗುತ್ತದ" (ಪು. 51)— ಯಾವ ದೇಶದ, ಯಾವ ಕಾಲದ 'ನವ್ಯ ವಿಮರ್ಶೆ' ಫ್ಲಾಬೇರ್‌ನನ್ನು ಮಾದರಿಯಾಗಿಟ್ಟುಕೊಂಡಿದೆ? "ಸಮಷ್ಟಿಯ ಬದುಕಿನಲ್ಲಿ ತಾದಾತ್ಮ್ಯತೆ ಹೊಂದುವುದರಿಂದ ಕಾವ್ಯಹುಟ್ಟುತ್ತದೆ, ಆದರೆ ದೂರ ನಿಂತು ವಿಶ್ಲೇಷಿಸುವುದು ಸಾಧ್ಯವಾದಾಗ ಕಾದಂಬರಿ ಹುಟ್ಟುತ್ತದೆ" (ಪು. 46) — ಈ ಮಾತುಗಳನ್ನು ಸಮರ್ಥಿಸಿಕೊಳ್ಳಲು ಪ್ರಾಯಶಃ ಚೆನ್ನಿಯವರಿಗೂ ಈಗ ಸಾಧ್ಯವಾಗಲಾರದು. ಎಲ್ಲದಕ್ಕಿಂತ ಮುಖ್ಯವಾಗಿ ಕುವೆಂಪುರವರ ಕಾದಂಬರಿಗಳಲ್ಲಿನ 'ನಿರೂಪಕ'ನ ಪಾತ್ರವನ್ನು ವಿಶ್ಲೇಷಿಸಲು ಚೆನ್ನಿಯವರು ಮಧ್ಯಮವರ್ಗದ ತತ್ವ ಮತ್ತು ಮೌಲ್ಯಗಳು, ನಾಡಿನ 'ಸಾಂಸ್ಕೃತಿಕ ಅನಿವಾರ್ಯತೆ', 'ಹೇಳುವುದು ಮತ್ತು ತೋರಿಸುವುದು' – ಇವೆಲ್ಲವನ್ನೂ ತರಬೇಕಾದ ಕಾರಣವಿರಲಿಲ್ಲ. (ಅಂದರೆ ಈ ಕೃತಿಗಳಲ್ಲಿ ನಿರೂಪಕನ ಕಾರ್ಯದ ಬಗ್ಗೆ ಮಾತ್ರ ಚೆನ್ನಿಯವರು ಮೌಲಿಕವಾಗಿ ಯೋಚಿಸುತ್ತಾರೆ.) ಪ್ರಥಮ ಪುರುಷ ನಿರೂಪಣೆ (Third Person Narration) ಕಾದಂಬರಿ ಪ್ರಭೇದದ ಸಹಜ ನಿರೂಪಣ ತಂತ್ರಗಳಲ್ಲೊಂದು. ಅದರ ಸಮರ್ಥನೆಗೆ ಚೆನ್ನಿಯವರು ಮಾಡುವಷ್ಟು ಬೌದ್ಧಿಕ ಕಸರತ್ತು ಅವಶ್ಯಕವಿರಲಿಲ್ಲ.

ಒಟ್ಟಿನಲ್ಲಿ ರಾಜೇಂದ್ರ ಚೆನ್ನಿಯವರ "ಅಧ್ಯಯನ" ಕನ್ನಡ ವಿಮರ್ಶಾ ಸಾಹಿತ್ಯಕ್ಕೆ ಒಂದು ಮೌಲಿಕ ಕೊಡುಗೆ. ಇವರ ಚಿಂತನಾಕ್ರಮ ಪ್ರಬುದ್ಧ ಮತ್ತು ಭಾಷೆ ಪ್ರೌಢ. ಯುರೋಪಿನ ವಿಮರ್ಶಕರ ಪ್ರಭಾವದಿಂದ ಇವರು ಎಷ್ಟು ಹೊರಬರುತ್ತಾರೋ ಅಷ್ಟೂ ಇವರ ಸಾಹಿತ್ಯಚಿಂತನೆ ಮತ್ತು ಅಧ್ಯಯನ ಶ್ರೀಮಂತವಾಗುತ್ತದೆ.

—ಸಿ.ಎನ್. ರಾಮಚಂದ್ರನ್

ಶ್ರಾವಣ ಮಧ್ಯಾಹ್ನ (ಕವನ ಸಂಕಲನ) ಲೇ: ಜಯಂತ ಕಾಯ್ಕಿಣಿ, ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು ಪು: 70 + vi ಬೆಲೆ: ರೂ. 15

ನಲವತ್ತೈದು ಕವನಗಳಿರುವ ಜಯಂತ ಕಾಯ್ಕಿಣಿಯವರ ಈ ಮೂರನೇ ಸಂಕಲನದಲ್ಲಿ ಅವರ ಕವನ ಕೌಶಲ ಪಕ್ವವಾಗುತ್ತ ಬಂದಿರುವುದು ಕಾಣುತ್ತದೆ, ಹೌದು. ಇವು ಕೌಶಲಪೂರ್ಣ ನಾಗರಿಕ ಕವನಗಳು. "ಸಪ್ತ ಸ್ವರಗಳ ಸಪ್ತ ಸೂಕ್ಷ್ಮ ವೀಣೆ" ಅನ್ನುವ ಮಾತು ಒಂದು ಕವನದಲ್ಲಿ ಬರುತ್ತದೆ. ಇಲ್ಲಿರುವ ಕವನ

ಗಳು ಪ್ರತಿಮಾತ್ಮಕ ಕವನಗಳು. ಅವುಗಳ ರೀತಿಯನ್ನು ಈ ಮಾತು ವಿವರಿಸುತ್ತದೆ: ರೈಲು, ಲಾರಿ, ಆಸ್ಪತ್ರೆಗಳು ಮುಖ್ಯ ಸ್ವರಗಳಾಗಿ, ಸಸ್ಯ, ಪರ್ವತ, ಪಕ್ಷಿ, ಸಮುದ್ರಗಳು ಗೌಣಸ್ವರಗಳಾಗಿ ಇಡೀ ಸಂಕಲನದ ತುಂಬ ಕೇಳುತ್ತವೆ. ಇವನ್ನು ಹಿಡಿಯುವ, ಸಾಮಾನ್ಯವಾಗಿ, ವಿರಾಮವಿಲ್ಲದ ವಾಕ್ಯಗಳು ಒಂದರೊಡನೊಂದು ಕಲೆಸಿಕೊಂಡು ಸಂದಿಗ್ಧಗಳನ್ನು ಹುಟ್ಟು ಹಾಕುತ್ತವೆ. ವಾಕ್ಯವಾಕ್ಯಗಳನ್ನು ಹಿಡಿದಿಡುವ ತರ್ಕ ಖಾಸಗಿಯಾದ ಕನಸಿನ ತರ್ಕದ ಥರ ಇರುತ್ತದೆ. ಲೋಕವು ಮನಸ್ಸಿನಲ್ಲಿ ಮೂಡಿಸಿದ ಭಾವನೆಯನ್ನು ಪ್ರತಿಮೆಯಾಗಿಸುತ್ತ ಅರ್ಥ ಮಾಡಿಕೊಳ್ಳುವ ಪ್ರಯತ್ನ ಕಾಣುತ್ತದೆ. ತರ್ಕ ಬಿಡಿಸುತ್ತ, ವಾಕ್ಯಗಳನ್ನು ಬೇರೆ ಬೇರೆ ಥರ ಜೋಡಿಸಿಕೊಳ್ಳುತ್ತ, ಪ್ರತಿಮೆಯನ್ನು ನಮ್ಮ ಮನಸ್ಸಲ್ಲೂ ಮೂಡಿಸಿಕೊಳ್ಳುತ್ತ ಹೋದರೆ ನಮಗೆ ಕವಿಯ ಮನಸ್ಸು, ಕವಿಯ ಮನಸ್ಸಿನ ವ್ಯಾಪಾರ ಸಿಗುತ್ತದೆ. ಆದೇ ಕಾವ್ಯ ಅನ್ನುವುದು ನನಗೆ ಕಷ್ಟ. "ನನ್ನ ಹಿತ್ತಿಲು ನನ್ನ ತೋಟ ಎನ್ನುತ್ತ ಈ ಜಗತ್ತಿಗೂ ಒಳಪಡುತ್ತೇನೆ" ಅಂತ ಒಂದು ಮಾತು ಬರುತ್ತದೆ. ಈ ಸಂಕಲನದ ಯಾವುದೇ ಕವನ ಓದಿದರೂ ಮುಖ್ಯವಾಗುವುದು, ನಾನು ಎಂಬ ಕವಿ ವ್ಯಕ್ತಿ, ನಾನು ಎಂಬ ಮನಸ್ಸು — "ನಿಮಿತ್ತ", "ಸಂದಣಿ" "ಸರಪಳಿ" ಇಂಥ ಪದ್ಯಗಳು ಜ್ಞಾಪಕ ಬರುತ್ತವೆ. ಹಾಗಂತ ಇಲ್ಲಿ ವೈವಿಧ್ಯವೇ ಇಲ್ಲ ಅಂತಲ್ಲ. ನಾಗರಿಕ ಮದುವೆಯ ಅಸಹ್ಯವನ್ನು ಲಘುಮನೋವೃತ್ತಿಯಿಂದೆಂಬಂತೆ ಚಿತ್ರಿಸುವ "ಮದುವೆ ಮಂಟಪದಲ್ಲಿ"; ಶೀರ ಬೇರೆ ಬೇರೆ ಥರ ರೂಪಕಗಳನ್ನು ಜೋಡಿಸುತ್ತಾ "ಪರ್ವತ" ವನ್ನು ಅರ್ಥಮಾಡಿಕೊಳ್ಳುವ ಕವನ; ಮಗುವಿನೊಡನೆ ಸತ್ತ ತಾಯಿಯ ಚಿತ್ರ ಕಟ್ಟುವ "ಸುಪ್ರಭಾತ" ಇಂಥ ಕವನಗಳು ನೆನಪಾಗುತ್ತವೆ. ಆದರೆ ಈ ಎಲ್ಲ ನಲವತ್ತೈದೂ ಕವನಗಳ ಹಿಂದೆ ಗುಪ್ತಗಾಮಿನಿಯಾಗಿ ಹರಿಯುವ ಆಶಯಗಳು ಎರಡು. ಒಂದು, "ಋತುಗಳು ಒಡ್ಡೋಲಗ ತೆಗೆವ ಅರಣ್ಯ" ಮತ್ತು "ಕೆಂಪು ಸಿಗ್ನಲು ಕಂಡು ಗಕ್ಕನೆ ನಿಂತ ರಾಶಿ ಪಾದಚಾರಿ"ಗಳನ್ನೊಳಗೊಂಡ ನಗರದ ನಡುವಿನ ವೈರುಧ್ಯ; ಎರಡು, ಬಾಲ್ಯದ ನೆನಪು ಮತ್ತು ನಗರವಾಸ. ಹಾಗೆ ನೋಡಿದರೆ ಇಡೀ ಸಂಕಲನವೇ "ನಗರದಲ್ಲಿ ನಾನು" ಅಂತ ವಿವರಿಸಬಹುದಾದ ಕವನಗಳ ಮೊತ್ತ. ಆದಕ್ಕೇ ನನಗನ್ನಿಸಿದ್ದು ಇದು ಕೌಶಲಪೂರ್ಣ ನಾಗರಿಕ ಕವನಗಳು ಅಂತ. ಇಡೀ ಸಂಕಲನದಲ್ಲಿ ನನಗೆ ಇಷ್ಟವಾದ ಪದ್ಯಗಳೆಂದರೆ "ಸಹವಾಸ", "ಈಗ", "ಪರವಶ" ಮತ್ತು "ಎಕ್ಸ್‌ಟ್ರಾ ಚಟ್ನಿ". ನಗರವಾಸದಲ್ಲಿ ವ್ಯಕ್ತಿವಿಶಿಷ್ಟತೆ ಕಳೆದು ಹೋಗುತ್ತೆ, ನಿಜ. ಆದರೆ ಬೌದ್ಧಿಕ ಮತ್ತು ಅದರಿಂದ ಪ್ರಾಪ್ತವಾಗುವ ವಿಶಿಷ್ಟ ಪ್ರಬುದ್ಧತೆಗೆ ನಗರವಾಸವೇ ಬೇಕೋ ಏನೋ. "ಬಳಸಿದ ಮಾತುಗಳ ದಣಿವು" ತುಂಬಿದ, ಆದರೆ ವಿಶ್ವಕೋಶ ಎಸ್ಟರಿಕ್ಸ್ ಇತ್ಯಾದಿ

ಗಳು ಲಭ್ಯವಾಗುವುದು ಅರ್ಥ ಪೂರ್ಣವಾಗುವುದೂ ನಗರದ ನಾಗರಿಕತೆಯಲ್ಲೇ ಅಲ್ಲವೇ? ಆದರೆ ನಗರದ್ದು "ಪ್ರತಿ ಮುಂಜಾನೆ ಸುಟ್ಟ ನಾಣ್ಯದಂತೆ" ಪಳಿವ ದಿನಗಳು. ಇದಕ್ಕೆ ವಿರುದ್ಧವಾದದ್ದು ಕವಿ ಕಷ್ಟಪಟ್ಟು ಸಂಪಾದಿಸಿ ಸಾಕುವ "ಅಘನಾಶಿನಿ ತಡಿಯು ಗಟಗಟ ಹಸಿರು ತೂರೆದು" ಬೆಳೆದ ಒಳಸಸ್ಯ. ಸಹಜ ಪ್ರಕೃತಿ - ನಾಗರಿಕತೆ, ಕೃತ-ಕನಾಗರಿಕತೆಗಳ ಸಹವಾಸದ ಪದರುಗಳನ್ನು ಚಿತ್ರ ಚಿತ್ರಗಳಾಗಿ ಸಹವಾಸ ಬಿಡಿಸಿಡುತ್ತದೆ. ಒಂದು ಕ್ಷಣದ ಬದುಕಿನ ಅನೇಕ ಚಿತ್ರಗಳನ್ನು ಬಿಡಿಸುತ್ತ ತಟ್ಟನೆ ಜೀವ ವಿರೋಧಿ ಕ್ರೌರ್ಯದ ಸಾಕ್ಷಾತ್ಕಾರ ವಾಗುವಂತೆ ಮಾಡುತ್ತದೆ. "ಪರವಶ" ಕವನವು ಮನೆಯ ಸ್ತಬ್ಧತೆಯ ನಿಶ್ಶಬ್ದ ಸೊಗಸಿನ ವಿಮಂಚನೆಯ ಚಿತ್ರಗಳನ್ನು ಬಿಡಿಸುತ್ತದೆ. "ಎಕ್ಸ್‌ಟ್ರಾ ಚಟ್ನಿ" ನಗರದ ಹೋಟೆಲ್ ಮಾಣಿಗಳ ಬದುಕಿನ ಚಿತ್ರಗಳನ್ನು ನೀಡುತ್ತದೆ.

ಹೀಗೆಲ್ಲ ಹೇಳುತ್ತಿರುವಾಗ ಮತ್ತೆ ಮತ್ತೆ ಚಿತ್ರ ಎಂಬ ಮಾತು ಬಂದಿದೆ ಯಲ್ಲವೆ. ಈಗ ಅನ್ನಿಸುತ್ತಿದೆ, ಈ ಸಂಕಲನದಲ್ಲಿರುವುದು ಸಿನಿಮಾ ರೀತಿಯ ಕವನಗಳು. ನಾಗರಿಕ ಕವಿ ಸಿನಿಮಾದ ಹಾಗೆ ಮಾತ್ರ ಕವನ ಬರೆಯಬಲ್ಲ ಅನ್ನಿಸುತ್ತೆ. ಜಾನಪದ ಕವಿ ನಿರೂಪಣೆ ಮಾತ್ರ ಮಾಡಬಲ್ಲ. "ಧ್ವನಿ ಹಿಡಿದೇ ಬಂದಿದ್ದಾವೆ. ದೃಶ್ಯಗಳು ನನ್ನ ಮೈಗೆ ಹರಿದು" ಅಂತ ಜಯಂತ ಕಾಯ್ಕಿಣಿ ಒಂದು ಕಡೆ ಇಲ್ಲಿ ಹೇಳಿದ್ದಾರೆ. ಸಿನಿಮಾದ ಮಾಧ್ಯಮವೇ ಹಾಗೆ. ಸಿನಿಮಾ ಮಾಡುವವನಿಗೆ ಇರುವ ಅಭಿವ್ಯಕ್ತಿಸ್ವಾತಂತ್ರ್ಯ ನೋಡುವವನಿಗೆ ಇರಲ್ಲ. ಜಾನಪದ ನಿರೂಪಣೆ ಹಾಗೆ: ಹೇಳುವವನಿಗೆ ಸ್ವಾತಂತ್ರ್ಯ ಇಲ್ಲವೆ ಇಲ್ಲ ಅನ್ನುವಷ್ಟು ಕಡಿಮೆ. ಕೇಳುವವನಿಗೆ ಅಪಾರವಾದ ಸ್ವಾತಂತ್ರ್ಯ. ಸಿನಿಮಾ ಮತ್ತು ಭಾಷೆ - ಇವೆರಡು ದಾರಿಗಳಲ್ಲಿ ಸೃಷ್ಟಿಕರ್ತನಿಗೂ ಸಹೃದಯನಿಗೂ ಇರುವ ಸ್ವಾತಂತ್ರ್ಯದ ಚರ್ಚೆ ಸದ್ಯ ಬೇಡ.

ಅತ್ಯುತ್ತಮ ಕವನದ ಅನುಭವವನ್ನು ವಿಮರ್ಶೆಯ ಪರಿಭಾಷೆ ವಿವರಿಸ ಲಾರದು. ಇಲ್ಲಿ ನಾನು ಅಸ್ಪಷ್ಟವಾಗಿ ಮಾತಾಡಿದರೆ ವಿಮರ್ಶಕರು ಕ್ಷಮಿಸಲಿ. ಕವಿ "ಇಲ್ಲ"ವಾಗಿರುವ ಕವನ ನನಗೆ ಅತ್ಯುತ್ತಮ ಕವನ ಅನ್ನಿಸುತ್ತೆ. ವ್ಯಕ್ತಿತ್ವದ ಅಭಿವ್ಯಕ್ತಿಗಾಗಿ ಕವನ ಅನ್ನುವುದು ನನಗೆ ಅಷ್ಟು ದೊಡ್ಡದು ಅನ್ನಿಸುವುದಿಲ್ಲ. ಕಾವ್ಯವನ್ನ ವಿವರಿಸಲು ಆಗಬಾರದು. ಆದರೆ 'ನವ್ಯ' ಅಂತ ಗುರುತಿಸುವ ಕವನಗಳು, ಸಾಮಾನ್ಯವಾಗಿ ಕವನವನ್ನ ಮೀರಿ ನಿಂತ ಅಥವ ಕವಿತೆಗೆ ಅಡ್ಡನಿಂತ, ಅಥವ ಕವಿತೆಯೊಳಗೆಲ್ಲ ತಾನೇ ತುಂಬಿಕೊಂಡ 'ಅಹಂಕಾರದ' ಕವನಗಳಾಗಿ ಬಿಡುತ್ತವೆ. ತರ್ಕಪ್ರಮುಖ ರಚನೆಗಳು ಎಷ್ಟೇ ಕಷ್ಟವಾದರೂ ತೊಡಕು ಬಿಡಿಸಿ ಸರಳವಾಗಿ ವಿವರಿಸುವ ಚಟಕ್ಕೆ ಆಹ್ವಾನಕೊಡುತ್ತವೆ.

ಜಯಂತ ಕಾಯ್ಕಿಣಿಯವರ ಕವನಗಳಲ್ಲಿ ನನಗೆ ಕಂಡ ಮುಖ್ಯ ಅಂಶವೊಂದಿದೆ. ಅವರು ಯಾವುದೇ ವಿಷಯ ತೆಗೆದುಕೊಂಡು ಬರೆಯಲಿ ಭಾಷೆ ಒಂದೇ ಥರ ಇರುತ್ತೆ ಅನ್ನಿಸುತ್ತೆ. ಕೆಲವು ನಿರ್ದಿಷ್ಟ ಪ್ರತಿಮೆಗಳನ್ನ ಮತ್ತೆ ಮತ್ತೆ ಬಳಸುತ್ತ ತಮ್ಮ ಕಾವ್ಯಲೋಕದ ನಿರ್ಮಾಣಕ್ಕೆ ಈಗ ತೊಡಗಿದ್ದಾರೆ ಅನ್ನಿಸುತ್ತೆ. ತಮ್ಮ ವಿಶಿಷ್ಟ ವೈಯಕ್ತಿಕ ಅಭಿವ್ಯಕ್ತಿ ಮುಖ್ಯವಾದ್ದರಿಂದ ಓದುಗನಿಂದ ತೀವ್ರವಾದ ಏಕಾಗ್ರತೆಯನ್ನ ಇಲ್ಲಿನ ಕವನಗಳು ಅಪೇಕ್ಷಿಸುತ್ತವೆ. ಸುಂದರ ಶಬ್ದ ಚಿತ್ರಗಳೂ ಆಗುತ್ತವೆ ಚಿತ್ರದಲ್ಲಿ ಧ್ವನಿ ಇರುತ್ತದೋ? ಸಿನಿಮಾ 'ಧ್ವನಿ' ವಿರೋಧಿ. ನಾಗರಿಕ ಕವನ ಕೌಶಲಪೂರ್ಣ ಚಲನಚಿತ್ರ. ಕವಿ ಜಯಂತ ಕಾಯ್ಕಿಣಿ ಸಂಪೂರ್ಣವಾಗಿ ಕವನಕ್ಕೆ ಶರಣಾಗತರಾದರೆ ನಾಗರಿಕ ಕವನಕ್ಕೆ ಹೊಸ ರೂಪ, ದಾರಿ, ಸಿಗಬಹುದು,

— ಓ ಎಲ್. ನಾಗಭೂಷಣಸ್ವಾಮಿ

ಕುಸುಮಬಾಲೆ (ಕಾದಂಬರಿ) ಲೇ: ದೇವನೂರು ಮಹಾದೇವ ಪ್ರ: ಸಂಗಾತಿ ಸಹಕಾರ ಪ್ರಕಾಶನ, ಬೆಂಗಳೂರು-40 ; ಪು : ಬೆಲೆ : ರೂ. 12

ಭಾರತ ಅನೇಕ ಶತಮಾನಗಳನ್ನು ಏಕಕಾಲದಲ್ಲಿ ಬದುಕುತ್ತಿರುವ ದೇಶ. ಹಾರಾಡುತ್ತಿರುವ ತರಬೇತಿ ವಿಮಾನಗಳ ಕೆಳಗೆ ಸೈಕಲ್ ರಿಕ್ಷಾಗಳೂ, ಕೈಗಾಡಿಗಳೂ ಇಲ್ಲಿ ಸಾಮಾನ್ಯ. ವೈಯಕ್ತಿತ ನಂಬಿಕೆಗಳಲ್ಲೂ ಅಷ್ಟೆ. ಶತಮಾನಗಳ ನಂಬುಗೆ ವಿಜ್ಞಾನದ ಜೊತೆ ಜೊತೆಯಲ್ಲೇ ಇದೆ.

ನಮ್ಮ ಸಂಸ್ಕೃತಿಯ ಒಟ್ಟು ಕಲಾ ಸಂದರ್ಭದಲ್ಲೂ ಇಂಥದ್ದೊಂದು ವೈಶಿಷ್ಟ್ಯ ಇದೆ. ಅನಕ್ಷರತೆ ಹಾಗೂ ಇನ್ನೂ ಅನೇಕ ಕಾರಣಗಳಿಂದ, ನಮ್ಮ ಸಾಮಾಜಿಕ ಸ್ತರಗಳಲ್ಲ ಪ್ರಬಲವಾದ ಒಂದು ಮೌಖಿಕ ಪರಂಪರೆ ಇದೆ. ಲಿಖಿತ ಪರಂಪರೆಗೆ ಸೇರುವ ಕನ್ನಡ ಕಾದಂಬರಿ ಪ್ರಕಾರ, ತನ್ನ ಶ್ರೇಷ್ಠ ಪ್ರಯತ್ನಗಳಲ್ಲೆಲ್ಲಾ, ನಮ್ಮ ಜನಜೀವನದ ಮೌಖಿಕ ಪರಂಪರೆಯ ಕಲಾ ಸಾಧ್ಯತೆಗಳನ್ನು ಆದಷ್ಟು ಹಿಡಿದಿಟ್ಟು ಕೊಳ್ಳಲು ಪ್ರಯತ್ನಿಸಿದೆ.

ಇಂಥ ಪ್ರಯತ್ನದಲ್ಲಿ ಶ್ರೀ ದೇವನೂರು ಮಹಾದೇವರ 'ಕುಸುಮಬಾಲೆ' ವಿಶೇಷ ಯಶಸ್ಸುಗಳಿಸಿದ ಕೃತಿ. ಈ ಯಶಸ್ಸಿಗೆ 'ಕುಸುಮ ಬಾಲೆ' ಮೌಖಿಕ ಮತ್ತು ಲಿಖಿತ ಪರಂಪರೆಯ ನಡುವಿನ ಗೆರೆ ಅಳಿಸಿದ್ದು ಮಾತ್ರ ಕಾರಣವಲ್ಲ. ಈ ಕೃತಿ ಜಾನಪದ ಮತ್ತು ಅಭಿಜಾತ ಕಲೆಯ ವಿಶೇಷತೆಗಳನ್ನು ಒಟ್ಟಿಗೆ ಹಿಡಿದಿಟ್ಟಿದೆ.

ಇಂಥ ಸಂಭಾವ್ಯತೆ ಪುರಾಣಗಳ ಮೂಲದಲ್ಲಿರುತ್ತದೆ. ಅದು ಯಾವುದೇ ಬದುಕಿನ ಎಲ್ಲಾ ಆಯಾಮಗಳನ್ನೂ ಒಳಗೊಂಡಿರುತ್ತದೆ. ಅದು ವಾಸ್ತವವಾದಿ ತರ್ಕದ ಚೌಕಟ್ಟಿನಿಂದ ತನ್ನನ್ನು ತಾನೇ ಬಿಡುಗಡೆಗೊಳಿಸಿಕೊಂಡಿರುತ್ತದೆ. ಕಾಲದ ಮತ್ತು ಕೃತಿಯೊಳಗಿನ ಅನುಭವ ಪ್ರಪಂಚದ ಸಂದರ್ಭಗಳಿಂದಲೂ ಮುಕ್ತಗೊಳಿಸಿ ಕೊಳ್ಳಬಲ್ಲದಾಗಿದೆ, ಸೃಜನಶೀಲತೆಯ ಅತ್ಯುನ್ನತ ಕಲಾತ್ಮಕತೆಯ ಲಕ್ಷಣಗಳವು.

'ಕುಸುಮ ಬಾಲೆ'ಯಲ್ಲೂ ಹೀಗಾಗುತ್ತದೆ. ಅದರ ಪಾತ್ರಗಳನ್ನೂ ಸಂದರ್ಭಗಳನ್ನೂ, ಕೃತಿಯೊಳಗಿಂದ ಹೊರ ತೆಗೆದರೂ ಅವು ಸ್ವತಂತ್ರ ಅಸ್ತಿತ್ವ ಪಡೆಯ ಬಲ್ಲವು. ಇನ್ನೊಂದು ಸಂದರ್ಭಕ್ಕೂ ಹೊಂದಿಕೊಂಡು, ಇಡಲ್ಪಟ್ಟ ಸಂದರ್ಭವನ್ನೇ ಬೆಳಗಿಸಬಲ್ಲವು. ಆದ್ದರಿಂದಲೇ 'ಕುಸುಮ ಬಾಲೆ'ಯಲ್ಲಿ ಪುರಾಣ ಸಾಧ್ಯತೆಯುಳ್ಳ 'ಮಿತ್' (Myth), ಪ್ರತಿಮೆ, ಪ್ರತೀಕ ಈ ಎಲ್ಲಾ ಸಾಧ್ಯತೆಗಳೂ ಮೇಳವಿಸಿವೆ. ಇದರಿಂದಾಗಿ ಏಕಕಾಲಕ್ಕೆ ದಲಿತ ಬದುಕಿನ ವಿವರ ಮಾನವ ಸ್ವಭಾವದ ಸಹಜತೆ ಬಿಟ್ಟು ಸೇರುತ್ತದೆ.

ದಲಿತ ಬದುಕಿನ ಸಂದರ್ಭದಲ್ಲಿ ಮೂಡಿ ಬರುವ ಒಂದು ಕೃತಿಗೆ ನಮ್ಮ ಪರಿಸ್ಥಿತಿಯಲ್ಲಿ ಸಮಸ್ಯೆಗಳು ಹೆಚ್ಚು. ಅಂದರೆ, ಕೇವಲ ದಲಿತರನ್ನು ಪ್ರತಿಭಟನೆಯ ಏಕಮಾತ್ರ ಹಿನ್ನೆಲೆಯಲ್ಲಿ ಗ್ರಹಿಸಿದರೆ ಉಂಟಾಗುವ ಪ್ರತ್ಯೇಕತೆ(Isolation) ಎಂತಹದ್ದೆಂದರೆ ಇತರರಿಗೆ ಅದೊಂದು ಪ್ರಚಾರ ಪತ್ರದಂತೆ ಕಾಣುವ ಅಪಾಯವಿದೆ. ಅಥವಾ ಕಲೆಯ ಮೂಲ ಸ್ವಭಾವವನ್ನೇ ಮೈಗೂಡಿಸಿಕೊಳ್ಳದೇ ಹೋಗಬಹುದು.

'ಕುಸುಮ ಬಾಲೆ'ಗೆ ಈ ಎರಡು ಸಮಸ್ಯೆಗಳು ಇಲ್ಲದಿರಲು ಕಾರಣ ಅದರ ತಾತ್ವಿಕತೆ ಮತ್ತು ಅನುಸರಿಸಿದ ತಂತ್ರ ನಾವೀನ್ಯತೆ. ದಲಿತ ಅನುಭವದ ಹಿನ್ನೆಲೆಯಲ್ಲೂ ಇರುವ ಮಾನವ ಮನಸ್ಸು ಮತ್ತು ಬದುಕನ್ನು ಎದುರಿಸುವ ಮನುಷ್ಯ ಪ್ರಯತ್ನದ ಅನೇಕ ಮುಖಗಳ ಸಹಜ ಗ್ರಹಿಕೆ, ಇಲ್ಲಿ ಒಟ್ಟು ಕೃತಿಯ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ.

ಕಾದಂಬರಿಯ ಕೊನೆಯಲ್ಲಿ ಬರುವ ಬೊಂಬಾಯಿಯ ವರ್ಣನೆಯಲ್ಲಿ ಚನ್ನನ ಅಪ್ಪನ ಮತ್ತು ಆ ಸಂಬಂಧದ ಸಂಪೂರ್ಣ ಗ್ರಹಿಕೆ ಬಹಳ ನಿರ್ಲಿಪ್ತತೆಯಲ್ಲಿ ಮೂಡಿ ಬಂದಂತೆ ತೋರುತ್ತದೆ. ಆದರೆ ಓದುಗನ ಪ್ರೇರಣ ಭಾವವು ಬೊಂಬಾಯಿ ಅಂದರೆ ಏನೆಂಬುದನ್ನು ತಿಳಿದಂತಹದು. ಇದರಿಂದ ಇಲ್ಲಿ ವ್ಯಂಗ್ಯ (Irony) ಕೃತಿಗೆ ದತ್ತವಾಗುತ್ತದೆ. ಏಕಕಾಲಕ್ಕೆ ಚೆನ್ನನ ಅಪ್ಪನ ಸಹಜತೆಯನ್ನು ಗ್ರಹಿಸುತ್ತದೆ. ಗಾರಸಿದ್ದಮಾವ, ಅವಮಾಸರಂತೆ ಅವನೂ ಈ ವ್ಯವಸ್ಥೆಯಲ್ಲಿ ಹೇಗಾದರೂ ಬದುಕು

ವುದನ್ನು ಕಲಿತುಕೊಂಡವನು. ಆದ್ದರಿಂದ ಚೆನ್ನನ ಅಪ್ಪ ಹೇಳುವುದರಲ್ಲಿ ಅವನು ಕಲ್ಪನೆಯಲ್ಲಿ ಸಂಭ್ರಮಿಸಿದ್ದು ಇರಬಹುದಾದರೂ, ಅದನ್ನವನು ನಿಜಕ್ಕೂ ನೂರಕ್ಕೆ ನೂರು ಸತ್ಯ ನಂಬಿದ್ದಾನೆ ಎಂದು ಹೇಳುವಂತಿಲ್ಲ. ಆದರೆ ಚೆನ್ನನ ಅವ್ವ ಹಾಗಲ್ಲ. ಅಲ್ಲಿನ ಅಂತರಂಗದ ಮುಗ್ಧತೆಯನ್ನು ಓದುಗನ ಬೊಂಬಾಯಿಯ ತಿಳು ವಳಿಕೆಗೆ ಎದುರಾಗಿಟ್ಟು ಆ ಬದುಕಿನ ಒಳಸತ್ಯಗಳನ್ನು ಲೇಖಕರು ಹೊಳೆಯಿಸಿಬಿಡು ತ್ತಾರೆ. ಇಲ್ಲಿಯ ಬರವಣಿಗೆಯಲ್ಲಿ ತನ್ನ ಧಾಟಿಯ ಬಗ್ಗೆ ಲೇಖಕರು ಹೊಂದಿರುವ ಹಿಡಿತ ಉನ್ನತ ಕಲಾಮಟ್ಟದ್ದಾಗಿದೆ.

ಕಾದಂಬರಿಯ ಉದ್ದಕ್ಕೂ ಮೇಲು ಹಾಗೂ ಕೆಳಜಾತಿಗಳ ಗಂಡು ಹೆಣ್ಣುಗಳ ಪರಸ್ಪರ ಲೈಂಗಿಕ ಸಂಬಂಧ ಸಮಾಜದ ನೈತಿಕ ಸಂಬಂಧದ ಕಟ್ಟುಪಾಡುಗಳನ್ನು ಕಡಿದು ಕೂಡಿಕೊಳ್ಳುತ್ತದೆ. ಜಾತಿಯ ಸಂಬಂಧದ ಹಿನ್ನೆಲೆಯಲ್ಲಿ ಲೈಂಗಿಕ ಸಂಬಂ ಧದ ಒಂದು ಕತೆಯನ್ನು ದಲಿತ ಮುಖಂಡ ಬಿ. ಕೃಷ್ಣಪ್ಪನವರಿಗೆ ಕುರಿಯಯ್ಯ ಹೇಳುತ್ತಾನೆ. ಇಲ್ಲಿ ಕೃತಿ ನೀಡುವ ಸಹಜ ಸೂಚ್ಯತೆ (Suggestion) ಪರಿಣಾಮ ಕಾರಿಯಾದ್ದು. ಸಮಾಜ ಹುಟ್ಟಿನಿಂದ ಜಾತಿಯನ್ನು ನಿರ್ಧರಿಸುತ್ತದೆ. ಆದರೆ ಕೃತಿ, ಹುಟ್ಟಿನ ಮೂಲ ಕ್ರಿಯೆಯತ್ತ ಬೊಟ್ಟು ಮಾಡಿ ಜೀವ ಸ್ವಭಾವವನ್ನು ಗೋಚರಿಸುತ್ತದೆ, ಜೀವಮೂಲ ದೃಷ್ಟಿಕೋನ ಸಾಮಾಜಿಕ ದೃಷ್ಟಿಕೋನವನ್ನು ಹೇಗೆ ಪೊಳ್ಳುಗಿಸುತ್ತದೆ ಎಂಬುದನ್ನೂ ಸೂಚಿಸುತ್ತದೆ.

ಇನ್ನೊಂದು ಮಟ್ಟದಲ್ಲಿ, ಸಾಮಾಜಿಕ ದೃಷ್ಟಿಕೋನ ಒಂದೇ ಸಾಧ್ಯತೆ ಅಲ್ಲ. ಅನಿವಾರ್ಯತೆಯಲ್ಲಿ ಮನುಷ್ಯ ಅದನ್ನು ಮೀರುತ್ತಾನೆ ಎಂಬುದನ್ನು ಸೂಚಿಸು ವುದರಿಂದ, ಇಲ್ಲಿನ ಲೈಂಗಿಕ ಸಂಬಂಧಗಳು ಸಾಂಕೇತಿಕ ಅರ್ಥ ವೈಶಾಲ್ಯತೆಯನ್ನೂ ಪಡೆಯುತ್ತದೆ. ಆದರೆ ಸಾಮಾಜಿಕ ಸಂದರ್ಭ ಬಲಹೀನವಾದ್ದೇನೂ ಅಲ್ಲ, ಅದು ಚೆನ್ನನ ಕೊಲೆಯಲ್ಲಿ ತನ್ನ ಅಮಾನವೀಯತೆಯನ್ನು ಮೆರೆಯಬಲ್ಲದು. ಶ್ರೀ ರಾಜೇಂದ್ರ ಚೆನ್ನಿ 'ಕುಸುಮ ಬಾಲೆ' ಬಗ್ಗೆ ಬರೆದ ಲೇಖನದ (ಅವರ 'ಅಧ್ಯ ಯನ' ವಿಮರ್ಶಾ ಸಂಕಲನದಲ್ಲಿದೆ) ಲೈಂಗಿಕ ಸಂಬಂಧದ ವಿಶ್ಲೇಷಣೆಯನ್ನು ಈ ಹಿನ್ನೆಲೆಯಲ್ಲಿ ಗ್ರಹಿಸುವುದು ಕೃತಿಯ ಆಯಾಮಗಳನ್ನು ಇನ್ನಷ್ಟು ಹೆಚ್ಚಿಸಬಲ್ಲದು ಎಂದು ನನ್ನ ಅನ್ನಿಸಿಕೆ.

ಈ ಲೇಖನದ ಮೊದಲಲ್ಲಿ ಸೂಚಿಸಿದ ಅಂಶ: ನಾವು ಅನೇಕ ಶತಮಾನ ಗಳನ್ನು ಏಕಕಾಲದಲ್ಲಿ ಬದುಕುವ ವಿಚಾರ. ನಮ್ಮ ಸಮುದಾಯದ ಸಾಂಸ್ಕೃತಿಕ ಅನುಭವದಲ್ಲಿ ನಮ್ಮ ಶತಮಾನಗಳ ಧಾರ್ಮಿಕ ನಂಬಿಕೆಗಳು, ಜಾತಿ ವ್ಯವಸ್ಥೆ, ಆಚಾರ, ವಿಚಾರಗಳು ಇನ್ನೂ ಏನೇನೋ ಸೇರಿಕೊಂಡಿವೆ. ಬಹಳ ಪ್ರಜ್ಞಾಶೀಲ

ರಾದವರು ಇದರಿಂದ ಬಿಡುಗಡೆಗೊಳ್ಳುವುದು ತಮ್ಮ ವೈಯಕ್ತಿಕ ನೆಲೆಗಳಲ್ಲಿಯೇ. ಇಂಥವರ ಸಂಘಟಿತ ಸ್ವರೂಪ ಅಲ್ಲಲ್ಲಿ ಇಷ್ಟಿಷ್ಟು ಕಾಣಸಿಕೊಳ್ಳಬಹುದಾದರೂ, ಈ ಸಂಘಟನೆ ಪ್ರವರ್ಧಮಾನಕ್ಕೆ ಬಂದಿರುವುದು ಅದರ ಆರ್ಥಿಕ ಹಿನ್ನೆಲೆಗಳ ಸ್ವರೂಪದಲ್ಲೆ. ಈ ಹಿನ್ನೆಲೆಯಲ್ಲಿ ಬಹುಶಃ ನಮ್ಮಲ್ಲಿ ಅಸ್ಪೃಶ್ಯ ಜನಾಂಗಕ್ಕೆ ಮಾತ್ರ ಜಾತಿಯ ನೆಲೆಯಲ್ಲಿ ಸಂಘಟಿತರಾಗುವ ನೈತಿಕ ಹಕ್ಕು ಇರುವುದು.

ಈ ಎರಡೂ ನೆಲೆಗಳನ್ನೂ 'ಕುಸುಮಬಾಲೆ' ತನ್ನ ಕಲಾಗಾರಿಕೆಯಿಂದ ಹೆಣೆದುಕೊಂಡಿದೆ. ಈ ಲೇಖನದ ಮಿತಿಯೊಳಗೆ ಅದರ ವಿವರಣೆ ಅನಗತ್ಯ. ಆಫ್ರಿಕಾದ ವೋಲೆಸೋಯಿಂಕ ಸೂಚಿಸುವ ನಾಲ್ಕನೆ ಆಯಾಮವನ್ನು ಈ ಕೃತಿ ಒಳಗೊಂಡಿದೆ ಎಂದು ಶ್ರೀ ಜಿ. ಎಸ್. ಅಮೂರ (ಪ್ರಜಾವಾಣಿ 4-9-1988) ಸೂಚಿಸಿದ್ದಾರೆ. ಈ ನಾಲ್ಕನೇ ಆಯಾಮದ ಗ್ರಹಿಕೆಯೇ, ದಲಿತ ಬದುಕನ್ನು ಕೇವಲ ಶೋಷಣೆಯ ಏಕಮಾತ್ರ ದೃಷ್ಟಿಕೋನದಿಂದ ಬಿಡುಗಡೆಗೊಳಿಸಿ, ಅದನ್ನೊಂದು ಸಮಗ್ರ ಬದುಕಾಗಿ ಚಿತ್ರಿಸಲು ಸಹಕಾರ ಮಾಡುತ್ತದೆ.

ಈ ಹಿನ್ನೆಲೆಯಲ್ಲಿ 'ಕುಸುಮಬಾಲೆ' ದಲಿತ ಬದುಕಿನ ಒಂದು ಸಂದರ್ಭವನ್ನು, ಅದರ ಇತರ ಎಲ್ಲಾ ಸಂಬಂಧಗಳೊಂದಿಗೆ ನಾಜೂಕಾಗಿ ಕತ್ತರಿಸಿ ಹಾಗೆಯೇ ಎತ್ತಿ ನಮ್ಮ ಮುಂದೆ ಇಟ್ಟಂತೆ ಭಾಸವಾಗುತ್ತದೆ. ಇದು ಯುರೋಪಿನಲ್ಲಿ ಬೆಳೆದ ಕಾದಂಬರಿ ಪ್ರಕಾರವನ್ನು ನಾವು ಈ ತನಕ ಅಳವಡಿಸಿಕೊಂಡು ಅಭ್ಯಾಸ ಮಾಡಿದ ನಮ್ಮ ಗ್ರಹಿಕೆಗೆ ಕೆಲವು ಸಮಸ್ಯೆಗಳನ್ನು ಒಡ್ಡುತ್ತವೆ.

ಈ ಹಿನ್ನೆಲೆಯಲ್ಲೆ, ಶ್ರೀ ಜಿ. ಎಚ್. ನಾಯಕರು ಹೇಳಿದ "ಕಾದಂಬರಿಯೊಳಗಿನ ವಿವರಗಳನ್ನು ಹಿಡಿದಿಡುವ ಕೇಂದ್ರ ಮೊದಲ ಓದಿಗೆ ದಕ್ಕಲಿಲ್ಲ ಅಥವಾ ನಮ್ಮ ವಿಮರ್ಶೆಯ ಮಾನದಂಡಗಳನ್ನೇ ಮರುಪರಿಶೀಲಿಸಬೇಕೋ ಏನೋ" ಎಂಬ ಮಾತುಗಳನ್ನು ಗ್ರಹಿಸಬೇಕು.

'ಕುಸುಮಬಾಲೆ'ಯ ಆಶಯಕ್ಕೊಂದು ಸಮಸ್ಯೆ ಇದೆ. ಚೆನ್ನನ ಅಪ್ಪ, ಅಮ್ಮನಂತಹವರು ಓದು ಬಲ್ಲವರಲ್ಲ. ಯಾರಾದರೂ ಈ ಕೃತಿಯನ್ನು ವಾಚಿಸಲು ಸಾಧ್ಯವಾದರೆ ಮಾತ್ರ ಅವರು ಅರ್ಥಮಾಡಿಕೊಳ್ಳಬಲ್ಲರು. ಅಂತಹ ಸಮುದಾಯ ವಾಚನಕ್ಕೆ ಇಲ್ಲಿಯ ಭಾಷೆ ಹೊಂದಿಕೊಂಡೀತು. ಆದರೆ ಅಲ್ಲಿಯ ಭಾಷೆ ಒಬ್ಬ ಸಾಹಿತ್ಯ ಓದುಗನಿಗೆ, ಇಲ್ಲಿಯ ಅನುಭವಕ್ಕೆ ನಿರೂಪಣೆಯ ಭಾಷಾ ಶೈಲಿ ಹೆಚ್ಚಿಗೆ ಏನು ಸೇರಿಸಿದೆ ಎಂಬ ಅನುಮಾನ ಉಂಟು ಮಾಡೀತು.

ಆದ್ದರಿಂದ ದಲಿತ ಹೋರಾಟದ ಆಶಯದಲ್ಲೇ ಕೃತಿಯನ್ನು ಗ್ರಹಿಸುವುದಾದರೆ, ಚೆನ್ನ ಅಥವಾ ಅವನಂತಹವರು ಅಥವಾ ಅವರ ಬದುಕನ್ನು ಅರ್ಥಮಾಡಿ-

ಕೊಂಡು, ಒಟ್ಟಿಲ್ಲಿ ಅವರ ಪರವಾಗಿ ನಿಲ್ಲಬಲ್ಲವರನ್ನು ಮುಟ್ಟಬಯಸುವ ಕೃತಿ ಇದು.

ಕೃತಿಯ ಕೊನೆಯಲ್ಲೂ ಅಷ್ಟೆ, ಓದುಗನ ಜ್ಞಾನದಲ್ಲಿರುವ ಬೊಂಬಾಯಿಯ ತಿಳುವಳಿಕೆಯಿಂದ ಅಲ್ಲಿನ ವ್ಯಂಗ್ಯ ಹೊಸ ಅರ್ಥಗಳನ್ನು ಪಡಕೊಳ್ಳುವುದು. ಅಂದರೆ, ಕಾದಂಬರಿಯ ವಿವರಗಳನ್ನು ಹಿಡಿದಿಡುವ ಕೇಂದ್ರ ಓದುಗನ ಅರಿವೇ ಆಗಿರುತ್ತದೆ.

ನಮ್ಮ ಮೇಲೆ ಆಧುನಿಕ ಸಾಹಿತ್ಯದ ದೊಡ್ಡ ಪ್ರಭಾವ ಇದೆ. ಒಂದಕ್ಕೊಂದು ನೇರ ಸಂಬಂಧವಿಲ್ಲದೆ ಚೆಲ್ಲಿ ಹರಡಿರುವ ಅನುಭವಗಳನ್ನು ಒಂದು ಸಂಪರ್ಕಕ್ಕೆ ತಂದು ಅವನ್ನೊಂದು ಕೇಂದ್ರದಲ್ಲಿ ಹಿಡಿದಿಟ್ಟುಕೊಡುವ ಕೆಲಸವನ್ನು ಕವಿ ಮಾಡಬೇಕಾಗುತ್ತದೆ ಎಂದು ಟಿ. ಎಸ್. ಎಲಿಯಟ್ ಹೇಳಿದ. ಇದು ಆಧುನಿಕ ಸಾಹಿತ್ಯದಲ್ಲಿ ಅಂಗೀಕಾರವಾಯಿತು. ಅಂದರೆ ಕೃತಿಯ ಸಂವಹನದಲ್ಲೇ ಅದನ್ನು ಹಿಡಿದಿಡುವ ಒಂದು ಕೇಂದ್ರದ ಅನಿವಾರ್ಯತೆಯನ್ನು ಈ ತನಕ ಒಪ್ಪಿಕೊಂಡಿತ್ತು.

ಆದರೆ ಪುರಾಣದ ಮತ್ತು ಜಾನಪದದ ಸಾಧ್ಯತೆಗಳು ಏಕಕೇಂದ್ರ ಸೀಮಿತ ವಲ್ಲ. ಇವೆರಡರ ನಡುವಿನ ಗೆರೆಯನ್ನು ಅಳಿಸಬಯಸುವ ತಂತ್ರವನ್ನು ಉಪಯೋಗಿಸಿದ 'ಕುಸುಮಬಾಲೆ' ಏಕಕೇಂದ್ರ ಸೀಮಿತ ಮಿತಿಯನ್ನು ಕಳಕೊಂಡದು. ಮಾತ್ರವಲ್ಲ, ಹಿಡಿದಿಡಬಲ್ಲ ಕೇಂದ್ರವನ್ನು ಓದುಗನ ಗ್ರಹಿಕೆಯ ಅರಿವಿನ ಹಂತಕ್ಕೂ ವಿಸ್ತರಿಸಿದೆ. ಒಂದು ಸಮುದಾಯದ ಅನುಭವ 'ಮಿತ್'ನ ಸಾಧ್ಯತೆಯನ್ನು ಪಡಕೊಂಡಾಗ ಹೀಗಾಗುತ್ತದೆ. ಪುರಾಣಗಳಲ್ಲಿ ಮೇಲೆ ತೋರುವ ಒಂದು ಸರಳ ಕತೆ ಸಮಗ್ರ ದೇಶದ ಅಸ್ಥಿಪಂಜರದಂತೆ ನಮಗೆ ಭಾಸವಾಗುತ್ತದೆ. ಆದರೆ 'ಕುಸುಮಬಾಲೆ' ಯಲ್ಲಿ ಧೀರೋದಾತ್ತ ಕತೆಯ ಮಟ್ಟಕ್ಕೆ ಏರಲಾರದಷ್ಟು ಸಾಮಾನ್ಯವಾದ ನಿತ್ಯದ ಬದುಕಿನ ಒಂದು ಸಹಜ ಜೀವದ ಕತೆ ಇದೆ. ಅದು ಇತರರ ಬದುಕನ್ನು ಆಧರಿಸುವ ನಾಯಕ ಸ್ಥಾನದಲ್ಲಿಲ್ಲದೆ, ಅವುಗಳೊಡನೆ ಸಮಾನವಾಗಿ (ತುಸು ಮಾತ್ರ ಅನುಕೂಲ ಹೆಚ್ಚಿರುವ) ಸಾಮಾನ್ಯತೆಯಲ್ಲೇ ಬದುಕಬೇಕಾಗಿದೆ. ಅದು ಕೇಂದ್ರ ಹೌದೋ ಹೌದು, ಅಲ್ಲವೋ ಅಲ್ಲ ಎಂಬ ಹಾಗೆ ಬೆರೆತು ಹೋಗಿದೆ.

ಈ ಅಂಶ ಸಾಹಿತ್ಯ ವಿಮರ್ಶೆಯ ತಾತ್ವಿಕ ತಳಹದಿಯ ಮೇಲೆ ಚರ್ಚಿತವಾಗಬೇಕಾದ್ದು. ಆಗ ವಿಮರ್ಶೆಯ ಮಾನದಂಡಗಳನ್ನೇ ನಾವು ಮರು ಪರಿಶೀಲಿಸಬೇಕಾದ ಅಗತ್ಯದ ಬಗ್ಗೆ ಇನ್ನೂ ಹೆಚ್ಚು ಸ್ಪಷ್ಟನೆ ದೊರಕೀತು.

—ಎಸ್. ಆರ್. ವಿಜಯಶಂಕರ

ಸಂಪಾದಕರ ಟಿಪ್ಪಣಿಗಳು

ನೆಲ-ಮುಗಿಲುಗಳ ಸಂಬಂಧ

ಬುದ್ಧ ಬೆಳಕಿನ ಬೆನ್ನು ಹತ್ತಿದ್ದಾನೆ. ಐಹಿಕ ಜೀವನದ ಎಲ್ಲ ಭೋಗಗಳನ್ನು, ಹೆಂಡತಿಯನ್ನು, ಅದೀಗ ಹುಟ್ಟಿದ ಮಗುವನ್ನು, ರಾಜ ವೈಭವವನ್ನು ತೊರೆದು ಕಾಡಿನಲ್ಲಿ ತಪಸ್ಸಿಗೆ ಕುಳಿತಿದ್ದಾನೆ. ದೇಹವನ್ನು ದಂಡಿಸುವ ಕಠೋರ ತಪಸ್ಸೊಂದೆ ತನ್ನ ಸಾಧನೆಯ ಏಕೈಕ ಮಾರ್ಗ ಎಂದು ಬಲವಾಗಿ ನಂಬಿದ ಬುದ್ಧ ದಿನ ದಿನಕ್ಕೆ ತನ್ನ ತಪಸ್ಸನ್ನು ತೀವ್ರಗೊಳಿಸುತ್ತಾನೆ. ಇದು ಎಂಥ ಪರಾಕಾಷ್ಠೆಯನ್ನು ತಲುಪುತ್ತದೆ ಎಂದರೆ ಬುದ್ಧನ ದೇಹ ಕೃಶಗೊಂಡು ಸಾವಿನ ಅಂಚಿಗೆ ಸರಿಯುತ್ತದೆ.

ಬುದ್ಧನಿಗೆ ತಾನು ಕೈಗೊಂಡ ಮಾರ್ಗ ಸರಿಯಾದುದಲ್ಲ ಎನಿಸುತ್ತದೆ. ದೇಹವನ್ನು ದಂಡಿಸಬಾರದು ಎನಿಸುತ್ತದೆ. ಆತ ತಪಸ್ಸು ಮುರಿದು ಹಳ್ಳಿಗೆ ಹೋಗುತ್ತಾನೆ. ಬಾಲೆಯೊಬ್ಬಳು ನೀಡಿದ ಪಾಯಸ ಕುಡಿದು ನೆಮ್ಮದಿಯಿಂದ ಮತ್ತೆ ತನ್ನ ತಪಸ್ಸಿನ ತಾಣಕ್ಕೆ ಬರುತ್ತಾನೆ. ಬೆಳಕಿನ ಹುಡುಕಾಟ ಇನ್ನೊಂದು ಬಗೆಯಲ್ಲಿ ಮುಂದುವರಿಯುತ್ತದೆ. ಇದನ್ನು ತಪ್ಪಾಗಿ ಅರ್ಥೈಸಿಕೊಂಡ ಬುದ್ಧನ ಶಿಷ್ಯರು ಅವನನ್ನು ತೊರೆದು ಹೋಗುತ್ತಾರೆ. ಮುಂದೆ ಕೆಲವೇ ದಿನಗಳಲ್ಲಿ ಬುದ್ಧನಿಗೆ 'ಬೆಳಕು' ಸಿಗುತ್ತದೆ-ಬೋಧಿವೃಕ್ಷದ ಅಡಿಯಲ್ಲಿ.

ಆಗಲೂ ಅಷ್ಟೆ. ಬುದ್ಧನಿಗೆ ದ್ವಂದ್ವ ಶುರುವಾಗುತ್ತದೆ. ತಾನು ಕಂಡ 'ಬೆಳಕ'ನ್ನು, ಸತ್ಯವನ್ನು ಜಗತ್ತಿನೊಂದಿಗೆ ಹಂಚಿಕೊಳ್ಳಬೇಕೇ, ಅಥವಾ ತಾನೊಬ್ಬನೇ ಇಟ್ಟುಕೊಳ್ಳಬೇಕೇ? ತಾಕಲಾಟಕ್ಕೆ ಸಿಕ್ಕ ಮನಸ್ಸು ಕೊನೆಗೆ ಬಂದು ತಲುಪುವುದು 'ಸತ್ಯ'ವನ್ನು ಜಗತ್ತಿನೊಂದಿಗೆ ಹಂಚಿಕೊಳ್ಳುವ ತೀರ್ಮಾನದಲ್ಲಿ. ಮುಂದೆ ಬುದ್ಧ ಸುಮಾರು ನಲವತ್ತೈದು ವರ್ಷಗಳ ಕಾಲ ಮಹಾ ಯಾತ್ರಿಯಾಗಿ ಕಳೆಯುತ್ತಾನೆ. ತಾನು ಕಂಡುಕೊಂಡ ಅರಿವನ್ನು ಜನರೊಂದಿಗೆ ಹಂಚಿಕೊಂಡು ಅವರನ್ನು ಎತ್ತರಕ್ಕೆ ಕೊಂಡೊಯ್ಯಲು ಯತ್ನಿಸುತ್ತಾನೆ.

ಇದು ನೆಲ-ಮುಗಿಲುಗಳನ್ನು ಬೆಸೆಯುವ ಆಶಯ. ಯಾವುದೇ ಶ್ರೇಷ್ಠ ಪ್ರಯತ್ನದ ಹಿಂದೆ ಕೆಲಸ ಮಾಡುವುದು ಇದೇ ಆಶಯ. ಮಾನವ ಜನಾಂಗವನ್ನು ಅತ್ಯುನ್ನತ ಎತ್ತರಕ್ಕೆ ಕೊಂಡೊಯ್ಯಬೇಕೆಂದು ಯತ್ನಿಸುವ ಧರ್ಮ ಆ ಜನಾಂಗದ ಐಹಿಕ ಬದುಕನ್ನು ಕಡೆಗಣಿಸುವುದಿಲ್ಲ.

ಧರ್ಮ, ದೇವರ ಕಲ್ಪನೆ, ತತ್ವಜ್ಞಾನ, ಸಾಹಿತ್ಯ, ವಿಜ್ಞಾನ, ಕಲೆ, ರಾಜಕಾರಣ ಅಥವಾ ಇನ್ನಾವುದೇ ಕ್ಷೇತ್ರದ ಪ್ರಯತ್ನ ತನ್ನ ಶುದ್ಧ ರೂಪದಲ್ಲಿ ನೆಲ-ಮುಗಿಲುಗಳನ್ನು ಬೆಸೆಯುವ ಹಂಬಲಕ್ಕೇ ತುಡಿಯುತ್ತದೆ. ಇಲ್ಲಿ ಕಳಂಕ ಹುಟ್ಟಿಕೊಂಡಾಗ ಮಾತ್ರ ಧರ್ಮ ಜನವಿರೋಧಿಯಾಗುತ್ತದೆ, ದೇವರು ಶೋಷಣೆಯ ರೂಪವಾಗುತ್ತದೆ. ತತ್ವಜ್ಞಾನ ಬೊಗಳೆಯಾಗುತ್ತದೆ ಸಾಹಿತ್ಯ ಬೇರುಗಳಿಲ್ಲದ ಮರವಾಗುತ್ತದೆ. ವಿಜ್ಞಾನ ಕೇವಲ ಗ್ರಹತಾರೆಗಳಲ್ಲಿ ಜೀವಿಗಳನ್ನು ಹುಡುಕುವ ಮಟ್ಟಕ್ಕೇ ಸೀಮಿತವಾಗುತ್ತದೆ. ಹಾಗೆಯೇ ರಾಜಕಾರಣ ಕುಹಕಿಗಳು, ಸುಳ್ಳುಗಾರರು, ಭ್ರಷ್ಟರು ನಡೆಸುವ ಸ್ವಾರ್ಥಸಾಧನೆಯ ಆಟವಾಗಿ ಪರಿಣಮಿಸುತ್ತದೆ.

ಈ ಕಳಂಕ ರೂಪವೇ ಕಾರಣವಾಗಿ ಇವತ್ತು ಮನುಷ್ಯ-ಮನುಷ್ಯನೊಂದಿಗೆ ಸಹಜೀವನ ನಡೆಸಲಾರ. ಬಣ್ಣಗಳು ಅಡ್ಡಿಯಾಗುತ್ತವೆ. ವರ್ಗಗಳು, ಜಾತಿಗಳು, ಗಂಡು-ಹೆಣ್ಣೆಂಬ ಭೇದಗಳು ಅಡ್ಡಿಯಾಗುತ್ತವೆ. ತನ್ನ ನಿಜರೂಪವನ್ನು ಕಳೆದುಕೊಂಡ ಧರ್ಮ ಶೋಷಕನ ಕೈಯಲ್ಲಿನ ಕತ್ತಿಯಾಗುತ್ತದೆ. ಸಹನೆ-ಪ್ರೀತಿ-ಕರುಣೆಗಳೆಲ್ಲಾ ಮೈ ತಳೆಯಬೇಕಾದ ಧರ್ಮ ಅದನ್ನೆಲ್ಲಾ ಧಿಕ್ಕರಿಸಿ ಕ್ರೂರ ರಕ್ಕಸಿಯಂತೆ ಮನುಷ್ಯ ಮನುಷ್ಯನಿಗೆ ಮಲ ತಿನ್ನಿಸುವಂಥ ಹೀನ ಕೃತ್ಯದ ಅಂಚಿಗೆ ಬಂದು ನಿಲ್ಲುತ್ತದೆ.

ಧರ್ಮ ಮಾತ್ರವಲ್ಲ ವಿಜ್ಞಾನ, ರಾಜಕಾರಣ, ಸಾಹಿತ್ಯ, ಕಲೆ-ಇತ್ಯಾದಿಗಳೆಲ್ಲ ಇವತ್ತು ಕಳಂಕ ರೂಪಗಳಲ್ಲೇ ಕಾಣಿಸಿಕೊಂಡು ಮನುಷ್ಯನ ರಕ್ತವನ್ನು ಕುಡಿಯಲು ಮುಂದಾಗುತ್ತಿರುವಂತೆ ಕಾಣುತ್ತಿವೆ.

ಅಣುಯುಗದ ನಾವು ವಿಜ್ಞಾನದ ಅತ್ಯುನ್ನತ ಅವಿಷ್ಕಾರಗಳನ್ನು ಕಂಡುಕೊಂಡವರಂತೆ, ನಾಗರಿಕತೆಯ ಶಿಖರಗಳಲ್ಲಿ ನಿಂತಿರುವವರಂತೆ ಭ್ರಮೆಪಟ್ಟುಕೊಳ್ಳಬಹುದು-ಕೇವಲ ಮುಗಿಲಿಗೆ ಕಣ್ಣು ನೆಟ್ಟಾಗ, ಒಂದಿಷ್ಟು ಎಚ್ಚರದಿಂದ ನೆಲದ ಬದುಕನ್ನು ನೋಡಿದರೆ ಸಾಕು ಎಲ್ಲ ಕ್ರೂರ ಸತ್ಯಗಳೂ ಕಾಣಿಸಿಕೊಳ್ಳುತ್ತವೆ: ಸಾರ್ವಜನಿಕ ಬಾವಿಯಲ್ಲಿ ಒಂದು ಬಿಂದಿಗೆ ನೀರು ತೆಗೆದುಕೊಳ್ಳುವ ಸಮಾನತೆಗೆ ಕಾದು ಕುಳಿತವರು; ಸ್ವತಂತ್ರ ಬದುಕಿನ ಹಂಬಲಿಸಿ ತಮ್ಮ ಇಡೀ ಜೀವನವನ್ನು ಸೆರೆಮನೆಯ ಕತ್ತಲಲ್ಲಿ ಕಳೆಯುತ್ತಿರುವ ಮಂಡೇಲನಂಥ ಕರಿಯರು; ತುತ್ತು ಕೂಳಿಗಾಗಿ ತಮ್ಮ ದೇಹಗಳನ್ನ ಒತ್ತೆ ಇಟ್ಟವರು; ಯಾರದೋ ತುತ್ತಿಗಾಗಿ ಕ್ಷುಲ್ಲಕ ಕಾರಣಗಳಿಗಾಗಿ ಚಿತೆ ಏರಿ 'ಸತಿ' ಯಾಗಬೇಕಾದವರು ....ಎಷ್ಟೊಂದು ಕರಾಳ ಮುಖಗಳು.

ನೆಲ-ಮುಗಿಲುಗಳನ್ನು ಅರ್ಥಪೂರ್ಣವಾಗಿ ಬೆಸೆಯಬಲ್ಲ ಪ್ರಯತ್ನ ಮಾತ್ರ ಮನುಷ್ಯನನ್ನು ನಿಜವಾದ ವಿಕಾಸದ ಹಾದಿಯಲ್ಲಿ ನಡೆಸಬಲ್ಲವು. ಈ ಎಚ್ಚರ ಕಳೆದುಕೊಂಡ ಸಾಧನೆ, ಅದು ಎಷ್ಟು ಬೃಹತ್ತಾಗಿದ್ದರೂ ಮನುಷ್ಯನನ್ನು ವಿನಾಶದ ಅಂಚಿಗೆ ಕೊಂಡೊಯ್ದು ನಿಲ್ಲಿಸುತ್ತದೆ.

—ಜಿ.ಪಿ. ಬಸವರಾಜು

ಈ ಸಂಚಿಕೆಯ ಲೇಖಕರು

- ಡಾ.ಕೆ.ವಿ. ತಿರುಮಲೇಶ್, CIEFL, ಹೈದರಾಬಾದು-500 007
- ವೈದೇಹಿ, 3-1-65, ಬ್ಲಾಕ್-F, ಹೀರಾಬಾಗ್, ಉಡುಪಿ-576 103
- ಗುರುರಾಜ ಮಾರ್ಪಳ್ಳಿ, ನೀನಾಸಮ್, ಹೆಗ್ಗೋಡು-577 417, ಸಾಗರ (ಶಿವಮೊಗ್ಗ)
- ಆನಂದ ಝುಂಜ಼ುರವಾಡ, 'ಸ್ನೇಹದೀಪ', ಚಂದನಶಿವ ನಿವೇಶನಗಳು, ಆನಂದ ನಗರ, ಮುಧೋಳ–587 313
- ಜಿ. ರಾಜಶೇಖರ್, ಡಿವಿಜನಲ್ ಆಫೀಸ್, ಜೀವವಿಮಾ ನಿಗಮ, ಉಡುಪಿ-576 101
- ಲಕ್ಷ್ಮೀಶ ತೋಳ್ಪಾಡಿ, ಶಾಂತಿಗೋಡು-ಅಂಚೆ, ಪುತ್ತೂರು ತಾ॥574 202 (ದ.ಕ.)
- ಕ್ಷೀರಸಾಗರ, ಕಬಿನಿ ಕಾಲೋನಿ, ಹೆಗ್ಗಡದೇವನಕೋಟೆ-ತಾಲ್ಲೂಕು, ಮೈಸೂರು ಜಿಲ್ಲೆ-571116
- ಡಾ. ಅರವಿಂದ ಮಾಲಗತ್ತಿ, ರೀಡರ್, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ- 574 199 (ದ.ಕ.)
- ಪ್ರೊ॥ ಸಿ.ಎನ್. ರಾಮಚಂದ್ರನ್, ಮುಖ್ಯಸ್ಥರು, ಆಂಗ್ಲಭಾಷಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ-574 199 (ದ.ಕ.)
- ಓ.ಎಲ್. ನಾಗಭೂಷಣಸ್ವಾಮಿ, ಇಂಗ್ಲಿಷ್ ಉಪನ್ಯಾಸಕರು, ಸಹ್ಯಾದ್ರಿ ಕಾಲೇಜ್, ಶಿವಮೊಗ್ಗ
- ಎಸ್.ಆರ್. ವಿಜಯಶಂಕರ, ಇಂಗ್ಲಿಷ್ ಅಧ್ಯಾಪಕರು, ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ (ದ.ಕ.) – 576 114
- ಜಿ.ಪಿ. ಬಸವರಾಜು, ಪ್ರಜಾವಾಣಿ ವರದಿಗಾರರು, ಮಿಲಾಗ್ರಿಸ್ ಕಟ್ಟಡ, ಹಂಪನ ಕಟ್ಟೆ, ಮಂಗಳೂರು-575 001

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೦

ಈ ಸಂಕಲನದ ಸಂಪಾದಕರು
ಸ. ಉಷಾ

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, (ಚಿಕ್ಕಮಗಳೂರು ಜಿಲ್ಲೆ)

ಈ ಸಂಕಲನದಲ್ಲಿ....

○

ಲೇಖಕರಿಗೆ ಸೂಚನೆ: ಕವನ, ಲೇಖನ ಕಳಿಸುವವರು ನಮ್ಮ ಮಲ್ಲಾಡಿಹಳ್ಳಿ ವಿಳಾಸಕ್ಕೆ ಮಾತ್ರ ಕಳಿಸಬೇಕು. ಸ್ವಚ್ಛ ಬರವಣಿಗೆಯ ಮೊದಲ ಪ್ರತಿಯನ್ನು ಮಾತ್ರ ಕಳಿಸಿ. ಲೇಖನದ ಜೊತೆ ರಿಪ್ಲೈಕಾರ್ಡ್ ಇಡಿರಿ. ಲೇಖನಗಳನ್ನು ವಾಪಸು ಪಡೆಯಬಯಸುವವರು ಅಗತ್ಯ ಅಂಚೆ ಚೀಟಿ ಇಡಬೇಕು.

ಚಂದಾದಾರರಿಗೆ ಸೂಚನೆ: ಅನೇಕ ಚಂದಾದಾರರು ವಾರ್ಷಿಕ ಚಂದಾ ಅಥವಾ ಆಜೀವ ಚಂದಾದ ಮುಂದಿನ ಕಂತುಗಳನ್ನು ಕಳಿಸಲು ಮರೆತಂತಿದೆ. ದಯವಿಟ್ಟು ಈಗಲಾದರೂ ನೆನಪಿಟ್ಟು ಚಂದಾ ಕಳಿಸಿ. ಪತ್ರಿಕೆ ಬೇಡವಾಗಿದ್ದರೆ ಎರಡು ಸಾಲುಗಳ ಕಾರ್ಡನ್ನು ಹಾಕುವ ಮೂಲಕ ಪತ್ರಿಕೆಯ ಆರ್ಥಿಕ ಸ್ಥಿತಿ ಹದಗೆಡದಂತೆ ಸಹಕರಿಸಿ.

ಈ ಸಂಚಿಕೆಯನ್ನು ನಾವು ಚಿಕ್ಕ ಅಕ್ಷರಗಳಲ್ಲಿ ಮುದ್ರಿಸಿರುವುದರಿಂದ 64 ಪುಟಗಳನ್ನು ಮಾತ್ರ ನೀಡುತ್ತಿದ್ದೇವೆ. ಓದುಗರು ದಯವಿಟ್ಟು ಇದನ್ನು ಗಮನಿಸಬೇಕು.

ನಗುವ ಬುದ್ಧ

ಸತ್ಯನಾರಾಯಣರಾವ್ ಅಣತಿ

'ಬುದ್ಧಂ ಶರಣಂ ಗಚ್ಛಾಮಿ'
ಪೂರ್ವ ಇತಿಹಾಸದ ಈ ಮಾತು
ಶಂಖ ಜಾಗಟೆ ಗದ್ದಲದಲಿ ಹೂತು ಹೋಯ್ತು?
ಇಲ್ಲಾ ಅದರ ದನಿ ಕೂತು ಹೋಯ್ತು?

ಕವಿಯ ಅಂತರಂಗದಲಿ ಕಾದು ಕೂತು
ಹಿಡಿದಿಟ್ಟ ಬುತ್ತಿ ಮಾತು
ಮನುಕುಲದ ಜೀವಧಾತು
ಮೊಳೆಯಲಿಕೆ ಯಾವ ಹೇತು?
ಇತಿಹಾಸ ಚಕ್ರ ಗಿರಗಿರನೆ ತಿರುಗಿ
ಬಂದ. ನಿಂತಿದೆ ಸೊರಗಿ
ಕೊರಗುತ್ತ ಕೂರಬೇಕೆ
ಬೆಳೆಯಬೇಕೆ ಜಟೆಯು,
ಕಟ್ಟಬೇಕೆ ಹುತ್ತ,
ಹಕ್ಕಿಯನೊಂದ ಕೊಲ್ಲಬೇಕೆ, ಬೇಡ ?

ಪ್ರೀತಿ ಕರುಣೆಯ ಹರಿಸಿ
ಸ್ನೇಹ ಪಲ್ಲವ ಪುಟಿ ಪುಟಿಸೆ
ಸದ್ದು ಗದ್ದಲ ಮೆಟ್ಟಿ
ಇಡಬೇಕು ದಿಟ್ಟ ಹೆಜ್ಜೆ
ಘಲಿರೆನಿಸುತ ಕಾರುಣ್ಯದ ಗೆಜ್ಜೆ.

2

ಗುಟು ಗುಟು, ಗುಟು ಗುಟು ಎಂದುಲಿವ ಪಾರಿವಾಳಕೆ
ಕಾಳು ತೂರುತ ನಿಂತು ನಿಟ್ಟುಸಿರುಬಿಟ್ಟವಳ
ಕೊರಳಿಗೆ ಜೋತುಬಿದ್ದ ಬಾಲನ ಬೆಣ್ಣೆ ಕೆನ್ನೆಯ ಪುಳಕ
ಸಂಜೆ ಉದ್ಯಾನವನದಲಿ ಮಿಸುನಿ ಕಿರಣದ ಜಳಕ
ರಾಹುಲನ ಎಳೆಬಾಳೆ ಸುಳಿ ತೋಳು ತಾಯ ಕೊರಳನು
ಬಳಸೆ ಕೂಸುಮರಿ ಮಾಡಿ ಬಾಲನೊಡನಾಡಿ
ಮೂಡಿ ಬಹ ಚಂದಕ್ಕಿ ಮಾಮನ ಮೋಡಿಗೆ
"ಚಂದಕ್ಕಿ ಮಾಮ ಮುತ್ತಿನ ಕುಡಿಕೆ ಕೊಡುಮಾಮ
ಕೊಡು ಮಾಮ" ಎಂದು ತೊದಲಾಡಿ
ಕ್ಷಣ ಕಳೆದು ಮೊಗಬಾಡಿ
ಬಂದರರಮನೆಗೆ ಛನ್ನಜ್ಜನೊಡಗೂಡಿ.

ಉಪ್ಪರಿಗೆ ಕರುಮಾಡದ ಮೊಗಸಾಲೆಯಲಿ
ಹುಣ್ಣಿಮೆಯ ಚಂದ್ರು ಅವಳೆದೆ ತುಂಬಿ
ಬೆದಕಿದನವಳ ಮನದಾಳದ ಹಸಿಯು
ಕಂಬಕೊರಗಿದ ಯಶೋಧರೆಯ ಕಣ್ಣ ಮುಂದಿನ ಬಿಂಬ
ತಂಗದಿರನಣಕಿಸುವ ಸಿದ್ಧಾರ್ಥನ ಮೊಗ ಕಣ್ತುಂಬ,
ಲತಾ ಕುಂಜದಲಿ ಬಳಸಿ
ಕೈ ತುಂಬಿ
ಕಿವಿ ತುಂಬಿ ಕೇಳಿದ್ದು
ತುಟಿ ತುಂಬಿ ಹೇಳಿದ್ದು
ಮಧು ತುಂಬಿ ಸೂಸಿದ್ದು
ಎದೆ ತುಂಬಿ ನಂಬಿ
ನೆಚ್ಚಿದವನೆದೆಗೆ ಬೆಚ್ಚಗೊರಗಿದ್ದು;

ಕ್ಷಣದಲಿ ಬೆದರಿ ಬೆಚ್ಚಿದಳು
ಎದುರು ನಿಂತ ಛನ್ನಜ್ಜನ ನುಡಿಕೇಳಿ:
ಯಾಕಿಂತು ಒಬ್ಬಳೇ ಕುಳಿತಿರುವೆ ಮಗಳೆ
ಮುಗಿಲ ಮುಸುಕಿದ ಮಂಜು
ಬಿಳಿ ಮಲ್ಲ ಬಟ್ಟೆ ಇಳಿಬಿಟ್ಟಂತೆ
ಸುರಿಯುತಿದೆ, ಮೈ ನಡುಗುತಿದೆ
ಚಿಂತೆ ಸಾಕಿನ್ನು ಒಳಗ್ಹೋಗಿ ಮಲಗೆನಲು–
ದಿಟ್ಟಿಸಿದಳು ಮುಗಿಲ
ದೂರದಲಿ ಕಪ್ಪಾನೆ ಕರಿಗುಡ್ಡ
ಇಳೆವರೆಗೂ ಬೆಳ್ಳಿ ಎಳೆ ಇಳಿಬಿಟ್ಟಂತೆ
ಕಾವಳದ ಮುಸುಕು,

ಸನಿಹದಲೆ ಹಗಲೆಲ್ಲ ಕಾಳು ಕಡ್ಡಿಯ ಒಕ್ಕಿ
ಮೆದೆ ಮೆದೆಯ ಬುಡದಲ್ಲು ಕಂಬಳಿಯ ಮುಸುಕಿಕ್ಕಿ
ಚಳಿಗೆ ಹೂ ಹೂ ಎನುತ ಕೇಳಿ ಬರುತಿಹ ಹಾಡು
ಒಬ್ಬಂಟಿಗರ ಹಾಡು.

ಆ ಹಾಡು ಯಾಶೋಧರೆಯ ಎದೆ ತಟ್ಟಿ
ಮನ ಮಿಡಿದಾಗ :
ಅರಸುಕುಮಾರ ಜಗಜಗಿಸುವ ಉಡಿಗೆ ತೊಡಿಗೆಯಲಿ
ಕಣ್ಮುಂದೆ ಸುಳಿದಾಗ ಮಿಟುಕಿಸದೆ ನಿಟ್ಟಿಸುತ್ತಿದ್ದೆ
ತಬ್ಬಿದವನೆದೆ ನುಡಿಕೇಳಿ ನಿಮಿರಿ ನಿರುಕಿಸುತಿದ್ದೆ

ಪ್ರೀತಿ ಫಲ ಕೊಟ್ಟ ವಾತ್ಸಲ್ಯ ಕೂಸನ್ನು ತೋಳು
ತುಂಬುವ ಮುನ್ನ ಬಿಟ್ಟುಹೋದನೇಕೆ ನನ್ನ...
ಹೇಳು ಧನ್ನಜ್ಜ ?

ಮೌನವೇಕೆ ನನ್ನಜ್ಜ ನೀನಲ್ಲವೆ ಹೇಳು
ಮತ್ತೆ ಮತ್ತೆ ಕೇಳುತಿಹೆನೆಂದು
ಬೇಸರವೆ ಅಜ್ಜ, ಲಜ್ಜೆ ಬಿಟ್ಟು ಹೇಳುವೆನು ಕೇಳು:
ವಧುವರರು ನಾವಂದು ಅರಿಸಿನವ ಮಿಂದು
ಮಧುಮಹೋತ್ಸವಕೆಂದು ಲತಾಕುಂಜದಲಿ ಸಡಗರಿಸಿ
ಮರವ್ಯಾರು ಲತೆಯಾರು
ಕುಸುಮ ದುಂಬಿಯದಾರು
ಎಂಬ ಪರಿವಿಲ್ಲದೆ ಕಳೆದ ರಸ ನಿಮಿಷ;
ಕಣ್ಣಿಗೆ ಕಣ್ಣು
ತುಟಿಗೆ ತುಟಿ
ಬಾಹುಬಳಸಿದ ಕಟಿ

ಲಟ ಲಟನೆ ನಿಟಿಗೆ ಮುರಿದಂತೆ
ಹಾಲು ಜೇನು ಬೆರೆತಂತೆ
ಇದೆನಲ್ಲ ಮರೆತನೇ ಹೇಳು ?

ಯಾವುದನು ಮರೆತಿಲ್ಲ ಅವನು
ನಿನಗೇಕೆ ಆ ಕೊರಗು ? ಅದಕಾಗಿ ಸೊರಗು
ನೆನಪಿರಬೇಕು ನಿನಗು
ತೋಳ ತಲೆದಿಂಬಿನಲಿ ನಿನ್ನ
ಬಸಿರಮೇಲೆ ಕೈಇಟ್ಟು
ಕರುಳ ಕುಡಿ ಮಿಡಿತವ ಕೇಳಿ
ಕಣ್ಣನರಳಿಸಿ ಹೇಳಿದೊಂದೊಂದು ಮಾತು
ಒಲುಮೆ ವಾತ್ಸಲ್ಯ ಧಾತು.

ಅಷ್ಟೇಕೆ ಎಲ್ಲ ಹೇಳುವೆ ಕೇಳು :
ಗದ್ದೆ ಅಂಚಲಿ ನಿಂತು
ಉಳುತ ನಿಟ್ಟುಸಿರುಡುತ ಕಡ್ಡಿ ದೇಹವ ಕಂಡು ಮರುಗುವನು
ಕಣದಲೊಕ್ಕುವ ಕೈಗೆ ಸಿಕ್ಕುವುದು ಹಿಡಿಮಾತ್ರ ಎಂದು ಕೊರಗುವನು
ಹಾಲು ಹಿಂಡುವ ಮುಂಗೈಯ್ಯ
ಬಳೆಯು ಕಿಂಕಿಣಿಗವನ ಕಿವಿ ನಿಮಿರುತಿತ್ತು
ಬತ್ತಿದ ಮೊಲೆ ಕಚ್ಚಿ ಬರಿ
ಲೊಚಗುಟ್ಟಿಸುವ ಕರುವಿನ ಹಪ್ಪಳ ಹೊಟ್ಟೆಯನು ಕಂಡು ನಿಡುಸುಯ್ಯು

ಸಾಕಿದ ಆಡು ಕುರಿ ಮರಿ
ತರಿದ ಸೊಪ್ಪನು ತಿಂದು ಛಂಗನೆ ನೆಗೆದಾಗ ತಾನು ಜಿಗಿಯುತಿದ್ದ
ನಿತ್ಯ ಹುಟ್ಟಿ ಮುಳುಗುವ
ರವಿ ತಾರೆ ಶಶಿ ಕಂಡು ವಿಸ್ಮಯಿಸುವ
ಅಕ್ಕಪಕ್ಕದಲ್ಯಾರೊ ಸತ್ತರೆಂಬುದ ಕೇಳಿ
ಮತ್ತೆ ಅವರೆಲ್ಲ ಸತ್ತರೆಂಬುದ ಕೇಳಿ
ಮತ್ತೆ ಅವರೆಲ್ಲ ನಾಳೆ ಹುಟ್ಟಿ ಬರುವರೆ ಎಂದು ಪ್ರಶ್ನಿಸುವ
ಅಳುವವರ ಕಂಡಾಗ ಯಾಕೆ
ಅಳುವಿರಿ ಹೀಗೆ ಎನುತ ತಾನು ಅಳುವ
ನಗುವವರ ಜೊತೆಗೂಡಿ ಕಿಲಕಿಲ ನಕ್ಕು
ನಗುವ ನಮ್ಮೊಡನೆ ಸದಾ ಹೀಗಿರಲು ನಿಮಗೇನು ಧಾಡಿ ಎನುತಿದ್ದವ
ಏನ ಹರಸುತಲಿಹನೋ?
ಏನ ಹರಸುತಬಹನೊ?
ಅದಕಾಗಿ ಕರುಳ ಕುಡಿ ಚಿಗುರಿ
ತೋಳ ತುಂಬುವ ಮೊದಲೆ
ಮೋಹ ವಾತ್ಸಲ್ಯಗಳ ಅದುಮಿಟ್ಟನು.
ಕೇಶಮುಂಡನ ಗೈಸಿ
ರಾಜ ವಸ್ತ್ರವ ಕಳಚಿ ಕಾಷಾಯ ಧರಿಸಿ
ತಂದೆ ತಾಯಿ ಎದುರಿನಲೆ ಪ್ರವ್ರಜ್ಜೆ ಸ್ವೀಕರಿಸಿ
ಪರಿವ್ರಾಜಕನಾಗಿ ಇಟ್ಟ ದಿಟ್ಟ ಹೆಜ್ಜೆ.
ಕವಿ ಹೃದಯದಲಿ ಮಾರ್ದನಿಸುವ
ಕಾರುಣ್ಯದ ಗೆಜ್ಜೆ.

3

ಉದಯಾಸ್ತ ಉರುಳಿ
ಸಪ್ತ ಸಂಕ್ರಮಣ ಮರಳಿ
ಬತ್ತಿಹುದು ದೇಹ,
ಹೆಚ್ಚುತಿದೆ ದಾಹ
ನಿತ್ಯದ ಕುರುಹೇನು
ಸತ್ಯದ ಗುಟ್ಟೇನು
ನಿಶ್ಚಿಂತೆಯ ಬಟ್ಟೆಯದಾವುದು?
ಚಿಂತೆಯಲಿ ಅದ್ದ ಅಸ್ತಿಪಂಜರ
ಕೀಲಿಗಂಟಿ ನೇತಾಡುತಿಹ ಕೈಕಾಲು
ಸುಟ್ಟ ಕುಂಬಳಕಾಯಿ ಬಣ್ಣ ಚರ್ಮ

ಬಿಟ್ಟ ಪಿಳಿಪಿಳಿ ಕಣ್ಣು
ಸಿದ್ಧಾರ್ಥನ ಮೆಲ್ಲ ತಟ್ಟೆಬ್ಬಿಸಿತು

ತಳಿರಿಡಿದ ಕೊಂಬೆ ರಂಭೆಗಳಲ್ಲಿ ಮರ್ಮರಿಪ ತಂಗಾಳಿ
ಮಧುವರಸುತಿಹ ಝೇಂಕರಿಪ ಭೃಂಗಾಳಿ ಪ್ರೇರಿಸಿತು
ನಡೆಯಲಾರದ ಕೈಲಿ ನಡು ಹಿಡಿದು
ಬಂದನು ಮಂದಿ ಮನೆ ಮುಂದೆ
ಭಿಕ್ಷಾಂದೇಹಿ ಎಂದನು ಕ್ಷೀಣ ಸ್ವರದಿಂದೆ
ಮಧ್ಯಾಹ್ನ ಪತಿಗೆ ಉಣಬಡಿಸುತಿದ್ದ ಸುಜಾತೆ
ವೈಶಾಖ ಹುಣ್ಣಿಮೆಯ ಹಬ್ಬದೂಟವ
ತಂದು ನೀಡಿದಳು ಕೈ ತುಂಬ
ಗೌತಮನ ಕಣ್ಣ ತುಂಬಿತು ತುತ್ತಿಟ್ಟ ತಾಯಿ ಬಿಂಬ

ನೈರಂಜಿರಾ ನದಿ ದಡಕೈತಂದು
ಕರುಣೆ ಕೈ ನೀಡಿದ ಸಿಹಿ ಉಂಡು
ಒರಗಿದನು ಭೋಧಿ ವೃಕ್ಷಕೆ
ಮಮ್ಮಲು ಮರುಗಿದನು
ಹಸಿವಿಂದ ನರಳುತಿಹ ನರರ ನಿರ್ಗತಿಗೆ.
ಒಳಗೊಳಗೆ ಕೊರಗಿ ಕನಲಿ
ಕಂಗಾಲಾಗಿ ಕಣ್ಣ ಮುಚ್ಚಿದಾಗ :

ಕಪಿಲವಸ್ತುವಿನ ಬಿಟ್ಟ ಮೊದಲ ದಿನ
ಬೊಗಸೆ ಬೊಗಸೆ ಕುಡಿದು ನದಿಯ ಜಲ
ಹಸಿವೆ ಎದುರಿಸಿದ ಮೊದಲ ಸಲ.

ಪರಿವ್ರಾಜಕನಾಗಿ
ರಾಜಗೃಹದ ರೂಕ್ಷಗುಡ್ಡಗಳಲೆದು
ಗುರುಗಳನು ಸೇವಿಸಿ
ಧ್ಯಾನ ಸಮಾಧಿಯ ಭಾವಿಸಿ
ಬಂದನು ಸುಂದರ ವನಪ್ರದೇಶಕೆ
ಉರವೇಲಕೆ.

ಕಣ್ಣು ಹರಿದತ್ತೆಲ್ಲ ಹಸಿರೆ ಹಸಿರು :
ಆಕಾಶದೆತ್ತರಕೆ ದಿಕ್ಕುಗಳ ಬಿತ್ತರಕೆ
ಗಿಣಿ ಹಸಿರು ಕಡು ಹಸಿರು ಪಾಚಿ ಹಸಿರು :
ತೆರೆ ತೆರೆಯಾಗಿ ಹರಿವ ಹಸಿರು ಉಸಿರು.
ಕೆಂಪು, ನಸುಕೆಂಪು, ಕೇಸರಿಯ ಕೆಂಪು
ಬಂಗಾರ ಪಕಳೆ ಗಿಡ ತುಂಬ ಬಕುಳ

ಸಂಪಿಗೆಯ ಸೂಸು ಪಾರಿಜಾತದ ಹಾಸು
ಬಿಳಿ ಮುಡಿದ ಬಳ್ಳಿ ಇಣುಕುತಿಹ ಹಳದಿ ಮಳ್ಳಿ.
ಕಡಲಂತ ನೀಲಿ ಆಕಾಶ ನೀಲಿ
ಬೀಸುಗಾಳಿಗೆ ಸೆರಗು ಜಾರಲೆಲ್ಲೆಲ್ಲೂ ನೀಲಿ.

ಬೋರ್ ಬೋರ್ ಸುರಿಮಳೆ
ಜೀರ್ ಜೀರ್ ಜಡಿಮಳೆ
ಗುಡ್ಡದಂಕು ಡೊಂಕು ಬಳಸಿ
ಬಂಡೆ ಹಾರಿ ಕೋಡು ಚಿಮ್ಮಿ
ಜುಳು ಜುಳು ಮತ್ತೆ ಹೊಮ್ಮಿ
ನದಿ ನದಗಳು ತುಂಬಿ ಹರಿದು
ಉಬ್ಬು ಬಳಸಿ ತಗ್ಗು ತುಂಬಿ
ಸುತ್ತಮುತ್ತ ಫಳ ಫಳ.
ಕಾಡು ಮೇಡು, ತಗ್ಗು ತಿಟ್ಟು ಸುತ್ತುತಿರಲು
ಜುಳು ಜುಳು ನಿನಾದಕೆ ಮನಸುಕ್ಕಿ
ಕಂಡ ಕಂಡಲಿ ಜಳಕ
ಮೈ ಮನಕೆ ಪುಳಕ

ಮಳೆ ಬಿಸಲಿನ ಜೂಟಾಟ
ಸೂಸುವ ರವಿ ಕಿರಣದಾಟ :
ಬುಡ ಬುಡದಲು ಹೊಸ ಮೊಳಕೆ
ಬಳ್ಳಿತುಂಬ ಕುಡಿಯು ರೆಕ್ಕೆ
ನೆನಪಿನಕ್ಷಿ ಪಟಲ ತುಂಬಿ
ಹರಿಯುತ್ತಿತ್ತು ಹೊನಲ ಹೊಮ್ಮಿ

ಹೊತ್ತು ಇಳಿಯುತಲಿರಲು
ಕೂರಳಗಂಟೆಯ ನಾದ,
ಗೋಧೂಳಿ ಗಂಧ ಹೊಂಬಣ್ಣದಿಂದ
ಮುಗಿಲ ಮುಸುಕಿ,
ಸಂಜೆ ಸೂರ್ಯನ ಕಿರಣಹಳ್ಳಿ ಮನೆ
ಹಂಚಮೇಲೆ ಮೂಡಿತ್ತು ಮಿಂಚ ಮಾಲೆ.

ಜಗದ ಧ್ಯಾನ ಮೌನದಲಿ
ಮೂಡಣದ ಮೂಕ ಎದೆಯಿಂದ
ಶಶಿಕಿರಣ ಹಾಲ ಹರಿಸುತ ಬರಲು
ಕಿವಿಯ ತುಂಬಿತು ಜೋಗುಳದ ಕೊರಳು.

ಅಂತಃಪುರದ ಕರುಮಾಡದಲಿ
ಕಾತುರದ ಕಣ್ಣುಗಳು
ಬಳಸಿದೆಳೆಬಾಳೆ ತೋಳುಗಳ
ಚಂದ್ರಬಿಂಬವ ನಾಚಿಸುವ ಯಶೋಧರೆಯ ಮುಖ
ದಲ್ಲಿ ಮುಖವಿಟ್ಟು ಅನುಭವಿಸಿದ ಸುಖ
ದ ಫಲ ಕೈ ಬೀಸಿ ಕರೆಯುತಿದೆ
ಹಾಲುಗೆನ್ನೆಯ ಹಸುಳೆ ಬಿಟ್ಟ ಸುಲಿಪಲ್ಲ ಪಕಳೆ.

ಉದ್ಯಾನವನದ ವೇದಿಕೆ ಮೇಲೆ
ಕಣ್ಣೀರ ಕಡಲ ಹರಿಬಿಟ್ಟ ಮಾತಾಪಿತರು
ಬಿಗಿದ ತುಟಿ ಛನ್ನಜ್ಜ
ಬಂಧು ಬಾಂಧವರ ಹಿಡಿದಿಟ್ಟ ಮಿಡಿಯಲಾರದ ಎದೆ
ಒಡನಾಡಿಗಳ ಕಂದಿದ ಮೊಗ
ದುಃಖದುಮ್ಮಾನದಾವೇಗ,

ಸುಜಾತೆಯ ಅಂತಃಕರಣದ
ವಾತ್ಸಲ್ಯ ವಾರಿಧಿಯ ತೆರೆ ತಬ್ಬಿ
ಕರುಣೆ ದೀಪ್ತಿಯಲಿ ಮಿಂದ,
ಮುಗ್ಧವಾಯಿತು ಮನಸು
ಸ್ತಬ್ಧವಾಯಿತು ಕನಸು.

ಕ್ಷಣನಿಂತ ಕಾಲ ತತ್‌ಕ್ಷಣವೇ ಜಾರಿ
ತಿಂಗಳಂಗಳದಿಂದ ಬೆಳದಿಂಗಳ ಧಾರೆ,
ಹಾಲ್ಗಡಲು ಉಕ್ಕಿ ಹೊಸ ಪಥದಲಿ ಹರಿಯುತ್ತಿತ್ತು
ತಂಗಾಳಿ ನವ ಗಂಧವ ಧರಿಸುತಿತ್ತು
ನೋವನೆಲ್ಲ ಮರೆಸುತಿತ್ತು

ಪುಳಕಗೊಂಡ
ಸೆಳೆಮಿಂಚನೊಂದ ಕಂಡ :
ದೇವದತ್ತನ ಬಾಣಕೆ
ಗರಿ ಮುರಿದು ಬಿದ್ದ ಹಕ್ಕಿ
ಸಿದ್ಧಾರ್ಥನ ಕಾರುಣ್ಯಕೆ
ಗರಿಗೆದರಿ ಹಾರಿತು

ಜಿಂಕೆಗಳ ಗುಂಪು
ಈ ದೃಶ್ಯವೆಷ್ಟು ಸೊಂಪು
ಮೊಲೆ ಕುಡಿಸುತಿಹ ತಾಯಿ ಜಿಂಕೆ
ಮನದೊಳಿಲ್ಲ ಇಷ್ಟು ಶಂಕೆ

ಹಿಂಡು ಹಿಂಡು
ಆನೆಗಳ ದಂಡು
ತರಿದು ಮರದ ಕೊಂಬೆ
ಮರಿಯಾನೆಗೆ ತಿನಿಸುತ
ಮುದವೀಯುತಿಹದು ಎಂತು
ಹಾರುತಿಹುದು ಗಿಳಿವಿಂಡು
ಅಲೆದುಂಡು ಸಂತಸದಿ ಗೂಡಿಗೈತಂದು
ತಾಯಿ ಕೊಟ್ಟಳು ಮರಿಗೆ ಗುಟುಕನೊಂದ
ವಾತ್ಸಲ್ಯ ಮಡಿಲಲ್ಲಿ ಎಷ್ಟು ಆನಂದ
ಮುದ್ದು ಮರಿ
ಗುಟುಕು ಗುಟುಕನು ಹೀರಿ
ರೆಕ್ಕೆ ಬಲಿಯುತ ಹಾರಿ ಹಾರುತಿಹುದು
ಜಗಕೆ ಹೊಸ ದೃಷ್ಟಿ ಪಥ ತೋರುತಿಹುದು,
ಶಾಂತವಾಯಿತು ಮನಸು
ಶಾಂತವಾಯಿತು ಕನಸು,

ಕೊನೆಯ ಜಾವದ ಇರುಳು
ಮಿನುಗಿತವನೆದೆಯಲಿ ಆಗಸದ ಹರಳು,
ಬಾನ ಹಕ್ಕಿಯು ಮೌನ ಇಂಚರ
ತೆರೆಯುತವನೆದೆ ಬದುಕಿನ ಎಚ್ಚರ,
ಪಡುವಣದ ಕಡಲ ಉಕ್ಕಿಸಿದ ಚಂದ್ರ
ಮೆಲ್ಲ ಜಾರಿದ ತುಂಬಿ ಅವನ ಮನಸು ಸಾಂದ್ರ ;
ಬುವಿಯು ಬಣ್ಣಕೆ ಮೆರಗು ಮುಗಿಲ ಕಣ್ಣಿನಿಂದ
ಜೀವ ಜಾತಕೆ ನಲಿವು ಮಮತೆ ಕರುಣೆಯಿಂದ,
ಹರಿವ ನೀರಿನ ಇನಿದನಿ
ಕೋಕಿಲ ಹಕ್ಕಿಯ ಸವಿದನಿ
ಕರುಣೆ ಕಣ್ಣು ತೆರೆಯಿತು
ಬೆಳಕಿನ ಹೊನಲು ಹರಿಯಿತು
'ದುಃಖ ಮೂಲ ಆಸೆ'
ಎಂದು
ಬುದ್ಧನೊಮ್ಮೆ ನಕ್ಕ
ಕವಿಯು ಕಂಡದ
ಕುಣಿದ;
ಅರ್ಥ ಹುಡುಕುತ ದಣಿದ.

ಕಲೆಗಳು ಮತ್ತು ವಾಸ್ತವತಾವಾದ

ಗಿರಡ್ಡಿ ಗೋವಿಂದರಾಜ

'ವಾಸ್ತವತಾವಾದ' (Realism) ಎಂಬ ಶಬ್ದ ಮೂಲತಃ ಪಾಶ್ಚಾತ್ಯ ತತ್ವಶಾಸ್ತ್ರಕ್ಕೆ ಸೇರಿದ್ದು. ತತ್ವಶಾಸ್ತ್ರದಲ್ಲಿ ಜ್ಞಾನದ ಒಂದು ಸಿದ್ಧಾಂತವಾಗಿ ಬಾಹ್ಯ ಜಗತ್ತಿನ ವಸ್ತುನಿಷ್ಠ ವಾಸ್ತವದಲ್ಲಿರುವ ನಂಬಿಕೆ ಎಂಬ ನಿರ್ದಿಷ್ಟ ಅರ್ಥದಲ್ಲಿ ಇದು ಬಳಕೆಯಲ್ಲಿತ್ತು. ಅಲ್ಲಿಂದ ಸಾಹಿತ್ಯವಿಮರ್ಶೆ ಮೊದಲು ಈ ಶಬ್ದವನ್ನು ಎತ್ತಿಕೊಂಡಿತು. ಅಲ್ಲಿಂದಲೇ ಈ ಶಬ್ದದ ಅರ್ಥ ಅಸ್ಪಷ್ಟವಾಗತೊಡಗಿತು; ನಂತರ ಕಲಾವಿಮರ್ಶೆಗೆ ಬಂದಾಗ ಇನ್ನಷ್ಟು ಗೊಂದಲಕ್ಕೀಡಾಯಿತು.

ಇಂದು 'ವಾಸ್ತವತಾವಾದ' ಎಂಬ ಶಬ್ದ ಕಲಾವಿಮರ್ಶೆಯಲ್ಲೇ ಅತ್ಯಂತ ವಿವಾದಕ್ಕೊಳಗಾದ, ಅತ್ಯಂತ ಸಂಧಿಗ್ಧವಾದ ಕೆಲವೇ ಪಾರಿಭಾಷಿಕ ಶಬ್ದಗಳಲ್ಲಿ ಒಂದಾಗಿದೆ. ಇದರ ಅರ್ಥ ಇದೇ ಮತ್ತು ಇಷ್ಟೇ ಎಂದು ಖಚಿತವಾಗಿ ನಿರ್ಣಯಿಸುವುದೇ ಅಸಾಧ್ಯವಾದ ಮಾತು. ಈ ಶಬ್ದಕ್ಕೆ ಕೊಟ್ಟಿರುವ ಅನೇಕ ವ್ಯಾಖ್ಯೆಗಳು ದಿಕ್ಕುಗೆಡಿಸುವಂತಿವೆ. ಎಷ್ಟೋ ಸಲ ಪರಸ್ಪರ ತೀರಾ ವಿರುದ್ಧವಾದ ಅರ್ಥಗಳನ್ನೂ ಇವಕ್ಕೆ ಹೇಳಲಾಗಿದೆ. ವಾಸ್ತವತಾವಾದ ಪರಿಕಲ್ಪನೆ ಬೆಳೆಯುತ್ತ ಹೋದ ಹಾಗೆ ಲೇಖಕರು ಮತ್ತು ವಿಮರ್ಶಕರು ತಮ್ಮ ಸ್ವಂತದ ಕಲ್ಪನೆಗಳಿಗೆ ಹೊಂದುವಂತೆ ಈ ಶಬ್ದದ ಅರ್ಥವನ್ನು ಎಳೆದಾಡುತ್ತ ಹೋದದ್ದೇ ಇದಕ್ಕೆ ಮುಖ್ಯ ಕಾರಣ. ಹೀಗಾಗಿ ಹಲವಾರು ಬಗೆಯ ವಿಶೇಷಣಗಳು ಈ ಶಬ್ದಕ್ಕೆ ಸೇರಿಕೊಂಡು ವಿಚಿತ್ರವಾದ ಗೊಂದಲವನ್ನುಂಟುಮಾಡಿವೆ. ವಸ್ತುನಿಷ್ಠ ವಾಸ್ತವತಾವಾದ ವ್ಯಕ್ತಿನಿಷ್ಠ ವಾಸ್ತವತಾವಾದ, ವಿಮರ್ಶಾತ್ಮಕ ವಾಸ್ತವತಾವಾದ, ಸಮಾಜವಾದಿ ವಾಸ್ತವತಾವಾದ, ಬೂರ್ಜ್ವಾ ವಾಸ್ತವತಾವಾದ, ಮನೋವೈಜ್ಞಾನಿಕ ವಾಸ್ತವತಾವಾದ, ಗೇಬ್ರಿಯಲ್ ಮಾರ್ಕ್ವೆಸ್‌ನ ಮಾಂತ್ರಿಕ (Magical) ವಾಸ್ತವತಾವಾದ, ಅಲೆಕ್ಸಿ ಟಾಲ್‌ಸ್ಟಾಯ್‌ನ ಮಾನ್ಯುಮೆಂಟಲ್ ವಾಸ್ತವತಾವಾದ, ಗಾನ್‌ಕೋರ್ಟ್ ಸೋದರರ ಕ್ಲಿನಿಕಲ್ ವಾಸ್ತವತಾವಾದ,ದಾಸ್ತೊವ್‌ಸ್ಕಿಯ ಪ್ರವಾದಿ ವಾಸ್ತವತಾವಾದ,ಧೀರೋದಾತ್ತ (Heroic))ವಾಸ್ತವತಾವಾದ ಇತ್ಯಾದಿಗಳ ಜೊತೆಗೆ ನವವಾಸ್ತವತಾವಾದ (Neorealism), ಉದ್‌ವಾಸ್ತವತಾವಾದ (Surrealism), ನೈಸರ್ಗಿಕತಾವಾದ (Naturalism)ಗಳಂಥ ವಾಸ್ತವತಾವಾದದ ಮುಂದಿನ ಬೆಳವಣಿಗೆಗಳೂ ಸೇರಿಕೊಂಡು ಮೂಲ ಶಬ್ದದ ನಿಜವಾದ ಅರ್ಥವೇ ಸಂದಿಗ್ಧವಾಗಿ

ಬಿಟ್ಟಿದೆ. ಈ ಗೊಂದಲದ ನಡುವೆ ಯಾವುದು ವಾಸ್ತವತಾವಾದೀ ಕೃತಿ,ಯಾವುದು ಅಲ್ಲ ಎಂಬುದನ್ನು ಗುರುತಿಸುವುದೇ ಕಷ್ಟವಾಗಿದೆ. ಕೊನೆಗೆ ಇಂಥದೊಂದು ಪಾರಿಭಾಷಿಕ ಶಬ್ದ ಇಲ್ಲದಿದ್ದರೇ ಒಳ್ಳೆಯದಿತ್ತೇನೋ ಎನ್ನುವ ಪರಿಸ್ಥಿತಿ ಬಂದಿದೆ.

ಆದರೂ ಸ್ಥೂಲವಾಗಿ ವಾಸ್ತವತಾವಾದವೆಂದರೆ-ಜೀವನದ ವಸ್ತುಸತ್ಯವನ್ನು, ವಾಸ್ತವ ಸ್ಥಿತಿಯನ್ನು ಯಾವುದೇ ರೀತಿಯ ಆದರ್ಶೀಕರಣವಿಲ್ಲದೆ, ಅದು ಇದ್ದ ಹಾಗೆಯೇ, ಎಲ್ಲ ಮೂರ್ತ ವಿವರಗಳೊಂದಿಗೆ, ಸಂಪೂರ್ಣ ಪ್ರಾಮಾಣಿಕತೆಯಿಂದ ಚಿತ್ರಿಸಬೇಕೆನ್ನುವ ಒಂದು ಕಲಾಸಿದ್ಧಾಂತ ಎಂಬ ವ್ಯಾಖ್ಯೆಯೊಂದಿಗೆ ಮುಂದುವರಿಯಬಹುದು.

ಆದರೆ ಜೀವನದ ವಸ್ತು ಸತ್ಯ ಯಾವುದು ? ಜೀವನದ ವಾಸ್ತವ ಸ್ಥಿತಿ ಯಾವುದು?-ಎಂಬುದನ್ನು ಖಚಿತವಾಗಿ ಅರ್ಥಮಾಡಿಕೊಳ್ಳುವುದೇ ಕಠಿಣವಾದ ಕೆಲಸ.

ತತ್ವಶಾಸ್ತ್ರ ಜೀವನದ ಸತ್ಯವನ್ನು ಮುಖ್ಯವಾಗಿ ಎರಡು ಮೂಲಭೂತ ಪರಿಕಲ್ಪನೆಗಳಿಂದ ಗ್ರಹಿಸುತ್ತದೆ. ಮೊದಲನೆಯದು ಪ್ಲೇಟೋನ ಸಿದ್ಧಾಂತಗಳಲ್ಲಿ ಕಾಣುವಂಥದು. ಪ್ಲೇಟೋ ನಮ್ಮ ಇಂದ್ರಿಯಗಳಿಂದ ಗ್ರಾಹ್ಯವಾಗುವ ನಮ್ಮ ಸುತ್ತಲಿನ ಪ್ರಪಂಚವನ್ನು ಸತ್ಯವೆಂದು ಭಾವಿಸುವುದಿಲ್ಲ. ಅವನ ಪಾಲಿಗೆ ಈ ಜಗತ್ತು ಕೇವಲ ಮಿಥ್ಯೆ, ನೆರಳು. ಆದರ್ಶಗಳ ಆದಿಭೌತಿಕ ಪ್ರಪಂಚವೊಂದಿದೆ. ಅದೇ ನಿಜವಾದ ಸತ್ಯ. ಅದು ಅತೀತ ಪ್ರಪಂಚ. ಅಲ್ಲಿ ಎಲ್ಲವೂ ಅಮೂರ್ತ ಆದರ್ಶ ರೂಪದಲ್ಲಿ, ಅಂತಿಮ ಪರಿಪೂರ್ಣತೆಯಲ್ಲಿ ಅಸ್ತಿತ್ವದಲ್ಲಿದೆ. ಅದೇ ನಿಜವಾದ ಸತ್ಯಲೋಕ. ನಾವು ವಾಸ್ತವ, ಸತ್ಯ ಎಂದು ಭಾವಿಸುವ ನಮ್ಮ ಸುತ್ತಲಿನ ಪ್ರಪಂಚ ಆ ಅತೀತ ಸತ್ಯದ ದುರ್ಬಲ ಅನುಕರಣೆ, ಕೇವಲ ನೆರಳು ಮಾತ್ರ ಎನ್ನುತ್ತಾನೆ ಪ್ಲೇಟೋ. ಎರಡನೆಯ ಕಲ್ಪನೆ ಪ್ಲೇಟೋನ ಶಿಷ್ಯನಾದ ಅರಿಸ್ಟಾಟಲ್‌ನಲ್ಲಿ ಕಾಣುತ್ತದೆ. ಭೌತವಾದಿಯಾದ ಅರಿಸ್ಟಾಟಲ್ ಪ್ಲೇಟೋನ ಅತೀತ ಪ್ರಪಂಚದ ಕಲ್ಪನೆಯನ್ನು ನಿರಾಕರಿಸುತ್ತಾನೆ. ಅವನ ಪಾಲಿಗೆ ಈ ಭೌತಿಕ ಪ್ರಪಂಚವೊಂದೇ ಸತ್ಯ. ಅದರ ವಿವರಗಳು ಅಭ್ಯಾಸಯೋಗ್ಯ. ಅವನದು ವೈಜ್ಞಾನಿಕ ದೃಷ್ಟಿಕೋನ. ಸ್ಥೂಲವಾಗಿ ಇದನ್ನೇ ನಾವು ವಾಸ್ತವ ದೃಷ್ಟಿ ಎನ್ನುವುದು.

ಈ ಎರಡು ದೃಷ್ಟಿಕೋನಗಳೇ ವಾಸ್ತವವನ್ನು ಅರ್ಥವಿಸುವ ಎರಡು ಭಿನ್ನ ದೃಷ್ಟಿಕೋನಗಳಾಗಿ ಬೆಳೆದವು. ಮೊದಲನೆಯದನ್ನು ಅಂತಸ್ಸಂಬಂಧ (Coherence) ಸಿದ್ಧಾಂತ ಎಂದು ಕರೆದರೆ,ಎರಡನೆಯದನ್ನು ಬಾಹ್ಯ ಸಂಬಂಧ (Correspondence) ಸಿದ್ಧಾಂತ ಎಂದು ಕರೆಯಲಾಗುತ್ತದೆ ಅಂತಸ್ಸಂಬಂಧ ಸಿದ್ಧಾಂತದ ಪ್ರಕಾರ ವಾಸ್ತವ ಎನ್ನುವುದು ಅಗವ್ಯವಾದದ್ದು, ಸಂಕೀರ್ಣವಾದದ್ದು. ಅದರ ರಹಸ್ಯಗಳನ್ನು ಭೇದಿಸಲು ಆಂತರಿಕ ಪ್ರತಿಭೆ, ಅಂತಃಸ್ಫುರಣಗಳು ಬೇಕು. ಒಳನೋಟಗಳ ಮೂಲಕವೇ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಬಾಹ್ಯಸಂಬಂಧ ಸಿದ್ಧಾಂತದ ಪ್ರಕಾರ ಭೌತಿಕ ಜಗತ್ತನ್ನು ವೈಜ್ಞಾನಿಕ ವಿಧಾನದಿಂದ ಅರ್ಥಮಾಡಿಕೊಳ್ಳಲು ಸಾಧ್ಯ. ಮಾಹಿತಿಸಂಗ್ರಹ, ವರ್ಗೀಕರಣ, ಪರೀಕ್ಷೆ, ಪ್ರಯೋಗವ್ಯಾಖ್ಯೆ, ಆಧಾರನಿರೂಪಣೆಗಳಂಥ ವೈಜ್ಞಾನಿಕ ತಂತ್ರಗಳಿಂದ ವಾಸ್ತವವನ್ನು ಅಭ್ಯಸಿಸಬಹುದು. ಮೊದಲಿನದು ವ್ಯಕ್ತಿನಿಷ್ಠ ದೃಷ್ಟಿಕೋನವಾದರೆ ಎರಡನೆಯದು ವಸ್ತುನಿಷ್ಠ ದೃಷ್ಟಿಕೋನ. ಒಂದು ರೊಮ್ಯಾಂಟಿಕ್ ದೃಷ್ಟಿಯಾದರೆ,

ಇನ್ನೊಂದು ವಾಸ್ತವವಾದೀ ದೃಷ್ಟಿ. ಒಂದಕ್ಕೆ ಭಾವೋದ್ದೀಪಕ ಭಾಷೆ ಮಾಧ್ಯಮವಾದರೆ ಇನ್ನೊಂದಕ್ಕೆ ವಸ್ತುಸೂಚಕ ಭಾಷೆ ಮಾಧ್ಯಮ.

ಆದರೆ ವಾಸ್ತವವನ್ನು ಹೀಗೆ ಎರಡು ನೀಟಾದ ಸೀಳುಗಳಾಗಿ ಕೊರೆದಿಡಲು ಸಾಧ್ಯವೆ?—ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಆದರೂ ತತ್ವಶಾಸ್ತ್ರದಲ್ಲಿ ಬದುಕನ್ನು ಮುಖ್ಯವಾಗಿ ಈ ಎರಡರಲ್ಲಿ ಒಂದು ದೃಷ್ಟಿಕೋನದಿಂದ ನೋಡುವ ಪ್ರವೃತ್ತಿ ಇತಿಹಾಸದ ಉದ್ದಕ್ಕೂ ಕಂಡು ಬರುತ್ತದೆ. ಕೆಲವು ಸಲ ಒಂದು ದೃಷ್ಟಿಕೋನ ಇನ್ನೊಂದರ ಒಳಸೇರಿ ತಕ್ಕಮಟ್ಟಿನ ವೈವಿಧ್ಯಕ್ಕೂ ಕಾರಣ ವಾಗಿದೆ. ಜೊತೆಗೆ ಇವೆರಡು ದೃಷ್ಟಿಕೋನಗಳಿಗೂ ಅಭಿವ್ಯಕ್ತಿಯ ಮಾಧ್ಯಮವಾಗಿ ಭಾಷೆ ಒಂದೇ ಇರುವದರಿಂದ ಅದೂ ಕೂಡ ನೀಟಾದ ವರ್ಗೀಕರಣಕ್ಕೆ ಪ್ರತಿರೋಧವನ್ನೊಡ್ಡುತ್ತದೆ. ಹೀಗಾಗಿ ಎಷ್ಟೋ ಕಲಾಕೃತಿಗಳನ್ನು ಖಚಿತವಾಗಿ ರೊಮ್ಯಾಂಟಿಕ್ ಅಥವಾ ವಾಸ್ತವತಾವಾದಿ ಎಂದು ವರ್ಗೀಕರಿಸುವದು ಕಷ್ಟವಾಗುತ್ತದೆ.

ವಾಸ್ತವತಾವಾದ ಹೆಚ್ಚುಕಡಿಮೆ ಬಾಹ್ಯಸಂಬಂಧ ಸಿದ್ಧಾಂತಕ್ಕೆ ಸಂವಾದಿಯಾದದ್ದು ಎಂದು ಹೇಳಬಹುದು. ವಾಸ್ತವತಾವಾದಕ್ಕೆ ದೂರದ ಆಚೆಯ ಇನ್ನೊಂದು ಲೋಕದ ಅಸ್ತಿತ್ವ ದಲ್ಲಿ ನಂಬಿಕೆ ಇಲ್ಲ. ಅದರ ಪಾಲಿಗೆ ಇರುವದು ಇದೊಂದೇ ಜಗತ್ತು—ಭೌತಿಕ ಜಗತ್ತು. ರೊಮ್ಯಾಂಟಿಕ್ ಯುಗದ ಅತೀತವಾದವನ್ನು ಅದು ತಿರಸ್ಕರಿಸುತ್ತದೆ. ಯಾವದೇ ರೀತಿಯ ಆದರ್ಶೀಕರಣಕ್ಕೆ ಅದು ವಿರೋಧಿ. ಅದಕ್ಕೆ ದೇವರಲ್ಲಿ, ಅಲೌಕಿಕ ಸಂಗತಿಗಳಲ್ಲಿ—ಒಟ್ಟಿನಲ್ಲಿ ಬುದ್ಧಿ ತರ್ಕಗಳಿಗೆ ನಿಲುಕದ ಯಾವುದರಲ್ಲೂ ನಂಬಿಕೆ ಇಲ್ಲ. ದೇವತೆಗಳಾಗಲಿ, ಅತಿಮಾನುಷ ವ್ಯಕ್ತಿತ್ವದ ನಾಯಕರಾಗಲಿ ಅದರಲ್ಲಿ ಬರುವುದಿಲ್ಲ. ಅಂತೆಯೇ, ಒಂದು ದಿಕ್ಕಿನಲ್ಲಿ ಮಹಾಕಾವ್ಯ ಗಳ ವೀರಯುಗ ಸಾಹಿತ್ಯದಿಂದ, ಇನ್ನೊಂದು ದಿಕ್ಕಿನಲ್ಲಿ ಭಾವಗೀತೆಗಳ ರೊಮ್ಯಾಂಟಿಕ್ ಸಾಹಿತ್ಯ ದಿಂದ ಅದು ಬೇರೆಯಾಗಿದೆ.

ಭೌತಿಕ ಜೀವನವನ್ನು ಅದು ಇದ್ದಹಾಗೆಯೇ, ಅದರ ಎಲ್ಲ ವಿವರಗಳೊಂದಿಗೆ, ಪ್ರಾಮಾಣಿಕವಾಗಿ ಚಿತ್ರಿಸಬೇಕೆನ್ನುವದು ವಾಸ್ತವತಾವಾದದ ಮುಖ್ಯ ಗುರಿ. ಜೀವನದಲ್ಲಿ ಸುಂದರವಾದುದೂ ಇದೆ, ಅಸುಂದರವಾದುದೂ ಇದೆ. ಅಸುಂದರ ಎಂಬ ಕಾರಣಕ್ಕಾಗಿ ಯಾವದೇ ವಿವರವನ್ನು ಮುಚ್ಚಿಡಬೇಕಾಗಿಲ್ಲ. ಅದನ್ನು ಸುಂದರಗೊಳಿಸಿ ತೋರಿಸಬೇಕಾದುದೂ ಇಲ್ಲ. ಬದುಕಿನ ಕಪ್ಪು ಭಾಗಗಳನ್ನೂ ಅಪ್ರಿಯ ಸಂಗತಿಗಳನ್ನೂ ಲೇಖಕ ಧೈರ್ಯವಾಗಿ ಎದುರಿಸ ಬೇಕು. ಸುಂದರ ತಿಳಿಗೊಳದಂತೆ ಕೊಚ್ಚೆಗುಂಡಿಯೂ ಅವನ ಸಾಹಿತ್ಯದ ವಸ್ತುವಾಗಬೇಕು. ಶೀಲ-ಅಶ್ಲೀಲಗಳ ಪ್ರಶ್ನೆ ಇಲ್ಲಿ ಅಪ್ರಸ್ತುತ. ಕೃತಿಯ ವಸ್ತುವಿಗೆ ಅವಶ್ಯಕವಾದ ವಿವರ ಎಂಥದಿದ್ದರೂ ಅದನ್ನು ಚಿತ್ರಿಸಲು ಸಂಕೋಚಪಡಬೇಕಾಗಿಲ್ಲ. ಸಾಮಾನ್ಯ ಬದುಕಿನ ಸಾಮಾನ್ಯ ವಿವರಗಳೇ ವಾಸ್ತವತಾವಾದದ ಮುಖ್ಯ ವಸ್ತು. ವಿವರಗಳಿಗೆ, ವಾಸ್ತವವಾಗಿ ನಡೆಯಬಹುದಾದ ಸಂಗತಿಗಳಿಗೆ ಇಲ್ಲಿ ಮಹತ್ವ.

೨

ವಾಸ್ತವತಾವಾದ ಮುಖ್ಯವಾಗಿ ಮೂರು ಕಲಾಸಿದ್ಧಾಂತಗಳಿಗೆ ವಿರುದ್ಧ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡಿತು.

ಮೊದಲನೆಯದಾಗಿ ಅಭಿಜಾತವಾದದ (Classicism) ವಿರುದ್ಧ. ಅಭಿಜಾತವಾದ ನಿಯಮಬದ್ಧವಾದದ್ದು. ಒಂದು ಕಾಲದಲ್ಲಿ ಅತ್ಯಂತ ಶ್ರೇಷ್ಠವೆಂದು ನಿರ್ಣಯಿಸಲ್ಪಟ್ಟ ಕಲಾ ಕೃತಿಗಳ ರಚನೆ, ಪ್ರಮಾಣ, ರೂಪ ಇತ್ಯಾದಿಗಳನ್ನು ವ್ಯವಸ್ಥಿತ ನಿಯಮಗಳಿಗೆ ಇಳಿಸಿ, ಮುಂದಿನ ವರೆಲ್ಲ ಆ ನಿಯಮಗಳನ್ನು ಅನುಸರಿಸುತ್ತ ಹೋಗಬೇಕೆಂಬ ಅಪೇಕ್ಷೆಯುಳ್ಳದ್ದು. ದೊಡ್ಡ ವಸ್ತುಗಳು, ಮಹಾವ್ಯಕ್ತಿಗಳು, ಪುರಾಣಗಳು ವಸ್ತುಗಳಾಗಿರಬೇಕೆಂದು ನಿರ್ಬಂಧಿಸುವಂಥದು. ವಾಸ್ತವತಾವಾದ ಇಂಥ ನಿರ್ಬಂಧಗಳನ್ನು ಒಪ್ಪುವುದಿಲ್ಲ.

ಎರಡನೆಯದಾಗಿ, ವಾಸ್ತವತಾವಾದ ರೊಮ್ಯಾಂಟಿಕ್‌ವಾದಕ್ಕೂ ವಿರುದ್ಧವಾಗಿತ್ತು. ರೊಮ್ಯಾಂಟಿಕ್‌ವಾದವೂ ಅಭಿಜಾತವಾದದ ನಿರ್ಬಂಧಗಳನ್ನು ವಿರೋಧಿಸಿ ಬಂದದ್ದೇ. ಆದರೆ ರೊಮ್ಯಾಂಟಿಕ್‌ವಾದದ ಕಲ್ಪನಾಶಕ್ತಿ, ಸ್ಫೂರ್ತಿತತ್ವ, ಅಮೂರ್ತತೆ, ಅತೀತವಾದದಲ್ಲಿಯ ನಂಬಿಕೆಗಳನ್ನು ವಾಸ್ತವತಾವಾದ ನಿರಾಕರಿಸುತ್ತದೆ. ಭಾವಲೋಕ ವಿಹಾರ, ಕನಸುಗುಳಿತನ, ಸೌಂದರ್ಯಾರಾಧನೆ, ಉದಾತ್ತೀಕರಣ, ಪಲಾಯನವಾದ, ವ್ಯಕ್ತಿನಿಷ್ಠತೆಗಳಿಗೂ ಅದು ವಿರುದ್ಧ ವಾಗಿದೆ.

ಮೂರನೆಯದಾಗಿ, ವಾಸ್ತವತಾವಾದ ಆದರ್ಶವಾದಕ್ಕೂ (Idealism) ಪ್ರತಿಕ್ರಿಯೆ ಯಾಗಿದೆ. ಆದರ್ಶವಾದಕ್ಕೆ ವ್ಯಕ್ತಿ ವೈಶಿಷ್ಟ್ಯ, ವಿವರಗಳಲ್ಲಿ ಆಸಕ್ತಿ ಇಲ್ಲ. ಆದರ್ಶೀಕೃತವಾದ ರೂಪಗಳೇ ಅದಕ್ಕೆ ಮುಖ್ಯ. ವ್ಯಕ್ತಿಗಳಿಗಿಂತ ಸಾರ್ವತ್ರಿಕ ರೂಪಗಳನ್ನು (Universals) ಉದಾತ್ತೀಕರಿಸಿದ ಮಾದರಿಗಳನ್ನು (Types) ಅದು ಆದರ್ಶ ವಸ್ತುವಾಗಿ ಭಾವಿಸುತ್ತದೆ. ಆದರ್ಶವಾದ ವಾಸ್ತವತಾವಾದೀ ದರ್ಶನದ ತಳಹದಿಯನ್ನೇ ಆಧರಿಸಿದ್ದರೂ, ಲಭ್ಯವಿದ್ದ ವಿವರಗ ಳಿಂದ ಬುದ್ಧಿಪೂರ್ವಕವಾಗಿ ಆಯ್ಕೆ ಮಾಡಿ ವಾಸ್ತವವಾಗಿ ಎಲ್ಲೂ ಇಲ್ಲದ ಆದರ್ಶ ಸೌಂದರ್ಯ ವನ್ನು ರೂಪಿಸುತ್ತದೆ. ವಾಸ್ತವತಾವಾದ ಇಂಥ ಆಯ್ಕೆಗೆ ವಿರೋಧಿಯಾಗಿದೆ.

ವಾಸ್ತವತಾವಾದಿ ಕಲಾವಿದ ತನ್ನ ವಸ್ತುಗಳನ್ನು ಸುಂದರವಾದದ್ದರಿಂದ, ಸರ್ವಾಂತಿಕ ಸಮನ್ವಿತ ಹಾಗೂ ಪರಿಪೂರ್ಣವಾದದ್ದರಿಂದ ಆರಿಸಿಕೊಳ್ಳುವದಿಲ್ಲ. ಆದರ್ಶ ರೂಪಗಳಿಗೆ ಬದಲಾಗಿ ವಿಶಿಷ್ಟ, ಸಾಮಾನ್ಯ ವ್ಯಕ್ತಿಗಳನ್ನು ಚಿತ್ರಿಸಬಯಸುತ್ತಾನೆ. ಆದರ್ಶ ವೀರ, ಆದರ್ಶ ಸುಂದರಿ, ಆದರ್ಶ ನಾಯಕರು ನಿಜವಾದ ವ್ಯಕ್ತಿಗಳೇ ಅಲ್ಲ; ಕೇವಲ ಆ ಗುಣಗಳ ಆದರ್ಶ ಮಾದರಿಗಳು ಮಾತ್ರ--ಅನೇಕ ವ್ಯಕ್ತಿಗಳಲ್ಲಿ ಅಂಶಿಕವಾಗಿ ಹಂಚಿಹೋಗಿರುವ ಗುಣವೊಂದನ್ನು ಬೇರೆ ಬೇರೆ ಕಡೆಯಿಂದ ಆಯ್ದು ತಂದು ಜೋಡಿಸಿದ ಕೃತಕ ರೂಪ. ವಾಸ್ತವತಾವಾದಿ ಕಲಾವಿದ ಇಂಥ ಕೃತಕತೆಯನ್ನು ತಿರಸ್ಕರಿಸುತ್ತಾನೆ. ಅದಕ್ಕೆ ಬದಲಾಗಿ ಯಾವ ಸಾಮಾನ್ಯ ಮನುಷ್ಯನೂ ಅವ ನಿಗೆ ವಸ್ತುವಾಗಬಲ್ಲ. ಸಾಮಾನ್ಯವೆನ್ನಬಹುದಾದ ದಿನನಿತ್ಯದ ಘಟನೆ, ಬೀದಿಯ ಸ್ವಾಭಾವಿಕ ದೃಶ್ಯವೂ ಅವನಿಗೆ ಸಾಕಾಗುತ್ತದೆ.

ಸಂಗತಿಗಳನ್ನು, ವ್ಯಕ್ತಿಗಳನ್ನು ಅವಿದ್ದ ಹಾಗೆಯೇ, ನಮ್ಮ ಇಂದ್ರಿಯಗಳಿಗೆ ಕಾಣಿಸುವ ರೀತಿಯಲ್ಲಿಯೇ, ಯಾವದಕ್ಕೂ ಒತ್ತು ಕೊಡದೆ, ಯಾವದನ್ನೂ ಕೈಬಿಡದೆ, ಯಾವದನ್ನೂ ಸುಂದರಗೊಳಿಸದೆ ಚಿತ್ರಿಸಬೇಕೆಂಬುದು ವಾಸ್ತವತಾವಾದದ ಉದ್ದೇಶ. ಆದ್ದರಿಂದ ಇಲ್ಲಿ ವಿವರ ಗಳಿಗೆ ಮಹತ್ವ ಹೆಚ್ಚು. ವಿವರಗಳ ವಿಷಯದಲ್ಲಿ ಆಯ್ಕೆಯ ಸ್ವಾತಂತ್ರ್ಯ ಕಡಿಮೆ.

ಇಂಥ ಚಿತ್ರಗಳನ್ನು ವಸ್ತುನಿಷ್ಠವಾಗಿ ನೀಡಬೇಕೆಂಬುದು ವಾಸ್ತವತಾವಾದದ ಇನ್ನೊಂದು ಪ್ರತಿಜ್ಞೆ. ಕಲಾವಿದನ ವೈಯಕ್ತಿಕ ಭಾವನೆಗಳು ಅವನ ಕಲಾಕೃತಿಯಲ್ಲಿ ಸೇರಿರಬಾರದು ಎಂದು ಇದರ ಅರ್ಥ. ಅಭಿವ್ಯಕ್ತಿವಾದ (Expressionism) ಕಲಾವಿದನ ಒಳಗಿನ ಭಾವನೆಗಳಿಗೆ ಅಭಿವ್ಯಕ್ತಿ ಕೊಟ್ಟು ಬಾಹ್ಯ ವಿವರಗಳನ್ನು ತಿರಸ್ಕರಿಸಿದರೆ, ವಾಸ್ತವತಾವಾದ ಇದಕ್ಕೆ ವಿರುದ್ಧವಾಗಿ ಬಾಹ್ಯ ವಿವರಗಳನ್ನು ಮುಖ್ಯವಾಗಿ ಇರಿಸಿಕೊಂಡು ಕಲಾವಿದನ ಅನಿಸಿಕೆಗಳನ್ನು ಹತ್ತಿಕ್ಕುತ್ತದೆ. ತಾನು ಚಿತ್ರಿಸುವ ವಿವರಗಳ ಬಗೆಗೆ ಕಲಾವಿದ ಯಾವ ನೈತಿಕ ತೀರ್ಮಾನವನ್ನೂ ಕೊಡಬಾರದು; ತತ್ವಶಾಸ್ತ್ರದ ಅರ್ಥವನ್ನು ಚಿತ್ರದ ಮೇಲೆ ಆರೋಪಿಸಬಾರದು, ಹಾಗೆಯೇ ರಸಿಕನನ್ನು ಯಾವದೇ ಕ್ರಿಯೆಗೆ ಪ್ರೇರಿಸಬಾರದು ಎಂಬುದು ವಾಸ್ತವತಾವಾದದ ಆಗ್ರಹ. ಎಂದರೆ, ಕಲಾವಿದ ತನ್ನ ಕೃತಿಯ ಬಗ್ಗೆ ತಟಸ್ಥವಾಗಿರಬೇಕು; ಅದನ್ನು ನೋಡಿದ ರಸಿಕನೂ ತಟಸ್ಥವಾಗಿ ಉಳಿಯಬೇಕು. ಒಟ್ಟಿನಲ್ಲಿ ಕಲಾಕೃತಿ ಕಲಾಕೃತಿಯಾಗಿಯೇ ಉಳಿಯಬೇಕೇ ಹೊರತು, ಸಂದೇಶವಾಗಿ ಮಾರ್ಪಡಬಾರದು.

ಹೀಗೆ ವಾಸ್ತವತಾವಾದ ಕೇವಲ ಒಂದು ಶೈಲಿಯಲ್ಲ. ಜೀವನವನ್ನು ಗ್ರಹಿಸುವ ರೀತಿಯಾಗಿದೆ, ಒಂದು ವಿಶಿಷ್ಟ ಜೀವನದೃಷ್ಟಿಯಾಗಿದೆ.

೩

ಇಂಥ ಜೀವನದೃಷ್ಟಿ ಕಲೆ, ಸಾಹಿತ್ಯಾದಿ ಕ್ಷೇತ್ರಗಳಲ್ಲಿ ಒಂದು ಆಂದೋಲನವಾಗಿ ಮೊದಲು ಆರಂಭವಾದದ್ದು ಯೂರೋಪಿನಲ್ಲಿ. ಅನೇಕ ಹೊಸ ವೈಚಾರಿಕ ಆಂದೋಲನ, ವಾದಗಳ ತೊಟ್ಟಿಲಾದ ಫ್ರಾನ್ಸ್‌ದೇಶದಲ್ಲಿಯೇ ವಾಸ್ತವತಾವಾದವೂ ಹುಟ್ಟಿಕೊಂಡಿತು. ೧೮೩೦ರ ಸುಮಾರಿಗೆ ಆರಂಭವಾದ ಈ ಆಂದೋಲನ ೧೮೫೦ರ ಹೊತ್ತಿಗೆ ಯೂರೋಪಿನ ತುಂಬಾ ವ್ಯಾಪಕವಾಗಿ ಹಬ್ಬಿಕೊಂಡಿತ್ತು.

ಈ ಹೊತ್ತಿಗೆ ಯೂರೋಪಿನಲ್ಲಿ ರೊಮ್ಯಾಂಟಿಕ್‌ವಾದದ ಅಬ್ಬರದ ಒಂದು ಅಲೆ ಆಗಲೇ ಬಂದುಹೋಗಿತ್ತು. ಅನಂತರವೂ ರೊಮ್ಯಾಂಟಿಕ್‌ವಾದ ಮುಂದುವರಿಯಿತಾದರೂ ವಾಸ್ತವತಾವಾದದ ಪೈಪೋಟಿಯನ್ನು ಎದುರಿಸಬೇಕಾಯಿತು. ಒಂದು ವಿಚಿತ್ರವಾದ ಅಂಶವೆಂದರೆ, ಸಾಹಿತ್ಯ ಕ್ಷೇತ್ರದಲ್ಲಿ, ಕಾವ್ಯದಲ್ಲಿ ರೊಮ್ಯಾಂಟಿಕ್‌ವಾದವೇ ಪ್ರಧಾನವಾಗಿ ಉಳಿದುಕೊಂಡರೂ ಕಾದಂಬರಿಯಲ್ಲಿ ಮತ್ತು ನಂತರ ನಾಟಕದಲ್ಲಿ ವಾಸ್ತವತಾವಾದದ ಕೈಮೇಲಾಯಿತು. ಅನೇಕ ಕಡೆ ಎರಡೂ ವಾದಗಳು ಜೊತೆಯಾಗಿಯೇ ನಡೆದುಬಂದವು. (ಈ ಮಾತು ಈ ಶತಮಾನದ ಕನ್ನಡ ನವೋದಯ ಸಾಹಿತ್ಯದ ವಿಷಯದಲ್ಲೂ ನಿಜ. ನವೋದಯ ಕಾವ್ಯ ರೋಮ್ಯಾಂಟಿಕ್ ಮನೋಧರ್ಮದ ಅನೇಕ ಅಂಶಗಳನ್ನು ಮೈಗೂಡಿಸಿಕೊಂಡು ಬೆಳೆದರೆ, ಕಥೆ ಕಾದಂಬರಿ ನಾಟಕಗಳು ವಾಸ್ತವತಾವಾದದ ಕಡೆಗೆ ಒಲಿದವು. ಈ ಸಾಹಿತ್ಯ ಪ್ರಕಾರಗಳ ವಿರುದ್ಧ ದಿಕ್ಕಿನ ಸೆಳೆತಗಳಿಗೆ ಕಾರಣವೇನೆಂಬುದು ಕುತೂಹಲಕರ ಅಭ್ಯಾಸವಾಗಬಲ್ಲದು).

ಈ ಎರಡೂ ಪರಸ್ಪರ ವಿರುದ್ಧವಾದ ವಾದಗಳಿಗೆ ದೊರೆತ ಸಾಮಾಜಿಕ ಪ್ರೇರಣೆಗಳು ಬೇರೆಬೇರೆ ದಿಕ್ಕಿನಿಂದ ಬಂದವೆನ್ನಬಹುದು. ವಾಸ್ತವತಾವಾದದ ಹಿಂದಿನ ಪ್ರೇರಣೆಗಳನ್ನು ಹೀಗೆ ಸಂಗ್ರಹಿಸಬಹುದು:

೧. ಅತ್ಯಂತ ಮುಖ್ಯವಾದ ಪ್ರೇರಣೆ ವಿಜ್ಞಾನದ ಬೆಳವಣಿಗೆ ಅದರಿಂದ ಹುಟ್ಟಿಕೊಂಡ ವೈಜ್ಞಾನಿಕ ದೃಷ್ಟಿಕೋನ. ರಹಸ್ಯ, ಅತಿಮಾನುಷ, ಬದುಕಿಗಿಂತ ದೊಡ್ಡ ಪ್ರಮಾಣದ, ಕಣ್ಣಿಗೆ ಕಾಣುವುದರ ಆಚೆಗಿನ ಎಲ್ಲವನ್ನೂ ನಿರಾಕರಿಸಿ ಇಂದ್ರಿಯ ಗ್ರಾಹ್ಯವಾದ ವಾಸ್ತವ ಬದುಕೇ ನಿಜ ವಾದ ಸತ್ಯವೆಂದು ಒಪ್ಪಿಕೊಂಡಿತು. ಬುದ್ಧಿ, ತರ್ಕ, ಪ್ರಮಾಣ. ಪ್ರತ್ಯಕ್ಷವೀಕ್ಷಣೆಗಳು ಅಂತಃ ಸ್ಫೂರ್ತಿಯ ಸ್ಥಾನವನ್ನು ಆಕ್ರಮಿಸಿಕೊಂಡವು. ಬದುಕಿನಲ್ಲಿ ಅಗಮ್ಯವಾದದ್ದು ಏನೂ ಇಲ್ಲ ಎಲ್ಲವನ್ನೂ ವಿಜ್ಞಾನದ ಸಹಾಯದಿಂದ ಅರಿಯಬಹುದು, ವಿವರಿಸಬಹುದು ಎಂಬ ನಂಬಿಕೆ ಬೆಳೆಯಿತು.

೨. ತತ್ವಶಾಸ್ತ್ರದಲ್ಲಿ ಬೆಳೆದು ಬಂದ ಭೌತಿಕವಾದ. ಬುದ್ಧಿ ಪ್ರಮಾಣವಾದಗಳ ಪ್ರಭಾವವೂ ಇದಕ್ಕೆ ಪೂರಕವಾಯಿತು. ಈ ಹೊತ್ತಿಗೆ ಪಶ್ಚಿಮದ ಮನಸ್ಸು ಅಮೂರ್ತವಾದ ಆಧ್ಯಾತ್ಮಿಕ ಯೋಚನೆಗಳಿಂದ ವ್ಯಾವಹಾರಿಕತೆಯ ಕಡೆಗೆ, ಮೂರ್ತ ಬದುಕಿನ ಕಡೆಗೆ ಹರಿಯತೊಡಗಿತು. ಬೇಕನ್ನಿನ ಪರಂಪರೆ ಮನಸ್ಸನ್ನು ಕೂಡ ಒಂದು ಭೌತಿಕ ದ್ರವ್ಯ ಎಂದು ಭಾವಿಸಿತ್ತು. ಭೌತಶಾಸ್ತ್ರ ಅದರ ರೂಪಾಂತರ, ಚಲನೆಗಳ ಹೊರತು ಸೃಷ್ಟಿಯಲ್ಲಿ ಬೇರೆ ಏನೂ ಇಲ್ಲ, ಎಂದು ಪ್ರತಿಪಾದಿಸಿದ ಹಾಬ್ಸ್‌ನ ಭೌತಿಕವಾದ (Materialism). ಇಂದ್ರಿಯಕ ಸಂವೇದನೆಯೊಂದೇ ಜ್ಞಾನದ ಮೂಲ ವೆಂದು ಸಾಧಿಸಿದ ಲಾಕ್‌ನ ಸಂವೇದನಾಜ್ಞಾನವಾದ (Sensationalisn), ಕಣ್ಣಿಗೆ ಕಾಣು ವುದು ಮಾತ್ರ ಸತ್ಯವೆಂದು ಭಾವಿಸಿದ ಆಗಸ್ಟ್ ಕಾಮ್ಟ್‌ನ ದೃಷ್ಟಿಪ್ರಮಾಣವಾದ (Positivism) ಅಮೂರ್ತ ಅಗಮ್ಯ ಅಜ್ಞಾತವಾದುದನ್ನೆಲ್ಲಾ ಸಂದೇಹಿಸುವ ಡೇವಿಡ್ ಹ್ಯಾಮ್‌ನ ಸಂದೇಹವಾದ (Scepticism) ಮೊದಲಾದ ತತ್ವಶಾಸ್ತ್ರೀಯ ಸಿದ್ಧಾಂತಗಳು ಬದುಕಿನ ಭೌತಿಕ ಸ್ವರೂಪ ಮತ್ತು ಬಾಹ್ಯ ವಿವರಗಳ ಮೇಲೇ ಗಮನವನ್ನು ಕೇಂದ್ರೀಕರಿಸತೊಡಗಿದ್ದನ್ನು ಕಾಣಬಹುದಾಗಿದೆ. ಈ ಸಿದ್ಧಾಂತಗಳ ಪರಿಣಾಮ ಸಹಜವಾಗಿಯೇ ಕಲಾವಿದರ ಜೀವನವನ್ನು ನೋಡುವ ದೃಷ್ಟಿಯನ್ನು ಪ್ರಭಾವಿಸಿತು. ಅದರಲ್ಲೂ ವಿಜ್ಞಾನಗಳಲ್ಲೆಲ್ಲಾ ಸಮಾಜಶಾಸ್ತ್ರವೇ ಮುಖ್ಯವಾದದ್ದೆಂದು ಹೇಳಿದ ಕಾಮ್ಟ್‌ನ ಪ್ರಭಾವ ಕಲೆಗಳು ಮನುಷ್ಯನ ಸ್ಥಿತಿಯನ್ನು ಗ್ರಹಿಸುವ ರೀತಿಯ ಮೇಲೆ ವಿಶೇಷ ಪ್ರಭಾವ ಬೀರಿತು. ಇವೆಲ್ಲ ಸಿದ್ಧಾಂತಗಳೂ ಬದುಕಿನ ಭೌತಿಕ ಸ್ವರೂಪದ ಮೇಲೇ, ಮೂರ್ತ ವಾದುದರ ಮೇಲೇ ಒತ್ತುಕೊಡುವುದನ್ನು ಕಾಣಬಹುದು.

೩. ಮಧ್ಯಮ ವರ್ಗದ ಹೊಸ ಬೆಳವಣಿಗೆಯೂ ಇನ್ನೊಂದು ಪ್ರೇರಕ ಶಕ್ತಿಯಾಯಿತು. ಹೊಸದಾಗಿ ಶ್ರೀಮಂತರಾದ ಮತ್ತು ವಿದ್ಯಾವಂತರಾದ ಮಧ್ಯಮ ವರ್ಗದ ಜನಕ್ಕೆ ಕಲೆಗಳ ಪ್ರಾಚೀನ ಪರಂಪರೆಯ ತಿಳುವಳಿಕೆ ಅಷ್ಟಾಗಿ ಇರಲಿಲ್ಲ. ಸುಲಭವಾಗಿ ಒಪ್ಪಬಹುದಾದ, ಸರಳ ವಾಗಿ ಅರ್ಥವಾಗಬಹುದಾದ ವಾಸ್ತವತಾವಾದದ ವೈಶಿಷ್ಟ್ಯಗಳು ಇವರಿಗೆ ಹೆಚ್ಚು ಇಷ್ಟವಾದವು. ಕಲೆಗಳು ರಾಜಾಶ್ರಯವನ್ನು ಕಳೆದುಕೊಂಡು ಬಹುಸಂಖ್ಯಾತರಾದ ಇಂಥ ಜನಸಾಮಾನ್ಯರ ಇಷ್ಟದ ಮೇಲೆ ಬದುಕಬೇಕಾದ ಸ್ಥಿತಿ ಏರ್ಪಟ್ಟಿದರಿಂದ ಕಲಾವಿದರು ಜನಸಾಮಾನ್ಯರ ಅಭಿರುಚಿಯನ್ನು ತಣಿಸಬೇಕಾಯಿತು. ಮೇಲುವರ್ಗದ ಧೀರೋದಾತ್ತ, ಬೃಹತ್ಪ್ರಮಾಣದ, ಆದರ್ಶೀಕೃತ ನಾಯಕರ ಸ್ಥಾನದಲ್ಲಿ ಸಾಮಾನ್ಯ ಮನುಷ್ಯ ಬಂದ. ಅವನ ದೈನಂದಿನ ಬದುಕಿನ ವಿವರಗಳನ್ನು ಕಲೆ ಹಿಡಿಯತೊಡಗಿತು.

೪. ಫ್ರಾನ್ಸಿನಲ್ಲಿ ನಡೆದ ರಾಜ್ಯಕ್ರಾಂತಿಯೂ ಮೇಲುವರ್ಗದ ಜನರ ಪ್ರಾಬಲ್ಯವನ್ನು ತಪ್ಪಿಸಿ ಸಾಮಾನ್ಯ ಮನುಷ್ಯನನ್ನು ಎತ್ತಿ ಹಿಡಿಯಿತು. ಜನಸಾಮಾನ್ಯರ ಆಶೋತ್ತರಗಳೇ ಮುಖ್ಯವಾದವು. ಈ ರಾಜ್ಯಕ್ರಾಂತಿ ರೂಸೋನಂಥ ತತ್ವಜ್ಞಾನಿಗಳ 'ನಿಸರ್ಗಕ್ಕೆ, ಸಹಜಸ್ವಭಾವಕ್ಕೆ ಹಿಂದಿರುಗಿರಿ' ಎಂಬಂಥ ವಾದಗಳ ಜೊತೆಗೆ ಸೇರಿಕೊಂಡು ರೊಮ್ಯಾಂಟಿಕ್‌ವಾದದ ಪುನರುತ್ಥಾನಕ್ಕೂ ಕಾರಣವಾಯಿತು. ರೊಮ್ಯಾಂಟಿಕ್‌ವಾದದಲ್ಲೂ ಒಬ್ಬ ಸಾಮಾನ್ಯ ಮನುಷ್ಯನ ಪ್ರತಿಷ್ಠೆಯಾಯಿತು. ಆದರೆ ರೊಮ್ಯಾಂಟಿಕ್ ಸಾಮಾನ್ಯಮನುಷ್ಯನಿಗೂ ವಾಸ್ತವತಾವಾದದ ಸಾಮಾನ್ಯ ಮನುಷ್ಯನಿಗೂ ಬಹಳ ಅಂತರವಿದೆ. ರೊಮ್ಯಾಂಟಿಕ್ ಸಾಮಾನ್ಯ ಮನುಷ್ಯ ವರ್ಡ್ಸ್‌ವರ್ಥ್‌ನ ಕವಿತೆಗಳ ನಾಯಕರಂತೆ ಹಳ್ಳಿಯ ಅಶಿಕ್ಷಿತ, ಮುಗ್ಧ, ಸರಳಜೀವಿ; ನಿಸರ್ಗದತ್ತವಾದ ಸಹಜ ಸ್ವಭಾವವನ್ನ ನಾಗರೀಕತೆಯ ಕೃತಕತೆಯಿಂದ ಕೆಡಿಸಿಕೊಳ್ಳದವನು; ಬಾಹ್ಯ ಪ್ರಭಾವ,ಕಲಿಕೆಗಳಿಂದ ದೂರವಿದ್ದು ಜೀವನವನ್ನು ಮುಕ್ತಮನಸ್ಸಿನಿಂದ ಸ್ವೀಕರಿಸುವವನು, ಬದುಕಿಗೆ ಸಹಜವಾಗಿ ಸ್ಪಂದಿಸುವವನು. ಒಂದು ದೃಷ್ಟಿಯಿಂದ ಇವನೂ ಆದರ್ಶೀಕೃತ ಸಾಮಾನ್ಯ. ನಮ್ಮ ಕುವೆಂಪು ಅವರ ಕಲ್ಪನೆಯ 'ಶ್ರೀ ಸಾಮಾನ್ಯ'. ಆದರೆ ವಾಸ್ತವತಾವಾದದ ಸಾಮಾನ್ಯ ಮನುಷ್ಯನಿಗೆ ಯಾವ ಶ್ರೀಕಾರವೂ ಇಲ್ಲ, ಯಾವ ಆದರ್ಶೀಕರಣವೂ ಇಲ್ಲ. ಅವನು ನಮ್ಮ–ನಿಮ್ಮಂಥ ರಕ್ತ ಮಾಂಸಗಳ ಮನುಷ್ಯ. ಕೊಳಕ, ದುಷ್ಟ, ವಿಟ, ಸೂಳೆ, ಶೋಷಕ, ಶೋಷಿತ, ಸುಳ್ಳ, ಮೋಸಗಾರ-ಎಂಥವನೂ ಆಗಿರಬಹುದು.

೫. ಇದೇ ಹೊತ್ತಿಗೆ ಬಂದ ಛಾಯಾಚಿತ್ರಗ್ರಹಣದ (Photography) ಶೋಧ (೧೮೩೯) ವಾಸ್ತವತಾವಾದಕ್ಕೆ ಒಂದು ನಿರ್ದಿಷ್ಟ ಮೂರ್ತ ಆದರ್ಶವನ್ನು ಒದಗಿಸಿತು. ವಾಸ್ತವತೆ ಎಂದರೇನು, ಅದನ್ನು ಹೇಗೆ ಗ್ರಹಿಸಬೇಕು, ವಿವರಗಳನ್ನು ಹೇಗೆ ಆಯ್ಕೆಯಿಲ್ಲದೆ ಹಿಡಿಯಬೇಕು ಎಂಬುದಕ್ಕೆ ಕ್ಯಾಮರಾ ಒರೆಗಲ್ಲಾಯಿತು ಜಗತ್ತನ್ನು ನೋಡುವ, ಬದುಕನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯ ಮೇಲೆ ಈ ಶೋಧ ಬೀರಿದ ಪ್ರಭಾವ ಅಷ್ಟಿಷ್ಟಲ್ಲ.

೪

ಇಂಥ ಪ್ರಭಾವಶಾಲಿ ಪ್ರೇರಣೆಗಳಿಂದ ಹುಟ್ಟಿಕೊಂಡ ವಾಸ್ತವತಾವಾದ ಬಹು ಬೇಗ ಅಭಿವ್ಯಕ್ತಿಯ ಹಲವಾರು ಕ್ಷೇತ್ರಗಳಿಗೆ ವ್ಯಾಪಿಸಿಕೊಂಡಿತು:

೧. ಚಿತ್ರಕಲೆಯಲ್ಲಿ ವಾಸ್ತವತಾವಾದದ ಶೈಲಿ-ದೃಷ್ಟಿಗಳನ್ನು ಅಳವಡಿಸಿಕೊಂಡ ಮೊದಲ ಮಹತ್ವದ ಚಿತ್ರಕಾರರಲ್ಲಿ ಕೂರ್ಬೆ (Courbet) ಮುಖ್ಯನಾದವನು. ಅವನು ಕಲೆಯಲ್ಲಿ ಯಾವದೇ ರೀತಿಯ ಆದರ್ಶೀಕರಣಕ್ಕೆ ವಿರೋಧಿಯಾಗಿದ್ದ. ಅಭಿಜಾತವಾದ ಮತ್ತು ರೊಮ್ಯಾಂಟಿಕ್‌ವಾದಗಳೆರಡನ್ನೂ ನಿರಾಕರಿಸಿ, ವಾಸ್ತವತಾವಾದವೊಂದೇ ಪ್ರಜಾಸತ್ತಾತ್ಮಕವಾದುದೆಂದು ವಾದಿಸಿದ. ರೈತ-ಕಾರ್ಮಿಕರೇ ಕಲೆಯ ಆದರ್ಶವಸ್ತುಗಳೆಂದು ಅವನ ನಿಲುವಾಗಿತ್ತು. ನಂತರದ ವಾಸ್ತವತಾವಾದೀ ಚಿತ್ರಕಾರರ ಮೇಲೆ ಇವನು ಬಹಳಷ್ಟು ಪ್ರಭಾವ ಬೀರಿದ.

ಚಿತ್ರಕಲೆಯಲ್ಲಿ ವಾಸ್ತವತಾವಾದದ ಪ್ರಭಾವದಿಂದಾಗಿ ರೂಪದರ್ಶಿಗಳನ್ನು ಇರಿಸಿಕೊಂಡು ವ್ಯಕ್ತಿಚಿತ್ರಗಳನ್ನು (Portraits) ರಚಿಸುವ ಪ್ರವೃತ್ತಿ ವಿಶೇಷವಾಗಿ ಬೆಳೆಯಿತು.

ಕೂರ್ಬೆ ಅಲ್ಲದೆ ಮಿಲೆ (Millet), ಕಾರೊ (Corot), ರೋಡೆ (Rodin) ಮತ್ತು ಬ್ರಿಟಿಷ್ ನಿಸರ್ಗಚಿತ್ರಕಾರ ಕಾನ್‌ಸ್ಟೇಬಲ್ ಮೊದಲಾದವರ ಚಿತ್ರಗಳನ್ನು ವಾಸ್ತವತಾವಾದೀ ಶೈಲಿಯ ಕೃತಿಗಳೆಂದು ಗುರುತಿಸಲಾಗುತ್ತಿದೆ.

೨. ಶಿಲ್ಪಕಲೆಯಲ್ಲಿ ವಾಸ್ತುಶಿಲ್ಪ, ಮೂರ್ತಿಶಿಲ್ಪಗಳೆರಡೂ ವಾಸ್ತವತಾವಾದದ ಪ್ರಭಾವಕ್ಕೆ ಒಳಗಾದವು. ವಾಸ್ತುಶಿಲ್ಪದಲ್ಲಿ ಪ್ರಯೋಜನವೇ ಮುಖ್ಯವಾಯಿತು. ಗಾಥಿಕ್, ವಿಕ್ಟೋರಿಯನ್ ಶೈಲಿಗಳ ಅಲಂಕರಣ ಕಡಿಮೆಯಾಗಿ ಸರಳತೆ ಬಂತು. ರೋಡೆಯ ಮೂರ್ತಿಶಿಲ್ಪಗಳಲ್ಲಿ ವಾಸ್ತವತೆಯೊಂದಿಗೆ ಕಾವ್ಯಾಂಶವೂ ಮೇಳೈಸಿತು.

ಚಿತ್ರಕಲೆಯಲ್ಲಿ ವಾಸ್ತವತಾವಾದವೇ ಮುಂದೆ ಪರಿಣಾಮವಾದವಾಗಿ(Impressionism) ಬೆಳೆಯಿತು. ಈ ಹೊಸ ಸಿದ್ಧಾಂತ ವಾಸ್ತವವಾದದ ಮುಖ್ಯ ನೆಲೆಯ ಮೇಲೇ ಮುಂದುವರಿದು ವಿವರಗಳ ವಸ್ತುನಿಷ್ಠ ಚಿತ್ರಣಕ್ಕೆ ಮಾತ್ರ ತೃಪ್ತವಾಗದೆ ಒಂದು ವಸ್ತುವನ್ನು ನೋಡಿದಾಗ ಕಲಾವಿದನ ಮನಸ್ಸಿನ ಮೇಲೆ ಆದ ಪರಿಣಾಮವನ್ನು, ಮೂಡಿದ ಭಾವನೆಗಳನ್ನು ಸಹ ಒಳಗೊಳ್ಳಲು ಪ್ರಯತ್ನಿಸಿತು. ಮನೆ (Monet), ಸೆಜಾನ್ (Cezanne), ರೆನ್ವಾ(Renoir) ಮೊದಲಾದ ಪ್ರಸಿದ್ಧ ಚಿತ್ರಕಾರರು ಈ ಪಂಥಕ್ಕೆ ಸೇರಿದವರು.

೩. ಸಾಹಿತ್ಯವೇ ವೈಚಾರಿಕತೆಯ ಮುಖ್ಯ ಮಾಧ್ಯಮವಾದ್ದರಿಂದ ವಾಸ್ತವತಾವಾದದ ಹಿಂದಿನ ವೈಚಾರಿಕ ನಿಲುವು ಸ್ಪಷ್ಟವಾದ ಅಭಿವ್ಯಕ್ತಿ ಪಡೆದದ್ದು ಸಾಹಿತ್ಯದಲ್ಲಿ, ಅದರಲ್ಲೂ ಕಾದಂಬರಿಯಲ್ಲಿ. ಫ್ರಾನ್ಸಿನ ಸ್ಟೆಂಡಾಲ್, ಬಾಲ್ಜಾಕ್, ಮೊಪಾಸಾ, ಎಮಿಲಿ ಜೋಲ, ಗಾನ್‌ಕೋರ್ಟ್ ಸೋದರರು, ರಷ್ಯದ ಟಾಲ್‌ಸ್ಟಾಯ್, ಟರ್ಜಿನೀವ್, ಗೊಗೊಲ್, ಮ್ಯಾಕ್ಸಿಂ ಗಾರ್ಕಿ, ಇಂಗ್ಲಂಡಿನ ಚಾರ್ಲ್ಸ್ ಡಿಕನ್ಸ್, ಜಾರ್ಜ್‌ಎಲಿಯಟ್, ಆ್ಯಂಟನಿ ಟ್ರಲಪ್, ಆರ್ನಲ್ಡ್ ಬೆನೆಟ್, ಸಾಮರ್ಸೆಟ್ ಮಾಮ್, ಜಾನ್ ಗಾಲ್ಸ್‌ವರ್ದಿ ಮೊದಲಾದವರ ಕಥೆ-ಕಾದಂಬರಿಗಳಲ್ಲಿ ವಾಸ್ತವತಾವಾದದ ಮುಖ್ಯ ಮತ್ತು ಪ್ರಾತಿನಿಧಿಕ ಉದಾಹರಣೆಗಳನ್ನು ಕಾಣಬಹುದು. ಮುಂದೆ ವಾಸ್ತವತಾವಾದವೇ ನೈಸರ್ಗಿಕವಾದ (Naturalism) ಎಂದು ಮತ್ತೊಂದು ಹಂತದಲ್ಲಿ ಬೆಳೆಯಿತು. ಗಸ್ತಾವ್‌ಫ್ಲಾಬೆ ಮತ್ತು ಎಮಿಲಿ ಜೋಲ ಈ ವಾದದ ಮುಖ್ಯ ಅನುಯಾಯಿಗಳು.

ನಾಟಕರಚನೆಯಲ್ಲೂ ಈ ವಾದದ ಪ್ರಭಾವ ಕಾಣಿಸಿಕೊಂಡಿತು. ನಾಟಕದಲ್ಲಿ ಈ ಶೈಲಿಗೆ ಮಾರ್ಗ ಹಾಕಿಕೊಟ್ಟವನು ನಾರ್ವೆ ದೇಶದ ಹೆನ್ರಿಕ್ ಇಬ್ಸನ್. ಸಾಮಾಜಿಕ ಹಾಗೂ ಮಧ್ಯಮವರ್ಗದ ಕೌಟುಂಬಿಕ ಸಮಸ್ಯೆಗಳನ್ನು ಕುರಿತು ಇವನು ನಾಟಕ ಬರೆದ. ಸ್ವಗತ, ಜನಾಂತಿಕ ಮೊದಲಾದ ರೂಢಿಗಳನ್ನು ಇವನು ತೆಗೆದು ಹಾಕಿದ. ಕ್ರಿಯೆಯ ಕಾಲ ಹಾಗೂ ಅಭಿನಯದ ಕಾಲಗಳನ್ನು ಹತ್ತಿರ ತಂದ. ದೃಶ್ಯಗಳನ್ನು ಮೂರು-ನಾಲ್ಕಕ್ಕೆ ಮಿತಿಗೊಳಿಸಿದ. ಸಂಭಾಷಣೆಗೆ ಗದ್ಯವನ್ನು, ಅದರಲ್ಲೂ ಆಡುಮಾತನ್ನು ಬಳಸಿದ. ನಾಟಕೀಯತೆ, ಸಾಂಕೇತಿಕತೆಗಳನ್ನು ನಿರಾಕರಿಸಿದ. ಆದರ್ಶೀಕೃತ ಮಾದರಿ ಪಾತ್ರಗಳನ್ನು ಬಿಟ್ಟು ಜನಸಾಮಾನ್ಯರ ನಿತ್ಯದ ಬದುಕನ್ನು ಚಿತ್ರಿಸಿದ. ನಂತರ ಇಂಗ್ಲಂಡಿನಲ್ಲಿ ಜಾರ್ಜ್ ಬರ್ನಾರ್ಡ್‌ಷಾ, ಜಾನ್ ಗಾಲ್ಸ್‌ವರ್ದಿ ಮೊದಲಾದ ಅನೇಕರು ಈ ಶೈಲಿಯನ್ನು ಇನ್ನೂ ಕಟ್ಟುನಿಟ್ಟಾಗಿ ಬಳಸಿದರು. ಇದರಿಂದಾಗಿ ಯೂರೋಪಿನ

ನಾಟಕಕ್ಕೆ ಒಳ್ಳೆಯದೇ ಆಯಿತು. ಸುಮಾರು ಎರಡು ನೂರು ವರ್ಷಗಳವರೆಗೆ ಹೊಸ ರಕ್ತವೇ ಇಲ್ಲದೆ ಸತ್ತೇ ಹೊಗಿದ್ದ ನಾಟಕಕ್ಕೆ ಹೊಸ ಜೀವ ಬಂತು. ಕೃತಕ ಕಥಾವಸ್ತು, ಅಬ್ಬರದ ವಾಗ್ಮಿಕತೆ, ಕಾವ್ಯದ ಮಾಧ್ಯಮಗಳಿಂದ ನಾಟಕ ಮುಕ್ತವಾಯಿತು.

೪. ನಾಟಕರಚನೆಯನ್ನು ಅನುಸರಿಸಿ ರಂಗಭೂಮಿಯ ಮೇಲಿನ ಪ್ರದರ್ಶನಶೈಲಿಯಲ್ಲಿಯೂ ಬದಲಾವಣೆಗಳಾದವು. ಈ ಬಗೆಯ ವಾಸ್ತವತಾವಾದಿ ಶೈಲಿಯನ್ನು ರೂಪಿಸಿ, ಅವಕ್ಕೊಂದು ಸಿದ್ಧಾಂತದ ನೆಲೆಗಟ್ಟನ್ನು ರಚಿಸಿದವನು ರಷ್ಯದ ನಿರ್ದೇಶಕ ಕಾನ್‌ಸ್ಟ್ಯಾಂಟಿನ್ ಸ್ಟ್ಯಾನಿಸ್ಲಾವಾಸ್ಕಿ. ಇವನು ಅಭಿನಯದಲ್ಲಿ ಸರಳ, ಸಹಜ ಶೈಲಿಯನ್ನು ಮತ್ತು ರಂಗಸಜ್ಜಿಕೆ, ವೇಷಭೂಷಣಗಳಲ್ಲಿ ವಾಸ್ತವತೆಯನ್ನು ತರಲು ಪ್ರಯತ್ನಿಸಿದ. ನಟ ಅಭಿನಯದಲ್ಲಿ ಪಾತ್ರದೊಂದಿಗೆ ಒಂದಾಗೀ ಧ್ವನಿಯ ಏರಿಳಿತ, ಹಾವಭಾವ, ಚಲನವಲನಗಳಲ್ಲಿ ಪರಿಪೂರ್ಣತೆ ಸಾಧಿಸುವಂತೆ ತರಬೇತಿ ವಿಧಾನಗಳನ್ನು ರೂಪಿಸಿದ. ಈ ಶೈಲಿಯೇ 'ಮೆಥಡ್ ಆ್ಯಕ್ಟಿಂಗ್' ಎಂದು ಪ್ರಸಿದ್ಧವಾಯಿತು.

ಇವಕ್ಕನುಗುಣವಾಗಿ ನಾಟಕಗಳ ಪ್ರದರ್ಶನದಲ್ಲಿ ಸಾಂಕೇತಿಕ ರಂಗಸಜ್ಜಿಕೆ ಹೋಗಿ ವಾಸ್ತವತಾವಾದೀ ಸೆಟ್ಟುಗಳು ಬಂದವು. ಮಹಡಿ ಮನೆ, ಹಡಗು, ದಿವಾನ ಖಾನೆ, ಲೈಬ್ರರಿ, ಅಂಗಡಿಗಳೆಲ್ಲ ನಿಜವಾದ ರೂಪದಲ್ಲಿಯೇ ರಂಗದ ಮೇಲೆ ಕಾಣಿಸಿಕೊಂಡವು. ಷೇಕ್ಸ್‌ಪಿಯರ್‌ನ ಅನೇಕ ನಾಟಕಗಳು ಹೊಸದಾಗಿ ವಾಸ್ತವ ರಂಗಸಜ್ಜಿಕೆಯೊಂದಿಗೆ ರಂಗಕ್ಕೆ ಬಂದವು

ಹೀಗೆ ವಾಸ್ತವತಾವಾದ ಕಲೆಯ ಅನೇಕ ರಂಗಗಳನ್ನು ಪ್ರಭಾವಿಸಿದರೂ ಸಂಗೀತ ಮತ್ತು ನೃತ್ಯಗಳನ್ನು ಮಾತ್ರ ತಟ್ಟಿದಂತೆ ಕಾಣುವುದಿಲ್ಲ.

೫

ಆದರೆ ವಾಸ್ತವತಾವಾದ ಕೇವಲ ೧೯ನೆಯ ಶತಮಾನದ ಹೊಸ ಬೆಳವಣಿಗೆಯೆ, ಈ ಹಿಂದೆ ಅದು ಇರಲೇ ಇಲ್ಲವೆ-ಎಂಬ ಪ್ರಶ್ನೆಯೂ ಇದೆ. ಹಿಂದೆಯೂ ವಾಸ್ತವತಾವಾದಿ ಕಲೆ ಇತ್ತೆಂದೇ ವಿಮರ್ಶಕರ ಅಭಿಪ್ರಾಯ. ಆದರೆ ಅದ ಒಂದು ಸಿದ್ಧಾಂತವಾಗಿ, ಜೀವನದೃಷ್ಟಿಯಾಗಿ ನಿರ್ವಚನಗೊಂಡದ್ದು ಮಾತ್ರ ಇದೇ ಮೊದಲು. ಒಂದು ಸಲ ವಾಸ್ತವತಾವಾದದ ಗುಣಲಕ್ಷಣಗಳನ್ನು ಖಚಿತಪಡಿಸಿಕೊಂಡ ಮೇಲೆ ಹಿಂದಿನ ಕಲೆಯಲ್ಲಿ ಇದ್ದ ವಾಸ್ತವತಾವಾದಿ ಅಂಶಗಳನ್ನು ಗುರುತಿಸುವುದು ಸುಲಭವಾಯಿತು. ಉದಾಹರಣೆಗೆ, ಇಟಲಿಯ ರಿನೇಸಾನ್ಸ್ ಕಾಲದ ಲಿಯನಾರ್ಡೊ ಡ ವಿಂಚಿಯ ಸುಪ್ರಸಿದ್ಧ ಚಿತ್ರವಾದ 'ಮೋನಾಲಿಸಾ' ಕೂಡ ಒಂದು ವಾಸ್ತವತಾವಾದಿ ಚಿತ್ರ ಎನ್ನಬಹುದು. ಇಟಲಿಯ ಒಬ್ಬ ಶ್ರೀಮಂತ ವರ್ತಕನ ಹೆಂಡತಿಯನ್ನು ರೂಪದರ್ಶಿಯಾಗಿ ಇರಿಸಿಕೊಂಡು ಬರೆದ ಈ ಚಿತ್ರ ಆದರ್ಶೀಕರಣದ ಮಾದರಿಯನ್ನು ಬಿಟ್ಟುಕೊಟ್ಟು ನಿರ್ದಿಷ್ಟ ವ್ಯಕ್ತಿಯನ್ನು ಯಥಾವತ್ತಾಗಿ ಚಿತ್ರಿಸುತ್ತದೆ.

ಹದಿನೈದನೆಯ ಶತಮಾನದಿಂದ ಇಂದಿನವರೆಗೂ ಬೆಳೆದು ಬಂದ ಡಚ್ ಮತ್ತು ಫ್ಲೆಮಿಷ್ ಪಂಥದ ಚಿತ್ರಕಲೆಯಲ್ಲಿ ವಾಸ್ತವತಾವಾದದ ಅನೇಕ ಅಂಶಗಳನ್ನು ಕಾಣಬಹುದಾಗಿದೆ. ಫ್ಲೆಮಿಷ್ ಪಂಥದ ಸಂಸ್ಥಾಪಕರಾದ ಡಿಕ್ ಸಹೋದರರ ಚಿತ್ರಗಳಲ್ಲಿ, ೧೫-೧೬ನೇ ಶತಮಾನದ ಫ್ಲೆಮಿಷ್ ಚಿತ್ರಕಾರ ರೂಬನ್ಸ್‌ನ ಪರಿಚಿತ ಮತ್ತು ಆತ್ಮೀಯ ಶೈಲಿಯಲ್ಲಿ, ೧೭ನೇ ಶತಮಾನದ ಡಚ್ ಚಿತ್ರಕಾರ ರೆಂಬ್ರಾಂಟ್‌ನ ಚಿತ್ರಗಳಲ್ಲಿ ಇಂಥ ಅನೇಕ ಅಂಶಗಳಿವೆ. ಈ ಕಲೆ ವಾಸ್ತವತೆಯ ಅಕ್ಷರಶಃ ಅನುಕರಣೆಯೇನೂ ಅಲ್ಲ. ಆದರೆ ರಾಜಾಸ್ಥಾನದ ವೈಭವ, ಅಲಂಕಾರ, ಸೌಂದರ್ಯೀ

ಕರಣ, ನಯುಗಾರಿಕೆಗಳಿಂದ ದೂರವಾದ ಮಧ್ಯಮ ವರ್ಗದ ಕಲೆ, ಮಧ್ಯಮ ವರ್ಗದ ಬೇಕು ಬೇಡಗಳನ್ನು ಅನುಸರಿಸಿ ಅದರ ಆಶೋತ್ತರಗಳನ್ನು ಚಿತ್ರಿಸುವಂಥದು. ಪರಿಚಿತ ಜಗತ್ತಿಗೆ ಜನ ಸಾಮಾನ್ಯರ ಬದುಕಿಗೆ ಸೀಮಿತವಾದದ್ದು. ಉದಾಹರಣೆಗೆ, ರಿನೇಸಾನ್ಸ್ ಕಾಲದಲ್ಲಿ ಚಿತ್ರಿತವಾದ ಕ್ರಿಸ್ತನ ಜನ್ಮವನ್ನು ಕುರಿತ ಯಾವದೇ ಚಿತ್ರದೊಂದಿಗೆ ೧೬ನೇ ಶತಮಾನದ ಫ್ಲೆಮಿಷ್ ಚಿತ್ರಕಾರ ಹೀರಾನಿಮಸ್ ಬಾಸ್ (Hieronymus Bosch)ನ Adoration of the Shepherds ಎಂಬ ಚಿತ್ರವನ್ನ ಹೋಲಿಸಿ ನೋಡಬಹುದು. ರಿನೇಸಾನ್ಸ್ ಚಿತ್ರದ ಮೇರಿ ಮುಗ್ಧ ಚೆಲುವಿನ ಆದರ್ಶರೂಪ, ದೈವಿಕ ಕಳೆಯುಳ್ಳವಳು. ಮಗು ಕ್ರಿಸ್ತನೂ ಅಷ್ಟೆ; ಆರೋಗ್ಯ ತುಂಬಿ ತುಳುಕುವ ಚೆಲುವ ಮಗು. ಇಬ್ಬರಿಗೂ ಪ್ರಭಾವಳಿ ಇದೆ. ಕ್ರಿಸ್ತನ ಜನ್ಮಸ್ಥಾನವನ್ನು ಸೂಚಿಸುವ ನಕ್ಷತ್ರ, ಅದನ್ನು ಅನುಸರಿಸಿ ಬಂದು ದರ್ಶನದಿಂದ ಧನ್ಯರಾದ ಮೇಜಾಯ್‌ಗಳು ಪರಿಸರದಲ್ಲಿ ವಿಶೇಷ ವಾದ ಅಲೌಕಿಕ ಪಾವಿತ್ರ್ಯ. ಆದರೆ ಬಾಸ್‌ನ ಚಿತ್ರದ ಶೈಲಿ, ಅದೇ ಪಾತ್ರಗಳಿದ್ದೂ ತೀರಾ ಭಿನ್ನ ವಾದುದು. ಮೇರಿ ಒಬ್ಬ ಸಾಮಾನ್ಯ ಫ್ಲೆಮಿಷ್ ಗೃಹಿಣಿ. ಒಂದು ಸಾಧಾರಣ ಗೋದಲಿಯಲ್ಲಿ ಮಗು ಮಲಗಿದೆ. ಎರಡು ಆಕಳು ಜನರ ನಡುವೆಯೇ ಮುಂದಕ್ಕೆ ಮುಖ ಚಾಚಿವೆ. ಮೇಜಾ ಯ್‌ಗಳ ಮುಖದಲ್ಲಿ ಸಂತೋಷವಿದ್ದರೂ ಅವರು ಬದುಕಿನ ಕಷ್ಟದಲ್ಲಿ ಬಳಲಿದ ಸಾಮಾನ್ಯ ಕುರು ಬರು. ಪ್ರಭಾವಳಿ ಇಲ್ಲ, ನಕ್ಷತ್ರವೂ ಇಲ್ಲ ಬದಲಾಗಿ ಹತ್ತಿರದ ಮನೆಯ ಮಾಳಿಗೆಯ ಮೇಲೆ ಎತ್ತರದಲ್ಲಿ ಒಂದು ಕಾಗೆ ಕುಳಿತಿದೆ. ಈ ಕೊನೆಯ ವಿವರವಂತೂ ಅನನ್ಯವಾದದ್ದು. ಯಾವ ಅಭಿಜಾತ ಇಲ್ಲವೆ ರೊಮ್ಯಾಂಟಿಕ್ ಚಿತ್ರದಲ್ಲೂ ಇದರ ಊಹೆ ಕೂಡ ಅಸಾಧ್ಯ. ವಾಸ್ತವತಾ ವಾದಿ ಕಲೆಗೆ ವಾಸ್ತವವೇ ಆದರ್ಶ.

ಹೀಗೆ ವಾಸ್ತವತಾವಾದದ ಅನೇಕ ಅಂಶಗಳು ಬಿಡಿಯಾಗಿ, ಗುಂಪಾಗಿ ಹಿಂದಿನ ಕಲಾಪಂಥ ಗಳಲ್ಲಿ ಕಾಣಿಸಿಕೊಂಡಿದ್ದರೂ, ಅದೇ ಒಂದು ವಿಶಿಷ್ಟ ಪಂಥವಾಗಿ ಹೆಸರು ಪಡೆದದ್ದು ಮಾತ್ರ ೧೯ನೇ ಶತಮಾನದ ಬೆಳವಣಿಗೆ.

ಆದರೆ ಭಾರತೀಯ ಕಲೆಯಲ್ಲಿ ವಾಸ್ತವತಾವಾದ ಹಿಂದೆ ಮಾನ್ಯತೆ ಪಡೆದ ಹಾಗೆ ಕಾಣುವು ದಿಲ್ಲ. ಮೊದಲಿನಿಂದಲೂ ಅದು ಸಾಂಕೇತಿಕತೆಗೆ ಪ್ರಾಮುಖ್ಯತೆ ಕೊಟ್ಟದ್ದು. ಹಲವಾರು ಮುಖ, ಕೈಗಳನ್ನುಳ್ಳ ದೇವತೆಗಳು, ಪುರಾಣಗಳ ಅಲೌಕಿಕ ಸನ್ನಿವೇಶಗಳು ಭಾರತೀಯ ಚಿತ್ರ, ಶಿಲ್ಪಗಳಿಗೆ ವಸ್ತುಗಳಾಗುತ್ತ ಬಂದಿವೆ. ಬರಬರುತ್ತ ಸಾಂಕೇತಿಕತೆ ಸೂತ್ರಬದ್ಧವಾಗಿ ಯಾಂತ್ರಿಕವಾದದ್ದು ಜಡವಾದದ್ದು ಕಾಣುತ್ತದೆ. ಅಂಥಲ್ಲಿ ಸೃಜನಶೀಲತೆ ಕಾಣುವುದಿಲ್ಲ. ಅದನ್ನು ಮೀರಿ ಬಂದ ಅಜಂತಾ, ರಾಜಸ್ಥಾನಿ ಕಲಾಸಂಪ್ರದಾಯಗಳು ವಾಸ್ತವತಾವಾದಿ ಪಂಥಕ್ಕೆ ಸೇರಿದುವಲ್ಲ. ಬದ ಲಾಗಿ, ರೊಮ್ಯಾಂಟಿಕ್ ಗುಣಧರ್ಮಗಳನ್ನು ಒಳಗೊಂಡ ಬೇರೆ ಬಗೆಯ ಭಾವನಾಪ್ರಧಾನ ಚೆಲು ವನ್ನು ಪಡೆದಂಥವು. ರೂಪದರ್ಶಿಗಳನ್ನು ಎದುರಿಗೆ ಕೂಡ್ರಿಸಿಕೊಂಡು ಎಲ್ಲ ವಿವರಗಳಲ್ಲೂ ಮೂಲ ರೂಪದ ಪ್ರತಿಕೃತಿ ಇಳಿಸುವ ಸಂಪ್ರದಾಯವೂ ನಮ್ಮಲ್ಲಿರಲಿಲ್ಲ. ಕಾಳಿದಾಸನ "ಶಾಕುಂತಲ"ದಲ್ಲಿ ದುಷ್ಯಂತ-ಶಕುಂತಲೆಯ, ಶೂದ್ರಕನ "ಮೃಚ್ಛಕಟಿಕ"ದಲ್ಲಿ ವಸಂತಸೇನೆ-ಚಾರುದತ್ತನ ಚಿತ್ರ ಬರೆದ ಪ್ರಸಂಗಗಳಿವೆ. ಆದರೆ ಅಲ್ಲಿಯೂ ಮೂಲ ವಸ್ತುವನ್ನು ಎದುರಿಗೆ ಕೂಡ್ರಿಸಿಕೊಂಡು ಬರೆದ ಉಲ್ಲೇಖ ಬರುವುದಿಲ್ಲ. ಈ ಬೆಳವಣಿಗೆ ತೀರ ಇತ್ತೀಚಿನದು. ರಾಜಾ ರವಿವರ್ಮನಂಥ ಚಿತ್ರ

ಕಾರರು ವ್ಯಕ್ತಿಚಿತ್ರಗಳಿಗೆ ಮಾತ್ರವಲ್ಲ, ಅನೇಕ ಪೌರಾಣಿಕ ಸನ್ನಿವೇಶಗಳಿಗೂ ರೂಪದರ್ಶಿಗಳನ್ನು ಬಳಸಿಕೊಂಡದ್ದು ಈಚಿನ ಇಂಥ ಬೆಳವಣಿಗೆ.

೬

ವಾಸ್ತವತಾವಾದ ಬಹು ಬೇಗ ಒಂದು ಪ್ರಭಾವಶಾಲಿ ಮತ್ತು ಜನಪ್ರಿಯ ಕಲಾಶೈಲಿಯಾಗಿ ಬೆಳೆಯಿತು ಅದರಿಂದಾಗಿ ಕಲೆಯ ಮೇಲೆ ಆದ ಪರಿಣಾಮಗಳು ಬಹಳ ದೂರಗಾಮಿಯಾಗಿದ್ದವು ಕಲೆಯನ್ನು ನೋಡುವ ದೃಷ್ಟಿಯನ್ನು ಅದು ಬದಲಿಸಿತೆನ್ನಬಹುದು:

೧. ವಾಸ್ತವತಾವಾದ ಕಲಾವಿದನಿಗೆ ವಸ್ತುವಿನ ಆಯ್ಕೆಯ ವಿಷಯದಲ್ಲಿ ಹೊಸಸ್ವಾತಂತ್ರ್ಯವನ್ನು ಒದಗಿಸಿತು. ಈವರೆಗೆ ಪುರಾಣ, ಬೈಬಲ್‌ಗಳಂಥ ವಸ್ತುಗಳಿಗೆ ಸೀಮಿತವಾಗಿದ್ದ ಕಲೆಗೆ ವ್ಯಾಪಕವಾದ ನೆಲೆ ದೊರಕಿದಂತಾಯಿತು. ಸುತ್ತಲಿನ ಬದುಕಿನ ಯಾವ ದೃಶ್ಯವೂ, ವ್ಯಕ್ತಿಯೂ ವಸ್ತುವಾಗಬಹುದೆಂದಾಯಿತು. ಸಮಾಜದ ಕೆಳ ವರ್ಗದ ಬದುಕೂ ಕಲೆಯ ಪರಿಧಿಯಲ್ಲಿ ಬಂತು. ಆರಂಭದ ಉತ್ಸಾಹದಲ್ಲಿ ಅನೇಕರು ಈವರೆಗೆ ಕಲೆಯ ಆವರಣದಲ್ಲಿ ಬಾರದಿದ್ದ ಇಂಥ ಕೆಳ ವರ್ಗದ ಬದುಕನ್ನ ವ್ಯಾಪಕವಾಗಿ ಚಿತ್ರಿಸಿದರು. ಜೊತೆಗೆ ನಿಸರ್ಗಚಿತ್ರ, ವ್ಯಕ್ತಿಚಿತ್ರಗಳ ಕಲೆಗೆ ಹೊಸ ಪ್ರೇರಣೆ ದೊರೆಯಿತು.

೨. ಯೂರೋಪಿನ ರಾಜಕೀಯದಲ್ಲಿ ರಾಜಸತ್ತೆಯಿಂದ ಪ್ರಜಾಸತ್ತೆಗೆ ಬದಲಾಗಬೇಕೆಂಬ ಜನರ ಆಶೆಯನ್ನು ಈ ಕಲೆ ಎತ್ತಿ ಹಿಡಿಯಿತು. ಸಮಾಜದಲ್ಲಿ ಎಲ್ಲರೂ ಸಮಾನರು, ಕಲೆಗೆ ಯಾರು ಬೇಕಾದರೂ ವಸ್ತುವಾಗಬಹುದೆಂಬ ನಂಬಿಕೆಯಲ್ಲಿ ಕಲೆ ಪ್ರಜಾಪ್ರಭುತ್ವೀಕರಣ ಹೊಂದಿತು. ಅರಮನೆ, ಚರ್ಚುಗಳ ಹಂಗು ಹರಿದುಕೊಂಡು ಧರ್ಮನಿರಪೇಕ್ಷವಾಯಿತು.

೩. ವಾಸ್ತವ ಬದುಕಿಗೆ ಕಲೆಯನ್ನು ಹತ್ತಿರ ತಂದಿತು. ಕಲೆಯಲ್ಲಿ ಜನ ತಮ್ಮ ಬದುಕಿನ ವಿವರಗಳನ್ನೇ ಗುರುತಿಸಿ ಅದನ್ನು ಮೆಚ್ಚಿಕೊಂಡರು. ಸುಲಭವಾಗಿ ಅರ್ಥವಾದುದರಿಂದ ಹೆಚ್ಚು ಸಂಖ್ಯೆಯಲ್ಲಿ ಜನ ಕಲೆಗೆ ಆಕರ್ಷಿತರಾದರು. ರಸಿಕರ ಸಂಖ್ಯೆ ಅಪಾರವಾಗಿ ಹೆಚ್ಚಿತು.

೪. ವಾಸ್ತವತಾವಾದ ಈ ಜಗತ್ತನ್ನೇ ನಿಜವಾದುದೆಂದು ಭಾವಿಸುವ ಮೂಲಕ ಜೀವನ ಪ್ರೀತಿಯನ್ನು ಬೆಳೆಸಿತು. ಕೇವಲ ಆದರ್ಶಗಳ, ಕನಸುಗಳ ಜಗತ್ತಿಗಿಂತ ಈ ಜಗತ್ತು ಅದಿದ್ದ ಹಾಗೆಯೇ ಸಾಕಷ್ಟು ಸುಂದರವಾಗಿದೆಯೆಂದು ತೋರಿಸಿತು. ಹಾಗೆಯೇ ಅದರ ಕುರೂಪ, ಸಮಸ್ಯೆಗಳನ್ನೂ ಚಿತ್ರಿಸಿ ವಾಸ್ತವ ಪ್ರಜ್ಞೆಯನ್ನು ಮೂಡಿಸಿತು. ನಾವು ಬದುಕಿ ಬಾಳಬೇಕಾದ ಜಗತ್ತೇ ನಮಗೆ ಮುಖ್ಯವೆಂದು ತೋರಿಸಿತು.

ಅತ್ಯಂತ ಮುಖ್ಯವಾಗಿ, ಕಲೆಗೂ-ಸೌಂದರ್ಯಕ್ಕೂ ಬಹಳ ಕಾಲದಿಂದ ರೂಢವಾಗಿದ್ದ ಸಂಬಂಧವನ್ನು ಹೊಸದಾಗಿ ಅರ್ಥೈಸಿದ್ದು ವಾಸ್ತವವಾದದ ದೊಡ್ಡ ಸಾಧನೆ. ಅದರಿಂದಾಗಿ ಸೌಂದರ್ಯದ ಬಗೆಗಿನ ದೃಷ್ಟಿಯೇ ಬದಲಾಯಿತು. ಇಂದಿಗೂ ಬಹಳ ಜನರಲ್ಲಿ ಕಲೆ ಎಂದರೆ ಸುಂದರವಾದದ್ದರ ಚಿತ್ರಣ, ಸೌಂದರ್ಯವೇ ಕಲೆ ಎಂಬ ಗ್ರಹಿಕೆ ಆಳವಾಗಿ ಬೇರೂರಿದೆ. ಆದರೆ

ಮೂಲಭೂತವಾಗಿ ಕಲೆಗೂ-ಸೌಂದರ್ಯಕ್ಕೂ ಅಂಥ ಸಂಬಂಧವಿಲ್ಲ. ಸುಂದರವಾದದ್ದು ಮಾತ್ರ ಕಲೆಯಾಗುತ್ತದೆ ಎಂಬ ನಿಯಮವೂ ಇಲ್ಲ. ಹಾಗಿದ್ದಲ್ಲಿ ಆಫ್ರಿಕದ ಆದಿವಾಸಿಗಳ ಕಲೆಯನ್ನು ಕಲೆ ಎಂದು ಒಪ್ಪುವುದೇ ಸಾಧ್ಯವಿಲ್ಲ. ಅಸುಂದರವಾದದ್ದೂ ಕಲೆಯಾಗಬಲ್ಲದು ಎಂಬ ಹೊಸ ತಿಳುವಳಿಕೆಯನ್ನು ವಾಸ್ತವತಾವಾದ ಬೆಳೆಸಿತು. ಈ ಗ್ರಹಿಕೆಯನ್ನು ಹೊಸದಾಗಿ ಕಂಡುಕೊಂಡ ಉತ್ಸಾಹದಲ್ಲಿ ವಾಸ್ತವತಾವಾದಿಗಳು ಜೀವನದ ಕುರೂಪವನ್ನೇ ಹೆಚ್ಚುಹೆಚ್ಚಾಗಿ ಚಿತ್ರಿಸಿದರು. ಶ್ಲೀಲ-ಅಶ್ಲೀಲಗಳ ನಡುವಿನ ಅಂತರವನ್ನು ತೊಡೆದುಹಾಕಿದರು. ಸಾಹಿತಿಗಳು ಕೂಡ ಇದೇ ಮೇಲ್ಪಂಕ್ತಿಯನ್ನು ಅನುಸರಿಸಿದರು. ಅಲೆಗ್ಸಾಂಡರ್ ಕುಪ್ರಿನ್ನನ "ಯಾಮಾ" ಸೂಳೆಗಾರಿಕೆಯ ನರಕವನ್ನು ಚಿತ್ರಿಸುತ್ತದೆ. ಎಮಿಲಿ ಜೋಲಾನ "ಜರ್ಮಿನಲ್" ಗಣಿ ಕೆಲಸಗಾರರ ದಾರುಣವಾದ ಮಾನವೀಯ ಪಾತಳಿಗಿಂತ ಕೆಳಗಿನ ಬದುಕನ್ನು ತೋರಿಸುತ್ತದೆ. ಅಲ್ಲಿ ಯಾವುದೂ ಅಶ್ಲೀಲವಲ್ಲ. ಜೋಲಾನ ಕಾದಂಬರಿಯಲ್ಲಿ ಗಣಿ ಕಾರ್ಮಿಕರಾದ ಹೆಂಗಸರು ತಮ್ಮನ್ನು ಕಾಡಿಸುತ್ತಿದ್ದ ಕಾಮುಕ ಅಂಗಡಿಕಾರನ ಲಿಂಗವನ್ನೇ ಕತ್ತರಿಸಿ ಮೆರವಣಿಗೆಯಲ್ಲಿ ಒಯ್ಯುವ ಚಿತ್ರವೊಂದಿದೆ.

೭

ವಾಸ್ತವತಾವಾದದ ಹಿಂದೆ ಇಷ್ಟೆಲ್ಲ ಸಾಧನೆಗಳಿದ್ದರೂ ಅದಕ್ಕೆ ಅದರದೇ ಆದ ಮಿತಿಗಳೂ ಇಲ್ಲದೆ ಇಲ್ಲ, ಮತ್ತು ಅವು ಗೌಣವೆಂದೂ ಹೇಳುವಂತಿಲ್ಲ. ಯಾವ ಪಂಥವೂ ಅತಿಗೆ ಹೋದಾಗ, ಸಾಮಾನ್ಯ ಉತ್ಸಾಹಿಗಳ ಕೈಯಲ್ಲಿ ಅಪಾರ್ಥಕ್ಕೀಡಾದಾಗ ಅದರಲ್ಲಿ ಅನೇಕ ದೌರ್ಬಲ್ಯಗಳೂ ಕಾಣಿಸಿಕೊಳ್ಳುತ್ತವೆ. ತಮ್ಮ ಸೀಮಿತ ಕ್ಷೇತ್ರವನ್ನು ಮೀರಿ ಇಡಿಯ ಕಲೆಯ ಮೇಲೆಯೇ ದೂರಗಾಮಿಯಾದ ದುಷ್ಪರಿಣಾಮಗಳನ್ನು ಬೀರುತ್ತವೆ. ವಾಸ್ತವತಾವಾದದಲ್ಲೂ ಹಾಗಾಯಿತು:

೧. ಕಲೆಯಲ್ಲಿ ವಿವರಗಳಿಗೆ ದೊರೆತ ವಿಪರೀತ ಮಹತ್ವದಿಂದಾಗಿ ಕಲಾಕೃತಿಯ ಆದ್ಯತೆಗಳೇ ಏರುಪೇರಾದವು. ಕೇಂದ್ರ ವಸ್ತುವಿಗೆ ಸಿಗಬೇಕಾದ ಒತ್ತನ್ನು ಮೀರಿ ವಿವರಗಳೇ ಮುಖ್ಯವಾದವು. ಎಷ್ಟೋ ಸಲ ಕೇಂದ್ರವಸ್ತುವಿಗೆ ಸಂಬಂಧವಿಲ್ಲದ ಅನಾವಶ್ಯಕವಾದ ವಿವರಗಳೂ ಸೇರಿಕೊಂಡವು. ಇದು ಅಭಿವ್ಯಕ್ತಿಯಲ್ಲಿ 'ಸಾಧನಗಳ ಮಿತವ್ಯಯ ತತ್ವ'ವನ್ನೇ ಗೌಣವಾಗಿಸಿತು. ಆಯ್ಕೆ, ಔಚಿತ್ಯಗಳ ಪ್ರಶ್ನೆ ಹಿಂದುಳಿಯಿತು.

೨. ಎಲ್ಲಕ್ಕಿಂತ ಮುಖ್ಯವಾಗಿ, ವಾಸ್ತವದ ಆಚೆಗಿನದು, ಅವಾಸ್ತವವಾದದ್ದು ಕಲೆಯೇ ಆಗಲಾರದೆಂಬ ಗ್ರಹಿಕೆಯನ್ನು ವಾಸ್ತವತಾವಾದ ವ್ಯಾಪಕವಾಗಿ ಹರಡಿತು. ವಾಸ್ತವವನ್ನು ಮೀರಿದ ಸತ್ಯವೂ ಇದೆಯೆಂಬ ನಂಬಿಕೆಯನ್ನೇ ಅಳಿಸಿಹಾಕಿತು. ಬದುಕಿನ ಅಗಮ್ಯತೆ, ರಹಸ್ಯಮಯತೆ, ಅತೀಂದ್ರಿಯಜ್ಞಾನ, ಅಂತಃಸ್ಫೂರ್ತಿ, ಆಂತರಿಕ ಭಾವನೆ, ಅಂತರ್ದೃಷ್ಟಿಗೆ ಮಾತ್ರ ಹೊಳೆಯುವ ಬದುಕಿನ ಮಹತ್ವದ ಸತ್ಯಗಳಿಗೆ ಕಲೆ ಕುರುಡಾಯಿತು.

೩. ಒಂದು ಕತೆ ಪ್ರಚಾರದಲ್ಲಿದೆ. ರಾಜನೊಬ್ಬ ಚಿತ್ರಕಲೆಯ ಸ್ಪರ್ಧೆಯನ್ನು ಏರ್ಪಡಿಸಿದ. ಒಬ್ಬ ಚಿತ್ರಕಾರ ಗುಲಾಬಿ ಹೂವಿನ ಚಿತ್ರವನ್ನು ಬಿಡಿಸಿ ತಂದ. ಅವನು ಬಿಡಿಸಿದ ಹೂವು ಆಕಾರ, ಬಣ್ಣ, ನೆರಳು-ಬೆಳಕಿನ ಸಂಯೋಜನೆಯಲ್ಲಿ ಎಷ್ಟು ವಾಸ್ತವಿಕವಾಗಿತ್ತೆಂದರೆ, ಅದು ನಿಜವಾದ ಹೂವೆಂದೇ ಭ್ರಮಿಸಿ ಭ್ರಮರವೊಂದು ಹಾರಿಬಂದು ಪರಾಗ ಸೇವನೆಗೆಂದು ಅದರ ಮೇಲೆ

ಉಳಿತಿತು. ಎಂಥ ಅಪೂರ್ವ ಕಲೆ ಎಂದು ಎಲ್ಲರೂ ಬೆರಳು ಕಚ್ಚಿದರು. ಇನ್ನೊಬ್ಬ ಚಿತ್ರಕಾರ ಮಾವಿನ ಹಣ್ಣಿನ ಚಿತ್ರ ಬರೆದು ತಂದ. ಅದೂ ಕೂಡ ಎಷ್ಟು ಜೀವಂತವಾಗಿತ್ತೆಂದರೆ, ಅದು ನಿಜವಾದ ಹಣ್ಣೇ ಎಂದು ಭ್ರಮಿಸಿ ಗಿಳಿಯೊಂದು ಹಾರಿಬಂದು ಅದನ್ನು ಕುಕ್ಕತೊಡಗಿತು. ಹೂವಿನ ಚಿತ್ರಕ್ಕಿಂತ ಹಣ್ಣಿನ ಚಿತ್ರ ಇನ್ನೂ ಹೆಚ್ಚಿನ ಪ್ರಶಂಸೆ ಗಳಿಸಿತು. ಮುಂದೆ ಇನ್ನೊಂದು ಚಿತ್ರವಿತ್ತು. ಅದರ ಮೇಲೆ ತೆರೆಯೊಂದನ್ನು ಮುಚ್ಚಲಾಗಿತ್ತು. ರಾಜ ಆ ತೆರೆಯನ್ನು ಎತ್ತಿ ಹಿಂದಿನ ಚಿತ್ರ ವನ್ನು ನೋಡಲು ಹೋದ. ಆದರೆ ಅಲ್ಲಿ ತೆರೆಯೇ ಇರಲಿಲ್ಲ, ಆ ತೆರೆಯೇ ಚಿತ್ರವಾಗಿತ್ತು. ಅದನ್ನು ಕಲಾವಿದ ಎಷ್ಟು ವಾಸ್ತವಿಕವಾಗಿ ಬಿಡಿಸಿದ್ದನೆಂದರೆ, ಅದು ನಿಜವಾದ ತೆರೆಯೇ ಎಂದು ಯಾರಾದರೂ ಮರುಳಾಗಬಹುದಾಗಿತ್ತು. ಹಿಂದಿನ ಎರಡು ಚಿತ್ರಗಳು ಕೀಟ, ಪಕ್ಷಿಗಳನ್ನು ಮೋಸಗೊಳಿಸಿದ್ದರೆ, ಇಲ್ಲಿ ಬುದ್ಧಿವಂತನಾದ ಮನುಷ್ಯನೇ ಮೋಸಹೋಗಿದ್ದ. ಮೊದಲ ಬಹು ಮಾನ ಆ ತೆರೆಗೇ ಸಿಕ್ಕಿತೆಂದು ಬೇರೆ ಹೇಳಬೇಕಾಗಿಲ್ಲ.

ಇದು ವಾಸ್ತವತಾವಾದ ಕತೆಗಳ ಬಗೆಗೆ ಹುಟ್ಟಿಸಿದ ನಿರೀಕ್ಷೆಗಳಿಗೆ ಒಂದು ಒಳ್ಳೆಯ ನಿದರ್ಶನ ಎನ್ನಬಹುದು. ಹೀಗೆ ಬದುಕಿನ ಸಾದೃಶ್ಯವನ್ನು, ಪ್ರತಿಕೃತಿಯನ್ನು ಸೃಷ್ಟಿಸುವುದೇ ಕಲೆಯ ಗುರಿ ಎನ್ನುವ ತಿಳುವಳಿಕೆಯನ್ನು ಇದು ಹುಟ್ಟಿಸಿತು. ಬದುಕನ್ನು ಎಷ್ಟು ತದ್ವತ್ತಾಗಿ ಚಿತ್ರಿಸುತ್ತದೆಂ ಬುದೇ ಕಲಾಕೃತಿಯ ಯಶಸ್ಸಿನ ಮಾನದಂಡವಾಯಿತು. ವಾಸ್ತವತಾವಾದಿ ಕಲೆ ಬಹು ಬೇಗ ಜನಪ್ರಿಯವಾಗಿ ಅದರ ಮಾನದಂಡಗಳ ಮೂಲಕವೇ ಎಲ್ಲ ಕಲಾಕೃತಿಗಳನ್ನು ನೋಡುವ ಚಟ ಬೆಳೆ ಯಿತು. ಆದರೆ ಜಗತ್ತಿನ ಅನೇಕ ಶ್ರೇಷ್ಠ ಕಲಾಕೃತಿಗಳು ಈ ಪಂಥಕ್ಕೆ ಸೇರಿದುವಲ್ಲ ಎಂಬುದನ್ನು ಮರೆಯುವಂತಿಲ್ಲ. ವಾಸ್ತವತಾವಾದ ಹುಟ್ಟಿಸಿದ ಜೀವನದ ಸಾದೃಶ್ಯವನ್ನು ಸೃಷ್ಟಿಸುವುದೇ ಕಲೆ ಎಂಬ ಗ್ರಹಿಕೆ ಉಳಿದ ರೀತಿಯ ಕಲೆಗಳ ಬಗೆಗೆ ರಸಿಕರು ಸರಿಯಾಗಿ ಸ್ಪಂದಿಸದಂತೆ ಮಾಡಿತು. ಆ ದೃಷ್ಟಿಯಿಂದ ಕಲಾಭಿರುಚಿಯನ್ನು ಸಂಕುಚಿತಗೊಳಿಸಿತು.

೪. ವಾಸ್ತವತಾವಾದದಲ್ಲಿ ರಸಿಕರಿಗೆ ರಸಾಸ್ವಾದ ನೀಡುವುದಕ್ಕಿಂತ ಸತ್ಯದರ್ಶನವೇ ಮುಖ್ಯವಾಯಿತು. ಜೀವನದ ವಾಸ್ತವ ವಿವರಗಳನ್ನು ಕಲಾಕೃತಿಯಲ್ಲಿ ಗುರುತಿಸಿ ಸಂತೋಷ ಪಡುವಷ್ಟಕ್ಕೇ ರಸಿಕನ ರಸಾಸ್ವಾದ ಸೀಮಿತವಾಯಿತು. ಇದರಿಂದಾಗಿ ಕಲಾಕೃತಿಯಲ್ಲಿಯ ಇತರ ಕಲಾತ್ಮಕ ಅಂಶಗಳ ಕಡೆಗೆ ರಸಿಕರ ಗಮನ ಹೋಗಲಿಲ್ಲ. ಗ್ಲಾಸಿನ ಕಿಟಕಿಯ ಮೂಲಕ ಹೊರಗಿನ ತೋಟವಷ್ಟೇ ಕಾಣಿಸಿತು, ಕಿಟಕಿಯ ಗಾಜು ಕಾಣಲೇ ಇಲ್ಲ. ಹಾಗಾಗಿ ಕಲೆ ಜನಪ್ರಿಯವಾಗಿ ಬಹಳ ಜನಕ್ಕೆ ತಲುಪಿದರೂ ಪ್ರಬುದ್ಧ ರಸಿಕತೆ ಬೆಳೆಯಲಿಲ್ಲ.

೫. ಕೇವಲ ಈ ಜಗತ್ತಿನ ಭೌತಿಕ ವಾಸ್ತವಕ್ಕೆ ಕಟ್ಟುಬಿದ್ದ ವಾಸ್ತವತಾವಾದಿ ಕಲೆ ಪುರಾಣ ಗಳ ಜಗತ್ತನ್ನು ನಿರಾಕರಿಸಿತು. ಅದರ ಜೊತೆಗೆ ಸಂಕೀರ್ಣ ಸಾಂಕೇತಿಕತೆಯನ್ನೂ ಬಿಟ್ಟು ಕೊಟ್ಟಿತು. ಅದೆಲ್ಲ ಅವೈಜ್ಞಾನಿಕ ಎಂದು ತಿರಸ್ಕರಿಸಿತು. ಅದರಿಂದಾಗಿ ಪುರಾಣಕಥೆಗಳಲ್ಲಿ ಸಂಚಿತ ವಾಗಿದ್ದ ಸಮೂಹ ಪ್ರಜ್ಞೆಯ ಆಳ ಅರ್ಥಗಳು ಈ ಕಲೆಗೆ ಇಲ್ಲದೇ ಹೋದವು. ಸಾಂಕೇತಿಕತೆಯ ನಿರಾಕರಣೆಯಿಂದ ವಿಸ್ತಾರಗೊಳ್ಳುತ್ತ ಹೋಗುವ ಅರ್ಥದ ವಲಯಗಳೂ ಇಲ್ಲದಂತಾಯಿತು. ವಾಸ್ತವದ ಸಾದೃಶ್ಯವನ್ನು ಗುರುತಿಸುವ ಮೇಲ್ಪದರದ ಅರ್ಥಕ್ಕೇ ಕಲೆ ಸೀಮಿತವಾಯಿತು.

೬. ಜೀವನದ ವಾಸ್ತವತೆಯ ಹೆಸರಿನಲ್ಲಿ ಅನೇಕ ಕಲಾವಿದರು ಅತಿಗೂ ಹೋದರು. ಅಸುಂದರ ವಸ್ತು, ಭೀಭತ್ಸ ವಿವರಗಳ ಮೇಲೆಯೇ ಗಮನವನ್ನು ಕೇಂದ್ರಿಕರಿಸಿದರು. ಸತ್ಯದರ್ಶನದ ಪ್ರಾಮಾಣಿಕ ಪ್ರಯತ್ನಕ್ಕಿಂತ ರಸಿಕರನ್ನು ಬೆಚ್ಚಿಬೀಳಿಸುವ ಗೀಳಿಗೊಳಗಾದರು.

೭. ಜೀವನವನ್ನು ಅರ್ಥಮಾಡಿಕೊಳ್ಳಲು ವಾಸ್ತವತಾವಾದ ಸಾಕೆ? ಎಂಬ ಮಹತ್ವದ ಪ್ರಶ್ನೆಯೂ ಇಲ್ಲಿ ಏಳುತ್ತದೆ. ನಾವು ಕಂಡದ್ದಷ್ಟೇ ಸತ್ಯವೆ? ಅದರ ಆಚೆಗಿನ ಅ-ದೃಷ್ಟದಲ್ಲಿ, ರಹಸ್ಯದಲ್ಲಿ, ಅಗಮ್ಯತೆಯಲ್ಲಿ ಏನೂ ಇಲ್ಲವೆ? ಇರುವ ಎಲ್ಲವನ್ನೂ ನಾವು ಕಾಣಬಲ್ಲೆವೆ? ಕಂಡುದಷ್ಟಕ್ಕೇ ತೃಪ್ತಿಗೊಳ್ಳದೆ ಮನುಷ್ಯಚೇತನ ಅದರಾಚೆಗಿನದಕ್ಕೂ ಹಾತೊರೆಯುವುದರ ಅರ್ಥವೇನು? ಕಂಡದ್ದಷ್ಟಕ್ಕೇ ನಮ್ಮ ಕಲ್ಪನಾಶಕ್ತಿ ಸೀಮಿತವಾದರೆ, ಅದರ ಎಲ್ಲ ಸಾಮರ್ಥ್ಯವನ್ನು ಬಳಸಿದಂತಾಯಿತೆ? ಕಲ್ಪಕತೆ ನೆಲ ಬಿಟ್ಟು ಮೇಲೇಳಬಾರದೆ? ತನ್ನ ಸಾಮರ್ಥ್ಯದ ಎಲ್ಲೆಗಳನ್ನು ಪರೀಕ್ಷಿಸಿ ನೋಡಬಾರದೆ? ಇಂಥ ನಿರ್ಬಂಧಗಳನ್ನು ಹೇರುವುದರಿಂದ, ಅಗಾಧಗಳನ್ನು ಕಲ್ಪಿಸಿ ಅರ್ಥವಿಸ್ತಾರವನ್ನು ಸಾಧಿಸಬಲ್ಲ ಮನಸ್ಸಿನ ಶಕ್ತಿ ಅನವಶ್ಯಕವಾಗಿ ಕುಬ್ಜವಾಗದೆ? ನಮ್ಮ ಶಕ್ತಿಯನ್ನು ನಾವೇ ಮಿತಿಗೊಳಿಸಿಕೊಂಡಂತಾಗುವುದಿಲ್ಲವೆ? ಇಂಥ ಹಲವಾರು ಪ್ರಶ್ನೆಗಳು ಹಿಂದೆಯೇ ತಲೆಯೆತ್ತುತ್ತವೆ. ವಾಸ್ತವತಾವಾದದಲ್ಲಿ ಈ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಸಿಗುವುದಿಲ್ಲ.

೮

ಇಂಥ ಕಾರಣಗಳಿಗಾಗಿಯೇ ವಾಸ್ತವತಾವಾದದ ವಿರುದ್ಧ ಅನೇಕ ಪಂಥಗಳು ತಲೆಯೆತ್ತಿವೆ. ವಾಸ್ತವತಾವಾದ ಜೀವನದ ಯಥಾವತ್ತಾದ ಪ್ರತಿಯನ್ನೇ ಕಲೆ ಎನ್ನುವದಾದರೆ ಯಾಂತ್ರಿಕವಾದ ಛಾಯಾಚಿತ್ರಕ್ಕೂ ಅದಕ್ಕೂ ಏನು ವ್ಯತ್ಯಾಸ? ಪ್ರತಿಕೃತಿ ರಚನೆಯಲ್ಲಿ ಪ್ರತಿಭೆಯ ಕೆಲಸವಾದರೂ ಏನು? ಇದು ಕೇವಲ ಕಸುಬುಗಾರಿಕೆಯಾಗಲಿಲ್ಲವೆ? ಕಲಾವಿದನ ಭಾವನೆಗಳಿಗೆ ಕಲಾಕೃತಿಯಲ್ಲಿ ಸ್ಥಾನವೇ ಇಲ್ಲವೆಂದಾದರೆ ಅವನಿದ್ದಾದರೂ ಏನು ಪ್ರಯೋಜನ? ಅಷ್ಟಾಗಿಯೂ,ಅಂಥ ತಾಟಸ್ಥ್ಯ ಸಾಧ್ಯವೆ? ಇಂಥ ಹಲವಾರು ಪ್ರಶ್ನೆಗಳನ್ನು ಎತ್ತಿ ವಾಸ್ತವವಾಗಿ ಕಲೆ ಕಲೆಯೇ ಅಲ್ಲ ಕೇವಲ ಕುಶಲತೆ ಎನ್ನುವವರೂ ಇದ್ದಾರೆ.

ಈ ಬಗೆಯ ತೀರ್ಮಾನದಲ್ಲಿ ಇನ್ನೂ ಅತಿಗೆ ಹೋಗುವ ಅಗತ್ಯವಿಲ್ಲ. ಈ ಪಂಥಕ್ಕೆ ಸೇರಿದ ಅನೇಕ ಶ್ರೇಷ್ಠ ಕಲಾಕೃತಿಗಳು ರಸಿಕರ ಮತ್ತು ವಿದ್ವಜ್ಜನರ ಗೌರವಕ್ಕೆ ಪಾತ್ರವಾಗಿವೆ. ಚಿತ್ರಕಲೆ, ಶಿಲ್ಪಕಲೆಗಳಲ್ಲಿ ರೋಡೆ, ರೆಂಬ್ರಾರಟ್‌ರಂಥವರು, ಸಾಹಿತ್ಯದಲ್ಲಿ ಮೊಪಾಸಾ, ಎಮಿಲಿ ಜೋಲಾ ರಂಥವರು ಈ ಪಂಥಕ್ಕೆ ಮರ್ಯಾದೆ ತಂದಿದ್ದಾರೆ.

ವಾಸ್ತವತಾವಾದದ ಪ್ರಣಾಳಿಕೆ ಏನೇ ಹೇಳಲಿ, ಎರಡು ಅಂಶಗಳಂತೂ ಸ್ಪಷ್ಟ. ಮೊದಲನೆಯದಾಗಿ, ಬುದ್ಧಿಪೂರ್ವಕವಾದ ಆಯ್ಕೆ ಎಲ್ಲ ಕಲೆಗೂ ಅಗತ್ಯವಾಗಿದೆ. ಔಚಿತ್ಯಕ್ಕೆ ಅನುಗುಣವಾಗಿ ವಿವರಗಳನ್ನು ಆಯ್ದು ಹೊಂದಿಸುವುದು ಅನಿವಾರ್ಯವಾಗಿದೆ. ಎಲ್ಲ ವಿವರಗಳನ್ನು ಒಳಗೊಂಡ ಒಂದು ಪ್ರಕೃತಿಯ, ಅಥವಾ ಬೀದಿಯ ಒಂದಂ ವಾಸ್ತವ ಚಿತ್ರವನ್ನು ಬಿಡಿಸಿದಾಗಲೂ, ಅಂಥ ಅನೇಕ ದೃಶ್ಯಗಳಲ್ಲಿ ಯಾವದೋ ಒಂದನ್ನು ಆಯ್ದುಕೊಳ್ಳುವದಕ್ಕೂ ಏನಾದರೂ ಕಾರಣ

ವಿದ್ದೇ ಇರುತ್ತದೆ. ಆದ್ದರಿಂದ ವಾಸ್ತವತಾವಾದಿ ಕಲೆಯಲ್ಲಿ ಆಯ್ಕೆ ಇರುವದಿಲ್ಲ ಎಂಬ ಗ್ರಹಿಕೆಯೇ ಸರಿಯಾದುದಲ್ಲ.

ಎರಡನೆಯದಾಗಿ ತಾಟಸ್ಥ್ಯ, ವಸ್ತುನಿಷ್ಠತೆಗಳ ಪ್ರಶ್ನೆ. ಆಯ್ಕೆ ಇದ್ದೇ ಇರುತ್ತದೆಂದ ಮೇಲೆ, ಆ ಆಯ್ಕೆಗೆ ಉದ್ದೇಶವೂ ಇರಲೇಬೇಕಾಗುತ್ತದೆ. ಈ ಉದ್ದೇಶವಿದ್ದ ಮೇಲೆ ಕಲಾವಿದನ ಮೇಲೆ ಒಂದು ದೃಶ್ಯ ಇಲ್ಲವೆ ವ್ಯಕ್ತಿ ಮೂಡಿಸಿದ ಭಾವನೆಗಳೂ ಸೇರಿಕೊಳ್ಳುತ್ತವೆ. ಮನುಷ್ಯನ ಮನಸ್ಸು ಸಂಪೂರ್ಣ ತಾಟಸ್ಥ್ಯದಿಂದ ಕೆಲಸ ಮಾಡಲು ಅದೇನು ಯಂತ್ರವಲ್ಲ. ಕಲಾವಿದ ತನ್ನ ವೈಯಕ್ತಿಕ ಭಾವನೆಗಳನ್ನು ಕೃತಿಯ ಮೇಲೆ ಹೇರದೆ ವಸ್ತುನಿಷ್ಠನಾಗಿರಬೇಕು ಆ ಕೃತಿ ತನ್ನ ಅರ್ಥವನ್ನು ತಾನೇ ಸೂಚಿಸಬೇಕು ಎಂಬ ಮಾತು ಬೇರೆ, ಸಂಪೂರ್ಣ ತಾಟಸ್ಥ್ಯದ ಮಾತು ಬೇರೆ.

ಕೋರೊ ಎಂಬ ಫ್ರೆಂಚ್ ವಾಸ್ತವತಾವಾದಿ ಚಿತ್ರಕಾರನ ಬಗ್ಗೆ ಒಂದು ಕತೆ ಇದೆ. ಆತ ತರುಣನಾಗಿದ್ದಾಗ ಬಹಳ ಬಡವನಾಗಿದ್ದ. ಉಪಜೀವನಕ್ಕಾಗಿ ಒಬ್ಬ ಸಾಧಾರಣ ಶ್ರೀಮಂತನ ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ. ಆ ಗೋದಾಮು ಹೇಗೆ ಹೇಗೋ ಕಟ್ಟಿ ನಿಲ್ಲಿಸಿದ್ದ ಒಂದು ಕುರೂಪಿ ಕಟ್ಟಡ. ಆದರೆ ಯಜಮಾನನಿಗೆ ಅದರ ಮೇಲೆ ಅಭಿಮಾನ. ಕೋರೊ ಒಬ್ಬ ಚಿತ್ರಕಾರನೆಂದು ಗೊತ್ತಾದ ಯಜಮಾನ ಈ ಕಟ್ಟಡದ ಚಿತ್ರವನ್ನು ಬರೆಯಲು ತಿಳಿಸಿದ ಕೋರೊ ಆ ಕಟ್ಟಡದ ಓರೆ-ಕೋರೆ, ಮೂಲೆ, ಸೊಟ್ಟ ಕಿಟಕಿಗಳು, ಅಸಹ್ಯ ಕಟಾಂಜನ- ಎಲ್ಲ ವಿವರಗಳನ್ನೂ ಬಿಡದೆ ಚಿತ್ರವನ್ನು ಬರೆದ. ಆದರೆ ಆ ಕಟ್ಟಡದ ಹಿಂದೆ ಹೊಳೆಯುವ ಆಕಾಶವನ್ನು ಸೇರಿಸಿದ. ಕಟ್ಟಡದ ಮೇಲೆ ಬಿದ್ದ ಸೂರ್ಯನ ಬೆಳಕನ್ನೂ ಹಿಡಿದ. ಇವೆರಡರ ನಡುವೆ ಅನಿರೀಕ್ಷಿತವಾದ ಮತ್ತು ಸೊಗಸಾದ ವರ್ಣ ಸಾಮರಸ್ಯವನ್ನು ಸಾಧಿಸಿದ. ಕುರೂಪವೂ ಸುಂದರ ಕಲೆಯಾಯಿತು.

ರೆಂಬ್ರಾಂಟಿನ ಚಿತ್ರವೊಂದಕ್ಕೆ ರಾಜರ್ ಫ್ರಾಯ್ ಎಂಬ ಕಲಾವಿಮರ್ಶಕ ಕೊಟ್ಟಿರುವ ವಿವರಣೆಯೂ ಹೀಗೆಯೇ ಮಾರ್ಮಿಕವಾಗಿದೆ ಅದು ಎಳೆ ವಯಸ್ಸಿನ ಹುಡುಗನೊಬ್ಬನ ಚಿತ್ರ ಅವನ ಎದುರಿಗೆ ಡೆಸ್ಕಿನ ಮೇಲೆ ಪುಸ್ತಕ,ಹಾಳೆಗಳಿವೆ. ಹುಡುಗ ಬಲಗೈಯಲ್ಲಿ ಪೆನ್ನು ಹಿಡಿದಿದ್ದಾನೆ, ಹೆಬ್ಬೆರಳು ಗದ್ದಕ್ಕೆ ಒತ್ತಿದ್ದಾನೆ. ಎದುರಿಗೆ ಶೂನ್ಯ ನೋಟದಿಂದ ನೋಡುತ್ತಿದ್ದಾನೆ. ಡೆಸ್ಕ್ ಹಳೆಯದು. ಬಳಕೆಯಾಗಿ ಗೀರು ಬಿದ್ದಿವೆ, ಆದರೂ ಗಟ್ಟಿಯಾಗೇ ಇದೆ. ಇಂಥ ವಿವರಗಳಲ್ಲಿ ವಾಸ್ತವತಾವಾದ ಇನ್ನೂ ಮುಂದಕ್ಕೆ ಹೋಗಲಾರದು ಎನ್ನುವಂತಿದೆ. ಆದರೆ ಚಿತ್ರ ಅದಷ್ಟೇ ಅಲ್ಲ. ಅಭ್ಯಾಸದ ಭಾರದಲ್ಲಿ ಬಳಲಿ ಹೋದ, ಮಕ್ಕಳ ಮುಗ್ಧ ಚೈತನ್ಯವನ್ನು ಬಾಡಿಸುವ ವಿದ್ಯಾಭ್ಯಾಸದ ವ್ಯವಸ್ಥೆಯ ಆಂತರಿಕ ಅರ್ಥದಿಂದ ಕೃತಿಗೆ ಹೆಚ್ಚಿನ ಅರ್ಥ ಬಂದಿದೆ. ಈ ಅರ್ಥವನ್ನು ಸ್ಫುಟಗೊಳಿಸುವಂತೆ, ವಾಸ್ತವ ವಿವರಗಳೆಲ್ಲ ತಮ್ಮ ಸಾಪೇಕ್ಷ ಮಹತ್ವದಲ್ಲಿ ಹೊಂದಿಕೊಂಡಿವೆ.ಬೆಳಗಿನ ಆಟವೂ ಇದಕ್ಕೆ ಪೂರಕವಾಗಿದೆ. ಇಲ್ಲಿ ಮಗು ಶಾಲೆಯ ಮಗುವಿನಂತೇ ಇದೆ ಎನ್ನುವದಾಗಲಿ, ಡೆಸ್ಕು ಶಾಲೆಯ ಡೆಸ್ಕಿನಂತೇ ಇದೆ ಎನ್ನುವದಾಗಲಿ ಮಹತ್ವದ್ದಾಗುವುದಿಲ್ಲ. ಆ ವಿವರಗಳ ಮೂಲಕ ರೆಂಬ್ರಾಂಟ್ ತನ್ನ ಭಾವನೆಗಳ ಹಿಡಿತದಲ್ಲಿ ಆ ಮಗುವಿನ ಅಂತರಂಗದ ಸ್ಥಿತಿಯನ್ನು ತೋರಿಸುತ್ತಾನೆಂಬುದು ಮುಖ್ಯವಾಗಿದೆ.

ಇಂಥಲ್ಲಿ ಕಲೆ ವಾಸ್ತವವನ್ನು ಮೀರಿ ಹೋಗಿ ಮಹತ್ವ ಪಡೆಯುತ್ತದೆ.

೬

ಕೊನೆಯದಾಗಿ, ಅರಿಸ್ಟಾಟಲನ ಕುದುರೆಯ ಕತೆಯೊಂದಿಗೆ ಈ ಪ್ರಬಂಧವನ್ನು ಮುಗಿಸಬಹುದು.

ನಾವು ನಿತ್ಯಜೀವನದಲ್ಲಿ ಕಾಣುವ ಕುದುರೆಗಳೆಲ್ಲ ತಮ್ಮ ನಾಲ್ಕೂ ಕಾಲುಗಳ ಮೇಲೆ ನಿಲ್ಲುವಂಥವು. ಒಮ್ಮೊಮ್ಮೆ ಹುಮ್ಮಸ್ಸಿನಲ್ಲಿ, ಉದ್ರೇಕದಲ್ಲಿ ತಮ್ಮ ಮುಂದಿನ ಎರಡೂ ಕಾಲುಗಳನ್ನು ಮೇಲೆತ್ತಿ ಚಿಮ್ಮಿ ಹಿಂದಿನ ಎರಡು ಕಾಲುಗಳ ಮೇಲೆ ನಿಲ್ಲುವದೂ ಉಂಟು. ಕುದುರೆಯ ಆವೇಶ ಅದಮ್ಯ ಜೀವ ಶಕ್ತಿಯನ್ನು ಪ್ರಕಟಿಸಲೆಂದು ಇಂಥ ಭಂಗಿಯಲ್ಲಿ ಕುದುರೆಯನ್ನು ಚಿತ್ರಿಸಿರುವ ಮತ್ತು ಕಟೆದಿರುವ ಚಿತ್ರಕಾರರಿಗೂ ಶಿಲ್ಪಿಗಳಿಗೂ ಕೊರತೆಯಿಲ್ಲ. ಆದರೆ ಜಗತ್ತಿನ ಯಾವ ಕುದುರೆಯೂ ತನ್ನ ಎರಡೂ ಹಿಂಗಾಲುಗಳನ್ನೆತ್ತಿ ಮುಂಗಾಲುಗಳ ಮೇಲೆ ನಿಂತುದನ್ನು ಯಾರು ಕಂಡಿಲ್ಲ ಅಂಥ ಕುದುರೆಯ ಚಿತ್ರವನ್ನೂ ಯಾರೂ ಬರೆದಿಲ್ಲ. ಅಂಥ ಚಿತ್ರವೇನಾದರೂ ಸಿಕ್ಕರೆ, ಆ ಕಲಾವಿದನಿಗೆ ಬದುಕಿನ ಪರಿಚಯವೇ ಇಲ್ಲವೆಂದು ನಕ್ಕುಬಿಡುತ್ತೇವೆ.

ಆದರೆ ಅರಿಸ್ಟಾಟಲ್ ಹೇಳುತ್ತಾನೆ: ಹಿಂಗಾಲುಗಳನ್ನೆತ್ತಿ ಮುಂಗಾಲ ಮೇಲೆ ನಿಂತ ಕುದುರೆಯ ಚಿತ್ರವನ್ನು ಬಿಡಿಸಿದರೆ ಅದು ಅಂಥ ಪ್ರಮಾದವೇನೂ ಅಲ್ಲ ; ಹಾಗಿದ್ದೂ ಆ ಚಿತ್ರ ಕಲಾತ್ಮಕವಾಗಿದ್ದರೆ ಅದು ಒಪ್ಪಲು ಯೋಗ್ಯ. ಆದರೆ ವಾಸ್ತವದ ದೃಷ್ಟಿಯಿಂದ ಸರಿಯಾಗಿದ್ದೂ ಕಲಾತ್ಮಕವಾಗಿರದಿದ್ದರೆ ಮಾತ್ರ ಅದು ದೊಡ್ಡ ದೋಷ.

ಕಲಾಕೃತಿಯಲ್ಲಿ ವಾಸ್ತವತೆ ಮತ್ತು ಕಲಾತ್ಮಕತೆಗಳಿಗಿರುವ ಸ್ಥಾನವನ್ನು ಇದು ನಿಚ್ಚಳವಾಗಿ ಸೂಚಿಸುತ್ತದೆ. ವಾಸ್ತವವೇ ಕಲ್ಪನಾಶಕ್ತಿಯ ಕೊನೆಯ ಮಿತಿಯಾಗಿರಬೇಕಾಗಿಲ್ಲ. ಕಲಾವಿದ ತನ್ನ ಅಭಿವ್ಯಕ್ತಿಗಾಗಿ ವಸ್ತುಪ್ರತಿರೂಪಗಳನ್ನು ಹುಡುಕಿಕೊಂಡು ವಾಸ್ತವದಾಚೆಗೂ ಹೋಗಬಹುದು. ಅಗತ್ಯ ಬಿದ್ದರೆ ವಾಸ್ತವವನ್ನು ಹಿಂಸಿಸಿ ತಿರಿಚಿಯೂ ತೋರಿಸಬಹುದು. ಇಪ್ಪತ್ತನೆಯ ಶತಮಾನದಲ್ಲಿ ಕಲೆಯ ಕ್ಷೇತ್ರದಲ್ಲಿ ಆರಂಭವಾದ ಅನೇಕ ಹೊಸ ವಾದ, ಪಂಥಗಳು ವಾಸ್ತವಕ್ಕೆ ಕಟ್ಟುಬಿದ್ದ ವಾಸ್ತವತಾವಾದದ ವಿರುದ್ಧ ಎದ್ದ ದಂಗೆಗಳೇ ಆಗಿವೆ.*

---

* ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಪರವಾಗಿ ೨೬ ನವೆಂಬರ್ ೧೯೮೭ರಂದು ಮೈಸೂರಿನ ಲಲಿತಕಲೆಗಳ ಕಾಲೇಜಿನಲ್ಲಿ ನೀಡಿದ ವಿಶೇಷ ಉಪನ್ಯಾಸ.

ಅಂಬೇಡ್ಕರ್ ಚಿಂತನೆ ಹೋರಾಟಗಳ ಪ್ರಸ್ತುತತೆ

ಡಾ॥ ಎಸ್. ಚಂದ್ರಶೇಖರ್

ಅಂಬೇಡ್ಕರ್‌ರ ರಾಜಕೀಯ ಸಾಮಾಜಿಕ ಚಿಂತನೆಗಳು ಭಾರತೀಯ ಸಮಾಜವಾದಿಗಳು ಮತ್ತು ಕಮ್ಯುನಿಸ್ಟರ ನಂಬಿಕೆಗಳ ನಡುವಿನಲ್ಲಿ ಒಂದುಕಡೆ ಇರುವಂತೆ ಕಾಣುತ್ತದೆ. ಸಮಾಜವಾದಿಗಳು ವಿಕೇಂದ್ರೀಕರಣವನ್ನು ಪ್ರತಿಪಾದಿಸಿದರೆ ಅಂಬೇಡ್ಕರ್ ಬಹುಮಟ್ಟಿಗೆ ವಿಕೇಂದ್ರೀಕರಣವನ್ನು ವಿರೋಧಿಸುತ್ತಾರೆ. ಅವರು ಬಲಿಷ್ಠ ಕೇಂದ್ರ ಸರ್ಕಾರದ ಪ್ರತಿಪಾದಕರು. ಅಷ್ಟೇ ಅಲ್ಲ ಗ್ರಾಮ ರಾಜ್ಯವನ್ನು ಖಂಡ ತುಂಡವಾಗಿ ನಿರಾಕರಿಸುತ್ತಾರೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಈ ಕೆಳಗಿನ ಮಾತುಗಳನ್ನು ಗಮನಿಸಿ:

" ಈ ಗ್ರಾಮ ಸ್ವರಾಜ್ಯವೇ ಹಿಂದೆ ಭಾರತವನ್ನು ಹಾಳುಗೆಡವಿದ್ದು. ಗ್ರಾಮವೆಂದರೇನು? ಸಂಕುಚಿತ ಪ್ರಾಂತೀಯತೆಯ ತವರು, ಮೌಢ್ಯ, ಸಣ್ಣತನ ಮತ್ತು ಜಾತ್ಯಂಧತೆಯಿಂದ ಕೂಡಿದ ಗೂಡು."

ಈ ಮಾತುಗಳು ಗಾಂಧಿಯವರ ಗ್ರಾಮಸ್ವರಾಜ್ಯ ಕಲ್ಪನೆಯ ವಿರುದ್ಧದ ಮಾತುಗಳೆಂದು ಸುಲಭವಾಗಿ ತಳ್ಳಿಹಾಕುವಂತೇನೂ ಇಲ್ಲ. ಅಧಿಕಾರ ವಿಕೇಂದ್ರೀಕರಣ-ಅತೀ ಹಿಂದುಳಿದಿರುವ-ಜಾತ್ಯಾಧಾರಿತ ಅಸಮಾನತೆ ಒಂದಕ್ಕೊಂದು ವಿರೋಧವಾದವು. ಸಮಾನತೆಯಿದ್ದಾಗ ಗ್ರಾಮ ರಾಜ್ಯ ಪ್ರಗತಿದಾಯಕವಾಗುತ್ತದೆ. ಇಲ್ಲದಿದ್ದಾಗ ಅದು ಅಂಬೇಡ್ಕರರು ಹೇಳಿದಂತೆ ದುರ್ವಾಸನೆ ಬೀರುವ ಕೊಳಚೆ ಗುಂಡಿಯಾಗುತ್ತದೆ.

ಎರಡನೆಯದಾಗಿ ಅಂಬೇಡ್ಕರರ ಈ ಬಗೆಗಿನ ಯೋಚನೆಗಳು ಅವರ 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು' ಎಂಬ ಪುಸ್ತಕದಲ್ಲಿದೆ. ಇದರಲ್ಲೂ ಅವರು ಸರ್ಕಾರಿ ಸಮಾಜವಾದದ ಬಗ್ಗೆಯೇ ಮಾತನಾಡಿರುವರೇ ಹೊರತು ವಿಕೇಂದ್ರೀಕರಣದ ಬಗ್ಗೆ ಅಲ್ಲ. ಅವರು ಸೂಚಿಸುವ ಅಂಶಗಳೆಂದರೆ:

1. ಬೇಸಾಯ ಭೂಮಿ ರಾಜ್ಯದ ಸ್ವಾಮ್ಯಕ್ಕೆ ಒಳಪಟ್ಟಿರಬೇಕು.

2. ವಿಮೆ, ಪ್ರಮುಖ-ಅತ್ಯವಶ್ಯಕ ಕೈಗಾರಿಕೆಗಳು ಸರ್ಕಾರಿ ಹತೋಟಿಯಲ್ಲಿರಬೇಕು.
3. ಸಾಮೂಹಿಕ ಬೇಸಾಯ ಪದ್ಧತಿ ಇರಬೇಕು.

ಅವರ ಅಭಿಪ್ರಾಯದಲ್ಲಿ ಸಮಾಜದ ಆರ್ಥಿಕ ರಚನೆ ಮತ್ತು ವ್ಯಕ್ತಿ ಸ್ವಾತಂತ್ರ್ಯ ಒಂದೇ ನಾಣ್ಯದ ಎರಡು ಮುಖಗಳು. ವ್ಯಕ್ತಿಗಳು ತಮ್ಮ ಹಕ್ಕುಗಳನ್ನು ಅನುಭವಿಸಲು, ಸಮಾಜದ ಆರ್ಥಿಕ ರಚನೆ ಅನುಕೂಲಕರವಾಗಿರಬೇಕು. "ಆರ್ಥಿಕ ಸ್ವಾತಂತ್ರ್ಯ ಎಲ್ಲ ಹಕ್ಕುಗಳ ಚಲಾವಣೆಗೂ ಮೂಲ ಭೂತವಾಗಿರಬೇಕು. ಒಂದು ಇಲ್ಲದೆ ಮತ್ತೊಂದರ ಇರವು ಸಾಧ್ಯವಿಲ್ಲ. ಖಾಸಗಿ ಉದ್ಯಮ ರಾಜಕೀಯ ಸ್ವಾತಂತ್ರ್ಯವನ್ನು ಇಲ್ಲವಾಗಿಸುತ್ತದೆ. ಸರ್ಕಾರಿ ಸಮಾಜವಾದವಲ್ಲದೆ ಬೇರೆಯಾವ ಮಾರ್ಗದಿಂದಲೂ ಜನತಂತ್ರ ಸಫಲವಾಗುವುದಿಲ್ಲ."[1]

ಸಮಾಜವಾದಿಗಳು ಬಹಳವಾಗಿ ಮೆಚ್ಚುವ ಸಂಸದೀಯ ಪ್ರಜಾಸತ್ತೆಯಲ್ಲೂ ಅವರಿಗೆ ಪೂರ್ತಿ ವಿಶ್ವಾಸವಿಲ್ಲ. ಏಕೆಂದರೆ ಹಿಂದುಳಿದ ಅಸಮಾನತೆಯಿರುವ ಭಾರತದಲ್ಲಿ ಈ ವ್ಯವಸ್ಥೆ ಸರಿಹೊಂದುವುದರ ಬಗ್ಗೆ ಅವರಿಗೆ ಅನುಮಾನಗಳಿದ್ದವು. ಅವರ ಮಾತುಗಳನ್ನುಗಮನಿಸಿ:

"ಸಂಸದೀಯ ಪ್ರಜಾಸತ್ತೆಯಲ್ಲಿ ಸರ್ಕಾರಿ ಸಮಾಜವಾದ ಖಾಯಂ ಆಗಿ ಇರಲು ಸಾಧ್ಯವಿಲ್ಲ. ಈ ವ್ಯವಸ್ಥೆಯಲ್ಲಿ-ಶಾಸಕಾಂಗ ರಾಜ್ಯಾಂಗ, ಬಹುಮತವಿದ್ದವರ ನೀತಿಗಳೇ ಬಹುಮತದ ಸರ್ಕಾರದ ನೀತಿಯಾಗುತ್ತದೆ. ಒಮ್ಮೆ ಚುನಾಯಿತವಾದವರಿಗೆ 'ಸರ್ಕಾರೀ ಸಮಾಜವಾದ'ದಲ್ಲಿ ನಂಬಿಕೆ ಯಿದ್ದು, ಅನಂತರ ಸರ್ಕಾರ ರಚಿಸಿದವರು ಇದಕ್ಕೆ ವಿರುದ್ಧವಾಗಬಹುದು. ಆದ್ದರಿಂದ ಸರ್ಕಾರಿ ಸಮಾಜವಾದ ಶಾಶ್ವತವಾಗಿರಲು ಅದು ಸಂವಿಧಾನದಲ್ಲಿ ಮೂಲಭೂತ ಕಾನೂನು ಆಗಿರಬೇಕು, ಮತ್ತು ಈ ನೀತಿಯನ್ನು ಬದಲಾಯಿಸಲು ಕೈಬಿಡಲು ಯಾರಿಗೂ ಅವಕಾಶವಿರಕೂಡದು"[2]

ಮತ್ತೊಂದು ಸಂದರ್ಭದಲ್ಲಿ ಅವರು ಸಂಸದೀಯ ಜನತಂತ್ರದ ಬಗ್ಗೆ ಇದಕ್ಕೂ ಮಿಗಿಲಾದ ಅನುಮಾನಗಳನ್ನು ವ್ಯಕ್ತಪಡಿಸುತ್ತಾರೆ. ಇಟಲಿ, ಜರ್ಮನಿ, ಸ್ಪೇನ್‌ಗಳಲ್ಲಿ ಸಂಸದೀಯ ಜನತಂತ್ರ ವಿಫಲವಾದ ಬಗ್ಗೆ ಹೇಳುತ್ತಾ "ಸಂಸದೀಯ ಜನತಂತ್ರದ ಬಗೆಗಿನ ಮರುಚಿಂತನೆ ಇಂದು ಎಲ್ಲರಿ ಗಿಂತಲೂ ಭಾರತೀಯರಿಗೆ ತುರ್ತಾಗಿದೆ, ಯಾಕೆಂದರೆ ನಾವು ಆ ಬಗ್ಗೆ ಒಲವುಳ್ಳವರಾಗಿದ್ದೇವೆ. ಧೈರ್ಯ ಮಾಡಿ ಯಾರಾದರೂ ಈ ಮಾತುಗಳನ್ನು ಹೇಳಬೇಕಾಗಿದೆ-'ಸಂಸದೀಯ ಪ್ರಜಾಸತ್ತೆಯ ಬಗ್ಗೆ ಎಚ್ಚರಿಕೆ! ಅದು ಮೇಲುನೋಟಕ್ಕೆ ಕಾಣುವಷ್ಟು ಒಳ್ಳೆಯ ವ್ಯವಸ್ಥೆಯೇನಲ್ಲ"[3]

ಇಲ್ಲಿ ಸರ್ಕಾರಿ ಸಮಾಜವಾದ ಖಾಯಂ ವ್ಯವಸ್ಥೆಯಾಗಿರಬೇಕು; ಸಂವಿಧಾನ ವ್ಯವಸ್ಥೆಯ ಅಡಿಗಲ್ಲಾಗಿರಬೇಕು. ಸ್ವಾತಂತ್ರ್ಯ ಸಮಾನತೆಗಳ ಬಗ್ಗೆ ಸಮತೋಲನವೇರ್ಪಡಬೇಕು. ಹಲ ವಾರು ದೇಶಗಳಲ್ಲಿ ಸಂಸದೀಯ ಜನತಂತ್ರದ ವ್ಯವಸ್ಥೆ ಕುಸಿದು ಸರ್ವಾಧಿಕಾರಗಳು ತಲೆಎತ್ತಿದ ಉದಾಹರಣೆಗಳಿವೆ. ಸಂಸದೀಯ ಜನತಂತ್ರ ಈ ಸಮತೋಲವನ್ನು ಸಾಧಿಸುವ ಬಗ್ಗೆ ಅವರಿಗೆ ಬಲವಾದ ಅನುಮಾನಗಳಿದ್ದವು. ಈ ಅನುಮಾನಗಳು ಏನನ್ನು ಧ್ವನಿಸುತ್ತವೆ?

1. L.R. Balle, Ed. Thoughts on Ambedkar, pp. 50-51
2. ಅದೇ
3. Thus Spoke Ambedkar, vol 1. pp. 43-47

'ಭಾರತದ ಸಂವಿಧಾನದ ಪಿತ' 'ಆಧುನಿಕ ಮನು' ಎಂದೆಲ್ಲಾ ಅಂಬೇಡ್ಕರರನ್ನು ಹೊಗಳ. ಲಾಗುತ್ತಿದೆ ನಿಜ.'ಸಂಸದೀಯ ಜನತಂತ್ರ'ವೇ ಭಾರತೀಯ ಸಂವಿಧಾನ ಎತ್ತಿಹಿಡಿಯುವ ವ್ಯವಸ್ಥೆ. ಸಂವಿಧಾನ ರಚಿಸಿ, ಅದನ್ನು ತಮ್ಮ ನೈಪುಣ್ಯದಿಂದ ಘಟನಾಸಭೆಯಲ್ಲಿ ಪಾಸುಮಾಡಿಸಿದ ಅಂಬೇಡ್ಕರ್‌ಗೆ ಅದರ ಬಗ್ಗೆ ನಿರಾಸೆ ಮೂಡಿತ್ತು. ಅದು ಸ್ಪಷ್ಟವಾಗಿಯೇ ನಮಗೆ ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ: "ಸ್ವತಂತ್ರ ಭಾರತದ ಸಂವಿಧಾನ ಶಿಲ್ಪಿಯೆಂದು ಜನ ನನ್ನನ್ನು ಕರೆಯುತ್ತಾರೆ. ಅದಕ್ಕೆ ನನ್ನ ಉತ್ತರವಿದು-ನಾನೊಂದು ಬಾಡಿಗೆ ಕುದುರೆಯಾಗಿದ್ದೆ. ನನಗೆ ಇಷ್ಟವಿಲ್ಲದಿದ್ದರೂ ನಾನು ಬೇರೆಯವರ ಮರ್ಜಿಯಂತೆ ಅದೆಲ್ಲಾ ಮಾಡಿದೆ. ಅದನ್ನೂ ಸುಟ್ಟು ಬೂದಿ ಮಾಡುತ್ತೇನೆ ಎಂದು ಹೇಳಲು ನಾನು ಸಿದ್ಧನಾಗಿದ್ದೇನೆ." ಭಾರತದ ಸಂಸದೀಯ ಪ್ರಜಾಸತ್ತೆಯ ಭವಿಷ್ಯದ ಬಗ್ಗೆ ಕೂಡಾ ಅಂಬೇಡ್ಕರ್ ತಮ್ಮ ಅನುಮಾನ ವ್ಯಕ್ತಪಡಿಸುತ್ತಾ "ಸಂಸದೀಯ ಜನತಂತ್ರ ಯಶಸ್ವಿಯಾಗಲು ಬಲಿಷ್ಠ ವಿರೋಧಪಕ್ಷ, ಸಾರ್ವಜನಿಕ ತತ್ವಜ್ಞಾನ, ನಿಷ್ಪಕ್ಷಪಾತ ಮುಕ್ತ ಚುನಾವಣೆ ಅತ್ಯವಶ್ಯ. ಆದರೆ ಭಾರತದಲ್ಲಿ ಇದರಲ್ಲಿ ಯಾವುದೂ ಬೆಳೆಯಲು ಅವಕಾಶವಾಗ ತ್ತಿಲ್ಲ. ಇದು ಹೀಗೇ ಮುಂದುವರಿಯಲು ಅವಕಾಶವಿರಕೂಡದು. ಈ ವ್ಯವಸ್ಥೆ ವಿಫಲವಾದರೆ-ನಾನು ಹೇಳಿದ ಮೇಲಿನ ಕಾರಣಗಳಿಂದ ಅದು ವಿಫಲವಾಗುವುದು ಖಂಡಿತ- ಅದರ ಒಂದೇ ಪರಿಣಾಮವೆಂದರೆ, ದಂಗೆ-ಅರಾಜಕತೆ- ಕಮ್ಯುನಿಸಂ."[4]

ಅಂಬೇಡ್ಕರ್ ಈ ಮಾತುಗಳನ್ನು ಹೇಳಿ ಮೂವತ್ತೈದು ವರ್ಷಗಳೇ ಕಳೆದಿವೆ. ಇಷ್ಟೆಲ್ಲಾ ಅನುಮಾನಗಳೊಂದಿಗೆ ಅವರು ಸಂಸದೀಯ ಪ್ರಜಾಸತ್ತೆಯ ಪರವಾಗಿಯೇ ಇದ್ದರು.

ಮೇಲೆ ಕಾಣಿಸಿದ ಕಾರಣಗಳಿಂದ ಅಂಬೇಡ್ಕರ್ ಭಾರತೀಯ ಸಮಾಜವಾದಿಗಳಿಗಿಂತ ಭಿನ್ನವಾಗಿ ಯೋಚಿಸುತ್ತಿದ್ದರು ಮತ್ತು ಅವರಿಗಿಂತ ಹೆಚ್ಚು ವೈಚಾರಿಕ ತತ್ವಗಳಲ್ಲಿ ನಂಬಿಕೆಯಿಟ್ಟಿದ್ದರು ಎಂದು ಹೇಳಬಹುದು.

ಇನ್ನು ಭಾರತದ ಕಮ್ಯುನಿಸ್ಟರ ಜೊತೆಗಿನ ಅವರ ಸಂಬಂಧ, ಅವರ ಬಗೆಗಿನ ಅಭಿಪ್ರಾಯವನ್ನು ಗಮನಿಸಬಹುದು.

ಭಾರತದ ಕಮ್ಯುನಿಸ್ಟರೊಡನೆ ಅಂಬೇಡ್ಕರ್ ಸಹಕರಿಸಿದ್ದು ಒಂದು ಬಾರಿ ಮಾತ್ರ. ಅದು 1938ರಲ್ಲಿ ಬಾಂಬೆ ಸರ್ಕಾರ ಮಂಡಿಸಿದ 'ಕೈಗಾರಿಕಾ ಮಸೂದೆ'ಯ ವಿರುದ್ಧ ನಡೆದ ಯಶಸ್ವೀ ಮುಷ್ಕರದಲ್ಲಿ. ಕಮ್ಯುನಿಸ್ಟರನ್ನೂ ಅವರ ಅಭಿಪ್ರಾಯದಲ್ಲಿ 'ಆಕ್ರಮಣಕಾರಿ ರಷ್ಯಾ'ವನ್ನೂ ವಿರೋಧಿಸುತ್ತಿದ್ದ ಅಂಬೇಡ್ಕರ್ ಮಾರ್ಕ್ಸ್‌ವಾದವನ್ನು ಎಂದೂ ಟೀಕಿಸದೇ ಇದ್ದದ್ದು ಆಶ್ಚರ್ಯಕರವಾದದು –ಇದು ಬಹಳ ಮುಖ್ಯ ಎಂದು ನನ್ನ ಅಭಿಪ್ರಾಯ–ಮಾರ್ಕ್ಸ್‌ವಾದ ಕೆಳವರ್ಗದವರಿಗೆಲ್ಲಾ ಭರವಸೆ, ತೃಪ್ತಿ ಕೊಡುವಂಥಾದ್ದು: "ಅದು ಮಾರ್ಗದರ್ಶಿ,ಜಡವಾದವಲ್ಲ"[5] ಅಂದರೆ ಅವರಿಗೆ ಮಾರ್ಕ್ಸ್‌ವಾದದ ಬಗ್ಗೆ ಮೋಹ–ಕಮ್ಯುನಿಸ್ಟರ ಬಗ್ಗೆ ತಿರಸ್ಕಾರ. ಇದು ವಿಲಕ್ಷಣವೇ? ಅಥವಾ

4. ಅದೇ ಪು. 44

5. Dr. Keer, Ambedker Life and Mission, P. 391.

ಕಮ್ಯುನಿಸ್ಟರು ಮಾರ್ಕ್ಸ್‌ವಾದವನ್ನು ತಮ್ಮ ಸಾಮಾಜಿಕ ವಿಶಿಷ್ಟತೆಗೆ ಸರಿಯಾಗಿ ಅಳವಡಿಸಿಕೊಂಡಿಲ್ಲ ವೆಂಬ ಅಸಮಾಧಾನವೇ?

ಸ್ವಾತಂತ್ರ್ಯ ಪೂರ್ವದಲ್ಲಿ ಬಹಳಮಂದಿ ಕಮ್ಯುನಿಸ್ಟರು ಕಾಂಗ್ರೆಸ್ಸಿನೊಂದಿಗೆ ಇದ್ದವರು, ಕಾಂಗ್ರೆಸ್ಸಿನ ಹೋರಾಟವನ್ನು ಬೆಂಬಲಿಸಿದವರು. ಗಾಂಧೀಜೀಯನ್ನು ಅನಿವಾರ್ಯವಾಗಿ ಒಪ್ಪಿದ ವರು. ಆದರೆ ಗಾಂಧಿ,ಕಾಂಗ್ರೆಸ್ ಎಂದರೆ ನಾನಾ ಕಾರಣಗಳಿಗಾಗಿ ಅಂಬೇಡ್ಕರ್ ಸಿಡಿಯುತ್ತಿದ್ದರು. ಬ್ರಿಟಿಷರ ಬಗೆಗಿನ ಅಂಬೇಡ್ಕರ್-ಕಮ್ಯುನಿಸ್ಟರ ನಿಲುವುಗಳಲ್ಲಿ ಅಜಗಜಾಂತರ ವ್ಯತ್ಯಾಸವಿತ್ತು. ಸ್ವಾತಂತ್ರ್ಯ ಬಂದ ನಂತರದಲ್ಲೂ ಕಮ್ಯುನಿಸ್ಟರು ಅಂಬೇಡ್ಕರರ ಬಗ್ಗೆ ತಮ್ಮ ನಿಲುವು ಬದಲಾಯಿಸಿ ಕೊಳ್ಳಲಿಲ್ಲ. ಅವರು ಸ್ಪರ್ಧಿಸಿದ್ದ ಎರಡೂ ಚುನಾವಣೆಗಳಲ್ಲಿ ಅವರು ಸೋಲಲು ಕಮ್ಯುನಿಸ್ಟರೂ ಕಾರಣರಾದರು. ಈ ಬಗ್ಗೆ ಅಂಬೇಡ್ಕರರಿಗೆ ಬಹಳ ಕೋಪವೂ ಇತ್ತು. ಡಾಂಗೆಯವರಿಂದಾಗಿ ತಾವು ಸೋತಿದ್ದು ಎಂದು ಅವರು ತಿಳಿದಿದ್ದರು.[6]

ರಾಜ್ಯವ್ಯವಸ್ಥೆ ನೈತಿಕ ತಳಹದಿಯ ಮೇಲಿರಬೇಕು. ನೈತಿಕ ತಳಹದಿ ಧರ್ಮದಿಂದ ಮಾತ್ರ ರೂಪಿತವಾಗಿರಲು ಸಾಧ್ಯ. ಕಮ್ಯುನಿಸ್ಟರು ಇದನ್ನು ಮುಖ್ಯವೆಂದು ಪರಿಗಣಿಸುವುದಿಲ್ಲ. ತಾವು ಪವಿತ್ರವೆಂದು ತಿಳಿದ ಧಾರ್ಮಿಕ ನೈತಿಕ ವಿಷಯಗಳಲ್ಲಿ ಕಮ್ಯುನಿಸ್ಟರಿಗೆ ನಂಬಿಕೆ ಇಲ್ಲವೆಂದು ಅಂಬೇಡ್ಕರ್ ನಂಬಿದ್ದರು. ಅಂಬೇಡ್ಕರರ ಉದಾರವಾದಿ ಪ್ರಜ್ಞೆ ರಷ್ಯಾದ ಸಮಾಜವಾದ ಸರ್ವಾಧಿಕಾರಿ ಯಾದದ್ದು ಎಂದು ಪರಿಭಾವಿಸಿತ್ತು.

ಭಾರತೀಯ ಕಮ್ಯುನಿಸ್ಟರು ರಷ್ಯದ ಅನುಯಾಯಿಗಳು, ಜಾತಿ ಪ್ರಜ್ಞೆಯಿಂದ ಅವರಿಗೆ ಹೊರಬರಲು ಆಗಿಲ್ಲ. ಅಸ್ಪೃಶ್ಯತೆ ಒಂದು ಗಂಭೀರ ಸಮಸ್ಯೆ ಎಂದು ಅವರು ಒಪ್ಪುವುದಿಲ್ಲ. ಜಾತಿಯ ವಿರುದ್ಧದ ಹೋರಾಟಗಳಲ್ಲಿ ಅವರಿಗೆ ಆಸಕ್ತಿಯಿಲ್ಲ. ಕಮ್ಯುನಿಸ್ಟರ ಈ ನಿಲುವು ಅವರಿಗೆ ಗಾಂಧಿ ಕಾಂಗ್ರೆಸ್‌ನ ನಿಲುವಿಗಿಂತ ಭಿನ್ನ ಅನ್ನಿಸದೆ ಇದ್ದದ್ದು ಆಶ್ಚರ್ಯಕರವಲ್ಲ. ಭಾರ ತೀಯ ಕಮ್ಯುನಿಸ್ಟ್ ಪಕ್ಷ ಬ್ರಾಹ್ಮಣರ ಹಿಡಿತದಲ್ಲಿದೆ. ಆದ್ದರಿಂದ ಅವರು ಅಸ್ಪೃಶ್ಯರನ್ನು ಸರಿ ಸಮಾನರೆಂದು ಒಪ್ಪುವುದಿಲ್ಲ. ಇವೇ ಅಂಬೇಡ್ಕರ್ ಕಮ್ಯುನಿಸ್ಟರ ವಿರುದ್ಧ ನಿಲ್ಲುವಂತೆ ಪ್ರೇರೇ ಪಿಸಿರಬೇಕು.[7] ಇದಕ್ಕೂ ಮಿಗಿಲಾಗಿ ಬಾಂಬೇ ನಗರದ ಕಮ್ಯುನಿಸ್ಟ್ ಪಕ್ಷ ಅಂಬೇಡ್ಕರ್‌ರ ಅನು ಯಾಯಿ ಮಹರ್ ಕಾರ್ಮಿಕರನ್ನು ಒಲಿಸಿಕೊಳ್ಳುತ್ತಿದ್ದದ್ದು ಅವರಿಗೆ ಕಿರಿಕಿರಿ ಉಂಟು ಮಾಡಿದ್ದು ಸಹಜ.

ಭಾರತೀಯ ಕಮ್ಯುನಿಸ್ಟರು ಕೂಡಾ ಅಂಬೇಡ್ಕರ್ ಅವರ ಚಟುವಟಿಕೆಗಳನ್ನು ಕಾಮಾಲೆ ಕಣ್ಣುಗಳಲ್ಲಿ-ಭೂತಗನ್ನಡಿಯಲ್ಲಿ ನೋಡಿದಂತೆಯೂ ಇದೆ. ಅಂಬೇಡ್ಕರ್ ಬ್ರಿಟಿಷ್ ಸಾಮ್ರಾಜ್ಯ ವಾದಿಗಳೊಂದಿಗೆ ಆಡಿದ ಕಣ್ಣುಮುಚ್ಚಾಲೆಯಾಟ ಪ್ರತ್ಯೇಕ ಚುನಾವಣೆ ಸವಲತ್ತಿಗಾಗಿ ನಡೆಸಿದ ಹೋರಾಟ-ಕಮ್ಯುನಿಸ್ಟರ ಬಗೆಗಿನ ಅವರ ಮಾತುಗಳು ಸ್ವಾತಂತ್ರ್ಯ ಬಂದ ತಕ್ಷಣ ಅಲ್ಲಿಯವರೆಗೆ ವಿರೋಧಿಸುತ್ತಿದ್ದ ಕಾಂಗ್ರೆಸ್ಸಿನ ಮಂತ್ರಿಮಂಡಲ ಸೇರಿಕೊಂಡಿದ್ದು-ಇವೆಲ್ಲವೂ ಸಮಯ ಸಾಧಕ

6. Dr.Keer. ಅದೇ ಪು. 441

7. Harrison, India the most Dangerous Decades, Oxford, 1960-pp. 190-191

ತನವೆಂದು ತೋರಿದ್ದು ಸಹಜ. ಇಲ್ಲಿಯೇ ಎಲ್ಲೋ ಇಬ್ಬರ ಗ್ರಹಿಕೆಯಲ್ಲೂ ಲೋಪವಿದ್ದಂತೆ ತೋರುತ್ತದೆ.

ಇತ್ತೀಚಿನವರೆಗೂ ಭಾರತೀಯ ಕಮ್ಯುನಿಸ್ಟರು ಜಾತಿಸಮಸ್ಯೆಯನ್ನು ಕುರಿತು ಗಂಭೀರವಾಗಿ ತಲೆಕೆಡಿಸಿಕೊಂಡಿರಲಿಲ್ಲವೆಂದರೆ ತಪ್ಪೇನಿಲ್ಲ. ಅಸಮಾನತೆ- ಬಡತನ- ಬಂಡವಾಳಶಾಹಿ ಬೆಳವಣಿಗೆ ಸಂಘರ್ಷಗಳಿದ್ದು ಕ್ರಾಂತಿಕಾರಿ ಚಳುವಳಿ ಈ ಪರಿಸ್ಥಿತಿ ಒತ್ತಾಯಿಸುವಷ್ಟು ಬೆಳೆಯುತ್ತಿಲ್ಲವೆಂದು ತೋರಿದನಂತರ ಆ ನಿಟ್ಟಿನಲ್ಲಿ ಅವರ ಯೋಚನೆಗಳು ಸಾಗಿವೆ.[8] ಸಿದ್ಧ ತತ್ವಗಳಲ್ಲಿ ಜಾತಿಯ ವಿಷಯ ವಾಗಿ ಪ್ರಸ್ತಾಪವಿಲ್ಲದ್ದರಿಂದ ಆ ಬಗ್ಗೆ ಅವರು ಗಂಭೀರವಾಗಿ ಯೋಚಿಸಲಿಲ್ಲ ಎನ್ನಿಸುತ್ತದೆ. ಬೆಳೆ ಯುತ್ತಿರುವ ಬಂಡವಾಳವಾದಿ ಉತ್ಪಾದನಾ ಸಂಬಂಧಗಳು, ಜಾತಿ ಸಮಸ್ಯೆಗೆ ಪರಿಹಾರ ಒದಗಿಸು ತ್ತವೆ ಎಂದು, ಪ್ರಜ್ಞಾಪೂರ್ವಕವಾಗಿ ತಾತ್ವಿಕ ಪ್ರಾಯೋಗಿಕ ಪರಿಹಾರ ಕಂಡುಕೊಳ್ಳಲು ಗಂಭೀರ ಕ್ರಮ ಕೈಕೊಳ್ಳಲಿಲ್ಲವೇನೋ.

ಆಧುನಿಕ ಸಾರಿಗೆ ಸಂಪರ್ಕ, ಈ ಹಿನ್ನೆಲೆಯಲ್ಲಿ ಕಿರಿದಾಗುತ್ತಿರುವ ಜಗತ್ತು, ಒಂದಾಗುತ್ತಿರುವ ಮಾರುಕಟ್ಟೆ - ಯಂತ್ರನಾಗರೀಕತೆ ಬೆಳೆಯುವ ಪ್ರಕ್ರಿಯೆಯಲ್ಲಿ ಸಾಂಪ್ರದಾಯಿಕ ಭಾರತೀಯ ಸಮಾಜ ಚಲನಶೀಲವಾಗುತ್ತದೆ ಎಂದು ಮಾರ್ಕ್ಸ್ ಹೇಳುವುದು ಸರಿಯಾಗಿಯೇ ಇದೆ. ಹಾಗೆಂದು ಜಾತಿವಿನಾಶ ತಾನೇ ತಾನಾಗಿ ಆಗಿ ಹೋಗುತ್ತದೆಂದು ತಿಳಿಯುವುದು ತಪ್ಪು. ಭಾರ ತದ ಜಾತಿವ್ಯವಸ್ಥೆ ಪ್ರಜಾಸತ್ತೆ ಮತ್ತು ವೈಜ್ಞಾನಿಕ ಸಮಾಜವಾದದ ಶತ್ರುವೆಂದು ಪರಿಗಣಿಸಿ ಅದರ ಪ್ರತಿಗಾಮಿತನದ ವಿರುದ್ಧ ಜನಾಭಿಪ್ರಾಯ ರೂಪಿಸಿ ಹೋರಾಟ ಮಾಡುವುದು ಅನಿ ವಾರ್ಯ. ಅವನ್ನು ಮಾರ್ಕ್ಸ್‌ನ ತತ್ವಗಳಲ್ಲಿ ಇರಬೇಕೆಂದು ಬಯಸುವುದು ಅತಿಯಾಗುತ್ತದೆ.

"ರೈಲ್ವೆಸಾಗಣೆಯಿಂದಾಗಿ ಬೆಳೆಯುವ ಆಧುನಿಕ ಕೈಗಾರಿಕೆ, ಭಾರತೀಯ ಸಮಾಜದ ಪ್ರಗತಿಗೆ, ಶಕ್ತಿಗೆ ಅಡ್ಡಿಯಾಗಿರುವ, ಅನುವಂಶಿಕ ಕ್ರಮವಿಭಜನೆಯ ಅಡಿಪಾಯವಾಗಿರುವ ಜಾತಿಗಳನು ನಾಶಮಾಡುತ್ತದೆ."– ಇದು ಮಾರ್ಕ್ಸ್‌ನ ಅಭಿಪ್ರಾಯ. ಅಂಬೇಡ್ಕರ್ ಅವರೇ ವಿವರಿಸಿದಂತೆ ಮಾರ್ಕ್ಸ್‌ವಾದ ಒಂದು ಮಾರ್ಗದರ್ಶಿ, ಜಡವಸ್ತುವಲ್ಲ ಗುರಿಮುಟ್ಟಲು ದಾರಿ ತೋರಿಸುತ್ತದೆ, ತಾನೇ ದಾರಿಯಲ್ಲ. ಹಾದಿಯಲ್ಲಿರುವ ಕಲ್ಲು, ಮುಳ್ಳುಗಳನ್ನು ನಿವಾರಿಸುವ ಹೊಣೆ ಹಾದಿಹೋಕ ರದು.

ಈ ಹಿನ್ನೆಲೆಯಲ್ಲಿಯೇ ಅಂಬೇಡ್ಕರ್‌ರವರು ಸಮಾಜವಾದಿಗಳನ್ನು, ಕಮ್ಯುನಿಸ್ಟರನ್ನು ತರಾ ಟೆಗೆ ತೆಗೆದುಕೊಂಡದ್ದನ್ನು ಗಮನಿಸುವುದು ಅರ್ಥಪೂರ್ಣ. ಈ ಮಾತುಗಳನ್ನು ಗಮನಿಸಿ- "ಆರ್ಥಿಕ ಸಮಾನತೆ ತರಲು ಅಧಿಕಾರವಿರಬೇಕು. ಈ ಅಧಿಕಾರ ಕೂಡ ದುಡಿಯುವ ವರ್ಗದ ಕ್ರಾಂತಿಯಿಂದ ಬರಬೇಕಾದದ್ದೇ. ಆದರೆ ಈ ಕ್ರಾಂತಿಯನ್ನು ಮಾಡಲು ಭಾರತದ ದುಡಿಯುವ ವರ್ಗದವರೆಲ್ಲಾ ಒಂದುಗೂಡುತ್ತಾರೋ? ಬೇರೆಲ್ಲಾ ಸರಿಯಿದ್ದು ಕ್ರಾಂತಿಯ ನಂತರ ಎಲ್ಲರೂ ಸಮಾನರು, ಜಾತಿ ವರ್ಗಭೇದಗಳಿರುವುದಿಲ್ಲ ಎಂದಾದರೆ, ಶೋಷಿತರೆಲ್ಲರೂ ಸಮ ಸಮಾಜ ತರುವ ಈ ಕ್ರಾಂತಿಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಕೇವಲ ಸಮಾಜವಾದಿಯೊಬ್ಬನ ಭರವಸೆಯೊಂದೇ ಇದಕ್ಕೆ ಸಾಕಾ ಗುವುದಿಲ್ಲ" ಇದು ಅವರ ಅಭಿಪ್ರಾಯ.

8. Nombrodripad, People's Democracy, Feb. 86

ಈ ಮಾತುಗಳಲ್ಲಿ ಭಾರತೀಯ ಸಮಾಜದ ವಾಸ್ತವತೆ ಇದೆ. ಇದು ಸಮಾಜವಾದಿಗಳಿಗೆ, ಕಮ್ಯುನಿಸ್ಟರಿಗೆ ತಿಳಿದಿರಲಿಲ್ಲವೆಂದಲ್ಲ. ಆದರೂ ಕಾಂಗ್ರೆಸ್ಸಿಗರಂತೆಯೇ ಅವರೂ ಭಾರತವನ್ನು ಬ್ರಿಟಿಷರ ಗುಲಾಮಗಿರಿಯಿಂದ ಮೊದಲು ಪಾರುಮಾಡಬೇಕು ಎಂಬ ಕಡೆಗೆ ಹೆಚ್ಚು ಗಮನ ಕೊಟ್ಟರು.

ಜಾತಿವ್ಯವಸ್ಥೆಯ ಕ್ರೌರ್ಯದ ಕಡೆಗೆ ಬೇರಾರೂ ಗಮನಕೊಡದ ಸ್ಥಿತಿಯಲ್ಲಿ ಅಸ್ಪೃಶ್ಯತೆ-ಜಾತಿ ಪದ್ಧತಿ ಇವೆರಡೂ ಅಡಿಪಾಯವಾಗಿದ್ದ ಹಿಂದೂ ಮತಾಂಧತೆಯ ವಿರುದ್ಧ ಅಂಬೇಡ್ಕರರ ಉದಾರವಾದಿ ಮನಸ್ಸು ಹರಿಯಿತು. ಫೂಲೆ, ರನಡೆ, ಗೋಖಲೆಯಂಥ ಭಾರತದ ಮಿತವಾದಿಗಳು-ಉದಾರವಾದಿಗಳು ಅಂಬೇಡ್ಕರರನ್ನು ಮೊದಲೇ ಸೆರೆ ಹಿಡಿದಿದ್ದರು. ಜಾನ್ ಸ್ಟೂವರ್ಟ್ ಮಿಲ್, ಬೂಕರ್ ಡಿ. ವಾಷಿಂಗ್‌ಟನ್-ಬರ್ಕ್‌ನಂಥ ಪಾಶ್ಚಾತ್ಯ ಉದಾರವಾದಿ ಚಿಂತಕರು ಪ್ರಭಾವ ಬೀರಿದ್ದರು. ಅಮೇರಿಕಾ ಇಂಗ್ಲೆಂಡುಗಳ ಉದಾರವಾದಿ ಜನತಂತ್ರ ಅವರಿಗೆ ತನ್ನೆಲ್ಲ ಮಿತಿಗಳೊಂದಿಗೂ ಹಿಡಿಸಿತ್ತು. ಆದ್ದರಿಂದಲೇ ಅವರು ಕ್ರಾಂತಿಕಾರಿ ಮಾರ್ಗ ತೊರೆದು ಉದಾರವಾದಿ ಮಾರ್ಗ ಹಿಡಿದು ತಾತ್ವಿಕ ಗೊಂದಲಗಳಿಗೆ ಒಳಗಾದರು ಎನಿಸುತ್ತದೆ. 1942ರ ನಂತರದ ಅಂಬೇಡ್ಕರ್ ಯಾವ ಹೋರಾಟವನ್ನೂ ಮಾಡಲಿಲ್ಲ ಎನ್ನುವುದನ್ನು ಗಮನಿಸಿದಾಗ ಅವರ ಉದಾರವಾದ ಮನದಟ್ಟಾಗುತ್ತದೆ.

ಸಾಮಾಜಿಕ-ಆರ್ಥಿಕ ಸ್ವಾತಂತ್ರ್ಯವಿಲ್ಲದ ಪ್ರಜಾಸತ್ತೆ, ಸ್ವಾತಂತ್ರ್ಯ ಸಮಾನತೆಗಳ ನಡುವೆ ಸಮತೋಲವಿರದ ಪ್ರಜಾಸತ್ತೆ "ತನ್ನ ಗರ್ಭದಲ್ಲಿ ರಕ್ತಕ್ರಾಂತಿಯ ಬೀಜಗಳನ್ನು ಒಳಗೊಂಡಿರುತ್ತದೆ"[9] ಎಂದು ಹೇಳುತ್ತಲೇ ವ್ಯವಸ್ಥೆಯ ತೆಕ್ಕೆಗೆ ಸೇರಿ ತಾವು ವಿರೋಧಿಸುತ್ತಿದ್ದವರನ್ನು ಅಪ್ಪಿಕೊಳ್ಳುವ ಅನಿವಾರ್ಯತೆಗೆ ಸಿಲುಕಿ, ಕೊನೆಗೆ ಭ್ರಮನಿರಸನಗೊಂಡು ಆಧ್ಯಾತ್ಮದಲ್ಲಿ ಲೀನವಾದರು.

ಮೇಲಿನ ವಿವರಣೆಯ ಹಿನ್ನೆಲೆಯಲ್ಲಿ ಅಂಬೇಡ್ಕರರ ಚಿಂತನೆ ಭಾರತೀಯ ಸಮಾಜವಾದಿಗಳ ಮತ್ತು ಕಮ್ಯುನಿಸ್ಟರ ಚಿಂತನೆಗಿಂತ ಭಿನ್ನವಾದದ್ದು ಎಂದು ಹೇಳಬಹುದು. ಆದರೆ ಕೊನೆಗೆ ಅವರು ಮನಸ್ಸನ್ನು ಆಕ್ರಮಿಸಿದ್ದು ಭಾರತೀಯ ಸಮಾಜವಾದಿಗಳು ಪ್ರತಿಪಾದಿಸುವ ಸಂಸದೀಯ ಜನತಂತ್ರವೂ ಅಲ್ಲ; ಅತೀ ಒತ್ತುಕೊಡುವ ವ್ಯಕ್ತಿ ಸ್ವಾತಂತ್ರ್ಯವೂ ಅಲ್ಲ. ಬೌದ್ಧಧರ್ಮ ಮತ್ತು ಮಾರ್ಕ್ಸ್‌ವಾದಗಳು. ಈಗ ಅಂಬೇಡ್ಕರ್ ಚಿಂತನೆಯ ಪ್ರಸ್ತುತತೆಯ ಕಡೆಗೆ ಗಮನ ಹರಿಸಬಹುದು. ಒಂದು ಹಂತದ ಅಂಬೇಡ್ಕರ್‌ರ ಚಿಂತನೆ-ಸಂಘಟನೆ ಹೋರಾಟಗಳು ನಮ್ಮ ಸಂದರ್ಭಕ್ಕೆ ಪ್ರಸ್ತುತವಾಗಬಲ್ಲವು. ಕೃಷಿ ಕೂಲಿಕಾರರನ್ನು, ಸಣ್ಣರೈತರನ್ನು, ಕಾರ್ಮಿಕರನ್ನು, ಅಸ್ಪೃಶ್ಯರನ್ನು ಸಂಘಟಿಸಿ ಕೋಠಿ ಮತ್ತು ಮಹಲ್‌ವತನ್ ರದ್ಧತಿಗಾಗಿ ಹೋರಾಟ ಮಾಡಿದ ಮಹದ್-ನಾಸಿಕ್ ಹೋರಾಟಗಳನ್ನು ನಡೆಸಿದ ಅಂಬೇಡ್ಕರ್ ನಮಗೆ ಹೆಚ್ಚು ಪ್ರಸ್ತುತರಾಗುತ್ತಾರೆ. ಉತ್ಪಾದನೆಗೆ ಬಹು ಮುಖ್ಯ ಅಂಗವಾದ ಭೂಮಿ ಸರ್ಕಾರಿ ಸ್ವಾಮ್ಯದಲ್ಲಿರಬೇಕು. ಸಮಾನತೆ ಇರಬೇಕು, ಬಡತನ-ಶೋಷಣೆಯ ವಿರುದ್ಧ ನಿರಂತರ ಹೋರಾಟ ಅನಿವಾರ್ಯವೆನ್ನುವ ಅಂಬೇಡ್ಕರ್ ನಮಗೆ ಪ್ರಸ್ತುತರು.

---

9. G.S. Lokhonde-Dr. B.R. Ambedkar, A Study in Social Democracy, P. 24

ಆದರೆ ಬೌದ್ಧಧರ್ಮವನ್ನು ಆದರ್ಶೀಕರಿಸಿ, ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗುತ್ತದೆನ್ನುವ ಅಂಬೇಡ್ಕರ್‌ರ ವಾದ ಅಚಾರಿತ್ರಿಕವಾಗುತ್ತದೆ. ಮತಾಂತರದಿಂದ ದಲಿತರ ಸಮಸ್ಯೆಗೆ ಪರಿಹಾರ ಸಿಗುತ್ತದೆನ್ನುವ ಅವರ ನಂಬಿಕೆ ಮಾತ್ರ ಗಾಂಧೀಜಿಯವರ ಮನಸ್ಸಿನ ಪರಿವರ್ತನೆ, ಟ್ರಸ್ಟೀಶಿಪ್ ನಷ್ಟೇ ಅಸಂಗತವಾದ ನಂಬಿಕೆ. ಈ ಎರಡೂ ಕ್ರಿಯೆಗಳು ಹಲವಾರು ದಶಕಗಳಿಂದ ನಮ್ಮ ಮುಂದೆ ಜೀವಂತ ನಿದರ್ಶನಗಳಾಗಿವೆ. ಮತಾಂತರದಿಂದಾಗಲಿ ಟ್ರಸ್ಟೀಶಿಪ್ ತತ್ವದಿಂದಾಗಲಿ ಯಾವ ಪರಿಹಾರವೂ ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿದೆ.

ಅಂಬೇಡ್ಕರ್ ಅವರ ಹೋರಾಟದ ಹಾದಿ ಕವಲೊಡೆದು ಅವರು ಹಲವಾರು ಪರಸ್ಪರ ವಿರುದ್ಧವಾದ ನಿಲುವುಗಳನ್ನು ತೆಗೆದುಕೊಂಡ ಮೇಲೂ ಹಾಗೆಯೇ ಅವರ ಆಧ್ಯಾತ್ಮಿಕ ಧಾರ್ಮಿಕ ಮನಸ್ಸು (ದ್ವೇಷದಿಂದ ಪ್ರೇರಿತವಾದ ?) ಬೌದ್ಧಧರ್ಮಕ್ಕೆ ಶರಣಾದ ಮೇಲೂ, ಅವರ ಮನಸ್ಸನ್ನು ತೀವ್ರವಾಗಿ ಕಲಕಿದ ಎರಡು ಮುಖ್ಯ ಸಂಗತಿಗಳೆಂದರೆ ಬೌದ್ಧಧರ್ಮ ಮತ್ತು ಮಾರ್ಕ್ಸ್‌ವಾದ. ನಿಧನರಾಗುವ ಹಿಂದಿನ ದಿನದವರೆಗೂ (ಡಿಸೆಂಬರ್ 6,1956) ಅವರ ಒಡನಾಟ ಬುದ್ಧ ಮಾರ್ಕ್ಸ್ ಇಬ್ಬರ ತತ್ವಗಳನ್ನೊಳಗೊಂಡ ಪುಸ್ತಕಗಳ ಜೊತೆಗೆ.[10]

ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗಿ ಬೌದ್ಧಧರ್ಮ ಒಪ್ಪಿಕೊಂಡನಂತರವೂ ಅವರು ಅಸಮತೆ ಶೋಷಣೆಗಳನ್ನು ನಿರ್ಮೂಲನೆ ಮಾಡುವುದರ ಬಗ್ಗೆಯೇ ಯೋಚಿಸುತ್ತಿದ್ದರು. ಅಂಬೇಡ್ಕರ್ ಬೌದ್ಧಧರ್ಮವನ್ನು ಅರ್ಥವಿಸಿದ್ದೂ ಈ ಹಿನ್ನೆಲೆಯಲ್ಲಿಯೇ ಎನ್ನುವುದು ಗಮನಾರ್ಹ. "ಬುದ್ಧನು 'ಶೋಷಣೆ' ಎಂಬ ಪದ ಬಳಸದಿದ್ದರೂ ದುಃಖ ಎಂಬ ಪದವನ್ನು ಆಸ್ತಿ ಎಂಬ ಅರ್ಥದಲ್ಲಿಯೇ ಬಳಸುತ್ತಾನೆ. ಯಾವ ಭಿಕ್ಷುವೂ ಖಾಸಗಿ ಆಸ್ತಿ ಹೊಂದಿರಬಾರದೆಂದೇ ಬುದ್ಧ ವಿಧಿಸುತ್ತಾನೆ. ಕಾರ್ಲ್‌ಮಾರ್ಕ್ಸನೂ ಖಾಸಗಿ ಆಸ್ತಿ ಶೋಷಣೆಗೆ ಮೂಲ, ಆಸ್ತಿಯ ಹಕ್ಕು ಬಡವ ಶ್ರೀಮಂತ ಎಂದು ಸಮಾಜವನ್ನು ವರ್ಗೀಕರಿಸುತ್ತದೆ. ಉತ್ಪಾದನಾ ಅಂಗಗಳ ಮೇಲೆ ಸರ್ಕಾರಿ ಸ್ವಾಮ್ಯವಿರಬೇಕು. ಶ್ರಮಿಕರ ಕೈಲಿ ಸಂಪೂರ್ಣಾಧಿಕಾರವಿರಬೇಕು ಎನ್ನುತ್ತಾನೆ. ಖಾಸಗಿ ಆಸ್ತಿಯ ಬಗೆಗಿನ ತತ್ವಗಳು ಬುದ್ಧನ ಧರ್ಮದಲ್ಲಿವೆ. ಆದರೆ ಬುದ್ಧ-ಮಾರ್ಕ್ಸ್‌ವಾದಗಳಲ್ಲಿ ಒಂದು ಪ್ರಮುಖ ವ್ಯತ್ಯಾಸವೆಂದರೆ, ಬುದ್ಧ ಮನಃ ಪರಿವರ್ತನೆಯ ಮೂಲಕ ಸಾಧಿಸಬೇಕಾದ ಅಹಿಂಸಾತ್ಮಕ ಮಾರ್ಗವನ್ನು ಹೇಳುತ್ತಾನೆ. ಆದ್ದರಿಂದ 'ದುಃಖ' ನಿವಾರಣೆಗೆ ಅಂದರೆ ಖಾಸಗಿ ಆಸ್ತಿಯ ನಿವಾರಣೆಗೆ ಬೌದ್ಧರು ಮಾರ್ಗವೇ ಸೂಕ್ತ". ಸಂಕ್ಷಿಪ್ತವಾಗಿ ಇದು ಅಂಬೇಡ್ಕರ್‌ರ ವಿಚಾರ.[11] ಈ ವಾದವನ್ನು ಬುದ್ಧರು ಪೂರ್ತಿಯಾಗಿ ತಿರಸ್ಕರಿಸಿದರೆಂಬುದು ಬೇರೆ ಮಾತು. ಹಾಗೆಯೇ ಅವರ ಪುಸ್ತಕ 'ಬುದ್ಧ ಮತ್ತು ಅವರ ಧರ್ಮ'ವನ್ನು 'ಅಂಬೇಡ್ಕರ್ ಮತ್ತು ಅವರ ಧರ್ಮ' ಎಂದು ಮಾತ್ರ ಕರೆಯಬಹುದು ಎಂದೇ ಬೌದ್ಧ ವಿಮರ್ಶಕರು ಬಣ್ಣಿಸಿದ್ದೂ ಇಲ್ಲಿ ಅಪ್ರಸ್ತುತ.

ಬೌದ್ಧಧರ್ಮ ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗುತ್ತದೆಂದು ಹೇಳುತ್ತಿದ್ದರೂ ಪ್ರಜಾಸತ್ತೆಯ ಬಗೆ ಇದ್ದಹಾಗೆಯೇ ಬೌದ್ಧಧರ್ಮ ಯಶಸ್ವಿಯಾಗುವ ಬಗ್ಗೆ ಕೂಡಾ ಅವರಲ್ಲಿ ಬಲವಾದ ಅನುಮಾನಗಳಿದ್ದವು. ಪ್ರಜಾಸತ್ತೆ ಯಶಸ್ವಿಯಾಗದಿದ್ದರೆ ಒಂದು ರೀತಿಯ ಕಮ್ಯುನಿಸಂ ಪರ್ಯಾಯವಾಗುತ್ತದೆ. ಹಾಗೆಯೇ ಮಾನವ ಸಮಾಜ ಮುಂದಿನ ಪೀಳಿಗೆಯ ಸಮಯಕ್ಕಾದರೂ ಬುದ್ಧ

10. D. Keer, p. 506-511
11. Thus spoke Ambedker, vol-2-pp-126-129

ನವ್ನಾಗಲೀ ಮಾರ್ಕ್ಸ್‌ವಾದವನ್ನಾಗಲೀ ಒಪ್ಪುವುದು ಅನಿವಾರ್ಯವೆಂದು ಅವರ ಖಚಿತ ಅಭಿಪ್ರಾಯವಾಗಿತ್ತು.[17] ಅಂಬೇಡ್ಕರ್ ಕಂಡ ಭವಿಷ್ಯತ್ ಸತ್ಯ ಇದು.

ಅಂಬೇಡ್ಕರ್ ಈ ಮಾತುಗಳನ್ನು ಹೇಳಿ ಸುಮಾರು ನಾಲ್ಕು ದಶಕಗಳು ಸಂದು ಹೋಗಿವೆ. ಭಾರತದ ಚರಿತ್ರೆ ಅಷ್ಟು ಹಾದಿ ಸವೆಸಿದೆ. ಅವರು ಜಾತಿವಿನಾಶ-ಸಮಾಜವಾದಿ ಕ್ರಾಂತಿ-ಬೌದ್ಧ ಧರ್ಮ-ಮಾರ್ಕ್ಸ್‌ವಾದಗಳ ಬಗ್ಗೆ ಮಾತನಾಡುತ್ತಿದ್ದ ಚಾರಿತ್ರಿಕ ಘಟ್ಟದಲ್ಲಿ ಬಂಡವಾಳವಾದಿ ಶೋಷಣೆ ಹೆಚ್ಚು ತೀವ್ರವಾಗಿರಲಿಲ್ಲ. ಶೋಷಿತರೆಲ್ಲಾ ಒಗ್ಗಟ್ಟಾಗಬೇಕೆಂಬ ಅರಿವು ಮೂಡಿರಲಿಲ್ಲ. ಜಾತ್ಯಂಧತೆ ಅಸ್ಪೃಶ್ಯತೆ ತಾಂಡವವಾಡುತಿದ್ದವು. ಆದ್ದರಿಂದಲೇ ಅಂಬೇಡ್ಕರ್ ಸಮಾಜವಾದಿ ಕ್ರಾಂತಿಯ ಬಗ್ಗೆ ವ್ಯಕ್ತಪಡಿಸಿದ ಶಂಕೆ ಅಂದಿನ ಚಾರಿತ್ರಿಕ ಸಂದರ್ಭದಲ್ಲಿ ಸಕಾರಣವೆನ್ನಬೇಕು. ವ್ಯಕ್ತಿಗಳು-ಸಮಾಜ ಸಂಬಂಧಗಳು ಬದಲಾಗುವುದು ಪ್ರಕೃತಿ-ಚಾರಿತ್ರಿಕ ನಿಯಮ. ಬಂಡವಾಳವಾದ, ಬೃಹತ್ ಕೈಗಾರಿಕೆ,ನಗರೀಕರಣ-ಅವುಗಳ ಜೊತೆಗೇ ಶೋಷಣೆ-ಬಡತನ,ಬಡವ-ಸಿರಿವಂತರ ನಡುವೆ ಅಂತರ ಇವುಗಳೂ ಬೆಳೆದು ಶೋಷಿತರನ್ನು, ದುಡಿಯುವವರನ್ನು ಜಾಗೃತರನ್ನಾಗಿಸುತ್ತಿದೆ.

ಅಂದು ತಾಂಡವವಾಡುತ್ತಿದ್ದ ಅಸ್ಪೃಶ್ಯತೆ ಪೂರ್ತಿ ಮಾಯವಾಗಿಲ್ಲ ನಿಜ. ಆದರೆ ಅದರ ತೀಕ್ಷ್ಣತೆ ಕೊಂಚವಾದರೂ ಕಡಿಮೆಯಾಗಿದೆ ಎನ್ನುವುದು ಒಪ್ಪಬೇಕಾದ ಮಾತು. ದಲಿತ-ಶೋಷಿತರಲ್ಲಿ ಮೂಡುತ್ತಿರುವ ಎಚ್ಚರದಿಂದಾಗಿ ಅಂದು ನಮಗೆ ಸಂಘಟಿತ ರೂಪದಲ್ಲಿ ಕಾಣದಿದ್ದ ದಲಿತ ಶೋಷಿತ-ಶೋಷಕರ ನಡುವಿನ ಹೋರಾಟಗಳು ಹೆಚ್ಚುತ್ತಿವೆ. ಇಂಥ ಎಲ್ಲ ಹೋರಾಟಗಳಿಗೆ ಜಾತಿ ಬಣ್ಣ ಹಚ್ಚುವ ಪಿತೂರಿಕಾರರೂ ಇದ್ದಾರೆ. ಜಾತಿ ಗಲಭೆ ಎಂದು ಬಣ್ಣಿಸಲಾಗುವ ಯಾವುದೇ ಕರ್ಮಕಾಂಡದ ಹಿನ್ನೆಲೆಯನ್ನು ಆಳವಾಗಿ ಕೆದಕಿ ನೋಡಿದಾಗ ಅಲ್ಲಿ ಕಾಣಬರುವುದು ಶ್ರೀಮಂತ ಜಾತಿವಾದಿಗಳು, ಪಟ್ಟಭದ್ರರು ತಮ್ಮ ಹಿತರಕ್ಷಣೆಗಾಗಿ ನಡೆಸಿರುವ ಮಸಲತ್ತು (ವಿವರಗಳಿಗೆ Bipin Chandra, Communalism in Modern India. New Delhi, 1984) ದಲಿತ ಶೋಷಿತರೆಲ್ಲಾ ಒಟ್ಟಾಗಿ ಸಂಘಟಿತರಾಗುವವರೆಗೂ ಇವು ನಡೆಯುವಂಥವೇ. ಆದ್ದರಿಂದಲೇ ಶೋಷಣೆ ನಿವಾರಣೆಯ ಬಗೆಗಿನ ಅಂಬೇಡ್ಕರ್ ವಿಚಾರಗಳು ನಮ್ಮ ಚಾರಿತ್ರಿಕ ಘಟ್ಟದ, ಒಂದು ಹಂತದಲ್ಲಿ ಉಪಯುಕ್ತವಷ್ಟೇ ಅಲ್ಲ ಅನಿವಾರ್ಯವೂ ಹೌದು.

ಕೊನೆಯದಾಗಿ ಹಾಗೂ ಮುಖ್ಯವಾಗಿ ಅಂಬೇಡ್ಕರ್ ಅವರೇ ಒಂದು ಹಂತದಲ್ಲಿ ಶೋಷಣಾರಹಿತ ಸಮಾಜ ನಿರ್ಮಾಣಕ್ಕಾಗಿ ಹೇಳಿದ ಮಾತು, ಹಾಕಿಕೊಟ್ಟ ಹಾದಿ, ಎರಡನ್ನೂ ನೆನಸಿಕೊಂಡು ಕಾರ್ಯೋನ್ಮುಖವಾಗಬಹುದು:

"... ಶ್ರೀಮಂತರ ಸಿರಿತನ ದರಿದ್ರರ ಬಡತನದಲ್ಲಿದೆ. ಇದನ್ನು ನಿವಾರಿಸಬೇಕಾದರೆ ದುಡಿಯುವವರೆಲ್ಲಾ ಜಾತಿಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು. ಈ ಸಂಘಟನೆಯಿಂದ ಬಡವರನ್ನು ಪ್ರತಿನಿಧಿಸುವವರು ನಾಯಕರಾಗಲು ಸಾಧ್ಯ. ಹಾಗಾದಾಗ 'ಎಲ್ಲರ ಅಗತ್ಯತೆಗಳನ್ನು ಪೂರೈಸಬಹುದು. ಸಂಪತ್ತನ್ನು ಉತ್ಪಾದಿಸುವವರು ಹಸಿವೆಯಿಂದ ಸಾಯಬೇಕಾಗುವುದಿಲ್ಲ."[18]

12. Kuber W.N. Dr.Ambedker Acritical Study, New Delhi 1979, pp. 218-219
1 . D. Keer,pp 300-301

ಬದುಕಿಗಾಗಿ ಜನರ ಆಂದೋಲನ

ಪಾಂಡುರಂಗ ಹೆಗಡೆ

ಬಸ್ತರ ಎಂಬಲ್ಲಿ ಅಡವಿಯನ್ನು ಉಳಿಸಲು ಚಳವಳಿಯೊಂದು ನಡೆಯಿತು. ಇದು ಮೂಲತಃ ಮಹಿಳೆಯರು ಆರಂಭಿಸಿದ ಚಳವಳಿ. ಈ ಹೋರಾಟದಲ್ಲಿ ಆದಿವಾಸಿ ಹೆಂಗಸರು ಮುಂದಾಳ್ತನ ವಹಿಸಿದ್ದರು. ಈ ಚಳವಳಿಯ ಮುಂದಾಳುಗಳಲ್ಲಿ ಒಬ್ಬಳಾದ ಮಿಟ್ಕಿಬಾಯಿ ಎಂಬವಳು ತಮ್ಮ ಆಂದೋಲನದ ಕುರಿತು ಈ ರೀತಿ ನೆನಪಿಸಿಕೊಳ್ಳುತ್ತಾಳೆ: "ಅರಣ್ಯ ಇಲಾಖೆಯವರು ಬಂದರು ನಮ್ಮೂರ ಸುತ್ತ ಅಗಳ ತೆಗೆದು ತಂತಿಯ ಬೇಲಿ ಹಾಕಿದರು. ಎಲ್ಲ ದಾರಿಗಳನ್ನೂ ಮುಚ್ಚಿ ಅಲ್ಲಿ ಉಳಿದಿರುವ ಮರಗಳನ್ನು ಕಡಿಯಲು ತೊಡಗಿದರು. ಈ ಅಡವಿಯನ್ನು ನಾಶ ಮಾಡಿದರೆ ನಮ ಗೆಲ್ಲ ತೊಂದರೆಯಾಗುವದೆಂದು ಮನವರಿಕೆಯಾಗಿತ್ತು. ಎಲ್ಲ ಹೆಣ್ಣುಮಕ್ಕಳೂ ಒಂದೆಡೆ ಸೇರಿ ಮರ ಕಡಿಯುವದನ್ನು ತಡೆಯಲು ನಿರ್ಧರಿಸಿದೆವು". ಈ ಆದಿವಾಸಿ ಹೆಂಗಸರು ತಾವೇ ಸಂಘಟಿತ ರಾಗಿ ಅರಣ್ಯ ರಕ್ಷಿಸಲು ಚಳವಳಿ ಆರಂಭಿಸಿದರು. ಬಸ್ತರದಲ್ಲಿ ಆದಿವಾಸಿಗಳ ಜೀವನ ಅರಣ್ಯವನ್ನೇ ಅವಲಂಬಿಸಿದೆ. ಬಸ್ತರದಲ್ಲಿ ಆಹಾರ ಸಂಗ್ರಹಣೆ, ದನಗಳನ್ನು ಮೇಯಿಸುವದು ಮುಂತಾದ ಮುಖ್ಯ ಕೆಲಸಗಳನ್ನು ಹೆಂಗಸರೇ ಮಾಡುತ್ತಾರೆ. ಇದ್ದ ಅರಣ್ಯವನ್ನು ನಾಶಮಾಡಿ ಹೊಸದಾಗಿ ಗಿಡ ನೆಡುವ ಅರಣ್ಯ ಇಲಾಖೆಯವರ ಯೋಜನೆ ತಮ್ಮ ಜೀವನಾಧಾರವಾದ ಅರಣ್ಯಸಂಪತ್ತನ್ನೇ ಹಾಳು ಮಾಡುವುದೆಂದು ಅವರು ತಿಳಿದರು. ವಿದೇಶಿ ತಳಿಯ ಗಿಡಗಳ ವನ ಮಾಡಲಿಕ್ಕಾಗಿ ಅರಣ್ಯ ಇಲಾಖೆಗೆ ಆ ಜಾಗ ಬೇಕಾಗಿತ್ತು. ಜನಸಮುದಾಯದ ಜೀವನಾಧಾರ ಸಂಬಂಧ ವಾದ ಈ ಘರ್ಷಣೆ ಕ್ರಾಂತಿಯ ಕಿಡಿಯನ್ನು ಎಬ್ಬಿಸಿತು. ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿದು ಒಯ್ಯುತ್ತೇವೆಂದು ಹೆಂಗಸರನ್ನು ಹೆದರಿಸಿದರು. ಕಾನೂನು ಕ್ರಮದ ಬೆದರಿಕೆ ಹಾಕಿ ದರು. ಆದರೆ ಆ ಹೆಂಗಸರು ಎಂಥ ಪರಿಣಾಮಗಳನ್ನೂ ಎದುರಿಸಲು ಸಿದ್ಧರಾದರು. ಅವರು ಬಹಳ ದಿನಗಳ ವರೆಗೆ ಚಳವಳಿ ಮುಂದುವರಿಸಿ ತಮ್ಮ ಹೋರಾಟದಲ್ಲಿ ಗೆದ್ದರು. ಜಿಲ್ಲಾಧಿಕಾರಿ ಗಳು ಸ್ಥಳಕ್ಕೆ ಭೇಟಿ ನೀಡಿ ಹೆಂಗಸರ ಬೇಡಿಕೆಗಳನ್ನು ಮನ್ನಿಸಿದರು. ಬಸ್ತರಿನ ದೂರ ದೂರದ ಹಳ್ಳಿಗಳಿಗೂ ಚಳವಳಿ ಹಬ್ಬಿತು. ಇದು ಕೇವಲ ಚಳವಳಿಯ ಪ್ರಾರಂಭದ ಹಂತ. ಬರುವ ವರುಷ ಗಳಲ್ಲಿ ಇನ್ನೂ ಹೆಚ್ಚಿನ ಕೆಲಸಗಳು ಆಗಲಿವೆ.

ಒರಿಸ್ಸಾದ ದೂರದ ಗುಡ್ಡಗಾಡಿನ ಸ್ಥಳವಾದ ಗಂಧಮರ್ದನ ಎಂಬಲ್ಲಿ ಜನರು ಭಾರತ ಅಲ್ಯುಮಿನಿಯಂ ಕಂಪನಿಯ ಬಾಕ್ಸೈಟ್ ಗಣಿಯ ವಿರುದ್ಧ ಚಳವಳಿ ಎಬ್ಬಿಸಿದರು. ಗಂಧಮರ್ದನದ ಈ ಗಣಿ ಯೋಜನೆ ಈಗಾಗಲೇ ಅಡವಿಯನ್ನು ನಾಶಮಾಡಿದೆ. ಅಲ್ಲದೇ ಈ ಗಣಿಗಳಿಂದ ಹೊರ ಹಾಕಲ್ಪಟ್ಟ ಮಣ್ಣು ಕಲ್ಲುಗಳಿಂದ ನದಿಯ ಹರಿಯುವಿಕೆ ಬಂದಾಗಿ ಹೋಗಿದೆ. ಭವಿಷ್ಯದಲ್ಲಿ ಇದರಿಂದಾಗುವ ದುರಂತವನ್ನು ಮನಗಂಡು ಗಂಧಮರ್ದನ ಗುಡ್ಡಗಾಡಿನ ಸುಮಾರು 80 ಹಳ್ಳಿಗಳ ಜನರು ತಾವೇ ಸಂಘಟಿತರಾಗಿ ಬಾಲ್ಕೋ ಕಂಪನಿಯ ವಿರುದ್ಧ ಹೋರಾಡಲು ಅಣಿಯಾದರು. ಈ ಯೋಜನೆಯ ಮುಂದುವರಿಸುವಿಕೆಯಿಂದ ಸುಮಾರು ಇಪ್ಪತ್ತು ಸಾವಿರ ಜನ ಆದಿವಾಸಿಗಳಿಗೆ ಆಧಾರವಾದ ಅಡವಿ ನಾಶವಾಗುತ್ತದೆ. ಈ ಗಿರಿ ಕಂದರಗಳಲ್ಲಿ ವಾಸಮಾಡುವ ಆದಿವಾಸಿಗಳು ತಮ್ಮ ಆಹಾರ, ಉದ್ಯೋಗಗಳಿಗಾಗಿ ಈ ಅರಣ್ಯವನ್ನೆ ನಂಬಿದ್ದಾರೆ. ಈ ಗಿರಿಯು ಮುಖ್ಯವಾಗಿ ನೀರಿನ ನೆಲೆಯ ಸ್ಥಾನವಾಗಿದ್ದು, ವರ್ಷಾವಧಿ ಹರಿಯುವ 22 ಹೊಳೆಗಳ ಉಗಮ ಸ್ಥಳವಾಗಿದೆ.

ಇದನ್ನೆಲ್ಲ ಕಡೆಗಣಿಸಿದ ರಾಜ್ಯ ಸರಕಾರ ಈ ಸ್ಥಳದಲ್ಲೆ ಕೆಲಸ ಆರಂಭಿಸಲು ಬಾಲ್ಕೋ ಕಂಪನಿಯನ್ನು ಆಹ್ವಾನಿಸಿತು. ಜನರು ಈ ನಿರ್ಣಯದ ವಿರುದ್ಧ ತಿರುಗಿ ಬಿದ್ದರು. ಮತ್ತು ಸರಕಾರದ ಕ್ರಮ ವಿಫಲವಾಗುವಂತೆ ತಮ್ಮದೇ ಆದ ನೀತಿ ಅನುಸರಿಸಿದರು. ಅವರು ಗಂಧಮರ್ದನ ಹಾಗೂ ಅದರ ಸುತ್ತಮುತ್ತಲ ಸ್ಥಳಗಳಲ್ಲಿ ತಡೆಗೋಲುಗಳನ್ನು ನಿಲ್ಲಿಸಿದರು. ರಸ್ತೆಗಳಲ್ಲಿ ತಡೆಯೊಡ್ಡಿ ಬಾಲ್ಕೋ ಕಂಪನಿಯ ವಾಹನಗಳು ಗಂಧಮರ್ದನದೊಳಗೆ ಪ್ರವೇಶಿಸದಂತೆ ಮಾಡಿದರು. ಬಹಳಷ್ಟು ಮಂದಿ ಗಂಡಸರು, ಹೆಂಗಸರು, ಮಕ್ಕಳನ್ನು ಒಳಗೊಂಡಂತೆ ಸೆರೆಹಿಡಿಯಲ್ಪಟ್ಟರು. ಆದರೆ ಜನರ ಉತ್ಸಾಹ ಎಷ್ಟಿತ್ತೆಂದರೆ ಅವರು ಸೆರೆವಾಸವನ್ನು ಲೆಕ್ಕಿಸದೆ ಚಳವಳಿಯನ್ನು ಬೆಂಬಲಿಸಿದರು. ಕೊನೆಗೆ ಜನರ ಈ ತಡೆಯೊಡ್ಡುವ ಚಳವಳಿ ಯಶಸ್ವಿಯಾಗಿ ಬಾಲ್ಕೋ ಕಂಪನಿಯ ಕೆಲಸವನ್ನು ನಿಲ್ಲಿಸಲಾಯಿತು. ಕಳೆದ ಒಂದೂವರೆ ವರ್ಷದಿಂದ ಜನ ಬಾಲ್ಕೋ ಕಂಪನಿಯು ತಿರುಗಿ ಕೆಲಸ ಆರಂಭಿಸುವ ಎಲ್ಲ ಪ್ರಯತ್ನಗಳನ್ನೂ ನಿಷ್ಕ್ರಿಯಗೊಳಿಸಿದ್ದಾರೆ. ಈಗ ಅವರ ಘೋಷಣೆಯೆಂದರೆ "ನಮಗೆ ಬಾಲ್ಕೋ ರಾಕ್ಷಸ ಬೇಡ ನಮಗೆ ಬೇಕಾಗಿದ್ದು ಮಣ್ಣು ಮತ್ತು ನೀರು." ಸರಕಾರ ಏನೇ ನಿರ್ಧರಿಸಲಿ, ಜನರೆಲ್ಲ ತಮ್ಮ ಹೋರಾಟವನ್ನು (ತಮ್ಮ ಜೀವ ತೆತ್ತಾದರೂ) ಮುಂದುವರಿಸುವ ಅಚಲ ನಿರ್ಧಾರ ಮಾಡಿದ್ದಾರೆ.

ಈ ಮೇಲಿನ ಎರಡು ಸಂದರ್ಭಗಳು ಬದುಕಿಗಾಗಿ ಜನರ ಹೋರಾಟವನ್ನು ಚಿತ್ರಿಸುತ್ತವೆ. ಸರಕಾರದ ತಪ್ಪು ನೀತಿಯಿಂದ ಹಾಳುಗೆಡಹಲ್ಪಟ್ಟ ಸಂಪನ್ಮೂಲವನ್ನು ಪುನರ್‌ಸ್ಥಾಪಿಸುವ ಉದ್ದೇಶವುಳ್ಳ ಚಳವಳಿಗಳು ಈಗಾಗಲೇ ಕೆಲಸ ಮಾಡುತ್ತಿವೆ. ಚಿಪ್ಕೋ ಚಳವಳಿ ಎಂಬುದು ನಮ್ಮ ಮತ್ತು ಹೊರಗಿನ ದೇಶಗಳಲ್ಲಿ ಜನಸಾಮಾನ್ಯನಿಗೂ ಪರಿಚಯವಿರುವ ಪದವಾಗಿದೆ. ಅಲ್ಲದೇ ಹೇಗೆ ಹೆಂಗೆಳಯರೇ ಮುಂದಾಗಿ ಅರಣ್ಯ ರಕ್ಷಣೆಗೆ ಚಳವಳಿ ನಡೆಸಿದರು ಎಂಬುದಕ್ಕೆ ಪ್ರಚಾರವೂ ಸಿಕ್ಕಿದೆ. ಈಗ ಅದೆಲ್ಲ ಇತಿಹಾಸವಾಗಿ, ಕಾರ್ಯಕರ್ತರು ಗಿಡನೆಡುವ ಕಾರ್ಯಕ್ರಮ ಹಮ್ಮಿಕೊಂಡು ಚಳವಳಿಯನ್ನು ಜೀವಂತವಾಗಿಟ್ಟಿದ್ದಾರೆ. ಮರ ಅಪ್ಪುವ ಹೆಂಗಸರು ಹಿಮಾಲಯದ ಬರಡು ಇಳಿಜಾರು ನೆಲವನ್ನು ಪುನಃ ಹಸಿರಾಗಿಸುವ ಶಾಂತ ಚಳುವಳಿಯನ್ನು ಆರಂಭಿಸಿದ್ದಾರೆ. ತೆಹ್ರಿಘರವಾಲ್ ಜಿಲ್ಲೆಯ ಕಾಂಗಡ ಹಳ್ಳಿಯ ಮಹಿಳಾ ಮಂಡಲದವರು 60 ಎಕ್ರೆ ಜಾಗದಲ್ಲಿ ಪುನಃ

ಅರಣ್ಯ ಬೆಳೆಸಿದ್ದಾರೆ. ಈ ಅರಣ್ಯವನ್ನು ಕಾಯಲು ಅವರು ಕಾವಲುಗಾರರನ್ನು ನೇಮಿಸಿಕೊಂಡಿದ್ದು ಪ್ರತಿ ಮನೆಯವರೂ ವಂತಿಗೆ ಕೊಟ್ಟು ಅವನಿಗೆ ಸಂಬಳ ಕೊಡುತ್ತಿದ್ದಾರೆ. ಅರಣ್ಯದ ಸಂಪನ್ಮೂಲದ ಬಳಕೆಗೆ ಅವರು ತಮ್ಮದೆ ಆದ ನಿಯಮಾವಳಿ ರೂಪಿಸಿಕೊಂಡಿದ್ದಾರೆ. 9 ವರ್ಷಗಳ ಅವಧಿಯಲ್ಲಿ ಬರಡು ಇಳಿಜಾರು ನೆಲವನ್ನು ಹಸಿರಾಗಿಸುವಲ್ಲಿ ಈ ಹೆಣ್ಣುಮಕ್ಕಳು ಯಶಸ್ವಿಯಾಗಿದ್ದಾರೆ.

ಹಿಮಾಲಯದ ಘರವಾಲ ಭಾಗದಲ್ಲಿ ನಾವು ಹಳ್ಳಿಗಳ ಸುತ್ತಮುತ್ತ ಅಸಂಖ್ಯ ಹಸಿರು ಅಡವಿಯ ತುಂಡುಗಳನ್ನು ಕಾಣಬಹುದು. ಪರಿಸರದ ಕುರಿತು ಹೆಣ್ಣುಮಕ್ಕಳ ಕಾಳಜಿಯೇ ಇದಕ್ಕೆ ಕಾರಣವೆಂದು ನಿಶ್ಚಿತವಾಗಿ ಹೇಳಬಹುದು. ಅರಣ್ಯ ಬೆಳೆಸುವ ಕುರಿತು ಅವರ ಕಲ್ಪನೆ ಮತ್ತು ಅರಣ್ಯಗಳ ಉಸ್ತುವಾರಿಯನ್ನು ಹಳ್ಳಿಗರೇ ನೋಡಿಕೊಳ್ಳುವುದು, ಇವು ಪರಿಣಾಮಕಾರಿಯಾಗಿವೆ. ಪರಿಸರ ಪ್ರಜ್ಞೆಯನ್ನು ಹುಟ್ಟಿಸಲು ಅಲ್ಲಿ ಹೊರಗಿನವರ ಅವಶ್ಯಕತೆಯಿಲ್ಲ. ಈ ಬಗ್ಗೆ ಅವರು ಸರಕಾರದಿಂದಾಗಲೀ, ಜಾಗತಿಕ ಬ್ಯಾಂಕಿನಿಂದಾಗಲಿ, ಯಾವುದೇ ಆರ್ಥಿಕ ನೆರವನ್ನೂ ಸಹ ಬಯಸುವುದಿಲ್ಲ.

ಚಿಪ್ಕೋ ಸಂದೇಶ ವಲಸೆ ಹೋಗುವ ಹಕ್ಕಿಯಂತೆ ಉತ್ತರದ ಹಿಮಾಲಯದಿಂದ ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳಿಗೆ ಹಾರಿದೆ. ಕರ್ನಾಟಕದ ಜನ ಪಶ್ಚಿಮ ಘಟ್ಟಗಳ ಉಷ್ಣವಲಯದ ಕಾಡುಗಳನ್ನು ರಕ್ಷಿಸಲು ಅಪ್ಪಿಕೋ ಅಂದೋಲನದಲ್ಲಿ ತೊಡಗಿದ್ದಾರೆ. ಕಾವೇರಿ ನದಿಗೆ ಜಲ ಒದಗಿಸುವ ಅಡವಿಗಳಿರುವ ಕಾಫಿಯ ಜಿಲ್ಲೆಯಾದ ಕೊಡಗಿನಲ್ಲಿ ಜನ ಮೃದು ಮರಗಳನ್ನು ಸೀಳುವ ಕಾರಖಾನೆಗಳಿಗಾಗಿ ಮರ ಕಡಿಯುವ ಜನರಿಂದ ಸದಾ ಹಸಿರು ಅರಣ್ಯಗಳನ್ನು ಉಳಿಸಲು ಹೋರಾಡುತ್ತಿದ್ದಾರೆ.

ರಾಜಸ್ಥಾನ ಮರುಭೂಮಿಯ ಬಿಕಾನೇರದ ಹತ್ತಿರದ ಭೀನಾಸರ ಎಂಬಲ್ಲಿ ಜನರು ಸಾರ್ವಜನಿಕ ಹುಲ್ಲುಗಾವಲಲ್ಲಿ ನೀಲಗಿರಿ ಗಿಡಗಳನ್ನು ನೆಡುವದನ್ನು ಪ್ರತಿಭಟಿಸಲು ಚಳವಳಿ ಹೂಡಿದ್ದಾರೆ. ಈ ಜಾಗದಲ್ಲಿ ಸ್ಥಳೀಯ ಜಾತಿಯ ಸಸ್ಯಗಳನ್ನು ಬೆಳೆಸುವ ಬಗ್ಗೆ ಜನ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ದೇಶದ ತುಂಬೆಲ್ಲ ನಡೆಯುತ್ತಿರುವ ಈ ಎಲ್ಲ ಚಳವಳಿಗಳು ಜನರ ಬದುಕಿನ ಸಂಪನ್ಮೂಲವನ್ನು ರಕ್ಷಿಸುವ ಉದ್ದೇಶದಿಂದ ಕೂಡಿವೆ. ಇನ್ನೂ ವ್ಯಾಪಕವಾದ ಉದ್ದೇಶಗಳನ್ನು ಹೊಂದಿರುವ ಇದೇ ರೀತಿಯ ಚಳವಳಿಗಳೂ ನಡೆಯುತ್ತಿವೆ. ಕೈಗಾದಲ್ಲಿ ಸ್ಥಾಪಿಸಲ್ಪಡುವ ಅಣುಸ್ಥಾವರದ ವಿರುದ್ಧ ಕರ್ನಾಟಕದ ಜನತೆ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ಕೇರಳದ ಮೀನುಗಾರರು ಯಂತ್ರಗಳ ಮೂಲಕ ಆಳದಲ್ಲಿರುವ ಮೀನುಗಳನ್ನು ಹಿಡಿಯುವ ವಿರುದ್ಧ ಕೂಗೆಬ್ಬಿಸಿದ್ದಾರೆ. ಒರಿಸ್ಸಾದ ಬಾಲಸೂರಿನಲ್ಲಿ ಜನರು ರಕ್ಷಣಾ ನೆಲೆ ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ದೇಶದ ಎಲ್ಲಾ ಭಾಗಗಳಲ್ಲಿ ಜನರು ತಮಗೆ ಸಂಬಂಧಿಸಿದ ವಿಷಯಗಳ ಸಮಸ್ಯೆಗಳ ನಿವಾರಣೆಗಾಗಿ ಚಳವಳಿ ನಡೆಸುತ್ತಿದ್ದಾರೆ. ಆದರೆ ಬೇರೆ ಬೇರೆ ಭಾಗಗಳಲ್ಲಿ ಚಳವಳಿ ನಡೆಸುತ್ತಿರುವ ಈ ಜನ ತಮ್ಮ ಉದ್ದೇಶವನ್ನು ಸಾಧಿಸಿಯಾರೆ ? ಎಂಬುದು ಪ್ರಶ್ನೆ.

ಈ ಚಳುವಳಿಗಳನ್ನು ಹತ್ತಿರದಿಂದ ಗಮನಿಸಿದಾಗ ಇವೆಲ್ಲ ಕೆಲವು ಸಾಮಾನ್ಯ ಗುಣಧರ್ಮಗಳನ್ನು ಹೊಂದಿರುವುದು ಕುತೂಹಲ ಹುಟ್ಟಿಸುತ್ತದೆ. ಈ ಎಲ್ಲ ಚಳವಳಿಗಳು ಸ್ವಯಂಪ್ರೇರಿತ ಚಳುವಳಿಗಳು. ಮತ್ತು ಅಡವಿನಾಶದ ಪರಿಣಾಮದಿಂದ ಗಣಿಯೋಜನೆಯಿಂದ ನೀಲಗಿರಿ ಅರಣ್ಯಗಳ ಪರಿಣಾಮದಿಂದ ನೊಂದ ಜನರಿಂದಲೇ ಈ ಚಳುವಳಿಗಳು ನಡೆಯುತ್ತಿವೆ. ಪರಿಸ್ಥಿತಿ ಅಸಹನೀಯವಾದಾಗ ಜನ ನೇರವಾಗಿ ಕ್ರಿಯೆಗೆ ಇಳಿದಿದ್ದಾರೆ. ಸಾರಾಸಾರಾ ವಿಚಾರ ಮಾಡದೆ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಾಗ ಸಂಘರ್ಷ ಹುಟ್ಟುತ್ತದೆ. ಬಡಜನರ ಬದುಕಿನ ಸಂಪನ್ಮೂಲಗಳನ್ನು ಕಿತ್ತುಕೊಂಡು ನಡೆಯುವ ಈ ಅಭಿವೃದ್ಧಿ ಯೋಜನೆಗಳು ಜನಸಾಮಾನ್ಯರ ಜೀವ ಹಿಂಡುವ ಬಂದಳಿಕೆಗಳಾಗಿವೆ. ಈ ಯೋಜನೆಗಳು ಅನ್ನವನ್ನು ಕಸಿದುಕೊಂಡು ಅವರನ್ನು ಪಟ್ಟಣಕ್ಕೆ ಓಡಿಸಿ ಕೊಳಚೆ ನಿವಾಸಿಗಳನ್ನಾಗಿ ಮಾಡುತ್ತವೆ. ಇವೆಲ್ಲವನ್ನೂ ರಾಷ್ಟ್ರೀಯ ಹಿತಾಸಕ್ತಿಯ ಹೆಸರಿನಲ್ಲೆ ಮಾಡಲಾಗುತ್ತಿದೆ. ಈ ಯೋಜನೆಗಳ ಲಾಭವೆಲ್ಲ ದಕ್ಕುವುದು ತಮ್ಮದಲ್ಲದ ಪಾಶ್ಚಾತ್ಯ ಶೈಲಿಯ ಜೀವನವನ್ನು ನಡೆಸುವ ಜನರಿಗೆ. ಈ ರೀತಿ ಪಾಶ್ಚಾತ್ಯ ಅಭಿವೃದ್ಧಿ ಮಾದರಿಯ ಯೋಜನಾಕ್ರಮವೇ ನಮ್ಮ ಸಾಮಾನ್ಯ ಜನತೆಯ ಜೀವನ ಸಂಪನ್ಮೂಲಗಳನ್ನು ಸಂಹಾರ ಮಾಡುತ್ತದೆ.

ಈ ಚಳವಳಿಗಳನ್ನು ನಡೆಸುತ್ತಿರುವ ಜನ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ. ಕೆಲವೊಮ್ಮೆ ಕೆಲವು ರಾಜಕೀಯ ಪಕ್ಷಗಳು ಇಂಥ ಚಳವಳಿಗಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸುವ ಪ್ರಯತ್ನ ಮಾಡಿದ್ದುಂಟು. ಆದರೆ ಜನರಿಗೆ ಈ ರಾಜಕೀಯದ ಮಂದಿಯ ದುರುದ್ದೇಶ ಬೇಗನೆ ಅರ್ಥವಾಯಿತು. ಚಳವಳಿಗಾರರು ಅಂಥವರನ್ನು ದೂರವಿಟ್ಟರು. ಆದರೆ ಈ ಚಳವಳಿಗಳು ರಾಜಕೀಯಕ್ಕೆ ವಿರುದ್ಧವಾದದ್ದೆಂದು ಇದರ ಅರ್ಥವಲ್ಲ. ನಿಜವಾದ ಅರ್ಥದಲ್ಲಿ ಈ ಚಳವಳಿಗಳು ಸೂಕ್ಷ್ಮ ಸ್ತರದಲ್ಲಿ ಸತತವಾಗಿ ಬೆಳೆಯುತ್ತಿರುವ ರಾಜಕೀಯ ಬೆಳವಣಿಗೆಯೇ ಆಗಿದೆ. ಆದರೆ ಇದು ಪಕ್ಷಾತೀತ ರಾಜಕೀಯ. ಜನರ ಜೀವನದಲ್ಲಿ ಆಳವಾಗಿ ಬೇರುಬಿಟ್ಟ ರಾಜಕೀಯ. ಇಂಥ ಕ್ರಮಾನುಗತಿಯ ಮೇಲೆ ಶ್ರೀಸಾಮಾನ್ಯರಿಗೆ ಪೂರ್ಣ ವಿಶ್ವಾಸವಿದೆ.

ಇಂಥ ಚಳುವಳಿಗಳ ಸಂದೇಶವನ್ನು ಜನರಿಗೆ ತಲುಪಿಸುವ ಮಾಧ್ಯಮದ ರೀತಿ ಸಹ ಕುತೂಹಲ ಹುಟ್ಟಿಸುವಂಥಾದ್ದು. ಸಾಕ್ಷರತೆ ಅತ್ಯಂತ ಕಡಿಮೆ ಪ್ರಮಾಣದಲ್ಲಿರುವ ಪ್ರದೇಶಗಳಲ್ಲಿಯೇ ಈ ಚಳುವಳಿಗಳು ಹೆಚ್ಚಾಗಿ ನಡೆದಿರುವುದು. ಹಾಗಾಗಿ ಬರವಣಿಗೆಯ ಮೂಲಕ ಸಂದೇಶ ತಲುಪಿಸುವುದು ಪರಿಣಾಮಕಾರಿಯಾಗಲಾರದು. ಜಾನಪದ ನೃತ್ಯ, ಜಾನಪದ ನಾಟಕಗಳಂಥ ಹಳ್ಳಿಗಾಡಿನ ರೀತಿಯಲ್ಲಿಯೇ ವಿಚಾರಗಳನ್ನು ಪ್ರಚುರಪಡಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಯಕ್ಷಗಾನ–ಬಯಲಾಟಗಳಂಥ ಮಾಧ್ಯಮಗಳ ಮೂಲಕ ಸಂದೇಶ ಜನತೆಗೆ ತಲುಪುತ್ತದೆ. ಹಳ್ಳಿಗಳಲ್ಲಿ ಹೆಚ್ಚಾಗಿ ಸಂಬಂಧಿಗಳು ಮತ್ತು ಮಿತ್ರರ ಮೂಲಕ ಸಹಜವಾಗಿ ಈ ಚಳುವಳಿಗಳ ಸಂದೇಶ ಜನರಿಗೆ ಮುಟ್ಟಿಸಲಾಗುತ್ತದೆ.

ಈ ಚಳುವಳಿಗಳ ಜನ ನಿಧಿ ಸಂಗ್ರಹಣೆಯಲ್ಲೂ ತಮ್ಮದೇ ಆದ ರೀತಿ ಅನುಸರಿಸುತ್ತಾರೆ. ಈ ಚಳುವಳಿ ಘೋಷಿಸಲ್ಪಡುವುದು ಜನರಿಂದಲೇ. ನಿಧಿ ಸಂಗ್ರಹಿಸುವ ರೀತಿ ಬೇರೆ ಬೇರೆಯಾಗಬಹುದು. ಚಿಪ್ಕೋ, ಅಪ್ಪಿಕೋ ಮತ್ತು ಗಂಧಮರ್ದನ ಚಳುವಳಿಗಳಲ್ಲಿ ದಿನಾಲೂ ಪ್ರತಿ

ಕುಟುಂಬವೂ ಒಂದು ಮುಷ್ಟಿ ಧಾನ್ಯವನ್ನು ಚಳುವಳಿಯ ನಿಧಿಗಾಗಿ ಬದಿಗಿರಿಸುತ್ತದೆ. ಘರವಾಲದಲ್ಲಿ ಹೆಂಗಸರು ಪ್ರತಿಯೊಬ್ಬರೂ ವಂತಿಗೆ ಹಾಕಿ ಬರಡು ಭೂಮಿಯನ್ನು ಹಸಿರಾಗಿಸಿದ್ದಾರೆ. ಜಾಗತಿಕ ಬ್ಯಾಂಕಾಗಲೀ, ಬರಡು ಭೂಮಿ ಅಭಿವೃದ್ಧಿ ಯೋಜನೆಯಾಗಲಿ ಅವರ ಸಹಾಯಕ್ಕೆ ಬರಲಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಈ ಆಂದೋಲನ ಸ್ವಂತ ಜನಸಮುದಾಯದಿಂದಲೇ ಪೋಷಿಸಲ್ಪಟ್ಟಿವೆ. ಇಲ್ಲಿ ಈ ಸಮುದಾಯದ ಚಳುವಳಿಗೂ, ಹೊರಗಿನವರ ಆರ್ಥಿಕ ನೆರವಿನಿಂದ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳಿಗೂ ಇರುವ ಅಂತರವನ್ನು ಗಮನಿಸಬೇಕು.

ಈ ಜನಸಾಮಾನ್ಯರ ಚಳುವಳಿಯಲ್ಲಿ ಎದ್ದು ಕಾಣುವ ಅಂಶವೆಂದರೆ ಇವೆಲ್ಲ ಹುಟ್ಟಿದ್ದು ಹಳ್ಳಿಗಳಲ್ಲಿ. ಅದೂ ಸಮುದಾಯದ ಭಾವನೆ ಗಟ್ಟಿಗಿರುವ ಹಳ್ಳಿಗಳಲ್ಲಿ. ಹೆಚ್ಚಿನ ಚಳುವಳಿಗಳು ಆರಂಭವಾಗಿದ್ದು ಹಿಂದುಳಿದ ಹಳ್ಳಿಗಳಲ್ಲಿ. ಹಾಗೆಯೇ ಈ ಚಳುವಳಿಗಳನ್ನು ಹಳ್ಳಿ ಮತ್ತು ಪಟ್ಟಣಗಳ ನಡುವಿನ ಸಂಘರ್ಷವೆಂದು ವಿಶ್ಲೇಷಿಸಲಾಗದು. ಆರಂಭದ ಹಂತಗಳಲ್ಲಿ ಈ ಚಳುವಳಿಗಾರರು ತಮ್ಮ ಸುತ್ತ ಮುತ್ತಲಿನ ಜನರಿಂದಲೇ ವಿರೋಧ ಬಂದಿದ್ದನ್ನು ಅನುಭವಿಸಿದ್ದುಂಟು. ಈ ಚಳುವಳಿಯನ್ನು ವಿರೋಧಿಸುವವರೆಂದರೆ ಅಭಿವೃದ್ಧಿಯ ಪರವಾಗಿ ಮಾತನಾಡುವವರು. ಅಭಿವೃದ್ಧಿ ಯೋಜನೆಗಳಿಂದ ಲಾಭ ಗಿಟ್ಟಿಸುವ ಹಂಬಲದಿಂದ ಇವರು ಯಾವಾಗಲೂ ವ್ಯವಸ್ಥೆಯ ಪರವಾಗಿ ವಾದಿಸುವವರು.

ಇಂಥ ಜನಪರ ಚಳುವಳಿಗಳನ್ನು ಪಟ್ಟಣ ಪ್ರದೇಶಗಳಲ್ಲಿ ನಡೆಸುವುದು ಕಷ್ಟ. ಕಳೆದ 40 ವರ್ಷಗಳಿಂದ ಪಟ್ಟಣಿಗರ ಮೇಲೆ ಹೇರಲ್ಪಟ್ಟ ಅಭಿವೃದ್ಧಿ ಸೌಕರ್ಯಗಳ ದೆಸೆಯಿಂದ ಅವರೇ ಬಾಯಿಲ್ಲದವರೂ, ಏಕಾಕಿಗಳೂ ಆಗಿದ್ದಾರೆ. ಪಟ್ಟಣ ಕೇಂದ್ರಗಳಲ್ಲಿ ವಾಸಿಸುವದೆಂದರೆ ತಮ್ಮ ವೈಯಕ್ತಿಕ ಭೋಗೋಪಭೋಗಗಳಲ್ಲಿ ಮೈಮರೆಯುತ್ತ ಯಾರಿಗೂ ಕಾಣದ ಕ್ರಿಮಿಯಂತಿರುವುದು. ಪಟ್ಟಣದ ನಾಗರಿಕ ತನ್ನ ಸಾಕ್ಷಿಪ್ರಜ್ಞೆಯನ್ನು ಕಳೆದುಕೊಂಡಿರುತ್ತಾನೆ. ಯಾವುದೇ ಅನ್ಯಾಯಕ್ಕೆ ಪ್ರತಿಕ್ರಿಯಿಸಲಾರದವನಾಗಿರುತ್ತಾನೆ. ಯಾವುದೇ ತನ್ನ ಸಂಕುಚಿತ ಸ್ವಾರ್ಥ ಜೀವನದ ಬಂದಿಯಾಗಿ, ತನಗೂ ಸಮಾಜಕ್ಕೂ ಸಂಬಂಧವೇ ಇಲ್ಲವೆಂಬಂತೆ ಇರುತ್ತಾನೆ. ಯಾವುದೇ ಹೋರಾಟಕ್ಕೆ ಅಣಿಯಾಗುವ ಸಾಮರ್ಥ್ಯವನ್ನೇ ಕಳೆದುಕೊಂಡಿರುತ್ತಾನೆ. ಎಲ್ಲಿ ಈ ಚಳುವಳಿಗಳು ನಡೆದಿವೆಯೋ ಅಲ್ಲಿ ಇನ್ನೂ ಜನರು "ಅಭಿವೃದ್ಧಿ" ಎಂಬುದರ ದಾಸರಾಗಿಲ್ಲ. ಅವರಿನ್ನೂ ಜೀವಂತ ಜನಾಂಗವಾಗಿದ್ದಾರೆ. ಯಾವುದೇ ಅನ್ಯಾಯ ಕಂಡಲ್ಲಿ ಅವರಿಗೆ ಸಹಜವಾಗಿಯೇ ಸಿಡಿದೇಳುವ ಪ್ರಜ್ಞೆಯಿದೆ. ತಮ್ಮ ಬದುಕಿನ ಸಂಪನ್ಮೂಲವನ್ನು ಸಂಹಾರ ಮಾಡುವಂಥ ಸನ್ನಿವೇಶವನ್ನು ಕಂಡಾಗ ಅವರು ವಿರೋಧಿಸಿ ನಿಲ್ಲುತ್ತಾರೆ.

ಸರಕಾರದ ಅಭಿವೃದ್ಧಿ ಯೋಜನೆಗಳೆಲ್ಲ ಜನರ ಜೀವನಾಧಾರವಾದ ಅರಣ್ಯ ಮುಂತಾದವುಗಳನ್ನು ನಾಶ ಮಾಡುತ್ತವೆ. ಅಲ್ಲದೆ "ಆದಿವಾಸಿ ಅಭಿವೃದ್ಧಿ" ''ಸಮಗ್ರ ಗ್ರಾಮೀಣ ಅಭಿವೃದ್ಧಿ"ಇತ್ಯಾದಿ ವೇಷಗಳನ್ನು ಹಾಕಿಕೊಂಡು ಹಣ ಸೂರೆಗೊಳ್ಳುವ ಮಾರ್ಗಗಳಾಗಿವೆ. ಇದೊಂದು ವ್ಯಂಗ್ಯವೇ ಸರಿ. ಬಡವರಿಗೆ ಸಹಾಯ ಮಾಡುವ ಈ ಯೋಜನೆಗಳು ಯಾವುದೋ ಒಬ್ಬನ ವೈಯಕ್ತಿಕ ಖಯಾಲೆಯಿಂದ ಹುಟ್ಟಿದ್ದು. ಇದು ಬೇಡುವವನಿಗೆ ಒಂದುಚೂರು ರೊಟ್ಟಿ ಒಗೆದಂತೆ. ಮತ್ತು ಕಾಯ್ದರೆ ಮತ್ತೊಬ್ಬನಿಗೂ ಮತ್ತೊಂದು ಚೂರು ಸಿಗುತ್ತದೆ ಎಂದು ನಂಬಿಸುತ್ತ ಅವ

ನನ್ನು ನೌಲಲ್ಲಿ ಕಾಯಲು ಹೆಚ್ಚಿದಂತೆ. ಮತ್ತೊಬ್ಬ ತನ್ನ ನೆರದಿಗಾಗಿ ಕಾಯುತ್ತಿರುವಂತೆ ಸರಕಾರ ಮತ್ತಷ್ಟು ಜೀವನದ ಮೂಲಾಧಾರಗಳನ್ನು ನಾಶ ಮಾಡುತ್ತದೆ. ಸರಕಾರವು ಅಭಿವೃದ್ಧಿಯ ಹೆಸರಿನಲ್ಲಿ ಇಂಥ ಸಂಹಾರಕ ನೀತಿಗಳನ್ನು ನಿಲ್ಲಿಸಬೇಕೆಂಬುದನ್ನು ಈ ಚಳುವಳಿಗಳು ಸೂಚಿಸುತ್ತವೆ.

ಸ್ವಾತಂತ್ರ್ಯಾನಂತರದ ಅಭಿವೃದ್ಧಿ ಯೋಜನೆಗಳೆಲ್ಲ ಬಡಜನರ ಜೀವನಾಧಾರಗಳನ್ನೇ ಕಡಿದು ಹಾಕಿವೆ. ದೊಡ್ಡ ದೊಡ್ಡ ಆಣೆಕಟ್ಟುಗಳು ಮತ್ತು ಇಂಥವೇ ಕೇಂದ್ರೀಕೃತ ಯೋಜನೆಗಳಿಂದ ಒಂದಷ್ಟು ಅಭಿವೃದ್ಧಿ ದಲಾಲಿಗಳನ್ನು ಹುಟ್ಟು ಹಾಕಲಾಗಿದೆ. ರಾಜಕಾರಣಿಗಳು, ಅಧಿಕಾರಿ ವರ್ಗದವರು ಮತ್ತು ಹೊಸ ಶ್ರೀಮಂತ ವರ್ಗದವರು ಮತ್ತು ಹೊಸ ದಲಾಲಿಗಳು ಸೇರಿದ್ದಾರೆ. ಅತಿ ದೊಡ್ಡ ಪ್ರಮಾಣದ ಸಾರ್ವಜನಿಕ ಹಣವನ್ನು ಇವರು ಸೆಳೆದುಕೊಂಡಿದ್ದಾರೆ. ಇದೊಂದು ಕಳೆದ ನಲ್ವತ್ತು ವರ್ಷಗಳಿಂದ ನಡೆಯುತ್ತ ಬಂದಿರುವ ಪರಿಪಾಠವಾಗಿದೆ. ಈ ಪ್ರವೃತ್ತಿಯನ್ನು ವನ್ನು ಎದುರಿಸಿ ನಿಲ್ಲುವಲ್ಲಿ ಮತ್ತು ಬಯಲಿಗೆಳೆಯುವಲ್ಲಿ ಜನಸಾಮಾನ್ಯರ ಚಳುವಳಿ ಒಂದು ಪ್ರಾರಂಭದ ಹಂತವಾಗಿದೆ.

ಇತ್ತೀಚಿನ ದಿನಗಳಲ್ಲಿ ನಾವು ಜನರ ಚಳುವಳಿಗಳ ಬಗ್ಗೆ ಸಾಕಷ್ಟು ಕೇಳುತ್ತಿದ್ದೇವೆ. ಪ್ರಧಾನ ಮಂತ್ರಿಯಿಂದ ಹಿಡಿದು ಒಬ್ಬ ಸಾಮಾನ್ಯ ಅಧಿಕಾರಿಯವರೆಗೆ, ಪರಿಸರವನ್ನು ಕಾಪಾಡುವ ಬಗೆ ಮತ್ತು ನದಿಗಳನ್ನು ಶುದ್ಧವಾಗಿಡಲು ಜನರು ಚಳುವಳಿ ಏಳಬೇಕೆಂದು ಕರೆ ಕೊಡುವುದನ್ನು ಕಾಣುತ್ತೇವೆ, ಕೇಳುತ್ತೇವೆ. ಆದರೆ ವಾಸ್ತವವಾಗಿ ಇಂಥ ಜನಸಾಮಾನ್ಯರ ಚಳುವಳಿಗಳನ್ನು ಸರಕಾರ ಹತ್ತಿಕ್ಕುತ್ತದೆ. ಉದಾಹರಣೆಗಾಗಿ, ಗಂಧಮರ್ದನದ ಜನರ ಹೋರಾಟದಲ್ಲಿ ಸರಕಾರ ಸ್ತ್ರೀ-ಪುರುಷ ಚಳುವಳಿಗಾರರನ್ನು ಸೆರೆ ಹಿಡಿಯಿತು. ಹಾಗೆಯೇ ನರ್ಮದಾ ನದಿಗೆ ಆಣೆಕಟ್ಟು ಕಟ್ಟುವುದನ್ನು ವಿರೋಧಿಸುವ ಚಳುವಳಿಯನ್ನೂ ಅಲಕ್ಷಿಸಲಾಯಿತು. ತಮ್ಮ ನಿಜವಾದ ವಿರೋಧಿಗಳು ವಿರೋಧಪಕ್ಷದ ಜನರಲ್ಲ, ಈ ಜನಸಾಮಾನ್ಯರ ಚಳುವಳಿಗಳು ಎಂಬುದು ಆಳುವ ವರ್ಗದ ಪ್ರತಿಷ್ಠಿತರಿಗೆ ಚೆನ್ನಾಗಿ ಗೊತ್ತು. ಅದಕ್ಕಾಗಿ ಇಂಥ ಚಳುವಳಿಗಳನ್ನು ಹತ್ತಿಕ್ಕಲು ಇವರು ಹೊಸ ಮಾರ್ಗವನ್ನು ಕಂಡುಕೊಂಡಿದ್ದಾರೆ. ಸರಕಾರದ ದಲ್ಲಾಳಿಗಳಾದ 'ಪರಿಸರ ಇಲಾಖೆ' 'ರಾಷ್ಟ್ರೀಯ ಪಾಳುಭೂಮಿ ಅಭಿವೃದ್ಧಿ ನಿಗಮ' ಇವೆಲ್ಲ ಸರಕಾರೇತರ ಸಂಸ್ಥೆಗಳಿಗೆ ಹಣ ಸುರಿಯುತ್ತ ಜನರ ಕಣ್ಣು ಕಟ್ಟುವ ಕೆಲಸ ಮಾಡುತ್ತಿವೆ.

ಈಗ ಸದ್ಯದ ಅವಶ್ಯಕತೆಯೆಂದರೆ 'ಅಭಿವೃದ್ಧಿ' ಎಂಬುದನ್ನು ತಾಜಾ ದೃಷ್ಟಿಯಿಂದ ನೋಡುವುದು. ಇಲ್ಲಿಯವರೆಗೆ ಆರ್ಥಿಕ ಅಭಿವೃದ್ಧಿ ಮತ್ತು 'ರಾಷ್ಟ್ರೀಯ ಉತ್ಪನ್ನದ ಹೆಚ್ಚಳ' ಇವುಗಳಿಗೆ ಒತ್ತು ಕೊಟ್ಟು ದೀನ-ದಲಿತರ ಜೀವನವನ್ನು ನಾಶ ಮಾಡಲಾಗಿದೆ. ಇನ್ನೂ ನಾವು ಇದೇ ಅಭಿವೃದ್ಧಿ ತಂತ್ರವನ್ನೇ ಮುಂದುವರಿಸಿದಲ್ಲಿ ದೇಶದ ಬಡತನವನ್ನು ಮತ್ತಷ್ಟು ಹೆಚ್ಚಿಸುತ್ತ ಸಂಘರ್ಷದ ಸ್ಥಿತಿಯನ್ನು ತಲುಪುವುದು ನಿಶ್ಚಿತ. ಬದುಕಿಗಾಗಿ ನಡೆದ ಈ ಜನ ಸಾಮಾನ್ಯರ ಚಳುವಳಿಗಳು ತಪ್ಪುದಾರಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಯೋಜನೆಗಳ ಸೋಲನ್ನು ತೋರಿಸುತ್ತವೆ. ಈ ಮಣ್ಣಿನ ಮಕ್ಕಳ ಹೋರಾಟದಿಂದ ಪಾಠ ಕಲಿತುಕೊಳ್ಳುವ ಪ್ರಾಮಾಣಿಕತೆ ನಮ್ಮಲ್ಲಿ ಉದಯಿಸಬಹುದೇ ? ●

ಬದುಕಿನ ನವೀಕರಣದ ದಾರ್ಶನಿಕ ಹೆನ್ರಿ ಡೇವಿಡ್ ಥೋರೋ

ಡಾ॥ ಬಿ.ನ್. ಸುಮಿತ್ರಾಬಾಯಿ

"ಜನರಿಗೆ ನನ್ನ ಬದುಕಿನ ಸಿರಿಯನ್ನು ಸಂವಹಿಸಲು ಬಯಸುತ್ತೇನೆ, ನನ್ನ ಕಾಣಿಕೆಯಲ್ಲಿ ಅತಿ ಅಮೂಲ್ಯವಾದ್ದನ್ನು ನಿಜವಾಗಿ ಅವರಿಗೆ ನೀಡುವೆ. ಅವರಿಗಾಗಿ ಚಿಪ್ಪುಮೀನುಗಳೊಡನೆ ಮುತ್ತನ್ನು ಪ್ರವಿಸುವೆ. ಅವರಿಗಾಗಿಯೇ ಜೇನುಹುಳಗಳ ಜೊತೆಗೂಡಿ ಜೇನುಕೂಡಿಸುವೆ. ಜನರ ಒಳಿತಿಗಾಗಿ ಸೂರ್ಯನ ಕಿರಣಗಳ ಸೋಸಿ ತರುವೆ....ನಾನು ಯಾವುದನ್ನು ಮತ್ತೊಮ್ಮೆ ಆನಂದದಿಂದ ಬದುಕ ಬಲ್ಲೆನೋ ಅಂಥ ಬದುಕಿನ ಭಾಗವನ್ನು ನಾನು ಜನರಿಗೆ ತಲುಪಿಸಲು ಇಚ್ಛಿಸುತ್ತೇನೆ"

ಬದುಕಿನಲ್ಲಿ ಏನು ಮಾಡಬಯಸುತ್ತೀ ಎಂಬ ಪ್ರಶ್ನೆಗೆ ಇಪ್ಪತ್ತೈದೂ ದಾಟಿರದ ತರುಣ ಥೋರೋ ಬರೆದಿದ್ದ ಉತ್ತರವಿದು. ತಾರುಣ್ಯದ ಹುಮ್ಮಸ, ಉದ್ವೇಗದಲ್ಲು ಈ ಉತ್ಕಟತೆಯ ಮಾತಿರಲಿ, ಭಾವನೆಯೇ ಬತ್ತಿಹೋಗಿರುವ ಇಂದಿನ ಯುವಜನತೆಗೆ ಇದು ಭಾವಾವೇಶವಾಗಿ ಕಾಣಲು ಸಾಧ್ಯ. ಆದರೆ ನೂರೈವತ್ತು ವರ್ಷಗಳ ಹಿಂದೆ ಈ ಮಾತು ಬರೆದಾತ ತಾನು ಬದುಕಿದ್ದು ಕೇವಲ ನಲವತ್ತೈದು ವರ್ಷಗಳನ್ನು (1817-1862) ಪೂರ್ಣವಾಗಿ ಆತನ ಕನಸಿನ ಸಾಕ್ಷಾತ್ಕಾರದ ಪ್ರಯೋಗದಲ್ಲಿ ವ್ಯಯಿಸಿದ್ದ. ಬದುಕಿನ ಪ್ರತಿಕ್ಷಣವನ್ನು ಉತ್ಕಟವಾಗಿ ಬದುಕುವುದು, ಆ ಅನುಭವವನ್ನು ಜನರಿಗೆ ಬರಹದ ಮೂಲಕ ತಲುಪಿಸುವುದು ಅವನ ಗುರಿಯಾಗಿತ್ತು. ಅವನ ಜೀವನ-ಶೋಧನಾಕ್ರಮ ವಿಲಕ್ಷಣವೂ, ಅಪ್ಪಟ ಪ್ರಾಮಾಣಿಕತೆಯುಳ್ಳದ್ದೂ ಆಗಿತ್ತು. ಆದ್ದರಿಂದಲೇ ಆ ಬದುಕಿನ ದಾಖಲೆಯ ರೂಪದಲ್ಲಿ ಆತ ರಚಿಸಿರುವ ಕೃತಿಗಳು ಇಂದಿಗೂ ಸಾಹಿತ್ಯಾಸಕ್ತರಿಗೆ, ಅಲೌಕಿಕದಲ್ಲಿ ಆಸ್ಥೆಯುಳ್ಳವರಿಗೆ-ಕುತೂಹಲಕಾರಿಯಾಗಿವೆ.

ಅಮೆರಿಕಾದ ನ್ಯೂ ಇಂಗ್ಲೆಂಡ್‌ನ ಒಂದು ಪ್ರಾಂತವಾದ ಮೆಸಾಚುಸೆಟ್ಸ್‌ನ ಒಂದು ಕಿರು ಪಟ್ಟಣ ಕಾನ್‌ಕರ್ಡ್ ಥೋರೋನ ಹುಟ್ಟೂರು. ತಂದೆ ಜಾನ್‌ಥೋರೋ ತಾಯಿ ಸಿಂಥಿಯಾ ಡನ್‌ಬಾರ್-ಇವರ ನಾಲ್ವರು ಮಕ್ಕಳಲ್ಲಿ ಮೂರನೆಯವನು ಹೆನ್ರಿ ಥೋರೊ. ತಾಯಿಯ ಮೂಲಕ ವಾಗಿ ಶಾರೀರಕ ಮಾನಸಿಕ ಚೈತನ್ಯಶೀಲತೆ, ಸಾಹಸಪ್ರವೃತ್ತಿಗಳನ್ನು, ಎದುರಾಳಿಗಳನ್ನು ಬಲವಾಗಿ

ವಿರೋಧಿಸಬಲ್ಲ ಕ್ಷಾತ್ರಸ್ವಭಾವವನ್ನೂ, ಕಾಡುಮೇಡುಗಳಲ್ಲಿ ಪರಮಾನಂದ ಕಾಣಬಲ್ಲ ಮನೋಧರ್ಮವನ್ನೂ, ತಂದೆಯಿಂದ ಏಕಾಂತಶೀಲತೆ, ಧ್ಯಾನಪರತೆಯನ್ನೂ ಥೋರೋ ಪಡೆದಿದ್ದ.

ಬಾಲ್ಯದ ವಿದ್ಯಾಭ್ಯಾಸ ಬೋಸ್ಟನ್‌ನ ಶಾಲೆಯಲ್ಲಿ, ನಂತರ ಕಾನ್‌ಕರ್ಡ್‌ನ ವಿದ್ಯಾಪೀಠವೊಂದರಲ್ಲಿ ನಡೆಯಿತು ಆ ಅವಧಿಯಲ್ಲಿ ಪ್ರಾಚೀನಕಾವ್ಯಗಳು, ಸಂಗೀತಶಾಸ್ತ್ರ, ಕೊಳಲು ನುಡಿಸುವುದು, ಫ್ರೆಂಚ್ ಭಾಷೆಗಳಲ್ಲಿ ಥೋರೋ ಪ್ರಾವೀಣ್ಯ ಪಡೆದ. ಆದರೆ ಕಲಿತ ವಿದ್ಯೆಗಿಂತ ಕುಟುಂಬದವರೊಡನೆ ತಪ್ಪದೆ ಕೈಗೊಳ್ಳುತ್ತಿದ್ದ ವನವಿಹಾರ, ಕಾನ್‌ಕರ್ಡ್‌ನ ತುಂಬಿ ಹರಿವ ನದಿ, ತಳತಳಿಸುವ ಕಾಡುಗಳು, ಮಸಾಚುಸೆಟ್ಸ್‌ಪರ್ವತ, ಮರಳು ದಿಬ್ಬಗಳು, ಹಸಿರು ನೆಲ, ತೋಯ್ದ ಹುಣ್ಣು, ಮೀನುಗಳು-ಇವೆಲ್ಲ ಅವನೊಳಗೆ ಗಾಢವಾಗಿ ಬೇರೂರಿದ ಪರಿಣಾಮ ಹೆಚ್ಚಿನದಾಗಿತ್ತು. ಅವನ "ಸ್ವಪ್ನರಾಜ್ಯದ ಹಿನ್ನೆಲೆಯಾಯಿತು."

ಹದಿನಾರರಲ್ಲಿ ವಿದ್ಯಾರ್ಥಿವೇತನ ಪಡೆದು ಹಾರ್ವರ್ಡ್ ವಿಶ್ವವಿದ್ಯಾನಿಲಯ ಸೇರಿದ. ವಿದ್ಯೆ ಸಾಮಾಜಿಕ ಗೌರವದ ಅಥವಾ ಉದ್ಯೋಗದ ಸಾಧನವೆಂದು ನಂಬಿರದ ಥೋರೋಗೆ ವಿಶಾಲವಾದ ಗ್ರಂಥಾಲಯದ ಪ್ರಪಂಚದ ಬಾಗಿಲು ತೆರೆದಿತ್ತು. ಪಠ್ಯವಿಷಯಗಳಿಗಿಂತ ಹೆಚ್ಚಿನ ಆಸಕ್ತಿಯಿಂದ ವಿಶಾಲವಾದ ಓದಿನ ಅಭಿರುಚಿಯನ್ನು ಆತ ರೂಢಿಸಿಕೊಂಡ. ಹಾರ್ವರ್ಡ್‌ನ ಸಾಮಾಜಿಕ ಬದುಕಿನಲ್ಲಾಗಲೀ, ಸಹಪಾಠಿಗಳಲ್ಲಾಗಲೀ ಏನೊಂದೂ ಆಸಕ್ತಿಯಿರದ ಥೋರೋ ಸದಾ ಚಿಂತನಶೀಲನಾಗಿದ್ದ. ಏನೋ ಕನಸಿನ ಬೆನ್ನು ಹತ್ತಿರುವಂತೆ ಅವನ ಕಣ್ಣುಗಳು ಏನನ್ನೋ ಅರಸುವಂತೆ ಇದ್ದುವೆಂದು ಆತನ ಒಬ್ಬ ಸಹಪಾಠಿ ಬರೆದಿದ್ದಾನೆ.

ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ಹಾರ್ವರ್ಡ್‌ನಲ್ಲಿಯ ವ್ಯಾಸಂಗ ಮುಗಿಸಿ, ಥೋರೋ ಕಾನ್‌ಕರ್ಡ್‌ಗೆ ಮರಳಿದಾಗ ಇಂಗ್ಲೀಷ್ ಸಾಹಿತ್ಯದ ಅತ್ಯುತ್ಕೃಷ್ಟ ಮಾದರಿಗಳಲ್ಲಿ, ಬೇರೆ ಬೇರೆ ಯುಗಗಳ ವಿಚಾರಗಳಲ್ಲಿ ಆಳವಾದ ಅರಿವಿತ್ತು. ಗ್ರೀಕ್ ಕ್ಲಾಸಿಕ್ ಸಾಹಿತ್ಯದ ಸಾರವನ್ನಾತ ಹೀರಿಕೊಂಡಿದ್ದ. ಪೌರ್ವಾತ್ಯ ಸಾಹಿತ್ಯದ ಸುದೀರ್ಘ ಅಧ್ಯಯನ, ಗ್ರೀಕ್-ಬ್ರಿಟಿಷ್ ಸಂಪ್ರದಾಯದ ವ್ಯಕ್ತಿವಾದ, ಫ್ರೆಂಚ್ ಮತ್ತು ಜರ್ಮನ್ ತತ್ವಜ್ಞಾನ ಹಾಗೂ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಪ್ರಕೃತಿ ಆರಾಧನೆ, ಅಮೆರಿಕಾದ ಇಂಡಿಯನ್ನರ ಬದುಕಿನ ವಿಧಾನವನ್ನು ಕುರಿತ ಶೋಧನೆ-ಇವೆಲ್ಲ ಒಟ್ಟಾಗಿ ಆತನ ವಿಶಿಷ್ಟ ವಿಚಾರ ಧಾರೆಯನ್ನು ರೂಪಿಸಿದ್ದವು. ಕಾನ್‌ಕರ್ಡ್‌ಗೆ ಹಿಂದಿರುಗಿದ ಮೊದಲಲ್ಲಿ ಆತ ಆ ಪ್ರದೇಶದಲ್ಲೆಲ್ಲಾ ಟ್ರಾನ್ಸೆಂಡೆಂಟಲಿಸಂನ ನೇತಾರನೆಂದು ಪ್ರಖ್ಯಾತನಾಗಿದ್ದ ಎಮರ್ಸನ್ನನ ಪ್ರಭಾವಕ್ಕೆ ಸ್ವಲ್ಪ ಒಳಗಾದ. ಟ್ರಾನ್ಸೆಂಡೆಂಟಲ್ ವಾದಿಗಳ ಒಕ್ಕೂಟದ ಮುಖವಾಣಿಯಾಗಿದ್ದ 'ಡಯಲ್' ಪತ್ರಿಕೆಯಲ್ಲಿ ಲೇಖನಗಳನ್ನೂ ಆತ ಬರೆದಿದ್ದ. ಆದರೆ ತೀರಾ ಸ್ವತಂತ್ರ ಮನೋಧರ್ಮದ ಆತ ಬಹುಬೇಗನೆ ಈ ಗುಂಪಿನವರಿಂದ ಪ್ರತ್ಯೇಕತೆಯನ್ನು ಸಾಧಿಸಿ, ಬದುಕಿನ ಅನ್ವೇಷಣೆಯಲ್ಲಿ ಹಾಗೂ ಅಭಿವ್ಯಕ್ತಿಯಲ್ಲಿ ಸ್ವತಂತ್ರ ದಾರಿಯನ್ನು ಹಿಡಿದ.

ಜೀವನ ನಿರ್ವಹಣೆಗಾಗಿ ಕೆಲವು ಕಾಲ ಶಾಲಾಮಾಸ್ತರನಾಗಿ, ಪೆನ್ಸಿಲ್ ತಯಾರಿಕೆಯಲ್ಲಿ ಪ್ರಯತ್ನ ನಡೆಸಿದನಾದರೂ ಮಾಸ್ತರನ ಮನೋಧರ್ಮಕ್ಕೂ, ಸೃಜನಶೀಲ ಕಲಾವಿದನ ಮನೋಧರ್ಮಕ್ಕೂ ಅಂತರವಿದೆಯೆಂದು ಅರಿತ. ವಾಣಿಜ್ಯ ವ್ಯವಹಾರದ ತಲೆಬುಡ ಅರ್ಥವಾಗಲು ತನಗೆ

ಹತ್ತು ವರ್ಷಗಳೂ ಸಾಲದು ಎನ್ನಿಸಿತು. ಮನಃಪೂರ್ವಕವಾಗಿ, ಪ್ರಾಮಾಣಿಕವಾಗಿ ತನ್ನೆಲ್ಲ ಶಕ್ತಿ ಸಾರ ಬಳಸಿ ದುಡಿಯಬಹುದಾದ ವ್ಯಕ್ತಿಯೊಂದಕ್ಕಾಗಿ ಹಂಬಲಿಸಿದ.

ಅದೇ ತಾನೇ ಕೈಗಾರಿಕೆಯ ಮೊದಲ ಹಂತದ ಪ್ರಗತಿ ಸಾಧಿಸಿದ್ದ ಕಾನ್‌ಕರ್ಡ್‌ನ ಯಾಂತ್ರಿಕ ನಾಗರಿಕತೆಗೆ ಆತ ಬೇಸತ್ತ. ಸಂಪತ್ತನ್ನು ಅರಸುವುದು ಇಲ್ಲವೆ ಜೀವನೋಪಾಯಕ್ಕಾಗಿ ಇಡೀ ಬದುಕನ್ನು ಸವೆಸುವ ತನ್ನ ಜೊತೆಯ ಮಾನವರ ಈ ವಿಧಿಯಿಂದ ಪಾರಾಗಲು ಬಯಸಿದ. ಮನುಷ್ಯರನ್ನು ಕೇವಲ ಪಶುಗಳನ್ನಾಗಿ, ದುಡಿವ ಯಂತ್ರಗಳನ್ನಾಗಿ ಮಾಡುವ ಈ ಜೀವನಕ್ಕೆ ಬದಲಾಗಿ ತನ್ನಷ್ಟಕ್ಕೆ ತಾನೇ ಮಾರ್ಗವೊಂದನ್ನು ಕಂಡುಕೊಳ್ಳಲು ಯತ್ನಿಸಿದ. ಆ ಮಾರ್ಗದಿಂದ ಬೇರೆಯವರೂ ಪರಿಪೂರ್ಣ ಬದುಕನ್ನು ಬದುಕಲು ಸಾಧ್ಯ ಎಂದು ಸ್ಥಾಪಿಸಲು ಆತ ಯತ್ನಿಸಿದ. ಕೈಗಾರಿಕಾಕರಣಕ್ಕೊಳಗಾದ ಸಮಾಜದ ಸಂಬಂಧಗಳು, ಉತ್ಪಾದನಾ ವ್ಯವಸ್ಥೆ, ಅದರ ಗುರಿಗಳನ್ನು ಖಂಡಿಸಿ, ಅವುಗಳಿಗಿಂತ "ಉನ್ನತವಾದ" ಗುರಿಯ ಸಾಧನೆಗೆ ವ್ಯಕ್ತಿಯೊಬ್ಬ ಸ್ವಾವಲಂಬನೆಯ ಮೂಲಕ ಹೇಗೆ ಯತ್ನಿಸಬಹುದೆಂಬ ವಿಚಾರವನ್ನು ಪ್ರಾಯೋಗಿಕವಾಗಿ ಕಾರ್ಯರೂಪಕ್ಕಿಳಿಸಿ, ತಾನು ಆ ಉನ್ನತಾನುಭವವನ್ನು ದಾಖಲಿಸಿದ. ಅದರ ಸಾಹಿತ್ಯರೂಪವೇ "ವಾಲ್ಡನ್".

ವಾಲ್ಡನ್‌ನ ರಚನೆಗೆ ಮೂಲ ಆಧಾರ-ಬೊಸ್ಟನ್ ನಗರದ ಹತ್ತಿರದ ವಾಲ್ಡನ್ ಕೊಳದ ಬಳಿ ದಟ್ಟಡವಿಯಲ್ಲಿ ಏಕಾಕಿಯಾಗಿ ಎರಡು ವರ್ಷಕ್ಕೂ ಮಿಕ್ಕು ಜೀವನ ನಡೆಸಿದ ಥೋರೋನ ಸ್ವಂತ ಅನುಭವ. ತಾನಲ್ಲಿಗೆ ಹೋದದ್ದರ ಕಾರಣ ಆತ ಹೇಳುತ್ತಾನೆ. "ನನಗೆ ನಿರಾತಂಕವಾಗಿ ಬದುಕಬೇಕು ಎನ್ನಿಸಿತು ; ಜೀವನದ ಮುಖ್ಯ ಮುಖ್ಯ ಸಂಗತಿಗಳನ್ನು ನಾನೇ ಪ್ರತ್ಯಕ್ಷವಾಗಿ ನೋಡಬೇಕು; ಅವು ಏನೇನು ಕಲಿಸಬಲ್ಲವು? ನಾನು ಎಷ್ಟು ಕಲಿಯಬಲ್ಲೆ? ಕೊನೆಯ ಕಾಲ ಬಂದಾಗ ನನ್ನ ಬಾಳು ವ್ಯರ್ಥವಾಯಿತು ಎಂದುಕೊಳ್ಳಬಾರದು; ಎನ್ನಿಸಿತು ನನಗೆ, ಅದಕ್ಕಾಗಿ ಅರಣ್ಯಕ್ಕೆ ಹೋದೆ." ಒಂದು ಕೊಡಲಿಯನ್ನು ಎರವಲು ಪಡೆದು ಸ್ವತಃ ಮರ ಕಡಿದು, ಮಲಗಲು ಸಾಕಾಗುವಂತೆ 10 ಅಡಿ ಅಗಲ 15 ಅಡಿ ಉದ್ದದ ಒಂದು ಕೋಣೆಯನ್ನು ಕಾಡಿನ ನಡುವೆ, ವಾಲ್ಡನ್ ಬಳಿಯಲ್ಲಿ ಕಟ್ಟಿಕೊಂಡ. ಬೇಸಿಗೆಯ ಮಳೆ. ಹಾಗೂ ಚಳಿಗಾಲದ ಹಿಮಪಾತಗಳಿಂದ ರಕ್ಷಣೆ ನೀಡಬಲ್ಲ ಈ ವಸತಿಯಲ್ಲಿ ಅವನ ಅವಶ್ಯಕತೆಗಳು ಒಂದಿಷ್ಟು ಆಹಾರ, ಕೆಲವು ಪುಸ್ತಕಗಳು, ಯಥೇಚ್ಛವಾದ ವಿರಾಮ! ಅಷ್ಟೆ. ತನ್ನ ಸುತ್ತಲಿನ ಮರ, ಹಕ್ಕಿ, ಮೃಗ, ಕೀಟಗಳನ್ನು ಒಂದೂ ಬಿಡದಂತೆ ಕಂಡು, ಪರೀಕ್ಷಿಸಿದನು. ಬದಲಾಗುವ ಋತುಗಳು ಅವುಗಳೊಂದಿಗೆ ಬದಲಾಗುವ ವಾತಾವರಣಗಳನ್ನು ಗಮನಿಸಿ ದಾಖಲಿಸಿದನು. "ಪ್ರಕೃತಿಯನ್ನು ಪ್ರಶ್ನೆಗಳನ್ನು ಕೇಳಬೇಕು; ನನಗೆ ಒಪ್ಪಿಗೆಯಾಗುವ ಉತ್ತರಗಳನ್ನು ಪಡೆಯಬೇಕು; "ಸರೋವರದ ನೀರನ್ನು ಅಳೆಯಬೇಕು; ಮರಗಳ ಎತ್ತರವನ್ನು ಗೊತ್ತುಮಾಡಬೇಕು; ಕಂಡದ್ದನ್ನೆಲ್ಲ ನಿಗದಿ ಮಾಡಿ ಗುರುತು ಹಚ್ಚಬೇಕು". ಹೀಗೆ ಸ್ವತಃ ಪರೀಕ್ಷಿಸಿ ನಿರ್ಧರಿಸಿದ ವಾಸ್ತವಾಂಶಗಳನ್ನೆಲ್ಲ ಟಿಪ್ಪಣಿ ಮಾಡಿದ ವಾಲ್ಡನ್ ವಾಸದಿಂದ ಹಿಂದಿರುಗಿದ ನಂತರ ತುಂಬ ವೈವಿಧ್ಯಮಯವಾದ ರೂಪಕಗಳ ಮೂಲಕ ತನ್ನ ಹೊಸಬಗೆಯ ಬದುಕಿನ ಅಪೇಕ್ಷೆಯಿಂದ ನಡೆಸಿದ ಶೋಧನೆಗಳನ್ನು ದಾಖಲಿಸಿದ. ಅದೇ "ವಾಲ್ಡನ್".

ವ್ಯಕ್ತಿಗಳು ಬದುಕನ್ನು ಮತ್ತೆ ಮೊದಲಿನಿಂದ ಪ್ರಾರಂಭಿಸಬೇಕು. ಪರಂಪರಾಗತ ರೂಢಿಗಳು, ಸಾಮಾಜಿಕವಾಗಿ ಸ್ವೀಕೃತವಾದ ಸವೆದ ದಾರಿಗಳನ್ನು ಪರಿತ್ಯಜಿಸಿ ನಿಸರ್ಗದೊಂದಿಗೆ

ಸಂಪೂರ್ಣ ಸಾಯುಜ್ಯ ಹೊಂದಬೇಕು. ಈ ಹೊಸ ಜಗತ್ತಿನಲ್ಲಿನ ಹೊಸ ಆರಂಭಕ್ಕಾಗಿ ನಿಜವಾಗಿ ಉತ್ಕಟವಾಗಿ ಯತ್ನಿಸುವವನಿಗೆ ವಿಶಾಲವಾದ ಅವಕಾಶವಿದೆ. "ಏಕಾನಮಿ" ಎಂಬ ಮೊದಲ ಅಧ್ಯಾಯ ಈ ನಿಸರ್ಗಕ್ಕೆ ಹಿಂದಿರುಗುವ ಪ್ರಕ್ರಿಯೆಯನ್ನು ದಾಖಲಿಸುತ್ತದೆ. ಇದು ಸಮಾಜದಿಂದ ಪಲಾಯನ ಮಾಡುವುದಾಗಿರಲಿಲ್ಲ. ಸಾಮಾಜಿಕ ಸ್ಥಿತಿ ಸೃಷ್ಟಿಸಿದ್ದ ದಿಗ್ಬಂಧನಗಳೇ ಅವಶ್ಯಕತೆಗಳು ಹಾಗೂ ಅವು ಅನಿವಾರ್ಯ ಎಂದು ನಂಬಿದ್ದವರಿಗೆ ವಿರುದ್ಧವಾಗಿ, ಈ ಎಲ್ಲ ಅವಶ್ಯಕತೆಗಳು ಬೇಕೆನಿಸಿದರೆ ಕಡಿಮೆಮಾಡಿಕೊಂಡು ಕನಿಷ್ಠಕ್ಕೆ ಇಳಿಸಿಕೊಳ್ಳಬಹುದಾದವು ಎಂದು ಆತ ಪ್ರಯೋಗಿಸಿ ತೋರಿಸುತ್ತಾನೆ. ಈ 'ಏಕಾನಮಿ' ಸಮಾಜದಿಂದ ಬಿಡುಗಡೆ ಮಾಡಿ ನಿಸರ್ಗದೊಂದಿಗೆ ಬದುಕನ್ನು ಮತ್ತೆ ಸೃಷ್ಟಿಸಿಕೊಳ್ಳುವ ಅವಕಾಶ ನೀಡಿತು. ಈ ಚೈತನ್ಯದ ಜಾಗೃತಿ 'ವಾಲ್ಡನ್' ನಲ್ಲಿ ಪುನಃ ಪುನಃ ಕಂಡು ಬರುವ ವಸ್ತು. 'ಪರಿಶುದ್ಧ' ಇಂದ್ರಿಯಗಳ ಮೂಲಕ ದೊರೆಯಬಹುದಾದ ಅನುಭವಕ್ಕಿಂತ ಮಿಗಿಲಾದ ಸ್ವರ್ಗವಿಲ್ಲ ಎಂಬುದು ಥೋರೋನ ನಂಬಿಕೆ.

ಥೋರೋನ ಜೊತೆಗಾರರಾದ "ಪರಮಾರ್ಥ ತತ್ವವಾದಿಗಳು" ಆತ್ಮ-ದೇಹಗಳ ಸಂಬಂಧದ ಶೋಧನೆಯಲ್ಲಿ, ಅನಂತ, ಶಾಶ್ವತಗಳ ದಿಕ್ಕಿನಲ್ಲಿ ಭೂಮಿಯಿಂದ ಮುಗಿಲೆಡೆಗೆ ಮುಖ ಮಾಡಿದ್ದಾಗ ಥೋರೋ ಶರೀರ ಹಾಗೂ ವಾಸ್ತವ ಜಗತ್ತಿನ ಸಂಬಂಧ ಹುಡುಕುತ್ತಿದ್ದ; "ಒಬ್ಬ ಆದರ್ಶವಾದಿ ಮೊದಲಿಗೆ ವಸ್ತುವಾದಿಯೇ ಆಗಿರಬೇಕು. ಯಾಕೆಂದರೆ ವಸ್ತುಮಯ ವಿಶ್ವವೇ ಎಲ್ಲಾ ಕಲೆ , ತತ್ತ್ವಜ್ಞಾನ, ಧರ್ಮಗಳ ಮೂಲ ತಳಹದಿಯಾಗಿದೆ. ನಾವು ಒಂದು ಗಿಡದ, ಪ್ರಾಣಿಯ ಬದುಕನ್ನು ಅನುಭವಿಸಬಹುದು ಆದರೆ ಪ್ರಾಣಿಯಂತೆ ಬದುಕ ಬೇಕಿಲ್ಲ" ಎಂಬುದನ್ನು ಪರೀಕ್ಷಿಸಲು ಆತ ಶ್ರಮಿಸುತ್ತಿದ್ದ.

ಥೋರೋನ "ಪ್ರಕೃತಿ" ಎಮರ್ಸನ್‌ಗೆ "ಕೇವಲ- ದೃಶ್ಯರೂಪ"ವಾದಂತೆ, ಆಗಿರಲಿಲ್ಲ. ದೃಶ್ಯರೂಪದಂತೆ ಅಂತಸ್ಸಾರವೂ ಅದೇ ಆಗಿತ್ತು. ಆದ್ದರಿಂದ ಆತ್ಮ-ಪ್ರಕೃತಿಯ ಸಂಯೋಗವನ್ನು ಆತ, ಪರಮಾನಂದದ ಸ್ಥಿತಿಯ ಮೂಲವೆಂದು ಗ್ರಹಿಸುತ್ತಾನೆ:

"ಆತ್ಮವು ಪ್ರಕೃತಿಯೊಂದಿಗೆ ಸೇರಿಕೊಂಡಾಗ ಬುದ್ಧಿಯು ಫಲಿಸಬಲ್ಲದು; ಅದರಿಂದ ಕಲ್ಪನೆ ಉದಯಿಸುತ್ತದೆ. ನಾವು ಹೆದ್ದಾರಿಯಂತೆ ನೀರಸವಾಗಿ ನಿರ್ಜೀವವಾಗಿದ್ದರೆ ಆರೋಗ್ಯಪೂರ್ಣವಾಗಿ ಪೋಷಿಸಲ್ಪಟ್ಟ ಯಾವುದಾದರೊಂದು ಇಂದ್ರಿಯ ನಮಗೆ ಪ್ರಕೃತಿಯೊಂದಿಗೆ ಸಹಾನುಭೂತಿಯ ಸಂಬಂಧ ಕಲ್ಪಿಸಬಲ್ಲದು. ಗಾಳಿಯಲ್ಲಿ ಹಾರಾಡುವ, ಫಲವತ್ತಾಗಿಸುವ ಪರಾಗಕಣಗಳು ನಮ್ಮ ಮೇಲೆ ಬೀಳುತ್ತವೆ. ಕೂಡಲೆ ಆಕಾಶವೆಲ್ಲ ಕಾಮನ ಬಿಲ್ಲಾಗಿ,ನಾದಮಯವಾಗಿ,ಗಂಧ ರುಚಿಗಳಿಂದ ತುಂಬುತ್ತವೆ".

ಈ ಪಂಚೇಂದ್ರಿಯಗಳ ಜೀವಂತಿಕೆಯ ಮೇಲೆ ಥೋರೋ ತನ್ನ ಇಂದ್ರಿಯಾತೀತ ಸ್ಥಿತಿಯ ದರ್ಶನ ಮಾಡಿಸುವ ಪರಿ ಗಮನಾರ್ಹ. ಎಮರ್ಸನ್ ಮೊದಲಾದವರು ವಿಚಾರ-ಅರಿವು, ಇಂದ್ರಿಯ ಗ್ರಾಹ್ಯ-ಪರಮಾರ್ಥ, ಸ್ವರ್ಗ-ಮರ್ತ್ಯಗಳನ್ನು ಬೇರೆಯಾಗಿ ಭಾವಿಸಿದರು. ಆದರೆ ಸ್ವರ್ಗದ ಜೊತೆ ನಮ್ಮನ್ನು ಸಂಪರ್ಕ ಕಲ್ಪಿಸುವ ಮಾನಸಿಕ ಕ್ರಿಯೆಗಳಿಗೂ, ಭೂಮಿಯ ಜೊತೆ ಜೋಡಿಸುವಂಥ ಅವಯವಗಳಿಗೂ ಥೋರೋನ ದೃಷ್ಟಿಯಲ್ಲಿ ಏನೂ ವ್ಯತ್ಯಾಸವಿಲ್ಲ: "ಪರಿಶುದ್ಧ

ವಾದ ಇಂದ್ರಿಯಗಳು ಒದಗಿಸುವ ಪರಿಶುದ್ಧವಾದ ಇಂದ್ರಿಯ ಗ್ರಾಹ್ಯ ಬದುಕಿಗಿಂತ ಮೇಲಿನ ಸ್ವರ್ಗ ನಮಗಿಲ್ಲ. ಈಗಿನ ನಮ್ಮ ಇಂದ್ರಿಯಗಳು ಮುಂದೆ ನಾವೇನಾಗಬಹುದೋ ಅದರ ಪೂರ್ವ ಸ್ಥಿತಿಗಳು. ತುಲನಾತ್ಮಕವಾಗಿ ನಾವು ಕಿವುಡರೂ, ಮೂಕರೂ. ಕುರುಡರೂ ಆಗಿದ್ದೇವೆ. ಗಂಧವಾಗಲಿ, ರುಚಿಯಾಗಲಿ, ಅನುಭವವಾಗಲಿ ನಮಗಿಲ್ಲ. ತಮ್ಮ ದೈವಿಕತೆಯ ಚೈತನ್ಯ ಸೋರಿ ಹೋಗಿರುವುವನ್ನು ..ಪ್ರತಿತಲೆಮಾರಿನವರೂ ಕಂಡುಕೊಳ್ಳುತ್ತಾರೆ."

"ಕಿವಿಗಳಿರುವುದು ಜನ ನಂಬಬಯಸುವಂತೆ ಕ್ಷುದ್ರ ವಿಷಯಗಳಿಗಾಗಿ ಅಲ್ಲ. ಅವು ಸ್ವರ್ಗೀಯ ವಾದುದನ್ನು ಆಲಿಸಲಿಕ್ಕಾಗಿ ಇವೆ; ಕಣ್ಣುಗಳಿರುವುದು ಈಗ ಜನ ಅವುಗಳನ್ನು ಬಳಸುತ್ತಿರುವಂತೆ ದೀನವಾಗಿ ಸವೆಸುವುದಕ್ಕಲ್ಲ, ಈಗ ಕಾಣದಾಗಿರವ ಸೌಂದರ್ಯವನ್ನು ಕಾಣಲಿಕ್ಕೆ".

ಈ ಇಂದ್ರಿಯಗಳ ಸರ್ವಶಕ್ತಿ ಬಳಸಿ ಬದುಕಿನ ತೀವ್ರ ಅನುಭವ ಪಡೆದುಕೊಳ್ಳಬೇಕಾದ್ದರ ಅಗತ್ಯ ಸಾರುತ್ತಾನೆ ಥೋರೋ: "ನಮ್ಮ ಬದುಕನ್ನು ಸಾಮಾನ್ಯವಾಗಿ ನಾವು ತುಂಬಿದಂತೆ ಬದುಕುವುದಿಲ್ಲ; ನಮ್ಮ ಪ್ರತಿಯೊಂದು ರಂಧ್ರ ನಮ್ಮ ರಕ್ತದಿಂದ ತುಂಬಿಕೊಳ್ಳುವಂತೆ ಮಾಡುವು ದಿಲ್ಲ. ಉಚ್ಛ್ವಾಸ-ನಿಶ್ವಾಸಗಳನ್ನೂ ಸಮಗ್ರವಾಗಿ, ಸಾಕಷ್ಟು ಪೂರ್ಣವಾಗಿ ನಡೆಸುವುದಿಲ್ಲ. ಪ್ರತಿಯೊಂದು ಸ್ಫೂರ್ತಿಯ ಅಲೆ ನಮ್ಮ ತುಟ್ಟತುದಿಯ ದಡಗಳನ್ನು ಚೂರಾಗಿಸಿ, ಸುತ್ತ ಬಂಧಿಸಿ ರುವ ಮರಳಿನ ಜೊತೆ ಸೇರುವವರೆಗೂ, ನೊರೆಯ ಶಬ್ದ ಮತ್ತೆ ಮರುಕಳಿಸುವವರೆಗೂ ಉರುಳು ವುದಿಲ್ಲ. ಯಾವುದಾದರೊಂದು ತಿದಿ ನಮಗೆ ಉಸಿರು ತುಂಬಲಾರದೆ, ಒಂದು ನಿಶ್ಶಬ್ದ ದಿನದಂದು ನಮ್ಮ ಉಸಿರೇ ಒಂದು ಗಾಳಿಯನ್ನು ಸೃಷ್ಟಿಸುವಂತೆ?"

ಪರಮಾರ್ಥ ತತ್ತ್ವದ ಇತರ ಪ್ರತಿಪಾದಕರು 'ಪ್ರತಿಭೆ' 'ಸ್ಫೂರ್ತಿ' ಗಳನ್ನು 'ಉನ್ನತ-ಆತ್ಮ' 'ಶಾಶ್ವತ ತತ್ತ್ವ'ಗಳೆಂದು ಕರೆಯುತ್ತಿದ್ದು, ಅಮೂರ್ತವಾಗಿ ಚಿಂತಿಸಲೆತ್ನಿಸಿದರೆ, ಥೋರೋ ಪಂಚೇಂ ದ್ರಿಯಾನುಭವದ ವಾಸ್ತವವೂ ಮೂರ್ತವೂ ಆದ ಅನುಭವದ ವಿವರಗಳ ಮೂಲಕ ಎಲ್ಲವನ್ನೂ ಮೂರ್ತೀಕರಿಸಿ ಹೇಳಲು ಶ್ರಮಿಸುತ್ತಿದ್ದ.

"ಒಂದು ಮುಳ್ಳುಪೊದೆ ಬಳಿಯ ಮೆಡೋಸೆಡ್‌ನ ಹೂವೊಂದರ ಮೇಲೆ ನನ್ನ ಕಣ್ಣು ನೆಲೆಸಿದಂತೆ ಶರತ್ಕಾಲದ ಒಂದು ಜೀರುಂಡೆಯ ಹಾಡು ಕೇಳಿಸಿತು. ಶರದೃತುವಿನ ಅನುಭವದೊಳಗೆ ಹೊಕ್ಕಿತು. ಅದು ನಾದವೆ ? ರೂಪವೇ ಗಂಧವೆ? ರುಚಿಯೆ? ಅದೀಗ ಆಗಸ್ಟ್ ಎಂಬ ರಾಜಮಾಸ ವಾಯಿತು. ಈ ಶಬ್ದ ಕೇಳಿದಕೂಡಲೆ ಎಲ್ಲೆಲ್ಲೂ ಕತ್ತರಿಸಿ, ಮನೆಗಳಮೇಲೆ ಒಣಗುಹಾಕಿರುವ ರೈ ಹುಲ್ಲಿನಂತೆ ಒಣಗಿದೆ. ಆ ಋತುವಿನ ದ್ರಾಕ್ಷಾರಸ ಪಾನಮಾಡಿ ಮತ್ತನಂತಾದೆ."

ಇಂದ್ರಿಯಾನುಭವಕ್ಕೆ ವಸಂತದಲ್ಲಿ, ಬೆಳಗಿನಲ್ಲಿ, ಸೂರ್ಯೋದಯದಲ್ಲಿ - ಬದುಕಿನ ಸರ್ವ ಚೈತನ್ಯ, ಜೀವಂತಿಕೆಗಳ ಪ್ರತಿಮೆಗಳನ್ನು ಥೋರೋ ಸೃಷ್ಟಿಸುತ್ತಾನೆ. 'ಇದಕ್ಕೆ ವಿರುದ್ಧವಾಗಿ ಎಲ್ಲ ಜೈವಿಕ ಚಟುವಟಿಕೆ ಸ್ತಬ್ಧವಾಗುವ ಶೀತಕಾಲ, ಸಾವಿನ, ಮರಗಟ್ಟಿದ ಜೀವಸ್ಥಿತಿಯ ಪ್ರತೀಕ ವಾಗುತ್ತದೆ. ಇಂದ್ರಿಯಾನುಭವಗಳೆಲ್ಲ ಕುಗ್ಗಿದ ಈ ಕಾಲ ಥೋರೋಗೆ ತುಂಬ ಯಾತನಾ ದಾಯಕ,' ಪ್ರತಿ ಇಂದ್ರಿಯದ ವಿಷಯಗಳನ್ನೆಲ್ಲ ಪಟ್ಟಿ ಮಾಡಿದರೂ ಸಿಗಬಹುದಾದ ಅನುಭವ ಸೊನ್ನೆ. "ಹೊರಗಿನ ದೃಶ್ಯವೆಲ್ಲ ಬೋಳು, ಮರಗಳೂ ಬೋಳು, ಕಪ್ಪು ಕವಿದ ಆಕಾಶ

ಕಾಣಲು ಏನೂ ಇಲ್ಲ. ಪ್ರಕೃತಿಯ ಮೂಳೆಗೆ ಚರ್ಮದ ಮರೆಯೂ ಇಲ್ಲ!" "ಸೊಪ್ಪುಗಳು ಜೀರುಂಡೆಗಳೂ ಮಾಯ. ಹೂವುಗಳು, ಪಾರ್ಸ್ನಿಪ್‌ಗಳು, ಟರ್ನಿಪ್‌ಗಳೂ ಮಾಯವಾಗಿವೆ. ನೆಲ ವೆಲ್ಲ ಹಿಮದಿಂದ ಗಟ್ಟಿಯಾಗಿದೆ. ಗಂಧವಾಗಲಿ, ರುಚಿಯಾಗಲಿ ಅನುಭವಕ್ಕೆ ಬರುವಂಥಾದ್ದು ಯಾವುದೂ ಇಲ್ಲ." ತನ್ನ ಶಕ್ತಿಗಳ ವಿನಾಶದ ಈ ಅರಿವಿನಿಂದ ಥೋರೋ ಕುಗ್ಗುವುದಿಲ್ಲ. ಮೃತ್ಯುವಿಗಾಗಿ ಸಿದ್ಧತೆ ಮಾಡಿಕೊಳ್ಳುವುದಕ್ಕೆಂದು ಇಂದ್ರಿಯಾನುಭವವನ್ನು ಆತ ಬಿಡಲಾರ. ತಾಳ್ಮೆಯಿಂದ ವಸಂತದ ಬರವಿಗಾಗಿ ಕಾಯುತ್ತಾನೆ.

ವರ್ತಮಾನಕ್ಕೆ ವಾಸ್ತವ ಅಸ್ತಿತ್ವವಿಲ್ಲ. ಅದು ನಿರಂತರವಾಗಿ ಭೂತಕಾಲದಲ್ಲಿ ನಾಶವಾಗುತ್ತದೆ; ಭವಿಷ್ಯತ್ತಿಗೆ ಎಡೆಮಾಡಿಕೊಡುತ್ತದೆ ಎಂಬ ಹೆಗೆಲ್‌ನ ವಿಚಾರಕ್ಕೆ ವಿರುದ್ಧವಾಗಿ ಥೋರೋ ವರ್ತಮಾನದ ಕ್ಷಣಿಕ ಅನುಭವವೊಂದೇ ಸತ್ಯದ ನಿಜವಾದ ದರ್ಶನ ಮಾಡಿಸಬಲ್ಲದೆನ್ನುತ್ತಾನೆ. "ಯಾವುದನ್ನೂ ಮುಂದೂಡಬೇಡಿ. ಕಾಲವನ್ನು ಮುಂಬೀಗ ಜಡಿದು ನಿಮ್ಮ ವಶದಲ್ಲಿ ತೆಗೆದುಕೊಳ್ಳಿ. ಈಗ ಅಲ್ಲದಿದ್ದರೆ ಮತ್ತೆಂದೂ ಇಲ್ಲ. ನೀವು ವರ್ತಮಾನದಲ್ಲಿ ಬದುಕಬೇಕು. ಪ್ರತಿಯೊಂದು ಅಲೆಯ ಮೇಲೆ ನಿಮ್ಮ ದೋಣಿ ಸಾಗಬೇಕು. ಪ್ರತಿಯೊಂದು ಕ್ಷಣದಲ್ಲಿ ನಿಮ್ಮ ಅನಂತತೆಯನ್ನು ಅರಿಯಬೇಕು. ಮೂರ್ಖರು ಮಾತ್ರ ಅವಕಾಶವೆಂಬ ದ್ವೀಪಗಳಲ್ಲಿ ನಿಂತು ಬೇರೊಂದು ನೆಲದೆಡೆಗೆ ಕಣ್ಣು ಹಾಯಿಸುತ್ತಾರೆ. ಅಲ್ಲಿ ಬೇರೆ ಯಾವ ನೆಲವೂ ಇಲ್ಲ. ಈ ಬದುಕಲ್ಲದೆ ಬೇರೆ ಇಲ್ಲ. ಇದರಂಥದೂ ಇಲ್ಲ".

ಬೇರೆ ಪರಮಾರ್ಥವಾದಿಗಳಿಗೆ ನೈತಿಕ ನಿಯಮ ಮುಖ್ಯವಾಗಿದ್ದರೆ ಥೋರೋಗೆ ಪ್ರಕೃತಿಯ ಸಂಪರ್ಕದಿಂದ ಸಂಭವಿಸುವ ಈ "ಪರಮಾನಂದದ ಪ್ರಭೆ" ಮುಖ್ಯವಾಗಿತ್ತು:

"ತಾಳ್ಮೆಯಿಂದ ನಿರೀಕ್ಷಣೆಯಿಂದ ನಾನು ಬೆಳಕಿನ ಒಂದು ಕಿರಣ ಪಡೆಯುವುದಾದರೆ ನಿರೀಕ್ಷೆಯ ಮುನ್ನೋಟದ ಮೇಲೆ ಒಂದು ಕ್ಷಣ ಉನ್ನತಿಗೇರಿಸಲ್ಪಟ್ಟದ್ದನ್ನು ಅನುಭವಿಸಬಲ್ಲೆನಾದರೆ, ಸತ್ತ ಗದ್ಯವಾಗಿದ್ದ ಈ ಜಗತ್ತು ನನಗೆ ಮತ್ತೆ ಜೀವಂತವೂ ದೈವಿಕವೂ ಆಗುವುದಾದರೆ, ಹೀಗೆ ಸದಾಕಾಲ ನೋಡುತ್ತಲೇ ಇರಲಾರೆನೆ?"

ಉದಾತ್ತತೆಯ ಅನುಭವಕ್ಕಾಗಿ ಹೀಗೆ ಸದಾ ಜಾಗ್ರತವಾಗಿರುವ ಕಷ್ಟಕರವೂ, ನಿರಂತರವೂ ಆದ ಉದ್ಯೋಗ ಥೋರೋಗೆ ಆನಂದದಾಯಕವಾದದ್ದು. ಮನುಷ್ಯನ ಸಮಗ್ರ ವ್ಯಕ್ತಿತ್ವವನ್ನು ಒಳಗೊಳ್ಳುವ ಸಂಯೋಗವೇ ಆನಂದಾನುಭವದ ಪರಿಪೂರ್ಣ ದರ್ಶನದ ಮೊದಲ ಮೆಟ್ಟಿಲು. ಈ ಮೆಟ್ಟಿಲನ್ನೇರಲು ಬೇಕಾದ ಇಂದ್ರಿಯ ಸಮನ್ವಯ-ಏಕಾಗ್ರತೆಗಳನ್ನು ಮನುಷ್ಯ ಪ್ರಕೃತಿಯ ಸಾನ್ನಿಧ್ಯದಲ್ಲಿ ಪಡೆಯಲೆತ್ನಿಸಿ ಸಫಲನಾಗಬಹುದು. ಇದು ಒಬ್ಬ ಪ್ರಕೃತಿವಾದಿಯಾಗಿ ಥೋರೋನ ಪ್ರಧಾನ ನಂಬಿಕೆಯಾಗಿತ್ತು. ಸರ್ವಾನಂದದ ಈ ಸೆಳಕುಗಳು, ಕ್ಷಣಿಕವಾದದ್ದಾದರೂ ಚೇತನವನ್ನು ದುಃಖದಿಂದ ಆನಂದಕ್ಕೆ ಪರಿವರ್ತಿಸಬಲ್ಲ ಸಾಮರ್ಥ್ಯದಿಂದಾಗಿ ಇಂಥ ಅನುಭವ ಅವನಿಗೆ ಅತ್ಯಮೂಲ್ಯವೆನಿಸಿತ್ತು. ಇದನ್ನು ಯಾರೂ ಸಾಧಿಸಬಹುದೆಂಬುದರ ಮೂಲಕ ಮನುಷ್ಯನ ಒಟ್ಟು ಬದುಕಿನ ವಿಧಾನ ಯಾವ ಆದರ್ಶದ ಕಡೆಗಿರಬೇಕೆಂಬುದನ್ನು ಆತ ಸೂಚಿಸುತ್ತಾನೆ. ಮಾನವನ ವಿಕಾಸವೆಂದರೆ 'ಚೈತನ್ಯ'ದ ವಿಕಾಸ, ಆಧ್ಯಾತ್ಮಿಕ ವಿಕಾಸ. ಈ ವಿಕಾಸಕ್ಕಾಗಿ ಅವನು ಎಲ್ಲೋ ಕಾಣದ ಸ್ವರ್ಗದ ಕಡೆಗೆ ಮುಖ ಮಾಡಬೇಕಾಗಿಲ್ಲ. ತನ್ನ ಹೊರಗಿನ ವಸ್ತುಗಳ ಮೂಲಕ

ಅವನು ತನ್ನನ್ನು ಅರ್ಥಮಾಡಿಕೊಳ್ಳಬಹುದು. ಸುತ್ತಲಿನ ಪ್ರಕೃತಿಯನ್ನು ತೀವ್ರವಾಗಿ ನಮ್ಮ ಅರಿವಿಗೆ ತಂದುಕೊಳ್ಳುವ ಮೂಲಕವಾಗಿ, ಅಂದರೆ ನಮಗೆ ಇಂದ್ರಿಯಗಳ ಮೂಲಕ ಯಾವುದು ಗ್ರಾಹ್ಯವಾಗಬಲ್ಲುದೋ, ಅದರ ಮೂಲಕವಾಗಿ ನಾವು ಏನೆಂಬುದನ್ನು ಅರಿಯುಬಹುದು. ಇದೇ ಆತ್ಮ ಸಾಕ್ಷಾತ್ಕಾರ, ಜಾಗೃತಿ, ಅರಿವಿನ ಬೆಳಕು. ಈ ಬೆಳಕಿನ ಬಗ್ಗೆ ತನ್ನ ಅನುಭವವನ್ನು ವಾಸ್ತವ ಜಗತ್ತಿನ ಸಂಕೇತಗಳ ಮೂಲಕವಾಗಿಯೇ ಓದುಗರಿಗೆ ಕಟ್ಟಿಕೊಡುವ ಯತ್ನವಾಗಿದೆ 'ವಾಲ್ಡನ್'.

ಚಳಿಗಾಲದಿಂದ ವಸಂತಋತುವಿನವರೆಗೆ ವ್ಯಾಪಿಸಿರುವ ಜಗತ್ತಿನ ಜೀವನವಿವರ ರೂಪಕಗಳಾಗಿ, ವ್ಯಂಗ್ಯ, ವಿಡಂಬನೆ, ತಮಾಷೆ, ಆನಂದ-ಯಾತನೆಗಳೆಲ್ಲದರ ಬಳಕೆಯೊಂದಿಗೆ ಶಬ್ದಗಳಲ್ಲಿ ಹರಳುಗಟ್ಟುತ್ತದೆ. ತೀರಾ ವೈಯಕ್ತಿಕವಾದ ಜನರ ಆಡುಭಾಷೆಗೆ ತುಂಬ ಸಮೀಪದ ಶಬ್ದ ಭಂಡಾರ, ರಚನಾಶೈಲಿ ಇದರದ್ದು. "ಪ್ರತಿಯೊಂದು ಆಡುಭಾಷೆಗೂ ಅನುವಾದಿಸಲು ಸಾಧ್ಯವಿರುವಂಥ ಒಂದು ಪದ, ಎಲ್ಲ ಮನಸ್ಸುಗಳಿಗೂ ಒಂದು ನಿಜವನ್ನು ಧ್ವನಿಸಬಲ್ಲದು ಎಂದರೆ ಮಾನವ ಕಲೆಯ ಪರಿಪೂರ್ಣ ಕೃತಿಯಾಗಿರುತ್ತದೆ ಅದು. ಅದನ್ನು ಉಸಿರಾಗಿಸುತ್ತ ನಮ್ಮ ತುಟಿಗಳ ಮೇಲೆ ನಮ್ಮ ಬೌದ್ಧಿಕತೆಯ ಅಂಶವಾಗಿರುವಂತೆ ನಮ್ಮ ಶರೀರದ ಎಲ್ಲ ಅವಯವಗಳ ಉತ್ಪಾದನೆಯೋ ಎಂಬಂತೆ ತರಬಲ್ಲೆವಾದರೆ ಆಗ ಅದು ಜೀವನಕ್ಕೆ ತುಂಬ ನಿಕಟವಾಗಿರುತ್ತದೆ".

ಈ ಮಾತು ಥೋರೋನ ಬದುಕು—ಬರಹಗಳೆರಡರ ನಡುವಿನ ಸಂಬಂಧದ ಪ್ರತೀಕವಾಗಿದೆ. ಭಾಷೆ, ಜೀವನಾನುಭವದ ಹಾಗೆ, ಬುದ್ಧಿ-ಶರೀರಗಳೆರಡರ ಮೂಲದಿಂದಲೂ ಚೈತನ್ಯ ಪಡೆಯಬೇಕು. ಭಾಷೆ-ಲಯಗಳೆರಡೂ ಭೌತಿಕ ತಳಹದಿಯಿಂದ ಬಂದದ್ದೆಂದು ಗ್ರಹಿಸುವ ಥೋರೋ "ವಾಸ್ತವದ ಸತ್ಯವಾದ ವರ್ಣನೆ ಒಂದು ಅತ್ಯಪೂರ್ವ ಕಾವ್ಯವಾಗಿರುತ್ತದೆ. ಯಾಕೆಂದರೆ ವ್ಯವಹಾರ ಜ್ಞಾನವೆನ್ನುವುದು ಕೇವಲ ಆತುರದ ಮೇಲ್ಪದರದ ನೋಟವಾಗಿರುತ್ತದೆ" ಎನ್ನುವಾಗ ಆಧುನಿಕ ಕವಿಗಳ ವಿಚಾರದ ಹತ್ತಿರ ಬರುತ್ತಾನೆ. ಭಾಷೆ ನಿಸರ್ಗದ ಅಂಗವೆಂದೂ, ಆತ್ಮಸಂಬಂಧಿಯಾದುದೆಂದೂ ಹೇಳುವ ಎಮರ್ಸನ್‌ನ ವಿಚಾರಕ್ಕಿಂತ ಥೋರೋವಿನದು ಭಿನ್ನವಾಗಿ ತೋರುತ್ತದೆ.

"ಮನುಷ್ಯರು ಏನು ಹೇಳುತ್ತಾರೋ ಅದು ಎಷ್ಟೋ ಪಂದರಿಯಾಡಲ್ಪಟ್ಟಿರುತ್ತದೆ; ಎಲ್ಲರಿಗೂ ಅನ್ವಯಿಸುವ ಅವಶ್ಯಕತೆಯನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಲ್ಪಟ್ಟಿರುತ್ತದೆ. ಪೂರ್ಣವಾಗಿ ಅವಿವೇಕದ್ದೆನಿಸಿಕೊಂಡದ್ದಕ್ಕೆ ಚಲಾವಣೆಯೇ ಸಿಗುವುದಿಲ್ಲ. ಪದಗಳ ಸಾಮ್ಯ ಕೇವಲ ಲಹರಿಯೋ ಅರ್ಥಹೀನವೋ ಅಲ್ಲ. ಬದಲಾಗಿ ನಿಜವಾದ ಸಾದೃಶ್ಯದ ಪ್ರತೀಕವಾಗಿರುತ್ತದೆ. ಕೇವಲ ಮಾನವ ಜನಾಂಗದ ನೈತಿಕತೆ—ಯಾವುದೇ ಒಬ್ಬ ಮನುಷ್ಯನದಲ್ಲ-ಮಾತ್ರ ನಮ್ಮ ನುಡಿಗೆ ಚೈತನ್ಯ ಹಾಗೂ ಅರ್ಥವನ್ನು ಕೊಡಬಲ್ಲದು" ಎನ್ನುವ ಥೋರೋ ಬದುಕಿನಲ್ಲಿ, ಭಾಷೆಯಲ್ಲಿ, ಬರಹದಲ್ಲಿ ಈ ಅರ್ಥವಂತಿಕೆಗಾಗಿ ನಿರಂತರವಾಗಿ ಶ್ರಮಿಸಿದ್ದ.

* * *

ವ್ಯಕ್ತಿವಾದ ಪ್ರಕೃತಿವಾದಗಳ ಹಿನ್ನೆಲೆಯಲ್ಲಿ ವ್ಯಕ್ತಿಯ-ಸಮಾಜದ ಸಾಂಸ್ಕೃತಿಕ ಕ್ರಾಂತಿಯನ್ನು ಪ್ರತಿಪಾದಿಸಿದ ಕೃತಿ ವಾಲ್ಡನ್‌ನಿಂದ ಒಬ್ಬ ಪರಮಾರ್ಥ ತತ್ವದರ್ಶನವಾದಿಯಾಗಿ,

ಸೃಜನಶೀಲ ಬರಹಗಾರನಾಗಿ, ಸಾಮಾಜಿಕ ವಿಮರ್ಶಕನನ್ನಾಗಿ ಥೋರೋನ ಹಲವು ಮುಖಗಳನ್ನು ಗುರುತಿಸಬಹುದು.

ಕೈಗಾರಿಕಾ ಪ್ರಕೃತಿಯು ಬೇರೂರಿಸಿದ ಐಹಿಕಭೋಗಾಸಕ್ತಿ, ಅದರಿಂದ ಹುಟ್ಟಿದ ದಕ್ಷತೆಯ ಕಲ್ಪನೆಗಳ ವಿರುದ್ಧ ಹೂಡಿದ ಬಂಡಾಯ ಥೋರೋನ "ವ್ಯಕ್ತಿವಾದ". ಜೀವನದ ಅವಶ್ಯಕತೆಗಳನ್ನು ಅತ್ಯಂತ ಕನಿಷ್ಟಕ್ಕೆ ಇಳಿಸಿದ 'ಸರಳತೆ' ಸಿದ್ಧಾಂತ, ತನ್ನ ಆಹಾರ ತಾನೇ ಬೆಳೆಯಬೇಕು, ತನ್ನ ವಸ್ತ್ರ ತಾನೇ ಸಿದ್ಧಪಡಿಸಿಕೊಳ್ಳಬೇಕು, ತನ್ನ ಮನೆ ತಾನೇ ಕಟ್ಟಿಕೊಳ್ಳಬೇಕು, ಬದುಕಿರಲು ಎಷ್ಟು ತೀರಾ ಅನಿವಾರ್ಯವೋ ಅಷ್ಟು ಮಾತ್ರ ಈ ಉತ್ಪಾದನೆಯಲ್ಲಿ ತೊಡಗಬೇಕು ಎಂಬ ಸ್ವಾವಲಂಬನೆ, ಕೈಗಾರಿಕೆ ಹುಟ್ಟಿಸುವ ದಾಸ್ಯಸ್ಥಿತಿಗೆ ಪರಿಹಾರವೆಂದು ಥೋರೋ ಬದುಕಿ ತೋರಿಸ್ಸಲೆತ್ನಿಸಿದ್ದ. ಕೈಗಾರಿಕಾಕರಣದ ಎಲ್ಲ ಮಾನವ ಶೋಷಣೆಗಳಿಗೆ, ಪ್ರಾಚೀನ ಜನಜೀವನದ ವಿಧಾನವಾಗಿದ್ದ ಗುಡಿಕೈಗಾರಿಕೆ, ಕರಕುಶಲ ವಸ್ತು ತಯಾರಿಸುವ ಉತ್ಪಾದನಾ ವಿಧಾನ ಪರಿಹಾರ ನೀಡುತ್ತದೆಂದು ಪ್ರತಿಪಾದಿಸಿದ್ದ. ಇವೆಲ್ಲದರಿಂದ ಶ್ರಮ ಕಡಿಮೆಯಾಗಿ, ವಿರಾಮ ಹೆಚ್ಚಾದಲ್ಲಿ, ಪ್ರತಿಯೊಬ್ಬ ಮನುಷ್ಯ—ಆದ್ದರಿಂದ ಇಡೀ ಸಮಾಜ-ಉನ್ನತ ಅನುಭವದ ಪ್ರೇರಣೆಯನ್ನು ಪ್ರಕೃತಿ ಸಂಪರ್ಕದಿಂದ ಪಡೆದು ಸಾಂಸ್ಕೃತಿಕವಾಗಿ ಹೊಸ ಸಮಾಜವನ್ನು, ಹೊಸ ಮನುಷ್ಯನನ್ನು ಸೃಷ್ಟಿಸಬಹುದು ಎಂಬುದು, ಸ್ಥೂಲವಾಗಿ ಹೇಳುವುದಾದರೆ, ಸಾಂಸ್ಕೃತಿಕ ಕ್ರಾಂತಿಯ ಪರವಾಗಿ ಆತ ಸಾರಿದ ವಿಚಾರವಾಗಿತ್ತು.

ಆದರೆ 'ವಾಲ್ಡನ್'ನ ಅನುಭವ ವೈಯಕ್ತಿಕವಾಗಿ ನಿಜವಾಗಿ ತೋರಿದರೂ, ಥೋರೋ ಪುನಃ ಸಮಾಜದಲ್ಲಿ ಬದುಕತೊಡಗಿದಾಗ ವಿಭಿನ್ನರೀತಿಯ ವಾಸ್ತವಾಂಶಗಳನ್ನೆದುರಿಸಬೇಕಾಯ್ತು. ಅವನು ಪ್ರತಿಪಾದಿಸಿದವ್ಯಕ್ತಿ-ಕೇಂದ್ರಿತ ಸ್ವಾವಲಂಬನೆಯ ಉತ್ಪಾದನೆ-ಕೇವಲ ಒಂದು'ಪ್ರಯೋಗ' ವಷ್ಟೇ ಆಗಿ ಉಳಿಯಿತು. ಇಡೀ ನ್ಯೂ ಇಂಗ್ಲೆಂಡ್, ವೇಗವಾಗಿ ಯಂತ್ರೋದ್ಯಮದ ದವಡೆಯತ್ತ ಧಾವಿಸುತ್ತಿತ್ತು. ಮುಂದೊದಗಲಿದ್ದ ಮೆಕ್ಸಿಕನ್ ಯುದ್ಧದ ಮುನ್ಸೂಚನೆಗಳು ಆ ಮೊದಲೇ ಬೇಕಾದಷ್ಟು ಎದುರಾಗುತ್ತಿದ್ದವು. ಯಾವುದನ್ನು ಥೋರೋ ಮೂರ್ಖತನದ ಚಟುವಟಿಕೆಗಳೆಂದು ದ್ವೇಷಿಸುತ್ತಿದ್ದನೋ ಅವೇ ಚಟುವಟಿಕೆಗಳು-ದಾಸ್ಯದ ಆಚರಣೆಗಳಲ್ಲಿ ಜನ ಮುಳುಗಿದ್ದರು. ದಾಸ್ಯವನ್ನು ಪ್ರತಿಪಾದಿಸುವ ವ್ಯಕ್ತಿಗಳ ಹಾಗೂ ಸಂಸ್ಥೆಗಳ ಶಕ್ತಿಯನ್ನು ಅನ್ಯಾಯಕರವಾದ ರೀತಿಯಲ್ಲಿ ವಿಸ್ತರಿಸುವ ಪರಿಣಾಮ ಈ ಕಾರ್ಯಗಳಲ್ಲಿತ್ತು. ಈ ಜೀತದಾಳುಗಳನ್ನೊಳಗೊಂಡ ಸರ್ಕಾರದೊಂದಿಗೆ ಪ್ರಜೆಯಾಗಿ ಸಂಬಂಧ ಹೊಂದಿರುವುದೂ ಥೋರೋಗೆ ಅವಮಾನಕರವಾಗಿ ತೋರಿತ್ತು. ಈ ವಿಷಯದಲ್ಲಿ ಆತನ ಭಾವನೆಗಳು ಎಷ್ಟು ತೀವ್ರವಾಗಿದ್ದವೆಂದರೆ "ಈ ಜನ ಜೀತದಾಳುಗಳನ್ನು ಹೊಂದಿರುವುದನ್ನು ನಿಲ್ಲಿಸಬೇಕು; ಮೆಕ್ಸಿಕೋದ ಮೇಲೆ ಯುದ್ಧಮಾಡುವುದನ್ನು ನಿಲ್ಲಿಸಬೇಕು; ಅದಕ್ಕಾಗಿ ಜನರು ತಮ್ಮ ಬದುಕನ್ನೇ ತೆರಬೇಕಾದರೂ ಸರಿ" ಎಂದು ಬರೆದ. ಆತ ಕಾಣುತ್ತಿದ್ದ ಆ ಕೇಡು ಎಷ್ಟು ವೇಗವಾಗಿ ಹರಡುತ್ತಿತ್ತೆಂದರೆ,ಅದರ ನಿವಾರಣೆಗಾಗಿ ಕಾನೂನು ಬದಲಿಸಲು ಸಾಧ್ಯವಿರಲಿಲ್ಲ. 'ಕಾನೂನು ಭಂಗ'ದ ಹೊರತು ಆಗ ಅದನ್ನು ವಿರೋಧಿಸುವ ಬೇರೆ ದಾರಿ ಇರಲಿಲ್ಲ. ಆದ್ದರಿಂದ ಇಂಥ ಸರ್ಕಾರಕ್ಕೆ ಮತದಾನ ಮಾಡುವ ಹಕ್ಕು ಪಡೆಯಲು ವಾರ್ಷಿಕ ತೆರಿಗೆಯನ್ನು ಸಲ್ಲಿಸದೆ ಇರುವ ಮೂಲಕ ಶಾಂತಿಯುತ 'ಕಾನೂನು ಭಂಗ'ಕ್ಕೆ ಥೋರೋ ಪ್ರಯತ್ನಿಸಿದ. ಅದರಿಂದಾಗಿ ಒಂದು ದಿನ ಜೈಲಿನಲ್ಲಿ ಸೆರೆಯಾಗಬೇಕಾಯ್ತು.

ಈ ಅನುಭವದಲ್ಲಿ ಆತನೊಳಗೆ ನಡೆದ ತೀವ್ರತಮವಾದ ವಿಚಾರಮಂಥನದ ಪರಿಣಾಮವಾಗಿ ಆತನ ವಿಖ್ಯಾತ ಪ್ರಬಂಧ "ಸಿವಿಲ್ ಡಿಸ್ಒಬೀಡಿಯನ್ಸ್" ರಚಿತವಾಯಿತು. ವಾಲ್ಡನ್ ರಚನೆಯಾದ (1845-47)ರ ಅವಧಿಗೇ ಸೇರುವ ಈ ಪ್ರಬಂಧದಲ್ಲಿ ಥೋರೋ ತನ್ನ ಪರಮಾರ್ಥ ದರ್ಶನ ತತ್ವವನ್ನೂ ವ್ಯಕ್ತಿವಾದವನ್ನೂ ರಾಜನೀತಿಗೆ ಹೊಂದಿಸಲು ಯತ್ನಿಸುತ್ತಾನೆ. ಪ್ರಜಾಪ್ರಭುತ್ವದಲ್ಲಿ ಮತವೆಂಬುದು ನಿಷ್ಪರಿಣಾಮಕಾರಿ ಸಾಧನ ಎಂದು ಥೋರೋ ಮತ ಚಲಾಯಿಸುತ್ತಿರಲಿಲ್ಲ. "ವ್ಯಾವಹಾರಿಕವಾಗಿ ಒಬ್ಬ ನಾಗರಿಕ ಪ್ರಜೆಯಾಗಿ" ಥೋರೋ ಸರ್ಕಾರ ಬೇಡವೆಂದು ಹೇಳದೆ "ಈ ಕ್ಷಣವೇ ಇನ್ನೂ ಉತ್ತಮ ಸರ್ಕಾರ" ಬೇಕೆಂದು ಒತ್ತಾಯಿಸುತ್ತಾನೆ. ವಾಲ್ಡನ್‌ನಲ್ಲಿರುವಂತೆ, ಇಲ್ಲೂ ಆಧ್ಯಾತ್ಮದ ಅಮೂರ್ತ ಗ್ರಹಿಕೆಗಳನ್ನು ಅಳವಡಿಸಲೆತ್ನಿಸುತ್ತಾನೆ. "ವ್ಯಕ್ತಿಪ್ರಜ್ಞೆಯೇ ರಾಜಕೀಯ ಕಾರ್ಯಾಚರಣೆಗೆ ನಿಜವಾದ ಮಾರ್ಗದರ್ಶಿ." "ಮನುಷ್ಯ ಮನುಷ್ಯನಲ್ಲಿ ನಂಬಿಕೆಯಿಡಬೇಕು. ಪ್ರತಿಯೊಬ್ಬ ಮನುಷ್ಯ ತನ್ನ ಸರಿ-ತಪ್ಪುಗಳನ್ನು ತಾನೇ ನಿರ್ಧರಿಸಬಲ್ಲವನಾಗಬೇಕು," ಎಂಬ ಥೋರೋನ ವಿಚಾರಗಳು ಆಗ ಪ್ರಚಲಿತವಿದ್ದ ಪ್ರಜಾಪ್ರಭುತ್ವದ ವಿರುದ್ಧದ ಪ್ರತಿಕ್ರಿಯೆಗಳಾಗಿದ್ದವು. ಬಹುಮತದ ಆಧಾರದಿಂದ ನಡೆಸಲ್ಪಡುವ ಆಳ್ವಿಕೆಯ ದೋಷಗಳಿಗೆ ಆತ ಪ್ರತಿಕ್ರಿಯಿಸುತ್ತಿದ್ದ. ಆದರೆ ಬಹುಜನರು ತಪ್ಪು ಮಾಡಿದ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ತನ್ನ ಪ್ರಜ್ಞೆಯ ಅಳವಿನಲ್ಲಿ ತಳೆದ ತೀರ್ಮಾನ ಅಥವಾ ಅಲ್ಪಸಂಖ್ಯಾತ ನಿರ್ಣಯವನ್ನು ನ್ಯಾಯಯುತವಾದವ್ದೆಂದು ತೀರ್ಮಾನಿಸಲು ಇರಬೇಕಾದ ತತ್ವಾಧಾರಗಳೇನು ಎಂದುದನ್ನು ಥೋರೋ ಎದುರಿಸಲಿಲ್ಲ. ಬದಲಾಗಿ "ಒಬ್ಬ ಮನುಷ್ಯನಿಗೆ ಯಾವುದೇ ತಪ್ಪನ್ನು ಅಥವಾ ಅಸಂಖ್ಯಾತ ತಪ್ಪುಗಳನ್ನು ನಿವಾರಿಸುತ್ತಿರುವುದೊಂದೇ ಕರ್ತವ್ಯವಲ್ಲ; ತನ್ನನ್ನು ತೊಡಗಿಸಿಕೊಳ್ಳಲೇಬೇಕಾದ ಬೇರೆ ಕಾರ್ಯಯೋಜನೆಗಳು ಅವನಿಗಿರಬಹುದು. ಆದರೆ ಅದರ ಬಗ್ಗೆ ಇನ್ನು ತಾನು ಚಿಂತಿಸಲಾರೆ ಎನಿಸಿದಾಗ ಕನಿಷ್ಠ ಅದರಿಂದ ಕೈತೊಳೆದುಕೊಳ್ಳುವುದೇ ಕರ್ತವ್ಯವಾದೀತೇ ಹೊರತು ಅದನ್ನು ಬೆಂಬಲಿಸುವುದಲ್ಲ" ಎಂದು ವಾದಿಸಿದ.

ಈ ಪ್ರಶ್ನೆ ಹಾಗೇ ಉಳಿದರೂ, 'ಸಮಾಜದ ಕೊಳಕು ಸಂಸ್ಥೆಗಳಿಂದ ಕೈ ಹೊಲಸು ಮಾಡಿಕೊಳ್ಳಬಯಸದೆ' ಪ್ರಕೃತಿಯ ಬಳಿ ತನ್ನ ಕರ್ತವ್ಯವಿದೆ ಎಂದು ಭಾವಿಸಿದ್ದ ಥೋರೋ ಈಗ 'ಅಹಿಂಸಾತ್ಮಕ ಕಾನೂನುಭಂಗ"ದ ಕಾರ್ಯಾಚರಣೆಯ ಮೂಲಕ ಬೇರೊಂದು ವಿಚಾರಧಾರೆಯನ್ನು ಪ್ರವೇಶಿಸಿದ್ದ. ಸಾಮಾಜಿಕ ಆಗುಹೋಗುಗಳಿಗೆ ವ್ಯಕ್ತಿಯು ತನ್ನ ಹೊಣೆಗಾರಿಕೆಯನ್ನು ಹೊಂದಿರುತ್ತಾನೆ ಎಂಬ ಈ ಸಿದ್ಧಾಂತ ನಿಜವಾಗಿ ವಿಶಿಷ್ಟ ಬೆಳವಣಿಗೆಯಾಯಿತು. ವ್ಯಕ್ತಿಸ್ವಾತಂತ್ರ್ಯಕ್ಕೆ ಧಕ್ಕೆಯೊದಗುವಂತೆ ಸರ್ಕಾರ ವ್ಯಕ್ತಿಯ ತತ್ವಗಳಲ್ಲಿ ತಲೆತೂರಿಸಿದಾಗ ಪ್ರತಿಭಟಿಸಿ, ತನ್ನ ಹಕ್ಕು ಕಾಯ್ದುಕೊಳ್ಳುವ ಕಾರ್ಯ–ಅನಿವಾರ್ಯವೆಂದಾತ ಗುರುತಿಸಿದ್ದ. ಒಬ್ಬ ವ್ಯಕ್ತಿಯನ್ನು ಹೀಗೆ ರಾಜಕೀಯವಾಗಿ ದಾಸ್ಯಕ್ಕೊಳಪಡಿಸುವ ಮೂಲಕ ಮಾನವತೆ–ಶಾಶ್ವತ ತತ್ವಗಳು ನಾಶವಾಗುತ್ತವೆ, ಮನುಷ್ಯ ಇನ್ನು ಎಂದೆಂದೂ ತನ್ನ ವಿನಾಶಕ್ಕಾಗಿ ರಕ್ತಹರಿಸಬೇಕಾಗಿ ಬರಬಹುದು ಎಂದಾತ ಗುರುತಿಸಿದ.

ವಸ್ತುತಃ ಥೋರೋನ ರಾಜಕೀಯದ ಸಂಬಂಧ ತೀರಾ ತೆಳುವಾಗಿದ್ದು, ಆತ ತೋರಿದ ಈ ಪ್ರತಿಭಟನೆ ಕೂಡ ಬಹುಮಟ್ಟಿಗೆ "ರೆಟರಿಕಲ್" ಎಂಬುದು ನಿಜವಾದರೂ, ಸುತ್ತಲಿನ ರಾಜಕೀಯ

ಆಗುಹೋಗುಗಳ ಬಗ್ಗೆ ತನ್ನ ನಿಲುವೇನು ಎಂಬುದನ್ನು ಖಚಿತಪಡಿಸಬೇಕು ಹಾಗೂ ಜನರಿಗೆ ತಲುಪಿಸಬೇಕೆಂದು ಆತನಿಗೆ ತೀವ್ರವಾಗಿ ಅನ್ನಿಸಿದ್ದು ಗಮನಾರ್ಹ.

ಮುಂದಿನ ವರ್ಷಗಳಲ್ಲಿ ಥೋರೋ ಈ ದಾಸ್ಯವಿಮೋಚನೆಯ ಸಮಸ್ಯೆಯಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಕೊಳ್ಳುತ್ತ ಹೋದ. 'ಸ್ಲೇವರಿ ಇನ್ ಮೆಸಾಚುಸೆಟ್ಸ್' ಮತ್ತು 'ಎ ಪ್ಲೀ ಫಾರ್ ಕ್ಯಾಪ್ಟನ್ ಜಾನ್ ಬ್ರೌನ್' ಎಂಬ ಇನ್ನೆರಡು ಪ್ರಬಂಧಗಳಲ್ಲಿ 'ವಾಲ್ಡನ್'ನ ತಂಪುಲೋಕಕ್ಕೆ ವಿರುದ್ಧವಾದ ತೀವ್ರವಾದ ಪರಿತಾಪ, ವೇದನೆ, ತಿರಸ್ಕಾರಗಳು ಹೊರಹೊಮ್ಮುತ್ತವೆ. ಸರ್ಕಾರದಿಂದ ಹೊರಗುಳಿಯುವ ನಿರ್ಲಿಪ್ತ ಜನರನ್ನು, ಹಾಗೂ 'ಕೊಳವೆ ಕನಸು'ಗಳನ್ನು ಕಾಣುವ ಸರ್ಕಾರಕ್ಕೆ ವಿದಾಯಹೇಳಿ ತನ್ನ ಹಿಂದಿನ ನಕಾರಾತ್ಮಕ ಧೋರಣೆಯನ್ನು ಪರಿತ್ಯಜಿಸುತ್ತಾನೆ. "ಜನರ ಸಮೂಹಗಳಲ್ಲಿ ಗುಣವೆನ್ನುವುದು ಕಿಂಚಿತ್ತೂ ಇಲ್ಲ" ಎನ್ನುತಿದ್ದವನು ಈಗ "ಜನತೆಯ ಭಾವನೆಗಳನ್ನು ನಂಬಬೇಕು. ಅವರ ಮತಗಳಲ್ಲಿ, ಎಷ್ಟೇ ಕಡಿಮೆ ಮಟ್ಟದ್ದಿರಲಿ, ನಿಜವಾಗಿ ಮೌಲ್ಯಯುತವಾದ್ದನ್ನು ನೀವು ಪಡೆಯುತ್ತೀರಿ" ಎಂದು ಸರ್ಕಾರಕ್ಕೆ ಸಲಹೆಮಾಡುತ್ತಾನೆ; ಈಗ ಅವನೆದುರು ರಾಜ್ಯವೆನ್ನುವುದು ಹಿಂದಿನಂತೆ ಅಮೂರ್ತ ತತ್ವವಲ್ಲ. ಬದಲಾಗಿ ಸಾಕಾರವಾಗಿ, ವಾಸ್ತವವಾಗಿ ಅಸ್ತಿತ್ವದಲ್ಲಿರುವ ಮೆಸಾಚುಸೆಟ್ಸ್‌ನ, ರಾಜ್ಯವಾಗಿದೆ. "ಇದು ಮಲಗುವ ಕಾಲವಲ್ಲ, ಪರಂಪರೆಯಿಂದ ಆಸ್ತಿಯಾಗಿ ಗಳಿಸಿದ್ದ ಸ್ವಾತಂತ್ರ್ಯವನ್ನೆಲ್ಲ ನಾವು ಬಳಸಿಕೊಂಡುಬಿಟ್ಟಿದ್ದೇವೆ. ನಾವು ಪ್ರಾಣವುಳಿಸಿಕೊಳ್ಳಬೇಕೆಂದಿದ್ದರೆ, ಅದಕ್ಕಾಗಿ ನಾವು ಹೋರಾಡಬೇಕು"

ನೀಗ್ರೋದಾಸ್ಯ ನಿರ್ಮೂಲನಾವಾದಿಗಳು ದಾಸ್ಯವನ್ನೊಪ್ಪಿರುವ ರಾಜ್ಯಗಳನ್ನು ಸದಸ್ಯರನ್ನಾಗಿ ಹೊಂದಿರುವ ಯೂನಿಯನ್‌ನಿಂದ ಮೆಸಾಚುಸೆಟ್ಸ್ ತನ್ನ ಸದಸ್ಯತ್ವ ಹಿಂದಕ್ಕೆ ಪಡೆಯಬೇಕೆಂದು ವಾದಿಸುತಿದ್ದರು. ಈ ಕ್ರಿಯೆಯಿಂದ ಒಂದು ರೀತಿ ಪ್ರತೀಕಾರವಾದರೂ ಉಳಿದೆಲ್ಲ ಸ್ಥಳಗಳಲ್ಲಿ ನಿರಂಕುಶವಾದ ದಾಸ್ಯದ ಮುಂದುವರಿಕೆಗೆ ಅನುಕೂಲವೇ ಆಗುತ್ತಿತ್ತು. ಆದರೆ ಈ ಪರಿಣಾಮದ ಬಗ್ಗೆ ಗಮನಿಸದೆ ಥೋರೋ ಈ ಅಬಾಲಿಷನ್‌ವಾದಿಗಳನ್ನು ಬೆಂಬಲಿಸಿದ್ದ. ಜಾನ್ ಬ್ರೌನ್‌ನನ್ನು ಬೆಂಬಲಿಸುವಾಗ "ದಾಸ್ಯವನ್ನು ಕಡಿಮೆಮಾಡುವುದಕ್ಕಾಗಿ ದಾಸ್ಯವಾದಿಗಳ ವ್ಯವಹಾರದಲ್ಲಿ ಬಲವಂತವಾಗಿ ಕೈಹಾಕುವ ಪರಿಪೂರ್ಣಹಕ್ಕು" ಒಬ್ಬ ವ್ಯಕ್ತಿಗೆ ಇದ್ದೇ ಇದೆ ಎಂದು ಥೋರೋ ನಂಬಿದ್ದ. ಅಷ್ಟೇ ಅಲ್ಲ "ದಾಸ್ಯವನ್ನು ಶೀಘ್ರವಾಗಿ ವಿಮೋಚನೆಗೊಳಿಸುವಲ್ಲಿ ಯಶಸ್ವಿಯಾದವನ ಕಾರ್ಯವಿಧಾನವನ್ನು ಪ್ರಶ್ನಿಸಲು ನಾನು ಮುಂದಾಗಲಾರೆ" "ಅಸ್ತ್ರವಲ್ಲ; ಅದನ್ನು ನೀವು ಯಾವ ಉದ್ದೇಶದಿಂದ ಬಳಸುತ್ತೀರಿ ಎಂಬುದೇ" ಇಲ್ಲಿಯ ಮುಖ್ಯಪ್ರಶ್ನೆ, ಎಂದು ಸಾರಿ ಗುರಿ ನ್ಯಾಯವಾಗಿದ್ದರೆ, ಅದರ ಸಾಧನೆಗೆ ಅನುಸರಿಸಿದ ದಾರಿ ತನ್ನಷ್ಟಕ್ಕೇ ನ್ಯಾಯಯುತವಾಗಿರುತ್ತದೆ ಎಂಬ ಸಿದ್ಧಾಂತವನ್ನೇ ಆತ ಪ್ರತಿಪಾದಿಸಿದ್ದ. 'ಶಾಂತಿಯುತ ಕಾನೂನು ಭಂಗ'ವಾದಿ ಹಿಂಸೆಯೂ ಕ್ರಾಂತಿಗೆ ಸರಿಯಾದ ದಾರಿ ಎಂಬಲ್ಲಿಗೆ ಬಂದು ತಲುಪಿದ್ದ.

ರಾಜನೀತಿತಜ್ಞರು ಥೋರೋನ ಸಿದ್ಧಾಂತಗಳಲ್ಲಿರುವ ಪರಸ್ಪರ ವಿರುದ್ಧಾಂಶಗಳನ್ನೂ ಆತನ ರಾಜಕೀಯ ಅಪ್ರಬುದ್ಧತೆಯನ್ನೂ ಎತ್ತಿ ತೋರಿಸಬಹುದು. ಅಲ್ಲದೆ ಇಂದಿನ ರಾಜಕಾರಣದ ದೃಷ್ಟಿಯಿಂದ ಥೋರೋನ ವಿಚಾರಗಳನ್ನು ಅಳೆಯುವುದು ಸರಿಯಲ್ಲ. ಎಲ್ಲೆಲ್ಲೂ ಹಿಂಸಾಚರಣೆ ವಿಪ್ಲವಗಳು ತುಂಬಿದ್ದ ಆ ಅವಧಿಯಲ್ಲಿ ಹಿಂಸೆಗೆ ಹಿಂಸೆಯೇ ಉತ್ತರವೆಂದು ಥೋರೋ ನಂತಹ

ದಾರ್ಶನಿಕನಿಗೂ ಅನ್ನಿಸಿರಬಹುದು. ಆತ ಸಾರಿದ "ಅಹಿಂಸಾತ್ಮಕ ಕಾನೂನುಭಂಗ"ವನ್ನು ಗಾಂಧೀಜಿ, ದಕ್ಷಿಣ ಆಫ್ರಿಕಾದಲ್ಲಿ, ಮುಂದೆ ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಪ್ರಬಲ ಅಸ್ತ್ರವಾಗಿ ಬಳಸಿ ಯಶಸ್ವಿಯಾದದ್ದು ಇತಿಹಾಸ. ವ್ಯಕ್ತಿ ಸ್ವಾತಂತ್ರ್ಯ-ಸಾಮೂಹಿಕ ಪ್ರಗತಿ, ಹಿಂಸೆ-ಅಹಿಂಸೆಗಳ ವಿಚಾರವಾಗಿ ಆತನ ವಿಚಾರಗಳು, ಅಥವಾ ಆತನ ಸೋಲು ಕೂಡ ಇಂದೂ ಸಮಸ್ಯೆಯನ್ನೊಡ್ಡುತ್ತವೆ. ನಿರಂಕುಶ ಪ್ರಭುತ್ವದ ನಿರಂತರವಾದ ಹಿಂಸಾಚರಣೆ, ದಬ್ಬಾಳಿಕೆ ಪ್ರಬಲಶಕ್ತಿರಾಷ್ಟ್ರಗಳ ಅಧಿಕಾರಸ್ಪರ್ಧೆಯ ನಡುವೆ ಹೊತ್ತಿ ಉರಿವ ಜಗತ್ತಿಗೆ ಇಂದೂ ಆ ಸಮಸ್ಯೆ ಇದೆ. ಬದುಕಿನ ಕೊನೆಯಲ್ಲಿ ಥೋರೋ ಎಷ್ಟೊಂದು ತಪ್ತನಾಗಿದ್ದನೆಂದರೆ ಬಹುಶಃ ಮುಂದೆಂದೂ ಅವನ ಬಾಲ್ಯದ ಉನ್ನತ ಆನಂದಕ್ಕೆ ಸೆಳೆದೊಯ್ಯುವ ಸುಂದರ ಬೆಳಗುಗಳು ಬರಲಿಲ್ಲ. ಆದರೆ ಕೊನೆಯವರೆಗೆ ತನ್ನ ಸ್ವಾತಂತ್ರ್ಯದ ಪರವಾಗಿ ಹೋರಾಡಿದ ಆತನ ನೈತಿಕ ಪ್ರಾಮಾಣಿಕತೆ ಆಧ್ಯಾತ್ಮಿಕ ಸ್ಥಿರತೆ, ಪ್ರಶ್ನಿಸಲೇ ಬೇಕೆನ್ನುವ ನಿಜವಾದ ಕಳಕಳಿಯ ಹಿಂದೆ ಎಲ್ಲ ಮಾನವರ ಹಿತದ ಆಕಾಂಕ್ಷೆಯಿತ್ತು.

ಗ್ರಂಥ ಋಣ :

1. Walden : Henry David Thoreau/ S. Chand & CompanyLtd/ New Delhi/Second Indian reprint/1964.
2. ವಾಲ್ಡನ್ : ಹೆನ್ರಿಡೇವಿಡ್ ಥೋರೋ : ಅನುವಾದ : ದೇವುಡು ನರಸಿಂಹ ಶಾಸ್ತ್ರಿ/ ಸಾಹಿತ್ಯ ಅಕಾಡೆಮಿ/ಹೊಸದೆಹಲಿ/1964.
3. ಥೋರೋ : ವಿಲಿಯಂ ಕಾಂಡ್ರಿ : ಅನುವಾದ : ಎಂ. ಯಾಮುನಾಚಾರ್ಯ/ಓರಿಯಂಟ್ ಲಾಂಗ್ ಮನ್ಸ್ / ನವದೆಹಲಿ/1964.
4. The walk to the land's end : Henry David Thoreau/ The new American Library/U.S.A./1965.
5. Thoreau : A collection of critical essays : Twentieth Century views Series, ed. by Sherman Paul/U.S.A./ 1962.
6. Emerson and Thoreau : Transcendetalists in Conflict- Joel Porte/Lalvani publishing House/New Delhi/1969.

ಕ್ರೆಡಿಟ್ ಕಾರ್ಡ್ ಪದ್ಧತಿ: ಒಂದು ಟಿಪ್ಪಣಿ

ಜಿ.ಎನ್. ಮಲ್ಲಿಕಾರ್ಜುನ

ಹಲವು ವಿಪರ್ಯಾಸಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ಭಾರತದ ಮಿಶ್ರ ಅರ್ಥ ವ್ಯವಸ್ಥೆ ಪಾಶ್ಚಿಮಾತ್ಯ ರಾಷ್ಟ್ರಗಳು ಹುಟ್ಟುಹಾಕಿ, ಬೆಳಸಿ, ಬಿಸಾಕಿದ ತಂತ್ರಜ್ಞಾನ, ಆರ್ಥಿಕ ನೀತಿ, ನಿರ್ವಹಣಾ ಕೌಶಲ್ಯಗಳನ್ನು ಯಥಾವತ್ತಾಗಿ ಅನುಸರಿಸುತ್ತಾ ಬಂದಿದೆ. ನಾಗರೀಕತೆ ಬೆಳೆದಂತೆಲ್ಲ ಜೀವನದ ಮೌಲ್ಯಗಳು ವಿಕಾರಗೊಳ್ಳುತ್ತಿರುವುದರಿಂದ ಬದುಕಿಗೆ ಭದ್ರತೆ ನೀಡುವ ನಿಟ್ಟಿನಲ್ಲಿ ಅವಿರತ ಪ್ರಯತ್ನಗಳು ಸಾಗಿವೆ. ಮನುಷ್ಯನ ಆರ್ಥಿಕ ಬದುಕಿನಲ್ಲಿ ಹಣದ ಪಾದಾರ್ಪಣೆ ಹಲವಾರು ಸಮಸ್ಯೆಗಳಿಗೆ ಪರಿಹಾರವಾಯಿತು. ವಸ್ತುವಿನಿಮಯ ಪದ್ಧತಿಯಲ್ಲಿದ್ದ ದೋಷಗಳನ್ನು ಪರಿಹರಿಸುವುದರ ಜೊತೆಗೆ ಮೌಲ್ಯದ ಶೇಖರಣೆಯಾಗಿ (Store of Vlaue), ವರ್ಗಾವಣೆಯಾಗಿ, ಹಣ ತನ್ನ ಪಾತ್ರವನ್ನು ವಿಸ್ತರಿಸಿಕೊಳ್ಳುತ್ತಿದ್ದಂತೆಯೇ ನಾಗರೀಕತೆ ಬೆಳೆದಂತೆಲ್ಲ ಹಣದ ಸ್ಥಾನವನ್ನು ತುಂಬುವಂತಹ ಇತರೆ ವಿಧಾನಗಳಾದ ಚೆಕ್ (Cheque), ಹುಂಡಿ (Bill of Exchange), ಡಿಮ್ಯಾಂಡ್ ಡ್ರಾಫ್ಟ್ ಮುಂತಾದುವುಗಳು ಅಸ್ತಿತ್ವಕ್ಕೆ ಬಂದವು. ಇವುಗಳ ಉದ್ದೇಶ ಹಣದ ಉಪಯೋಗದಲ್ಲಿದ್ದ ಕೆಲವೊಂದು ನ್ಯೂನತೆಗಳನ್ನು ಬಗೆಹರಿಸುವುದೇ ಆಗಿದೆ. ಇಂತಹ ಹಲವಾರು ವಿಧಾನಗಳಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅಸ್ತಿತ್ವಕ್ಕೆ ಬಂದು, ಹಳಸಲಾಗಿ ಭಾರತದಲ್ಲಿ ಇತ್ತೀಚೆಗೆ ಬೆಳಕಿಗೆ ಬರುತ್ತಿರುವ ಕ್ರೆಡಿಟ್ ಕಾರ್ಡ್ ಪದ್ಧತಿಯೂ ಒಂದು. ಹಣದ ಗಂಟನ್ನು ಬೆನ್ನಿಗೆ ಕಟ್ಟಿಕೊಂಡು ಮಾರುಕಟ್ಟೆಯಲ್ಲಿ ಸರಕನ್ನು ಅಥವಾ ಉಪಯುಕ್ತ ವಸ್ತುಗಳನ್ನು ಕೊಳ್ಳುವಲ್ಲಿ ಇರುವ ಅನಾನುಕೂಲತೆಗಳನ್ನು ಗುರುತಿನ ಚೀಟಿಯನ್ನು ಹೋಲುವಂತಹ, ಬ್ಯಾಂಕೊಂದರಿಂದ ನೀಡಲ್ಪಟ್ಟ ಸಾಲಚೀಟಿ (Credit Card) ಯೊಂದು ಬಗೆಹರಿಸುತ್ತದೆ. ಈ ಪದ್ಧತಿಯಲ್ಲಿ, ನಮಗೆ ಬೇಕಾದ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಕೊಂಡಾಗ, ಹೋಟೆಲೊಂದರಲ್ಲಿ ತಿಂದು ಕುಡಿದು ಹೊರಬರುವಾಗ, ಟ್ಯಾಕ್ಸಿಯವನಿಗೆ ಬಾಡಿಗೆ ಕೊಡುವಾಗ ಹಣ ಕೊಡಬೇಕಾಗಿಲ್ಲ, ಬದಲಾಗಿ ಬ್ಯಾಂಕೊಂದು ನಮ್ಮ ಪಾವತಿಮಾಡಬಹುದಾದ ಸಾಮರ್ಥ್ಯವನ್ನು ದೃಢೀಕರಿಸಿ ನೀಡಿರುವ ಕ್ರೆಡಿಟ್ ಕಾರ್ಡನ್ನು ತೋರಿಸಿ ರಸೀತಿಗಳಿಗೆ ಸಹಿಹಾಕಿ ಬಂದರೆ ಸಾಕು ಬ್ಯಾಂಕು ನಮ್ಮ ಪರವಾಗಿ ಹಣನೀಡುತ್ತದೆ. ತಿಂಗಳಿಗೊಮ್ಮೆ ಈ ಖರ್ಚಿನ ಮೊತ್ತವನ್ನು ಬ್ಯಾಂಕಿಗೆ ಸಂದಾಯ ಮಾಡಬಹುದು, ಅಥವಾ ಬ್ಯಾಂಕಿನ ನಮ್ಮ ಖಾತೆಯಲ್ಲಿ ಠೇವಣಿಯಿದ್ದರೆ ಆ ಖಾತೆಯಿಂದ ಸಂದಾಯವಾಗುತ್ತದೆ, ಹಾಗಾಗಿ ತಿಂಗಳು ಪೂರ್ತಿ ನಮ್ಮ ಪರವಾಗಿ ಬ್ಯಾಂಕು ಖರ್ಚುಗಳ ಹಣ

ಸಂದಾಯಮಾಡುವುದರಿಂದ ಆ ಒಂದು ತಿಂಗಳವರೆಗೆ ಆ ಹಣ ಬ್ಯಾಂಕು ನಮಗೆ ನೀಡಿದ ಸಾಲವಾಗುತ್ತದೆ. ಸದಾ ನಗದು ಹಣವನ್ನಿಟ್ಟುಕೊಂಡು ತಿರುಗಾಡುವಲ್ಲಿ ಇರುವ ಅಪಹರಣದ, ಕಳೆದುಕೊಳ್ಳುವ, ಎಣಿಕೆ ಮಾಡುವ ತೊಂದರೆಗಳು ಈ ವಿಧಾನದಲ್ಲಿ ಇಲ್ಲದಿರುವ ಪ್ರಯೋಜನವನ್ನು ಅಲ್ಲಗಳೆಯುವಂತಿಲ್ಲವಾದಾಗ್ಯೂ ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶ ಎಂದರೆ ಬ್ಯಾಂಕಿನ ಕಾರ್ಯಚಟುವಟಿಕೆಯಲ್ಲಿಯ ಪ್ರಮುಖ ಬದಲಾವಣೆ ಮತ್ತು ಭಾರತದ ಸಂದರ್ಭದಲ್ಲಿ ಅರ್ಥವ್ಯವಸ್ಥೆಯ ಮೇಲೆ ಇದರ ಪರಿಣಾಮ. ಕೆಲವು ಪ್ರಮುಖ ರಾಷ್ಟ್ರೀಕೃತ ಬ್ಯಾಂಕುಗಳು ಅನುಷ್ಠಾನಗೊಳಿಸಿರುವ ಈ ವ್ಯವಸ್ಥೆ ಮೊದಲಿಗೆ ವ್ಯಾಪಾರಸ್ಥರಿಗೆ, ಉದ್ದಿಮೆದಾರರಿಗೆ, ಮತ್ತು ಅಧಿಕಾರಿ ಅಥವಾ ಉನ್ನತ ನೌಕರ ವರ್ಗದವರಿಗೆ ಸೀಮಿತವಾಗಿದ್ದು ಇತ್ತೀಚೆಗೆ ಕೃಷಿ ಪರಿಕರಗಳನ್ನು ಕೊಳ್ಳುವ ಸಲುವಾಗಿ ರೈತರಿಗೂ ವಿಸ್ತರಿಸಲಾಗಿದೆ. ಆದರೆ ಸಾಕಷ್ಟು ಠೇವಣಿ ಇಡಲಾರದ, ಬ್ಯಾಂಕಿನ ನಿರ್ವಾಹಕರ ಮರ್ಜಿಗೆ ಒಳಗಾಗದ ಸ್ಥಿತಿವಂತರಲ್ಲದವರು ಈ ಪದ್ಧತಿಯ ಕಕ್ಷೆಯಿಂದ ಹೊರಗೇ ಉಳಿಯುತ್ತಾರೆ.

ಪಾಶ್ಚಿಮಾತ್ಯರ ಆರ್ಥಿಕ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಈ ವ್ಯವಸ್ಥೆಯನ್ನು ಅಲ್ಲಿನ ಕೆಲ ಪ್ರಜ್ಞಾವಂತರು,ದೂರದೃಷ್ಟಿಯುಳ್ಳವರು, ವಿರೋಧಿಸುತ್ತಾ ಕ್ರೆಡಿಟ್‌ಕಾರ್ಡುಗಳ ಬದಲಾಗಿ ನೈಜ ಹಣವನ್ನೇ ಉಪಯೋಗಿಸುತ್ತಾರೆ. ಇದಕ್ಕೆ ಅವರುಗಳು ನೀಡುವ ಕಾರಣವೆಂದರೆ ಈ ಸಾಲ ಚೀಟಿಗಳು ನಮ್ಮ ಆದಾಯಕ್ಕಿಂತ ಹೆಚ್ಚು ಖರ್ಚುಮಾಡಲು ಪುಸಲಾಯಿಸುತ್ತವೆ. ಅನಾವಶ್ಯಕವೆನಿಸುವ ವೈಭವಯುತ ವಸ್ತುಗಳೂ ಸಹ ನಾವು ಕೊಳ್ಳುವ ಸರಕುಗಳ ಸಾಲಿನಲ್ಲಿ ಬರುತ್ತವೆ. ಹಾಗಾಗಿ ವ್ಯಕ್ತಿ ತನ್ನ ಆದಾಯದಲ್ಲಿನ ಕೊರತೆಯನ್ನು ನೀಗಿಸಲು ಸದಾ ಹೆಣಗಬೇಕಾಗುವುದು ಮತ್ತು ಈ ಕಾರ್ಡುಗಳಿಗೆ ಅನಿವಾರ್ಯವಾಗಿ ಶರಣು ಹೋಗಬೇಕಾಗುತ್ತದೆ. ಈ ಕಾರಣದಿಂದಾಗಿಯೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮುಖ್ಯವಾಗಿ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಈ ವ್ಯವಸ್ಥೆ ರೂಪುಗೊಂಡಿದ್ದು. ಕೈಗಾರಿಕಾ ಕ್ರಾಂತಿಯಿಂದಾಗಿ ಉತ್ಪಾದನೆ ಅಧಿಕಗೊಂಡು ಮಾರುಕಟ್ಟೆಗಾಗಿ ಉದ್ಯಮಿಗಳು ಪರದಾಡುವಾಗ ಈ ಸರಕನ್ನು ಕೊಳ್ಳಲು ಗ್ರಾಹಕನಿಗೆ ಅನುವು ಮಾಡಿಕೊಳ್ಳಲು ಮತ್ತು ವ್ಯಕ್ತಿಯ ಬೇಡಿಕೆಯನ್ನು ಹೆಚ್ಚಿಸುವುದರ ಸಲುವಾಗಿ ಕ್ರೆಡಿಟ್ ಕಾರ್ಡುಗಳನ್ನು ಬ್ಯಾಂಕುಗಳ ನೀಡಿಕೆಯು ಒಂದು ಮಾರ್ಗವಾಗಿ ಈ ಕಾರ್ಡುಗಳು ಚಲಾವಣೆಗೆ ಬಂದವು. ಇವುಗಳನ್ನು ಮೊದಲಬಾರಿಗೆ ಜಾರಿಗೊಳಿಸಿದ ದೇಶಗಳಲ್ಲಿ ಉತ್ಪಾದನೆ ಮತ್ತು ಹಣದ ಪೂರೈಕೆಯ ನಡುವೆ ಹೆಚ್ಚು ಕಡಿಮೆ ಸಮತೋಲನವಿದ್ದುದರಿಂದ ಅರ್ಥವ್ಯವಸ್ಥೆಯ ಮೇಲೆ ತತ್‌ಕ್ಷಣದ ವ್ಯತಿರಿಕ್ತ ಪರಿಣಾಮವಾಗಲಿಲ್ಲ. ಆದಾಗ್ಯೂ ಈ ಪದ್ಧತಿಗೆ ಕಡಿವಾಣ ಹಾಕದೆ ಹೋದಲ್ಲಿ ಬೇಡಿಕೆ ಪ್ರೇರಿತ ಹಣದುಬ್ಬರದ ಹೆಚ್ಚುವಿಕೆಯ ಸಾಧ್ಯತೆಯಿದ್ದೇಯಿದೆ. ಇದಕ್ಕೆ ಮುಖ್ಯ ಕಾರಣ, ಅಲ್ಪಕಾಲಾವಧಿಯಲ್ಲಿ ಕ್ರೆಡಿಟ್ ಕಾರ್ಡುಗಳ ಚಲಾವಣೆಯಿಂದ ಪತ್ತು ಅಧಿಕಗೊಂಡು ತನ್ಮೂಲಕ ಅದು ಗ್ರಾಹಕರ ಕೊಳ್ಳುವ ಚೈತನ್ಯವನ್ನು ಹೆಚ್ಚಿಸುತ್ತದೆ. ಇದರಿಂದ ಬೇಡಿಕೆ ಹೆಚ್ಚಾಗಿ ಬೆಲೆಗಳು ಏರುತ್ತವೆ.

ಭಾರತದಲ್ಲಿ ವಾಣಿಜ್ಯ ಬ್ಯಾಂಕುಗಳು ರಾಷ್ಟ್ರೀಕರಣದ ನಂತರ ತಮ್ಮ ಬದಲಾದ ಸಾಲ ನೀಡಿಕೆಯ ನೀತಿಯಿಂದ ಮತ್ತು ನಿರ್ವಹಣೆಯಲ್ಲಿನ ಅಶಿಸ್ತಿನಿಂದಾಗಿ ನಷ್ಟದತ್ತ ದಾಪುಗಾಲು ಹಾಕುತ್ತಿದ್ದು ತಮ್ಮ ಮೂಲ ಕಾರ್ಯಗಳಿಗಿಂತ ಇತರೆ ಸೇವಾ ಕಾರ್ಯಗಳಿಗೆ (utility service) ಒತ್ತು ಕೊಡುತ್ತಿರುವುದಕ್ಕೆ ಕ್ರೆಡಿಟ್ ಕಾರ್ಡುಗಳೂ ನಿದರ್ಶನವಾಗಿವೆ. ಗ್ರಾಹಕರಿಗೆ ಅನುಕೂಲ ಮಾಡಿಕೊಡುವುದರ ಜೊತೆಗೆ ತಮ್ಮ ಮೂಲಭೂತ ಕಾರ್ಯವಾದ ಸಾಲ ನೀಡಿಕೆಯಿಂದ ಆಗುವ ನಷ್ಟವನ್ನು ಇಂತಹ ಸೇವಾಕಾರ್ಯಗಳ ಮೇಲೆ ವಿಧಿಸುವ ಶುಲ್ಕದಿಂದ ಪರಿಹರಿಸಿಕೊಳ್ಳುವುದು

ನಮ್ಮ ಬ್ಯಾಂಕುಗಳ ಬದಲಾದ ಉದ್ದೇಶಗಳಲ್ಲಿ ಒಂದು ಎಂದು ಹೇಳಬಹುದು. ಈ ಸೇವಾ ಶುಲ್ಕ ಗ್ರಾಹಕನಿಗೆ ಹೊರೆಯಾದರೂ ಬ್ಯಾಂಕಿಗೆ ಹೆಚ್ಚು ಲಾಭ ತರುತ್ತದೆ. ಜೊತೆಗೆ ಈ ಬ್ಯಾಂಕುಗಳು ಭಾರತೀಯ ರಿಜರ್ವ್‌ಬ್ಯಾಂಕಿನಲ್ಲಿ ಕಡ್ಡಾಯವಾಗಿ ಇಡಲೇಬೇಕಾದ ನಗದು ಹಣದ ನಿಧಿ (Cash Reserve Ratio)ಯನ್ನು ರಿಜರ್ವ್ ಬ್ಯಾಂಕು ಏರಿಸಿದಾಗ್ಯೂ ವಾಣಿಜ್ಯ ಬ್ಯಾಂಕುಗಳ ಪತ್ತಿನ ಸೃಷ್ಟಿಗೆ (Credit Creation) ಕ್ರೆಡಿಟ್ ಕಾರ್ಡುಗಳು ಅನುಕೂಲವೇ ಆಗುತ್ತವೆ. ಹಣ ದುಬ್ಬರ ನಿಯಂತ್ರಿಸುವುದರ ಸಲುವಾಗಿ ರಿಜರ್ವ್‌ಬ್ಯಾಂಕು ಇತ್ತೀಚೆಗೆ ಒಂದು ಕಡೆ ನಗದು ಹಣದ ನಿಧಿಯ ಪ್ರಮಾಣವನ್ನು ಶೇ. 10.5ರಿಂದ ಶೇ. 11ಕ್ಕೆ ಏರಿಸಿದರೆ ಮತ್ತೊಂದು ಕಡೆ ಪತ್ತನ್ನು ಸೃಷ್ಟಿಸುವ ಕ್ರೆಡಿಟ್ ಕಾರ್ಡುಗಳ ಮೇಲೆ ಸ್ಪಷ್ಟ ನಿಯಂತ್ರಣ ಕೈಗೊಳ್ಳದಿರುವುದು ನಮ್ಮ ಹಣ ಕಾಸು ನೀತಿಯ ಇಬ್ಬಂದಿತನದ ಧೋರಣೆಯ ಪ್ರತೀಕ. ಕ್ರೆಡಿಟ್ ಕಾರ್ಡುಗಳು ಗ್ರಾಹಕರಿಗೆ ನೀಡುವ ಸಾಲವೇ ಆಗಿರುವುದರಿಂದ ಹಾಗೂ ಈ ಸಾಲ ಅನುತ್ಪಾದಿತ ಅಥವಾ ಲೋಲುಪ್ತ ಕಾರಣಗಳಿಗಾಗಿ ಖರ್ಚಾಗುವುದರಿಂದ ಅನುತ್ಪಾದನಾ ವೆಚ್ಚಗಳಿಗಾಗಿ ಸಾಲ ನೀಡಿಕೆಯ ಮೇಲೆ ನಿಯಂತ್ರಣ ಹೇರುವ ಭಾರತೀಯ ರಿಜರ್ವ್ ಬ್ಯಾಂಕು ಕ್ರೆಡಿಟ್ ಕಾರ್ಡುಗಳ ನೀಡುವಿಕೆ ಮತ್ತು ಪಸರಿಸುವಿಕೆಯನ್ನು ನಿಯಂತ್ರಿಸುವುದೊಳಿತು. ಏಕೆಂದರೆ ಪ್ರಪ್ರಥಮವಾಗಿ ಕ್ರೆಡಿಟ್‌ಕಾರ್ಡು ಗಳನ್ನು ಭಾರತದಲ್ಲಿ ಪ್ರಚುರಪಡಿಸಿದ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಹೊಣೆ ಹೊತ್ತ ರಾಷ್ಟ್ರೀಕೃತ ಬ್ಯಾಂಕುಗಳ ಮುಂಚೂಣಿಕೆಯಲ್ಲಿರುವ ಬ್ಯಾಂಕುಗಳು ಈ ಕಾರ್ಡುಗಳನ್ನು ಜಾಹೀ ರಾತುಪಡಿಸಿದ ರೀತಿಯಿಂದಲೆ ಇವುಗಳಿಂದಾಗಬಹುದಾದ ಸ್ಪಷ್ಟ ಅಪಾಯಗಳನ್ನು ಗುರುತಿಸ ಬಹುದು. ಅಂಗಡಿಗಳಲ್ಲಿ ವಸ್ತುಗಳನ್ನು ಕೊಂಡಾಗ, ಟ್ಯಾಕ್ಸಿಯವರಿಗೆ ಹಣ ನೀಡುವುದರ ಬದಲು, ಪಂಚತಾರಾ ಹೋಟೆಲುಗಳಲ್ಲಿ ಬಿಲ್ಲು ಕೊಡಬೇಕಾಗುವ ಸಂದರ್ಭಗಳಲ್ಲಿ ಕ್ರೆಡಿಟ್‌ಕಾರ್ಡಿನ ಉಪಯೋಗವನ್ನು ಈ ಜಾಹಿರಾತು ಒತ್ತಿ ಹೇಳುತ್ತದೆ. ಬದಲಾಗಿ ಇವುಗಳಿಂದ ಒಬ್ಬ ಚಮ್ಮಾರ ನಿಗೆ, ಅಕ್ಕಸಾಲಿಗನಿಗೆ, ಬಡಗಿಗೆ, ಕೃಷಿಕನಿಗೆ, ಸಣ್ಣ ಉಳಿತಾಯದಾರರಿಗೆ ಆಗಬಹುದಾದ ಅನು ಕೂಲಗಳ ಬಗ್ಗೆ ಏನನ್ನೂ ಹೇಳುವುದಿಲ್ಲ. ಅಂದಾಗ ಇವುಗಳನ್ನು ಯಾರ ಅನುಕೂಲಕ್ಕಾಗಿ ಅನು ಷ್ಠಾನಗೊಳಿಸಲಾಯಿತು ಎಂಬುದನ್ನು ಹೇಳಬೇಕಾಗಿಲ್ಲ. (ಆದರೆ ಇತ್ತೀಚೆಗೆ ವಾಣಿಜ್ಯ ಬ್ಯಾಂಕ್ ಒಂದು ಕೃಷಿಕರಿಗೆ ಈ ಸೌಲಭ್ಯವನ್ನು ವಿಸ್ತರಿಸಿರುವುದು ಸ್ವಾಗತಾರ್ಹ) ಕ್ರೆಡಿಟ್ ಕಾರ್ಡುಗಳಿಂ ದಾಗಬಹುದಾದ ಮತ್ತೊಂದು ಅಪಾಯವೆಂದರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವಂತೆ ವಂಚನೆ ಯಂತಹ ಅಪರಾಧಗಳಿಗೆ ನಮ್ಮ ದಂಡಸಂಹಿತೆಯಲ್ಲಿ ತೀವ್ರವಾದ ಶಿಕ್ಷೆಗಳಿರುವುದಿಲ್ಲ. ಹಾಗಾಗಿ ಈ ವ್ಯವಸ್ಥೆಯಲ್ಲಿ ಬ್ಯಾಂಕುಗಳನ್ನು, ಮಾರಾಟದಾರರನ್ನು ಸುಲಭವಾಗಿ ವಂಚಿಸಲೂಬಹುದು. ಸುಖಭೋಗಗಳಿಗೆ ಬಹುಬೇಗ ಮನಸೋಲುವ ಅಧಿಕಾರಿವರ್ಗ ಮುತ್ತಿತರ ಜನರು ಈ ಸೌಲಭ್ಯದಿಂ ದಾಗಿ ತಮ್ಮ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಲು ಅವಕಾಶವಿರುವುದರಿಂದ ಇಂತಹ ಖರ್ಚು ಗಳನ್ನು ಸರಿದೂಗಿಸಲು ಭ್ರಷ್ಟ ಮಾರ್ಗಗಳಿಗೆಳಸುವಂತಾಗಿ ಭ್ರಷ್ಟಾಚಾರ ಮತ್ತಷ್ಟು ವ್ಯಾಪಿಸುವ ಅಪಾಯವೂ ಇದೆ. ಕಪ್ಪು ಹಣವನ್ನು ಇಷ್ಟಬಂದ ರೀತಿಯಲ್ಲಿ ಖರ್ಚು ಮಾಡಲೂ ಸಹ ಕ್ರೆಡಿಟ್ ಕಾರ್ಡುಗಳು ನೆರವಾಗುತ್ತವೆ. ಖರ್ಚು ಮಾಡುವ ಹಣದ ಮೇಲಿನ ಮಿತಿ ಮತ್ತು ಗ್ರಾಹಕನ ಅರ್ಹತೆಯ ಮೇಲೆ ರಿಜರ್ವ್ ಬ್ಯಾಂಕಿನ ಏಕರೂಪವಾದ ನೀತಿಯಿಲ್ಲದಿರುವುದರಿಂದ ವಾಣಿಜ್ಯ ಬ್ಯಾಂಕುಗಳ ನಡುವೆ ಕ್ರೆಡಿಟ್ ಕಾರ್ಡುಗಳನ್ನು ಆಕರ್ಷಣೆಗೊಳಿಸುವಲ್ಲಿ ಪೈಪೋಟಿಯೇ ಏರ್ಪಟ್ಟಿದೆ.

●

ಹೊಸ ಓದು

ಕಾರ್ಯ (ಕಾದಂಬರಿ) ಲೇ: ಅರವಿಂದ ಮಾಲಗತ್ತಿ, ಪ್ರ: ಶೈಲ ಪ್ರಕಾಶನ, ನೇತಾಜಿ ಗಲ್ಲಿ, ಅಂಬೇಡ್ಕರ್ ರಸ್ತೆ, ಮುದ್ದೇಬಿಹಾಳ-೫೮೬೨೧೨ ಪು: ೬೬ ಬೆ: ೧೫ರೂ.

ಸಾವಿನ ನಂತರ ನಡೆಯುಬೇಕಾದ ಕರ್ಮವನ್ನು ಕೇಂದ್ರಮಾಡಿಕೊಂಡು ಮಾನವ ಜೀವನದ ಪ್ರಕ್ಷುಬ್ಧತೆಯನ್ನು, ಆ ಹಿನ್ನೆಲೆಯಲ್ಲಿ ಮನುಷ್ಯ ಸಂಬಂಧಗಳನ್ನು ಕುರಿತು ಚಿಂತನೆ ನಡೆಸುವ ಗಿರಡ್ಡಿ ಗೋವಿಂದರಾಜ ಅವರ 'ಮಣ್ಣು' ಬಹಳ ಹಿಂದೆಯೇ ಬಂದ ಒಂದು ವಿಶಿಷ್ಟ ಕಾದಂಬರಿಯಾಗಿದೆ. ಇದೇ ಹಿನ್ನೆಲೆಯಲ್ಲಿ ಎಂದರೆ, ಸತ್ತವಳ ಗೋರಿಯೊಂದಕ್ಕೆ ಮೂರನೇ ದಿನ ನಡೆಯುವ ಹಾಲೆರೆಯುವ ಕಾರ್ಯಕ್ರಮವನ್ನು ನೆಪಮಾಡಿಕೊಂಡು ಮಾನವ ಸಂಬಂಧಗಳ ವಿಕ್ಷಿಪ್ತತೆಯನ್ನು, ಒಂದು ಕಡೆಯಲ್ಲಿ ಕರ್ಮಾಂತರವನ್ನು ವೈಭವೀಕರಿಸುತ್ತಾ ಜೊತೆ ಜೊತೆಯಲ್ಲೇ ಈ ನೆಲದಲ್ಲಿ ಒಬ್ಬನನ್ನು ತುಳಿದು ತಾನೊಬ್ಬನೇ ಮೇಲೇಳಬೇಕೆಂದು ಅಧಿಕಾರಕ್ಕಾಗಿ ಹೋರಾಡುವ, ಆ ದಿಸೆಯಲ್ಲಿ ತಾವು ತಲುಪಬೇಕಾದ ಗುರಿ ಅರ್ಥಹೀನವೆಂಬುದನ್ನು ಅರಿತು ದಿಗ್ಭ್ರಾಂತಸ್ಥಿತಿಯಲ್ಲಿ ನೆಲೆನಿಂತು ಬಿಡುವ ಜನಾಂಗವೊಂದರ ಶಕ್ತವಾದ ಚಿತ್ರಣವಿರುವ ಅರವಿಂದ ಮಾಲಗತ್ತಿಯವರ 'ಕಾರ್ಯ' 'ಮಣ್ಣು'ವಿನ ನಂತರದ ಮಹತ್ತ್ವದ ಕಾದಂಬರಿಯಾಗಿದೆ.

ಇಡೀ ಕಾದಂಬರಿಯ ಘಟನಾವಳಿಗಳು ನಡೆಯುವ ಕೇಂದ್ರಸ್ಥಾನ ಬಂಗಾರೆವ್ವನ ಸಮಾಧಿಯೇ ಆಗಿದ್ದರೂ ಆಕೆಯ ಪಾತ್ರ ಕಾದಂಬರಿಯಲ್ಲಿ ಮುಖ್ಯವಾಗಿಲ್ಲ. ಹಿರಿಯ ಘಡೀಗಾರ ವರಗ ದಶರಥನ ಮಗ ಮಲ್ಲಪ್ಪ ಗೋರಿಯ ಯಾತ್ರೆಯ ಮಧ್ಯೆ ತನ್ನ ಕೈಯಲ್ಲಿದ್ದ ಕುಳ್ಳಗ್ಗಿ (ಕೆಂಡದ ಮಡಿಕೆ)ಯನ್ನು ನೆಲಕ್ಕೆ ಬಿಟ್ಟದ್ದೇ ಕಾದಂಬರಿಗೆ ಸಿಗುವ ಮುಖ್ಯ ಚಾಲನೆಯಾಗುತ್ತದೆ. ಈ ಘಾತಕ್ಕೆ ಪರಿಹಾರ ಕೇಳಲು ಜಂಗಮ ಬುಡಾಳಯ್ಯನನ್ನು ಆಶ್ರಯಿಸಿದ ಈ ಜನ ಅವರು ಹೇಳಿದ್ದನ್ನು ಅತೀ ಕಟ್ಟುನಿಟ್ಟಾಗಿ ಪಾಲಿಸಲು ಹೋಗಿ ಮತ್ತೊಂದು ಜೀವಕ್ಕೆ ಎರವಾಗುವಂತೆ ನಡೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅವರ ಅಂಧಾನುಕರಣೆಯಿಂದಾಗಿ ಉದ್ಭವಿಸುವ ಸಮಸ್ಯೆಗಳು, ಅದನ್ನು ಪರಿಹರಿಸಿಕೊಳ್ಳುವಲ್ಲಿ ತೋರುವ ಅತೀ ಜಾಣತನ, ಅದರಿಂದಾಗಿ ಎದುರಿಸಬೇಕಾದ ಅನರ್ಥ ಪರಂಪರೆಗಳನ್ನು ದಾಖಲಿಸುತ್ತಾ ಈ ಕೃತಿ ಬೆಳೆಯುತ್ತದೆ.

ಪರಿಹಾರ ಕೇಳಲು ಹೋದವರು ತಾವಿರಬೇಕಾದ ಆವರಣವನ್ನು ಮರೆತು ಕುಡಿಯುತ್ತಾ ಕುಳಿತರು. ನಂತರ ಹೇಗೋ ತಿಳಿದು ಬಂದು, ಇನ್ನೇನು ಕಾರ್ಯ ಮುಂದುವರಿಸಬೇಕೆನ್ನುವ

ಹೊತ್ತಿಗೆ ಕಲ್ಲಪ್ಪ ಕುಳ್ಳಗಿಗ್ಗಿ ನೆಲಕ್ಕೆ ಬಿದ್ದದ್ದು ಮಲ್ಲಪ್ಪ ಮುಡಚಟ್ಟು ಆದದ್ದಕ್ಕೆ ಎಂದು ಪಂಚಾಯ್ತಿ ತೆಗೆದು ಹೊಸ ಸಮಸ್ಯೆಯನ್ನು ತಂದೊಡ್ಡುತ್ತಾನೆ. ಹೀಗೆ ಸಾಗುವ ಕಥೆಯಲ್ಲಿನ ಈ ಸನ್ನಿವೇಶ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಮಲ್ಲಪ್ಪನಿಗೆ ಹೋಗಿಬಿಡಬಹುದಾದ ಘಟೀಗಾರಿಕೆಯನ್ನು ತಾನು ದಕ್ಕಿಸಿಕೊಳ್ಳುವ ಹಂಚಿಕೆಯಿಂದ ಈ ಪಂಚಾಯ್ತಿಯಲ್ಲಿ ಪಾಲ್ಗೊಳ್ಳುವ ಕುಷ್ಠರೋಗಿ ಚುದಪ್ಪನಿಂದ ಬೇರೊಂದೇ ತಿರುವನ್ನು ಪಡೆದುಕೊಳ್ಳುತ್ತದೆ. ಚಂದಪ್ಪನ ಆಶೆಬುರುಕುತನದ ಪರಿಣಾಮ-ಈ ಎಲ್ಲ ಅಪಮಾನಗಳಿಂದ ನೊಂದ ಅವನ ಅಣ್ಣ ವರಗದಶರಥನ ಮರಣ; ರುದ್ರಗೌಡರ ಸಾವು; ಮಲ್ಲಪ್ಪನ ಕಣ್ಮರೆ. ತಮ್ಮ ಪ್ರತಿಸ್ಪರ್ಧಿ ಪೈಲ್ವಾನ್ ಮಲ್ಲಪ್ಪನ ಮೇಲಿನ ದ್ವೇಷಸಾಧನೆಗೆ ಈ ಸಂದರ್ಭದಲ್ಲಿ ಚಂದಪ್ಪನನ್ನು ಪೂರ್ತಿಯಾಗಿ ಬಳಸಿಕೊಂಡು ಇಷ್ಟೆಲ್ಲ ಅನಾಹುತಗಳಿಗೆ ಕಾರಣ ಕರ್ತರಾದವರು ಹೆಸರಿಗೆ ತದ್ವಿರುದ್ಧ ಸ್ವಭಾವದವರಾದ, "ಇವರೆಲ್ಲರೂ ಕುಡಿದೊರಗಿದಾಗ ಇಡೀ ಕೇರಿಗೆ ಬೆಂಕಿ ಹೊತ್ತಿಸಿಬಿಡಬೇಕೆಂ"ದುಕೊಳ್ಳುವ ಶಾಂತ ಗೌಡರೆಂಬುದು ನಂತರ ವೇದ್ಯವಾಗುವ ಸಂಗತಿ

ಇಷ್ಟೆಲ್ಲ ಪಂಚಾಯ್ತಿ ನಡೆಸಿ ಹೇಗೋ ಐದನೇದಿನ ಹಾಲೆರೆಯುವ ಕಾರ್ಯಕ್ಕೆ ಹೋಗುವ ಜನ ಕಾಣುವುದು, ಇಲ್ಲಿಯವರೆಗೆ ನೀವು ನಡೆದುಕೊಂಡದ್ದು ಸರಿಯಲ್ಲವೆನ್ನುವಂತೆ, ಕುಳ್ಳಗಿಗ್ಗಿಯನ್ನು ಹಿಡಿದಿದ್ದ ಚಂದಪ್ಪನನ್ನು ಅಣಕಿಸುವಂತೆ, ಅವನ ಹೊಸ ಘಟಾಗಾರಿಕೆಯನ್ನು ಪ್ರಶ್ನಿಸುವಂತೆ ಗೋರಿಯ ಬಾಯಿ ತೆರೆದುಕೊಂಡು ಬಂಗಾರೆಪ್ಪನ ಹೆಣ ಗೋರಿಯಿಂದ ಹೊರಕ್ಕೆ ಬಿದ್ದಿರುವುದನ್ನು. ಯಾವ ಜನರು ತಮ್ಮ ಗುರಿಯನ್ನು ತಲುಪುವಲ್ಲಿ ತಾವೇ ಹಾದಿ ತಪ್ಪುವುದಲ್ಲದೇ ಇಲ್ಲದ ಸಮಸ್ಯೆಗಳಿಗೆ ಥಳಕುಹಾಕಿಕೊಳ್ಳುತ್ತಾರೆಯೋ ಆ ಜನರೊಂದಿಗೆ ಜಂಗಮರು ನಡೆದುಕೊಳ್ಳುವ ರೀತಿ, ಶಾಂತಗೌಡರು ಬೆದರಿಸುವ ಸನ್ನಿವೇಶಗಳನ್ನೂ ದಾಟಿ, ನಿಂತಿದ್ದ ಕಾರ್ಯವನ್ನು ಪೂರೈಸಹೋಗುವಲ್ಲಿ ಗೋರಿಯಿಂದ ಹೆಣವೇ ಹೊರಬಿದ್ದು ಅವರಿಗೆ ದಿಗ್ಭ್ರಮೆ ಹಿಡಿಸುವುದರೊಂದಿಗೆ ಯಾವುದಕ್ಕಾಗಿ ಹಿಂದಿನ ದಿನ ಅಷ್ಟೆಲ್ಲಾ ರಂಪ ಕಾಣಬೇಕಾಯಿತೋ ತಲುಪಬೇಕಾದ ಆ ನೆಲೆಯೇ ಅರ್ಥವಿಲ್ಲದ್ದಾಗಿಬಿಡುತ್ತದೆ. ಮಲ್ಲಪ್ಪ ಕುಳ್ಳಗಿಯನ್ನು ನೆಲಕ್ಕೆ ಬಿಟ್ಟಂತಹ ಸಣ್ಣಕೃತ್ಯಕ್ಕೇ ದಿಕ್ಕುಗಾಣದಂತಾಗುವ ಈ ಜನಕ್ಕೆ ನಂತರ ಎದುರಾಗುವ ಚಿತ್ರವಂತೂ ನಿರುತ್ತರುವಾದುದಾಗಿಬಿಡುತ್ತದೆ.

ಅತೀನಿಷ್ಠೆಯಿಂದ ಕೂಡಿದ ಕರ್ಮಕ್ರಿಯಾದಿಗಳ ಅನುಸರಗೆಯಿಂದುಂಟಾಗುವ ಎಡರುತೊಡರುಗಳನ್ನೂ ಅಂತಿಮವಾಗಿ ಅವು ಎದುರಿಸಬೇಕಾದ ಮುಂದುಗಾಣದ ಸ್ಥಿತಿಯನ್ನೂ ಈ ಸ್ಥಿತಿ ಅವರ ಇಡೀ ನಡಾವಳಿಗಳ ದುರಂತವಾಗಿಬಿಡುವುದನ್ನು ವಿಡಂಬಿಸುವ ಈ ಕೃತಿ, ಅರ್ಥವಿಲ್ಲದ ಈ ತೆರನ ಕೆಲಸಗಳಿಂದಾಗಿ ಬದುಕೇ ವ್ಯರ್ಥವಾಗಿಬಿಡಬಹುದಾದ ಸಾಧ್ಯತೆಯನ್ನೂ ಕಾಣಿಸುತ್ತದೆ.

ಒಂದು ಸಾವಿನ ನಂತರ ನಡೆಯಬೇಕಾಗಿದ್ದ ಸಂಸ್ಕಾರಗಳು ಮತ್ತೂ ಕೆಲವು ಸಾವಿಗೆ ದಾರಿ ಮಾಡಿಕೊಡುವುದು ಅವರು ನಡೆಸಹೊರಟಿದ್ದ ಕ್ರಿಯೆಯ ಬಹುದೊಡ್ಡ ವ್ಯಂಗ್ಯವಾಗುತ್ತದೆ ಎಂಬುದರ ಕಡೆಗೆ ಗಮನ ಸೆಳೆಯುವ ಈ ಕೃತಿಯ ಅಂತಿಮ ಅಧ್ಯಾಯದ ಶೀರ್ಷಿಕೆ ಅರ್ಥವತ್ತಾದುದು: "ಈ ನೆಲದಲ್ಲಿ ಮುಗಿಯದ ವ್ಯಥೆ." ಒಂದಲ್ಲ ಒಂದು ರೀತಿಯಲ್ಲಿ ನಿರಂತರವಾಗಿ ಸಾಗುತ್ತಲೇ ಬಂದಿರುವ ಈ ಸಾವು-ಬದುಕಿನ ಹೋರಾಟ ಮನುಷ್ಯನನ್ನು ಪಶುವನ್ನಾಗಿಸಿ, ಮಾನವೀಯ ಮೌಲ್ಯಗಳು ವರಗದಶರಥನಂತೆ ನಶಿಸುತ್ತಿರುವುದನ್ನು 'ಕಾರ್ಯ, ಧ್ವನಿಸುತ್ತದೆ. ಇದಕ್ಕೆ ಕಾರಣ ಈ ಜನರ ಮೌಢ್ಯವೇ? -ಅಂಧಾನುಕರಣೆಯೇ? ಶಾಂತಗೌಡರಂತಹವರ ಹಂಚಿಕೆಯೇ? ತಲುಪಬೇಕಾದ ಗುರಿಯ ಪರಿಜ್ಞಾನವಿಲ್ಲದಿರುವಿಕೆಯೇ? ಸಮರ್ಪಕವಾದ ಗುರಿಯೇ ಇಲ್ಲದಿರುವಿಕೆಯೇ? ಈ ಎಲ್ಲ

ಪ್ರಶ್ನೆಗಳೇ ಇದಕ್ಕೆ ಉತ್ತರವಾದರೆ ದಲಿತರ ಸಮಸ್ಯೆಗಳನ್ನು, ಅದಕ್ಕೆ ಕಾರಣಗಳನ್ನು ದಾಖಲಿಸು ವಲ್ಲಿ ಇದು ಹೊಸದೊಂದು ಬಗೆಯ ಕೃತಿಯಾಗುತ್ತದೆ.

ಸಮಸ್ಯೆಗಳು ಪಡೆದುಕೊಳ್ಳುವ ಹೊಸತಿರುವುಗಳನ್ನೂ ಅವುಗಳು ಒಂದಕ್ಕೊಂದು ತೊಡರು ಹಾಕಿಕೊಳ್ಳುವುದನ್ನೂ ಮಾಲಗತ್ತಿಯವರು ಶಕ್ತವಾಗಿ ಬೆಳೆಸುತ್ತಾ ಹೋಗಬಲ್ಲರು. ಧಾರವಾಡ" ಕನ್ನಡವನ್ನೂ ತಮ್ಮ ಕೃತಿಯಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ.

"ಯಾರು ಯಾರಿಗೆ ಹಿಡಿದಿದ್ದರೋ ಅವರಿಗೆ ತಿಳಿದಿರಲಿಲ್ಲ. ಆದರೂ ದಾರಿಯಲ್ಲಿದ್ದರು"(ಪುಟ-49)

"ಸತ್ತಾಗ ಊಟಕ್ಕಿಂತ ಸೆರೆಯೇ ರುಚಿ"(ಪುಟ-38)

"ನ್ಯಾಯಾ ಮಾಡತಾರಂತ ನ್ಯಾಯಾ ಕುಡದ ನಿಶೇದಾಗ, ಹೆಣದ ಮ್ಯಾಲಿ ಅಳುದ ಬಿದ್ದು ಇನ್ನು ನಿಮ್ಮ ಮ್ಯಾಲಿ ಅಳ್ತಾರ ಅಷ್ಟ"(ಪುಟ-36)

"ಸರ್ಪವೂ ಎದ್ದಿದೆ ಭರ್ಜಿಯೂ ಕಾದಿದೆ. ಈ ಮಧ್ಯೆ ಹೊಡೆತ ತಮಗೆ ಬೀಳುವುದು ಬೇಡ" (ಪುಟ-17)

ಎಂಬ ಮಾತುಗಳು ಮೊನಚಾಗಿ ತಿವಿಯಬಲ್ಲಂತಹುವು, ಶಾಂತಗೌಡ ಒಂದು ಕಾಲಿಗೆ ಮುಚ್ಚನ್ನು ಹೊಲಿದುಕೊಡುವ ದಂಡವನ್ನು ಚಂದಪ್ಪ ವಿಧಿಸಿದಾಗ "ಅಯ್ಯೋ ಒಂದು ಜೊತೆಯನ್ನಾದರೂ ಹೊಲಿದುಕೊಡಬಹುದಿತ್ತಲ್ಲಾ" ಎಂದುಕೊಳ್ಳುವ ಸನ್ನಿವೇಶ ಈ ಜನರ ಮುಗ್ಧತೆಗೆ ನಗುವುಕ್ಕಿಸುವ ಬದಲು ವಿಷಾದದ ತರಂಗವನ್ನೆಬ್ಬಿಸುವಂತಹ ವಿಡಂಬನೆಯಿಂದ ಕೂಡಿದೆ. ಕರ್ಮಾಂತರಗಳನ್ನು ನಡೆಸುವಲ್ಲಿ ಹಟವಾರಿಯಾಗುವಂತೆಯೇ ಘಟೀಗಾರನಾಗಬೇಕೆಂದೂ ಹಟ ಹಿಡಿಯುವ ಚಂದಪ್ಪ ನಂತಹವರ ನಡವಳಿಕೆ ಎರಡೂ ಕಡೆಗಳಲ್ಲಿ ನೋವು ನಿರಾಶೆಯನ್ನುಂಟುಮಾಡುವ ಪರಿಯ ಚಿತ್ರಣ ವಂತೂ ಅನನ್ಯವಾದುದು. ಇದರಿಂದಾಗಿ 'ಕಾರ್ಯ' ಮಾಲಗತ್ತಿಯವರನ್ನು ತುಂಬು ಆಸಕ್ತಿ ಯಿಂದ ಮುಂದಿನ ಕೃತಿಗಳನ್ನು ನಿರೀಕ್ಷಿಸಬಹುದಾದ ಭರವಸೆಯ ಲೇಖಕರನ್ನಾಗಿಸಿದೆ.

–ಬಿ.ಎಸ್. ವಿಜಯಲಕ್ಷ್ಮಿ

ಈ ಸಂಚಿಕೆಯ ಲೇಖಕರು

- ಸತ್ಯನಾರಾಯಣರಾವ್ ಅಣತಿ
  ರಚನ, ಮೈಕ್ರೋವೇವ್ ಸ್ಟೇಷನ್ ಹಿಂಭಾಗ,
  ಶರಾವತಿ ನಗರ, ಶಿವಮೊಗ್ಗ

- ಗಿರಡ್ಡಿ ಗೋವಿಂದರಾಜ
  ಇಂಗ್ಲಿಷ್ ಅಧ್ಯಾಪಕ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

- ಡಾ॥ ಎಸ್. ಚಂದ್ರಶೇಖರ್
  ಇತಿಹಾಸ ವಿಭಾಗ, ಜ್ಞಾನಭಾರತಿ, ಬೆಂಗಳೂರು-56

- ಪಾಂಡುರಂಗ ಹೆಗಡೆ
  ಪರಿಸರ ಸಂರಕ್ಷಣಾ ಕೇಂದ್ರ, ಹುಲಿಮಾಳಗಿ ಬಿಲ್ಡಿಂಗ್, ಶಿರಸಿ-581401 (ಉ.ಕ.)

- ಡಾ॥ ಬಿ.ಎನ್. ಸುಮಿತ್ರಾಬಾಯಿ
  ಕನ್ನಡ ಅಧ್ಯಾಪಕಿ, ಎ.ವಿ. ಕಾಂತಮ್ಮ ಮಹಿಳಾ ಕಾಲೇಜು, ಹಾಸನ

- ಬಿ.ಎಸ್. ವಿಜಯಲಕ್ಷ್ಮಿ
  ಕನ್ನಡ ಅಧ್ಯಾಪಕಿ, ಎ.ವಿ. ಕಾಂತಮ್ಮ ಮಹಿಳಾ ಕಾಲೇಜು, ಹಾಸನ

- ಸ. ಉಷಾ
  ಕನ್ನಡ ಅಧ್ಯಾಪಕಿ, ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ, ಹಾಸನ ಜಿಲ್ಲೆ,

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೧

ಈ ಸಂಕಲನದ ಸಂಪಾದಕರು

ಜಿ. ಎಲ್. ರಾಮಪ್ಪ

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ.

ಈ ಸಂಕಲನದಲ್ಲಿ....

○ ನನ್ನ ನೆನಪುಗಳು*

ಡಾ|| ಬೆಟಗೇರಿ ಕೃಷ್ಣಶರ್ಮ [ಆನಂದಕಂದ]

೫. ನಮ್ಮ ಹಿರಿಯಣ್ಣ

"ದೂರದ ಗುಡ್ಡ ಕಣ್ಣಿಗೆ ನುಣ್ಣಗೆ" ಎಂಬಂತೆ ನಮ್ಮ ಕುಟುಂಬವು ಜನರ ಕಣ್ಣಿಗೆ ಬಹಳ ಆದರ್ಶವಾಗಿ ಕಾಣುತ್ತಿದ್ದಿತು. ಆದರೆ ಆ ಗುಡ್ಡದೊಳಗಿನ ಕೊರಕಲು-ಕೊಳ್ಳಗಳ ರೌದ್ರ ದೃಶ್ಯವನ್ನು ಯಾರು ನೋಡುವರು? ಮೇಲ್ನೋಟಕ್ಕೆ ನಮ್ಮ ಕುಟುಂಬವು ರಮಣೀಯವಾಗಿ, ಶಾಂತಿ-ಸೌಹಾರ್ದಪೂರಿತವಾಗಿ ಕಾಣುತ್ತಿದ್ದಿತು. ಆದರೆ ಒಂದೊಂದು ವ್ಯಕ್ತಿಯೂ ಒಂದೊಂದು ಬಗೆಯ ಒಳಗುದಿಯನ್ನು ಅನುಭವಿಸುತ್ತ ಅಶಾಂತತೆಗೆ ಈಡಾಗಿತ್ತು. ನಮ್ಮ ಕುಟುಂಬದ ಹೊರಸೌಂದರ್ಯಕ್ಕೆ ಬೆರಗಾದ ಒಬ್ಬ ರೆವೆನ್ಯೂ ಅಧಿಕಾರಿಗಳು ನಾವು ಬಗರನಾಳದಲ್ಲಿ ವಾಸಿಸುತ್ತಿದ್ದಾಗ ಕೌತುಕಪಟ್ಟು, ನಮ್ಮ ಕುಟುಂಬವನ್ನು ಪ್ರತ್ಯಕ್ಷ ನೋಡಲು, ತಮ್ಮ ಹೆಂಡತಿಯನ್ನು ಕರೆದುಕೊಂಡು ಬಂದು ನಾಲ್ಕು ದಿನ ಇದ್ದು ಹೋಗಿದ್ದರು. ಅವರ ಹೆಂಡತಿಯು ಬಹಳ ಸಂತೋಷಪಟ್ಟು "ನನ್ನನ್ನು ನಿಮ್ಮ ಮನೆಯ ಹೆಣ್ಣುಮಗಳೆಂದು ಭಾವಿಸಿರಿ" ಎಂದು ಆತ್ಮೀಯ ಮಾತಗಳನ್ನಾಡಿ ಹೋಗಿದ್ದಳು. ಆದರೆ ಮಾನವ ಸ್ವಭಾವದ ಅಸಹಜತೆಯನ್ನು ಅವರು ನಾಲ್ಕೇ ದಿನಗಳಲ್ಲಿ ಹೇಗೆ ಕಾಣಬೇಕು?

ನಮ್ಮ ಹಿರಿಯಣ್ಣನ ಹೆಸರು 'ರಾಘವೇಂದ್ರರಾಯ' ಎಂದು. ನಾವೆಲ್ಲ ತಮ್ಮಂದಿರು ಅವನನ್ನು 'ರಾಘಣ್ಣ' ಎಂದು ಕರೆಯುತ್ತಿದ್ದೆವು. ಸಾಧು ಸ್ವಭಾವ

---

* ಡಿ|| ಬೆಟಗೇರಿ ಕೃಷ್ಣಶರ್ಮ ಅವರ ಅಪ್ರಕಟಿತ ಆತ್ಮಕಥೆಯ ಕೆಲವು ಪುಟಗಳು. ತಮ್ಮ 81 ನೆಯ ವಯಸ್ಸಿನಲ್ಲಿ ಹೇಳಿ ಬರೆಸಿದ್ದು.
ಹಸ್ತಪ್ರತಿ ದೊರಕಿಸಿ ಉಪಕರಿಸಿದ ಶ್ರೀ ಸುರೇಶ್ ಬೆಟಗೇರಿ ಅವರಿಗೆ ಕೃತಜ್ಞತೆಗಳು. —ಸಂ.

ನವೆಂಬರ್ ಅವನು ಕಾಣುತ್ತಿದ್ದರೂ, ವಸ್ತು ಸ್ಥಿತಿಯು ಅದಕ್ಕೆ ವಿಪರೀತವಾಗಿಯೇ ಇದ್ದಿತು. ತನ್ನ ಚಿಕ್ಕತನದಲ್ಲಿ ಹಳ್ಳಿಯಲ್ಲಿಯೇ ದೊರೆಯುತ್ತಿದ್ದ ನಾಲ್ಕನೆಯ ತರಗತಿಯ ವರೆಗಿನ ಕನ್ನಡ ಶಿಕ್ಷಣವನ್ನು ಹೇಗೋ ಮುಗಿಸಿದನು. ಮುಂದೆ ಅವನಿಗೆ ಇಂಗ್ಲೀಷ್ ಶಿಕ್ಷಣ ಕೊಡಿಸಬೇಕೆಂದು ನಮ್ಮ ತಂದೆಯವರು ಅವನನ್ನು ಬೆಳಗಾವಿಯ ಹತ್ತಿರ ಇರುವ ಶಹಪುರ ಎಂಬ ಪಟ್ಟಣದಲ್ಲಿ ಅವರ ಸೋದರಮಾವನ ಮನೆಯಲ್ಲಿಯೇ ಇರಿಸಿದರಂತೆ. ಆದರೆ ಅವನಿಗೆ ಇಂಗ್ಲೀಷು ತಲೆಗೆ ಹತ್ತಲಿಲ್ಲ. ಒಂದು ದಿನವಾದರೂ ಶಾಲೆಗೆ ಹೋಗುತ್ತಿದ್ದನೋ, ಇಲ್ಲವೋ ತಿಳಿಯುವುದಿಲ್ಲ. ಒಂದು ದಿನ ಅವನನ್ನು ಒತ್ತಾಯದಿಂದ ಶಹಪುರಿಗೆ ಕಳುಹಿ ಬಂದರೆ ಮರುದಿನದ ಗಾಡಿಯಲ್ಲಿಯೇ ಮನೆಗೆ ಬಂದುಬಿಡುತ್ತಿದ್ದನಂತೆ. ಆದುದರಿಂದ ಅವನ ಶಿಕ್ಷಣದ ದೃಷ್ಟಿಯಿಂದ ಪಂಡಿತ–ಪುತ್ರನೇ ಆಗಿದ್ದನು.

ತಂದೆಯವರಲ್ಲಿದ್ದ ತಬಲಾ ಬಾರಿಸುವ ಗುಣವು ಮಾತ್ರ ಅವರಿಗೆ ಬಳುವಳಿಯಾಗಿ ಬಂದಿತ್ತು. ಅದಕ್ಕಾಗಿ ಊರಲ್ಲಿಯ ನಿರುದ್ಯೋಗಿ ಜನರ ಸಹವಾಸವು ಹೆಚ್ಚಾಯಿತು. ಒಂದು ಚಮತ್ಕಾರದ ವಿಷಯವೆಂದರೆ ಅವನಿಗೆ ಕರಕುಶಲತೆಯಲ್ಲೂ ಸಹಜವಾದ ಆಸಕ್ತಿ ಇದ್ದಿತು. ಮನೆಯ ಒಳಗೋಡೆಗೆ ಗಿಲಾಯಿ ಮಾಡುವುದು, ಪತ್ತಾರ ಇ. ಮನೆಯಲ್ಲಿಯ ಬೆಳ್ಳಿ ಚಿನ್ನದ, ಹೆಣಿಕೆ-ಅಲಂಕಾರಗಳ ಕಾರ್ಯ ಇವುಗಳೆಲ್ಲ ಕರಗತವಾಗಿದ್ದವು. ಆದರೆ ಕಲೆಯು ಬೆಳೆಯಲಿಕ್ಕೆ ಊರ ಗೌಡರ ಮನೆಯಿಂದ ನಮ್ಮಲ್ಲಿ ಹೇಗೆ ಅವಕಾಶ ದೊರೆಯಬೇಕು ? ಎಂತಲೇ ಅವರು ನಿರುದ್ಯೋಗಿಯಾಗಿಯೇ ಕಾಲ ಕಳೆಯಬೇಕಾಯಿತು. ಆದರೆ ನಮ್ಮ ತಂದೆಯವರು ಅವನಿಗೆ ಹೊಲಮನೆಗಳನ್ನು ನೋಡಿಕೊಳ್ಳುವ ಕಾರ್ಯಕ್ಕೆ ಹಚ್ಚಿದರು. ದನದ ಮೇಲ್ವಿಚಾರಣೆಯೂ ಅವನದಾಯಿತು. ಕೃಷಿಕರ್ಮದ ಯಾವ ಕಾರ್ಯವನ್ನೂ ಅವನು ಜಾಣ್ಮೆಯಿಂದ ನಡೆಯಿಸಿಕೊಂಡು ಹೋಗುತ್ತಿದ್ದನು. ಆದರೆ ಗಳಿಕೆಯ ಯಾವ ಉದ್ಯೋಗವನ್ನೂ ಮಾಡುವ ಸಾಮರ್ಥ್ಯ ಅವನಲ್ಲಿರಲಿಲ್ಲ.

ಹದಿನಾರನೆಯ ವಯಸ್ಸಿನಲ್ಲಿದ್ದಾಗಲೇ ಅವನಿಗೆ ಮದುವೆಯಾಯಿತು. ಗೋಕಾಕ ತಾಲ್ಲೂಕಿನ ಧರಮಟ್ಟಿಯ ಹಿರಿಯ ಇನಾಮದಾರರಾದ ವಿಠಲರಾಯ ಎಂಬುವರು ತಮ್ಮ ಮಗಳನ್ನು ಕೊಟ್ಟು ಜಮೀನುದಾರ ಪದ್ಧತಿಯಂತೆ ವಿಜೃಂಭಣೆಯಿಂದ ಮದುವೆ ಮಾಡಿಕೊಟ್ಟರು. ಆಗ ಮದುವೆಗೆ ಹೆಚ್ಚಿನ ಶಿಕ್ಷಣವು ಅವಶ್ಯಕವಾಗಿರಲಿಲ್ಲ. ವರನ ಮನೆತನದ ಯೋಗ್ಯತೆಯನ್ನೇ ಅಳೆಯುತ್ತಿದ್ದರು. ಸರಿ. ಲಗ್ನವಾಗಿ ಆತ ಚತುರ್ಭುಜನಾದ. ಮನೆಗೆ ಸೊಸೆ ಬಂದಳೆಂದು ಎಲ್ಲರಿಗೂ ಸಂತೋಷ. ಆದರೆ ಆ ಸೊಸೆಯು ಒಂದು ವಿಚಿತ್ರ ಭಾವನೆಯನ್ನು ಇಟ್ಟುಕೊಂಡೇ ಮನೆಗೆ

ಬಂದಿದ್ದಳು. ತಾನು ಮಲ ಅತ್ತೆಯ ಕೈಯಲ್ಲಿ ನಡೆಯಬೇಕಾಗುವುದಲ್ಲ, ಎಂಬ ಅಳುಕು ಆಕೆಯ ಸಾಂಸಾರಿಕ ಸುಖವನ್ನೇ ನುಂಗಿ ನೀರು ಕುಡಿಯಿತು. ಗಂಡನಿಗೂ ಹೆಂಡತಿಗೂ ಎಂತಹ ಪ್ರೀತಿ ಸಂಬಂಧವು ಇದ್ದಿತೆಂಬುದು ಹಿಂದಿನ ಕಾಲದಲ್ಲಿ ಯಾರಿಗೂ ಸ್ಪಷ್ಟವಾಗಿ ತಿಳಿಯುತ್ತಿರಲಿಲ್ಲ. ಆದರೂ ಸಂಸಾರವು ಸುಗಮವಾಗಿ ಸಾಗಿತ್ತು. ಎರಡು ಮಕ್ಕಳು ಆದುವು. ಹಿರಿಯವಳು ಹೆಣ್ಣು ಮಗಳು ಅವಳ ಹೆಸರು ಅಹಲ್ಯೆ ಎಂದು. ಅವಳಿಗಿಂತ ನಾಲ್ಕು ವರ್ಷಕ್ಕೆ ಕಿರಿಯವನಾದ ಒಂದು ಗಂಡು ಮಗು ಬಾಲ್ಯದಲ್ಲಿಯೇ ಈ ಲೋಕವನ್ನು ಬಿಟ್ಟು ಹೋಯಿತು. ಅತ್ತೆ ಸೊಸೆಯರ ನಡುವಣ ಕಿರಿಕಿರಿಯು ಕಲಹ ಮೇಲೆ–ಮೇಲೆ ಆಗಿ ನಮ್ಮ ಕುಟುಂಬದಲ್ಲಿ ಆಗಾಗ ಅಪಸ್ವರಗಳಿಗೆ ಅವಕಾಶ ದೊರೆಯತೊಡಗಿತು. ಗಂಡನಾದ ರಾಘವೇಂದ್ರನು ನನ್ನ ತಾಯಿಯ ಜೊತೆಯಲ್ಲಿ ಪ್ರೀತಿಯಿಂದಲೇ ಇದ್ದನು. ಆದರೆ ಆ ಹೆಂಡತಿ, ಇಲ್ಲದ ದೋಷಗಳನ್ನೆತ್ತಿ, ಮನೆಯಲ್ಲಿ ಅಂತಃಕಲಹವನ್ನು ಹೊರಹೊರಡಿಸುತ್ತಿದ್ದಳು. ಇದರಿಂದ ನಮಗೆಲ್ಲ ದುಃಖ, ವಿಷಾದ. ಆದರೂ ಸಾಂಸಾರಿಕ ಬಂಧನದ ನೆರವಿನಿಂದ ನಾವೆಲ್ಲ ಕೂಡಿಯೇ ಇದ್ದೆವು. ಈ ಕಲಹಕ್ಕೆ ಕೊನೆಯನ್ನು ತರಬೇಕೆಂದು ಎಷ್ಟೋ ಬಗೆಯ ಪ್ರಯತ್ನಗಳು ನಡೆದವು. ಬರಗಾಲದ ಬವಣೆಯು ಇದಕ್ಕೆ ನೆರವನ್ನು ಕೊಟ್ಟಿತು. ಆ ಗಂಡ–ಹೆಂಡಿರನ್ನಷ್ಟೆ ಬೆಟಗೇರಿಯಲ್ಲಿ ಬಿಟ್ಟು ಮಿಕ್ಕವರೆಲ್ಲರೂ ಬಗರನಾಳಕ್ಕೆ ಹೊರಟು ಹೋದೆವು. ಇದರಿಂದ ಆಗಾಗ ಏಳುತ್ತಿದ್ದ ಅಪಸ್ವರದ ಕೊನೆಯು ತಾತ್ಪೂರ್ತಿಕವಾಗಿ ಆಯಿತು. ಆದರೆ ಗಂಡ–ಹೆಂಡರೊಳಗಿನ ಅಂತರಂಗದ ವಿಚಾರ ಯಾರಿಗೆ ತಿಳಿಯಬೇಕು? ಆಗಾಗ ನಮ್ಮ ಅಣ್ಣ ತನ್ನ ಮನೆಯನ್ನು ಬಿಟ್ಟು ಬಗರನಾಳಕ್ಕೆ ಬಂದು ನಾಲ್ಕು–ನಾಲ್ಕು ದಿವಸ ಇದ್ದುಬಿಡುತ್ತಿದ್ದನು. ಬೇಗನೆ ಹೋಗಬೇಕೆಂದು ಹಿರಿಯರು ಹೇಳಿದರೂ ಒಮ್ಮೊಮ್ಮೆ ಅವರ ಮಾತನ್ನು ಕೇಳುತ್ತಿರಲಿಲ್ಲ ಇಲ್ಲವೆ ಒತ್ತಾಯಕ್ಕೆ ಒಳಗಾಗಿ ಹೋಗುತ್ತಿದ್ದನು.

ನನಗಾಗ ಆರು ವರ್ಷದ ವಯಸ್ಸು. ಇಷ್ಟು ದೂರದ ಆ ಬಗರನಾಳಲ್ಲಿ ಶಾಲೆಯಿರಲಿಲ್ಲ. ಬೆಟಗೇರಿಯಲ್ಲಿ ಮಾತ್ರ ಶಾಲೆಯ ಏರ್ಪಾಡು ಆಗಬಹುದಾಗಿತ್ತು. ನಮ್ಮ ಅಣ್ಣನು ಬಗರನಾಳಕ್ಕೆ ಬಾರದೆ ಬೆಟಗೇರಿಯಲ್ಲಿಯೇ ಉಳಿಯಲು ಅನುಕೂಲವಾಗಬೇಕೆಂದು ನನ್ನನ್ನು, ನಮ್ಮ ಅಣ್ಣನೊಬ್ಬನನ್ನು ಆ ಶಾಲೆಗೆ ಕಳುಹಿಸಿದರು. ಆದರೆ ಹುಡುಗರಾದ ನಮಗೆ ಅಲ್ಲಿ, ನಮಗೆ ಬೇಕಾದ ಸುಖವು ಸಿಕ್ಕದೆ ಯಾವುದೋ ಬಗೆಯ ಅಶಾಂತತೆ ಒಳಗೊಳಗೇ ಆಟವಾಡುತ್ತಿದೆಯೆಂಬುದು ಗೊತ್ತಾಗದೇ ಇರಲಿಲ್ಲ. ಆದರೂ ಅನಿವಾರ್ಯ ಪರಿಸ್ಥಿತಿ. ನಮಗೆ ಅಕ್ಷರಜ್ಞಾನವಾಗಬೇಕು. ಬೆಟಗೇರಿಯಲ್ಲಿರದೆ ಬೇರೆ ದಾರಿಯೇ ಇರಲಿಲ್ಲ.

ನಾವಾಗ ಸಣ್ಣ ಹುಡುಗರು. ಹೆಚ್ಚಿನ ದಾಂಪತ್ಯ ವಿಚಾರವಾವುದನ್ನೂ ಅರಿಯುದವರು. ಗಂಡ-ಹೆಂಡಿರ ನಡುವೆ ವಿಶ್ವಾಸವಿದೆಯೋ ಇಲ್ಲವೋ ಎಂಬುದನ್ನು ಚೆನ್ನಾಗಿ ಅರಿಯದ ವಯಸ್ಸು. ಆಗ ಇದ್ದುದಿದ್ದ ಹಾಗೆಯೇ ಒಂದು ಆಶ್ಚರ್ಯಕರ ಸುದ್ದಿಯು ನಮ್ಮ ಕಿವಿಗೆ ಹೇಗೋ ಬಿದ್ದಿತು. "ನಮ್ಮ ರಾಘಣ್ಣ, ಒಬ್ಬ ಬೇಡರ ಯುವತಿಯ ಪ್ರೇಮದಲ್ಲಿ ತೊಡಗಿ ಅವಳ ಸಹವಾಸದಲ್ಲಿಯೇ ಹೆಚ್ಚಾಗಿ ಇರುವನು" ಎಂದು. ಇದರ ಬಗ್ಗೆ ನಮಗೆ ಯಾವ ಅಂತಹ ವಿಶೇಷವಾದ ಭಾವನೆಯನ್ನೂ ಅನುಭವಿಸಬೇಕಾಗಿರಲಿಲ್ಲ. ಇದರಿಂದ ನಮ್ಮ ಅಣ್ಣನ ಹೆಂಡತಿಯ ಮನದಲ್ಲಿ ಮಾತ್ರ ಕಳವಳವು ಎದ್ದಿತೇನೊ! ಅವಳು ಏನೇನೋ ನೆಪಗಳನ್ನೊಡ್ಡಿ ಕಲಹಗಳಿಂದ ಸಂತಾಪಪಟ್ಟು ಇದ್ದುದಿದ್ದ ಹಾಗೆಯೇ ಒಂದು ದಿನ ತಮ್ಮ ತವರು ಮನೆಗೆ ಹೋಗಿಬಿಟ್ಟಳು. ಅವಳ ಮಗಳು ಬಗರನಾಳದಲ್ಲಿಯೇ ಇರುತ್ತಿದ್ದಳು. ಕಳವಳಗೊಂಡ ಅವಳಿಗೆ ತನ್ನ ಮಗಳ ಪರಿವೆಯೂ ಇರಲಿಲ್ಲ. ಮುಂದೆ ಈ ಹೊಸ ಸಂಬಂಧದ ಮಾತು ಜನಜನಿತವಾಯಿತು. ಇದರ ಬಗ್ಗೆ ಏನಾದರೂ ತಿಳುವಳಿಕೆಯನ್ನು ಉಂಟುಮಾಡಬೇಕೆಂದರೆ ನಮ್ಮ ತಾಯಿತಂದೆಗಳಿಗೂ ಒಂದು ಬಗೆಯ ಸಂಕೋಚ. ನಡೆವ ಈ ಅನಾಚಾರದಿಂದ ಅವರಿಬ್ಬರೂ ಮನದಲ್ಲಿಯೇ ಬಹಳ ನೊಂದುಕೊಂಡಿದ್ದರು. ಬಾಯಿಬಿಚ್ಚಿ ಹೇಳಿ, ನಡೆದ ತಪ್ಪನ್ನು ತಿದ್ದಿ ಸರಿಪಡಿಸಬೇಕೆಂದರೆ ನಮ್ಮ ತಾಯಿಗೆ ಒಂದು ಬಗೆಯ ನಾಚಿಕೆ. ನಮ್ಮ ಅಣ್ಣ, ನಮ್ಮ ತಾಯಿ ಇಬ್ಬರೂ ಸಮಾನ ವಯಸ್ಕರು. ತಂದೆ ವಯಸ್ಸಾದವರಾದುದರಿಂದ ಮನದಲ್ಲಿಯೇ ನೊಂದು ಒಂದು ಬಗೆಯ ವೈರಾಗ್ಯ ಭಾವನೆಯಿಂದ ದಿನಗಳನ್ನು ನೂಕುತ್ತಿದ್ದರು. ಆದರೂ ನಮ್ಮ ಕುಟುಂಬವು ಹೇಗೋ ಮುಂದುವರಿಯುತ್ತಲೇ ಇದ್ದಿತು. ತವರುಮನೆಗೆ ಹೊರಟುಹೋದ ಸೊಸೆಯನ್ನು ಮರಳಿ ಕರೆಯಿಸಲು ನಾಲ್ಕಾರು ಸಲ ಪ್ರಯತ್ನ ಮಾಡಿಯೂ ಆಯಿತು. ಆದರೆ ಅವಳು ಚಂಡಿ ಹ ಹಿಡಿದು ರಂಭಾಟ ಹೂಡಿ ಬರಲು ಒಪ್ಪಲೇ ಇಲ್ಲ. ಮಗಳು ಮದುವೆಯ ವಯಸ್ಸಿನವಳಾದರೂ ಅವಳಿಗೆ ಅದರ ಪರಿವೆಯಿರಲಿಲ್ಲ. ಆಗ ಹೆಣ್ಣಿನ ಮದುವೆಗೆ ಹತ್ತು ವರ್ಷದ ವಯಸ್ಸೆಂದರೆ ಹೆಚ್ಚಾದಂತೆ. ಬಾಲ್ಯ ವಿವಾಹಕ್ಕೇ ಪ್ರಾಧಾನ್ಯ. ಆ ಮಗಳ ವಯಸ್ಸು ಹತ್ತು ಆದಾಗ ತಾಯಿ ಬಾರದಿದ್ದರೂ ಚಿಂತೆಯಿಲ್ಲ ತಾವೇ ವರನನ್ನು ನೋಡಿ, ನಮ್ಮ ಹಿರಿಯರು ಅವಳ ಮದುವೆಯ ನಿಶ್ಚಯವನ್ನು ಮಾಡಿದರು. ಮದುವೆಯ ಕಾಲದಲ್ಲಿ ನಾಲ್ಕು ದಿನ ಮಾತ್ರ ಬಂದು, ಆ ಸೊಸೆಯು ಅಸಂತೃಪ್ತತೆಯನ್ನೇ ತೋರಿಸುತ್ತ, ಹೇಗೋ ಇರುತ್ತಿದ್ದಳು. ಮಗಳ ಮದುವೆಯ ಈ ಕಾರ್ಯದ ಯಾವ ಬಗೆಯ ಸಂತೋಷವನ್ನೂ ಆ ತಾಯಿ ಅನುಭವಿಸಲಿಲ್ಲ. ಆ ಮಗಳು ಕೂಡಾ ತಮ್ಮ ತಾಯಿಯನ್ನು ಅಷ್ಟೊಂದು ಹಚ್ಚಿಕೊಂಡಿರಲಿಲ್ಲ. ನಮ್ಮ ತಾಯಿಯ ಮೇಲೆಯೇ ಅವಳ ವಿಶೇಷವಾದ ಮಮತೆ.

ಬೇಡರ ಯುವತಿಯೆಂದರೆ ಅವಳು ಹೊಸಬಳೇನೂ ಅಲ್ಲ. ನಮ್ಮ ಮನೆಯಲ್ಲಿ ಮನೆಗೆಲಸಕ್ಕಾಗಿ ಇದ್ದವಳಾಕೆ. ಅಷ್ಟೊಂದು ಸುಸ್ವರೂಪಿಯೂ ಇದ್ದಳೆಂದು ಹೇಳು ವಂತಿಲ್ಲ. ಆದರೆ ಕಾಮದ ಕಣ್ಣು ಕುರುಡು. ನಮ್ಮ ಅಣ್ಣನ ಪ್ರೀತಿ ಅವಳಲ್ಲಿ ದಿನದಿನಕ್ಕೆ ಬೆಳೆಯತೊಡಗಿತು. ಮನೆಯ ಕೆಲಸದ ಕೂಲಿ, ನಲ್ಲನಿಂದ ಕದ್ದು ಮುಚ್ಚಿ ದೊರೆಯುವ ಕಾಣಿಕೆ, ಇವುಗಳಿಂದ ಅವಳ ಆದಾಯವು ಹೆಚ್ಚಿತು. ಅವಳು ಮದುವೆಯ ಗಂಡನಿಂದ ತ್ಯಾಗಪತ್ರವನ್ನು ಪಡೆದು, ಎಲ್ಲರಿಗೂ ಗೊತ್ತಾಗುವಂತೆ ಆಕೆಯು ಈಗ ನಮ್ಮ ಅಣ್ಣನ ನಲ್ಲೆಯಾದಳು. ಮುಂದೆ ಗರ್ಭವತಿಯಾಗಿ ಒಂದು ಹೆಣ್ಣುಮಗುವನ್ನೂ ಆಕೆ ಹೆತ್ತಳು. ಕೂಸು ತಂದೆಯ ಮಗಳಲ್ಲ, ತಾಯಿಯ ಮಗಳು. ಜನನ ರಜಿಸ್ಟರ್‌ನಲ್ಲಿ ಗೌಡನು ಹಾಗೆ ಬರೆದು ಕೊಂಡನು. ಅಲ್ಲಿ ಕೈಹಿಡಿದ ಹೆಂಡತಿಯು ಮತ್ತಷ್ಟು ಉರಿದು ಬಿದ್ದಳು. ಹೆಣ್ಣು ಹೆಂಗಸು ಸಂತೃಪ್ತಳಾಗಿ ನಿಟ್ಟುಸಿರು ಬಿಡುವುದಲ್ಲದೆ ಇನ್ನೇನನ್ನು ಮಾಡುವಳು ?

ನಮ್ಮ ಕುಟುಂಬವೆಲ್ಲವೂ ಬರಗಾಲದಿಂದ ವಿಮೋಚನೆ ಪಡೆದು ಮತ್ತೆ ಬೆಟಗೇರಿಗೆ ಬಂದಿತು. ಎಲ್ಲವೂ ಸಾಮಾನ್ಯವಾಗಿ ಸಾಗಿತು. ನಾವು ನಮ್ಮ ಅಣ್ಣನನ್ನು ಮಧ್ಯಾಹ್ನದ ಊಟಕ್ಕೆ ಹೊತ್ತಾದಾಗ ಕರೆಯಲು ಹೋಗಬೇಕಾದರೆ ಆ ಬೇಡರವಳ ಮನೆಗೇ ಹೋಗಬೇಕಾಗಿದ್ದಿತು. ನಮಗೆ ಕೂಡ ಆಕೆಯಿಂದ ಸಲ್ಲಬೇಕಾದಷ್ಟು ಆತ್ಮೀಯ ಮಮತೆಯು ದೊರೆಯುತ್ತಿತ್ತು. ಮನೆಗೆ ಬಂದು ಕೈಕಾಲು ತೊಳೆದು ಕೊಂಡು, ಮೈಲಿಗೆಯ ಧೋತರ ಕಳೆದು ಮಡಿಯನ್ನುಟ್ಟುಕೊಂಡೇ ಊಟಕ್ಕೆ ಕುಳಿತುಕೊಳ್ಳುವನು ನಮ್ಮ ಅಣ್ಣ. ನಮ್ಮ ಚಿಕ್ಕ ತಮ್ಮನ ವಿಷಯದಲ್ಲಿ ಅವನಿಗೆ ಒಂದು ಹೆಚ್ಚಿನ ಆಸಕ್ತಿ. ಊಟಕ್ಕೆ ಕುಳಿತಾಗ ಜೊತೆಯಲ್ಲಿ ಕುಳ್ಳಿರಿಸಿಕೊಂಡು ತನ್ನ ಊಟದಲ್ಲಿಯೇ ಅವನಿಗೆ ಉಣ್ಣಿಸುವ ಕೆಲಸವನ್ನು ನಮ್ಮಣ್ಣನು ಮಾಡು ತ್ತಿದ್ದನು. ನಮ್ಮ ತಂದೆಯವರು ತಮ್ಮ ವಯಸ್ಸಿನ ಮನೋಧರ್ಮದ ಮೂಲ ಕವೋ ಏನೋ ಸಹಜವಾದ ವೈರಾಗ್ಯಭಾವದಿಂದ ಇದನ್ನು ಕಾಣುತ್ತಲಿದ್ದರು. ನಮ್ಮ ಅಣ್ಣನ ವಿಷಯಕವಾಗಿ ಪ್ರಶ್ನವನ್ನೆತ್ತಿ ಕೇಳುವ ವಯಸ್ಸು ನಮಗೂ ಇರಲಿಲ್ಲ. ಆದುದರಿಂದಲೇ ಆ ಬೇಡರವಳ ಸಹವಾಸದಲ್ಲಿಯೇ ಈ ಬ್ರಾಹ್ಮಣನು ಇದ್ದು, ಮನೆಯ ಸಂಪ್ರದಾಯಗಳನ್ನೆಲ್ಲ ಚಾಚೂ ತಪ್ಪದೇ ನಡೆಯಿಸುತ್ತಿದ್ದರು. ಸಂಪ್ರದಾಯಗಳನ್ನು ಮೀರಿ ನಡೆಯುವದು ಪಾಪವೆಂಬ ಭಾವನೆ ಅವನಿಗೆ ಇರ ಬಹುದಾದದ್ದೂ ಬೇಡರ ಹೆಂಗಸಿನೊಡನೆ ಸಂಬಂಧವನ್ನಿರಿಸಿಕೊಳ್ಳುವುದು ಅಪರಾಧ ವೆಂಬ ಭಾವನೆ ಅವನಲ್ಲಿ ಇರಲೇಇಲ್ಲ. ಹೊಲಮನೆಯ ಕೆಲಸಗಳನ್ನೆಲ್ಲ ಆಳಿ ನೊಂದಿಗೆ ಅವನೇ ನೋಡಿಕೊಳ್ಳುತ್ತಿದ್ದನು. ಸಮೃದ್ಧವಾದ ಕಾಲವದು. ಬೆಳೆದು

ಬರುವ ಕಾಳಿಗೆ ಕೊರತೆಯಿರಲಿಲ್ಲ. ಹೆಚ್ಚಿನ ಐಷಾರಾಮದ ಯಾವ ಹವ್ಯಾಸವನ್ನು ನಮ್ಮ ಕುಟುಂಬವು ಹಚ್ಚಿಕೊಂಡಿರಲಿಲ್ಲ. ಆದುದರಿಂದ ಬಂದಷ್ಟರಲ್ಲಿ ಸುಖವಾಗಿ ದಿನಗಳನ್ನು ಕಳೆಯುತ್ತಿದ್ದೆವು.

ಇಲ್ಲಿ ಒಂದು ವಿಶಿಷ್ಟವಾದ ನನ್ನ ನೆನಪನ್ನು ವಿವರಿಸಿ ಹೇಳಬೇಕೆನಿಸುತ್ತದೆ. ನಮ್ಮ ಅಣ್ಣನ ಮಗಳ ಪತಿಯ ಮನೆಯವರಿಂದ ನಮಗೆ ಶೂರ್ಪಾಲಿಯ ನರಸಿಂಹ ದೇವರ ಜಾತ್ರೆಗೆ ಕರೆಬಂದಿತು. ಸವಾರಿ ಬಂಡಿಯನ್ನು ಕೊಟ್ಟು ಕಳುಹಿಸಿದರು. ಮನೆಯಲ್ಲಿ ಚಿಕ್ಕ ತಮ್ಮ ತಂಗಿಯರು ಅವರ ತಾಯಿ ಹಿರಿಯಣ್ಣಂದಿರು ಇದ್ದು ಮಿಕ್ಕವರೆಲ್ಲ ಶೂರ್ಪಾಲಿಗೆ ಹೋಗಬೇಕೆಂದು ನಿರ್ಣಯವಾಯಿತು. ನನಗಂತೂ ಹೊಸ ಊರನ್ನು ಕಾಣುವೆನೆಂದು ಹಿಗ್ಗೋ ಹಿಗ್ಗು. ಬಿಟಗೇರಿಯಿಂದ ಶೂರ್ಪಾಲಿ ಮೂವತ್ತಾರು ಮೈಲುಗಳಷ್ಟು ದೂರದಲ್ಲಿದೆ. ಸಾರಿಗೆಯ ಸೌಕರ್ಯವಿಲ್ಲದ ಆ ಕಾಲದಲ್ಲಿ ಬಂಡಿಯ ಪ್ರಯಾಣದಿಂದ ಹೋಗಬೇಕಾದರೆ ಮಧ್ಯೆ ಒಂದು ವಸತಿ ಯಾಗುತ್ತಿದ್ದಿತು. ನಾವೆಲ್ಲ ಹೊರಟೆವು. ಹಾದಿಯಲ್ಲಿ ಹತ್ತುವಲ ಅನೇಕ ಹಳ್ಳಿಗಳನ್ನು ಕಣ್ಣಾರೆ ನೋಡುತ್ತಾ, ಸಂತೋಷಪಡುತ್ತಾ, ಮುನ್ನಡೆದೆವು. ಆ ದಿನದ ಮಧ್ಯಾಹ್ನದ ಊಟವನ್ನು ಧವಳೇಶ್ವರ ಎಂಬ ಹೆಸರಿನ ಹಳ್ಳಿಯೂರಲ್ಲಿ ಅಡಿಗೆ ಮಾಡಿಕೊಂಡು ಮುಗಿಸಿದೆವು. ಆಗ ಮಡಿವಂತಿಕೆಯ ಕಾಲ. ಊರೂರಲ್ಲಿ ಖಾನಾವಳಿ, ಊಟದ ಮನೆಗಳು ಇರುತ್ತಿರಲಿಲ್ಲ. ಅಲ್ಲದೆ ಊಟ ಮಡಿಯಿಂದಲೇ ಆಗಬೇಕು. ಆದುದರಿಂದ ಆ ಅಡಿಗೆಯಾಗಿ ಊಟದ ಕೆಲಸ ಮುಗಿಯಬೇಕಾದರೆ ನಾಲ್ಕು ಗಂಟೆಯೇ ಆಯಿತು. ಆಮೇಲೆ ಸಂಜೆಯ ಕಡೆಗೆ ಗಾಡಿಯನ್ನು ಹೂಡಿ, ಹೊರಟೆವು. ಮಹಾಲಿಂಗಪುರ ಎಂಬ ದೊಡ್ಡ ಊರಲ್ಲಿ ಧರ್ಮಶಾಲೆಯೊಂದರಲ್ಲಿ ತಂಗಿ, ರಾತ್ರಿಯನ್ನು ಕಳೆಯಬೇಕೆಂದು ನಿರ್ಧರಿಸಿದೆವು. ವಧುವಾದ ನಮ್ಮ ಅಣ್ಣನ ಮಗಳು ಮೊದಲೇ ತನ್ನ ಪತಿಯ ಮನೆಗೆ ಹೋಗಿದ್ದಳು. ಆದರೆ ದೂರದ ಪ್ರವಾಸವೆಂದು ಅವಳ ಆಭರಣಗಳನ್ನು ಅವಳ ಜೊತೆಗೆ ಕೊಟ್ಟಿರಲಿಲ್ಲ. ಈಗ ಅದನ್ನೆಲ್ಲ ಅವರಿಗೆ ಒಪ್ಪಿಸಿ ಕೊಡಬೇಕೆಂದು ನಮ್ಮ ತಂದೆಯವರು ಜೋಕೆಯಿಂದ ಅವುಗಳನ್ನು ತಮ್ಮ ಕಡೆಗೇ ಇಟ್ಟುಕೊಂಡು ಪ್ರವಾಸವನ್ನು ನಡೆಯಿಸಿದ್ದರು. ಆಭರಣವೆಂದರೆ ಸ್ವಲ್ಪ ಚಿನ್ನವಲ್ಲ. ಇಂದಿನ ಕಾಲದವರಿಗೆ ಆಶ್ಚರ್ಯವೂ ಎನಿಸಬಹುದು. ಒಂದು ಸೇರು ಬಂಗಾರದ ಸರಿಗೆ೧೦ ಒಂದು ಸೇರು ಬಂಗಾರದ ನಾಗಮುರಿಗೆ ೧೧ ಒಂದು ಚಿನ್ನದ ಡಾಬು.೧೨ ಎರಡು ಗೋಟುಗಳು೧೩ ಬೇರೆ ಸಣ್ಣಪುಟ್ಟ ಆಭರಣಗಳು. ಎಲ್ಲವೂ ಸೇರಿ ಸವಾರು ಮೂರುವರೆ ಸೇರು ಬಂಗಾರ ವಿದ್ದಿತು. ಎಂತಲೇ ಅವನ್ನು ಹಾಕಿ ಬಿಗಿದುಕಟ್ಟಿದ ಚೀಲವನ್ನು ನಮ್ಮ

ತಂದೆಯವರು ಯಾರಿಗೂ ಕೊಡುತ್ತಿರಲಿಲ್ಲ. ತಮ್ಮ ದೇವರಪೆಟ್ಟಿಗೆ ಹಾಕಿದ ಚೀಲದಲ್ಲಿಯೇ ಆ ಆಭರಣಗಳನ್ನು ಹಾಕಿದ ಹಿತ್ತಾಳೆಯ ಡಬ್ಬಿಯೊಂದನ್ನು ಇರಿಸಿಕೊಂಡು ತಮ್ಮ ಕೈಯಲ್ಲಿಯೇ ಅದನ್ನು ಇಟ್ಟುಕೊಂಡಿರುತ್ತಿದ್ದರು. ಸರಿ. ಆ ರಾತ್ರಿಯನ್ನು ಮಹಾಲಿಂಗಪುರದ ಧರ್ಮಶಾಲೆಯ ಒಂದು ಕೋಣೆಯಲ್ಲಿಯೇ ಕಳೆದಾಯಿತು, ಮರುದಿನ ಬೆಳಗ್ಗಿದಲ್ಲಿ ನಾವು ಮುಂದೆ ಹೋಗಬೇಕು. ಚಕ್ಕಡಿಯನ್ನು ಎತ್ತುಗಳಿಂದ ಕಟ್ಟಿ ಮುಂದೆ ಹೋಗುವ ಸಿದ್ಧತೆಯಾಯಿತು. ಆಗ ನಮ್ಮ ತಂದೆಯವರು ಪ್ರಾತರ್ವಿಧಿಗಳಿಗಾಗಿ ಹೊರಗೆ ಹೋಗುವ ಸಂದರ್ಭವಿದ್ದಿತು. ಆಗ ಗಾಡಿಯು ಮುಂದೆ ಹೋಗಲೆಂದು ಅದುವರೆಗೆ ಈ ಚೀಲವನ್ನೂ ತಮ್ಮ ಕೈಯಲ್ಲಿಯ ಬಡಿಗೆಯೊಂದನ್ನೂ ಇಟ್ಟುಕೊಂಡಿರಬೇಕೆಂದು ನಮ್ಮ ಹಿರಿಯಕ್ಕನ ಕಡೆಗೆ ಅದನ್ನು ಕೊಟ್ಟರು. ಅಕ್ಕನಿಗೆ ಏನೋ ಕಟ್ಟುವ–ಕೊರೆಯುವ ಕೆಲಸವಿದ್ದುದರಿಂದ ನಮ್ಮ ಇನ್ನೊಬ್ಬ ಕಿರಿಯಕ್ಕ ಅವುಗಳನ್ನು ತನ್ನ ಕಡೆಗೆ ತೆಗೆದುಕೊಂಡಳು. ಆದರೆ ಚಕ್ಕಡಿಯಲ್ಲಿ ಹತ್ತುವ ಸಂಭ್ರಮದಲ್ಲಿ ಅವಳು ಆ ಚೀಲವನ್ನು ಧರ್ಮಶಾಲೆಯ ಮುಂಗಟ್ಟೆಯ ಮೇಲೆ ಇಟ್ಟವಳು ಹಾಗೆಯೇ ಆ ಚೀಲವನ್ನೂ, ಬಡಿಗೆಯನ್ನೂ ಮರೆತು ಸಂಭ್ರಮದಲ್ಲಿ ಗಾಡಿಯನ್ನು ಹತ್ತಿ ಕುಳಿತಳು. ಯಾರಿಗೂ ಆ ಚೀಲದ ಮತ್ತು ಬಡಿಗೆಯ ಪರಿವೆಯೇ ಇರಲಿಲ್ಲ.

ಗಾಡಿಯು ಮುಂದೆ ಸಾಗಿತು. ನಮ್ಮ ತಂದೆಯವರು ಇನ್ನೊಂದು ಕಡೆಗೆ ತಮ್ಮ ಪ್ರಾತರ್ವಿಧಿಗಾಗಿ ಹೋದರು. ಗಾಡಿಯು ಒಂದು ಮೈಲಿನಷ್ಟು ಮುಂದುವರಿದಿರಬಹುದು. ತಮ್ಮ ಪ್ರಾತರ್ವಿಧಿಯನ್ನು ಮುಗಿಸಿಕೊಂಡು ನಮ್ಮ ತಂದೆಯವರು ಚಕ್ಕಡಿಯ ಬಳಿಗೆ ಬಂದರು. ಚಕ್ಕಡಿಯ ಧಡಿಕೆಗಳಯ ಪ್ರವಾಸ. ಶಾಂತವಾದ ಬಿಸಿಲಿಲ್ಲದ ತಂಪಾದ ವೇಳೆ. ಆಗ ತಾವು ನಡೆದುಕೊಂಡೇ ಕೆಲವು ದೂರ ಪ್ರಯಾಣ ಮಾಡಬೇಕೆಂದು ನಮ್ಮ ತಂದೆಯವರಿಗೆ ಮನಸ್ಸಾಯಿತು. ಆದುದರಿಂದ ಕೈಯಲ್ಲಿಯ ಬಡಿಗೆಯನ್ನು ಕೊಡಲು ಗಾಡಿಯಲ್ಲಿ ಕುಳಿತ ನಮ್ಮ ಅಕ್ಕನಿಗೆ ಹೇಳಿದರು. ಒಬ್ಬರಿಗೂ ನೆನಪು ಇಲ್ಲ. ಗಾಡಿಯಲ್ಲೆಲ್ಲ, ಬಡಿಗೆಯನ್ನು ಹುಡುಕಿದೆವು. ಅದು ಸಿಕ್ಕಲಿಲ್ಲ. ಆ ಬಡಿಗೆಯಿಲ್ಲದ ತಾವು ಮುಂದೆವರಿಯಲಾರೆನೆಂದು ಹಟ ಹಿಡಿದು ನಮ್ಮ ತಂದೆಯವರು ಮರಳಿ ಧರ್ಮಶಾಲೆಯಲ್ಲಿ ಇದ್ದರೆ ಅದನ್ನು ಹುಡುಕಿ ತರಬೇಕೆಂಬ ನಿರ್ಣಯದಿಂದ ಬರಬರನೆಗಿಜ ತಿರುಗಿ ಹೊರಟುಬಿಟ್ಟರು. ಮುಪ್ಪಿನ ವಯಸ್ಸಿನವರಾದುದರಿಂದ ಅವರ ಜೊತೆಗೆ ಯಾರಾದರೂ ಇರಬೇಕೆಂದು ನಮ್ಮ ಹಿರಿಯಕ್ಕನೂ, ನಾನೂ ಅವರೊಡನೆ ಹೊರಟೆವು. ಮೊದಲು ಇಳಿದುಕೊಂಡ ಧರ್ಮಶಾಲೆಗೆ ಹೋದೆವು. ಅಲ್ಲಿ ಕಸಗೂಡಿಸುವ ಹೆಂಗುಸೊಬ್ಬಳು ಇದ್ದು, ನಾವು

ಬಡಿಗೆಯನ್ನು ಹುಡುಕುವುದನ್ನು ನೋಡಿ ನಮ್ಮನ್ನು ಸಹಜವಾಗಿ, "ಏನು ಕಳೆದೈತಿ? ಏನು ಹುಡುಕ್ತಾ ಇದ್ದೀರಿ" ಎಂದು ಕೇಳಿದಾಗ ನಮ್ಮ ಹಿರಿಯಕ್ಕ ಅವಳಿಗೆ–"ನಿನ್ನೆ ರಾತ್ರಿ ನಾವಿಲ್ಲಿ ಉಳಿದುಕೊಂಡಿದ್ದೆವು. ನಮಗೆ ಮುಂದೆ ಪ್ರಯಾಣ ಮಾಡುವದಿದೆ. ನಮ್ಮ ಚಕ್ಕಡಿಯು ಮುಂದೆ ಹೋಗಿದೆ. ಆದರೆ ಈ ಮುದುಕರ ಕೈಯಲ್ಲಿಯ ಬಡಿಗೆ ಕಳೆದುಹೋದುದರಿಂದ ಅದನ್ನು ಇಲ್ಲಿಯೇ ಬಿಟ್ಟಿರಬಹುದೆಂದು ಹುಡುಕುತ್ತಲಿದ್ದೇವೆ" ಎಂದು ಹೇಳಿದಳು. ಕೂಡಲೇ ಅವಳು ಹತ್ತಿರದಲ್ಲಿಯೇ ಇರುವ ತನ್ನ ಮನೆಗೆ ಹೋಗಿ ಬಡಿಗೆಯನ್ನು ಕೈಯಲ್ಲಿ ತೆಗೆದುಕೊಂಡು ಬಂದಳು. "ಇದು ನಿಮ್ಮದೇ ?" ಎಂದು ಕೇಳಿ, "ಅಹುದು" ಎಂದು ಹೇಳಿದಾಗ, ಅದನ್ನು ನಮಗೆ ಒಪ್ಪಿಸಿದಳು. ಬಡಿಗೆ ದೊರೆತ ಸಂತೋಷದಲ್ಲಿ ನಾವು ಧರ್ಮಶಾಲೆಯಿಂದ ಹೊರಟೆವು. ಆಗ ಕಸಗುಡಿಸುವಾಕೆ ಮತ್ತೆ "ನಿಮ್ಮ ಸಾಮಾನು ಕಳೆದುಹೋದದ್ದು ಒಂದು ಬಡಿಗೆಯೋ ಮತ್ತೇನಾದರೂ ಹೋಗಿದೆಯೋ ?" ಎಂದು ಕೇಳಲು, ನಾವೆಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳುತ್ತ ಹಾಗೆಯೇ ನಿಂತೆವು. ಆಗ ಆ ಕಸಗೂಡಿಸುವಾಕೆ ಮತ್ತೆ ತನ್ನ ಮನೆಗೆ ಹೋಗಿ ಚೀಲವೊಂದನ್ನು ತೆಗೆದುಕೊಂಡು ಬಂದು "ಆ ಬಡಿಗೆಯ ಹತ್ತಿರವೇ ಇದು ಇದ್ದಿತು, ಇದು ನಿಮ್ಮದೇ" ಎಂದು ಕೇಳಿದಳು. ನಮ್ಮ ತಂದೆಯವರಿಗೆ ಎದೆಯೊಡೆದಂತಾಯಿತು. ತಾವು ಆ ಚೀಲದಲ್ಲಿಟ್ಟದು ಮೂರುವರೆ ಸೇರು ಬಂಗಾರವೆಂಬುದು ಗೊತ್ತಾಯಿತು. ನಮ್ಮ ಹಿರಿಯಕ್ಕನಿಗೂ ಖೇದಯುಕ್ತವಾದ ಆಶ್ಚರ್ಯ. ಆಗ ಅವಳು "ಅಹುದು. ಇದು ನಮ್ಮ ಚೀಲವೇ. ನಮ್ಮವ್ವ, ನಮಗೆ ದೊಡ್ಡ ಉಪಕಾರ ಮಾಡಿದೆ. ಈ ದಿನ ನಾವು ಯಾರ ಮುಖವನ್ನು ಕಂಡಿದ್ದೆವೋ ಏನೋ ಈ ಚೀಲದೊಂದಿಗೆ, ಅದು ಇಲ್ಲವೆಂದು ಕಂಡಾಗ ನಮ್ಮ ಪ್ರಾಣವೇನೂ ಉಳಿಯುತ್ತಿರಲಿಲ್ಲ. ನಮ್ಮ ಮನೆತನಕ್ಕೆ ದೊಡ್ಡ ಅಪಮಾನದ ಪ್ರಸಂಗವೇ ಇದ್ದಿತು." ಎಂದು ಹೇಳಿದಾಗ, ಆ ಕಸಗೂಡಿಸುವಾಕೆಯು ಆ ಚೀಲದಲ್ಲಿ ಬೆಲೆಯುಳ್ಳ ಪದಾರ್ಥಗಳಿರಬಹುದೆಂದು ತಿಳಿದು, ಒಂದು ದುರಾಸೆ ಉಂಟಾಯಿತು. ಆಗ ಅವಳು "ಇದು ಯಾರ ಚೀಲವೋ ನನಗೆ ಗೊತ್ತಿಲ್ಲ. ನಿಮ್ಮದೆ ಆಗಿದ್ದರೆ ನಮ್ಮೂರ ಫೌಜದಾರರಗಿ ಮುಂದೆ ಇದನ್ನು ಹೇಳಿ ನಿಮ್ಮದೆಂದು ಬರೆದುಕೊಟ್ಟು ತೆಗೆದುಕೊಂಡು ಹೋಗಿರಿ" ಎಂದು ಹಟ ಹಿಡಿದಳು. ನಿರ್ವಾಹವಿಲ್ಲದೆ ಫೌಜದಾರರ ಕಡೆಗೆ ನಾವೆಲ್ಲರೂ ಹೋದೆವು. ಆಗ ಫೌಜದಾರರು ಅವಸರದಿಂದ ಬಹಿರ್ದೆಶೆಗಾಗಿಗಿ ಹೊರಟಿದ್ದರು. ಕಸಗೂಡಿಸುವಾಕೆ ಅವರಿಗೆ ಬಿನ್ನವಿಸಿಕೊಂಡಳು. "ಇವರು ನಿನ್ನೆ ರಾತ್ರಿ ನಮ್ಮ ಧರ್ಮಶಾಲ್ಯಾಗ ಇಳಕೊಂಡಿದ್ರಂತ. ಮುಂದ ಹೋಗವರು. ಇಂದ ಬೆಳಿಗ್ಗಿ ಎದ್ದು, ಹೋಗುಮುಂದ ಇವರು ಒಂದು ಬಡಿಗೆಯನ್ನೂ, ಈ

ಚೀಲವನ್ನೂ ಅಲ್ಲಿಯೇ ಮರೆತುಹೋಗಿದ್ದರು. ನಾನು ಕಸಗೂಡಿಸುವಾಗ ಇವುಗಳನ್ನು ಕಂಡು, ತೆಗೆದು ಇಟ್ಟಿದ್ದೆ. ಈಗ ಅವರು ಬಂದು ತಮ್ಮ ವಸ್ತುಗಳೆಂದು ಕೇಳುತ್ತಿದ್ದಾರೆ. ಇವುಗಳನ್ನು ನಾನು ಕೊಡಬೇಕೋ, ಹೇಗೆ ? ಎಂಬುದನ್ನು ನೀವು ನಿರ್ಣಯಿಸಿ ಹೇಳಿ" ಎಂದು ಹೇಳಲು, ಆಗ ಫೌಜದಾರರಿಗೆ ಎಂತಹ ಗಡಿಬಿಡಿಯೋ, ಹೆಚ್ಚಿನ ಯಾವ ಮಾತನ್ನೂ ಆಡದೆ, "ಅವರ ಮಾಲು ಹೌದಲ್ಲೊ, ಅವರಿಗೆ ಕೊಟ್ಟುಬಿಡು ಪಾಪ" ಎಂದು ನುಡಿದು, ಕೈಯಲ್ಲಿಯ ತಂಬಿಗೆ ನೀರಿನೊಂದಿಗೆ ಅವರು ಹೊರಟುಹೋದರು. ಆಕೆ ನಿರ್ವಾಹವಿಲ್ಲದೆ ಎರಡನ್ನೂ ನಮಗೆ ಒಪ್ಪಿಸಿ, ತಾನು ಧರ್ಮಶಾಲೆ ಕಡೆಗೆ ಹೋದಳು. ಸಾವಿರಾರು ರೂಪಾಯಿಗಳನ್ನು ನಾವು ಮರಳಿ ಪಡೆದಿದ್ದರೂ ಪಾಪ ಅವಳಿಗೆ ಏನನ್ನಾದರೂ ಸಂಭಾವನೆ ಕೊಡಬೇಕೆಂಬ ವಿಚಾರವನ್ನೇ ಸಂಭ್ರಾಂತರಾದ ನಾವು ಪಡೆಯಲಿಲ್ಲ. ಕಳೆದ ಬಂಗಾರ ದೊರೆಯಿತೆಂಬ ಹಿಗ್ಗಿನಿಂದ ನಾವು ಮಿಕ್ಕುದಾವುದನ್ನೂ ಲಕ್ಷ್ಯಕ್ಕೆ ತರಲೇ ಇಲ್ಲ. ಗಾಡಿಯೂ ದಾರಿಯನ್ನು ನೋಡುತ್ತಾ ಹಾಗೆಯೇ ನಿಂತುಕೊಂಡಿತ್ತು. ಬಡಿಗೆ ಚೀಲಗಳು ದೊರೆತ ಸಂತೋಷದ ಸುದ್ದಿಯನ್ನು ಹೇಳುತ್ತ ನಾವು ಗಾಡಿಯನ್ನೇರಿ ಕುಳಿತೆವು. ಕುಸಿದುಹೋದ ನಮ್ಮ ತಂದೆಯವರು ಮಾತ್ರ ಅಂದು ಗಾಡಿಯಲ್ಲಿ ಕುಳಿತುಕೊಳ್ಳಲೇ ಇಲ್ಲ. ಆಗಾಗ "ಅಯ್ಯೋ, ನನ್ನ ಸಂಸಾರದ ಘಾತವೇ ಆಗುತ್ತಿತ್ತು" ಎಂದು ದೀರ್ಘವಾಗಿ ಉಸಿರನ್ನು ಹಾಕುತ್ತ ನಡೆದುಕೊಂಡೇ ಬರುತ್ತಿದ್ದರು.

ನಾವು ಶೂರ್ಪಾಲಿಗೆ ಹೋದೆವು. ಎದೆಯೊಡೆದುಕೊಂಡ ನಮ್ಮ ತಂದೆಯವರು, ಎಂಥೆಂಥಾವ್ರೋ ದುಃಶಕುನಗಳನ್ನು ಕಂಡರು. ಊರಿಗೆ ಹೋದ ಮರುದಿನವೇ ವಿಷಮಜ್ವರದಿಂದ ಮಲಗಿದವರು ತಾವು ಕಳೆದುಕೊಂಡ ಬಂಗಾರದ ಸಂಗತಿಯನ್ನೇ ಮೈಮರೆವಿನಿಂದ ಕನವರಿಸುತ್ತಿದ್ದರು. ಸುಮಾರು ಇಪ್ಪತ್ತು ದಿನಗಳವರೆಗೆ ಅವರು ಜ್ವರದಿಂದ ನರಳುತ್ತಲೇ ಇದ್ದರು. ಜಾತ್ರೆಯ ಸಂಭ್ರಮಕ್ಕೆಂದು ಹೋಗಿದ್ದ ನಮಗೆ ಅದರ ಸೌಖ್ಯವೇ ಸಿಕ್ಕಲಿಲ್ಲ.

ಆಗಲೇ ನಮ್ಮ ಹಿರಿಯಣ್ಣನಿಗೂ ಆದ ಸಂಗತಿಯನ್ನೆಲ್ಲ ಪತ್ರ ಬರೆದು ತಿಳಿಸಿ, ಬೇಗನೆ ಬರಬೇಕೆಂದು ಸೂಚಿಸಿದ್ದೆವು. ದುರ್ಮಾರ್ಗನವನಾದರೂ ಚೊಚ್ಚಲು ಮಗನಾದ ಅವನಿಗೆ ತಂದೆಯವರಲ್ಲಿ ಭಕ್ತಿ ಹೆಚ್ಚು. ಕೂಡಲೇ 36 ಮೈಲುಗಳನ್ನು ನಡೆಯುತ್ತಲೇ ಬಂದು, ನಾವಿದ್ದ ಎಡೆಯನ್ನು ಸೇರಿ ತಂದೆಯ ಸೇವೆಗೆ ಅಣಿಯಾದ. ಎಂತಹ ಶ್ರಮದ ಕೆಲಸಕ್ಕೂ ಆತ ಹಿಂತೆಗೆಯುತ್ತಿರಲಿಲ್ಲ. ಅದಕ್ಕಾ

ಗಿಯೇ ನನಗೆ ಈಗಲೂ ಅವನಿಗೆ ಒಳ್ಳೆಯ ಮನುಷ್ಯನೆನ್ನಬೇಕೋ, ದುರ್ಮಾರ್ಗಿ ಎನ್ನಬೇಕೋ ಎಂಬುದು ತಿಳಿಯದಂತಾಗಿದೆ. ಇಂತಹ ಅಣ್ಣನನ್ನು ಪಡೆದುದಕ್ಕಾಗಿ ನಾವು ಭಾಗ್ಯವಂತರೋ, ದುರ್ದೈವಿಗಳೋ ಎಂಬ ಸಮಸ್ಯೆ ನನ್ನ ಮನಸ್ಸನ್ನು ಆಗಾಗ ಛೇಡಿಸುತ್ತದೆ. ಇನ್ನೊಂದು ಪ್ರಸಂಗದಲ್ಲಿ ಈತನ ಸ್ವಭಾವವನ್ನು ಮತ್ತೊಮ್ಮೆ ಮಾದರಿಗಾಗಿ ಚಿತ್ರಿಸಬೇಕೆಂದಿದ್ದೇನೆ. ಈಗ ಇಷ್ಟೇ ಸಾಕು.

---

೧. ಕೊಡುಗೆ
೨. Plaster
೩. ಅಕ್ಕಸಾಲಿಗ/ಸೊನ್ನಗಾರ
೪. ಇದ್ದ ಊರಾದ
೫. ಹಟ
೬. ಗದ್ದಲ
೭. ಸೋಡಚೀಟಿ
೮. ಕಾಣಸಿಗುವ
೯. ಇಳಿದುಕೊಂಡು
೧೦. ಕಂಠಾಭರಣ
೧೧. ತೋಳಬಂದಿ
೧೨. ನಡುಪಟ್ಟಿ
೧೩. ಚಿನ್ನದ ದುಂಡಗಿನ ಬಳೆ
೧೪. ತಗ್ಗುದಿನ್ನೆ
೧೫. ಬೇಗಬೇಗನೆ
೧೬. ಪೋಲಿಸ್ ಸಬ್ ಇನ್‌ಸ್ಪೆಕ್ಟರ್

ಹಾಡು—ಹಕ್ಕಿ

ಜಿ. ಪಿ. ಬಸವರಾಜು

ದಟ್ಟ ಹಸಿರಿನ ನಡುವೆ
ಗಟ್ಟಿ ಹಾಡುವ ಹಕ್ಕಿಯು
ಕೊರಳನ್ನು, ರೆಕ್ಕೆ–ಕಾಲು
ಆಕಾರ – ಬಣ್ಣಗಳನ್ನು

ಹುಡುಕುತ್ತ ನಡೆದೆವು–

ಬಿದ್ದುಕೊಂಡ ಮರದ ಬೊಡ್ಡೆ ಹೆಬ್ಬಾವುಗಳು
ಅಡ್ಡಗಟ್ಟಿ ನಿಂತ ಗೋಜಲು ಬಳ್ಳಿಗಳು
ನಿಗೂಢ ಪೊದೆಗಳು, ಹುಲ್ಲ ಮೆದೆಗಳು
ತಲೆ ಎತ್ತಿ ನಿಂತ ಉತ್ತುಂಗ ಮರಶಿಖರಗಳು
ಥಣ್ಣಗೆ ಕಾಲಡಿಯಲ್ಲೆ ಹರಿವ ಜುಳು ಜುಳು ಝರಿಗಳು
ಅರಳಿಕೊಂಡ ಹೂವುಗಳು ಹರಡಿಕೊಂಡ ಗಂಧಗಳು
ಮುಟ್ಟಿದರೆ ಮುದುಡುವ ಕನ್ನೆ ಎಲೆಗಳು

ಕಲಕುವ ಗಾಢ ಮೌನದಲ್ಲಿ
ಉಲಿಯುವ ಕೊರಳು

ಹುಡುಕುತ್ತ ನಡೆದೆವು–

ನೆತ್ತಿಯ ಮೇಲೆ
ಉರಿಯುವ ಸೂರ್ಯನಿರಲಿಲ್ಲ
ನಗುವ ಚುಕ್ಕೆ – ಚಂದ್ರಮರಿರಲಿಲ್ಲ
ಎದೆಭಾರ ಮೋಡಗಳಿರಲಿಲ್ಲ
ಮಳೆಯ ಹಾಡುಗಳಿರಲಿಲ್ಲ

ಹತ್ತೂ ದಿಕ್ಕಿಗೆ ಹಸಿರು
ಒಳಹೊಕ್ಕು ಹೊರಹೊಮ್ಮುವ ಹಸಿರು
ಉಸಿರೂಡುವ, ಉಸಿರು ಸಿಕ್ಕಿಸುವ
ಹಸಿರು, ಹಸಿರ ಉಸಿರು.

ಇಲ್ಲದ ದಾರಿಗಾಗಿ ಹುಡುಕುತ್ತ
ಹಾಡುವ ಹಕ್ಕಿಗಾಗಿ ಅರಸುತ್ತ
ನಡೆದೆವು–

ಹಸಿರ ಅಮಲಲ್ಲಿ
ಆಕಾರ ಮೂಡಿದಂತೆ
ಚಲನೆ ಕಾಡಿದಂತೆ
ನಿಶ್ಚಲತೆಗೆ ಜೀವ ಬಂದಂತೆ
ಅಡಗಿ ನಿಂತಂತೆ
ಹೊಂಚುತ್ತ ಹುರಿಗೊಂಡಂತೆ
ಮತ್ತೆ
ಮತ್ತೆ ಗುಮ್ಮಿಕೊಂಡು
ಬರುವ ಅದೇ ಕೊರಳು.

ಇನ್ನಷ್ಟು ನಡೆದು ನೋಡಿದೆವು
ದಿಟ್ಟಿಸಿದರೆ ಆತ ನಿಂತಿದ್ದ :
ಅರೆ ಬೆತ್ತಲೆಯಲ್ಲಿ;

ಸಿಗಿ ಸಿಗಿ ಕಣ್ಣುಗಳು
ಮಿರ ಮಿರ ಮಾಂಸಖಂಡಗಳು;
ಕೈಯಲ್ಲಿ
ಕೂರಂಬು
ಎದೆ ಏರಿದ ಬಿಲ್ಲು;

ಆತ
ಕೊರಲೆತ್ತಿದರೆ–

ಥೇಟು ಹಕ್ಕಿ
ಹಾಡು ;

ಸೊಲ್ಲು ಸೊಲ್ಲಿಗು
ಪಲ್ಲವಿಸುತ್ತಿತ್ತು ಪ್ರೇಮ;
ತೆಕ್ಕೆ ತೆರೆದು
ಜೋಡಿ ಕರೆಯುತ್ತಿತ್ತು ಕಾಮ.

ಹಸಿರೆಲ್ಲ ಹಾಡಾಗಿ
ಉಸಿರೆಲ್ಲ ಬಿಸಿಯಾಗಿ
ತಲ್ಲಣಿಸುತ್ತಿತ್ತು ಕಾಡು
ಲಲ್ಲೆಗರೆಯುತ್ತಿತ್ತು ಹಾಡು.

ನೋಡು ನೋಡುತ್ತಿದ್ದಂತೆ
ದಿಕ್ಕು ದಿಕ್ಕಿಗೆ ಧ್ವನಿ ತುಂಬಿ
ಹಸಿರಿಗೆ ಆಕಾರ ಬರೆದು
ನಿಜದ ಹಕ್ಕಿ ಬಂತು ಹೊರಗೆ.

ಧ್ವನಿಯ ಮೋಡಿಗೆ
ಮೋಹಗೊಂಡು
ಜೋಡಿ ಕರೆಯಿತು ಹಕ್ಕಿ
ನಿಜದ ಹಕ್ಕಿ.

ಟೊಂಗೆ ಟೊಂಗೆಗೆ ಜೀವ
ಗೆಲ್ಲು ಗೆಲ್ಲಿಗೆ ಉಲ್ಲಾಸ
ಹರೆಯ ಬಂತು ಧರೆಗೆ

ಹಕ್ಕಿ ಕರೆಯಿತು ಧ್ವನಿ ಎತ್ತಿ
ಹಕ್ಕಿ ಮೆರೆಯಿತು ಧ್ವಜ ಎತ್ತಿ

ಮರ ಮರ ಮೊರೆವ ಹಾಡು
ಮೈ ಮರೆತ ಹಕ್ಕಿ

ಮೈ ಮರೆತ ಕಾಡು
ಮೈ ಮರೆತ ನಾವು

ಕಪಟ ಕೊರಳ
ಹಿಂದಿನ ಕೈಗಳಿಂದ

ನೆಗೆದ ಕೂರಂಬು ನಡೆಸಿತು ದಾಳಿ
ನಿಜದ ಹಕ್ಕಿಯು ಎದೆಯನು ಸೀಳಿ

ಹಾಡೆಲ್ಲ ಒಡೆದು ಕಾಡೆಲ್ಲ ಚೂರು ಚೂರು
ದಿಕ್ಕೆಟ್ಟು ಕೂಗಿದವು ಕೊರಳು ನೂರು

೨ ಬೆಂಗಳೂರು ಪದ್ಯಗಳು

ಈ. ಚಂದ್ರಶೇಖರ ಪಾಟೀಲ

೧

ಬ್ರಿಗೇಡು ರೋಡಿನಲ್ಲಿ
ಕಟ್ಟಿರುವೆಯಂತೆ ನೆಲಕಚ್ಚಿ
ನಡೆಯುವ ಮೈ
ಪ್ರದರ್ಶನದ ಧಿಮಾಕಿನ ಜೀನ್ಸ್‌ಧಾರಿ ಹುಡುಗಿಯರು
ಬೇಕಂತಲೇ 'ಟಚ್' ಮಾಡುತ್ತ-
ಮೊಲೆಗಳನ್ನು ನಿಮಿರಿಸಿಕೊಂಡು ನಡೆಯುತ್ತಾರೆ;
ಮತ್ತು ಹುಡುಗರ ತೊಡೆಗಳಲ್ಲಿ
ನಡುಕ ಹುಟ್ಟಿಸುತ್ತಾರೆ

೨

ಉದ್ಯಾನವನಗಳಲ್ಲಿ ನಗೆಮಲ್ಲಿಗೆಯಂತೆ
ನಗುತ್ತ ಪ್ರೇಮಿಗಳು ಬೀಡು ಬಿಡುತ್ತಾರೆ,

ಪ್ರೇಮಿ–ಪ್ರೇಯಸಿಯು ತೊಡೆಯನ್ನೇ
ದಿಂಬನ್ನಾಗಿ ಮಾಡಿಕೊಂಡು ತಲೆ ಇರಿಸಿದ್ದಾನೆ;
ಬಿಟ್ಟ ಬಯಲಿನಲ್ಲೇ–ಇಬ್ಬರೂ
ಆಲಿಂಗನದ ತುಟ್ಟ ತುದಿ!

೩

ಬಸ್ಸುಗಳ ನೂಕು ನುಗ್ಗಲಿನ
ನಡುವೆ
ತೊನೆದಾಡುತ್ತ ಬರುವ ಚಲುವೆಯರ
ತೋಳಿಲ್ಲದ ಬಾಳೆದಿಂಡಿನಂಥ ತುಂಬು ತೋಳುಗಳನ್ನು
ಮುದುಕರು, ಹುಡುಗರು
ಮುಟ್ಟಲೇಬೇಕು–ಎಂದು ಹಠ ಹಿಡಿಯುತ್ತಾರೆ

೪

ಕಾಂಪ್ಲೆಕ್ಸುಗಳ ಮುಂದೆ
ಹೂವು ಖರೀದಿಸುವ ಶ್ರೀಮಂತರ ಹೆಂಗಸರ
ಮುಂದೆ ಹೋಗಿ ನಿಂತರೆ;
ಹೂವು ಮಾರುವ ಹುಡುಗಿಯರು ನಿಜಕ್ಕೂ
ಹೂವು ಮಾರುವುದಿಲ್ಲ;
ಹೃದಯ ಬಿಚ್ಚಿ ಮಾರುತ್ತಾರೆ

೫

ತಂಪೆರೆಯುವ ಗುಲ್‌ಮೊಹರ್ ಮರಗಳ
ಸಾಲುಗಳ ಕೆಳಗೆ
ತಲೆ ತುಂಬ ಚಿಂತೆ ಹೊತ್ತು ನಡೆಯುವಾಗ
ಥಟ್ಟನೆ
ನನ್ನೂರ ಕಪ್ಪು ಹುಡುಗಿಯರ
ನೆನೆಸಿಕೊಂಡು ಪುಲಕಗೊಳ್ಳುತ್ತೇನೆ

೬
ಗೆಳೆಯರ ಹತ್ತಿರ ಮಾತಾಡುವಾಗ

ಇಲ್ಲಿಯು "ಉಸಿರಾಡುವ ಗಾಳಿ ಕೂಡ ಕೆಟ್ಟಿದೆ"
ಮಹಾರಾಯರೆ ಅನ್ನುತ್ತೇನೆ; 'ಹೌದು ಬಿಡಿ' ಎಂದು
ಮಾತು ತೇಲಿಸುತ್ತಾರೆ, ನನಗೆ ಮಾತ್ರ:
ಸೂಡಾನ್, ಇಥಿಯೋಪಿಯಾದ-
ಚಕ್ಕಳ ಇಲ್ಲದ ಮೂಳೆ ಹಂದರದ ಮಕ್ಕಳು
ಎದುರು ಬಂದು ನಿಲ್ಲುತ್ತಾರೆ

೩ ಕಡುಗೆಂಪು ಎದೆಯ ತಾಮ್ರಕಾರ ಹಕ್ಕಿ—

ಕೆ. ಪಿ. ಮೃತ್ಯುಂಜಯ

ಯೇ, ನಾನು ನಿನ್ನನ್ನು ಕಂಡಿಲ್ಲ.
ಕೇಳಿರಲಿಲ್ಲ. ಆದರೆ ಮೊನ್ನೆ ಚಿತ್ರಸಹಿತ
ಪತ್ರಿಕೆಯಲ್ಲಿ ಬಂದ ನಿನ್ನನ್ನು ಓದಿದೆ.

ಓಹ್ ! ನಿನ್ನದು ಎಷ್ಟು ಮೋಹಕ ಹೆಸರು....
ನಾವು ಕಿಲಾಡಿ ಮನುಷ್ಯರು-
ಒಳ್ಳೊಳ್ಳೆಯ ಹೆಸರು ಇಡುವಲ್ಲಿ ನಿಸ್ಸೀಮರು.
ನೀನು ತುಂಬ ಚೆನ್ನಾಗಿದ್ದೀಯ !

ಅದೇನೋ, ನೀವು ಪಕ್ಷಿಸಂಕುಲವೇ
ಭಾರೀ ಸುಂದರವಾಗಿದ್ದೀರ !
ಯಾಕೆ ? ಹಾರಾಟದ ಆಕಾಶದ ಜೀವಿಗಳೇ ಹಾಗೇ ? !

ಓದುತ್ತಾ ಹೋದಂತೆ....
ನೀನು ರೈನ್‌ಟ್ರೀ ಮುಂತಾದ ಮರದ
ಕೊಂಬೆಗಳ ಗೂಡಲ್ಲಿ ಮೊಟ್ಟೆಗಳಿಟ್ಟು ಕಾಪಾಡುತೀಯ.
ಅವು ಒಡೆದು ಮುಲ ಮುಲ ಮರಿಗಳಾಗಿ,
ತೂರಾಡುವ ರಾಗಿ ಹೂವುಗಳಂತೆ

ರೆಪ್ಪೆ ಬಿಚ್ಚಿ ಓಡಾಡಲು ಶುರುಮಾಡುತ್ತವೆ.
ನೀನು ಕಚ್ಚಿಕೊಂಡು ಊಟ ತರುತೀಯ,
ಪ್ರೀತಿಯಿಂದ ತಿನ್ನಿಸುತೀಯ....ಬೆಳಸುತೀಯ....
ಆಮೇಲೆ, ಮೆಲ್ಲ ಮೆಲ್ಲನೆ ಹಾರುವುದ ಕಲಿಸುತೀಯ
ಆಮೇಲೆ, ನಿನ್ನ ಥರವೇ ಮಾಡಿಬಿಡುತೀಯ !

ಆಮೇಲೆ, ಓದುತ್ತಾ ಹೋದಂತೆ, ನಿನ್ನ
ದುರಂತ ಜೀವನ ಶುರವಾಗುತ್ತೆ.
ಒಂದು ದಿನ, ಗಾಳಿಗೆ ಬಾಯಿಬಿಟ್ಟು ಬೊಂಬು
ಅಥವಾ ಕೊಂಬೆಗಳ ನಿನ್ನ ಆವಾಸಸ್ಥಾನವಲ್ಲಿ
ನಿನ್ನ ಇಟ್ಟ ಮೊಟ್ಟೆಗಳಿರುವುದಿಲ್ಲ.
ಪುಟ್ಟ ಮರಿಗಳಿರುವುದಿಲ್ಲ.
ಅಷ್ಟೇಕೆ ಆ ಮರದ ಆ ಅಷ್ಟು ಭಾಗವೇ ಇರುವುದಿಲ್ಲ.
ಯಾರೊ ನಮ್ಮ ಬಾಂಧವರು ಕಡಿದು ಕದ್ದೊಯ್ದು
ಒಲೆ ಮುಂದೆ ಬಿಸಾಕುತ್ತಾರೆ
ನಮ್ಮ ಅಪ್ಪಂದಿರೊ ಅಕ್ಕಂದಿರೊ
ಕೊಟ್ಟು ಉರಿಯುವ ಬೆಂಕಿಗೆ
ನಿರುಮ್ಮಳ ಬೇಯಿಸುತ್ತಾರೆ.

ಅಲ್ಲಿಗೆ, ನಿನ್ನ ವಂಶ ನಿರ್ವಂಶವಾಗುತ್ತದೆ.
ಎಲ್ಲಿಂದಲೊ ಬಂದ ನೀನು ಚಡಪಡಿಸಿ
ದುಃಖದಿಂದ ನೋಡುತ್ತೀಯ,
ನಾವು ನೋಡುವುದಿಲ್ಲ.
ಗೋಳೋ ಎಂದು ಅಳುತ್ತೀಯ,
ನಮಗೆ ಕೇಳಿಸುವುದಿಲ್ಲ.

ಆಮೇಳೆ, ನೀನು ಏನು ಮಾಡಿಕೋಳೀಯೋ ...
(ನಮ್ಮ ಹಾಗೆ ಎದೆಯೊಡೆದು ಸಾಯುವುದು
ಆತ್ಮಹತ್ಯೆ . ಮುಂತಾಗಿ)
ಭಾರವಾಗಿ ಹೊರಡುತೀಯ–
ಎಲ್ಲಿಗೇಂತ .... ಎಲ್ಲಿಗೇಂತ ?

೪ ಸೃಷ್ಟಿ

ಲೋಕೇಶ ಅಗಸನಕಟ್ಟೆ

೧

ಇಗೋ ನೀನು ಕೇಳಿದ್ದು
ಕೂರಲೆಂದು ಕುರ್ಚಿ
ಬರೆಯಲೊಂದು ಟೇಬಲ್ಲು
ಬೇಕಾದರೆ ತೆಗೆದುಕೋ
ಮೇಲೊಂದು ಫ್ಯಾನು
ಕೈಗೊಂದು ಫೋನು
ಇನ್ನು ಕೂರು, ಕೂತು ಹೆರು
ಎಳೆ ಹಿಡಿದು ಹೊಲಿ ಕಾವ್ಯದ ಕುಲಾವಿ ॥

೨

ಸಾಲದೇ
ಫ್ಲಾಸ್ಕು ತುಂಬ ಇದ್ದರೆ ಕಾಫಿ
ಬೇಕಾದರೆ ಹೇಳು
ಧೂಮಲೀಲೆಗೂ ಕೊಡುವೆ ಚಾವಿ
ಸಿಜರ್ರು ಬ್ರಿಸ್ಟಾಲು ಬರಕ್ಲಿ
ಸಾಕೇ ?
ಕಾವ್ಯದೊತ್ತಡಕ್ಕೆ ಬೇಕಾದ ಉಸಿರು
ಆಗದಿದ್ದರೆ ಸಾಕು ಬೀಜವಿಲ್ಲದ ಬಸಿರು ॥

೩

ಚನ್ನಾಗಿಲ್ಲವೇ

ತೆರೆದ ಗಾಜಿನ ಮೇಲಂತಸ್ತಿನ ಕೊಠಡಿ ?
ಎಲ್ಲವನು ನಿನ್ನಿಷ್ಟದಂತೆ
ಜೋಡಿಸಿಹೆನು ಇಲ್ಲಿ
ಆಗೋ ಎಡಕ್ಕಿದ್ದಾನೆ ಚಂದಿರ
ಕಾಣುತಿಹುದೇ ತಾರೆ ಜ್ಯೋತಿರ್ನಿರ್ಘೋಷ
ನೋಡು ।
ಕೊಳದಲ್ಲಿ ಹಂಸವಿದೆ
ಹಂಸದ ಕಣ್ಣಲ್ಲಿ ಹೊಳಪಿದೆ
(ಗಾಜು ಸೇರಿಸಲು ಪಟ್ಟ ಕಷ್ಟ ಎಷ್ಟೆಂದು ಹೇಳಲಿ ?)
ಆ ಕಡೆ ಗುಡಿಸಲು ಈ ಕಡೆ ಮಹಲು
ರೋಧನ
ವೇದನೆ; ಬಂತೇ ಕಲ್ಪನೆ ?
ಕಾರ್ಖಾನೆಯ ಚಿಮಣಿ
ಚಿಮಣಿ ಕೆಳಗೆ ಧರಣಿ
ಸೈರನ್ನಿನ ಸತ್ತ ಸ್ವರ ॥
ಎಲ್ಲ ನೀನೆ ಹೇಳಿದಂತೆ
ವೇದನೆಯಿರದೆ ಉಕ್ಕಲಿನ್ನು ಕಾವ್ಯ
ಖಡ್ಗವಾದರೂ ಆಗಲಿ
ಖರ್ಜೂರವಾದರೂ ಆಗಲಿ

೪

ಮರೆತಿಲ್ಲ
ನಾವು ತೀರ್ಥರೂಪರೆಂಬುದ
ನೀವು ಹೇಳದಿದ್ದರೂ
ನಿಮ್ಮ ಆ ರೂಪ........।
ಹೇಗಿದೆ ನೋಡಿ ಗಾಜು ಕಪಾಟಿನ ತುಂಬ
ಲಕ ಲಕಿಸುವ ಸ್ಪಾಂಟೇನಿಯಸ್ ಬಿಂಬ ॥
ವಿಸ್ಕಿ ರಮ್ಮು ಜಿನ್ನು
ಎಲ್ಲವೂ ಫಾರಿನ್ನು
ಬೇಕಾದರಿದೆ ಬೀರು ಸಾಲದೇನು ಸಾವರಿನ್ನು ? ॥

ಪಕ್ಕಕ್ಕಿದೆ ಫೋಮು
ಫ್ರೇಮಿನ ಮೇಲಿಹರು ಕಾಫ್ಕ ಕಾಮು
ಓದಿ ಬರೆ ಇಲ್ಲ ಬರೆದು ಓದು
ಬರೆಯುತ್ತಲಾದರೂ ಓದು
ಓದುತ್ತಲಾದರೂ ಬರೆ
ಹರಿಯಲಿ ಕಾವ್ಯ ಧಾರೆ ಧಾರೆ
ಬರೆ ಬರೆ ಪಾವನವಾಗಲಿ ಧರೆ.

ಚೆನ್ನವೀರ ಕಣವಿಯವರ ಕಾವ್ಯ :
ಸುಸಂಸ್ಕೃತ ವ್ಯಕ್ತಿತ್ವದ ಸುಂದರ ಅಭಿವ್ಯಕ್ತಿ

ನರಹಳ್ಳಿ ಬಾಲಸುಬ್ರಹ್ಮಣ್ಯ

ಆಧುನಿಕ ಕನ್ನಡ ಕಾವ್ಯ ಈಗ ಹೊಸ ಚಲನೆಯ ದಿಕ್ಕಿನಲ್ಲಿದೆ. ಈ ಚಲನೆಯು ಗತಿ ಒಂದು ಚಳುವಳಿಯ ರೂಪದಲ್ಲಿರದೆ ಅನೇಕ ವೈಯಕ್ತಿಕ ಧ್ವನಿಗಳ ಮೂಲಕ ಪ್ರಕಟಗೊಳ್ಳುತ್ತಿದೆ. ಕುತೂಹಲಕರ ಸಾಧ್ಯತೆಗಳತ್ತ ಕೈಚಾಚುತ್ತ ಸದ್ಯದ ಸೃಜನಶೀಲತೆಯು ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸುವ ಭರವಸೆ ಮೂಡಿಸಿದೆ. ನವ್ಯ ಕಾವ್ಯ ಸಂದರ್ಭದಲ್ಲಿ ಹಿನ್ನೆಲೆಗೆ ಸರಿದಿದ್ದ ಜೀವನ ಸಂತೋಷದ ವಿವಿಧ ಮುಖಗಳನ್ನು ಇಂದಿನ ಕಾವ್ಯ ಮತ್ತೆ ಉತ್ಸಾಹದಿಂದ ಸ್ವೀಕರಿಸಿದೆ. ನವೋದಯ ಮಾರ್ಗದ ಅನೇಕ ಅಂಶಗಳನ್ನು ಗೌರವದಿಂದ ಕಾಣುತ್ತಿದೆ. ಅಂತೆಯೇ ನವ್ಯತೆ ಕಲಿಸಿದ ಸೂಕ್ಷ್ಮಗಳನ್ನು ಮರೆಯದೆ ಎಚ್ಚರದಿಂದಿದೆ. ಪರಂಪರೆಯ ಅರಿವು, ಚಾರಿತ್ರಿಕ ಪ್ರಜ್ಞೆ ಹಾಗೂ ಸಮಕಾಲೀನ ಸಂವೇದನೆ– ಇವುಗಳ ಹೊಂದಾಣಿಕೆಯ ಮೂಲಕ 'ಹೊಸ ಕಾವ್ಯ' ಸೃಷ್ಟಿಸುವ ಗಂಭೀರ ಪ್ರಯತ್ನ ನಡೆಯುತ್ತಿದೆ.

ಇಂತಹ ಸಂದರ್ಭದಲ್ಲಿ ಚೆನ್ನವೀರ ಕಣವಿ ಹಾಗೂ ಶಿವರುದ್ರಪ್ಪನವರ ಕಾವ್ಯಾಭ್ಯಾಸ ಕನ್ನಡ ಕಾವ್ಯ ಪಡೆದುಕೊಳ್ಳಬಹುದಾದ ಸ್ಥಾಯಿಬಲದ ದೃಷ್ಟಿಯಿಂದ ಉಪಯುಕ್ತವಾದುದು. ಕನ್ನಡ ವಿಮರ್ಶೆ ಇನ್ನೂ ಹೆಚ್ಚು ಗಂಭೀರವಾಗಿ ಅಭ್ಯಸಿಸಬೇಕಾದ ಇವರ ಕಾವ್ಯ ಪ್ರಸ್ತುತ ಸಂದರ್ಭಕ್ಕೆ ಅರ್ಥಪೂರ್ಣವಾಗಬಲ್ಲ ಅನೇಕ ಮಹತ್ವದ ಮಾಹಿತಿಗಳನ್ನು ನೀಡುತ್ತದೆ.

ನವೋದಯ ಕಾವ್ಯಮಾರ್ಗದ ಮೌಲ್ಯ ಪ್ರಜ್ಞೆ, ಮಾನವೀಯತೆ, ಅನುಭಾವಿಕತೆಗಳ ಜೊತೆಗೆ ನವ್ಯಕಾವ್ಯಮಾರ್ಗದ ತೀಕ್ಷ್ಣ ವಾಸ್ತವ ಪ್ರಜ್ಞೆಯನ್ನು ತನ್ನಲ್ಲಿ

ಅರಗಿಸಿಕೊಂಡ ಕಣವಿ, ಶಿವರುದ್ರಪ್ಪನವರ ಕಾವ್ಯವನ್ನು 'ಸಮನ್ವಯ ಕಾವ್ಯ'ವೆಂದು ಕರೆಯುವುದು ಸರಳ ವಿಶ್ಲೇಷಣೆಯ ಕ್ರಮವಾಗುತ್ತದೆ. ಚಳುವಳಿಗಳ ಅಬ್ಬರದಲ್ಲಿ ತಮ್ಮ ಧ್ವನಿಯನ್ನು ಕಳೆದುಕೊಳ್ಳದೆ ಭವ್ಯ ಆದರ್ಶವಾದದ ತಳಹದಿಯ ಮೇಲೆ ತಮ್ಮ ದರ್ಶನವನ್ನು ರೂಪಿಸಿಕೊಂಡ ಕಣವಿ-ಶಿವರುದ್ರಪ್ಪನವರ ಕಾವ್ಯಕ್ಕೆ ಆಧುನಿಕ ಕಾವ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ.

* * *

ಕಣವಿಯವರು ಕಾವ್ಯರಚನೆ ಆರಂಭಿಸಿದ್ದು ನಲವತ್ತರ ದಶಕದಲ್ಲಿ. ಸುಮಾರು ನಾಲ್ಕು ದಶಕಗಳ ಕಾಲದ ಸುದೀರ್ಘ ಕಾವ್ಯಜೀವನದಲ್ಲಿ ಅವರ ಇದುವರೆಗೆ ಹನ್ನೊಂದು ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಕಾವ್ಯಾಕ್ಷಿ' (1949) ಯಿಂದ 'ಕಾರ್ತೀಕದ ನೋಡ' (1986) ರವರೆಗಿನ ಅವರ ಕಾವ್ಯಬೆಳವಣಿಗೆ ವಿವಿಧ ಹಂತಗಳನ್ನು ಹಾದು ಬಂದಿದ್ದರೂ ಮಾನವತಾವಾದ ಹಾಗೂ ಜೀವನ ಪ್ರೀತಿಯನ್ನು ತಮ್ಮ ಕಾವ್ಯದ ಮೂಲದ್ರವ್ಯವನ್ನಾಗಿ ಕಣವಿಯವರು ಕಾಪಾಡಿಕೊಂಡು ಬಂದಿದ್ದಾರೆ. ಈ ಬದುಕಿನ ಬಗೆಗೆ ಎಂದೂ ಉತ್ಸಾಹ ಕಳೆದುಕೊಳ್ಳದ ಅವರ ಕಾವ್ಯದ ಜೀವಂತಗತಿಯನ್ನು ಶಿವರುದ್ರಪ್ಪನವರು ಸದಾ ನಿರಾತಂಕ ಮನಸ್ಥಿತಿಯ, ಯಾವ ಒಳ್ಳೆಯವರ ಬಗೆಗೂ ರುಚಿಯನ್ನು ಕಳೆದುಕೊಳ್ಳದ, ಯಾವ ಲೋಚಕವಾದ ಪಕ್ಷ ಪಂಥಗಳಿಗೂ ತನ್ನನ್ನು ಗಂಟುಹಾಕಿಕೊಂಡು ಸೀಮಿತಗೊಳಿಸಿಕೊಳ್ಳದ, ಮಾನವೀಯ ಸಂಬಂಧಗಳಲ್ಲಿ ನಂಬಿಕೆಯನ್ನು ಕಳೆದುಕೊಳ್ಳದ ಮತ್ತು ಅದಮ್ಯವಾದ ಜೀವನಪ್ರೀತಿಯ ನಿಲುವುಗಳಿಂದ ಕೂಡಿದ್ದು (ಬೆಂಬೆಳಕು ಪುಟ 128) ಎಂದು ಸೊಗಸಾಗಿ ಗುರ್ತಿಸಿದ್ದಾರೆ. ಕಣವಿಯವರ ಕಾವ್ಯ ಆರೋಗ್ಯಪೂರ್ಣ ಮನಸ್ಸಿನ ಅಭಿವ್ಯಕ್ತಿ. ಈ ಆರೋಗ್ಯ ಅವರ ಕಾವ್ಯಕ್ಕೆ ವಿಶೇಷ ಚೆಲುವನ್ನು ನೀಡಿದೆ. ಮುಕ್ತ ಮನೋಭಾವ ಅವರ ಕಾವ್ಯದುದ್ದಕ್ಕೂ ಹರಡಿಕೊಂಡು ಬಂದಿರುವ ಪ್ರಧಾನ ಶಕ್ತಿಯಾಗಿದೆ.

ಈಗಿನ ಮಕ್ಕಳೇ ಹಾಗೆ–
(ಹೊಸ ಪೀಳಿಗೆ)
ಕರೆದೊಡನೆ ಅಡಬರಿಸಿ ಬರುವುದಿಲ್ಲ:
ಬಂದರೂ ಹೆಗಲೇರಿ ಬಹಳ ಹೊತ್ತಿರುವುದಿಲ್ಲ.
ಅವಸರದಲ್ಲಿ ಕೆಳಗಿಳಿದು, ಎದ್ದು ಬಿದ್ದು
ತಮ್ಮ ಕಾಲ ಮೇಲೆ ತಾವೇ ನಿಲ್ಲಬಯಸುತ್ತವೆ.
ಹೆಜ್ಜೆ ಹೆಜ್ಜೆಗೂ ಕುತೂಹಲ ಹುಟ್ಟಿಸುತ್ತ
ಆತಂಕ ದಾಟುತ್ತ

ದೊಡ್ಡವರೆನಿಸಿಕೊಂಡ ನಮ್ಮನ್ನು ದಂಗುಬಡಿಸುತ್ತವೆ.

(ಕಾರ್ತೀಕದ ಮೋಡ, ಪುಟ 7)

ಹೊಸ ಪೀಳಿಗೆಯನ್ನು ಮುಕ್ತವಾಗಿ ಬರಮಾಡಿಕೊಳ್ಳುವ, ಅವರ ಅಸ್ತಿತ್ವವನ್ನು ತೆರೆದ ಮನಸ್ಸಿನಿಂದ ಒಪ್ಪಿ ಗೌರವಿಸುವ, ಬದಲಾವಣೆಗೆ ಸಿನಿಕರಾಗದೆ ಸಂತೋಷದಿಂದ ಸ್ವಾಗತಿಸುವ ಮನೋಭಾವ ಕಣವಿಯವರ ವ್ಯಕ್ತಿತ್ವದ ಪ್ರಮುಖ ಲಕ್ಷಣ. ಹೊಸದನ್ನು ಕಣವಿಯವರು ಎಂದೂ ನಿರಾಕರಿಸಿದವರಲ್ಲ. ಹಾಗೆಂದು ಬದಲಾವಣೆಗೆ ತಮ್ಮನ್ನು ಸಂಪೂರ್ಣ ಒಪ್ಪಿಸಿಕೊಂಡು ವೈಯಕ್ತಿಕತೆಯನ್ನು ಕಳೆದುಕೊಂಡವರೂ ಅಲ್ಲ. ಅವರು ಪರಿವರ್ತನಶೀಲವಾದ ಈ ಪರಿಸರಕ್ಕೆ ಎಂದೂ ಜಡರಾಗದ್ದರಿಂದಲೇ ಅವರದ್ದು 'ಜೀವಂತಗತಿ'. ಮೇಲ್ನೋಟಕ್ಕೆ ಸರಳವೆಂದು ಕಾಣಬಹುದಾದ 'ಈಗಿನ ಮಕ್ಕಳು' ಕವಿತೆ ಕಣವಿಯವರ ಒಟ್ಟು ಕಾವ್ಯದ ಬಗ್ಗೆಯೇ ಕೆಲವು ಮುಖ್ಯ ಮಾಹಿತಿಗಳನ್ನು ನೀಡುತ್ತದೆ. ಕೌಟುಂಬಿಕ ಸಂಬಂಧದ ಗಾಢತೆ ಬದುಕಿಗೇ ತಂದುಕೊಡುವ ಶಕ್ತಿ, ಬದಲಾಗುತ್ತಿರುವ ಸಾಮಾಜಿಕ ಪರಿಸರಕ್ಕೆ ವ್ಯಗ್ರರಾಗಬಾರದೆಂಬ ತಿಳುವಳಿಕೆ, ಬದಲಾವಣೆಯನ್ನು ಅಸಹನೆಯಿಂದ ಕಾಣದ ಪ್ರೀತಿ – ಕಣವಿಯವರ ಕಾವ್ಯದುದ್ದಕ್ಕೂ ಕಂಡು ಬರುವ ಪ್ರಧಾನ ಸಂಗತಿಗಳಾಗಿವೆ.

ಕಣವಿಯವರಲ್ಲಿ ಕೌಟುಂಬಿಕ ಪರಿಕಲ್ಪನೆಗೆ ವಿಶೇಷ ಮಹತ್ವವಿದೆ. ಅವರ ಸಮಾಜ ರಚನೆಯ ಗ್ರಹಿಕೆಯ ಮೂಲದಲ್ಲಿ 'ಕುಟುಂಬ' ಮುಖ್ಯ ಘಟಕವಾಗಿದೆ. ಕುಟುಂಬದ ಸೌಷ್ಟವದ ಬಗ್ಗೆ ಅವರಿಗೆ ಅತೀವ ಕಾಳಜಿ. ನವೋದಯ ಕವಿಗಳಲ್ಲಿ ಗಂಡು ಹೆಣ್ಣಿನ ಸಂಬಂಧ ದಾಂಪತ್ಯದ ಹಿನ್ನೆಲೆಯಲ್ಲಿಯೇ ಮುಖ್ಯವಾದಂತೆ. ಕಣವಿಯವರಲ್ಲಿ ಛಿದ್ರಗೊಳ್ಳುತ್ತಿರುವ ಸಾಮಾಜಿಕ ಪರಿಸರದಲ್ಲೂ ಕುಟುಂಬದ ಪರಿಕಲ್ಪನೆಯನ್ನು ಅವರು ಎಚ್ಚರದಿಂದ ಉಳಿಸಿಕೊಳ್ಳುತ್ತಾರೆ. ಕೆ.ಎಸ್.ನ. ಕಣವಿ, ಶಿವರುದ್ರಪ್ಪ ಮೊದಲಾದವರ ಕಾವ್ಯ ನಮಗೆ ಹೆಚ್ಚು ಪ್ರಿಯವೆನ್ನಿಸುವ ಹಿನ್ನೆಲೆಯಲ್ಲಿಯೂ ನಾವು ಈ ಅಂಶವನ್ನು ಪರಿಶೀಲಿಸಬೇಕು. ಇದನ್ನು ಅವರು ನವೋದಯ ಪರಂಪರೆಯಿಂದ ಪಡೆದು ಉಳಿಸಿಕೊಂಡು ಬಂದಿದ್ದಾರೆ. ಬದುಕಿನ ಆಳದಲ್ಲಿರುವ ರಸವಂತಿಕೆಯನ್ನು ಅವರು ಇಂಥ ಸಂಬಂಧಗಳ ಮೂಲಕ ಕಾಣಲು ಪ್ರಯತ್ನಿಸುತ್ತಾರೆ. ಭಾವಗೀತಾತ್ಮಕ ಅಂಶ ಇವರಲ್ಲಿ ಪ್ರಧಾನವಾಗಿರುವುದಕ್ಕೂ ಇದೇ ಕಾರಣವಾಗಿದೆ.

ಕಣವಿಯವರ ಮೊದಲ ಸಂಕಲನ 'ಕಾವ್ಯಾಕ್ಷಿ'– ಕುವೆಂಪು, ಬೇಂದ್ರೆ, ಪು.ತಿ.ನ.

ಮಧುರಚೆನ್ನ ಮೊದಲಾದವರು ಕಾವ್ಯರಚನೆ ಮಾಡುತ್ತಿದ್ದ ಕಾಲದಲ್ಲಿ ಪ್ರಕಟವಾಯಿತು. ಈ ಸಂಕಲನ ಹಾಗೂ ಭಾವಜೀವಿ ಸಂಕಲನದಲ್ಲಿ ನವೋದಯದ ದಟ್ಟ ಪ್ರಭಾವವಿದೆ. ಅದರಲ್ಲೂ ಮಧುರಚೆನ್ನರ ನೇರ ಪ್ರಭಾವವನ್ನು ನಾವು ಗುರ್ತಿಸಬಹುದಾಗಿದೆ. ಇಲ್ಲಿನ ಬಹುಪಾಲು ಕವಿತೆಗಳು ಸುತ್ತಮುತ್ತಲಿನ ಪರಿಸರಕ್ಕೆ ಕವಿ ವ್ಯಕ್ತಪಡಿಸಿದ ಭಾವನಾತ್ಮಕ ಪ್ರತಿಕ್ರಿಯೆಗಳಾಗಿವೆ. 1953 ರ ವೇಳೆಗೆ ಪ್ರಕಟವಾದ 'ಆಕಾಶ ಬುಟ್ಟಿ' ಕಣವಿಯುವರ ಕಾವ್ಯ ಜೀವನದಲ್ಲಿ ಒಂದು ಮುಖ್ಯ ಘಟ್ಟವಾಗಿದೆ. ಇದರಲ್ಲಿ ಕಣವಿಯುವರು ಪ್ರಭಾವಗಳಿಂದ ತಪ್ಪಿಸಿಕೊಂಡು ತಮ್ಮನ್ನು ತಾವು ಕಂಡುಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಮುಂದೆ ನಾವು 'ಕಣವಿತನದ ಕವಿತೆಗಳು' ಎಂದು ಗುರ್ತಿಸಬಹುದಾದ ರೀತಿಯು ಕವಿತೆಗಳ ಸೂಕ್ಷ್ಮ ಹೊಳಹುಗಳು ಈ ಸಂಕಲನದಲ್ಲಿ ಸ್ಪಷ್ಟವಾಗಿ ಕಾಣಿಸುತ್ತವೆ. ನಿಸರ್ಗ - ಪ್ರೀತಿ, ಆದರ್ಶದ ಕನಸು, ಲೋಕೋತ್ತರ ಶಕ್ತಿಯು ಸೆಳಕು– ಈ ಎಲ್ಲವೂ 'ಆತ್ಮಬಲ' ವನ್ನು ಬೆಳೆಸಿಕೊಳ್ಳಲು ನೆರವಾಗಬೇಕೆಂಬ ಹಂಬಲ ಇಲ್ಲಿ ಪ್ರಧಾನವಾಗಿದೆ. ಈ 'ಅರಿವು' ಕಣವಿಯುವರ ಕಾವ್ಯದಲ್ಲಿ ನಾವು ಕಾಣುವ ಮುಖ್ಯ ಬೆಳವಣಿಗೆ.

ದೀನ ಮಾನವ ರಚಿತ ಆಕಾಶಬುಟ್ಟಿ
ದಾನವರ ಬಿರುಗಾಳಿ ಗಾಳಿಯನು ಮೆಟ್ಟಿ
ಬಾನವರನಪ್ಪಿ ಒಂದಾಗಿಹುದು ನೋಡು !
ನೋಡಿದೆಯು ಕವಿಯೆ ?

ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ ?
ಆತ್ಮಬಲದೆದುರು ಮೇಣುಳಿದ ಬಲವೆ ?.
ಆಕಾಶಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯು ಹೊಂದೀಪ ಉದ್ದೀಪನಂಗೊಂಡು
ಬಾಳದೀಪವ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡ ಹಾಡು

(ಚಿರಂತನ ದಾಹ ಪುಟ 16)

1952 ರ ವೇಳೆಗೆ ನಡೆದು ಬಂದ ದಾರಿ ಕಡೆಗೆ ತಿರುಗಿಸಬೇಡ, ಕಣ್ಣ ಹೊರಳಿಸಬೇಡ ಎಂದು ಹೇಳಿ ಹೊಸಹಾದಿಯನ್ನು ಹಿಡಿದ ಅಡಿಗರೂ ಸಹ 'ವ್ಯಕ್ತಿತ್ವ ವಿಕಾಸ'ವನ್ನೇ ತಮ್ಮ ಕಾವ್ಯದ ಘನ ಉದ್ದೇಶವಾಗಿಟ್ಟುಕೊಂಡುದನ್ನು ಈ ಸಂದರ್ಭದಲ್ಲಿ ನಾವು ಗಮನಿಸಬೇಕು. ಕಣವಿಯುವರಲ್ಲೂ ಅದು ಪ್ರಖರವಾಗಿಯೇ ಕಾಣಿಸಿಕೊಂಡಿತು.

ವ್ಯಕ್ತಿಶಕ್ತಿಯು ಗುಣ ವಿಕಾಸ ತತ್ವದಲಿ
ಜಗವ ಬೆಳಗುವುದದರ ಮೂಲತತ್ವ

(ಚಿರಂತನ ದಾಹ ಪುಟ 19)

ವ್ಯಕ್ತಿಶಕ್ತಿಯ ವಿಕಾಸವನ್ನು ಪ್ರಮುಖವಾಗಿ ಪ್ರತಿಪಾದಿಸಿದ ಕಣವಿಯವರ ನಂತ ರದ ಕಾವ್ಯ ಅಡಿಗರ ಕಾವ್ಯದಂತ ಅದನ್ನೇ ತನ್ನ ಕೇಂದ್ರಬಿಂದುವಾಗಿಸಿಕೊಳ್ಳಲಿಲ್ಲ. ಅಡಿಗರಲ್ಲಿ ಈ ಅಂಶ ಕವಿತೆಯಿಂದ ಕವಿತೆಗೆ ಬೆಳೆಯುತ್ತಾ, ಸಮಾಜದ ತುಳಿತಕ್ಕೆ ಸಿಕ್ಕಿ ಚಹರೆ ಕಳೆದುಕೊಳ್ಳುತ್ತಿರುವ ವ್ಯಕ್ತಿತ್ವವನ್ನು ತನ್ನಿಷ್ಟದಂತೆ ರೂಪಿಸಿಕೊಳ್ಳು ವ ಹೋರಾಟದ ಕಾವ್ಯವಾಗಿ ರೂಪುಗೊಂಡರೆ ಕಣವಿಯವರಲ್ಲಿ ಇದು ಅವರ ಅನೇಕ ಆಸಕ್ತಿಗಳಲ್ಲಿನ ಒಂದು ಅಂಶವಾಯಿತು. ಬದುಕಿನ ಸಮಸ್ತವನ್ನು ಒಳ ಗೊಳ್ಳುವ ಕ್ರಮವನ್ನು ಅನುಸರಿಸಿದ ಕಣವಿಯವರ ಕಾವ್ಯ ವಿಸ್ತಾರ, ವೈವಿಧ್ಯ ಪಡೆಯಿತು. ಅಡಿಗರ ಕಾವ್ಯ ಆಳಕ್ಕಿಳಿಯುತ್ತಾ ಮಹತ್ವದ್ದಾಯಿತು. ಮಾನವಾ ನುಭವದ ಅಂತಃಕರಣ ಸಂಬಂಧವಾದ ಇತರ ಅನೇಕ ಅನುಭವಗಳಿಂದ ಅಡಿಗರ ಕಾವ್ಯ ವಂಚಿತವಾದರೆ, ಕಣವಿಯವರ ಕಾವ್ಯ ಇಂಥ ಅನೇಕ ಅನುಭವಗಳಿಗೆ ಅಭಿವ್ಯಕ್ತಿ ನೀಡಿ ವಿಶಿಷ್ಟವಾಯಿತು. ಅಡಿಗರ ಕಾವ್ಯ ಹೋರಾಟದ ಕ್ರಮವಾದರೆ, ಕಣವಿಯವರ ಕಾವ್ಯ ಸ್ವೀಕೃತಿಯ ರೀತಿಯದು. ಇದರಿಂದಾಗಿ ಕಣವಿಯವರ ಕಾವ್ಯದಲ್ಲಿ ಸಂಘರ್ಷವಿಲ್ಲ, ಒಂದು ರೀತಿಯ ಒಪ್ಪಂದವಿದೆ.

ಜಿ. ಎಸ್. ಶಿವರುದ್ರಪ್ಪನವರ ಕಾವ್ಯದ ಮನೋಭಾವ ಕಣವಿಯವರಿಗೆ ಹತ್ತಿರ ವಾದರೂ ಕಣವಿಯವರಂತೆ ಜಿ.ಎಸ್.ಎಸ್. ಅವರದು ಸ್ವೀಕೃತಿಯ ರೀತಿಯಲ್ಲ. ಸಮಕಾಲೀನ ಸಮಾಜದ ಕೊಳಕುತನದ ಬಗ್ಗೆ ಶಿವರುದ್ರಪ್ಪನವರು ವ್ಯಗ್ರರಾಗು ತ್ತಾರೆ, ಅಸ್ವಸ್ಥರಾಗುತ್ತಾರೆ. ಸಿಡಿಮಿಡಿಗುಟ್ಟುತ್ತಾರೆ. ಎಂಥೆಂಥವೋ ಏರಬಾರದ ಕಡೆಗೆ ಏರಿ, ಇಳಿಯಬಾರದ ಕಡೆಗೆ ಇಳಿದು ಹೊಲಸೆಬ್ಬಿಸುವುದನ್ನು ಕಂಡು ಕಿಡಿ ಕಾರುತ್ತಾರೆ. ಆದರೆ ಗೆರೆದಾಟಲಾರದ ಅವರ ಸುಸಂಸ್ಕೃತಿಯಿಂದಾಗಿ ಕಾಯುತ್ತಾರೆ. ಕಣವಿಯವರಿಗೆ ಈ ಎಲ್ಲದರ ಅರಿವಿಲ್ಲವೆಂದಲ್ಲ, ಆದರೆ ಈ ಎಲ್ಲಕ್ಕೂ ಅವರ ಪ್ರತಿ ಕ್ರಿಯೆ– ಮುಗುಳ್ನಗೆ. ಈ ಮುಗುಳ್ನಗೆಯ ಹಿಂದಿನ ನೋವು, ವಿಷಾದ– ಅವರ ಪ್ರತಿಕ್ರಿಯೆಗೆ ಗಾಢತೆಯನ್ನು ತಂದುಕೊಡುತ್ತದೆಯಾದರೂ ಈ ಓರೆಕೋರೆಗಳ ನಡುವೆ ಚೆಲುವು ಸಮಾಧಾನಗಳನ್ನು ಕಾಣುವುದರಲ್ಲಿಯೇ ಅವರಿಗೆ ವಿಶೇಷ ಆಸಕ್ತಿ.

ಮೊದಲ ನೋಟಕ್ಕಿವನು ಹಸುಳೆ, ಪೂರಾ ಹಸುಳೆ
ಗುಮ್ಮನಗುಸುಗ :

ಭಾವಕೋಶದ ಮೇಲು ಮುಸುಗನೆಳೆದರೆ ಸಾಕು,
ಮೂಗು ಮುಚ್ಚದೆ ಬೇರೆ ಗತಿಯೆ ಇಲ್ಲ.

....

ಕಂಡಿರಾ ನೀವಿವನ, ಪರಮ ಸ್ನೇಹಿತನ ?
ಸ್ನೇಹಕೆಂದೇ ಮೂರ್ತಿಮತ್ತಾಗಿ ಈ ಇಳೆಗೆ ಅವತರಿಸಿದವನ ?
ಮೊನ್ನೆ ಮೊನ್ನೆಯೆ ಆಯಿತೆನಗೆ ತಾನಾಗಿಯೇ
ಇವನೊಡಲ ಬ್ರಹ್ಮಾಂಡದ ಮಹಾದ್ಭುತ ವಿಶ್ವರೂಪದ ದರ್ಶನ
ಸಿಡಿಲೆರಗಿದಂತಾಯ್ತು, ನಡುಗಿ ಹೋಯಿತು ನನ್ನ ಅತ್ಯಲ್ಪ ಚೇತನ

(ಚಿರಂತನ ದಾಹ ಪುಟ 74)

ಸಮಕಾಲೀನ ವಾಸ್ತವದ ಕಟು ಅನುಭವಕ್ಕೆ, ನಯವಂಚಕತನದ ಕೊಳಕಿಗೆ ಕಣವಿಯವರ ಚೇತನ ನಡುಗಿದೆ, ಸಿಡಿಲೆರಗಿದ ಅನುಭವವಾಗಿದೆ. ಆದರೂ–

ಓ ಜೀವನವೆ,
ಶುಭಮಸ್ತು ನಿನಗೆ

(ಚಿರಂತನದಾಹ, ಪುಟ 71)

ಎಂಬುದು ಅವರ ನಿಲುವು. ಎಂತಹ ನೋವಿನ ಸಂದರ್ಭದಲ್ಲಿಯೂ ಜೀವಚೈತನ್ಯದ ಸೆಲೆ ಕಣವಿಯವರಲ್ಲಿ ಬತ್ತುವುದಿಲ್ಲ. ಬದುಕಿನ ಬಗೆಗಿನ ಪ್ರೀತಿ ಕದಡುವುದಿಲ್ಲ. ಈ ತಿಳಿ ಮನಸ್ಸು ನಮಗೆ ಪ್ರಿಯವಾಗುತ್ತದೆ ನಿಜ. ಆದರೆ ಬದುಕಿನ ರುದ್ರರಮಣೀಯತೆಯ ಸೊಗಸು ನಮಗಿಲ್ಲಿ ಸಿಗುವುದಿಲ್ಲ.

ಅನೇಕ ಸಂದರ್ಭಗಳಲ್ಲಿ ಕಣವಿಯವರು ಈ ನಾಗರಿಕ ಬದುಕಿನ ವಿಕೃತಿಯನ್ನು ಪ್ರಕೃತಿಯ ಸಾನ್ನಿಧ್ಯದ ಮೂಲಕ ಮರೆಯಲು ಪ್ರಯತ್ನಿಸುತ್ತಾರೆನ್ನಿಸುತ್ತದೆ.

ಪ್ರಕೃತಿ ತನ್ನೆದೆಯ ಮಧುವಾಟಿಕೆಯ ತೆರೆದಿರಲು
ಅದನು ತಣಿ ಹೀರದೆಯೇ ಸಾಗಬಹುದೆ ?
ಯಾರಿಗೀ ಸುಂದರತೆ ? ಯಾರಿಗೀ ಪರವಶತೆ ?
ಯಾರ ಸುಖಕೀ ಸೃಷ್ಟಿ ನಿನಗಲ್ಲದೆ ?

....

ಇಲ್ಲಿ ದಣಿವಾರಿ ಮನ ಶಾಂತಿ ಸಂತಸ ಪಡೆಯೆ.
ಮುಂದೆ ನಡೆಯುವ ದಾರಿ ಎನಿತು ಹಗುರು !

(ಚಿರಂತನ ದಾಹ, ಪುಟ 25)

ಹೀಗೆ ಕಣವಿಯವರು ಬದುಕಿನ ದಾರಿಯನ್ನು ಸುಗಮಗೊಳಿಸಿಕೊಳ್ಳಲು, ಹಗು ರಾಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಉದ್ವಿಗ್ನಗೊಳ್ಳದೆ, ಸಮಾಧಾನವಾಗಿ ಈ ಬದುಕನ್ನು ಅನುಭವಿಸಬೇಕೆನ್ನುವುದು ಕಣವಿಯವರ ವ್ಯಕ್ತಿತ್ವ. ಇಂಥ ಸಮಾ ಧಾನದ ಸ್ಥಿತಿಯಲ್ಲೂ ಬದುಕಿನ ಕೊರತೆಗಳು ಅವರನ್ನು ನಿರಂತರ ಕಾಡಿವೆ.

ಜಗವ ತುಂಬಿದ ಬೆಳಕು ನಮಗೇಕೋ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ
ಒಂದಷ್ಟು ಇಂಗುತಿದೆ ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ, ವಿಫಲ

(ಚಿರಂತನ ದಾಹ, ಪುಟ 27)

ಈ ದಾಹ ಕಣವಿಯವರಲ್ಲಿ ಇದ್ದೇ ಇದೆ. ಆದರೆ ಆದರಿಂದಾಗಿ ಅವರು ಪ್ರತಿ ದಿನ ಮೂಡಣದ ಬಾನಕೆರೆಯಂಚಿನಲ್ಲಿ ಚೆಂಬೆಳಕು ಮೂಡಿದಾಗ ಆಗುವ ಉಲ್ಲಾ ಸವನ್ನು ಕಳೆದುಕೊಳ್ಳುವುದಿಲ್ಲ. ಈ ಹೊಂದಾಣಿಕೆಯೇ ಅವರ ಕಾವ್ಯದ ಒಟ್ಟು ಸ್ವರೂಪವನ್ನು ನಿರ್ಧರಿಸಿದೆಯೆನ್ನಬಹುದು.

ಈ ಸಮಚಿತ್ತದ ಹದದಿಂದಾಗಿ, ನಿರುದ್ವಿಗ್ನ ಸ್ಥಿತಿಯಿಂದಾಗಿ ಕಣವಿಯವರ ಕಾವ್ಯ ಮೆಲುದನಿಯ ಕಾವ್ಯವಾಗಿದೆ. ಹೀಗಾಗಿ, ಮೆಲುದನಿಯಿಂದಾಗಿ, ಹದಗೆಡದೆ ಮಾತನಾಡುವುದು, ಸ್ವಸ್ಥವಾಗಿ ಮಾತನಾಡುವುದು, ಶಕ್ತಿಯನ್ನು ದೀರ್ಘಕಾಲ ಕಾಪಾಡಿಕೊಳ್ಳುವುದು ಅವರಿಗೆ ಸಾಧ್ಯವಾಗಿದೆ. ನಾಲ್ಕು ದಶಕಗಳ ನಂತರವೂ ಕಣವಿಯವರ ಕಾವ್ಯೋತ್ಸಾಹ ಈಗಲೂ ಕುಂದಿಲ್ಲ ಮಾತ್ರವಲ್ಲ, ಮೊದಲಿನ ಕಸುವನ್ನೇ ಉಳಿಸಿಕೊಂಡಿವೆಯೆಂಬುದು ಗಮನಿಸಬೇಕಾದ ಸಂಗತಿ. ಕನ್ನಡ ಕಾವ್ಯದಲ್ಲಾದ ಏರಿಳಿತಗಳು ಅವರ ಗತಿಯನ್ನು ಕೆಡಿಸಲಿಲ್ಲವೆಂಬುದನ್ನು ನಾವಿಲ್ಲಿ ಗಮನಿಸಬೇಕು. ಕಣವಿಯವರ ಈ ಕ್ರಮ– ಇತ್ಯಾತ್ಮಕವಾದುದೆಂಬುದು ನಿಜವಾ ದರೂ ಕಾವ್ಯವಸ್ತುವಿನೊಡನೆ ತೀವ್ರವಾಗಿ ತೊಡಗುವುದನ್ನು ಇದು ತಡೆಯುತ್ತದೆ. ದನಿಯೆತ್ತಿ ಹೇಳಬೇಕಾದ ಸಂದರ್ಭದಲ್ಲೂ ದನಿ ತಗ್ಗುತ್ತದೆ. ಸೃಜನಶೀಲ ಸಂದ ರ್ಭದಲ್ಲಿ ಇದನ್ನು ಎದುರಿಸಲು ಕವಿ ಕೆಲವು ಕಾವ್ಯ ಉಪಾಯಗಳನ್ನು ಅನುಸರಿಸ ಬೇಕಾಗುತ್ತದೆ. ಅವುಗಳಲ್ಲಿ ಪ್ರತೀಮಾತ್ಮಕ ಮಾರ್ಗವೂ ಒಂದು. ಆವೇಶ, ರಭಸ ತೀವ್ರತೆಗಳನ್ನು – ಪ್ರತಿಮಾಮಾರ್ಗದಲ್ಲಿ ಕವಿ ತಗ್ಗಿದ ದನಿಯಲ್ಲಿಯೇ ಸಮರ್ಥವಾಗಿ ತರಬಲ್ಲ. ಆದರೆ ಕಣವಿಯವರಿಗೆ ಪ್ರತಿಮಾನಿಷ್ಠ ಮಾರ್ಗದ ಬಗ್ಗೆ ಒಲವಿದ್ದಂತೆ ಕಂಡುಬರುವುದಿಲ್ಲ. 'ಪ್ರತೀಕಕ್ಕಿಂತ ಮೂರ್ತೀಕರಣ ಈ ಕವಿಗೆ ಹೆಚ್ಚು ಪ್ರಿಯ'

(ಗೌರೀಶಕಾಯ್ಕಿಣಿ ದೀಪಧಾರಿ ಪುಟ 65) 'ವರ್ಣನೆಯೇ ಕಣವಿಯವರಲ್ಲಿ ಅಭಿವ್ಯಕ್ತಿಯ ಉಪಕರಣವಾಗುತ್ತದೆ' (ಎಚ್. ಎಸ್. ರಾಘವೇಂದ್ರರಾವ್, ಕನ್ನಡ ಭಾರತಿ ಪುಟ 285). ಹೀಗಾಗಿ ಕುರ್ತಕೋಟಿಯವರು ಹೇಳುವಂತೆ – 'ಸಮಕಾಲೀನ ಜೀವನದ ಚಿಂತೆ, ಕಾಳಜಿಗಳಲ್ಲಿ ಪ್ರಾಸ, ಅಲಂಕಾರಗಳಂತೆ ಕಾವ್ಯಕ್ಕೆ ತೊಡಿಗೆಗಳಾಗುವ' ಕಣವಿಯವರ ಕಾವ್ಯದ ಮೂಲಶಕ್ತಿ ಯಾವುದು ? ಜನಪರ ಕವಿಯಾದ ಕಣವಿಯವರು ಸಂವಹನದ ಬಗ್ಗೆಯೂ ನಿರ್ಲಕ್ಷ್ಯ ತೋರಿದವರಲ್ಲ ಹೀಗಾಗಿ ಕಣವಿಯವರ ಕಾವ್ಯ ಪ್ರತಿಮಾನಿಷ್ಠವಾಗುವುದಕ್ಕಿಂತ ವರ್ಣನೆಯನ್ನು ಅಭಿವ್ಯಕ್ತಿಯ ಉಪಕರಣ ಮಾಡಿಕೊಂಡಿದ್ದು ಸಹಜವಿರಬಹುದು. ಹಾಗೆ ನೋಡಿದರೆ ಶುದ್ಧ ಪ್ರತಿಮಾನಿಷ್ಠ ಕಾವ್ಯ ಪರಂಪರೆ ರಾಮಚಂದ್ರಶರ್ಮರನ್ನು ಬಿಟ್ಟರೆ ಕನ್ನಡದ ಜಾಯಮಾನದಲ್ಲಿ ಬೆಳೆದು ಬರಲೇ ಇಲ್ಲ. ಉದ್ವಿಗ್ನತೆ ತೀವ್ರತೆಗಳನ್ನು ಬಿಟ್ಟುಕೊಟ್ಟು, ಪ್ರತಿಮಾನಿಷ್ಠ ಮಾರ್ಗಕ್ಕೆ ಒಲಿಯದ ಕಣವಿಯವರ ಕಾವ್ಯದ ಅಭಿವ್ಯಕ್ತಿ ಸಾಧ್ಯತೆಗಳ ಅಭ್ಯಾಸ ಕುತೂಹಲಕರವಾದುದು.

ಈ ಬದುಕಿನ ಬಗ್ಗೆ ಅಸಹನೆ ತಾಳದೆ, ವ್ಯಕ್ತಿ–ಪರಿಸರದ ಬಗ್ಗೆ ಪ್ರೀತಿ ಸಹಾನುಭೂತಿ ಬೆಳೆಸಿಕೊಂಡ ಕಣವಿಯವರ ಕಾವ್ಯ ಬದುಕನ್ನು ಗೌರವದಿಂದ ಕಾಣುವಂಥದೆಂಬುದು ಒಪ್ಪಿತವಾಗಿರುವ ಸಂಗತಿ. ಬದುಕಿನ ಬಗೆಗಿನ ಈ ಪ್ರೀತಿ ಉತ್ಸಾಹಗಳೇ ಅವರ ಕಾವ್ಯದ ಲಯವನ್ನು ರೂಪಿಸಿರುವಂತೆ ತೋರುತ್ತದೆ. ಕಣವಿಯವರ ಕಾವ್ಯಲಯ ಗದ್ಯದ ನೀರಸತನದಿಂದಾಗಲೀ, ಅಸಹಜ ಕ್ಲಿಷ್ಟತೆಯಿಂದಾಗಲೀ ಎಂದೂ ಸೊರಗುವುದಿಲ್ಲ. ಉಸಿರಾಟದ ಸಹಜಗತಿಯಂತೆ ರೂಪಿತಗೊಳ್ಳುವ ಅವರ ಶೈಲಿ– ಕಣವಿಯವರ ಕಲೆಗಾರಿಕೆಯ ವಿಶಿಷ್ಟತೆ. ಅವರ ಸಾನೆಟ್‌ಗಳಂತೂ ಕಣವಿಯವರ ಕಲೆಗಾರಿಕೆಯ ಕುಸುರಿಗೆಲಸದ ಶ್ರೇಷ್ಠ ಮಾದರಿಗಳು. 'ನೆಲಮುಗಿಲು' ವಿನಂತಹ ಕವಿತೆಯನ್ನೋದುವಾಗ ಈ ಕಲೆಗಾರಿಕೆಯ ಸೊಗಸಿನ ಅನುಭವ ನಮಗಾಗುತ್ತದೆ. ಶಾಂತಿನಾಥ ದೇಸಾಯಿಯವರು ಈ ಕವಿತೆಯನ್ನು ಕುರಿತು ಹೇಳಿರುವ ಮಾತುಗಳನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು: 'ಕಣವಿಯವರು ತಮ್ಮ ತತ್ವಜ್ಞಾನವನ್ನೆಲ್ಲ, ಜೀವನದ ಮೇಲಿದ್ದ ತಮ್ಮ ಭರವಸೆಯನ್ನೆಲ್ಲ ಈ ಸುನೀತದಲ್ಲಿ ಅತ್ಯಂತ ಪ್ರಭಾವಿಯಾಗಿ ಮಿಡಿಸಿದ್ದಾರೆ.... ಜೀವನದ ಸೀಮಿತತೆಯನ್ನು ಗುರುತಿಸಿಯೂ ಜೀವನ ಶಕ್ತಿಯ ಊರ್ಧ್ವಮುಖತ್ವದಲ್ಲಿ ವಿಶ್ವಾಸ ತೋರಿಸುವ ಈ ಸಾನೆಟ್ಟಿನಲ್ಲಿ ರೊಮ್ಯಾಂಟಿಕ್ ದರ್ಶನದ ಪರಿಪಾಕವಿದೆ. ಭೂಮಿ ಆಕಾಶಗಳ ಮಧ್ಯದಲ್ಲಿಯೇ ನಮ್ಮ ಜೀವ ಸಾಗಲಿದೆ– ಮುಗಿಲಿನಂತೆ ತುಂಬಿ ತೇಲುವುದೇ ಜೀವನ– ಇದು ಕಣವಿ ಕಾವ್ಯದ ಕೇಂದ್ರ ಸಂದೇಶ' (ಚೆಂಬೆಳಕು ಪುಟ 223)

ಕಣವಿಯವರ ಕಾವ್ಯ ನವೋದಯ ಸಂಪ್ರದಾಯದ ಉತ್ತಮಾಂಶಗಳನ್ನು ಒಳಗೊಂಡು ಬೆಳೆದು ನವ್ಯಕಾವ್ಯ ಮಾರ್ಗದಲ್ಲಿ 'ವಾಸ್ತವ ಪ್ರಜ್ಞೆ'ಯನ್ನು ರೂಢಿಸಿಕೊಂಡರೂ ಮಾನವಾನುಭವದ ಇತರ ಅನುಭವಗಳಿಗೆ ಬೆನ್ನು ತಿರುಗಿಸಲಿಲ್ಲವೆಂಬ ಸಂಗತಿಯನ್ನು ಕನ್ನಡ ವಿಮರ್ಶೆ ಈಗಾಗಲೇ ಗುರ್ತಿಸಿದೆ. ಅದು ಅವರ ವೈಶಿಷ್ಟ್ಯವೆಂಬ ಸಂಗತಿಯನ್ನೂ ನಾವು ಗಮನಿಸಿದ್ದೇವೆ. ಆದರೆ ನವೋದಯ ಕಾವ್ಯ ಸಂಪ್ರದಾಯದಲ್ಲಿ ಬೆಳೆದು ಬಂದ ಕಣವಿ, ಶಿವರುದ್ರಪ್ಪ, ಕೆ.ಎಸ್.ನ, ಚಿತ್ತಾಲ-ಮೊದಲಾದವರು ನವ್ಯಕಾವ್ಯ ಸಂದರ್ಭದ ಸವಾಲನ್ನು ಎದುರಿಸಿದ ಬಗೆ ಕುತೂಹಲಕಾರಿಯಾದುದು. ಈ ಎಲ್ಲ ಕವಿಗಳೂ ಆ ಸಂದರ್ಭದಲ್ಲಿ 'ಕಾಲ' ದೊಂದಿಗಿನ ಮನುಷ್ಯನ ಸಂಬಂಧವನ್ನು ತಮ್ಮ ಕಾವ್ಯದ ವಸ್ತುವನ್ನಾಗಿಸಿಕೊಂಡದ್ದು ಗಮನಿಸಬೇಕಾದ ಸಂಗತಿ. ಅಡಿಗರು ಸಮಕಾಲೀನ ಕಟು ವಾಸ್ತವದ ನಡುವೆ ವ್ಯಕ್ತಿತ್ವ ರಕ್ಷಣೆಯ ಹೋರಾಟದಲ್ಲಿ ತೊಡಗಿದ್ದಾಗ ಕಣವಿ, ಶಿವರುದ್ರಪ್ಪ, ಮೊದಲಾದವರ ಕಾವ್ಯ 'ಮನುಷ್ಯ-ಕಾಲ'ದ ಸಂಬಂಧದ ಬಗ್ಗೆ ಆಸಕ್ತಿ ತಾಳಿತ್ತು. ಕನ್ನಡ ಸಾಹಿತ್ಯದಲ್ಲಿ ಕಾಲವನ್ನು ಕುರಿತ ಅನೇಕ ಮಹತ್ವದ ಕವಿತೆಗಳು-ಗಡಿಯಾರದಂಗಡಿಯ ಮುಂದೆ, ಮಬ್ಬಿನಿಂದ ಮಬ್ಬಿಗೆ, ಕಾಲದ ಕರೆ, ಕಾಲ ನಿಲ್ಲುವುದಿಲ್ಲ, ಗಡಿಯಾರದಡಿಯಲ್ಲಿ, ಕಾಲಪುರುಷನಲ್ಲಿ ಕವಿಗಳ ಕೋರಿಕೆ, ಮಧ್ಯಾಹ್ನದ ಮಜಲು, ಸಂಜೆ ದಾರಿ ರಚಿತವಾದವೆಂಬುದನ್ನು ನಾವು ಗಮನಿಸಬಹುದು. ವ್ಯಕ್ತಿತ್ವವನ್ನು ನಿಕಷಕ್ಕೊಡ್ಡಿ ಹೋರಾಡುವ, ಪ್ರಶ್ನಿಸುವ, ಸುಲಭವಾಗಿ ಒಪ್ಪಿಕೊಳ್ಳದ ಮನೋಭಾವವನ್ನು ಇವರು ಸ್ವೀಕರಿಸಿದರೂ ಅದನ್ನು ನಿರ್ವಹಿಸಿದ್ದು ಮಾತ್ರ ಕಾಲದಂಥ ಅಮೂರ್ತ ವಸ್ತುವಿನ ಸಂದರ್ಭದಲ್ಲಿ. ಆದ್ದರಿಂದಲೇ ನವ್ಯ ಸಂದರ್ಭದೊಡನೆ ಇವರು ಸಂಬಂಧವಿಟ್ಟುಕೊಂಡೂ, ವಿಶಿಷ್ಟವಾಗಿ ಉಳಿಯಲು ಸಾಧ್ಯವಾಯಿತು.

ಬದುಕಿನ ಸಿಹಿ-ಕಹಿಗಳೆರಡನ್ನೂ ಅನುಭವಿಸಿ, ಅವರ ಅರಿವಿನಿಂದ ಮೂಡಿದ ಸಮಚಿತ್ತದ ನಡವಳಿಕೆ ಕಣವಿಯವರದು. ಜೀವನದ ಸೊಗಸನ್ನು ಕಾಣಬಯಸುವ ಈ ಪ್ರಜ್ಞೆಯನ್ನು ರೊಮ್ಯಾಂಟಿಕ್ ಪಲಾಯನವಾದವೆಂದು ಸರಳವಾಗಿ ಕರೆಯುವುದು ಸೂಕ್ತವಲ್ಲವೆಂದು ಮೊಕಾಶಿಯವರು ಹೇಳುತ್ತಾರೆ. ಅವರ ಅಭಿಪ್ರಾಯ ಸರಿಯಾದುದಾಗಿದೆ. ಕಣವಿಯವರ ಕಾವ್ಯವನ್ನು ಸುಸಂಸ್ಕೃತ ಮನಸ್ಸಿನ ಸುಂದರ ಅಭಿವ್ಯಕ್ತಿಯೆನ್ನಬಹುದು. ಈ ಸುಸಂಸ್ಕೃತ ವ್ಯಕ್ತಿತ್ವ ಸಾಮಾಜಿಕ ನಡವಳಿಕೆಯಲ್ಲಿ ಅತ್ಯಂತ ಪ್ರಿಯವಾದುದು ನಿಜ. ಆದರೆ ಸೃಜನಶೀಲ ಸಂದರ್ಭದಲ್ಲಿ ಇದರ ಪಾತ್ರವೆಂಥದು ? ಕಾವ್ಯರಚನೆಯ ಸಂದರ್ಭದಲ್ಲಿ ಯಾವ ಹಂಗಿಗೂ ಒಳಗಾಗದ ಕವಿಮಹತ್ವವನ್ನು ಸೃಷ್ಟಿಸಬಲ್ಲ ಕಣವಿಯವರ ಸಮಗ್ರ ಕಾವ್ಯವನ್ನು ಅಧ್ಯಯನ

ಮಾಡಿದಾಗ ಅವರ ಸುಸಂಸ್ಕೃತ ವ್ಯಕ್ತಿತ್ವ ಕಣವಿ ಕಾವ್ಯದ ವಿಶಿಷ್ಟ ಅಂಶವಾಗಿರುವಂತೆಯೇ, ಅವರ ಕಾವ್ಯದ ಸೀಮಿತ ಯಶಸ್ಸಿಗೂ ಕಾರಣವಿರಬಹುದೇ ?- ಇದೊಂದು ಸೂಕ್ಷ್ಮವಾದ ಪ್ರಶ್ನೆ. ಕಾವ್ಯವಿಮರ್ಶೆಯಲ್ಲಿ ಕವಿಯ ವ್ಯಕ್ತಿತ್ವದ ವಿಮರ್ಶೆ ಸಲ್ಲದೆಂಬ ಪ್ರಾಥಮಿಕ ಸಂಗತಿಯ ಅರಿವಿನೊಡನೆಯೇ ನಾನು ಈ ಪ್ರಶ್ನೆಯನ್ನೆತ್ತುತ್ತಿದ್ದೇನೆ.

ಈ ಸಂದರ್ಭದಲ್ಲಿ ಕುರ್ತಕೋಟಿಯವರು ಕಣವಿಯವರ ಕಾವ್ಯವನ್ನು ಕುರಿತು ಹೇಳುವ ಮಾತುಗಳನ್ನು ಗಮನಿಸಬಹುದು; 'ಶ್ರೀ ಚನ್ನವೀರ ಕಣವಿಯವರ ಕೃತಿಗಳಲ್ಲಿ ಎರಡು ಬಗೆಯ ಕಾವ್ಯಜಾತಿಗಳು ಜೊತೆ ಜೊತೆಯಾಗಿಯೇ ಬೆಳೆದು ಬಂದಿರುವ ಸಂಗತಿ ಅವರ ಇತ್ತೀಚಿನ ಸಂಕಲನಗಳನ್ನೋದಿದಾಗ ಸ್ಪಷ್ಟವಾಗುತ್ತದೆ. ಕವಿಯ ವ್ಯಕ್ತಿತ್ವ ಬಹಿರ್ಮುಖವಾಗಿ ಬಾಹ್ಯಲೋಕದ ಘಟನೆಗಳಿಗೆ ಸ್ಪಂದಿಸಿದಾಗ ಹುಟ್ಟುವ ಕಾವ್ಯ ಒಂದು ಬಗೆಯದಾಗಿದ್ದರೆ ಕವಿಯ ಅಂತರಂಗದ ಬೆಳವಣಿಗೆಯನ್ನು ಪ್ರತಿಫಲಿಸುವ ಕಾವ್ಯ ಇನ್ನೊಂದು ಬಗೆಯದಾಗಿದೆ. ಮೊದಲ ಜಾತಿಯ ಕಾವ್ಯದಲ್ಲಿ ವಿಶೇಷವಾದ ಬೆಳವಣಿಗೆಯಿಲ್ಲ. ಅದು ಒಂದು ರೀತಿಯ ತಟಸ್ಥ ಕಾವ್ಯ. ಇಂಥ ಪ್ರಾಸಂಗಿಕ ಕಾವ್ಯಕ್ಕಾಗಿ ಒಂದು ವಿಶಿಷ್ಟ ಶೈಲಿಯನ್ನು, ವಿನಯವೇ ಸ್ಥಾಯಿಯಾಗಿ ಉಳ್ಳ ಒಂದು ಭಾವ ಸಂದೋಹವನ್ನು, ಗುಣಗ್ರಾಹಕ ಪ್ರಜ್ಞೆಯನ್ನು ಕಣವಿಯವರ ಕಾವ್ಯ ಮೊದಲಿನಿಂದಲೂ ರೂಢಿಸಿಕೊಂಡುಬಂದಿದೆ.

(ಜೆಂಬೆಳಕು, ಪುಟ 258)

ಪ್ರಾಸಂಗಿಕ ಕಾವ್ಯದಲ್ಲಿ ಮಾತ್ರವಲ್ಲ, ಒಟ್ಟು ಕಾವ್ಯದ ಸಂದರ್ಭದಲ್ಲಿಯೂ ವಿನಯವೇ ಸ್ಥಾಯಿಯಾಗಿ ಉಳ್ಳ ಒಂದು ಭಾವ ಸಂದೋಹವನ್ನು, ಗುಣಗ್ರಾಹಕ ಪ್ರಜ್ಞೆಯ ಶೈಲಿಯನ್ನು ಕಣವಿಯವರು ರೂಢಿಸಿಕೊಂಡಿದ್ದಾರೆನ್ನಿಸುತ್ತದೆ. ಬಾಹ್ಯಲೋಕದ ಬಗೆಗಿನ ಕಾವ್ಯಕ್ಕೆ ಮಾತ್ರವಲ್ಲದೆ ಅಂತರಂಗದ ಬೆಳವಣಿಗೆಯನ್ನು ಪ್ರತಿಫಲಿಸುವ ಕಾವ್ಯದಲ್ಲಿಯೂ ಇದು ಮುಖ್ಯವಾಗಿಬಿಟ್ಟರೆ ಕಾವ್ಯದ ಕಸುವನ್ನು ಅದು ಕಸಿದುಕೊಳ್ಳುವುದಿಲ್ಲವೇ ಎಂಬ ಅನುಮಾನ ನನ್ನದು. ಸುಸಂಸ್ಕೃತ ನಡಾವಳಿಯನ್ನು ಮೆಚ್ಚಿ ಗೌರವಿಸುವ ಮನಸ್ಸು ಭಾಷೆಯಲ್ಲಿ ಭಾಷಾಂತರಗೊಳ್ಳುವಾಗ ಆ ಮರ್ಯಾದೆಯನ್ನು ಮೀರದಿದ್ದರೆ- ಕಾವ್ಯ ಚೆಲುವಾದರೂ ದೃಢವಾಗುವುದಿಲ್ಲ ಅಲ್ಲವೇ ? ಯಾವ ಅನುಭವವನ್ನೂ ಜೀವಂತವಾಗಿ ಮಾತನಾಡಿಸುವ ಶಕ್ತಿಯುಳ್ಳ ಕಲೆಗಾರಿಕೆ, ಮಾನವೀಯ ಸಂದರ್ಭಗಳಲ್ಲಿ ನಂಬಿಕೆ ಕಳೆದುಕೊಳ್ಳದ ಪ್ರೀತಿ ರುಚಿ ಕಳೆದುಕೊಳ್ಳದ ಸೂಕ್ಷ್ಮ ಸಂವೇದನೆ- ಕನ್ನಡ ವಿಮರ್ಶೆ ಮೆಚ್ಚಿಕೊಂಡಿರುವ

ಈ ಅಂಶಗಳೆಲ್ಲವನ್ನೂ ಒಳಗೊಂಡ ಕಣವಿಯವರ ಕಾವ್ಯ ಮುಖ್ಯವಾದುದಾದರೂ ಮಹತ್ವದ್ದಾಗದಿರಲು ಇದು ಕಾರಣವಿರಬಹುದೇ ? 'ಮೃದು ವಚನ ಮೂಲೋಕ ಗೆಲ್ಲುವುದು ತಿಳಿಯು' ಎಂಬ ಶ್ರದ್ಧೆಯು, ನಿರುದ್ವಿಗ್ನ ಸ್ಥಿತಿಯನ್ನು, ಸಮಾಧಾನ ವನ್ನು ಒಂದು ವ್ರತದಂತೆ ಪಾಲಿಸುವ ಕವಿಮನಸ್ಸಿನ ಅಭಿವ್ಯಕ್ತಿ ನಮಗೆ ಪ್ರಿಯ ವಾದರೂ, ಉತ್ಕಟ ಅನುಭವವನ್ನು ನೀಡುವುದಿಲ್ಲ ಎಂಬುದೂ ನಿಜವಲ್ಲವೇ ?– ಈ ಹಿನ್ನೆಲೆಯಲ್ಲಿ ನಾನು ಎತ್ತಿದ ಪ್ರಶ್ನೆ ಸಂಗತವಾಗಬಹುದೆಂದು ನಾನು ಭಾವಿ ಸಿದ್ದೇನೆ.

ಸಾವಧಾನದ ಬದುಕು ಕಣವಿಯವರಿಗೆ ಪ್ರಿಯ. ವಾಸ್ತವ ಜಗತ್ತು ಹಾಗಿಲ್ಲದಿದ್ದ ರೂ ಅಂತಹ ಬದುಕನ್ನು ಅವರು ತಮ್ಮ ಮಟ್ಟಿಗಾದರೂ ಸೃಷ್ಟಿಸಿಕೊಳ್ಳಬಲ್ಲಂಥ ಶಕ್ತರು. ಈ ಶಕ್ತಿಯೇ ಅವರ ಕಾವ್ಯದ ಸತ್ವವಾಗಿದೆ. ಆದರೆ ಅದು ವಾಸ್ತವದ ಕಟುಸತ್ಯವನ್ನು ಕಾವ್ಯದಿಂದ ಕಿತ್ತುಕೊಂಡಿದೆಯಲ್ಲವೇ ? ಈ ಸತ್ಯದ ಅರಿವು ಕಣವಿಯವರಿಗೆ ಇಲ್ಲವೆಂದಲ್ಲ. ಹಾಗೇನಾದರೂ ಆಗಿದ್ದರೆ ಅವರನ್ನು ನಾವು ಮುಖ್ಯ ಕವಿಯೆಂದು ಗಮನಿಸಬೇಕಾಗಿಯೇ ಇರಲಿಲ್ಲ. ಆದರೆ ಆ ಅರಿವನ್ನು ಅವರ ಕಾವ್ಯ ಪ್ರಪಂಚ ಒಳಗೊಳ್ಳುತ್ತಿದೆಯೇ ? ಕಣವಿಯವರ ಸುಸಂಸ್ಕೃತ ಮನಸ್ಸು ಅದನ್ನು ಮೃದುಗೊಳಿಸುತ್ತಿದೆಯೇ ?

'ಕಾಲಾತೀತ'ವೆಂಬ ಕಣವಿಯವರ ಒಂದು ಸೊಗಸಾದ ಕವಿತೆಯನ್ನು ಈ ಸಂದ ರ್ಭದಲ್ಲಿ ವಿಶ್ಲೇಷಿಸುವುದು ನನ್ನ ಮಾತುಗಳನ್ನು ಹೆಚ್ಚು ಸ್ಫುಟಗೊಳಿಸಬಹುದು.

'ಬಿಡುವಿಲ್ಲ, ಅರ್ಜೆಂಟು !' ಟಾರು ಬೀದಿಯ ತುಡಿತ
ಕಾರು ಮೋಟಾರು ಸೈಕಲ್ಲು ಟಾಂಗಾ ಟ್ರಕ್ಕು
ಉಸಿರು ಕಟ್ಟುವ ತೆರದಿ ಬಟ್ಟೆಯಲಿ ಹಾಸು–ಹೊಕ್ಕು,
ಗಡಿಯಾರದೆಡೆಬಿಡದ ಟಿಕ್ಕು ಟಿಕ್ಕಿನ ಬಡಿತ
ಆಫೀಸು ಶಾಲೆ ಕಾಲೇಜು ಅಂಗಡಿ ಬ್ಯಾಂಕು
ಎಳೆಯುತಿಹವಯಸ್ಕಾಂತದೊಲು ಜೀವಾಣುಗಳ
ಮೂಗುದಾರವ ಜಗ್ಗಿ: ನೂರು ಗಾಲಿಯ ಕೀಲ
ಸವೆದು ಕಿರುಗುಟ್ಟುತಿವೆ: ನರನಿಗೆ ಜಯುಪರಾಕು !
ಬೀದಿಯಂಚಿನ ಕಾಲುದಾರಿಯಲಿ ದನಗಾಹಿ
ಮಹಿಷವಾಹನನಾಗಿ ಕೊಳಲೂದಿ ಸಾಗಿಹನು;
ನೋಡಿದಿರ ? ನೋಡದಿದ್ದರು ಸರಿಯೆ: ಅವನೇನು

ಮಂತ್ರಿಯೇ ? ಯಾವುದಾದರೂ ಸಭೆಯ ಮನಮೋಹಿ
ಗಾರುಡಿಯೇ ? ಅವನಲ್ಲ ಬಿಡಿ: ಆದರೆನ್ನಾಣೆ
ಅಂಥ ಮನಸಿನ ಶಾಂತಿ ಯಾರಿಗಿಹುದೋ ಕಾಣೆ.

(ಕಾಲಾತೀತ, ಚಿರಂತನ ದಾಹ **ಪುಟ** 49)

ನಗರದ ಯಾಂತ್ರೀಕೃತ, ವೇಗದ ಬದುಕಿನ ಹಿನ್ನೆಲೆಯಲ್ಲಿ ಕವಿಗೆ ಗ್ರಾಮೀಣ ಬದುಕಿನ ನಿರಾಳತೆ ಪ್ರಿಯವಾಗಿದೆ, ಸಂತೋಷ ತಂದಿದೆ. ಬೀದಿಯಂಚಿನ ಕಾಲು ದಾರಿಯ ಈ ದನಗಾಹಿಯ ಮನಸಿನ ಶಾಂತಿಯ ಬಗ್ಗೆ ಮೆಚ್ಚುಗೆಯಿದೆ. ಕವಿ ಅದನ್ನು ಸೂಕ್ಷ್ಮವಾಗಿ ವೈಭವಿಸುತ್ತಿದ್ದಾರೆ. ನಿಜ, ಈ ಸದ್ದುಗದ್ದಲದ ಆಧುನಿಕ ಜಗತ್ತಿನಲ್ಲಿ ಇಂಥ 'ಬಿಡುವಿನ ಸಂತೋಷ' ಯಾರಿಗೆ ಪ್ರಿಯವಾಗದು ? ಹೀಗಾಗಿ ಈ ಕವನದ ಭಾವ ಕವಿಯಂತೆಯೇ ಓದುಗನಿಗೂ ಪ್ರಿಯವಾಗುತ್ತದೆ. ಆದರೆ ದನಗಾಹಿಯ ಶಾಂತಿಯ ಜೊತೆಗೆ ಆತನ ಸಾಮಾಜಿಕ ಸ್ಥಿತಿಯ ಬಗೆಗಿನ ಸೂಚನೆಯೂ ಕವನದಲ್ಲಿದ್ದಿದ್ದರೆ ಕವನ ಮಹತ್ವದ್ದಾಗುತ್ತಿತ್ತು; ಕಟುವಾಸ್ತವದ ಸತ್ಯ ದರ್ಶನವಾಗುತ್ತಿತ್ತು. ನಾಗರೀಕ ಬದುಕು ತಂದೊಡ್ಡಿರುವ ಸಮಸ್ಯೆಯೊಡನೆ ಕವಿತೆ ಮುಖಾಮುಖಿಯಾಗದೆ ಇರುವುದರಿಂದಾಗಿ ಕಣವಿಯವರ ಕಾವ್ಯ ನಮಗೆ ಪ್ರಿಯವಾದರೂ, ಆಳದಲ್ಲಿ ಕೊರತೆಯ ಭಾವವನ್ನುಳಿಸುತ್ತದೆ.

ಪುಸ್ತಕ ಪರಿಚಯ

ಪು.ತಿ.ನ. ಅವರ ಶ್ರೀ ಹರಿಚರಿತೆ.

ಶ್ರೀ ಹರಿಚರಿತೆ (ಮಹಾಕಾವ್ಯ) : ಡಾ. ಪು.ತಿ.ನ.; ಪ್ರಕಾಶನ : ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು–4; 1988; ಬೆಲೆ : 30–00

— ಡಾ|| ಎಚ್. ಎಸ್. ವೆಂಕಟೇಶಮೂರ್ತಿ

ಸೃಜನಶೀಲತೆ ಯಾವಾಗಲೂ ತನ್ನ ಕಿಲಾಡಿತನಕ್ಕೆ ಪ್ರಸಿದ್ಧವಾಗಿದೆ. ಅದರ ಲಕ್ಷಣಗಳನ್ನೂ, ಸ್ವರೂಪವನ್ನೂ, ಸಾಧ್ಯತೆಗಳನ್ನೂ ಶಾಸ್ತ್ರಕಾರರು ಖಚಿತಗೊಳಿಸಲು ಉದ್ದಕ್ಕೂ ಪ್ರಯತ್ನಿಸುತ್ತಾ ಬಂದಿದ್ದಾರೆ. ಆದರೆ ಹೊಸ ಹೊಸ ಸೃಜನಶೀಲ ಪ್ರಯೋಗಗಳು ಶಾಸ್ತ್ರಕಾರರ ಎಲ್ಲ ಮುನ್ನರಿಕೆಗಳನ್ನೂ ತಿರಸ್ಕರಿಸಿ ಮತ್ತೆ ಮತ್ತೆ ಸಂಭವಿಸುತ್ತಾ, ಶಾಸ್ತ್ರಿಗಳು ಬೆಚ್ಚಿಬೀಳುವಂತೆ ಮಾಡುತ್ತಾ ಬಂದಿವೆ.

ಮಹಾಕಾವ್ಯದ ವಿಷಯವನ್ನೇ ತೆಗೆದುಕೊಳ್ಳಿ. ಮಹಾಕಾವ್ಯ ಆಧುನಿಕ ಯುಗದಲ್ಲಿ ಅಸಂಭವ ಎಂದು ಕೆಲವು ಕಾವ್ಯಶಾಸ್ತ್ರಿಗಳು ಗಟ್ಟಿಕೊರಳಿನಲ್ಲಿ ಕೂಗಿದ್ದಾಯಿತು. ಮಹಾಕಾವ್ಯ ಬಂದರೂ ಅದು ಕಾದಂಬರಿಯ ಸ್ವರೂಪದಲ್ಲಿ ಬಂದೀತೆಂಬ ಮಾತೂ ನಂತರ ಸೇರ್ಪಡೆಯಾಯಿತು. ಸೃಜನಶೀಲತೆ ಸರ್ವತಂತ್ರ ಸ್ವತಂತ್ರವಾದುದು ಎಂಬುದನ್ನು ಮತ್ತೆ ಸಾಬೀತುಪಡಿಸುವಂತೆ, ಈ ಶತಮಾನದಲ್ಲಿ, ಕನ್ನಡದಲ್ಲೇ ನಾವು ಗಂಭೀರವಾಗಿ ಪರಿಗಣಿಸಬೇಕಾದ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ, ಮಾಸ್ತಿಯವರ ಶ್ರೀರಾಮ ಪಟ್ಟಾಭಿಷೇಕ, ಗೋಕಾಕರ ಭಾರತಸಿಂಧು ರಶ್ಮಿ ಮತ್ತೆ ಈಗ ಪು.ತಿ. ನರಸಿಂಹಾಚಾರ್ಯರ ಶ್ರೀ ಹರಿಚರಿತೆ ಮಹಾಕಾವ್ಯಗಳು ಅವತರಿಸಿವೆ.

ಗಾತ್ರದಲ್ಲಿ ಶ್ರೀಹರಿಚರಿತೆ ಅಷ್ಟೇನು ವಿಸ್ತಾರವಾದುದಲ್ಲ. ರನ್ನನ ಗದಾಯುದ್ಧ,

ಜನ್ನನ ಯಶೋಧರ ಚರಿತೆ ಮಾಸ್ತಿಯವರ ಪಟ್ಟಾಭಿಷೇಕ ಕಾವ್ಯಗಳಂತೆ ಮಧ್ಯಮ ಗಾತ್ರದ ಕೃತಿ. ಮುದ್ರಿತ 200 ಪುಟಗಳ ವಿಸ್ತಾರದ ಶ್ರೀ ಹರಿಚರಿತೆ ಶ್ರೀಕೃಷ್ಣನ ಬಾಲ್ಯ ಜೀವನವನ್ನು ಮಾತ್ರ ಚಿತ್ರಿಸುವ ಕಾವ್ಯವಾಗಿದೆ. ಪು.ತಿ.ನ. ಉದ್ದೇಶಿಸಿದ್ದು ಶ್ರೀಕೃಷ್ಣನ ಸಮಗ್ರ ಚರಿತೆಯನ್ನು. ಆದರೆ, ಕೃಷ್ಣನ ಬಾಲ್ಯವನ್ನಷ್ಟೇ ಚಿತ್ರಿಸಿ ಇಲ್ಲಿ ಕಾವ್ಯ ಮುಗಿತಾಯ ಪಡೆದಿದೆ. ಆದರೆ ಕಾವ್ಯವನ್ನು ಓದಿದಾಗ ಈಗಿರುವಂತೆಯೇ ಕಾವ್ಯ ಒಂದು ಸಮಗ್ರ ಸ್ವರೂಪವನ್ನು ಪಡೆದಿದೆ ಎನ್ನಬಹುದು. ಕಾವ್ಯ ಅಸಂಪೂರ್ಣ ಅಥವಾ ಅಸಮಗ್ರ ಎಂದು ನಮಗೆ ಎಲ್ಲೂ ತೋರುವುದಿಲ್ಲ. ಬಾಲ್ಯ, ಕೃಷ್ಣನ ಜೀವಿತದ ಒಂದು ಸ್ವಯಂಪೂರ್ಣ ಘಟಕವಾಗಿರುವುದು ಅದಕ್ಕೆ ಕಾರಣವಿರಬಹುದು. ಅವನ ಮುಂದಿನ ಜೀವಿತ ಸಾಧನೆಗಳು, ಚಿಂತನೆಗಳಿಗೆಲ್ಲಾ ಆತನ ಬಾಲ್ಯದಲ್ಲೇ ಮುಂಗುರುಹುಗಳಿರುವುದರಿಂದ, ಕಾವ್ಯಕ್ಕೆ ಈ ಸಮಗ್ರತೆಯ ಲಕ್ಷಣ ದೊರಕಿರಬಹುದು. ಇದನ್ನು ಸ್ವಲ್ಪ ಅಲಂಕಾರಿಕವಾಗಿ ಹೇಳಬಹುದೆಂದರೆ 'ಪೂರ್ಣತೆ'ಯ ಪ್ರತಿ ಅಂಶವೂ ಸ್ವಯಂಪೂರ್ಣವಿರುತ್ತದೆ ಎಂಬ ತತ್ವವನ್ನು ಹರಿಚರಿತೆಯ ಬಂಧ ಸಮರ್ಥಿಸುವಂತಿದೆ.

ಶ್ರೀಕೃಷ್ಣನ ವ್ಯಕ್ತಿತ್ವ ಪು.ತಿ.ನ. ಅವರಿಗೆ ಯಾವತ್ತಿನಿಂದಲೂ ಪ್ರಿಯವಾದುದು. ಗೋಕುಲಾಷ್ಟಮಿ ಎಂಬ ಪ್ರಬಂಧ, ಮಳೆಯು ನಾಡ ತೊಯ್ಯುತಿರೆ ಎಂಬ ಪದ್ಯ, ಗೋಕುಲನಿರ್ಗಮನ ಎಂಬ ಗೀತರೂಪಕ, ದೀಪಲಕ್ಷ್ಮಿ ಎಂಬ ಹಾಡುಗಬ್ಬ, ಭಗವದ್ಗೀತೆಯ ಕನ್ನಡ ಪದ್ಯಾನುವಾದ ಹೀಗೆ ಅನೇಕ ಕಡೆ, ಹರಿಚರಿತೆಗೆ ಮೊದಲೇ ಪು.ತಿ.ನ. ಕೃಷ್ಣನ ವ್ಯಕ್ತಿತ್ವವನ್ನು ಕಾವ್ಯದ ಹದದಲ್ಲಿ ಧ್ಯಾನಿಸಿದ್ದುಂಟು. ಆ ಧ್ಯಾನ ಶ್ರೀ ಹರಿಚರಿತೆಯಲ್ಲಿ ತನ್ನ ಉಚ್ಛ್ರಾಯದಲ್ಲಿ ಪ್ರಕಟವಾಗಿದೆ ಎಂದು ನಾನು ಭಾವಿಸುತ್ತೇನೆ. ಧ್ಯಾನ ಎಂಬ ಪದವನ್ನಾದರೂ ನಾನು ಉದ್ದೇಶಪೂರ್ವಕವಾಗಿ ಬಳಸಿದ್ದೇನೆ. ಭಕ್ತಿಪಂಥದಲ್ಲಿ ಹರಿಸ್ಮರಣೆ ಎಂಬ ಮಾತಿದೆ. ಭಕ್ತನೊಬ್ಬನಿಗೆ ಹರಿಸ್ಮರಣೆ ಎಂದರೆ ಅವನ ನಾಮಸ್ಮರಣೆ ಮಾತ್ರ ಆಗಬಹುದು ಆದರೆ, ಕವಿಯೊಬ್ಬನಿಗೆ ನಾಮಸ್ಮರಣೆ ಎಂದರೆ ಕೃಷ್ಣನ ಬದುಕಿನ ಹುಡುಕಾಟವಾಗುತ್ತದೆ. ಯಾಕೆಂದರೆ ಕವಿ ಭಾವಿಸುವುದೇ ಇಂದ್ರಿಯ ಗ್ರಾಹ್ಯವಾಗುವ ಸೂಕ್ಷ್ಮ ವಿವರಗಳ ಮೂಲಕ. ಪು.ತಿ.ನ. ಅವರ ಇಡೀ ಕಾವ್ಯದ ರಚನೆ, ಹೀಗೆ ನೆನಪಿಸಿಕೊಳ್ಳುವ, ನೆನಪುಗಳನ್ನು ಧ್ಯಾನ ಕಲ್ಪನೆ ಮತ್ತು ಭಾವಾತ್ಮಕ ಊಹೆಗಳಿಂದ ಧಾಳಾಗಿಸಿಕೊಳ್ಳುವ ರಚನಾಕ್ರಮವಾಗಿದೆ. ಈ ರಚನಾ ತಂತ್ರವನ್ನು ಮೂರು ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು.

1. ಗೋಕುಲದಲ್ಲಿ ಕೃಷ್ಣನ ಬಾಲಲೀಲೆಗಳನ್ನು ಕವಿ ಸ್ಮರಣೆಗೆ ದಕ್ಕಿಸಿಕೊಳ್ಳುವ ಪರಿ :

....ಏಗೈದನೇಗೈದನೀ
ಚಿರಸುಂದರ ಚಿರಂಜೀವಿ ಗೋಕುಲದೊಳಗೆ ತನ್ನ ಲೀಲಾ
ಚೇಷ್ಟಿತಗಳಿಂದ ?....
....
ನಿಲ್ಮನವೆ, ನಿಲ್ಲಿದುವೆ ಮುಹೂರ್ತವಾ ಬಾಲಗೋಪಾಲಕ
ನಿರುಕಿಸುತ ನೆನವಿನೊಳು ನಿರ್ಬಂಧಿಸಲು ದಾವುಗ್ರುಸ್ತನನು,

2. ಬೃಂದಾವನದಲ್ಲಿ ಕೃಷ್ಣ–ಬಲರಾಮರು ಹೇಗಿದ್ದರು, ಏನು ಮಾಡಿದರು ಎಂದು ಧ್ಯಾನಿಸುವ ಪರಿ.

ಬೃಂದಾವನದೊಳೆಂತಿರ್ದನೇಗೈದನಣ್ಣನ ಜತೆಗೆ
ಕಳೆಯೊಳೂ. ರೂಪೊಳೂ ಕಣ್ಣನಿಗೀಡೆನಿಪ ವಸುದೇವ
ತನುಜ ರೌಹಿಣೇಯಂ ಮಿತ್ರಾರಾಮ ಸಂವರ್ಧಿತಂ
ಬಲರಾಮನೆಲ್ಲೆಲ್ಲಿ ಸಂಚರಿಸಿದನು ಕೆಳೆಯರ ಕೂಡಿ ?

3. ಗೋವ್ರಜದಲ್ಲಿ ರಾಧೆಯನ್ನು ಹುಡುಕುವ ಪರಿ.

ಗೋವ್ರಜದೊಳಾವಳು ರಾಧೆ ? ಎಲ್ಲಿಹಳು ? ಯಾರ ಮಗಳು ?
ಕನ್ನೆಯೋ ಕುಟುಂಬಿನಿಯೋ ? ಬಲ್ಲರಾರ್ ಆ ಹರಿವಲ್ಲಭೆಯ ?

ಪು.ತಿ.ನ. ಅವರು ಹರಿಚರಿತೆಯನ್ನು ತಾವು ಸೃಷ್ಟಿಸುತ್ತಿರುವುದಾಗಿ ಭಾವಿಸುವುದೇ ಇಲ್ಲ. ಅದಾಗಲೇ ಸಿದ್ಧವಾಗಿದೆ. ವ್ಯಾಸ, ಶುಕ ಮೊದಲಾದವರ ಹೆಸರನ್ನು ಹೇಳುತ್ತಾ ಕವಿ ಇದನ್ನು –ಎಂದರೆ ಹರಿಚರಿತೆ ಪೂರ್ವಸಿದ್ಧ–ಎಂಬುದನ್ನು ಕಾವ್ಯದ ಉದ್ದಕ್ಕೂ ಸ್ಪಷ್ಟಪಡಿಸಿದ್ದಾರೆ. ಕೃಷ್ಣನ ಬಾಲಲೀಲೆಗಳೆಲ್ಲವನ್ನೂ ಸಕ್ರಮವಾಗಿ ವರ್ಣಿಸುವುದೂ ಅವರ ಕಾವ್ಯದ ಉದ್ದೇಶವಾಗಿಲ್ಲ. ಪ್ರಸಿದ್ಧವಾದ ಅನೇಕ ಉಪಾಖ್ಯಾನಗಳು ಇಲ್ಲಿ ಕೇವಲ ಉಲ್ಲೇಖಿತವಾಗುತ್ತವೆ ಅಷ್ಟೆ. ಉದಾಹರಣೆಗೆ ಶಕಟಾಸುರ ವಧೆ, ಪೂತನಿಯ ವಧೆ ಇತ್ಯಾದಿ. ಕೃಷ್ಣನ ಬಾಲಚರಿತೆಯಲ್ಲಿ ಅಷ್ಟು ಜನಜನಿತವಾಗಿರದ, ಕೃಷ್ಣ ದಟ್ಟಕಾಡಿನಲ್ಲಿ ದೊಡ್ಡಾಲದ ಮರವೊಂದನ್ನು ಶೋಧಿಸಿದ್ದು, ಅದನ್ನು ತನ್ನ ಕೊಳಲ ಸಾಧನೆ, ಧ್ಯಾನ ಮತ್ತು ಏಕಾಂತಕ್ಕೆ ನೆಲೆಯಾಗಿಸಿಕೊಂಡಿದ್ದು, ಭಾರಿ ಮಳೆಯೊಂದರಲ್ಲಿ ಶ್ರೀಕೃಷ್ಣ ಬಲರಾಮರು ತೊಯ್ಯುತ್ತಾ ವಿಶ್ವೈಕ್ಯ ಭಾವವನ್ನು ಪಡೆದದ್ದು, ಒಂದೊಂದು ಪ್ರಕರಣಕ್ಕೇ ವಿಷಯವಾಗುತ್ತ ಧ್ವನಿಪೂರ್ಣವಾಗಿ ನಿರೂಪಿತವಾಗುತ್ತವೆ. ಆಲದ ಮರ ಹುಡು

ಕಿದ್ದಾಗಲೀ (ಭಾಂಡೀರ ದರ್ಶನ), ಮಳೆಯಲ್ಲಿ ತೊಯ್ಯುವ ಅನುಭವವಾಗಲೀ ಅಂತಹ ಉಪಾಖ್ಯಾನ ಮಹತ್ವವನ್ನು ಮೆರೆಯುವಂಥವಲ್ಲ. ಇಂಥ ಪ್ರಕರಣಗಳನ್ನು ಹಿಗ್ಗಲಿಸುವಲ್ಲಿ ಕವಿ ತೋರುವ ಗಂಭೀರ ಕಾಳಜಿ ಅವರ ಮನಃ ಪ್ರವೃತ್ತಿಯನ್ನು ತೋರಿಸುತ್ತದೆ. ನಾಟಕೀಯವಾದ, ಆಕರ್ಷಕ ಪ್ರಸಂಗದಿಂದ ಕಥನವನ್ನು ರುಚಿಗೊಳಿಸುವ ಸುಲಭ ತಂತ್ರಕ್ಕೆ ಈ ಕವಿ ಮನಸೋತಿಲ್ಲ. ಬಹಿರ್ಘಟನೆಗಳಲ್ಲಿ ರಮಿಸುವುದಕ್ಕಿಂತ ಭಾವದ, ಅನುಭವದ ಶೋಧ ಮತ್ತು ಆ ಶೋಧವನ್ನು ಭಾವಗೀತಾತ್ಮಕವಾಗಿ, ಧ್ವನಿರಮ್ಯತೆಯ ನೆಲೆಯಲ್ಲಿ ದಕ್ಕಿಸಿಕೊಳ್ಳುವ ಕ್ರಮ ಪು.ತಿ.ನ. ಅವರದ್ದಾಗಿದೆ.

ಪು.ತಿ.ನ. ಅವರ ಸ್ಮರಣತಂತ್ರದ ಬಗ್ಗೆ ಇನ್ನೊಂದು ಮಾತು ಹೇಳಬೇಕು. ಕೃಷ್ಣ ಕತೆಯನ್ನು ಅದರ ಅನುಕ್ತ ವಿವರಗಳನ್ನು ಅವರು ಹುಡುಕುತ್ತಿರುವುದು ಎಲ್ಲಿ? ಅವರ ಮನೋಭೂಮಿಕೆಯಲ್ಲೇ. ಪೂರ್ವಕಾವ್ಯ, ಧ್ಯಾನ, ಕನಸು, ದರ್ಶನಗಳಿಂದ ತುಂಬಿರುವ ಮಾಯಕವಾದ ಮನೋಜಗತ್ತಿನಲ್ಲಿ. ಸಾಧುಮನದೊಳಗಲ್ಲದಿನ್ನೆಲ್ಲಿಹುದು ಬೃಂದಾವನಂ ? ಎಂಬ ಪ್ರಶ್ನೆಯಲ್ಲಿ ಆ ಸೂಚನೆ ಇದೆ.

ಕಾವ್ಯದ ಕೊನೆಯಲ್ಲಿ ಪು.ತಿ.ನ. ಒಂದು ವಿಲಕ್ಷಣ ಸಂದರ್ಭವನ್ನು ವರ್ಣಿಸುತ್ತಾರೆ. ನಡುರಾತ್ರಿ ಎಲ್ಲರೂ ಮಲಗಿರುವಾಗ, ಕೃಷ್ಣ ತನ್ನನ್ನು ಹೀಗೆ ಜಾಗರಿಸಿದಂತೆ ಅವರಿಗೊಂದು ವಿಲಕ್ಷಣ ಬೋಧೆಯಾಗುತ್ತದೆ. ಕೃಷ್ಣ ಕವಿಗೆ ಹೇಳಿದಂತೆ ಭಾಸವಾದ ಮಾತು ಇದು–

....ನಿನಗೆಡರಲ್ಲ ಕೃಪೆ ಕೊರತೆ, ನೀನೆಡರು:
ನಿನ್ನಾಲಸ್ಯ, ಸಂಕಲ್ಪ ದೌರ್ಬಲ್ಯ ಅನುತ್ಪನ್ನತೆಗಳ್
ಇವುಗಳ ಜತೆಗೆ ಆತುರತೆ ವಿಸ್ಮರಣವೀ ಕಥನದೊಳು.
ಮಧುರೆದೊರೆ ಕೊಲಲೆನ್ನನಟ್ಟಿದ ಬಲಿಷ್ಠನನ್ ಅರಿಷ್ಟನ
ಕೊಂದೆ ನಾ, ನೀನದ ಮರೆತೆ.

–ಹೀಗೆ, ಕೃಷ್ಣನೇ ಕವಿಯ ಮನಸ್ಸನ್ನು ಜಾಗರಿಸಿ, ಅವರ ನೆನಪು ಹೊತ್ತಿಸುವ ಸಂದರ್ಭವಿದೆ.

ಇದನ್ನು ಕವಿಯ ಸ್ವವಿಮರ್ಶೆಯೆಂದೂ, ಕಾವ್ಯ ವಿನಯವೆಂದೂ ನಾವು ಭಾವಿಸಬಹುದು. ಕವಿಯ ಸ್ಮರಣ ಶಕ್ತಿ, ಕಲ್ಪನೆಯಿಂದ ನೆನಪನ್ನು ಜೀವಂತವೂ ಸುಸ್ಪಷ್ಟವೂ ಐಂದ್ರಿಯಕವೂ ಆಗಿಸುವ ಪರಿ ಅದ್ಭುತವಾಗಿದೆ. ಶ್ರೀಕೃಷ್ಣನ ಬಾಲ್ಯ

ಜೀವಿತದ ಕುರಿತು ಕವಿ ನೀಡುವ ಒಂದೊಂದು ಸ್ಮೃತಿ ಚಿತ್ರವೂ ಬಣ್ಣ, ನಾದ, ರೇಖೆಗಳಿಂದ ಜೀವಂತವಾಗಿದೆ. ಚಲನ ಶೀಲವಾಗಿದೆ. ಚೇಷ್ಟಾಪೂರ್ಣವಾಗಿದೆ. (gestures).

ನಂದನು ಪುತ್ರೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ವಸುದೇವ ಗೆಳೆಯ ನಂದನ ಬಳಿಗೆ ಬಂದಾಗ ಕವಿ ಕೊಡುವ ಈ ಚಿತ್ರವನ್ನು ನೋಡಿ:

1, ...,. ನೇಹಿಗರವರು
ತಬ್ಬಿತಣಿಯರು, ಭುಜವನು ಹಿಡಿದು ಹಿಂದಕೆ ದೂಡಿ ನೋಡಿ
ತಣಿಯರು, ನಕ್ಕು ತಣಿಯರು, ಕಲೆದು ಮೈಹಿಸುಕಿ ತಣಿಯರ್ರೈ

ಜೋಡಿ ಮತ್ತಿ ಮರಗಳನ್ನು ಬಾಲಕೃಷ್ಣ ಕೆಡವಿದಾಗ ತಾಯಿ ಯಶೋದೆ ಮಗುವನ್ನು ಸಾಂತ್ವನಿಸುವ ಪರಿ ನೋಡಿ :

2. .... ನೆರೆಯುವಳ ಕೈಯಿಂದ ಕೂಸನು ಕೊಂಡು
ಗಾಸಿಯನು ಪರಕಿಸುತ, ಮೈಯೊರೆಸಿ, ಕಾಲ್ಗಳತೊಡೆದು, ಕಿವಿಗಳ
ಸಂದ ಮೆಲ್ಲನೆಯೂದಿ. ಎದೆಗವಚಿ, ಬೆನ್ನನು ಸವರಿ, ಬರಿ ನೆಲ
ದೊಳೇ ಕುಳಿತು ಮೊಲೆಯೂಡಿ, ಕುರುಳನು ತಿದ್ದುತಲಿ, ಸವಿಗರೆದು
ಸಾಂತ್ವನಿಸುತಿರೆ, ದಾಮೋದರಂ, ತನ್ನೊಳನೆಮ್ಮದಿಯು ಸೊಗದ
ಜಯಧ್ವನಿಯ ಪಾಂಚಜನ್ಯದಿಂ ನೀರವಂ ಮೊಳಗಿಸುವಂತೆ
ಮಾತೃವೃಕ್ಷೋಜಾಗ್ರವನು ಚಾಚು ತುಟಿಯೊಳು ಪಿಡಿದು, ಕೆನ್ನೆಯ
ನುಬ್ಬಿಸುತ, ಹಾವಿಡಿದ ಹೊಳವಿನ ಕಂಗಳಿಂ ತಾಯ ಮೊಗವನು
ನಿರುಕಿಸುತಲೆವೆಯಿಕ್ಕಿ ನಗುತಂ ಪವಡಿಸಿಧರೆ -ನಂದನ ರಾಣಿ
ಆ ತುಂಟನಿಗೆಯಿಕ್ಕುವಳು ಚಪೇಟಿಕಾ ಪ್ರಹಾರಂಗಳನು
ಮಗುವಿನ ಕುಂಡೆಗೇನೆಂಬೆ ತಾಯ್ತನದೊಲುದೊ ತಹ ತಳಮಳಹೊ-
ಳರ್ಭಕದ ಸಾಹಸಕೆ ಮುಳಿವಂತೆ,

ಇಂಥ ಮನೋಹರವಾದ, ಸಹಜ ಸೆಲೆಯಲ್ಲಿ ಸುಂದರವೆನಿಸುವ ನೂರಾರು ಚಿತ್ರಗಳು ಕಾವ್ಯದುದ್ದಕ್ಕೂ, ಇವೆ ರಾಧಾಕೃಷ್ಣಮಿಲನ, ವೇಣುವಿಸರ್ಜನ, ರಾಧಾನಿರ್ವೇದ ಎಂಬ ಪ್ರಕರಣಗಳ ಚೆಲುವನ್ನು ಆಸ್ವಾದಿಸಿಯೇ ಆನಂದಿಸಬೇಕು. ಶ್ರೀಹರಿಚರಿತೆಯಲ್ಲಿ ಕೃಷ್ಣನು ಸಮಷ್ಟಿಯ ಪ್ರತಿನಿಧಿಯೆಂದೂ, ಇಡೀ ಕಾವ್ಯವನ್ನು

ವ್ಯಷ್ಟಿ-ಸಮಷ್ಟಿಯ ಸಂಬಂಧದ ನೆಲೆಯಲ್ಲಿ ನೋಡಬಹುದೆಂದು ಕವಿ ಸೂಚಿಸಿದ್ದಾರೆ. ಇದಕ್ಕಿಂತ ಪ್ರಸ್ತಾವನೆಯಲ್ಲಿ ಕವಿ ಈ ಕಾವ್ಯದ ಓದಿಗೆ ಸೂಚಿಸಿರುವ ಇನ್ನೊಂದು ನೆಲೆ ನನಗೆ ತುಂಬ ಪ್ರಿಯವಾಗಿದೆ.

ಸಂತೋಷ, ಸಮಾಧಾನ, ಪ್ರೀತಿ, ಗೆಲುವು, ಮೈತ್ರೀ ಭಾವ- ಇವು ಹರಿ ಸಾನಿಧ್ಯದ ಲಕ್ಷಣಗಳು. ಜಗತ್ತಿನಲ್ಲಿ ಸಂತೋಷವನ್ನು ಪಡೆಯುವುದು ಸುಲಭವಲ್ಲ. ಮನಸ್ಸಿನ ಸಂತೋಷವನ್ನೂ, ಸ್ವಾಸ್ಥ್ಯವನ್ನೂ ಕಾಪಾಡಿಕೊಳ್ಳುವಲ್ಲಿ ಶ್ರೀ ಹರಿಸ್ಮೃತಿ ಬಹು ಸಮೀಚೀನವಾದ ಉಪಾಯ ಎಂಬುದು ಕವಿಯ ನಂಬಿಕೆ. ಈ ಸಂತೋಷವನ್ನು ಮೂರ್ತೀಕರಿಸುವುದರ ಮೂಲಕ ಸಹೃದಯರಿಗೆ ಹಂಚುವುದು ಈ ಕಾವ್ಯ ರಚಿಸುವಲ್ಲಿ ತಮ್ಮ ಉದ್ದೇಶವಾಗಿತ್ತು ಎಂದು ಪು.ತಿ.ನ. ಹೇಳಿದ್ದಾರೆ. ಅವರ ಉದ್ದೇಶ ಗರಿಷ್ಠ ಪ್ರಮಾಣದಲ್ಲಿ ಫಲಿಸಿದೆ ಎಂಬುದು ಈ ಕಾವ್ಯವನ್ನು ಓದಿ ಸುಖಪಟ್ಟ ನನ್ನ ಸ್ವಂತ ಅನುಭವ.

ಈ ಕಾವ್ಯದಲ್ಲಿ ಸ್ನೇಹ, ವಾತ್ಸಲ್ಯ, ಪ್ರೇಮ ಮೊದಲಾದ ಸ್ವಾದು ಭಾವಗಳಿವೆ. ಕಾರ್ಪಣ್ಯ, ಅನಿಮಿತ್ತ ವೈರ, ಸ್ವಾರ್ಥ, ಕ್ರೋಧ ಮೊದಲಾದ ಅನುದಾತ್ತ ಭಾವಗಳೂ ಇವೆ. ಅವುಗಳು ಇರುವುದೂ, ಇರುವುದರಿಂದ ಅವು ಪರಸ್ಪರ ತಿಕ್ಕಾಟದಲ್ಲಿ ತೊಡಗುವುದೂ ಅನಿವಾರ್ಯ. ಅವುಗಳ ಸಂಘರ್ಷದಿಂದಲೇ ಸಮಷ್ಟಿಯ ಮನಸ್ಸಾಗಲೀ, ವ್ಯಕ್ತಿಯ ಮನಸ್ಸಾಗಲೀ ಒಂದು ಸಮತೋಲವನ್ನೂ, ಸಮಸ್ಥಿತಿಯನ್ನೂ ಸಾಧಿಸುತ್ತೆಂಬುದನ್ನು ಹರಿಚರಿತೆಯ ಜಗತ್ತು ಧ್ವನಿಸಿ ತೋರಿಸುತ್ತದೆ ಎಂದು ನಾನು ನಂಬಿದ್ದೇನೆ.

ಪುಸ್ತಕ ಪರಿಚಯ

ಅಮ್ಮನಗುಡ್ಡ.

ಸರ್ವಮಂಗಳಾ; ಋಜುವಾತು ಪ್ರಕಾಶನ 849, ಕುವೆಂಪು ನಗರ ಮೈಸೂರು-23. 1988; ಬೆಲೆ : 18-00

—ಬಿ. ರಾಜಶೇಖರ್

ಸರ್ವಮಂಗಳ ಅವರ "ಅಮ್ಮನ ಗುಡ್ಡ" ಸಂಕಲನದಲ್ಲಿ 1968 ರಿಂದ ಈವರೆಗೆ ಅವರು ಬರೆದಿರುವ 23 ಕವಿತೆಗಳಿವೆ. 20 ವರ್ಷಗಳ ಈ ದೀರ್ಘ ಅವಧಿಯಲ್ಲಿ ಆಕೆ ಬರೆದಿರುವುದು ಇಷ್ಟನ್ನು ಮಾತ್ರ. ನಿರರ್ಗಳ ಬರವಣಿಗೆಯ ಬಗ್ಗೆ ಆಕೆಗಿರುವ ಸಂಕೋಚವೇ ಇದಕ್ಕೆ ಕಾರಣವಿರಬಹುದು. ತನ್ನ ಅನುಭವದ ಅರ್ಥವೇನು ? ಪರಂಪರೆಯಿಂದ ತಾನು ಪಡೆದದ್ದು ಎಷ್ಟು ? ಎಂದು ದಿಗಿಲುಗೊಂಡಿರುವ ಈ ಕವಿಗೆ ಇಂತಹ ಸಂಕೋಚ ಸಹಜ. ಅಗಾಧ ಸೃಷ್ಟಿಯ ಉರ್ವರತೆ ಇಂತಹ ಮನೋಧರ್ಮದ ಗುಣವಲ್ಲ. ಉದಾಹರಣೆಗೆ ಕನ್ನಡ ನವೋದಯದ ಶ್ರೇಷ್ಠ ಲೇಖಕರು ರಚಿಸಿದಷ್ಟು ದೊಡ್ಡ ಪ್ರಮಾಣದ ಸಾಹಿತ್ಯ ನಂತರದ ಸಾಹಿತಿಗಳಿಗೆ ಸಾಧ್ಯವಾಗಲಿಲ್ಲ ಎನ್ನುವುದಕ್ಕೆ ಈ ಮನೋಧರ್ಮದ ವ್ಯತ್ಯಾಸವೂ ಒಂದು ಕಾರಣ. ತನ್ನ ವೈಯಕ್ತಿಕ ಅನುಭವ, ತನ್ನ ಸಮಾಜದ ಪರಂಪರೆ ಮತ್ತು ಹೊಸ ಕಾಲದ ಆಶೋತ್ತರಗಳ ಬಗ್ಗೆ ನವೋದಯದ ಲೇಖಕರಿಗಿದ್ದ ವಿಶ್ವಾಸ ಇವರಿಗೆ ಎಂದೂ ಇರಲಿಲ್ಲ. ಸರ್ವಮಂಗಳ ತನ್ನ ಅತ್ಯುತ್ತಮ ಕವಿತೆಗಳನ್ನು ಬರೆದಿರುವುದಾದರೂ ಇಂತಹ ನಂಬಿಕೆಗೆಟ್ಟ ಮನಸ್ಥಿತಿಯಲ್ಲೆ. ಆಶ್ಚರ್ಯವೆಂದರೆ ಅವರಿಗೆ ಕನ್ನಡದ ಆಡು ಮಾತಿನ ಲಯಗಳನ್ನು, ವಾಕ್ಯದ ನಮೂನೆಗಳನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವ ಜಾಣತನವಿದೆ. ಆಕೆಯ ಬಾಲ್ಯಕಾಲದ ನೆನಪುಗಳ ಭಂಡಾರವೂ ಸಮೃದ್ಧವಾದದ್ದು. ಇಂತಹವರು ವಾಚಾಳಿಗಳಾಗದೆ ಉಳಿಯುವುದು ಅಪರೂಪ. ಹೀಗಾಗಿ ಮಾತಿನ ಅತಿ ಬಳಕೆಯ ಬಗ್ಗೆ

ಅವರಿಗಿರುವ ಸಂಕೋಚದ ಮೂಲವನ್ನು ಅವರ ಮನೋಧರ್ಮದಲ್ಲಿ ಅರಸ ಬೇಕು.

ಈ ಸಂಕಲನದ ಅತ್ಯುತ್ತಮ ಕವಿತೆ, "ಅಮ್ಮನಗುಡ್ಡ"ದ ಅವಲೋಕನದಿಂದ ನನ್ನ ಈ ಮಾತುಗಳನ್ನು ಸ್ಪಷ್ಟಪಡಿಸುವೆ. ಈ ಕವಿತೆ ಒಂದು ಸ್ಥಳ ಪುರಾಣ; ಜೊತೆಗೆ ಕವಿಯ ಆತ್ಮ ವೃತ್ತಾಂತವೂ ಈ ಕಥನದಲ್ಲಿ ಸೇರಿದೆ. ಕಾಡಿನ ಮಧ್ಯದಲ್ಲಿದ್ದ ಅವೈದಿಕ ಜಾತಿಯೊಂದರ ದೈವದ ಪ್ರಾಚೀನ ಗುಡಿ, ಸುಧಾರಣೆ ಹೊಂದಿ ದೇವಸ್ಥಾನವಾಗುವ ರೂಪಾಂತರವನ್ನು ಕವಿತೆ ವರ್ಣಿಸುತ್ತದೆ. ಎಲ್ಲ ಸ್ಥಳ ಪುರಾಣಗಳಲ್ಲಿ ನಂಬಿಕೆ ಇನ್ನಷ್ಟು ಗಾಢವಾಗುತ್ತದೆ. ಆದರೆ ಕಾಡು ನಾಡಾಗುವ, ಗುಡಿ ದೇವಸ್ಥಾನವಾಗುವ ಈ ಪುರಾಣದಲ್ಲಿ ನಂಬಿಕೆ ತನ್ನ ನೆಲೆಯನ್ನೇ ಕಳೆದುಕೊಳ್ಳುತ್ತದೆ. "ಅಮ್ಮನಗುಡ್ಡ"ದ ಕೆಲವು ಸಾಲುಗಳು ಅಡಿಗರ 'ಭೂತ'ವನ್ನು ನೆನಪಿಗೆ ತರುತ್ತವೆ. ಉದಾಹರಣೆಗೆ ಗುಡಿ ದೇವಸ್ಥಾನವಾಗುವ ಪರಿವರ್ತನೆಯನ್ನು ಸರ್ವಮಂಗಳ ವರ್ಣಿಸುವುದು ಹೀಗೆ :

''ಯಾವ ಮಾಯಾ ದಂಡ ತಗಲಿತ್ತೋ ಆ ಕ್ಷೇತ್ರಕ್ಕೆ
ಪಗಡೆ ಹಾಸಿನ ಹಸಿರು ಚೌಕುಳಿಯೊಳಗೆ
ಅಗೆದು ಉತ್ತ ಭತ್ತದ ತೆನೆಯ ತುಯ್ದಾಟ; ನಡುವೆ
ಹರಿದ ಹೆಬ್ಬಾವು ಹಾದಿ: ಅಲ್ಲಲ್ಲಿ ಹಿಂಡು ಹಿಂಡಾಗಿ
ಮೇಯುತ್ತಿದ್ದ ಕುರಿದನ; ಗುಡಿಜಾಗದಲ್ಲಿ ದೇವಸ್ಥಾನ
ನಲ್ಲಿ; ಜಗಜಗಿಸುವ ಬೆಳ್ಳಿ ಮುಖವಾಡ ಹೊತ್ತ
ಕುಕ್ಕಡದಮ್ಮ; ಮಂದಾಸನ: ನೀಲಾಂಜನ: ಧರ್ಮಾವರೆದ
ನೆರಿಗೆ; ಗೋಲಕ; ತೂಗುತ್ತಿದ್ದ ಗಂಟೆಗಳು; ಬೆಳ್ಳಿ
ಮಾವಿನೆಲೆಗಳ ತೋರಣ: ಹಗಲಲ್ಲೂ ಉರಿಯುತ್ತಿದ್ದ
ವಿದ್ಯುಚ್ಛಕ್ತಿ ದೀಪ....,...............,

ಈ ಸಾಲುಗಳಲ್ಲಿ ಭಾಷೆ ಬಳಕೆಯಾಗಿರುವ ಕ್ರಮವನ್ನು ಅಡಿಗರ 'ಭೂತ'ದ ಕೊನೆಯ ಮೂರು ಸಾಲುಗಳ ಜೊತೆ ಹೋಲಿಸಿ :

''ಅಗೆದುತ್ತ ಗದ್ದೆಗಳ ಕರ್ಮಭೂಮಿಯುವರಣ
ಭತ್ತ ಗೋಧುವೆ ಹಣ್ಣು ಬಿಟ್ಟ ವೃಂದಾವನ
ಗುಡಿಗೋಪುರಗಳ ಬಂಗಾರ ಶಿಖರ''.

ಅಗೆದುತ್ತ ಗದ್ದೆ, ಗುಡಿ, ದೇವಸ್ಥಾನ, ದೇವತಾ ವಿಗ್ರಹ – ಇವು ಈ ಎರಡು

ಕವಿತೆಗಳಲ್ಲಿ ಧ್ವನಿಸುವ ಅರ್ಥಗಳು ಬೇರೆ ಬೇರೆ. ಸರ್ವಮಂಗಳ ಅವರ ಪದ್ಯದ ವಿವರಗಳು, ಕಣ್ಣಿಗೆ ಕಾಣಿಸುವ ವಿವರಗಳು. ಒಬ್ಬ ವರದಿಗಾರನ ಕಣ್ಣಿಗೂ ಅವು ಕಾಣಿಸುವುವು. ಅಂದರೆ ಅದಕ್ಕಿಂತ ಹೆಚ್ಚಿನ ಅರ್ಥವನ್ನು ಅವಕ್ಕೆ ಆರೋಪಿಸುವುದಕ್ಕೆ ಸರ್ವಮಂಗಳ ನಿರಾಕರಿಸುತ್ತಾರೆ. ಅಡಿಗರ ಪದ್ಯದ ಅಗೆದುತ್ತ ಗದ್ದೆ ಮತ್ತು ಗುಡಿಗೋಪುರಗಳು ಇಂತಹ ನೈಜ ವಿವರಗಳಲ್ಲ. ಅವುಗಳ ಕಾಲವೂ ವರ್ತಮಾನವಲ್ಲ. ಅವು ಕವಿ ಕಲ್ಪಿಸುವ ಭವಿಷ್ಯವನ್ನು ಚಿತ್ರಿಸುವ ಪ್ರತಿಮೆಗಳು ವರ್ತಮಾನದಲ್ಲೇ ಕಣ್ಣು ನೆಟ್ಟ ಸರ್ವಮಂಗಳ ಅವರ ದೃಷ್ಟಿಯಲ್ಲಿ ಗುಡಿ ದೇವಸ್ಥಾನವಾಗುವ ರೂಪಾಂತರಕ್ಕೆ ಗುಡಿಯ ಗೋಲಕ, ವಿದ್ಯುಚ್ಛಕ್ತಿ, ಬೆಳ್ಳಿ ಮುಖವಾಡ, ಧರ್ಮಾವರದ ಸೀರೆ–ಜೊತೆಗೆ ಗುಡಿಯ ಹೊರಗೆ ಕಾಡು ನಾಶವಾಗಿ ಅಲ್ಲಿ ಭತ್ತದ ಗದ್ದೆಗಳಾದದ್ದು, ಹೆದ್ದಾರಿ ಬಂದುದು– ಇವೆಲ್ಲವೂ ಕಾರಣವಾಗಿವೆ; ಅಥವಾ ಇವೆಲ್ಲ ಒಟ್ಟಾಗಿ ಸಂಭವಿಸಿದ 'ನಾಗರೀಕರಣ'ವಾಗಿದೆ. ಅಡಿಗರ "ಗುಡಿಗೋಪುರಗಳ ಬಂಗಾರ ಶಿಖರ" ಇಂತಹ ವಾಸ್ತವ ಜಗತ್ತಿನ ತರ್ಕ ಮತ್ತು ಕಾರಣಗಳಿಗೆ ಕಟ್ಟುಬಿದ್ದಿಲ್ಲ. ಸರ್ವಮಂಗಳ ಅವರ ಕವಿತೆಯ ಭೂತಕಾಲ, ಕವಿಯ ನೆನಪು ಹಿಂದಕ್ಕೆ ಹರಿಯುವಷ್ಟು, ಅಂದರೆ ಆಕೆಯ ಬಾಲ್ಯದ ಭೂತಕಾಲ. ಅಡಿಗರ ಪದ್ಯದ ಭೂತ ಹೀಗೆ ವ್ಯಕ್ತಿಗತವಾದದ್ದಲ್ಲ. ಸರ್ವಮಂಗಳ ಅವರ ಪದ್ಯದ ಗುಡಿ ಮತ್ತು ಅದರ ಪರಿಸರಕ್ಕೆ ಭೌತಿಕ ಅಸ್ತಿತ್ವ ಮಾತ್ರ ಇದೆ; 'ಭೂತ'ದ ವಿವರಗಳೆಲ್ಲವೂ ತಮ್ಮಷ್ಟಕ್ಕೆ ತಾವೇ ಪ್ರತಿಮೆಗಳಾಗಿವೆ. 'ಅಮ್ಮನ ಗುಡ್ಡ' ವನ್ನು 'ಭೂತ'ದ ಜೊತೆ ಹೋಲಿಸಿದಾಗ ನನಗೆ ಮುಖ್ಯವಾಗಿ ಕಂಡದ್ದು ಸರ್ವಮಂಗಳರ ಧರ್ಮ ನಿರಪೇಕ್ಷತೆ. ಆದ್ದರಿಂದಲೇ ಅವರಿಗೆ ನಾಗರಿಕತೆಯ ಕುರೂಪಗಳ ಅರಿವಿದ್ದೂ ಅದರ ಬಗ್ಗೆ ಅಸಹನೆ ಇಲ್ಲ. ಕವಿತೆಯಲ್ಲಿ ಆತ್ಮವೃತ್ತದ ವಿವರಗಳು ಕಡಿಮೆ. ಆದರೆ ಕವಿತೆಯ ಮೊದಲ ಸಾಲುಗಳಲ್ಲಿ ಇರುವ ವಿಸ್ಮಯ, ರಮ್ಯತೆಗಳ ಭಾವ ಕಡೆಯ ಸಾಲುಗಳಲ್ಲಿ ಕಾಣೆಯಾಗಿರುವುದರಿಂದಲೇ, ನಾವು ಕವಿಯ ನಂಬಿಕೆಗಳ ಮುಗ್ಧತೆ ನಾಶವಾಗಿರುವುದನ್ನೂ ಗ್ರಹಿಸಬಹುದಾಗಿದೆ.

"ಅಮ್ಮನಗುಡ್ಡ" ಕವಿತೆ ಓದುತ್ತಿದ್ದಂತೆ ನನಗೆ ನೆನಪಾದ ಇನ್ನೊಂದು ಕವಿತೆ, ಬೇಂದ್ರೆಯವರ "ಸಣ್ಣ ಸೋಮವಾರ". ಪ್ರತಿಯೊಂದು ಒಳ್ಳೆಯ ಕವಿತೆಯೂ, ಉಳಿದ ಕವಿತೆಗಳನ್ನು ನಾವು ಓದುವ ಬಗೆಯನ್ನು ಹೆಚ್ಚು ಚುರುಕುಗೊಳಿಸುತ್ತದೆ ಎನ್ನುವುದು ನಿಜವಾಗುವುದು ಇಂತಹ ಸಂದರ್ಭಗಳಲ್ಲಿ. ಕನ್ನಡದ ಸಾರ್ವಕಾಲಿಕ ಶ್ರೇಷ್ಠ ಕವನಗಳಲ್ಲಿ ಒಂದಾಗಿರುವ, "ಸಣ್ಣ ಸೋಮವಾರ"ವನ್ನು ಬೇಂದ್ರೆ ಬರೆದದ್ದು ತನ್ನ ಇಳಿವಯಸ್ಸಿನಲ್ಲಿ. ಅವರ ಬಾಲ್ಯ ಕಾಲದ ಶ್ರಾವಣ ಸೋಮವಾರದ

ಜಾತ್ರೆಯ ಸಂಭ್ರಮ ಕವಿತೆಯ ವಸ್ತು. ಆದರೆ ಅಲ್ಲಿ ಗತಕಾಲವನ್ನು ವರ್ತಮಾನದ ಜೊತೆ ಹೋಲಿಸಿ ನೋಡುವ ಹವಣಿಕೆಯಿಲ್ಲ.

"ನೆನಪಿನ ಜರಿಯೊಳಗೆ
ಮಿಣುಕ್ಯಾವ ಎಣ್ಣೆದೀಪ
ಎಲ್ಲೆ ಹೋದಾವೋ ಗೆಳೆಯಾ ಆ ಕಾಲಾ"

ಎನ್ನುವ ಕವಿತೆಯ ಕೊನೆಯ ಸಾಲುಗಳನ್ನು ನೋಡಿದಾಗ ಬೇಂದ್ರೆಯವರಿಗೆ ಸಂದುಹೋದ ಕಾಲದ ಬಗ್ಗೆ ಹಳಹಳಿಕೆಯೂ ಇಲ್ಲವೆನಿಸುತ್ತದೆ. ಅಥವಾ ಕವಿತೆಯ ವಿವರಗಳಿಂದ ನಮಗೆ ಹಾಗನ್ನಿಸುತ್ತದೆಯೆ ? ಕವಿತೆಯ ಪ್ರಕೃತಿ, ಮನುಷ್ಯ ಸಹವಾಸದಿಂದ ದೂರವಿರುವ ದುರ್ಗಮ, ಅಬೇಧ್ಯ, ನಿಗೂಢ, ಪ್ರಾಗೈತಿಹಾಸಿಕ ಪ್ರಕೃತಿಯಲ್ಲ. ಅದು ಮನುಷ್ಯ ಉತ್ತು ಬಿತ್ತಿ ಹಸನು ಮಾಡಿದ ಧಾರವಾಡದ ಸುತ್ತಮುತ್ತಲಿನ ಪ್ರಕೃತಿ. (ಉದಾಹರಣೆಗೆ "ಹಸರಾಣಿ ಬನರಾಣಿ ತ್ವಾಟ.... ಸುತ್ತುಮುತ್ತ ಪಯಿರಿನ ಮಾಟ") ಕವಿ ವರ್ಣಿಸುವ ತನ್ನ ಬಾಲ್ಯದ ಸಂತೋಷಗಳಲ್ಲಿ ಮರವೇರಿದ ಕಪಿಗಳನ್ನು ನೋಡುವುದು, ನೇರಲೆ ಹಣ್ಣು ಉದುರುವುದು ಇವುಗಳ ಜೊತೆ ರೈಲುಗಾಡಿ ಬರುವುದಕ್ಕೆ ಕಾಯುವುದು ಕೂಡಾ ಸೇರಿದೆ. ಹೀಗೆ ಕವಿತೆಯಲ್ಲಿ ಬೇಂದ್ರೆ ವರ್ಣಿಸುವ ಅವರ ಬಾಲ್ಯ "ನಾಗರಿಕ"ವಾದದ್ದು ಅವರ ವೈಯಕ್ತಿಕ ಬಾಲ್ಯ ಹಾಗೆಯೇ ಇದ್ದದ್ದೂ ಹೌದು. ಬೇಂದ್ರೆಯವರು ತಮ್ಮ ಬಾಲ್ಯ ಯೌವನಗಳನ್ನು ಕಳೆದ ಧಾರವಾಡ, ಕನ್ನಡ ನವೋದಯ, ಸ್ವಾತಂತ್ರ್ಯ ಚಳುವಳಿ ಮತ್ತು ಇಂಗ್ಲೀಷ್ ವಿದ್ಯಾಭ್ಯಾಸಗಳ ಕೇಂದ್ರವಾಗಿದ್ದು ಅವರು ಅವೆಲ್ಲದರಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ತನ್ನ ಆತ್ಮಕಥೆಯಲ್ಲಿ ಬೇಂದ್ರೆ ತನ್ನ ಬಾಲ್ಯದ ಧಾರವಾಡದ ಕಾಮನಕಟ್ಟೆಯ ರಂಗುರಂಗಿನ ಬದುಕಿನ ಬಗ್ಗೆ ಉತ್ಸಾಹದಲ್ಲಿ ಬರೆಯುತ್ತಾರೆ. ಆದರೆ ಅಲ್ಲಿಯೂ ಹಳಹಳಿಕೆಯಿಲ್ಲ. ತನ್ನ ಬಾಲ್ಯ ಮತ್ತು ವರ್ತಮಾನಗಳ ನಡುವೆ ಅವರು ಬಿರುಕು ಕಂಡವರಲ್ಲ.

ತನ್ನ ವೈಯಕ್ತಿಕ ಶ್ರದ್ಧೆ ಮತ್ತು ಸಮುದಾಯದ ಆಚರಣೆಗಳ ನಡುವೆಯೂ ಬೇಂದ್ರೆ ದ್ವಂದ್ವ ಕಾಣಲಿಲ್ಲ. ಅತ್ಯಂತ ವೈಯಕ್ತಿಕವಾದ ಧಾರ್ಮಿಕ ಅನುಭವಗಳನ್ನು ವರ್ಣಿಸುವ ಮತ್ತು ಪರಿಣತ ಓದುಗನಿಗೂ ಕಷ್ಟಗ್ರಾಹ್ಯವಾದ ಕವಿತೆಗಳನ್ನು ಬರೆದ ಈ ಕವಿ, ಕನ್ನಡನಾಡಿನ ಜನಸಾಮಾನ್ಯರ ಹಬ್ಬ, ಜಾತ್ರೆಗಳ ಬಗ್ಗೆಯೂ ಬರೆದಿದ್ದಾರೆ. ಕನ್ನಡ ಸಂಸ್ಕೃತಗಳ ಮಾರ್ಗ ಸಾಹಿತ್ಯದ ಜೊತೆಗೆ ವಚನಕಾರರ, ಹರಿದಾಸರ ರಚನೆಗಳು ಮತ್ತು ಕನ್ನಡ ಜಾನಪದವೂ ಅವರ

ಕಾವ್ಯದ ಮೇಲೆ ಪ್ರಭಾವ ಮಾಡಿದೆ. ಅವರ ಕವಿತೆಗಳ ಭಾಷೆಯಲ್ಲಿ ಎಷ್ಟು ವೈವಿಧ್ಯವಿದೆಯೋ, ಅಷ್ಟೇ ವೈವಿಧ್ಯ ಅವುಗಳ ಧಾರ್ಮಿಕತೆಯಲ್ಲಿಯೂ ಕಾಣುತ್ತದೆ. ಹಣತೆ ದೀಪ ಹಚ್ಚಿ ಕೈ ಮುಗಿಯುವ ಮುಗ್ಧ ಅನಕ್ಷರಸ್ಥರ ನಂಬಿಕೆಯಿಂದ ಹಿಡಿದು, ಅರವಿಂದರ ತತ್ವ ಪ್ರತಿಪಾದನೆಯ ವರೆಗೆ ಈ ವೈವಿಧ್ಯ ಹಬ್ಬಿದೆ. "ಸಣ್ಣ ಸೋಮವಾರ" ಕವಿತೆಯಲ್ಲಿಯೇ ನಾವು ಇದನ್ನು ಕಾಣಬಹುದು.

''ಗರ್ಭಗುಡಿಯೊಳಗ ಲಿಂಗ
ನಿದ್ದಿಯೊಳಗ ನೋಡಿದ್ಹಾಂಗ
ಕಣ್ಣ ಮುಚ್ಚುತಾವ ನಮೋ ಎಂದು
ಗವೀಯೊಳಗಿನ ದಾರಿ
ಹರದಾರಿ ಹರದಾರಿ
ಮಿಂಚಿತ್ತು ಚಂದ್ರಕ್ವಾರಿ ಒಂದು
ನಿಂತ ಮೈಯಾಗಿ ಖಂಬ
ಸೋರ್‍ಯಾವ ಜಂಬಗಿಂಬ
ಹಿಡಿದಾನ ಕೈಯ ಶಿವನೆ ಬಂದು''

ಅನುಭಾವದಂತಹ ಉತ್ಕಟ ಅನುಭವವನ್ನು ಹೇಳುವ ಈ ಸಾಲುಗಳು ಬಸವನ, "ನಾನೇನ ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರ ಹೊನ್ನ ಕಳಸವಯ್ಯ........" ಎಂಬ ವಚನದ ಭಕ್ತಿಯ ಉತ್ಕಟತೆಯನ್ನು ನೆನಪಿಸುತ್ತವೆ. ಆದರೆ ಬೇಂದ್ರೆ ಆ ಭಾವಾವಿಷ್ಟತೆಯಿಂದ, ಲೌಕಿಕ ಪ್ರಪಂಚಕ್ಕೆ ಮರಳುವುದು ಅದನ್ನು ನಿರಾಕರಿಸಿ ಅಲ್ಲ; ಬದಲು ಆ ಭಕ್ತಿಗಿರುವ ಸಾಮಾಜಿಕ ಸ್ವರೂಪವನ್ನು ನೆನಪಿಗೆ ತಂದುಕೊಳ್ಳುವುದರ ಮೂಲಕ. "ಸಣ್ಣ ಸೋಮವಾರ" ಕವಿತೆಯಲ್ಲಿ ನಾನು ಉದ್ಧರಿಸಿದ ಮೇಲಿನ ಸಾಲುಗಳ ನಂತರ ಬರುವ ಈ ಸಾಲುಗಳನ್ನು ನೋಡಿ :

''ಎಚ್ಚರ್‍ಯಾದಾಗ ಇದು
ಹುಚ್ಚುಚ್ಚಾರ ಅನಿಸಿ
ಎಲ್ಲಾರ ಕೂಡ ಕೈ ಮುಗಿದು
ಬೆಂಡೂ ಬೆತ್ತಾಸ ಅಂತ
ತಿಂತ್ಯಾನ ನುರಿಸಿಕೊಂತ
ಹೋಗುತಿದ್ವಿ ಜಾತ್ರೆಗೆ ಜಿಗಿದು

ಶಿವನೇ ಬಂದು ಕೈಹಿಡಿದಂತಹ ದಿವ್ಯ ಅನುಭವದಿಂದ ಕವಿ, ಭಜನೆಯ ಮೇಳದ

ಎಲ್ಲರೂ ಕೈಮುಗಿದು ಭಕ್ತಿ ಸಲ್ಲಿಸುವ ಜನಸಂದಣಿಯು ಜಾತ್ರೆಯು ದಿವಸಗಳಿಗೆ ಬರುತ್ತಾರೆ. ಕವಿಯ ವೈಯಕ್ತಿಕ ಧಾರ್ಮಿಕ ಅನುಭವ, ಸಾಮಾಜಿಕ ಆಚರಣೆಗಿಂತ ಬೇರೆಯಾಗಿದ್ದರೂ ಅದಕ್ಕೆ ವ್ಯತಿರಿಕ್ತವಾಗಿಲ್ಲ. ವ್ಯತ್ಯಾಸವಿರುವುದು ಅನುಭವದ ಸ್ತರಗಳಲ್ಲೇ ಹೊರತು ಅದರ ಮೂಲ ಧರ್ಮದಲ್ಲಿ ಅಲ್ಲ.

ಚರಿತ್ರೆ ಮತ್ತು ಜನರ ಬದುಕಿನಿಂದ ದೂರ ನಿಂತು ಬರೆಯಬೇಕಾದ ಅನಿವಾರ್ಯ ಬೇಂದ್ರೆಯವರಿಗೆ ಎಂದೂ ಇರಲಿಲ್ಲ. ಆದರೆ ಇವತ್ತು ಹಾಗೆ ಬರೆಯಬಲ್ಲ ಕವಿ ಯಾರು? ತಾನು ಈ ಪರಂಪರೆಯ ವಾರಸುದಾರ, ತಾನು ಈ ಜನತೆಯ ವಾಣಿ ಎಂದು ಹೇಳಿಕೊಳ್ಳುವ ಆತ್ಮವಿಶ್ವಾಸ ಇಂದು ಯಾರಿಗೂ ಇಲ್ಲ. ಸಮಷ್ಟಿಯಿಂದ ಪ್ರತ್ಯೇಕವಾಗಿ, ದೂರ ನಿಂತು ಬರೆಯುವುದೇ ಇಂದಿನ ಕವಿಯ ಪಾಡು.

"ಸಣ್ಣ ಸೋಮವಾರ"ದ ಎಲ್ಲಿ ಹೋದಾವೋ ಗೆಳೆಯ ಆ ಕಾಲಾ ಎನ್ನುವ ಬಾಲ್ಯದ ಕ್ಷಣವನ್ನು ಈಗಲೂ ಸಾಕ್ಷಾತ್ಕರಿಸಿಕೊಳ್ಳುವ ಸಂಭ್ರಮವನ್ನು ಸರ್ವಮಂಗಳರ

> ''ಸಾಗಿತ್ತು ನನ್ನ ಪಯಣ. ಚನ್ನಗಿರಿಯಿಂದ ಶಿವಮೊಗ್ಗ
> ಅಲ್ಲಿಂದ ಮೈಸೂರು. ಸರಿಯಿತು ಕಾಲ''

ಎನ್ನುವ ನಿಟ್ಟುಸಿರಿನ ಜೊತೆ ಹೋಲಿಸಿ; ಇವೆರಡರ ವ್ಯತ್ಯಾಸ ಎರಡು ಜೀವನ ದೃಷ್ಟಿಗಳ ವ್ಯತ್ಯಾಸವಲ್ಲವೆ?

ಸರ್ವಮಂಗಳ ಅವರಿಗೆ ಗತಕಾಲ, ಬೇಕು ಎನ್ನಿಸಿದ್ದನ್ನು ಕೊಡುವ ನೆನಪಿನ ಬುತ್ತಿಯಲ್ಲ. ಶಿರಿಕೊಂಡ ತನ್ನ ಅಜ್ಜಿಯ ಬಗ್ಗೆ ಅವರು ಬರೆದಿರುವ ಎರಡು ಕವಿತೆಗಳನ್ನು – 'ನನ್ನ ಅಜ್ಜಿ' ಮತ್ತು 'ಬದುಕು ಬಗೆವಾಟ' – ಇಲ್ಲಿ ಉದಾಹರಣೆಯಾಗಿ ಹೇಳಬಯಸುತ್ತೇನೆ. ಈ ಕವಿತೆಗಳು ಬಣ್ಣಿಸುವ ಮುದುಕಿ ಜೀವನದಲ್ಲಿ ನೊಂದವಳು; ಆದರೂ ಗಟ್ಟಿಗಿತ್ತಿ. ಹತ್ತು ಹಡೆದು ಮೂರು ಉಳಿಸಿಕೊಂಡ ಈ ಮುದುಕಿ, ಎಲ್ಲಿ ಹೆಂಗಸು ಹೆರಲಿ, ಆಕಳು ಈಯಲಿ ಅಲ್ಲಿ ಹಾಜರು. ತನ್ನ ಹಳೆಯ ಪಕ್ಷಿ ಸೋಕಿ ಮನೆಯಲ್ಲಿ ಬಿದ್ದಿರುತ್ತಿದ್ದ ಗಂಡನನ್ನೂ ಕೊನೆಗಾಲದಲ್ಲಿ ಹಾಸಿಗೆ ಹಿಡಿಸಿದ ವ್ಯಾಧಿಯನ್ನೂ ಅವಳು ಸೈರಿಸಿಕೊಂಡವಳು. ತನ್ನ ಜಡಜಾಪತ್ತುಗಳಲ್ಲಿಯೂ ಆ ಹೆಂಗಸು ತನ್ನ ಮನೆತನದ ನೆನಪಿನ ಪಾವಿತ್ರ್ಯವನ್ನು ಉಳಿಸಿಕೊಳ್ಳಲು ಹೆಣಗುತ್ತಾಳೆ. ಆದರೆ ಇಂತಹ ಸಂಪನ್ನ ಬದುಕಿನ ನೆನಪು ಕೂಡ,

ಕವಿಗೆ ಆಸರೆ ಎನ್ನಿಸುವುದಿಲ್ಲ; ಅದು ಭೂತದ ಜೊತೆ ತನಗಿರುವ ಸಂಬಂಧದ ಕೊಂಡಿ ಎಂದೂ ಎನ್ನಿಸುವುದಿಲ್ಲ. ಅಜ್ಜಿಯ ಕರ್ಮಾಂತರಕ್ಕೆ ಬಂದ ಊರವರು ಮೊಮ್ಮಗಳ ಕಿವಿ ಮೂಗುಗಳಲ್ಲಿ ಸತ್ತವಳ ಚಹರೆ ಹುಡುಕಿದರೆ ಈಕೆಗೆ ದಿಗಿಲು.

ಪರಂಪರೆಯ ಜೊತೆ ಸಜೀವ ಸಂಬಂಧ ಇರುವವರಿಗೆ ಯಾವತ್ತೂ ಅನ್ನಿಸದ ದಿಗಿಲು ಇದು. ಇನ್ನು ಪರಂಪರೆಯ ವಾರಸುದಾರರು ತಾವೇ ಎಂದು ಎಗ್ಗಿಲ್ಲದೆ ಹೇಳಿಕೊಳ್ಳುವವರಿಗಂತೂ ಯಾವ ದಿಗಿಲೂ ಕಾಡುವುದಿಲ್ಲ. ಆದರೆ ಅಂತಹವರು ನಂಬಿಕೆಗೂ ಅರ್ಹರಲ್ಲ. ಪರಂಪರೆಯಲ್ಲಿ ಬೇರುಗಳನ್ನು ಅರಸುವ ಕ್ರಿಯೆ ಮಾತ್ರ ಇಂದು ಸಾಹಿತ್ಯದಲ್ಲಿ ಅರ್ಥಪೂರ್ಣವಾಗಬಲ್ಲದೇ ಹೊರತು,"ಇದೋ ನನ್ನ ಪರಂಪರೆ, ಇಲ್ಲಿವೆ ನನ್ನ ಬೇರುಗಳು" ಎಂದು ಹೇಳಿಕೊಳ್ಳುವುದಲ್ಲ. ಹಾಗೆಯೇ, 20 ನೆಯ ಶತಮಾನದ ವ್ಯಾಧಿಗಳಿಗೆ ನಮ್ಮ ಭಕ್ತಿ ಪರಂಪರೆಯಲ್ಲಿ, ಶೂದ್ರ ಪರಂಪರೆಯಲ್ಲಿ, ಜಾನಪದದಲ್ಲಿ, 19 ನೆಯ ಶತಮಾನದ ಉನ್ಮತ್ತ ಅನುಭಾವಿಗಳಲ್ಲಿ ಪರಿಹಾರಗಳಿವೆ ಎಂದು ಹೇಳುವವರನ್ನು ಒಪ್ಪಿಕೊಳ್ಳಲು ಕೂಡ ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ನನಗೆ ಸರ್ವಮಂಗಳರ ಕಾವ್ಯದ ಧೋರಣೆಯ ಬಗ್ಗೆ ಪೂರ್ಣ ಒಪ್ಪಿಗೆ ಇದೆ. ದೇವರು ಮತ್ತು ಚರಿತ್ರೆ – ಎರಡರ ಬಗೆಗೂ ಆಕೆಯದ್ದು ತನ್ನ ತೆಕ್ಕೆಗೊಗ್ಗದ ಅರ್ಥಗಳನ್ನು ಒಪ್ಪಲು ನಿರಾಕರಿಸುವ ನಿಷ್ಠುರವಾದ ನಾಸ್ತಿಕ ನಿಲುವು. ಅವರ ಕಾವ್ಯ ನನಗೆ ಆಪ್ತವಾಗಿರುವುದಾದರೂ ಆ ಕಾರಣಕ್ಕೇನೆ.

ಪ್ರಸ್ತುತ ಸಂಕಲನದ ಯಶಸ್ವಿ ಕವಿತೆಗಳಲ್ಲಿ ಒಂದಾಗಿರುವ "ಗೊಂಬೆ" ಬಗ್ಗೆ ನನ್ನ ಮೆಚ್ಚುಗೆ ಸೂಚಿಸಿ ಈ ಪರಿಚಯವನ್ನು ಮುಗಿಸುವೆ. "ಗೊಂಬೆ"ಯ ಸರಳ ಮತ್ತು ಭಾವ ತೀವ್ರತೆ, ನನಗೆ ಮುಂಬೈ ಮಹಾನಗರದ ತಮ್ಮ ಮಹಡಿ ಮನೆಯಲ್ಲಿ ಮಕ್ಕಳು ಬೀಜ ಬಿತ್ತಿ ಗಿಡ ಬೆಳೆಸಿದ್ದನ್ನು ವರ್ಣಿಸುವ ಗಂಗಾಧರ ಚಿತ್ತಾಲರ ಕವಿತೆ, "ಸಂಪರ್ಕ"ವನ್ನು ನೆನಪಿಸಿದೆ. ಬಾಲ್ಯದಲ್ಲಿ ತಾನು ಎತ್ತಿ ಆಡಿಸಿದ ಮುದ್ದಾದ ಗೊಂಬೆಯೊಂದನ್ನು ಹತ್ತಾರು ವರ್ಷಗಳು ಕಳೆದ ನಂತರ ಆಕಸ್ಮಾತ್ತಾಗಿ ಒಮ್ಮೆ ಕವಿ ನೋಡುತ್ತಾರೆ. ಆದರೆ ಅಲ್ಲೇನಿದೆ ? ಹುಳ ಹಿಡಿದು ಅಪಾಂಗವಾಗಿರುವ ಗೊಂಬೆಯ ಅವಶೇಷ; ತಂದ ಹೊಸತರಲ್ಲಿದ್ದ ಬೊಂಬೆಯ ಜೀವಂತಿಕೆ ಮತ್ತು ಈಗ ಅದಕ್ಕೆ ಒದಗಿರುವ ದುಸ್ಥಿತಿ ಎರಡನ್ನೂ ಕವಿ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಕವಿತೆ ಓದುತ್ತಿದ್ದಂತೆ, ಕಾಲದ ಹರಿವು ತರುವ ಜರಾಮರಣಗಳ ಬಗ್ಗೆ ವಿಷಾದ ಮನಸ್ಸನ್ನು ಕವಿಯುತ್ತದೆ.

ಸರ್ವಮಂಗಳ ಅವರ ಕಾವ್ಯ ಬದುಕಿನ ಸಾರ್ಥಕತೆಯ ಬಗ್ಗೆ ಗಂಭೀರವಾದ ಪ್ರಶ್ನೆಗಳನ್ನು ಕೇಳುತ್ತದೆ. ನೆನಪಿನ ಅರ್ಥವೇನು ? ಅನುಭವದ ಅರ್ಥವೇನು ? ಕಾಲಗತಿಯ ಉದ್ದೇಶವೇನು ? ಇವು ಈ ಹಿಂದೆ ಯಾರೂ ಕೇಳದ ಪ್ರಶ್ನೆಗಳೇನೂ ಅಲ್ಲ. ಆದರೆ ಶಕ್ತಿಯುತವಾದ ತನ್ನ ಕಾವ್ಯದ ಮುಖಾಂತರ ಸರ್ವಮಂಗಳ ಈ ಪ್ರಶ್ನೆಗಳಿಗೆ ಮತ್ತೆ legitimacy ತಂದುಕೊಟ್ಟಿದ್ದಾರೆ.

ಲಂಕೇಶ್, ಕಂಬಾರ, ಚಂ. ಪಾ. ನಾಟಕಗಳಲ್ಲಿ ಸಮಕಾಲೀನತೆ *

—ಡಿ. ಎಸ್. ನಾಗಭೂಷಣ

ಗೆಳೆಯರೇ,

ನಾನು ಗೊಂದಲದಲ್ಲಿದ್ದೇನೆ. ಬಹುಶಃ, ನಾವೆಲ್ಲರೂ. ಆದರೂ ಒವ್ಮೊಮ್ಮೆ ಸ್ಪಷ್ಟವಾಗಿ ಮಾತಾಡುವ ಆಸೆಯಾಗುತ್ತದೆ. ನಮ್ಮಲ್ಲಿ ಇನ್ನೂ ಸುಪ್ತವಾಗಿ ಉಳಿದಿರುವ ಹಾಸ್ಯ ಪ್ರಜ್ಞೆಯ ಪರಿಣಾಮ ಇದಿರಬೇಕು. ಆದಕ್ಕೆಂದೇ ನಾವು ಇಂತಹ ವಿಚಾರ ಸಂಕಿರಣಗಳನ್ನು ಆಯೋಜಿಸಿಕೊಂಡು, ಈ ಗೊಂದಲಗಳಿಂದ ಒಂದಷ್ಟು ಕಾಲವಾದರೂ ಪಾರಾಗ ಬಯಸುತ್ತೇವೆ. ಈ ಬಯಕೆಯ ಅಂಗವಾಗಿಯೇ ನಾನು ಇಲ್ಲಿ ಮಾತನಾಡುತ್ತಿರುವುದು.

ಕನ್ನಡ ನಾಟಕಗಳ ಹುಟ್ಟಡಗಿದಂತಿರುವ ಇಂದಿನ ಸ್ಥಿತಿಯಲ್ಲಿ ನಾವು ಅವುಗಳ ಸಮಕಾಲೀನತೆಯ ಬಗ್ಗೆ ಮಾತಾಡಹೊರಟಿದ್ದೇವೆ. ನಾನು ಮಾತನಾಡಬೇಕಾದ ವಿಷಯಕ್ಕೇ ಬಂದರೆ, ನಾನು ವಿಮರ್ಶೆ ಮಾಡಬೇಕಾದ ಮೂವರು ನಾಟಕಕಾರರ ಪೈಕಿ ಇಬ್ಬರಂತೂ ಖಚಿತವಾಗಿ ನಾಟಕಗಳನ್ನು ಬರೆಯುವುದನ್ನೇ ನಿಲ್ಲಿಸಿದ್ದಾರೆ. ಲಂಕೇಶ್ ನಾಟಕ ಬರೆದೇ ಈಗ ಹತ್ತಿರ ಹತ್ತಿರ ಒಂದೂವರೆ ದಶಕವಾದರೆ, ಪಾಟೀಲರು, ಕಾಲ ಪ್ರವಾಹದಲ್ಲಿ ಸಾಹಿತಿಯ ಜೊತೆಗೆ ಹೋರಾಟಗಾರರೂ ಆದ ಪರಿಣಾಮವಾಗಿ ಬರೆದ ಪ್ರಹಸನಗಳೆಂದು ಮಾತ್ರ ಕರೆಯಬಹುದಾದ ಒಂದೆರಡನ್ನು ಬಿಟ್ಟರೆ, ಅವರೂ ಲಂಕೇಶರ ಜತೆಗೇ ನಾಟಕ ಬರೆಯುವುದನ್ನು ನಿಲ್ಲಿಸಿಬಿಟ್ಟಿದ್ದಾರೆ ಎಂದು ಹೇಳಬಹುದು. ಉಳಿದವರು ಕಂಬಾರರು. ಹಳೆತಲೆಗಳ ಪೈಕಿ ಸಧ್ಯಕ್ಕೆ ಇವರೊಬ್ಬರೇ ಪ್ರಮುಖ ನಾಟಕಕಾರರೆಂದು ಇವೊತ್ತೂ ಉಳಿದಿರುವವರು. ಆದರೂ, ವಿಮರ್ಶೆಯ ದೃಷ್ಟಿಯಿಂದ ಹೇಳುವುದಾದರೆ, ಕಂಬಾರರು ಲಂಕೇಶ್ ಮತ್ತು ಪಾಟೀಲರ ಜೊತೆಯಲ್ಲೇ ನಾಟಕ ಬರೆಯುವುದನ್ನು ನಿಲ್ಲಿಸಿದಂತೆ ಕಾಣು

* ಉಡುಪಿಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನ.

ತ್ತದೆ. 1973 ರಲ್ಲಿ ರಂಗದ ಮೇಲೆ ಬಂದ 'ಜೋಕುಮಾರಸ್ವಾಮಿ'ಯ ನಂತರ ಕಂಬಾರರು ತಮ್ಮ ಪ್ರತಿಯೊಂದು ನಾಟಕದಲ್ಲೂ ಹಂತಾನುಹಂತವಾಗಿ ಎಂಬಂತೆ 'ನಾಟಕ'ವನ್ನು ಕೈಬಿಡುತ್ತಾ ಬಂದಿದ್ದಾರೆ. ಅವರ ಇತ್ತೀಚಿನ ನಾಟಕ 'ಹುಲಿಯ ನೆರಳು' ನೋಡಿದಾಗ ನನ್ನ ಈ ಮಾತು ಹೆಚ್ಚು ಸ್ಪಷ್ಟವಾದೀತು. ಹೋದ ವರ್ಷ ಶಿವಮೊಗ್ಗದಲ್ಲಿ 'ಹುಲಿಯ ನೆರಳು' ಪ್ರಯೋಗ ನೋಡಿದಾಗ ನನ್ನನ್ನು ಸೆಳೆದದ್ದು ಕಂಬಾರರ ಅದಮ್ಯ ಕಾವ್ಯವನ್ನು ನಿರ್ದೇಶಕ ಪ್ರಸನ್ನ ನಾಟಕವಾಗಿಸಲು ನಡೆಸಿದ ಹೆಣಗಾಟ ಮಾತ್ರ.

ಪರಿಸ್ಥಿತಿ ಹೀಗಿರುವಾಗ ಈ ಮೂವರ ನಾಟಕಗಳಲ್ಲಿ ಯಾವ ಕಾಲದ ಸಮಕಾಲೀನತೆಯನ್ನು ಗುರುತಿಸುವುದು ? ಈ ಮೂವರ ನಾಟಕಗಳು ನಮ್ಮ ಹವ್ಯಾಸಿ ರಂಗಭೂಮಿಯನ್ನು ಇಡಿಯಾಗಿ ಆವರಿಸಿದ ಕಾಲದಲ್ಲಿ ಗುರುತಿಸಲಾಗಿದ್ದ ಸಮಕಾಲೀನತೆಯನ್ನು ಇವೊತ್ತೂ, ಅಂದರೆ ಹದಿನೈದು ವರ್ಷಗಳ ನಂತರವೂ ಸಮಕಾಲೀನತೆ ಎಂದು ಗುರುತಿಸಬಹುದೆ ? ಸಮಕಾಲೀನತೆ ಎಂದರೆ ಸಾರ್ವಕಾಲಿಕತೆ ಎಂದಂತೂ ಅಲ್ಲ ಎಂದು ನಾನು ಭಾವಿಸಿರುವೆ. ಯಾಕೆಂದರೆ, ಸಾರ್ವಕಾಲಿಕತೆಯನ್ನು ಗುರುತಿಸುವ ಹೊಣೆಯನ್ನು ಕಾಲ, ಅದೃಷ್ಟವಶಾತ್ ವ್ಯಕ್ತಿಗೆ ಬಿಟ್ಟುಕೊಟ್ಟಿಲ್ಲ. ನನ್ನ ತಿಳುವಳಿಕೆಯ ಪ್ರಕಾರ, ಕೃತಿಯೊಂದರ ಸಮಕಾಲೀನತೆ ಎಂದರೆ ವರ್ತಮಾನಕ್ಕೆ ಸ್ಪಂದಿಸುವ ಗುಣ. ಹಾಗಾದರೆ, ಯಾವುದು ವರ್ತಮಾನ ? ಈ ವರ್ತಮಾನ ಎಂಬುದು ಕಳೆದ ಹತ್ತು-ಹದಿನೈದು ವರ್ಷಗಳಲ್ಲಿ ಬದಲಾಗಿದೆಯೋ ?

ಇವು, ಈ ಪ್ರಬಂಧ ಬರೆಯಲಾರಂಭಿಸಿದಾಗ ನನ್ನನ್ನು ಕಾಡಿದ ಪ್ರಶ್ನೆಗಳು. ಈ ಪ್ರಾಥಮಿಕ ಪ್ರಶ್ನೆಗಳನ್ನು ದಾಟದ ಹೊರತು ನಾವು ಈ ಮೂವರ, ಅದರಲ್ಲೂ ವಿಶೇಷವಾಗಿ ಲಂಕೇಶ್ ಮತ್ತು ಪಾಟೀಲರ 'ಅಸಂಗತ' ನಾಟಕಗಳಲ್ಲಿನ ಸಮಕಾಲೀನತೆಯನ್ನು ಗುರುತಿಸಲಾರೆವು ಎಂದು ನಾನು ಭಾವಿಸಿದ್ದೇನೆ. ಈ ಪ್ರಶ್ನೆಗಳನ್ನು ದಾಟುವ ಪ್ರಯತ್ನದಲ್ಲೇ ನಾವು ಕನ್ನಡದ ಈ ಮೂವರು ಪ್ರಮುಖ ಆಧುನಿಕ ನಾಟಕಕಾರರ ನಾಟಕಗಳಲ್ಲಿನ ಸಮಕಾಲೀನತೆಯ ಒಳಮುಖಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ ಮತ್ತು ಆ ಮೂಲಕ, ಬೇಕಾದರೆ, ಕನ್ನಡ ಹವ್ಯಾಸಿ ರಂಗಭೂಮಿ ಕಳೆದ ಒಂದೂವರೆ ದಶಕದಲ್ಲಿ ಮುಗ್ಗರಿಸಿ ಬಿದ್ದು ಮತ್ತೆ ಎದ್ದು ಅತ್ತ ಇತ್ತ ನೋಡಲಾರಂಭಿಸಿದ್ದರ ಚರಿತ್ರೆಯನ್ನೂ ಗ್ರಹಿಸಬಹುದಾಗಿದೆ. ನಾನು ನನ್ನ ಮಾತುಗಳನ್ನು ಮುಂದುವರಿಸುವ ಮೊದಲು 'ಸಮಕಾಲೀನತೆ' ಪ್ರಶ್ನೆಯ ಬಗ್ಗೆ ಒಂದೆರಡು ಸಾರ್ವತ್ರಿಕ ವಿಚಾರಗಳನ್ನು ಹೇಳಬಯಸುತ್ತೇನೆ.

ಯಾವುದೇ ಬರೆಹಗಾರ ಕಾಲಕ್ಕಾಗಿ ಬರೆಯುತ್ತಾನೋ, ಕಾಲದಲ್ಲಿದ್ದು ಕೊಂಡು ಬರೆಯುತ್ತಾನೋ ? – ಈ ಪ್ರಶ್ನೆ ನಾನು ಈ ಹಿಂದೆ ಎತ್ತಿದ ಪ್ರಶ್ನೆಗಳನ್ನು ಬಗೆಹರಿಸಬಹುದು ಎಂಬುದು ನನ್ನ ಆಸೆಯಾಗಿದೆ.

ಕಾಲಕ್ಕಾಗಿ ಬರೆಯುವುದು ಎಂದರೆ ಏನು ? ತಾನು ತಾನಾಗಿ ಬರೆಯದೆ, ಹೊರಗಣ ಬೇಡಿಕೆಗಳಿಗೆ, ಒತ್ತಾಯಗಳಿಗೆ, ಕೇವಲ ಬದುಕುವುದಕ್ಕಾಗಿ ಬರೆಯುವುದು ಎಂದು ಹೇಳಬಹುದು. ಅಂದರೆ ತಾನು ಬದುಕಿನೊಳಗೆ ಮಗ್ನನಾದುದರಿಂದ ಬಿಡುಗಡೆಗೊಂಡ ಅನುಭೂತಿಯಿಂದ ಕೃತಿ ಹುಟ್ಟಿಲ್ಲದಿರುವ ಸಂದರ್ಭವನ್ನೂ ಇಲ್ಲಿ ನಾನು ಸೂಚಿಸುತ್ತಿದ್ದೇನೆ.

ಇನ್ನು, ಕಾಲದಲ್ಲಿದ್ದು ಕೊಂಡು ಬರೆಯುವುದು ಎಂದರೇನು ? ಈ ಪ್ರಶ್ನೆ ಬರೆಹಗಾರನೊಬ್ಬನ ಇಂದ್ರಿಯ ಮತ್ತು ಅತೀಂದ್ರಿಯ ಕೈಗಳು ಆ ಕಾಲದ ಬದುಕಿನ ಆಳ-ಅಗಲಗಳನ್ನು ಎಷ್ಟರಮಟ್ಟಿಗೆ ಶೋಧಿಸಿವೆ ಎಂಬುದಕ್ಕೆ ಸಂಬಂಧಿಸಿದ್ದು. ಬರೆಹಗಾರನೊಬ್ಬನ ಸಮಕಾಲೀನತೆ ಮಾತ್ರವಲ್ಲ, ಸಾರ್ವಕಾಲಿಕತೆ ಕೂಡಾ ನಿರ್ಧಾರವಾಗುವುದು ಇಲ್ಲೇ. ಬದುಕಿನ ಹೊರನೋಟ, ಒಳನೋಟದೊಂದಿಗೆ ಮಿಳಿತವಾಗುವ ಕ್ರಿಯೆಯಲ್ಲಿ ಕೃತಿಯ ಕಾಲತತ್ವ ಒಡಮೂಡುತ್ತದೆ. ಆಯಾ ಕಾಲಕ್ಕೆ ಬಂಧಿಯಾದ ಹೊರನೋಟ, ಕಾಲವನ್ನು ಜಗ್ಗಿ ನಿಲ್ಲಬಲ್ಲ ಒಳನೋಟದೊಂದಿಗೆ ಮಿಳಿತವಾದಾಗ ಕೃತಿ ಸಾರ್ವಕಾಲಿಕವಾಗಬಲ್ಲುದು. ಆದರೆ ನಿರಪೇಕ್ಷ ದೃಷ್ಟಿಯಿಂದ ಯೋಚಿಸತೊಡಗಿದಾಗ ಸಾರ್ವಕಾಲಿಕ ಕೃತಿಯ ಬಗ್ಗೆ ಮಾತಾಡುವುದೇ ಅಸಂಬದ್ಧವೆನಿಸುತ್ತದೆ. ಏಕೆಂದರೆ ಕಾಲದ ರಹಸ್ಯವನ್ನು ಬಲ್ಲವರಾರು? ಅದು ಕೊಚ್ಚಿಕೊಂಡು ಹೋಗದಂತಾಹದ್ದು ಏನಾದರೂ ಇದೆಯಾ ? ಎಂಬ ಪ್ರಶ್ನೆ ಏಳುತ್ತದೆ.

ಅದಿರಲಿ, ಸಮಕಾಲೀನತೆಯ ಪ್ರಶ್ನೆಗೆ ಹಿಂದಿರುಗಿದರೆ, ಕೃತಿಯ ಸಮಕಾಲೀನತೆ, ಕೃತಿಕಾರ ತಾನು ಬದುಕಿದ ರೀತಿ ನೀತಿಯಿಂದ ಗ್ರಹಿಸಿದ ಹೊರನೋಟವನ್ನು ತನ್ನದೇ ಆದ ಒಳನೋಟದೊಡನೆ ಮೇಳವಿಸಿ ಜಗತ್ತಿಗೆ ಹೇಗೆ ಹೇಳುತ್ತಾನೆ ಎಂಬುದನ್ನು ಅವಲಂಬಿಸಿದೆ ಎಂದು ಹೇಳಬಹುದು. ಅಂದರೆ, ಸಮಕಾಲೀನವೆನ್ನಿಸಿಕೊಳ್ಳುವ ಒಂದು ಕೃತಿಯಲ್ಲಿ ಆ ಕಾಲದ ಸಾರಸರ್ವಸ್ವವೂ ವಸ್ತು-ರೂಪಗಳ ಭೇದವಿಲ್ಲದೆ ಒಡಮೂಡಿರಬೇಕಾಗುತ್ತದೆ. ಒಂದು ಕೃತಿಯ ಸೋಲು ಗೆಲುವುಗಳು ಕೂಡಾ ಇದೇ ಅರ್ಥದಲ್ಲಿ ನಿರ್ಣಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಅಂದರೆ ಸಮಕಾಲೀನ ಕೃತಿಗಳೆಲ್ಲವೂ ಒಳ್ಳೆಯ ಕೃತಿಗಳೂ ಆಗಿರುತ್ತವೆ ಎಂಬಂತಾಯಿತು.

ಹಾಗಾದರೆ, ಹಾಗೆಯೇ ಒಳ್ಳೆಯ ಕೃತಿಗಳೆಲ್ಲವೂ ಸಮಕಾಲೀನ ಕೃತಿಗಳೂ ಆಗಿರುತ್ತವೋ ? ಗಣಿತಶಾಸ್ತ್ರದ ವಿಲೋಮ ಪ್ರಮೇಯ ಕಲ್ಪನೆಯನ್ನು ನೆನಪಿಗೆ ತರುವ ಈ ಪ್ರಶ್ನೆ, ಕನ್ನಡ ಹವ್ಯಾಸಿ ರಂಗಭೂಮಿ ಪಿ. ಲಂಕೇಶ್ ಮತ್ತು ಚಂದ್ರಶೇಖರ ಪಾಟೀಲರೆಂಬ ಪ್ರತಿಭಾವಂತ ಇಂಗ್ಲೀಷ್ ಮೇಷ್ಟ್ರುಗಳ ಕೈಗೆ, ಅಥವಾ ಇನ್ನಷ್ಟು ಸ್ಪಷ್ಟವಾಗಿ ಹೇಳಬೇಕೆಂದರೆ ತಲೆಗೆ ಸಿಕ್ಕಿಹಾಕಿಕೊಂಡು ಪಟ್ಟ ಪಡಿಪಾಟಲನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ.

ಪಾಟೀಲ ಮತ್ತು ಲಂಕೇಶರ ಅಸಂಗತ ನಾಟಕಗಳು ಒಳ್ಳೆಯ ನಾಟಕಗಳೆಲ್ಲವೇ ? ಖಂಡಿತ ಒಳ್ಳೆಯ ನಾಟಕಗಳು. ಕನ್ನಡದ ಎರಡು ಪ್ರತಿಭೆಗಳು ತಮ್ಮ ಅತ್ಯುತ್ತಮ ಕ್ಷಣಗಳಲ್ಲಿ ಬರೆದ ನಾಟಕಗಳಿವು. ಆದರೆ ಇವು ಸಮಕಾಲೀನ ನಾಟಕಗಳೊ ? ಅವು ಖಂಡಿತ ಒಳ್ಳೆಯ ನಾಟಕಗಳು ಎಂದಷ್ಟೇ ಸ್ಪಷ್ಟವಾಗಿ ನಾನು, ಅವು ಖಂಡಿತ ಸಮಕಾಲೀನ ನಾಟಕಗಳಲ್ಲ ಎನ್ನುತ್ತೇನೆ. ಯಾಕೆ ? ನ್ಯಾಯಾಲಯಗಳಲ್ಲಿ ಕೊಲೆಯೊಂದನ್ನು ಕಣ್ಣಾರೆ ಕಂಡಿದ್ದರೂ ಕಂಡದ್ದಕ್ಕೆ ಸಾಕ್ಷಿ ಕೇಳುವ ಹಾಗೆ ಕೇಳುವ ಪ್ರಶ್ನೆ ಇದು. ಕನ್ನಡದಲ್ಲಿ ಹೊಸ ನಾಟಕಗಳೇ ಇಲ್ಲ ಎಂದು ಹಲುಬುತ್ತಾ ಮತ್ತೆ ಮತ್ತೆ ಹಳೆಯ ನಾಟಕಗಳನ್ನೇ ಪ್ರಯೋಗ ಮಾಡುವ ಇವೊತ್ತಿನ ಹವ್ಯಾಸಿ ರಂಗಭೂಮಿ ಈ ಅಸಂಗತ ನಾಟಕಗಳನ್ನೇಕೆ ಮೂಸಿ ನೋಡುವುದಿಲ್ಲ ? ಈ ಅಸಂಗತ ನಾಟಕಗಳ ಕೊನೆಯ ಪ್ರಯೋಗ ನಡೆದದ್ದು ಯಾವಾಗ ? ನೆನಪಿಲ್ಲದಷ್ಟು ಹಿಂದೆ. ಇದಕ್ಕೆ ಕಾರಣಗಳೇನು ? ಒಂದೇ ಕಾರಣ: ಪ್ರೇಕ್ಷಕರು ಬರುವುದಿಲ್ಲ. ಯಾಕೆ ಬರುವುದಿಲ್ಲ ? ಯಾಕೆಂದರೆ ಅವು Out dated ಆಗಿವೆ. ಈ ಉತ್ತರ ಮತ್ತೆ ಎರಡು ಪ್ರಶ್ನೆಗಳನ್ನು ಎತ್ತುತ್ತದೆ 1) ಮೊದಲಿಗೆ ಅವು ಎಂದಾದರೂ dated ಆಗಿದ್ದವೇ ? 2) dated ಆಗಿದ್ದರೆ ಇವೊತ್ತು ಯಾಕೆ Out dated ಆಗಿವೆ ? ಈ ಹದಿನೈದು ವರ್ಷಗಳಲ್ಲಿ ನಮ್ಮ ಬದುಕು ಅಥವಾ ವರ್ತಮಾನ ಬದಲಾಗಿಬಿಟ್ಟಿದೆಯೋ ?

ಈ ಪ್ರಶ್ನೆಗಳಿಗೆ ನನ್ನ ಉತ್ತರ: ಅವು ಎಂದೂ dated ಆಗಿರಲಿಲ್ಲ. ಆದ್ದರಿಂದ, ಈಗ ಯಾಕೆ Out dated ಆಗಿವೆ ಎಂಬ ಪ್ರಶ್ನೆಯೆ ಏಳುವುದಿಲ್ಲ. ಹಾಗಾದರೆ ಹತ್ತು ಹದಿನೈದು ವರ್ಷಗಳ ಹಿಂದೆ ಇವು ನಮ್ಮ ಪ್ರೇಕ್ಷಕರಿಗೆ ಪ್ರಿಯವಾಗಿರಲಿಲ್ಲ

ವೇ ? ಈ ಪ್ರಶ್ನೆಗೆ ಉತ್ತರ ಕೊಡಲು ನಾವು ಹದಿನೈದು ವರ್ಷಗಳ ಹಿಂದಿನ ಒಟ್ಟು ಕನ್ನಡ ಸಾಹಿತ್ಯ ಸಂದರ್ಭವನ್ನು ಗಮನಿಸಬೇಕಾಗುತ್ತದೆ.

ಅದು ಗೋಪಾಲಕೃಷ್ಣ ಅಡಿಗರ 'ಚಂಡೆಮದ್ದಳೆ'ಯ ಸದ್ದಿಗೆ ಕಣ್ಣು ತೆರೆದ ಒಂದು ಜನಾಂಗ ಕನ್ನಡ ಸಾಹಿತ್ಯವನ್ನು ಆಳುತ್ತಿದ್ದ ಕಾಲ. ಅನಂತಮೂರ್ತಿ, ಲಂಕೇಶ್ ಮತ್ತು ಪಾಟೀಲರೆಂಬ ಮೂವ್ವರು ಬಂಟರು ಇದರ ಅರಮನೆಯನ್ನು ಕಾವಲು ಕಾಯುತ್ತಿದ್ದ ಕಾಲವದು. ದಯವಿಟ್ಟು ಇದನ್ನು ವ್ಯಂಗ್ಯದ ಮಾತುಗಳೆಂದು ಸ್ವೀಕರಿಸಬೇಡಿ: ಅಸಂಗತ ನಾಟಕಗಳೂ ಸಮಕಾಲೀನವೇ ಎಂದು ಸಮರ್ಥಿಸುತ್ತಾ, 'ಹಯವದನ' ಸಮಕಾಲೀನವಲ್ಲ ಎನ್ನುತ್ತಾ ಲಂಕೇಶರು, ಸುರೇಶ್ ಅವಸ್ಥಿಯವರೊಂದಿಗೆ ಹಾಗೂ ಇದೇ ಲಹರಿಯಲ್ಲಿ ಪಾಟೀಲರು ಗಿರೀಶ್ ಕಾರ್ನಾಡ್ ಹಾಗೂ ಶಾಂತಿನಾಥ ದೇಸಾಯಿ ಅವರೊಂದಿಗೆ ನಡೆಸಿದ ಚರ್ಚೆ/ಸಂದರ್ಶನಗಳನ್ನು ನೀವು 'ಸಂಕ್ರಮಣ'ದ ಹಳೆಯ ಸಂಚಿಕೆಗಳಲ್ಲಿ ಈಗಲೂ ಓದಬಹುದು. ಅದು ವ್ಯಾಪಕವಾಗಿ ಇಂಗ್ಲೀಷ್ ಸಾಹಿತ್ಯವನ್ನು ಓದಿಕೊಂಡ– ಓದಿಕೊಂಡ ಎಂದು ಮತ್ತೆ ಹೇಳುತ್ತೇನೆ– ಮಧ್ಯಮವರ್ಗದ ಬುದ್ಧಿಜೀವಿಗಳು ಹಾಗೂ ವಿಶ್ವವಿದ್ಯಾಲಯಗಳ ಅಧ್ಯಾಪಕರು ಕನ್ನಡದ ಸಾಹಿತ್ಯವನ್ನು, ಅದರ ವಿಮರ್ಶೆಯೂ ಸೇರಿದಂತೆ ಗುತ್ತಿಗೆ ಮಾಡಿಕೊಂಡಿದ್ದ ಕಾಲ. ಇದಕ್ಕಾಗಿ ಈಗ ಯಾರನ್ನೂ ದೂಷಿಸುವ ಪ್ರಮೇಯವಿಲ್ಲ. ಯಾಕೆಂದರೆ ವಸಾಹತುವಾಗಿದ್ದ ರಾಷ್ಟ್ರದ ಯಾವುದೇ ಭಾಷೆ ಒಂದಲ್ಲ ಒಂದು ಘಟ್ಟದಲ್ಲಿ ಎದುರಿಸಲೇಬೇಕಾದ ಬಿಕ್ಕಟ್ಟು ಇದು. ಈ ಹಿನ್ನೆಲೆಯಲ್ಲಿ ನಾವು ಅಸಂಗತ ನಾಟಕಗಳ 'ಜನಪ್ರಿಯತೆಯನ್ನು ಗುರುತಿಸಬೇಕಷ್ಟೆ. ಇವು ಈ ದೃಷ್ಟಿಯಿಂದ, ಕಾಲದೊಳಗಿದ್ದು ರಚಿತವಾದ ಕೃತಿಗಳಲ್ಲ. ಕಾಲಕ್ಕಾಗಿ ರಚಿತವಾದ ಕೃತಿಗಳು. ಹೊರನೋಟಕ್ಕೂ ಒಳನೋಟಕ್ಕೂ ಸಂಬಂಧವನ್ನೇ ಸ್ಥಾಪಿಸಿಕೊಳ್ಳದ ಈ ನಾಟಕಗಳು, ಒಮ್ಮೊಮ್ಮೆ ಹೊರ ನೋಟವನ್ನೇ ಇಲ್ಲವಾಗಿ, ಮಧ್ಯಮವರ್ಗದ ಬುದ್ಧಿಜೀವಿಯೊಬ್ಬ ಒಂದು ತತ್ಕಾಲೀನ ಘಟ್ಟದಲ್ಲಿ ಯೋಚಿಸಿದ ಪರಿಯನ್ನು ಮಾತ್ರ ಹೇಳುತ್ತವೆ. ಲಂಕೇಶರ ಚುರುಕು ಮಾತುಗಳಾಗಲೀ ಪಾಟೀಲರ ಡೊಂಬರ ಮತ್ತೂರ ಜನಪದೀಯ ಸೊಗಡಿನ ಗದ್ಯಕಾವ್ಯವಾಗಲೀ ಈ ನಾಟಕಗಳನ್ನು ಕನ್ನಡದ ಬದುಕಿನ ಮಧ್ಯದಲ್ಲಿ ನೆಲೆಗೊಳಿಸಲು ಸಾಧ್ಯವಾಗಿಲ್ಲ. ಅದಕ್ಕಾಗಿಯೇ ಅವು ಸಮಕಾಲೀನ ಅಲ್ಲ. ಇದೇ ಸಂದರ್ಭದಲ್ಲಿ, ಇವು ಸಮಕಾಲೀನವಲ್ಲವಾದರೂ ಒಳ್ಳೆಯ ನಾಟಕಗಳೇಕೆ ಎಂದು ಹೇಳಿಬಿಡುತ್ತೇನೆ. ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಮಧ್ಯಮ ವರ್ಗದ

ಬುದ್ಧಿಜೀವಿ ಇದ್ದಾನೆ. ಬೀಜ ಕೂಡ ಪಲ್ಲವಿಸಬಹುದು ಅಥವಾ ಅಕಲುರೂಪದಲ್ಲಿ ಕಾ-
ರಬಹುದು. ಈ ನಾಟಕಗಳು ನೀಡುವ ಜೀವನೋಟ ಆತನನ್ನು ಧ್ಯಾನಮಗ್ನನ
ನ್ನಾಗಿಸುತ್ತದೆ ಪಾಟೀಲರ 'ಅಪ್ಪ', ಮತ್ತು 'ಕೊಡೆಗಳು' ಮತ್ತು ಲಂಕೇಶರ 'ಗಿಳಿಯು ಪಂಜರದೊಳಿಲ್ಲ'– ಈ ನಾಟಕಗಳನ್ನು ಕಟ್ಟಿರುವ ಸೃಜನಶೀಲತೆ ಕನ್ನಡಕ್ಕೇ ಹೊಸದಲ್ಲವೇ ?

'ಸಂಕ್ರಾಂತಿ', ಕನ್ನಡದ ಹವ್ಯಾಸಿ ರಂಗಭೂಮಿ ಮತ್ತೆ ಮತ್ತೆ ಪ್ರಯೋಗ ಮಾಡುತ್ತಿರುವ ಲಂಕೇಶರ ಏಕೈಕ ನಾಟಕ. ಎಂಟು ಶತಮಾನಗಳ ಹಿಂದಿನ ಬದುಕಿನಲ್ಲಿದ್ದ ಪ್ರಶ್ನೆಗಳನ್ನು ಇವೊತ್ತಿನ ಬದುಕಿನ ಪ್ರಶ್ನೆಗಳ ವಿರುದ್ಧ ನಿಲ್ಲಿಸಿ ಸತ್ಯವನ್ನು ಬಗೆದು ನೋಡಲು ಹವಣಿಸುವ ಈ ನಾಟಕ ಅತ್ತ ಹನ್ನೆರಡನೇ ಶತಮಾನಕ್ಕೂ ಸೇರದೆ ಇತ್ತ 20 ನೇ ಶತಮಾನಕ್ಕೂ ಸೇರದೆ ಲಂಕೇಶ್ 'ರಂಗಭೂಮಿ ವೇಶ್ಯೆಯ ಹಾಗೆ ಯಶಸ್ಸನ್ನು ಜೇನು ಹತ್ತುವ ಹವ್ಯಾಸ ಮೈಗೂಡಿಸಿಕೊಂಡಿದೆ' ಎಂಬ ತಮ್ಮ ಮಾತಿಗೆ ತಾವೇ ಬಲಿಯಾದುದರ ಉದಾಹರಣೆಯಂತಿದೆ. 'ತುಘಲಕ್' ಮತ್ತು 'ಹಯವದನ'ಗಳ ಮೂಲಕ ಕನ್ನಡ ರಂಗಭೂಮಿಯಲ್ಲಿ ಎಪಿಕ್ ಥಿಯೇಟರ್ ಕಂಡ ಯಶಸ್ಸಿನಿಂದ ಸ್ಫೂರ್ತಿಗೊಂಡಂತೆ ಹಾಡು–ಕುಣಿತಗಳ ಈ ನಾಟಕವನ್ನು ಬರೆದ ಲಂಕೇಶ್ ಏನನ್ನು ಹೇಳುತ್ತಾರೆ ಎಂಬುದೇ ಸ್ಪಷ್ಟವಾಗುವುದಿಲ್ಲ. ಬಿಜ್ಜಳ ಮತ್ತು ಬಸವಣ್ಣನ ನಡುವಣ ಸುಂದರ ಮತ್ತು ಜಾಣ ಸಂಭಾಷಣೆಗಳನ್ನೂ ಮೀರಿ ನಾಟಕದ ತುಂಬಾ ವಿಜೃಂಭಿಸುವುದು ಹಾಡು, ಕುಣಿತ ಮತ್ತು ಹೆಂಡವೇ. ಬಸವಣ್ಣ ಎದುರಿಸಿದ ಜಾತಿ ಸಮಸ್ಯೆಯನ್ನು ಅದರೆಲ್ಲಾ ಸಂಕೀರ್ಣತೆಗಳಿಂದ ಬೇರ್ಪಡಿಸಿ, ಕೇವಲ ಸಾಂಕೇತಿಕ ಎನ್ನಿಸುವ ಒಂದು ಪ್ರೇಮ ಪ್ರಕರಣದ ಬೆಳಕಿನಲ್ಲಿ ವಿಶ್ಲೇಷಿಸಿ ತೀರ್ಪು ಕೊಡುವಂತೆ ಕಾಣುವ ಈ ನಾಟಕ ಜಾತಿ ಪದ್ಧತಿಯ ಹಿಂದಿರುವ ಶೋಷಕ ರಾಜಕಾರಣವನ್ನು ಗ್ರಹಿಸಿದಂತೇ ತೋರುವುದಿಲ್ಲ. ಚರಿತ್ರೆಯನ್ನಾಗಲೀ, ವರ್ತಮಾನವನ್ನಾಗಲೀ ಕೇವಲ ಭಾವಗೀತಾತ್ಮಕವಾಗಿ ನೋಡುವುದರ ಹುರಂತ ಇದು.

ಇನ್ನು ಕಂಬಾರರ ನಾಟಕಗಳ ಬಗ್ಗೆ ಒಂದೆರಡು ಮಾತುಗಳನ್ನು ಆಡುವ ಮುನ್ನ ಪಾಟೀಲರ ಏಕೈಕ ಅಸಂಗತೇತರ ನಾಟಕವಾದ 'ಗೋಕರ್ಣದ ಗೌಡಶಾನಿ' ಬಗ್ಗೆ ಒಂದು ಮಾತು. ಇದು ಪಾಟೀಲರು ವ್ಯಕ್ತಿಯಿಂದ ಸಮಷ್ಟಿಯ ಕಡೆಗೆ ಪ್ರಯಾಣ ಹೊರಡುವ ಮುನ್ನ ಒಳಗಾದ ಎಡಬಿಡಂಗಿತನದ ಪ್ರಾಮಾಣಿಕ ಹಾಗೂ ಮಹಾ ತುಂಟ ವಿಡಂಬನೆ ಎಂಬುದರ ಹೊರತಾಗಿ ಮತ್ತಾವ ಸಮಕಾಲೀನ ಮಹತ್ವವೂ ಅದಕ್ಕಿರಲಿಕ್ಕಿಲ್ಲ.

ಕಂಬಾರರ ನಾಟಕಗಳಲ್ಲಿನ ಸಮಕಾಲೀನತೆಯ ಬಗ್ಗೆ ಮಾತಾಡಹೊರಡುವವರು ತುಂಬಾ ಗೊಂದಲಕ್ಕೊಳಗಾಗುತ್ತಾರೆ ಎಂದು ನನಗನ್ನಿಸುತ್ತದೆ. ಮೇಲ್ನೋಟಕ್ಕೆ ತುಂಬಾ ಸಮಕಾಲೀನವೆನ್ನಿಸುವ, ತೀವ್ರತರವಾದ ನಾಟಕೀಯತೆ ಹಾಗೂ ಜನಪದ ಶಕ್ತಿಯೊಂದಿಗೆ ಮೈತುಂಬಿಕೊಂಡ ಪಾತ್ರಗಳನ್ನೊಳಗೊಂಡ ಇವರ ನಾಟಕಗಳು, ವೈಯಕ್ತಿಕ ಸಂಬಂಧಗಳನ್ನೂ, ಸಾಮಾಜಿಕ ಬಿಗುವುಗಳನ್ನೂ ಸರಳಸೂತ್ರಗಳಿಗೆ ಇಳಿಸಿಬಿಟ್ಟು ರಮ್ಯೀಕರಿಸಲು ಯತ್ನಿಸುತ್ತವೆ. ವಾಸ್ತವದ ಸಂಕೀರ್ಣತೆಯನ್ನು ಎದುರಿಸಲು ನಿರಾಕರಿಸುತ್ತವೆ 'ಜೋಕುಮಾರಸ್ವಾಮಿ'ಯಲ್ಲಿ 'ಉಳುವವನೇ ನೆಲದೊಡೆಯ' ಎಂಬ ತತ್ವ ಅಡಗಿದೆ ಎಂದು ಕಂಬಾರರು ಹೇಳಬೇಕು ಮತ್ತು ನಾವು ನಂಬಬೇಕು. ಅಷ್ಟೆ.

ಕಂಬಾರರ 'ಜೈಸಿದನಾಯ್ಕ' ನಾಟಕ ಕುರಿತಂತೆ ನಾನು ಈ ಹಿಂದೆ ಬರೆದ ಲೇಖನದ ಕೊನೆಯೆರಡು ಪ್ಯಾರಾಗಳನ್ನು ಉಲ್ಲೇಖಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಆ ಮಾತುಗಳು ಹೀಗಿವೆ:

"ಕ್ರಾಂತಿಯ ಸಾಧ್ಯಾಸಾಧ್ಯತೆಗಳನ್ನು ಕುರಿತು 80 ಪುಟಗಳಲ್ಲಿ ಅದೂ ನಾಟಕವನ್ನು ಬರೆಯುವ ಧೈರ್ಯ, ಕಂಬಾರರಿಗೆ ಅವರ ಜನಪದ ಲೋಕವೇ ಕೊಟ್ಟಿರಬೇಕು. ಆದರೆ ಕಂಬಾರರು ಈ ಜಾನಪದ ಕುದುರೆ ಬಿಟ್ಟು ನೆಲಕ್ಕೆ ಇಳಿದಂತೇ ಕಾಣುವುದಿಲ್ಲ. ಅದಕ್ಕೇ ಅವರ ಈ ಅರೆ ಜಾನಪದ, ಅರೆ ಸಾಮಾಜಿಕ ನಾಟಕ ಸಾಂಕೇತಿಕವಾಗಿಯೂ ಕೂಡಾ ಶುದ್ಧ ಗಣಿತದ ಒಂದು ಸಮಸ್ಯೆಗಿಂತಲೂ ಹೆಚ್ಚಿನ ಸೌಂದರ್ಯವನ್ನಾಗಲೀ ನಿಜತ್ವವನ್ನಾಗಲೀ ಗಳಿಸಿಕೊಳ್ಳುವುದಿಲ್ಲ.

ಈ ದುರಂತಕ್ಕೆಲ್ಲಾ ಮೂಲ ಕಾರಣ– ಕೇವಲ ಸುಖಲೋಲುಪರಾದ ನಮ್ಮ ಬಹಳಷ್ಟು ಬರೆಹಗಾರರಿಗೆ ಕ್ರಾಂತಿ ಅನ್ನುವ ಒಂದು ಜನಮಧ್ಯದ ಘಟನೆ ಕೂಡಾ ದೂರದ, ರೋಮ್ಯಾಂಟಿಕ್ ಆದ ಘಟನೆ ಮಾತ್ರ ಆಗಿರುವುದೇ.

ಭಾರತದ ನದೀಜಾಲ
ಗಂಗಾ — ಕಾವೇರಿ ಯೋಜನೆ.

— ಸಿ. ಆರ್. ಅಣಜಿ

ಭಾರತದ ಸರಾಸರಿ ವಾರ್ಷಿಕ ಮಳೆಯ ಪ್ರಮಾಣ 1170 ಮಿಲಿ ಮೀಟರುಗಳು. ಈಶಾನ್ಯದ ಚಿರಾಪುಂಜಿ 11400 ಮಿ. ಮೀ. ಮಳೆಯಲ್ಲಿ ನೆನೆಯುತ್ತಿದ್ದರೆ ಪಶ್ಚಿಮದ ಜೈಸಲ್ಮೇರ್‌ನ ಮಳೆಯ ಪ್ರಮಾಣ 210 ಮಿ. ಮೀ.ಗಳು.

ನಮ್ಮ ದೇಶಕ್ಕೆ ಇಷ್ಟೆಲ್ಲ ಮಳೆ ಇದ್ದೂ ಸ್ವಾಭಾವಿಕ ಸಂಪನ್ಮೂಲಗಳನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲಾಗದ ದುರ್ದೈವೀ ಅಭ್ಯಾಸವಿದೆ. [1]

ಈ ವಾರ್ಷಿಕ ಮಳೆಯ ಕಾಲು ಭಾಗದಷ್ಟನ್ನು ಉಪಯೋಗಿಸಿಕೊಳ್ಳುವ ಸಾಮರ್ಥ್ಯ ನಮಗೆ 2025 ರ ಸುಮಾರಿಗೆ ಬರಬಹುದು. ಆದರೆ ವಾರ್ಷಿಕ ಮಳೆಯ 10 ಪಟ್ಟು ಇರುವ ಅಂತರ್ಜಲ (300 m ಆಳದಲ್ಲಿ 3700 ಮಿಲಿಯನ್ ಹೆಕ್ಟೇರು ಮೀಟರುಗಳಷ್ಟು) ಕ್ಕೆ ಈಗಾಗಲೇ ಲಗ್ಗೆ ಹಾಕಲಾಗುತ್ತಿದೆ.[2] ಇದು ತಿರುಗಿ ಉಪಯೋಗಕ್ಕೆ ಸಿದ್ಧ ಮಾಡಿಕೊಳ್ಳಲಾಗದ ಜಲ ಆದ್ದರಿಂದ ಸುಮ್ಮನೆ ಬಳಸುವುದು ಸಾಧುವಲ್ಲ.

ನಮ್ಮ ದೇಶದ ವಾರ್ಷಿಕ ಮಳೆಯಿಂದ ಉಂಟಾಗುವ ಪ್ರವಾಹವನ್ನು ನಿಯಂತ್ರಿಸಲು ಒಂದು ಯೋಜನೆ ಬೇಕೇಬೇಕು. ಹಾಗೆಯೇ ಮಳೆ ಇಲ್ಲದ ಬರ

1. The State of India's environment.
The Second Citizen's report. New Delhi P. 28
2. ಅದೇ ಪು 33 ರ ಅಂಕಿ ಅಂಶ,

ಪರಿಹಾರ ಕಾರ್ಯಕ್ಕೂ ಒಂದು ಯೋಜನೆ ಬೇಕು. ಇವೆರಡನ್ನೂ ಏಕ ಕಾಲಕ್ಕೆ ಸಾಧಿಸಬಲ್ಲ ಯೋಜನೆಯೇ ಭಾರತದ ನದೀಜಾಲ.

ಈ ವಿಷಯದಲ್ಲಿ ಹಿಂದೆ ಕೇಂದ್ರ ಸರ್ಕಾರಕ್ಕೆ ಎರಡು ಯೋಜನೆಗಳು ಸಲ್ಲಿಸಲ್ಪಟ್ಟಿವೆ ಎಂದು ತಿಳಿದು ಬರುತ್ತದೆ. ದಸ್ತೂರ್ ಅಂಡ್ ಕಂಪೆನಿ ಹಾಗೂ ಡಾ॥ ಕೆ. ಎಲ್. ರಾವ್ ಅವರು ಸಾದರಪಡಿಸಿದ ಯೋಜನೆಗಳು ಅವು. ಈ ಎರಡೂ ಯೋಜನೆಗಳು ಉತ್ತರ ಮತ್ತು ದಕ್ಷಿಣ ಭಾರತದ ನದಿಗಳನ್ನು ಕಾಲುವೆಗಳ ಮೂಲಕವೇ ಸಂಪರ್ಕಿಸುವ ಆಶಯವುಳ್ಳವು.

ಉತ್ತರ ಭಾರತದ ನದೀ ಬಯಲಿನ ಚೌಕ ಹಾಗೂ ದಖನ್ನಿನ ತ್ರಿಕೋನಗಳನ್ನು ಒಂದು ಅಕ್ಷದಿಂದ ಭಾವಿಸಿದರೆ ಅಕ್ಷದ ಪಶ್ಚಿಮಕ್ಕೆ ರಾಜಾಸ್ಥಾನದ ಮರುಭೂಮಿ ಮತ್ತು ಪೂರ್ವಕ್ಕೆ ಬರಪೀಡಿತ ಬಿಹಾರಗಳಿವೆ. ರಾಜಾಸ್ಥಾನದ ಸಿಂಧೂ ಉಪನದಿ ಕಾಲುವೆ ಅರ್ಧಾಂತಿಕವಾಗಿದೆ.

ನದೀಜಾಲದ ಒಂದು ರೂಪರೇಖೆ ಹೀಗಿದೆ. ಗಂಗಾ ನದಿಯ ನೀರನ್ನು ನರ್ಮದ, ತಾಪೀ ಮೂಲಕ ಕೃಷ್ಣಾ ನದಿ ನಾಗಾರ್ಜುನ ಸಾಗರಕ್ಕೆ ತಲುಪಿಸಬಹುದು. ಅಲ್ಲಿಂದ ವೇನಗಂಗಾ, ಗೋದಾವರಿ ಮೂಲಕ ಕಾವೇರಿಗೆ ಜೋಡಿಸುವ ಕೆಲಸ ದೀರ್ಘವಾಗಬಹುದೇ ಹೊರತು ಭಾರತದ ಜನ ಪರಿಶ್ರಮಕ್ಕೆ ಭಾರವಾಗಲಾರದು.

ನದೀಜಾಲದ ಯೋಜನೆ ಈ ಹಿಂದೆ ಭಾರತೀಯರಿಗೆ ಪರಿಚಯವಿದ್ದು ನಡುವೆ ಮರೆತು ಹೋದ ಯೋಜನೆ ಎನ್ನಬಹುದು. ಈ ಯೋಜನೆಯ ನೆನಪನ್ನು ಪುನಃ ನಮಗೆ ತಂದುಕೊಡುವ ಪ್ರಯತ್ನವನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಭಾರತೀಯರು ಮಾಡ ತೊಡಗಿದ್ದಾರೆ. ಅವರ ಗಂಗಾ ಕಾವೇರಿ ಭಾಗೀರಥಿ ವಿಶ್ವಸ್ತ ಸಮಿತಿಯು

ನಂ. 6326 ಉಡ್‌ಮಿಯರ್ ಕೋರ್ಟ್
ಫ್ಲಿಂಟ್ MI 48504 USA

ಈ ವಿಳಾಸದಲ್ಲಿದೆ; ದೂರವಾಣಿ (313) 732-0115. ಇವರಿಗೆ ಪೂರಕವಾಗಿ ಕೆಲಸ ಮಾಡುವ ಸಂಸ್ಥೆ

Water Association for Republic of India
(WARI)
No. 102. Residency Road, Bangalore.
Pin Code 560025

GANGAYANA ಇದರ ವಿಳಾಸ

ಜಿ ಕೆ ಬಿ ಯದೇ.

ಇದರ ಕಾರ್ಯಕರ್ತರಾದ ಡಾ॥ ಶ್ರೀಪಾದರಾಜು ಡಾ॥ ನಾಗರಾಜು ಮತ್ತು ಶ್ರೀಮತಿ ರೇಣುಕಾ ನಾಗರಾಜು ಅವರು ತಮ್ಮ ಗುಂಪಿನೊಡನೆ ಕಳೆದ ಎರಡು ಮೂರು ವರ್ಷಗಳಿಂದ ಭಾರತದಲ್ಲಿ ಸಂಚರಿಸುತ್ತಿದ್ದಾರೆ. ಕೇಂದ್ರ ಹಾಗೂ ವಿವಿಧ ರಾಜ್ಯಗಳ ಸರ್ಕಾರದ ಮಂತ್ರಿಗಳು, ರಾಜಕೀಯ ಧುರೀಣರು, ಇಂಜಿನಿಯರ್‌ಗಳು ಹಾಗೂ ಸಹಜ ಆಸಕ್ತರ ಸಂಪರ್ಕವನ್ನು ಚುರುಕಾಗಿ ಮಾಡಿದ್ದಾರೆ.

ಈ ಮೂಲಕ ಕೆಲಸ ಮಾಡುತ್ತ ಅವರು ಜಲ ಸಮಸ್ಯೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅವಶ್ಯವೆಂಬ ಮೂಲ ವಿಚಾರ ತಲುಪಿದ್ದಾರೆ. ಅದಕ್ಕಾಗಿ ಕಳೆದ ತುಲಾ ಸಂಕ್ರಮಣದಂದು ತಲಕಾವೇರಿ ಇಂದ ಹೊರಟು ಜನವರಿ 14, 1989 ರ ಮಕರ ಸಂಕ್ರಮಣದಂದು ಅಲಹಾಬಾದ್ ತಲುಪುವರು. ಅಲ್ಲಿ ಈ ವರ್ಷ ಸೇರುವ ಕುಂಭಮೇಳವನ್ನು ಪೂರ್ಣಕಾಲದ ಜನಸಂಪರ್ಕ ಹಾಗೂ ಜಲಜಾಗೃತಿಗಾಗಿ ಉಪಯೋಗಿಸಿಕೊಳ್ಳುವ ಯೋಜನೆ ಅವರದು.

ನದೀಜಾಲದ ಗಂಗಾ-ಕಾವೇರಿ ಯೋಜನೆ ನಿಜಕ್ಕೂ ಬುದ್ಧಿವಂತಿಕೆಯದೆನಿಸಲು ಹಲವು ಕಾರಣಗಳಿವೆ.

- ಮಳೆಯ ನೀರಿನ ಪೂರ್ಣಪ್ರಮಾಣದ ಉಪಯೋಗ.
- ತನ್ಮೂಲಕ ಅಂತರ್ಜಲವನ್ನು ರಕ್ಷಿಸಿಟ್ಟುಕೊಳ್ಳುವ ಬುದ್ಧಿವಂತಿಕೆ.
- ಅಂತರ್ಜಲ ಸಂರಕ್ಷಣೆ ಮತ್ತು ವೃದ್ಧಿಯ ಮೂಲಕ ಕಾಡುಗಳಿಗೆ ಬಲ ಹಾಗೂ ಸಂವರ್ಧನೆ,
- ಭಾರತದ ಜನಶಕ್ತಿಯ ಉಪಯೋಗದಿಂದ ಆಯಾ ಪ್ರದೇಶಗಳ ಕಾಲುವೆಗಳನ್ನು ಸುಲಭವಾಗಿ ನಿರ್ಮಿಸುವುದು.
- ಈ ಮೂಲಕ ಉದ್ಯೋಗ ಅವಕಾಶ ಕಲ್ಪಿಸುವಿಕೆ.

ಇವು ಮೇಲು ನೋಟಕ್ಕೇ ಕಂಡು ಬರುವ ಉಪಯುಕ್ತ ವಿಚಾರಗಳು.

ಬರ ಮತ್ತು ಪ್ರವಾಹ ಪರಿಸ್ಥಿತಿಗಳನ್ನು ಸಮತಳಿಸುವುದಲ್ಲದೆ ಇಂದಿನ ಪರಿಸರ ಚಿಂತೆಗೂ ಪರಿಹಾರ ದೊರಕಿಸಬಲ್ಲ ಬಹುದೊಡ್ಡ ಯೋಜನೆ ಗಂಗಾ-ಕಾವೇರಿ ಸಂಪರ್ಕ. ಈ ಯೋಜನೆಯನ್ನು ಸಾಂಗವಾಗಿ ಕೈಗೊಳ್ಳುವಲ್ಲಿ ತಾಂತ್ರಿಕ, ವ್ಯಾವಹಾರಿಕ, ವೈಯಕ್ತಿಕ ಹಾಗೂ ಸಾಮೂಹಿಕ ಸಹಕಾರ ಕೂಡಿಬರಲೆಂಬುದು ನಮ್ಮ ಆಶಯ.

ಜನಪ್ರಿಯ ಸಾಹಿತ್ಯ ಹಾಗೂ ಗಂಭೀರ ಸಾಹಿತ್ಯ.

— ಎನ್. ಎಸ್. ಚಿದಂಬರರಾವ್

ಬದುಕನ್ನು ಸ್ಥೂಲವಾಗಿ ವಿಶ್ಲೇಷಿಸಿದಾಗ ಇದರ ದ್ವಂದ್ವವೊಂದು ಸ್ಪಷ್ಟವಾಗುತ್ತ ಹೋಗುತ್ತದೆ. ಈ ದ್ವಂದ್ವವೇ 'ಮೂರ್ತ' ಹಾಗೂ 'ಅಮೂರ್ತ'ಗಳು. ಪಂಚೇಂದ್ರಿಯ ಗ್ರಾಹ್ಯವಾದದ್ದೆಲ್ಲವೂ ಮೂರ್ತ; ಇಂದ್ರಿಯಾತೀತವಾದದ್ದೆಲ್ಲ ಅಮೂರ್ತ ಎಂದು ವಿವರಿಸಲು ಪ್ರಯತ್ನಿಸಬಹುದು ಈ ಬದುಕಿನಲ್ಲಿ ಮೂರ್ತವಾದದ್ದೆಲ್ಲವೂ ತನ್ನ ಅಸ್ತಿತ್ವದ ಹಿನ್ನೆಲೆಯಲ್ಲಿ 'ಅಮೂರ್ತ'ವಾದದ್ದೇನನ್ನೋ ಒಳಗೊಂಡಂತೆ ಎನ್ನಿಸತೊಡಗುತ್ತದೆ. ಈ ಅನ್ನಿಸಿಕೆ ಯಾದೃಚ್ಛಿಕವಾಗಿ ಒಡಮೂಡುವುದಿಲ್ಲ. ಬದುಕಿನ ಬಗ್ಗೆ ಗಂಭೀರವಾದ ಚಿಂತನೆಯಿಂದ ಮಾತ್ರ ಈ ಅಮೂರ್ತದ ಕಲ್ಪನೆ ನಮ್ಮಲ್ಲಿ ಒಡಮೂಡೀತು ಬದುಕನ್ನು ಬಗೆದು, ಬಗಿದು ನೋಡುವ ಒಂದು ರೀತಿಯ ಶೋಧದಿಂದ ಇದು ಸಾಧ್ಯ. ಈ ರೀತಿಯ ಒಳಶೋಧದಿಂದಲೇ, ಸ್ಥೂಲನೋಟಕ್ಕೆ ಅಗೋಚರವಾದ ಹತ್ತು ಹಲವು ಮಗ್ಗುಲುಗಳೂ ಸ್ಪಷ್ಟವಾಗುತ್ತಾ ಹೋದಾವು. ಬದುಕು ಸಂಕೀರ್ಣವಾದದ್ದು, ಜಟಿಲವಾದದ್ದು ಎಂದೆಲ್ಲ ನಮಗನ್ನಿಸತೊಡಗಿದಾಗಲೇ, ನಾವು ಶೋಧನೆಯತ್ತ ಸಾಗುತ್ತಿದ್ದೇವೆ ಎನ್ನಿಸುವುದು. ಈ ಸ್ಥೂಲವಾದ ಬದುಕು ಒಟ್ಟಾರೆ ಒಂದು ಸಾಮಾಜಿಕ ಸಂದರ್ಭವಾಗಿದೆ. (Social Context) ಇದು ಸಮಷ್ಟಿ ಬದುಕಿನ ಜೀವಂತ ಲಕ್ಷಣವೇ ಆಗಿದೆ. ಸಮಷ್ಟಿಯಲ್ಲಿ ಪದರು ಪದರುಗಳಒಳತುಡಿತಗಳಿಗೆ ಸ್ಥಾನವಿಲ್ಲ. ಸಮಷ್ಟಿಯಲ್ಲಿ ಎಲ್ಲವೂ ಸಮಗ್ರವಾಗಿ ಒಟ್ಟಂಧದಲ್ಲೇ ಗ್ರಹಿಕೆಯಾಗುತ್ತ ಹೋಗುತ್ತದೆ. ಹೀಗಾಗಿ ಇದು ವಾಸ್ತವಕ್ಕಿಂತಲೂ ಭಿನ್ನವಾದ, ದೂರದಿಂದ ಇಡೀ ವಾಸ್ತವವನ್ನು ವೀಕ್ಷಿಸಿದಾಗ ದಕ್ಕುವ ವಾಸ್ತವದ ಭಾಸ (Impression of reality) ಮಾತ್ರವಾಗಿರುತ್ತದೆ. ಹಾಗೆಂದೇ ಇಲ್ಲಿ ಜಟಿಲತೆಯ ಪ್ರಶ್ನೆ ಗೌಣ– ಎಲ್ಲವೂ ಸುಲಭ ಗ್ರಾಹ್ಯ. ಜಾತ್ರೆಯೊಂದರಲ್ಲಿ ಸೇರಿದ ಜನಗಳ ಗದ್ದಲವೇ

ಒಂದು 'ವಾಸ್ತವದ ಭಾಸ'ವಾಗಿದೆ. ಆ ಗದ್ದಲದಲ್ಲಿ ನೋವು, ನಲಿವು, ಅಹಂಕಾರ, ದೈನ್ಯ, ಶೋಷಣೆ, ಮುಂತಾದ ಘಟಕಗಳಿಗೆ ಸ್ವತಂತ್ರ ವ್ಯಕ್ತಿತ್ವ ಅಸ್ತಿತ್ವಗಳಿಲ್ಲ.

ಇದಕ್ಕೆ ವಿರುದ್ಧವಾದದ್ದು ವ್ಯಷ್ಟಿ. ಇದೂ ಸಾಮಾಜಿಕ ಸಂದರ್ಭದಲ್ಲೇ ಗುರುತಿಸಲ್ಪಟ್ಟರೂ, ಇಲ್ಲಿ ಅಂತರಂಗದ ಹೊಳಹುಗಳು, ಸೂಕ್ಷ್ಮ ನಿರೀಕ್ಷಣೆ, ಜೀವನದ ಪದರು ಪದರುಗಳನ್ನು ಬಿಡಿಸಿನೋಡುವ ಪ್ರಯತ್ನ, ಕ್ಷುಲ್ಲಕ ವಿವರಗಳಲ್ಲೂ ಅರ್ಥವನ್ನರಸುವ ಕ್ರಿಯೆ, ಮುಂತಾದ ಘಟಕಗಳು ಜೀವಂತವಾಗಿ, ವ್ಯಷ್ಟಿಯ ಒಲವೆಲ್ಲ ಮೂರ್ತದಿಂದ ಅಮೂರ್ತದ ಕಡೆಗೇ ಹೆಚ್ಚು ವಾಲಿರುತ್ತದೆ. ಸ್ವರೂಪದಲ್ಲಿ ಸರಳವೆನ್ನಿಸಿದರೂ ಅಭಿವ್ಯಕ್ತಿಯಲ್ಲಿ ಸಂಕೀರ್ಣವೆನ್ನಿಸುತ್ತದೆ ವ್ಯಷ್ಟಿ; ಸ್ವರೂಪದಲ್ಲಿ ಸಂಕೀರ್ಣವಾದ ಸಮಷ್ಟಿ, ಅಭಿವ್ಯಕ್ತಿಯ ನೆಲೆಯಲ್ಲಿ ಸರಳಗೊಳ್ಳುತ್ತದೆ. ಏಕೆಂದರೆ, ಅಭಿವ್ಯಕ್ತಿ ಮಾಧ್ಯಮವಾದ ಭಾಷೆಗಿರುವ ಕೆಲವಾರು ಮಿತಿಗಳು ಇಲ್ಲಿ ಎದುರಾಗುತ್ತವೆ.

ಸಾಹಿತ್ಯದ 'ಗುರಿ' ಹಾಗೂ 'ಕ್ರಿಯೆ'ಗಳೆರಡೂ ಒಂದೇ ಆಗಿವೆ. ಬದುಕನ್ನು ಅರ್ಥಯಿಸಿಕೊಳ್ಳುವ ಕ್ರಿಯೆ. ಬದುಕಿನ ಜೀವಂತ ಸಾವಯವ ಘಟಕಗಳಾದ 'ಅನುಭವ'ಗಳನ್ನು ಅವುಗಳ ಪೂರ್ಣ ಸಾಧ್ಯತೆಗಳೊಂದಿಗೆ ಗ್ರಹಿಸುವ ಕ್ರಿಯೆಯೇ 'ಸಾಹಿತ್ಯ'. ಅಂದರೆ ಸಾಹಿತ್ಯದ ಅಧ್ಯಯನದ ನಂತರ ಮಾನವನ ಬದುಕಿನ ಕ್ಷಣಗಳಿಗೆ ಹೆಚ್ಚು ಹೆಚ್ಚು ಅರ್ಥವಂತಿಕೆ, ಹೆಚ್ಚು ಹೆಚ್ಚು ಆಳ, ವಿಸ್ತಾರಗಳು ಒದಗಿ ಬರಬೇಕು. ವಸ್ತುನಿಷ್ಟ ಪರಿಭಾವನೆಯ ಪಕ್ವತೆ ಹೃದಯಕ್ಕೆ ಒದಗಿ ಬರಬೇಕು. ಹೃದಯವು ಒಳಗೊಳಗೇ ಮಾಗಬೇಕು. ನೀತಿ ಸಂಹಿತೆಯಂತಹ ಜಡಶಾಸ್ತ್ರದ ಅಧ್ಯಯನ ಮಾಡಲಾಗದುದನ್ನು 'ಸಾಹಿತ್ಯ' ನೆರವೇರಿಸಬಲ್ಲುದು. ಏಕೆಂದರೆ, ಸಾಹಿತ್ಯವು ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ನಿಲುವುಗಳೆರಡಕ್ಕೂ ಹೊರತಾದುದು. ಇದು ಯಥಾರ್ಥವನ್ನೇ ಕಾಣಿಸಿಕೊಡುತ್ತದೆ– ನಮ್ಮ ಅತಿ ಸ್ಥೂಲ ದೃಷ್ಟಿಗೆ ಯಥಾರ್ಥ ಪೂರ್ಣ ಗೋಚರಿಸುವುದೇ ಇಲ್ಲ. ವ್ಯಕ್ತಿಯೊಬ್ಬನ ಕಣ್ಣಲ್ಲಿ ನೀರು ಕಂಡಾಗ, ಅದು ಕಣ್ಣೀರೇ ಹೌದೆಂದು ನಮ್ಮ ಸ್ಥೂಲ ದೃಷ್ಟಿ. ನಿರ್ಧಾರ ಮಾಡಿಬಿಡುತ್ತದೆ. ಆದರೆ ಯಥಾರ್ಥದ ಒಂದು ಅತಿ ಕ್ಷುಲ್ಲಕ ಅಂಶವನ್ನು ಮಾತ್ರ ನಾವು ಕಂಡಂತಾಗುತ್ತದೆ. ಕಣ್ಣೀರಿನ ಹಿಂದೆ ನೂರಾರು ಮಗ್ಗುಲುಗಳು ಅಗೋಚರವಾಗಬಹುದು. ಕಂಡದ್ದನ್ನು ಕಂಡಂತೆಯೇ ಗ್ರಹಿಸುವುದಕ್ಕಿಂತ, ಕಂಡದ್ದು ಸಾಲದು, ಇನ್ನೂ ಪೂರ್ತಿಯಾಗಿ ಕಾಣಬೇಕು–ಇನ್ನೂ ಅಗೋಚರವಾದುದ

ನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂಬ ತುಡಿತ ಸಹಜವಾಗಿಯೇ ಒಬ್ಬ ಸಾಹಿತಿಯ ಹೃದಯದಿಂದ ಒಡಮೂಡಿ ಬರುತ್ತದೆ. ಸಾಮಾನ್ಯರ ಸ್ಥೂಲನೋಟಕ್ಕೆ ಅಗೋಚರವಾದ ಸಾಧ್ಯತೆಗಳೆಲ್ಲವೂ ಸಾಹಿತಿಯ ಸೂಕ್ಷ್ಮ ಅವಲೋಕನೆಗೆ ವಶವಾಗಿಬಿಡುತ್ತವೆ. ಹೀಗೆ ಬದುಕಿನ ಸ್ಥೌಲ್ಯವನ್ನು ನಿರಾಕರಿಸಿ, ಅಲ್ಲಿನ ಸೂಕ್ಷ್ಮಗಳನ್ನು ಗ್ರಹಿಸುವ ಪ್ರಯತ್ನ ಒಂದು ರೀತಿಯ ತಪಸ್ಸು. ಸಾಹಿತಿ 'ದ್ರಷ್ಟಾರ'ನಾಗುವದು ಈ ರೀತಿಯಲ್ಲಿ.

ಸಾಹಿತ್ಯವೆನ್ನಿಸಿಕೊಳ್ಳುವ ಎಲ್ಲಾ ಬರಹಗಳಲ್ಲೂ ಈ ರೀತಿಯ ಸಿದ್ಧಿ ಕಾಣಿಸಿಕೊಳ್ಳುವುದಿಲ್ಲ. ಈ ಬಗ್ಗೆ ಸೂಕ್ಷ್ಮವಾಗಿ ಚಿಂತಿಸುವುದು ಅಗತ್ಯ. ಕೆಲವು ಸಿದ್ಧಮಾದರಿಗಳನ್ನು ಪರಿಶೀಲಿಸಬಹುದು. ಯಕ್ಷರಾಕ್ಷಸರು, ಮಂತ್ರವಾದಿಗಳ ಕತೆಗಳಲ್ಲಿ ಕಲ್ಪನೆಯ ಆಟಾಟೋಪ ವಿಜೃಂಭಿಸಿ, ಮಾನವನ ವ್ಯಕ್ತಿತ್ವದಲ್ಲಿ ಸನ್ನಿಹಿತವಾಗಿರುವ ಕಲ್ಪಕತೆಯನ್ನು ತಟ್ಟಿ, ಎಬ್ಬಿಸಿ, ಲೋಕಕಲ್ಯಾಣ, ಸಮಾಜೋದ್ಧಾರವಂಥ ಅಮೂರ್ತಧ್ಯೇಯಗಳನ್ನು ಸಾಕಾರಗೊಳಿಸುತ್ತದೆ. ಅತಾರ್ಕಿಕವಾದ ಪೌರಾಣಿಕ ಸಾಹಿತ್ಯ ಮಾನವನ ಅದ್ಭುತ "ಪೌರಾಣಿಕ ಕಲ್ಪನೆ"ಯನ್ನು ಜಾಗ್ರತಗೊಳಿಸುತ್ತದೆ. "ನಮಗೆ ಇದು ಅರ್ಥವಾಗಲಿಲ್ಲ" ಎಂಬ ಮಾತಿನ ಸೂಕ್ಷ್ಮಾರ್ಥ– "ನಮ್ಮ ತರ್ಕಕ್ಕೆ ಇದು ಹೊಂದುವುದಿಲ್ಲ"– ಎಂಬುದೇ ಆಗಿದೆ. ಬದುಕನ್ನು ತರ್ಕಕ್ಕೆ ಒಳಪಡಿಸಿ ಅರ್ಥಯಿಸಿಕೊಳ್ಳುವ ಪ್ರಯತ್ನ ವ್ಯರ್ಥವೇ ಸರಿ. ಮಾನವ ನಿರ್ಮಿತ ಹತ್ತು ಹಲವಾರು ಶಾಸ್ತ್ರ–ವಿಜ್ಞಾನಗಳೆಲ್ಲವೂ ಆತನ ತರ್ಕ ನಿರ್ಮಿತಿಯೇ. ಸಾಹಿತ್ಯಮಾತ್ರ ವಿಜ್ಞಾನವಾಗಲೀ ಶಾಸ್ತ್ರವಾಗಲೀ ಅಲ್ಲ. ಇಲ್ಲಿ ತರ್ಕದ ಪಾತ್ರ ಗೌಣ.

ತರ್ಕಪ್ರಧಾನವಾದ ಸಾಹಿತ್ಯ ರಚನೆಗಳೂ ಬೇಕಾದಷ್ಟಿವೆ. ನಮ್ಮ ತಾರ್ಕಿಕ ಪ್ರಜ್ಞೆಗೆ ಸಮಾಧಾನ ನೀಡುವಂತಹ ರಚನೆಗಳಿವು. ಪತ್ತೇದಾರಿ ಕತೆಗಳೆಲ್ಲವಕ್ಕೂ ಮಾನವನ ಸೂಕ್ಷ್ಮ ತರ್ಕವೇ ಆಧಾರ. ಅರ್ಥಾತ್ ಕಾನನ್‌ಡೈಲ್, ಅಗಾಥಾಕ್ರಿಸ್ಟೀ ಜೇಮ್ಸ್‌ಹ್ಯಾಡ್ಲೀ ಚೇಸ್– ಮುಂತಾದ ಖ್ಯಾತ ಪತ್ತೇದಾರೀ ಕತೆಗಾರರ ಬರಹಗಳೆಲ್ಲ ನಮ್ಮ ತರ್ಕಪ್ರಜ್ಞೆಯನ್ನೇ ನೇರವಾಗಿ ತಟ್ಟುತ್ತವೆ. ನಮ್ಮ ನಿತ್ಯ ಜೀವನದಲ್ಲಿ ಸರಿಸುಮಾರಾಗಿ ನಿಷ್ಕ್ರಿಯವಾಗಿರುವ ತರ್ಕಶಕ್ತಿ, ಈ ಪತ್ತೇದಾರಿ ಕತೆಗಳ ವಾಚನದಿಂದ ಚುರುಕುಗೊಳ್ಳುತ್ತದೆ. ಇಂಥ ಬರಹಗಳು ಈ ಕಾರಣದಿಂದಲೇ, ರೋಚಕವೂ ರಂಜಕವೂ ಆಗಿರುತ್ತವೆ. ಕುತೂಹಲವು ತೀರಾ ಸಾಮಾನ್ಯಸ್ತರದಲ್ಲಿ ಕಾರ್ಯಪ್ರವೃತ್ತವಾಗುವುದೂ ತರ್ಕದ ಆಧಾರದಿಂದಲೇ. ನಮ್ಮ ಬದುಕಿನಲ್ಲಿ ತರ್ಕದಂತಹ ರಂಜಕ ಪ್ರವೃತ್ತಿಗಳು ಹಲವಾರಿವೆ. ನಮ್ಮ ಅನುಭವಕ್ಕೆ ಬಂದಿರುವ

ಮತ್ತೊಂದು ರಂಜಕ ಪ್ರವೃತ್ತಿ– ಪ್ರಣಯ. ಈ ಪ್ರವೃತ್ತಿಗೆ ತರ್ಕವೂ ಬೇಕಿಲ್ಲ. ಪತ್ತೇದಾರಿ ಕತೆಗಳಲ್ಲಿ ಬೌದ್ಧಿಕ ಪಾತ್ರವಿದ್ದ ಹಾಗೇ, ಪ್ರಣಯದಲ್ಲಿ ಹೃದಯದ ಪಾತ್ರವಿರುತ್ತದೆ. ಮಾನವ ಈ ಪ್ರಣಯದ ಬಗ್ಗೆ ನೂರಾರು ಬಗೆಯ ಕಲ್ಪನೆಗಳನ್ನು ಹೊಸೆಯುತ್ತಾನೆ. ಅಭಿವ್ಯಕ್ತಿ ಸಾಮರ್ಥ್ಯವಿದ್ದವನು ಬಗೆ ಬಗೆಯಲ್ಲಿ ಇದರ ಅಭಿವ್ಯಕ್ತಿಯ ಮಾನಸಿಕ ಮಾದರಿಗಳನ್ನು ತಯಾರಿಸಿಟ್ಟುಕೊಂಡಿರುತ್ತಾನೆ. ಓದುಗರಲ್ಲಂತೂ ಬಹುಪಾಲು ಜನ ಈ ಬಗೆಯ ಕನಸುಗಾರರೇ ಆಗಿರುವುದರಿಂದ ಈ ಬಗೆಯ ಪ್ರೇಮಕತೆಗಳನ್ನು ಚಪ್ಪರಿಸಿಕೊಂಡು ಓದುತ್ತಾರೆ.

ನಮ್ಮ ಬದುಕಿನಲ್ಲಿ ಕೆಲವು ಜನ ವಿವಿಧ ಆದರ್ಶಗಳನ್ನು ನೇಯುತ್ತಾರೆ. ಯಾವುದೇ ಒಂದು ಘನವಾದ ಆದರ್ಶವನ್ನಿಟ್ಟುಕೊಳ್ಳಬೇಕಾದರೂ ನಾವು ಎರಡು ಅಂಶಗಳನ್ನು ಗಮನಿಸಲೇಬೇಕು– ಪ್ರಥಮತಃ ನಾವು ನಮ್ಮ ಮುಂದಿರಿಸಿಕೊಳ್ಳುವ ಆದರ್ಶ ಎಷ್ಟರಮಟ್ಟಿಗೆ ಸಂಭವನೀಯ ಎಂಬುದನ್ನು ಯೋಚಿಸಬೇಕು. ಆದರ್ಶವೊಂದರ ಅನುಸರಣೆಯ ಸಾಧ್ಯಾಸಾಧ್ಯತೆಗಳ ಪ್ರಶ್ನೆ ಏಳುತ್ತದೆ. ಮಾನವೀಯ ಮಿತಿಗಳಾಚೆ ನಾವು ಯಾವ ಆದರ್ಶವನ್ನೂ ಸಾಧಿಸಲು ಸಾಧ್ಯವೇ ಇಲ್ಲ. ತನ್ನ ಗರಿಷ್ಠ ಮಿತಿಗಳ ಅರಿವನ್ನು ವ್ಯಕ್ತಿ ಮೊದಲು ಪಡೆದಿರಬೇಕು. ಬ್ರಹ್ಮಚರ್ಯ, ಸಮಾಜಸೇವೆ, ರಾಷ್ಟ್ರಭಕ್ತಿ, ಪರದಾರಾ ಸೋದರತ್ವ–ಮುಂತಾಗಿ ಈ ಬದುಕಿನ ಕಟುವಾಸ್ತವಕ್ಕೆ ತೀರ ದೂರವಾದ, ಅಸಹಜವಾದ ಆದರ್ಶಗಳ ಸರಮಾಲೆಯನ್ನು ಸೃಷ್ಟಿಸಿ ಓದುಗರ ಕೊರಳಿಗೆ ನೇತುಹಾಕುವ ಲೇಖಕರಿದ್ದಾರೆ. ಓದುಗರಲ್ಲಿ ಬಹುಪಾಲು ಜನ ಇಂತಹ ಹುಸಿ ಆದರ್ಶಗಳನ್ನು ಕುರಿತು ಓದಿದಾಗ– “ವಾಹ್ ! ಇದ್ದರೆ ಹೀಗಿರಬೇಕು !”–ಎಂದು ಉದ್ಗರಿಸುತ್ತಾರೆ. ಆದರೆ, ತಾವು ಮೆಚ್ಚಿಕೊಳ್ಳುವ ಆದರ್ಶಗಳನ್ನು ತಮ್ಮಿಂದ ಅನುಸರಿಸಲಾಗದ ಬಗ್ಗೆ ಅವರ ಅಂತರ್ಯ ಅವರನ್ನು ಕಂಡು ಅಪಹಾಸ್ಯಗೈಯುತ್ತದೆ. ಇನ್ನು ಎರಡನೇ ಅಂಶ–ಈ ಆದರ್ಶಗಳೆಲ್ಲ ಎಷ್ಟರಮಟ್ಟಿಗೆ ನಮ್ಮ ವರ್ತಮಾನ ಬದುಕಿಗೆ ಪ್ರಸ್ತುತವಾಗಿವೆ. - ಎಂಬ ಬಗ್ಗೆ ಯೋಚಿಸುವುದು. ಈ ಬಗ್ಗೆ ಆಳವಾದ ಚಿಂತನೆ ನಡೆಸಿದಲ್ಲಿ, ನಾವು “ಮೌಲ್ಯ”ಗಳೆಂದು ಅಂಗೀಕರಿಸಿರುವ ಅದೆಷ್ಟೋ ವಿಷಯಗಳು ನಿಜವಾದ ಮೌಲ್ಯಗಳೇ ಆಗಿರುವುದಿಲ್ಲ- ಭಾವಾವೇಶದಿಂದ ತಲುಪಿರುವ ಕಾಲ್ಪನಿಕ ತೀರ್ಮಾನಗಳೆಲ್ಲವನ್ನೂ ನಾವು ಮೌಲ್ಯಗಳೆಂದು ಭಾವಿಸಬೇಕಾಗಿಲ್ಲ. ಈ ತೀರ್ಮಾನಗಳಿಗೆ ಪ್ರಮುಖ ಕಾರಣ ನಮ್ಮ ರೂಢ ಮೂಲ ಸಾಂಪ್ರದಾಯಿಕ ದೃಷ್ಟಿಕೋಣ. ನಮ್ಮಲ್ಲಿ ಸಾಮಾನ್ಯವಾಗಿ ಮೌಲ್ಯಗಳ ನಿರ್ಣಯವಾಗುವುದು ಸಂಪ್ರದಾಯಗಳಿಂದ. ದೈವಭಕ್ತಿ, ವಿಧಿವಾದ, ಅಪೌರುಷೇಯದ ಬಗ್ಗೆ ವಿಶ್ವಾಸ, ಆತ್ಮ ನೈಚ್ಯಾನುಸಂಧಾನ (ತನ್ನನ್ನು ತಾನು ಹೀಗಳೆದುಕೊಳ್ಳುವಿಕೆ)–ಮುಂತಾದವುಗಳು “ಜೀವನದ ಪರಮ

ಮೌಲ್ಯ"ಗಳಾಗಿ ಸ್ವೀಕೃತವಾಗಿವೆ. ಈ ಮೌಲ್ಯಗಳನ್ನು ಪ್ರಶ್ನಿಸುವ, ವಿರೋಧಿಸುವ ಪ್ರಯತ್ನಗಳೆಲ್ಲ ದೌಷ್ಟ್ಯ, ಉದ್ಧಟತನ ಎನಿಸಿಕೊಂಡು ಬಿಡುತ್ತವೆ. ಒಂದು ವೇಳೆ ಬರಹಗಾರನಿಗೆ ಈ ಮೌಲ್ಯಗಳು ಒಪ್ಪಿಗೆಯಾಗದಿದ್ದರೂ, ಅವನು ತನ್ನ ಅಭಿವ್ಯಕ್ತಿಯಲ್ಲಂತೂ ಇವೇ ಮೌಲ್ಯಗಳನ್ನೇ ಎತ್ತಿ ಹಿಡಿಯಬೇಕಾಗುತ್ತದೆ. ದಾನಶೀಲತೆಯನ್ನು ಒಂದು ಪರಮ ಮೌಲ್ಯ ಎಂದು ಭಾವಿಸಿರುವ ಜನ, ದಾನ ಮಾಡುವ ಸಲುವಾಗಿಯೇ, ಭ್ರಷ್ಟಾಚಾರದಿಂದ ಹಣಗಳಿಸುವಂತೆ, ರೂಢ ಮೂಲ ಮೌಲ್ಯಗಳನ್ನು ಬಾಯಿ ಮುಚ್ಚಿ ಒಪ್ಪಿಕೊಳ್ಳುವ, ಹಾಗೂ ತನ್ನ ಅಭಿವ್ಯಕ್ತಿಗಳಲ್ಲಿ ಆ ಮಿಥ್ಯಾ ಮೌಲ್ಯಗಳನ್ನೇ ಎತ್ತಿ ಹಿಡಿಯುವ ಪ್ರವೃತ್ತಿ ಒಟ್ಟು ಬರಹಗಳಲ್ಲಿ ಕಾಣಿಸಿಕೊಳ್ಳಲೂಬಹುದು.

ಹೀಗೆ, ನಮ್ಮ ಸರಳ ತರ್ಕಕ್ಕೆ ಹಿತವೆನ್ನಿಸುವ, ಕನಸುಗಾರಿಕೆಯಲ್ಲೇ ಬಾಯಿ ಚಪ್ಪರಿಸುವ ಅಸಂಭವನೀಯ ಆದರ್ಶಗಳಿಂದ ವಿಜೃಂಭಿಸುವ ಬರಹಗಳೆಲ್ಲವನ್ನೂ ಜನಪ್ರಿಯ ಸಾಹಿತ್ಯವೆಂಬ ಶೀರ್ಷಿಕೆಯಡಿಯಲ್ಲಿ ಸೇರಿಸಬಹುದು. ಓದುಗರಲ್ಲಿ ಬಹುಪಾಲು ಜನ ಇಂತಹ ಬರಹಗಳ ಮಾದರಿಗಳನ್ನು ಬಹುಬೇಗ ತಮ್ಮ ತೆಕ್ಕೆಗೆ ಒಗ್ಗಿಸಿಕೊಳ್ಳುತ್ತಾರೆ. ಫ್ಯಾಂಟಮನ ಸಾಹಸಗಳಲ್ಲೂ ಒಂದು ರೀತಿಯ ಅಸಂಭಾವ್ಯ ಆದರ್ಶ, ಒಂದು ತೆರನಾದ ಕನಸುಗಾರಿಕೆ ಕಾರ್ಯಪ್ರವೃತ್ತವಾಗಿರುವುದನ್ನು ಗುರುತಿಸಬಹುದು. ಅನ್ಯಾಯ, ದೌಷ್ಟ್ಯ, ದೌರ್ಜನ್ಯಗಳಿಂದ ಕೂಡಿದ ಈ ಜೀವನದಲ್ಲಿ, ಒಂದು ನ್ಯಾಯಪರವಾದ ಅಮಾನುಷ ಶಕ್ತಿಯ ಅಗತ್ಯದ ಬಗ್ಗೆ ಇಲ್ಲಿ ಲೇಖಕ ಕನಸು ಕಾಣುತ್ತಾನೆ. ಮತ್ತೆ ಕೆಲವು ಬರಹಗಳಲ್ಲಿ ಆದರ್ಶಗಳ ವೈಭವೀಕರಣವಿರುತ್ತದೆ. ಪರಸ್ತ್ರೀಯನ್ನು ತನ್ನ ತಂಗಿಯಂತೆ ಕಾಣುವ, ಬೇರೊಬ್ಬರ ಸ್ವತ್ತು ಕೈಗೆ ಸಿಕ್ಕಾಗ, ಅದನ್ನು ತಕ್ಷಣ ಅದರ ಒಡೆಯನಿಗೆ ಹಿಂತಿರುಗಿಸುವ, ದುಷ್ಟರು ಹಾವಳಿ ಮಾಡುವಾಗ ಏಕಾಂಗಿಯಾಗಿ ಅವರನ್ನೂ ಸದೆಬಡೆಯುವ ಅತಿಮಾನವರನ್ನು ನಾವಿಲ್ಲಿ ಕಾಣುತ್ತೇವೆ. ಇಂತಹ ಬರಹಗಳೆಲ್ಲ ಜೀವನದ ವಿಧ್ಯಾತ್ಮಕ ಹಾಗೂ ನೇತ್ಯಾತ್ಮಕ ಸ್ವರೂಪ (normative phase of life) ದ ಬಗ್ಗೆ ಹೇಳುತ್ತವೆ. ನಮ್ಮ ಜೀವನ ಹೇಗಿದೆ ಎಂಬ ಶೋಧನೆಗಿಂತಲೂ, ಇದು ಹೇಗಿರಬೇಕಾಗಿತ್ತು ಎಂದು ಹೇಳುವುದೇ ಇವುಗಳ ಒಟ್ಟು ಧ್ವನಿ. ಹೀಗೆ ಜೀವನದ ಕಾಲ್ಪನಿಕ ಔನ್ನತ್ಯವನ್ನೇ ಗುರಿಯಾಗುಳ್ಳ ಎಲ್ಲ ಬರಹಗಳೂ ಬಹುಬೇಗ ಜನಪ್ರಿಯವಾಗಿ ಬಿಡುತ್ತವೆ. ರೂಢ ಮೂಲ ಆದರ್ಶಗಳನ್ನೇ ಸಾರ್ವಕಾಲಿಕ ಮೌಲ್ಯಗಳೆಂದು ಭ್ರಮಿಸಿರುವ ಜನಗಳ ಸಂಖ್ಯೆ ನಮ್ಮಲ್ಲಿ ಹೆಚ್ಚಾಗಿದೆ. ಈ ಸಮುದಾಯ ಬಯಸುವ ಸಾಹಿತ್ಯ ಆದರ್ಶಮಯವಾಗಿರಬೇಕು. ಅಂತರಂಗ ಶೋಧನೆ

ಇವರಿಗೆ ಇಷ್ಟವಾಗುವುದಿಲ್ಲ. ಏಕೆಂದರೆ ಸತ್ಯವನ್ನು ಅದರ ತೀರಾ ನಗ್ನ ರೂಪದಲ್ಲಿ ಕಾಣಲು ಬೇಕಾದ ಆತ್ಮ ವಿಶ್ವಾಸ, ಧೈರ್ಯಗಳು ಈ ಜನಗಳಲ್ಲಿ ಇರುವುದಿಲ್ಲ. "ಸಂಸ್ಕಾರ", "ವಿಕ್ಷೇಪ", "ಅವಸ್ಥೆ", "ಸ್ವರೂಪ" – ದಂತಹ ಕಾದಂಬರಿಗಳು ಜನಪ್ರಿಯವಾಗದಿರುವ ಕಾರಣವೂ ಇದೇ ಆಗಿದೆ.

ಸಾಮಾನ್ಯವಾಗಿ ನಿಯತಕಾಲಿಕಗಳಲ್ಲಿ ಪ್ರಕಟವಾಗುವ ಸಾಹಿತ್ಯ, ಜನಪ್ರಿಯವಾಗಲೇ ಬೇಕಾಗುತ್ತದೆ. ಏಕೆಂದರೆ, ಪತ್ರಿಕೆಗಳ ಪ್ರಸಾರಕ್ಕೆ ಈ ಜನಪ್ರಿಯತೆಯೇ ಭದ್ರ ಬುನಾದಿ. Feed back– ಎಂದು ಅವರು ಈ ಜನಪ್ರಿಯತೆಯನ್ನು ಗುರುತಿಸುತ್ತಾರೆ. ಜೀವನದ ಕಾಲ್ಪನಿಕ ಔನ್ನತ್ಯವನ್ನು ಚಿತ್ರಿಸುವ ಕೆಲವಾರು ಫಾರ್ಮುಲಾಗಳು ತಮ್ಮಷ್ಟಕ್ಕೆ ತಾವೇ ಸೃಷ್ಟಿಯಾಗುತ್ತವೆ. ಸೂಕ್ಷ್ಮ ಸಂವೇದಿಯಾದ ಓದುಗನೊಬ್ಬನ ಅನುಭವದ ಪರಿಧಿಗಳು ಈ ಬರಹಗಳಿಂದ ಖಂಡಿತ ಸ್ವಲ್ಪವೂ ಹಿಗ್ಗುವುದಿಲ್ಲ. ಸೃಜನಶೀಲ ಬರಹಗಳಲ್ಲಿ ನಿರೀಕ್ಷಿಸಲಾಗುವ ಅನುಭವ ವೈವಿಧ್ಯ, ಅನುಭವ ನಾವೀನ್ಯ ಅಥವಾ ಅನುಭವ ವಿಸ್ತಾರಗಳು ಈ ಜನಪ್ರಿಯ ಬರಹಗಳಲ್ಲಿ ಕಂಡುಬರುವುದಿಲ್ಲ.

ಜೀವನದ ವಾಸ್ತವವನ್ನು ಚಿತ್ರಿಸುವ ಕೆಲವು ಬರಹಗಳೂ ಬಹುಬೇಗ ಜನಪ್ರಿಯವಾಗುತ್ತವೆ. ಲಂಚಕೋರ ಅಧಿಕಾರಿಯನ್ನೋ, ಶೋಷಕ ಮಾಲೀಕನನ್ನೋ, ಭ್ರಷ್ಟರಾಜಕಾರಣಿಯನ್ನೋ ಯಥಾವತ್ ಚಿತ್ರಿಸಲಾಗುವ ಬರಹಗಳಿವು. ಇಂತಹ ಬರಹಗಳು ವಾಸ್ತವದ ಮೇಲ್ಪದರವನ್ನು ಮಾತ್ರ ಚಿತ್ರಿಸುವುದರಿಂದ, ಇದು ಪೂರ್ಣವಾಸ್ತವವನ್ನು ದಿಗ್ದರ್ಶಿಸುವ ಬದಲಾಗಿ, ಒಬ್ಬ ಸಾಮಾನ್ಯ ವ್ಯಕ್ತಿಯು ನೀಡಬಹುದಾದ ವರದಿಯಾಗಿಬಿಡುತ್ತದೆ. ವರದಿಯು ಸಕಲರ ಗ್ರಹಿಕೆಯಲ್ಲೂ ಏಕರೂಪವನ್ನು ಪಡೆಯುತ್ತದೆ. ಆದರೆ ಸಾಹಿತ್ಯ ಓದುಗನ ಸೂಕ್ಷ್ಮತೆಗೆ ಸಾಪೇಕ್ಷವಾಗಿ ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ರೂಪದ ಗ್ರಹಿಕೆಯನ್ನೊದಗಿಸುತ್ತದೆ. ವರದಿಗಳು ಜನಪ್ರಿಯವಾಗಲು ಸಾಧ್ಯವಿದೆ–"ಎಲ್ಲಾ ನಮ್ಮ ಆಫೀಸಿನಲ್ಲಿ ನಡೆದ ಹಾಗೇ ಬರೆದಿದಾರೆ– ತುಂಬಾ ಸಹಜವಾಗಿ ಮೂಡಿಬಂದಿದೆ". ಎಂಬ ಶಹಭಾಸ್‌ಗಿರಿಯೂ ಲೇಖಕನಿಗೆ ದಕ್ಕುತ್ತದೆ. ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗುವ ಸುದ್ದಿಗೂ ಈ ಬರಹಗಳಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಉದಾಹರಣೆಗ ಹೇಳುವುದಾದರೆ, ಒಬ್ಬ ಭ್ರಷ್ಟ ರಾಜಕಾರಣಿಯ ಬಗ್ಗೆ ಚಿತ್ರಿಸುವ ಲೇಖಕ, ಅವನ ಭ್ರಷ್ಟತೆಯನ್ನು ಅದಕ್ಕೆ ಪ್ರತೀಕದಂತಿರುವ ಅವನ ಸೌಕರ್ಯವನ್ನೂ ವಿಡಂಬನೆಗೈಯುತ್ತಾನೆ– ಆದರೆ, ಇದಕ್ಕೂ ಒಂದು ಹೆಜ್ಜೆ ಮುಂದೆಹೋ

ಗುಪ್ತವಾದರೆ, ಆ ರಾಜಕಾರಿಣಿ ಹೀಗೇಕೆ ಆಗಿಬಿಟ್ಟ- ಅವನ ಬಾಳಿನ ಸಂದರ್ಭ ಹಿನ್ನೆಲೆಗಳೇನು ಎಂಬ ಬಗ್ಗೆ ಆ ಬರಹದಲ್ಲೇ ಶೋಧ ನಡೆದಾಗ, ಅದು ಕೇವಲ ವರದಿಯ ಸ್ಥರದಲ್ಲಿ ನಿಲ್ಲದೇ, ಗಂಭೀರ ಅಭಿವ್ಯಕ್ತಿಯ ಮಾದರಿಯಾಗಬಲ್ಲದು.

ಹೆಚ್ಚು ಹೆಚ್ಚು ಜನಗಳಿಗೆ ಅರ್ಥವಾಗುವಂತೆ ಬರೆದದ್ದು ಜನಪ್ರಿಯ ಸಾಹಿತ್ಯ- ಇಲ್ಲಿ ಆ ಜನಗಳು ಹೆಚ್ಚು ಅರ್ಥವನ್ನು ಮಾಡಿಕೊಳ್ಳಲಾರರು ಎಂಬುದು ಹೆಚ್ಚು ಸಮಂಜಸ. ಅಂದರೆ ಓದುಗರನ್ನೆ ಗಮನದಲ್ಲಿರಿಸಿ ಬರೆಯಹೊರಟಾಗ, ಬರೀ ಮೇಲ್ಪದರದಲ್ಲಿಯೇ ಅರ್ಥವನ್ನು ಬಿಟ್ಟುಕೊಡುವ ಬರಹಗಳು ಸೃಷ್ಟಿಯಾಗುತ್ತವೆ. ಅಂದರೆ ಈ ಜನಪ್ರಿಯ ಬರಹಗಳೆಲ್ಲ ಈ ಬದುಕಿನ ಅತ್ಯಂತ ಕ್ಷುಲ್ಲಕ ಅಂಶದ ಸತ್ಯವನ್ನು ಮಾತ್ರ ಬಿಂಬಿಸುತ್ತವೆ. ಬದುಕನ್ನು ಒಳಹೊಕ್ಕು ಶೋಧಿಸು— ತವುಳ್ಳ ಓದುಗನಿಗೆ ಇಂತಹ ಬರಹಗಳು ನೀರಸವಾಗಿಯೇ ಕಾಣಿಸುತ್ತವೆ. ಇಲ್ಲಿ ಭಾಷೆಯ ಕ್ಲಿಷ್ಟತೆಯಾಗಲೀ, ಅಥವಾ Form (ತಂತ್ರ) ದ ಕ್ಲಿಷ್ಟತೆಯಾಗಲೀ ಮುಖ್ಯವಾಗುವುದಿಲ್ಲ. ಒಂದು ಗಂಭೀರ ಬರಹದಲ್ಲಿಯೂ ಬರೀ ಸರಳವಾದ ಭಾಷೆಯೇ ದುಡಿಯುತ್ತಿರುತ್ತದೆ. ಭಾಷೆಯ ಸಾಧ್ಯತೆಗಳನ್ನು ದುಡಿಸಿಕೊಳ್ಳುವುದರ ಜೊತೆಗೇ, ಬದುಕಿನ ಅರ್ಥಶೋಧವೂ ನಡೆಯುತ್ತದೆ. ಸಾಹಿತ್ಯ ಪ್ರಕಾರಗಳನ್ನು ಹೀಗೆ ಒಂದಾನೊಂದು ಕಾಲದಲ್ಲಿ ವರ್ಗೀಕರಿಸಲಾಗುತ್ತಿತ್ತು. ಕಾವ್ಯವು ಅತ್ಯಂತ ಗಂಭೀರ ಪ್ರಕಾರವೆಂದೂ, ನಾಟಕ, ಕತೆ, ಕಾದಂಬರಿಗಳು ಜನಪ್ರಿಯ ಪ್ರಕಾರಗಳೆಂದೂ ಪರಿಗಣಿಸಲಾಗುತ್ತಿತ್ತು. ಆದರೆ, ಸಾಹಿತ್ಯದ ಗುರಿ ಮತ್ತು ಕಾರ್ಯಗಳಲ್ಲಿ ಒಮ್ಮುಖ ಸಾಧಿಸಲ್ಪಟ್ಟ ಮೇಲೆ, ಎಲ್ಲ ಪ್ರಕಾರಗಳಲ್ಲೂ ಗಂಭೀರ ಅಭಿವ್ಯಕ್ತಿ ಸಾಧ್ಯ ಎಂದಂತಾಯಿತು. ಹಾಗೆಯೇ ಎಲ್ಲ ಪ್ರಕಾರಗಳಲ್ಲೂ ಜನಪ್ರಿಯ ಅಭಿವ್ಯಕ್ತಿ ಸಹ ಸಾಧ್ಯ.

ನಮ್ಮಲ್ಲಿ ಸಾಹಿತ್ಯ ಸೃಷ್ಟಿ ಎನ್ನುವುದು ಒಂದು ವಿರಾಮಕಾಲದ ಹವ್ಯಾಸವಾಗಿ ಪರಿಣಮಿಸಿದೆ. ಬಿಡುವು ಹೆಚ್ಚಾಗಿದ್ದಾಗ, ಅಭಿವ್ಯಕ್ತಿ ಸಾಮರ್ಥ್ಯವುಳ್ಳವರು ಮಾಡುವ 'ವಿಶೇಷ ಕ್ರಿಯೆ' ಇದು. ನಾವು ಕೆಲಸವಿಲ್ಲದ ಅವಧಿಯನ್ನೇ ಬಿಡುವು ಎಂದು ಭಾವಿಸುವುದಾದರೆ, ಸಾಹಿತ್ಯ ಸೃಷ್ಟಿಯು ಒಂದು ಕೆಲಸವೇ ಅಲ್ಲ ಎನ್ನಿಸುತ್ತದೆ. ಇದಕ್ಕಿಂತಲೂ ತೀವ್ರವಾಗಿ, ಸಾಹಿತ್ಯವನ್ನು ಓದುವುದೂ ಸಹ ಇಲ್ಲಿ ಒಂದು ಗಂಭೀರ ಪ್ರಯತ್ನವೇ ಆಗಿಲ್ಲ. ಈ ಓದುವ ಹವ್ಯಾಸ ಕೇವಲ ಮನೋರಂಜನೆಗಾಗಿ. ಸಮಯವನ್ನು ಕಳೆಯಲು-- ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ, ಸಮಯವನ್ನು ಕೊಲ್ಲಲು ಓದನ್ನು ಅವಲಂಬಿಸುವವರೇ ಹೆಚ್ಚು. ವಿದ್ಯಾರ್ಥಿದೆಸೆಯಲ್ಲಿ ಪರೀಕ್ಷೆಗಳನ್ನೆದುರಿಸಲು ಮಾತ್ರ ಓದುತ್ತಿದ್ದ ನಾವು, ಉದ್ಯೋಗಸ್ಥ

ರಾವ ಮೇಲೆ ಮನರಂಜನೆಗಾಗಿಯೇ ಓದುತ್ತೇವೆ. ಈ ಎರಡೂ ಸಾಹಿತ್ಯಾಭ್ಯಾಸದ ಗಂಭೀರ ಪ್ರಯತ್ನಗಳಲ್ಲ— ಸಾಹಿತ್ಯದ ಗಂಭೀರ ಅಭ್ಯಾಸ ಎಂದರೆ, ಬದುಕನ್ನು ಒಳಹೊಕ್ಕು ಶೋಧಿಸುವ ಪ್ರಯತ್ನ. ಬದುಕಿನ Pattern (ಮಾದರಿ)ಗಳ ಶೋಧ ನಡೆಯುವುದು, ಅನುಭವಗಳ ಅಭಿವ್ಯಕ್ತಿಯ ಮೂಲಕ. ಬದುಕಿನ ಬಗ್ಗೆ ನಮ್ಮನ್ನು ಹೆಚ್ಚು ಸಹನಶೀಲರನ್ನಾಗಿಸುವುದು, ಬದುಕಿನ ಎಲ್ಲಾ ಸಾಧ್ಯತೆಗಳ ಬಗ್ಗೆ (ಅಥವಾ, ಗರಿಷ್ಠ ಪ್ರಮಾಣದ ಸಾಧ್ಯತೆಗಳ ಬಗ್ಗೆ) ನಮ್ಮ ಕುತೂಹಲವನ್ನು ಜೀವಂತವಾಗಿಡುವುದೂ ಗಂಭೀರ ಸಾಹಿತ್ಯ ಮಾಡುವ ಕ್ರಿಯೆ. ಜನಪ್ರಿಯ ಸಾಹಿತ್ಯದಲ್ಲಿ ಓದಿಸಿಕೊಳ್ಳುವ ಗುಣವೇ ಪ್ರಮುಖವಾದರೆ, ಗಂಭೀರ ಸಾಹಿತ್ಯದ ಪ್ರಧಾನ ಲಕ್ಷಣ ಅಭಿವ್ಯಕ್ತಿಯಲ್ಲಿನ ಜಟಿಲತೆ. ಇಲ್ಲಿ ಓದುಗ ಬಯಸಿ, ಬಯಸಿ, ಅವನ್ನು ತನ್ನ ಅಧ್ಯಯನಕ್ಕಾಗಿ ಆಯ್ದುಕೊಳ್ಳುತ್ತಾನೆ. ಖ್ಯಾತ ರಷ್ಯನ್ ಕಾದಂಬರಿಕಾರ ಡೊಸ್ಟೋವಸ್ಕಿಯ ಕಾದಂಬರಿಗಳನ್ನು ಓದುವಾಗ, ಓದುಗ ತುಂಬ ಕಷ್ಟಪಡಬೇಕಾಗುತ್ತದೆ. (ಅದೇ ಲಿಯೋ ಸ್ಟ್ರಾಯ್‌ರನ್ನು ಮಾತ್ರ ಕುತೂಹಲದಿಂದಲೂ ಓದಬಹುದು— ಪರಿಣಾಮವೂ ಗಂಭೀರ).

ಸಾಹಿತ್ಯ ನಿರ್ಮಿತಿಯ ವಸ್ತು, (Theme) ತಂತ್ರ ಹಾಗೂ ಪ್ರಕಾರಗಳಿಗಿಂತಲೂ ಭಿನ್ನವಾದ ದ್ವಂದ್ವ ಈ ಜನಪ್ರಿಯ ಹಾಗೂ ಗಂಭೀರ ಸ್ವರೂಪಗಳು. ಇದು ಎಲ್ಲ ತಲೆಮಾರಿನಲ್ಲೂ ಕಂಡುಬರುವ ದ್ವಂದ್ವ. ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ, ಬಂಡಾಯ ಮುಂತಾದ ಸಾಹಿತ್ಯಕ ಧೋರಣೆಗಳೆಲ್ಲವೂ ಆಯಾ ತಲೆಮಾರಿನ ಚಿಂತನಶೀಲತೆಗೆ ಸಂಬಂಧ ಪಟ್ಟವುಗಳು. ಆದರೆ ಎಲ್ಲ ತಲೆಮಾರಿನಲ್ಲೂ ಜನಪ್ರಿಯ ಸಾಹಿತ್ಯವೂ ಸೃಷ್ಟಿಯಾಗಿದೆ; ಗಂಭೀರ ಸಾಹಿತ್ಯವೂ ಸೃಷ್ಟಿಯಾಗಿದೆ. ಈ ಎರಡು ಬಗೆಯ ಅಭಿವ್ಯಕ್ತಿಗಳ ಅಂತರ ಕುತೂಹಲಕಾರಿಯಾದ ಅಂಶ.

ಭಾಷೆ-ಭಾವನೆ-ಹೃದಯ ಸಂಬಂಧ ಇತ್ಯಾದಿ*....

—ರಾಘವೇಂದ್ರ ಪಾಟೀಲ

ನಾನು ಚಿಕ್ಕವನಾಗಿದ್ದಾಗ ನಮ್ಮ ದಾಯಾದಿ ಸಂಬಂಧಿ ವಿಷ್ಣುಪಂತ್ ಎನ್ನುವವರು ನಮ್ಮ ಮನೆಗೆ ಬರುತ್ತಿದ್ದರು. ಇವರ ಅಜ್ಜನೋ ತಂದೆಯೋ ಯಾರೋ ಮಹಾರಾಷ್ಟ್ರದ ಪುಣೆಗೆ ಹೋಗಿ ನೆಲೆಸಿದವರು ವಿಷ್ಣುಪಂತ್‌ರು ಪ್ರತಿ ವರ್ಷವೂ ಸುಗ್ಗಿಯಾದ ಮೇಲೆ ತಮ್ಮ ಹೊಲಗಳ ಫಾಳೇ ವಸೂಲು ಮಾಡಲು ನಮ್ಮ ಊರಿಗೆ ಬರುತ್ತಿದ್ದರು. ಇವರು ನಮಗೆ ವಿಚಿತ್ರವಾಗಿ ತೋರುತ್ತಿದ್ದರು. ನಮ್ಮ ವಾರಿಗೆಯ ಹುಡುಗರಿಗೆಲ್ಲ ಅವರು ಮಾತಾಡುವ ಭಾಷೆ ತಮಾಷೆಯ ವಿಷಯ. ತಾವು ಹೇಳಿದ್ದು ನಮಗೆ ತಿಳಿಯಬೇಕೆನ್ನುವ ಉದ್ದೇಶದಿಂದಲೋ ಅಥವಾ ಮರಾಠೀ ಭಾಷೆಯೊಂದಿಗೆ ಸಹಜವಾಗಿಯೇ ಬರುವಂಥವೋ (ಬೆಳಗಾವಿಯಲ್ಲಿರುವ ನನ್ನ ಅಕ್ಕ ತುಂಬ ತಾದಾತ್ಮ್ಯದಿಂದ ಮರಾಠೀ ಮಾತಾಡುತ್ತ ಮಾಡುವ ಭಾವ ಭಂಗಿಗಳನ್ನು ನೋಡಿದರೆ ಇಂಥ ಭಾವಭಂಗಿಗಳು ಮರಾಠೀ ಭಾಷೆಯೊಂದಿಗೆ ಸಹಜವಾಗಿ ಬಂದವುಗಳಿರಬೇಕೆಂದು ನನಗನಿಸುತ್ತದೆ) ಅಂತೂ ಅವರು ಮಾತಾಡುವಾಗ ಮಾಡುವ ಹಾವಭಾವಗಳು ನಮಗೆ ವಿಚಿತ್ರದವಾಗಿ ತೋರಿ ನಮ್ಮ ನಗೆಗೆ ಕಾರಣವಾಗುತ್ತಿದ್ದವು. ದಪ್ಪ ದಪ್ಪನೆಯ ಕಪ್ಪು ಇರುವೆಗಳು ಪುಣೆಯಲ್ಲಿ ಅವರಿಗೆ ಕಂಡಿದ್ದವೋ ಇಲ್ಲವೋ ಏನೋ– ಬಾವಿಗೆ ಸ್ನಾನಕ್ಕೆ ಹೊರಟಾಗ ತೋಟದ ದಾರಿಯಲ್ಲಿ ಕಾಣುವ ಕಪ್ಪು ಇರುವೆಗಳಿಗೆ ಹೆದರುತ್ತ ಮುಂಗೀ.... ಮುಂಗೀ ಎಂದು ನೆಗೆದಾಗಲೆಲ್ಲ ನಾವು ಹೊಟ್ಟೆ ತುಂಬ ನಗುತ್ತಿದ್ದೆವು. ಅವರು ಮಧ್ಯಾಹ್ನದ ಭೋಜನ ಮುಗಿಸಿ ನಮ್ಮೂರಿನ ಬೇಸಿಗೆಯ ಆರಂಭದ ಬಿಸಿಲಿನ ಝಳಕ್ಕೆ ಬಳಲಿ ಮಲಗಿ ಕಣ್ಣು ಮುಚ್ಚಲು ತೊಡಗುತ್ತಿದ್ದಂತೆಯೇ ನಾವು

* ಸಾಹಿತ್ಯ ಅಕಾಡೆಮಿಗಾಗಿ ಬರೆಯುತ್ತಿರುವ ಮಹಾರಾಷ್ಟ್ರ ಪ್ರವಾಸಾನುಭವ ಲೇಖನ ಮಾಲೆಯ ಒಂದು ಭಾಗ

ಮೂಂಗೀ ಮೂಂಗೀ ಎಂದು ಕೂಗಿದರೆ ಅವರು ಗಾಬರಿಯಿಂದ ಛಕ್ಕೆಂದು ಎದ್ದು ಕೊಡಬೇಕು..... ಹೌದು ಮುಂದೆ ಐದನೆಯ ಕ್ಲಾಸಿಗೆ ಬಂದಾಗ ಕಲಿಯಲು ಆರಂಭಿಸಿದ ಇಂಗ್ಲೀಷ್ ಭಾಷೆ ನಮ್ಮಲ್ಲಿ ಮೂಡಿಸಿದ ಭಯಗೌರವಗಳು ಯಾಕೋ ಏನೋ ನಮಗೆ ಮರಾಠಿಯಲ್ಲಿ ಮೂಡಲೇ ಇಲ್ಲ.

ನನ್ನ ತಂದೆಯೂ ಅಷ್ಟೇ. ಬಾಗವಾನರ ಕಾಯಿಪಲ್ಲೇದ ಮಂದಿ ಮನೆಗೆ ಬಂದರೆ ಅವರ ಜೊತೆಗೆ ಸರಾಗವಾಗಿ ಯಾವ ಮುಜುಗರ ಇಲ್ಲದೇ ಉರ್ದು ಮಾತಾಡುತ್ತಿದ್ದ ಇವನು ಮಹಾರಾಷ್ಟ್ರದಲ್ಲಿರುವ ಮರಾಠೀ ಮಾತಾಡುವ ನೆಂಟರೊಂದಿಗೆ ಮರಾಠೀ ಮಾತಾಡುವವರ ಭಾಷಾ ಅಂಧಾಭಿಮಾನ ಕುರಿತು ಬಿಸಿಯಾಗಿ ಮಾತಾಡುತ್ತಿದ್ದ. ಹಾಗೆ ನೋಡಿದರೆ ಇವನ ಬಾಲ್ಯಕಾಲದ ಸಂದರ್ಭ ದಟ್ಟವಾದ ಮರಾಠೀ ಭಾಷಾ ಪ್ರಭಾವವನ್ನು ಹೊಂದಿದ್ದಾಗಿತ್ತು. ರಾಜತ್ವ ಹೊರಟು ಹೋಗಿದ್ದರೂ ಪೇಶವೆಯವರ ಆಳ್ವಿಕೆಯ ನೆನಪುಗಳು ಇನ್ನೂ ಮಾಸಿರಲಿಲ್ಲ. ಅವರು, ಅವರ ದೇಸಾಯಿಗಳು ಹಾಕಿಕೊಟ್ಟ ಉಂಬಳಿಗಳು, ನೀಡಿದ ಇನಾಮುಗಳು ಮತ್ತು ಇಷ್ಟರ ಮೇಲೆ ಶಾಲೆಗಳಲ್ಲಿ ಕೂಡ ಸಾಕಷ್ಟು ಮರಾಠೀ ವಾತಾವರಣ. ನನ್ನ ತಂದೆಯ ಅನಿಸಿಕೆಯಂತೆ ಕನ್ನಡಿಗನೊಬ್ಬನು ಮರಾಠೀ ಪ್ರದೇಶಕ್ಕೆ ಹೋದರೆ ತುಂಬಾ ಉತ್ಸಾಹದಿಂದ ಮರಾಠೀ ಕಲಿಯುತ್ತಾನಂತೆ. ಆದರೆ ಅದೇ ಮರಾಠೀ ಮನುಷ್ಯ ಕನ್ನಡದ ಬಗ್ಗೆ ತಾತ್ಸಾರ ಭಾವನೆ ಇಟ್ಟುಕೊಂಡು ಅದನ್ನು ಕಲಿಯುವ ಗೋಜಿಗೇ ಹೋಗುವದಿಲ್ಲವಂತೆ. ನಮ್ಮ ಪುರೋಹಿತರ ಮಗನ ಒಂದು ಉದಾಹರಣೆ ಕೊಡುತ್ತಿದ್ದರವರು. ಈ ನಮ್ಮ ಪುರೋಹಿತರ ಮಗ ಕೊಲ್ಲಾಪುರಕ್ಕೆ ಹೋದ. ಹೋದವ ಅಲ್ಲಿ ಹುಡಿಕಾಡಿ ಉಡುಪಿ ಬ್ರಾಹ್ಮಣರ ಹೊಟೆಲ್ಲು ಹೊಕ್ಕ. ಬೆಳಗಾವಿಯಂಥಲ್ಲೇ ಮರಾಠೀ ಮಾತಾಡಲು ಉತ್ಸಾಹ ತೋರುವ ಪುರೋಹಿತರ ಮಗ ಮರಾಠೀ ನಾಡಿನಲ್ಲಿ ಮರಾಠೀ ಮಾತನಾಡದಿರುತ್ತಾನೆಯೇ ? 'ಕಾಯಪಾಯಿಜೇ' (ಏನು ಬೇಕು ?) ಎಂದ ಮಾಣಿಗೆ 'ಕೋಣ ಕೋಣ ಆಹೇ ?' (ಯಾರು ಯಾರು ಇದ್ದಾರೆ ?) ಎಂದು ಪ್ರಶ್ನೆ ಹಾಕಿದ. ಮಾಣಿಗೆ ಗೊಂದಲವಾಗಿ, "ತುಮ್ಹಾಲಾ ಕೋಣ ಪಾಯಿಜೆ ?" (ನಿಮಗೆ ಯಾವು ಬೇಕು ?) ಎಂದು ಕೇಳಿದೊಡನೆ ಇವನು 'ಹಮಾಲ ಚಕ್ಕಲೀ ಪಾಯಿಜೇ' ಅಂದನಂತೆ. ಮಾಣಿ ಹಣಿ ಹಣಿ ಬಡಿದುಕೊಂಡು 'ರಾಯರs....ನಿಮಗ ಮರಾಠೀ ಬರದಿದ್ದರ ಕನ್ನಡ ಮಾತಾಡರಲ್ಯಾ....' ಎಂದು ಚಕ್ಕುಲಿ ತಂದುಕೊಟ್ಟನಂತೆ. ಅಗದೀ ಕಟ್ಟಾ ಮರಾಠೀ ಪ್ರದೇಶದೊಳಗೆ ಕನ್ನಡ ತಿಳಿಯುವವೇ ಇಲ್ಲವೆನ್ನುವ ಪ್ರದೇಶದಲ್ಲಿ ನಾವು ಮರಾಠೀ ಬರದೇ ಚಕ್ಕಲಿಯನ್ನು ಪರ್ಸಾನಿಫಿಕೇಶನ್‌ಗೆ ಒಳಪಡಿಸುವ ತಪ್ಪು ಮಾಡಿದರೆ ಪರವಾಯಿಲ್ಲ ಎನ್ನಬಹುದು. ಆದರೆ ಗಡಿಪ್ರದೇಶದಲ್ಲಿ

ಅದೂ ಉಡುಪಿ ಹೊಟೆಲ್ಲಿನ ಬೋರ್ಡ್ ನೋಡಿ ಒಳಹೊಕ್ಕು ಮರಾಠೀ ಮಾತಾಡಿ ಚಕ್ಕುಲಿರಾಯರನ್ನು ಅಪೇಕ್ಷೆ ಪಟ್ಟರೆ ಹೇಗೆ ? (ಬೆಳಗಾವಿಯ ಅನೇಕ ಕನ್ನಡಿಗರು ಕನ್ನಡ ಬರುವ ಮರಾಠೀ ಮಿತ್ರರೊಂದಿಗೆ ಉತ್ಸಾಹದಿಂದ ತಪ್ಪು ತಪ್ಪಾಗಿ ಮರಾಠೀ ಮಾತಾಡುವದನ್ನು ದಾರಿಗುಂಟ ಕಾಣಬಹುದು.

ನಮ್ಮ ಪುರೋಹಿತರ ಮಾತು ಬಿಡಿ. ನನ್ನ ತಂದೆ ಹೊಸದಾಗಿ ಬೀಗರಾಗುತ್ತಿದ್ದ ಯಜಮಾನರೊಬ್ಬರ ಜೊತೆಗೂ ಇದರ ಬಗ್ಗೆ ಜಗಳಾಡಿದ ಸಂಗತಿ ಹೀಗಿದೆ. ಅದೇ ಬೆಳಗಾವಿಯಲ್ಲಿರುವ ತನ್ಮಯತೆಯಿಂದ ಮರಾಠೀ ಮಾತಾಡುವ ಅಕ್ಕನ ಮಾತು ಹೇಳಿದ್ದೆನಲ್ಲ– ಆ ಅಕ್ಕನ ಮದುವೆಯ ಮಾತುಕತೆಯ ಸಂದರ್ಭ. ಚಿಕ್ಕೋಡಿ ತಾಲ್ಲೂಕಿನ ಗಡಿಭಾಗದ ಸದಲಗಾ ನಮ್ಮ ಬೀಗರ ಊರು. ನನ್ನ ಭಾವನ ತಂದೆ ಅಕ್ಕನಿಗೆ 'ನಿನಗ ಮರಾಠೀ ಬರತೇತೇನವ್ವಾ....' ಅಂತ ಕೇಳಿದರು. ಅಕ್ಕ 'ಹೂಂ' ಎಂದು ಗೋಣು ಹಾಕುವ ಮೊದಲೇ ನಮ್ಮ ತಂದೆ ಒಂದು ಪ್ರಶ್ನೆ ಒಗೆದರು. 'ಮರಾಠೀ ಯಾಕ ಬರಬೇಕು ?' ಅರೇ ! ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಗೆ ಹೀಗೆ ಮುಕ್ತವಾಗಿ ಪ್ರಶ್ನೆ ಮಾಡಬಹುದೇ !? ಅದೂ ಪಂಥಾಹ್ವಾನದ ಧ್ವನಿಯಲ್ಲಿ ! ನಮ್ಮ ಭಾವನ ತಂದೆಯವರು ಅಪ್ಪನ ಈ ಮಾತು ಕೇಳಿ ಗೊಂದಲಕ್ಕೊಳಗಾದರು. ಅವರಿಗೆ ಬೇರೆ ಯಾವದೇ ಕಾರಣ ಹೊಳೆಯಲಿಲ್ಲವೋ ಏನೋ– 'ಅಲ್ಲ.... ಭಾಷಾಗೋಳ ಬರಬೇಕ....ಭಾಷಾಗೋಳ ಬಂದಷ್ಟ ಪಾಡ....' ಅಂತ ಹೇಳಿದರು. ಕೂಡಲೇ ನಮ್ಮ ತಂದೆ 'ಹೌದ್ರೆಪ್ಪಾ.... ಭಾಷಾಗೋಳ ಬಂದಷ್ಟು ಛಲೋ. ಆದರ ನೀವು ಮರಾಠೀನs ಬರಬೇಕು ಅಂತ ಯಾಕ ಕೇಳತೀರಿ. ಹಿಂದೀ ಬರತದೇನ ಅಂತ ಯಾಕ ಕೇಳಲಿಲ್ಲ ?.... ಉರ್ದೂ ತಮಿಳು ಬರತಾವೇನು ಅಂತ ಯಾಕ ಕೇಳಲಿಲ್ಲ....' ಅಂತ ಕೇಳಲಿಕ್ಕೆ ಸುರು ಮಾಡಿದಾಗ ಯಜಮಾನರು ಮರಾಠೀ ಬರುವ ಪ್ರಶ್ನೆಯನ್ನು ಕೈಬಿಟ್ಟು ಬ್ಯಾರೇ ಮಳೀ ಬೆಳಿಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡರು.

ಹಿಂಗೆ.... ನಮ್ಮ ಮನೆಯಲ್ಲಿ ಭಾಷೆಯ ಬಗ್ಗೆ– ಭಾಷೆಯ ಅಭಿಮಾನ ದುರಭಿಮಾನ–ನಿರಭಿಮಾನದ ಬಗ್ಗೆ ಚರ್ಚೆ ಏರ್ಪಡುತ್ತ ನನ್ನ ಮನಸಿನೊಳಗೆ ಈ ಮರಾಠಿಯ ಬಗ್ಗೆ ಗುಪ್ತಗಾಮಿಯಾಗಿ ಒಂದು ತರದ ನಿರುತ್ಸಾಹ ಬೆಳೆದು ಬಂದಿತ್ತು. ಅದಕ್ಕೇ ಬೆಳಗಾವಿಯ ರಾಣೀಪಾರ್ವತಿದೇವಿ ಕಾಲೇಜಿನ ಕ್ಯಾಂಪಸ್ಸಿನ ದಟ್ಟವಾದ ಮರಾಠೀ ಪ್ರಭಾವದಲ್ಲಿ ಮರಾಠೀ ಮಾತಾಡುವ ಗೆಳೆಯ ಗೆಳತಿಯರೊಂದಿಗೆ ಎರಡು ವರ್ಷಗಳಷ್ಟು ಕಾಲ ಕಳೆದರೂ ಅಧಿಕೃತವೆನ್ನಿಸುವಷ್ಟು ಹೋ

ಗಲಿ ಅನಧಿಕೃತ ಎಂಬಷ್ಟು ಕೂಡ ಮರಾಠಿಯನ್ನು ನಾನು ಕಲಿಯದೇ ಹೋದೆ. ನನ್ನ ಗೆಳೆಯ ಮೋಹನ ಯಲ್ಲಪ್ಪಾ ಮಾಂಡವಿಯಾಗಲೀ, ಪಾಸೋಲ್ಕರ್ ಆಗಲೀ ಗೆಳತಿ ಮಾಧುರಿ ಗೋಖಲೆ, ನೀಲ ಫಡ್ನೀಸ್ ಶೈಲಾನಾಯಿಕ್ ಆಗಲೀ ಮರಾಠೀ ಭಾಷೆಯನ್ನು ಮಾತೃಭಾಷೆಯಾಗಿ ಮಾತಾಡುವವರು. ಇವರೆಲ್ಲರೂ ನನ್ನನ್ನು ಮಾನಸಿಕವಾಗಿ ಮರಾಠೀ ಮಾತಾಡುವಂತೆ ಪ್ರೇರೇಪಿಸಲೇ ಇಲ್ಲ. ಬದಲಾಗಿ ಮರಾಠಿ ಬಗೆಗಿನ ನಿರುತ್ಸಾಹವನ್ನು ಕನ್ನಡದ ಬಗೆಗಿನ ಪ್ರೀತಿ ಅಂದು ಕೊಳ್ಳುತ್ತ ಅದನ್ನು ತಾವು ಒಪ್ಪಿಕೊಳ್ಳುತ್ತೇವೆ ಎನ್ನುವಂತೆ ನಡೆಯುತ್ತ ಬಂದರು. ಮಾಂಡವಿಗೆ ನನಗೆ ಮರಾಠೀ ಕಲಿಸೆಂದು ಕೇಳಿದರೆ ಅವನು-ಇಲ್ಲ. ನಿನ್ನಿಂದ ನಾನು ಕನ್ನಡ ಕಲಿಯಬೇಕು ಎಂದು ಹೇಳಿ ಮರಾಠೀ ಕಲಿಕೆಯ ನನ್ನ ತೋರಿಕೆಯ ಪ್ರಯತ್ನವನ್ನೂ ಭಂಗಗೊಳಿಸಿಬಿಟ್ಟ. ಮಾಧುರಿ ಗೋಖಲೆ ಅಚ್ಚ ಮರಾಠಿಗಳು. ಕನ್ನಡ ಅಕ್ಷರಗಳ ಮುಖ ನೋಡಿದವಳಲ್ಲ. ಅವಳು ಕನ್ನಡ ಬರುವ ಒಬ್ಬ ಗೆಳತಿಯನ್ನು ಹುಡುಕಿಕೊಂಡು ಒಂದು ವಾರದಷ್ಟು ಕಾಲ ತನಗೆ ಬೇಕಾಗುವ ಕನ್ನಡ ಅಕ್ಷರಗಳನ್ನು ಕಲಿತುನನ್ನ ಆಟೋಗ್ರಾಫಿನಲ್ಲಿ ಕನ್ನಡದಲ್ಲಿ ಬರೆದು ನನ್ನ ಅಂದಿನ ಹೃದಯಕ್ಕೆ ಅತೀವ ನಿರಾಸೆಯನ್ನುಂಟು ಮಾಡಿದ್ದು ಅದು ಬೇರೆ ಕಥೆ. ಅದು ಬಿಡಿ. ಒಟ್ಟು ತಾತ್ಪರ್ಯವೆಂದರೆ ನನ್ನ ಗೆಳೆಯರ್ಯಾರೂ ಮರಾಠಿಯನ್ನು ನನಗೆ ಅನಿವಾರ್ಯವಾಗಿಸಲಿಲ್ಲ. ಅದಕ್ಕೆ ಮರಾಠಿಯೊಂದಿಗಿನ ನನ್ನ ಸಂಬಂಧ ಚ್ಯಾಷ್ಟಿಯ ಸ್ವರೂಪದ್ದಾಗಿಯೇ ಉಳಿಯಿತು. ಲ್ಯಾಬಿಗೆ ಮಾಂಡವೀ ತಡವಾಗಿ ಬಂದಾಗ ಅವನು ಬಂದೊಡನೆ 'ಮಾಂಡವೀ ಆಲೀ' ಎಂದು ಘೋಷಿಸಿ ಮರಾಠೀ ಮಾತಾಡುವ ಗೆಳೆಯರನ್ನೆಲ್ಲ ನಗಿಸುವ ಮಟ್ಟಕ್ಕೆ ಉಳಿಯಿತು. ಯಾರೋ–ಮಾಧುರಿ ಎಂದು ಕಾಣುತ್ತದೆ – ಮಾಂಡವೀ ಆಲೀ ಅಲ್ಲ ಮಾಂಡವೀ ಆಲಾ ಎಂದು ಹೇಳಬೇಕು ಎಂದು ತಿದ್ದಲು ಬಂದಾಗ– ಮಾಂಡವೀ ಎಂಬುದು ಈ ಕಾರಾಂತಪದ – ಈ-ಕಾರಾಂತ ಪದ ಸ್ತ್ರೀಲಿಂಗದ್ದೆಂದು ತರಲೆಯ ವ್ಯಾಕರಣ ಹೇಳಿ ಅವಳಿಗೆ 'ಗುಸ್ಸಾ' ಬರಿಸಿದ್ದೆ.

•

ರಾಣೀ ಪಾರ್ವತಿ ದೇವಿ ಕಾಲೇಜಿನ ಆವರಣದಲ್ಲಿ ಒಮ್ಮೆ ಮಾತ್ರ ನಾವೆಲ್ಲ ಈ ಕನ್ನಡ–ಮರಾಠೀ ಭಾಷೆಗಳ ಹಿಡಿತಕ್ಕೆ ಸಿಕ್ಕುಬಿದ್ದಿದ್ದೆವು. ಆ ನೆನಪು ಇಂದಿಗೂ ನನ್ನಲ್ಲಿ ಗಾಬರಿಯನ್ನು ಮೂಡಿಸುತ್ತದೆ.... 1970 ರ ವರ್ಷ. ನಮ್ಮ ಕಾಲೇಜುಗಳ ವಿದ್ಯಾರ್ಥಿ ಸಂಘದ ಚುನಾವಣೆ. ಆರ್ಟ್ಸ್ ಕಾಲೇಜಿಗೆ ಕನ್ನಡದ ಹುಡುಗನೊಬ್ಬ ಚೌಧರಿ ಎಂದವನಾ ಹೆಸರು - ಜನರಲ್ ಸೆಕ್ರೆಟರಿಯಾಗಿ ಆಯ್ಕೆಯಾಗಿಬಿಟ್ಟ. ಗಲಾಟೆ ಸುರುವಾಯಿತು. ಆರ್ಟ್ಸ್ ಕಾಲೇಜಿನ ವಿದ್ಯಾರ್ಥಿಗಳ ಒಂದು ಗುಂಪು

ಚುನಾವಣೆಯನ್ನು ಅಸಿಂಧುಗೊಳಿಸಬೇಕೆಂದು ಒತ್ತಾಯ ತರತೊಡಗಿತು.... ನಿಜ ಹೇಳಬೇಕೆಂದರೆ– ನನ್ನ ಕ್ಲಾಸಿನವರಾಗಲೀ ಅಥವಾ ಒಟ್ಟು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾಗಲೀ ಕನ್ನಡ–ಮರಾಠೀ ಎನ್ನುವ ಯಾವ ಪ್ರಶ್ನೆಗಳ ಈ ಗಲಾಟೆಯನ್ನು ತಲೆಗೇ ಹಚ್ಚಿಕೊಂಡಿರಲಿಲ್ಲ.... ಇಂಥ ಈ ಗಲಾಟೆಯು ಒಂದು ಬೆಳಗಿನ 10 ಗಂಟೆಯಷ್ಟೊತ್ತಿಗೆ ನಾವು ಪ್ರಾಕ್ಟಿಕಲ್ಸ್ ಮುಗಿಸಿಕೊಂಡು ಲ್ಯಾಬಿನಿಂದ ರೂಮಿಗೆ ಹೊರಟೆವು. ನಮ್ಮ ಕಾಲೇಜಿನ ಒಂದು ಚಿತ್ರ ಕೊಡುತ್ತೇನೆ. ನೋಡಿ ... ದೊಡ್ಡ ಬಯಲನ್ನು ಮುಂದಕ್ಕೆ ಇಟ್ಟುಕೊಂಡು ನಿಂತ ಒಂದು ಕಲ್ಲು ಕಟ್ಟಡ. (ಹಿಂದೆ ಇದು ಅರಮನೆಯಾಗಿತ್ತು). ಅದರ ಹಿಂಬದಿಗೆ ಮತ್ತು ಬಲಗಡೆಗೆ ಇತ್ತೀಚಿನ ಕಾಂಕ್ರೀಟಿನ ಹೊಸಕಟ್ಟಡಗಳು. ಎಡಗಡೆಗೆ ಒಂದು ದೊಡ್ಡ ಮಾವಿನ ತೋಪು. ಇಡೀ ಕಾಲೇಜಿನ ಆವರಣಕ್ಕೆ ತಂತಿಯ ಬೇಲಿ. ಹೊರಗೆ ಹೋಗಲು ಎರಡು ದಾರಿಗಳು. ಎರಡು ಗೇಟುಗಳು..... ವಿಷಯಾಂತರಕ್ಕೆ ದಯವಿಟ್ಟು ಕ್ಷಮಿಸಿ.... ಎರಡು ಗೇಟುಗಳ ಬಗ್ಗೆ ಹೇಳುವಾಗ ಇದೆಲ್ಲ ನೆನಪು ನುಗ್ಗಿದ್ದು.... ಈ ಎರಡು ಗೇಟುಗಳಲ್ಲಿ ಒಂದು ಗೇಟಿನತ್ತ ನಾವು ನಡೆದಿದ್ದರೆ– ಹಳೆಯ ಅರಮನೆಯ ಮುಂದೆ ಗಲಾಟೆ ನಡೆದಿತ್ತು. ಆರ್ಟ್ಸ್ ಕಾಲೇಜಿನ ಪ್ರಾಚಾರ್ಯರಾದ ಪ್ರಾ. ಗಸ್ತರಿಯವರು ಗುಂಪಿಗೆ ಬುದ್ಧಿ ಹೇಳುತ್ತಿದ್ದರು. ಆ ಗುಂಪಿನಲ್ಲಿನ ಒಂದು ಕೈ ತಾಳಲಾರದೇ ಗಸ್ತರಿಯವರ ಮಿಂಚುವ ತಾಮ್ರದ ತಂಬಿಗೆಯಂತಹ ತಲೆಯಿಂದ ಆಕರ್ಷಿತವಾಗಿ ಒಂದು ಕಲ್ಲು ಎಸೆಯಿತು. ಗಸ್ತರಿಯವರ ತಲೆ ಒಡೆಯಿತು ಅವರು ಒಂದು ಕೈಯಿಂದ ತಲೆಯ ಗಾಯವನ್ನು ಒತ್ತಿಕೊಳ್ಳುತ್ತ ಇನ್ನೊಂದು ಕೈಯನ್ನು ಮೇಲಕ್ಕೆತ್ತಿ ಬೀಸಿದರು. ನಾವು ಇದನ್ನೆಲ್ಲ ತಮಾಷೆಯಂತೆ ನೋಡುತ್ತಾ ಗೇಟಿನ ಕಡೆಗೆ ಚಲಿಸುತ್ತಿರಬೇಕಾದರೆ ಒಮ್ಮೆಲೆ ಮುಂಭಾಗದಲ್ಲಿ ಧಪ್–ಧಪ್... ಎಂದು ಸಾಗಿಬರುವ ಬೂಟಿನ ಸದ್ದು ಕೇಳಿಸಿದವು.... ನೋಡಿದರೆ.... ಅಯ್ಯಯ್ಯಪ್ಪ.... ಇಷ್ಟುದ್ದ ಲಾಠೀ ಚಾಚಿಕೊಂಡ ಪೋಲೀಸರು ಎರಡೂ ಗೇಟುಗಳಿಂದ ನುಗ್ಗಿ ಓಡಿಬರುತ್ತಿದ್ದಾರೆ! ನಾವು ತಿರುಗಿ ಓಡತೊಡಗಿದೆವು. ನನ್ನ ಹಿಂದೆ ಒಬ್ಬ ಪೋಲೀಸ್ ಬೆನ್ನು ಹತ್ತಿದ.... ಇನ್ನೇನು ಲಾಠಿಯಳತೆಯಷ್ಟೇ ದೂರ.... ಇನ್ನೇನು ಬೆನ್ನು ಮುರಿಯುತ್ತದೆ ಅಂದುಕೊಂಡೆ ದೇವರೇ! ಆ ಮರಾಠಿ ಹುಡುಗನಿಗೆ ಒಳ್ಳೆಯದನ್ನು ಮಾಡು.... ಗಲಾಟೆಯ ಗುಂಪಿನ ಒಬ್ಬ ಮರಾಠೀ ಹುಡುಗ ನನ್ನ ಬೆನ್ನಟ್ಟಿದ ಪೋಲೀಸನಿಗೆ ಒಂದು ಕಲ್ಲು ಬೀಸಿದ. ಕಲ್ಲು ಬೀಸಿ ನನ್ನನ್ನು ಬದುಕಿಸಿದ. ಪೋಲೀಸ್ ನನ್ನನ್ನು ಬಿಟ್ಟು ಆ ಹುಡುಗನ ಬೆನ್ನಟ್ಟಿದ ಬದುಕಿದ ಬಡ ಜೀವ ಖುಷಿಪಟ್ಟು ಓಡಿ ಆಫೀಸಿನ ಹತ್ತಿರ ಬರುತ್ತಿದ್ದಂತೆಯೇ ಮರಾಠೀ ಮನಶಾ ರಾಮದಾಸ್ ಜೋಶೀ ಮರಾಠೀ ಬರದ ನನ್ನನ್ನು (ನನಗೆ

ಮರಾಠೀ ಬರುವುದಿಲ್ಲವೆನ್ನುವನು ಅವರಿಗೆ ಖಂಡಿತ ಗೊತ್ತಿತ್ತು). 'ಲೌಕರ್ ಲೌಕರ್ ಆತಯ್ಯಾ ' ಅಂತ ಅವಸರಿಸಿ ಆಫೀಸಿನೊಳಗೆ ಕರೆದುಕೊಂಡು ಬಾಗಿಲು ಮುಚ್ಚಿ ಪೋಲೀಸರಿಂದ ರಕ್ಷಣೆ ನೀಡಿದರು ಆಫೀಸಿನಲ್ಲಿ ಸೇರಿದ ನಾವುಗಳು ಮರಾಠಿಯೊಳಗೆ ಪಿಸುಗುಟ್ಟುವದೋ ಕನ್ನಡದೊಳಗೆ ಪಿಸುಗುಟ್ಟುವದೋ ಎನ್ನುವದು ತಿಳಿಯದೇ ಮೂಕರಾಗಿ ಪಿಳಿ ಪಿಳಿ ಕಣ್ಣು ಬಿಡುತ್ತ ನಿಂತು ಬಿಟ್ಟಿದ್ದೆವು.

ಈ ಭಾಷೆ ಅನ್ನುವದು ಹೇಗೆ ಹೃದಯಕ್ಕೆ ಅಂಟಿಕೊಂಡು ಬಿಡುತ್ತದೋ ಯಾರಿಗೆ ಗೊತ್ತು ! ನನ್ನ ಮಹಾರಾಷ್ಟ್ರದ ಪ್ರವಾಸ ಮುಗಿಸಿಕೊಂಡು ಊರಿಗೆ ಬರುವ ಹಾದಿಯಲ್ಲಿ ಬೆಳಗಾವಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಏರ್ಪಡಿಸುತ್ತಿದ್ದ ಕನ್ನಡ ಮರಾಠೀ ಭಾಷಾ ಬಾಂಧವ್ಯ ಕುರಿತ ವಿಚಾರ ಸಂಕಿರಣಕ್ಕಾಗಿ ಉಳಿದುಕೊಂಡೆ. ಕನ್ನಡ-ಮರಾಠಿಯ ಅನೇಕ ಲೇಖಕರು, ಒಟ್ಟಿಗೆ ಸೇರಿದ್ದರು. ಮರಾಠೀ ವಿಮರ್ಶಕ ಪ್ರಾಧ್ಯಾಪಕ ಹಾತಕಣಗಲೇಕರ್ ಅವರು ಸಂಕಿರಣದ ಉದ್ಘಾಟಕರು ಕನ್ನಡದ ಶ್ರೇಷ್ಠ ಸಾಹಿತಿ ಶ್ರೀ ಯಶವಂತ ಚಿತ್ತಾಲರದೇ ಉದ್ಘಾಟನಾ ಸಭೆಯ ಅಧ್ಯಕ್ಷತೆ. ಹಾತಕಣಗಲೇಕರ್ ಅವರು ತಮ್ಮ ಉದಾಟ್ಟನಾ ಭಾಷಣವನ್ನು ಇಂಗ್ಲೀಷ್‌ನಲ್ಲಿ ಸಿದ್ಧಪಡಿಸಿಕೊಂಡು ತಂದಿದ್ದರು. ಅವರು ತಮ್ಮ ಭಾಷಣವನ್ನು ಆರಂಭಿಸುತ್ತಿದ್ದಂತೆಯೇ ಮರಾಠೀ ಮನುಷ್ಯನೊಬ್ಬ ಎದ್ದು ನಿಂತು- 'ನೀವು ಮರಾಠೀ ಸಾಹಿತಿ ಅಲ್ಲವೆ ? ಮರಾಠೀ ಭಾಷೆಯಲ್ಲಿ ಯಾಕೆ ಮಾತಾಡುತ್ತಿಲ್ಲ..?' ಅಂದ. ಇನ್ನೊಂದಿಷ್ಟು ಜನ ಎದ್ದು ಅದನ್ನೇ ಹೇಳಿದರು. ಸಭೆಯಲ್ಲಿ ಗುಜುಗುಜು ಆರಂಭವಾಯಿತು. ಹಾತಕಣಗಲೇಕರ್ ಅವರು ಏನು ಮಾಡಬೇಕೆಂದು ತೋಚದವರಂತೆ ನಿಂತುಕೊಂಡರು. ಯಾಕೆಂದರೆ ಮುಖ್ಯವಾಗಿ ಅವರ ದೃಷ್ಟಿಯಲ್ಲಿ ಮರಾಠೀ ಬಾರದ ಕನ್ನಡ ಲೇಖಕರಿದ್ದರು. ಆಗ ಶ್ರೀ ಗಿರಡ್ಡಿ ಗೋವಿಂದರಾಜ್ ಅವರು ಎದ್ದು ನಿಂತು 'ನಮಗೆಲ್ಲಾ ಮರಾಠೀ ತಿಳಿಯೂದುಲ್ಲರೆಪಾ.... ಬ್ಯಾರೇ ಬ್ಯಾರೇ ಕಡಿಂದ ಬಂದೀವು.... ಅವರು ಏನಹೇಳತಾರ ಅನ್ನೂದು ನಮಗ ತಿಳಿಯಬೇಕಲ್ಲಾ' ಅಂದರು. ಮರಾಠೀ ಭಾಷೆ- ಜನದ ಬಗ್ಗೆ ತಿಳುವಳಿಕೆ-ಪ್ರೀತಿಗಳಿಸಿಕೊಳ್ಳಲೆಂದು ಇಪ್ಪತ್ತು ದಿನಗಳಷ್ಟು ಕಾಲ ಮಹಾರಾಷ್ಟ್ರದಲ್ಲಿ ಪ್ರವಾಸ ಮಾಡಿ ಬಂದ ನಾನೂ ಎದ್ದು ನಿಂತು ಗಿರಡ್ಡಿಯವರೊಂದಿಗೆ ಧನಿಕೂಡಿಸಿದೆ. ಸಭೆಯ ಅಧ್ಯಕ್ಷತೆ ವಹಿಸಿದ ಶ್ರೀ ಯಶವಂತ ಚಿತ್ತಾಲರು ಕಣಗಲೇಕರ್ ಹೇಳಿದ್ದನ್ನು ನಂತರ ತಾವು ಸಂಗ್ರಹಿಸಿ ಕನ್ನಡದಲ್ಲಿ ಹೇಳುವದಾಗಿಯೂ ಆದ್ದರಿಂದ ಅವರು ಮರಾಠಿಯಲ್ಲಿ ಮಾತಾಡಬಹುದೆಂದು ಸೂಚಿಸಿದರು. ಕನ್ನಡ ಮುಂದಿಗೆ ಇದು ತನ್ನ ಸೋಲು ಅನಿಸಿಬಿಟ್ಟಿತು. ಅವರು ಇಂಗ್ಲೀಷ್‌ನಲ್ಲಿಯೇ ಭಾಷಣ

ಇರಲೆಂದು ಪ್ರತಿಪಾದಿಸಿದರು. ರಾಜೀ ಸೂತ್ರ ಏರ್ಪಟ್ಟು ಕೊನೆಗೆ ಪ್ರಾ. ಹಾತಕಣಗಲೇಕರ್ ಅವರು ಒಂದು ವಾಕ್ಯ ಇಂಗ್ಲೀಷ್‌ನಲ್ಲಿ ಹೇಳಿ ಅದನ್ನೇ ಮರಾಠಿಯಲ್ಲಿ ಪುನರುಚ್ಚರಿಸುವ ಪದ್ಧತಿ ಅನುಸರಿಸಿದರು. ದಾರಿಯ ಮಗ್ಗಲಿನ ಹಾವಾಡಿಗ- ನಾರು ಬೇರು ಮಾರುವ ಜಾದೂಗಾರರ ಭಾಷಣವಾಗಿ ಹೋಯಿತದು. ನಮಗೂ ರುಚಿಸಲಿಲ್ಲ. ಅವರಿಗೂ ರುಚಿಸಿರಲಿಕ್ಕಿಲ್ಲ. ಈ ರೀತಿಯನ್ನು ಪ್ರತಿಭಟಿಸುತ್ತ ಮರಾಠಿಯ ಒಂದಿಬ್ಬರು ಕವಯಿತ್ರಿಯರು ಸಭಾತ್ಯಾಗ ಮಾಡಿದರು. ಈ ಗದ್ದಲವನ್ನೆಲ್ಲ ಮಸಾಲೆ ಸೇರಿಸಿ ಮರುದಿವಸದ 'ತರುಣಭಾರತ' ಮರಾಠೀ ಪತ್ರಿಕೆಯು ವರದಿ ಮಾಡಿತು. ಈ ವರದಿಯೊಂದಿಗೆ ಅವರು ಛಾಪಿಸಿದ ಫೋಟೋ ಸಭಾಂಗಣದಲ್ಲಿದ್ದ ಅವರು ಖಾಲೀ ಕುರ್ಚಿಗಳದು. ಸಭೆ ಮುಗಿದಾದ ಮೇಲೆ ತೆಗೆದುಕೊಂಡ ಫೋಟೋ ಅದು.. ಕನ್ನಡ ಕಾರ್ಯಕ್ರಮಕ್ಕೆ ಯಾರೂ ಬರುವದಿಲ್ಲ- ಕನ್ನಡಿಗರು ಬೆಳಗಾವಿಯಲ್ಲಿ ಅಲ್ಪ ಸಂಖ್ಯಾತರು ಎಂದು ಬಿಂಬಿಸಲು ಗಡಿಪ್ರದೇಶದ ಮರಾಠಿ ಪತ್ರಿಕೆಗಳು ಅಳವಡಿಸಿಕೊಂಡಿರುವ ತಂತ್ರಗಳಲ್ಲಿ ಇದೂ ಒಂದು.

....ನನಗೆ ಈ ಒಟ್ಟು ಘಟನಾವಳಿಗಳ ಬಗ್ಗೆ ಸಂದಿಗ್ಧ ಉಂಟಾಗಿದೆ. ಮರಾಠೀ ಗೆಳೆಯರು ಹೇಳುವದು- ಅಂದರೆ ಪ್ರಾಧ್ಯಾಪಕ ಹಾತಕಣಗಲೇಕರ್ ಅವರು ಮರಾಠಿಯಲ್ಲಿ ಮಾತಾಡಬೇಕನ್ನುವದು ಸರಿಯಲ್ಲವೆ? ಕನ್ನಡ-ಮರಾಠೀ ಭಾಷಾ ಬಾಂಧವ್ಯದ ವರ್ಧನೆಗಾಗಿನ ಆ ಸಭೆಯಲ್ಲಿ ಅವೆರಡೂ ಭಾಷೆ ಬಿಟ್ಟು ಇಂಗ್ಲೀಷ್‌ನಲ್ಲಿ ಉದ್ಘಾಟನಾ ಭಾಷಣ ಇರಬೇಕೆಂದು ವಾದಿಸಿದ್ದು - ಅದೂ ಚಿತ್ತಾಲರು ಹಾತಕಣಗಲೇಕರ್ ಅವರ ಮಾತುಗಳನ್ನು ನಂತರ ಕನ್ನಡದಲ್ಲಿ ತಿಳಿಸುವದಾಗಿ ಹೇಳಿದರೂ ಅದನ್ನು ಒಪ್ಪದೇ ಹೋದದ್ದು ಸರಿಯೆ? ಆದರೆ 'ತರುಣಭಾರತ' ಪತ್ರಿಕೆಯ ವರದಿ ಮತ್ತು ಅದರೊಂದಿಗೆ ಬಂದ ಫೋಟೋಗಳು ಈ ಮರಾಠಿ ಗೆಳೆಯರ ಉದ್ದೇಶವನ್ನು ಸ್ಪಷ್ಟಪಡಿಸಿದಾಗ ಸಭೆಯಲ್ಲಿನ ಅವರ ನಡವಳಿಕೆ ಗೊಂದಲ ಹುಟ್ಟಿಸುವ ಉದ್ದೇಶದ್ದಾಗಿ ತೋರಲಾರದೆ?.... ಏನೋ! ಬೆಳಗಾವಿ ನಾಡಿನಲ್ಲಿ ಹುಟ್ಟಿ ಬೆಳೆದ ನಾವು ಇದಕ್ಕಿಂತ ಭಿನ್ನವಾಗಿ ಪ್ರತಿಕ್ರಿಯಿಸಲಾರೆವು. ಅದು ನಮ್ಮೆಲ್ಲರಲ್ಲಿನ ಸಹಜ ರಿಫ್ಲೆಕ್ಸ್.... ಬೆಳಗಾವಿಯಂಥ ಸುಂದರ ನಗರ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಹೇಳುತ್ತಿರುವ ಮರಾಠೀ ಗೆಳೆಯರ ಸದುದ್ದೇಶದ ಕ್ರಿಯೆಗಳೂ ನಮ್ಮಲ್ಲಿ ಸಂಶಯವನ್ನು ಮೂಡಿಸುವಾಗ ಇನ್ನು ಕನ್ನಡದ ಸಭೆಯಲ್ಲಿ ಗೊಂದಲಕ್ಕೆ ಕಾರಣವಾಗುವ ನಡಾವಳಿಕೆಗಳಿಗೆ ಬೇರೆ ಹೇಗೆ ಪ್ರತಿಕ್ರಿಯಿಸುವದು ಸಾಧ್ಯವಾದೀತು?

ಕರ್ನಾಟಕ ಸಾಹಿತ್ಯ ಅಕಾಡೆಮಿಯು ನನಗೆ ಮಹಾರಾಷ್ಟ್ರದಲ್ಲಿ ಪ್ರವಾಸ ಕೈಕೊಳ್ಳಲು ಅನುದಾನ ನೀಡುವದಾಗಿ ತಿಳಿಸಿದ ನಂತರ, ನನಗೆ, ನಾನು ಬೆಳಗಾವಿಯಲ್ಲಿ

ದ್ದಾಗ ಮರಾಠೀ ಕಲಿಯುವ್ದರ ಬಗ್ಗೆ ಜೋದ್ಯವೆನಿಸಿತು. ಯಾಕೆ ನಾನು ಹಾಗೆ ಮಾಡಿದ್ದಿರಬಹುದು ಎಂಬ ರಿಟ್ರಾಸ್ಪೆಕ್ಟ್‌ಗೆ ತೊಡಗಿದಾಗ ಬಂದ ನೆನಪಿನ ತುಣು ಕುಗಳು ಇವು. ಮರಳಿ ಬರುವಾಗಿನ ಬೆಳಗಾವಿಯಲ್ಲಿನ ಅನುಭವಕ್ಕಿಂತ ತುಂಬ ಭಿನ್ನವಾದ ಅನುಭವ ಪ್ರವಾಸದ ಸಂದರ್ಭದಲ್ಲಿ ದೊರೆಯಿತು. ಪುಣೆಯಲ್ಲಿ ಭೆಟ್ಟಿ ಯಾದ ಪರೋಡಾದ ಬಾಬಾ ಆರ್ಟ್ಸ್ ಕಾಲೇಜಿನ ಮರಾಠೀ ಪ್ರಾಧ್ಯಾಪಕರಾದ ಪ್ರೋ. ದ. ಪೇಶಮುಖರ ನೆನಪು ಬರುತ್ತದೆ. ಎಷ್ಟು ಕಡಿಮೆ ಕಾಲ ಸಾಕಾಯಿ ತು ನಾವು ಗೆಳೆಯರಾಗಲು! ಎಷ್ಟು ಬೇಗ ಆ ಹಿರಿಯರು ನನಗೆ ಅಂಟಿಕೊಂಡರು! ಹಿರಿಯ ಕವಿ ನಾರಾಯಣ ಸುರ್ವೆ, ಕೇಶವ ಮೆಶ್ರಾಮರ ಜೊತೆಗಿನ ಸೌಹಾರ್ದ ಯುತ ಸಂವಾದಕ್ಕೆ ಭಾಷೆ ಯಾಕೆ ಅಡ್ಡ ಬರಲಿಲ್ಲ? ಕವಿ ವಿಂದಾ ಕರಂದೀಕರರು ಫೋಟೋ ತೆಗೆಸಿಕೊಳ್ಳುವೆಂದೊಡನೆ ಇಸ್ತ್ರೀ ಮಾಡಿದ ಶರ್ಟ ಧರಿಸಿ ನನ್ನ ಹೆಗಲ ಮೇಲೆ ಕೈಯಿಟ್ಟುಕೊಂಡು ಪಕ್ಕಕ್ಕೆ ಅಂಟಿ ಕುಳಿತಾಗ....ಆಹ್! ನಮ್ಮಿ ಬ್ಬರ ಆ ಫೋಟೋ ತೆಗೆಯಲು ಅವರ ಹೆಂಡತಿಗೆ ನಾನು ಸ್ವಲ್ಪ ಫೋಟೋಗ್ರಾಫಿ ಹೇಳಿಕೊಟ್ಟು- ಕ್ಯಾಮರಾ ಫೋಕಸ್ ಮಾಡಿಕೊಡುವ ನೆಪದಲ್ಲಿ ಆ ಪಕ್ವ ದಂಪ ತಿಗಳನ್ನು ಅಕ್ಕ ಪಕ್ಕ ಕೂಡಿಸಿ ಅವರು ಫೋಟೋ ತೆಗೆಯುವದು ಬೇಡವೆಂದು ಹೇಳುತ್ತಿರುವಾಗಲೇ ನನ್ನ ಕ್ಯಾಮರಾದ ಫ್ಲ್ಯಾಶ್ ಝಗ್....ಎಂದು ಹೊತ್ತಿ ಆರಿದಾಗ ಅವರು ನನ್ನ ತುಂಟತನಕ್ಕೆ ಮುಗ್ಧ ನಗೆಯ ಪ್ರತಿಕ್ರಿಯೆ ತೋರಿಸಿದ್ದು ಭಾಷೆಯಾಚೆಗಿನ ಮನುಷ್ಯ ಸಂಬಂಧಗಳು. ನಾನು ಅವರ ಮೂರನೆಯದೋ ನಾಲ್ಕನೆಯದೋ ಅಂತಸ್ತಿನಲ್ಲಿನ ಮನೆಗೆ ದಡ ದಡನೆಂದು ಏರಿ ಹೋಗಿ ತೇಕು ತ್ತಲೇ, ಬಾಗಿಲಿಗೆ ಬಂದ ಅವರನ್ನೇ ವಿಂದಾ ಕಾರಂದೀಕರರ ಬಗ್ಗೆ ವಿಚಾರಿಸುತ್ತಿ ದ್ದಾಗ- young man, first sit down.... Now tell me what do you like to have?... Tea or sharbath ? ಎಂದು ಪ್ರೀತಿಯಿಂದ ಕೇಳಿ ದ್ದು ಬರೀ ಇಂಗ್ಲೀಷ್ ಭಾಷೆಯಾಗಲು ಸಾಧ್ಯವೆ?....ಅಂದರೆ ಬೆಳಗಾವಿಯಲ್ಲಿನ ಈ ಸಮಸ್ಯೆ ಭಾಷೆಯ ಆಚೆಗಿನದಿರಬಹುದೆ? ಹೌದು. ಇರಬಹುದು. ಬೆಳಗಾವಿ ಯ ಸಮಸ್ಯೆಯ ಬಗ್ಗೆ ನಾಗಪುರದ ಒಬ್ಬ ಯುವಕ ಪತ್ರಕರ್ತನನ್ನು ವಿಚಾರಿಸಿ ದರೆ ಅವನು ನಕ್ಕು ಬೆಳಗಾವಿ ಎಲ್ಲಿದ್ದರೇನು ಅಂದ.... ಅಂದ ಹಾಗೆ ಬೆಳಗಾವಿ ಅಂದಾಗ ಭಾಷೆಯ ಆಚೆಗಿನ ನೆಲ_ಆರ್ಥಿಕ ಸಂಬಂಧಗಳು-ರಾಜಕಾರಣ ಇವೆಲ್ಲ ಬರುತ್ತವಲ್ಲ. ಇವೆಲ್ಲ ನಮ್ಮ ಸಂಬಂಧದ ಹೊಲಬುಗೆಡಿಸುತ್ತಿರಬಹುದಲ್ಲವೆ?.... ಈ ಹಿತಾಸಕ್ತಿಗಳಿಗೆ ಭಾವನಾತ್ಮಕ ಹಿನ್ನೆಲೆ ಒದಗಿಸಲು ಭಾಷೆಯ ಪ್ರಶ್ನೆ ಎತ್ತು ತ್ತಿರಬಹುದು. ....ಬಹುಶಃ ನಾನು ಎಲ್ಲರಿಗೂ ಗೊತ್ತಿದ್ದುದನ್ನು ಸದ್ಯೋಜಾತ ವೆಂದು ಭ್ರಮಿಸಿ ಹೇಳುತ್ತಿರಬಹುದು...ಹಿಂಗನ್ನಿಸಲಿಕ್ಕೆ ನಾನು ಇದುವರೆಗೆ ಯೋ ಚಿಸದ್ದನ್ನು ಈಗ ಯೋಚಿಸಿದ್ದು ಕಾರಣವಾಗಿರಬಹುದು.

ಋತು ವಿಲಾಸ :

ಕಾಳಿದಾಸನ ಋತು ಸಂಹಾರದ ಅನುಸೃಷ್ಟಿ ;

ಕವಿ : ಎಚ್. ಎಸ್. ವೆಂಕಟೇಶಮೂರ್ತಿ; ಪ್ರಕಾಶನ : ಸುವಿದ್ಯಾ ಪ್ರಕಾಶನ, 7, ಸರ್ವೇಯರ್ ರಸ್ತೆ, ಬಸವನಗುಡಿ, ಬೆಂಗಳೂರು-4, 1988; ಬೆಲೆ 12-00

—ಗೌರೀಶ ಕಾಯ್ಕಿಣಿ

ಓಮರನ ರುಬಾಯಿಯಾಗಳನ್ನು ಫಿಟ್ಜ್ ಗೆರಾಲ್ಡ ಇಂಗ್ಲೀಷಿನಲ್ಲಿ ಅನುವಾದಿಸಿದಾಗ ಅದೊಂದು ಮೌಲಿಕ ಕೃತಿಯಷ್ಟೇ ಅವರ ಕಾವ್ಯವೆನಿಸಿತು. ಆದರೆ ಅದನ್ನೆ "ಉಮರನ ಒಸಗೆ"-ಯೆಂದು ಪೂಜ್ಯ ಡಿ. ವಿ. ಜಿ. ಕನ್ನಡಿಸಿದಾಗ ಅದರ ಪಾಕಕ್ಕೆ ಆ ಹದ ಆ ಸೊಗಸು ಬರಲಿಲ್ಲ. (ಅದರ ಹಳಗನ್ನಡ ತುಸು ರುಕ್ಷವೆನಿಸಿತು). ಅಂದರೆ ಅನುವಾದವೂ ಒಂದು ನವನಿರ್ಮಿತಿ ಆಗಬಲ್ಲದು-ಆಗಬೇಕು. ಮೂಲದಂತೆಯೇ ಅದಕ್ಕೂ ನಾವೀನ್ಯದೊಂದಿಗೆ ಲಾವಣ್ಯವೂ ತುಂಬಿ ಬರಬೇಕು. ಅಂಬಿಕಾತನಯದತ್ತರ "ಮೇಘದೂತ" ಹೊಸಗನ್ನಡದಲ್ಲಿ ಆ ಚಮತ್ಕಾರವನ್ನು ಮಾಡಿ ಕಾಣಿಸಿತು.

ಇದೀಗ ನಮ್ಮ ಮುಖ್ಯ ನವ್ಯ ಕವಿಗಳಲ್ಲೊಬ್ಬರಾದ ಡಾ॥ ವೆಂಕಟೇಶಮೂರ್ತಿಯವರು ಕಾಳಿದಾಸನ ಪ್ರಸಿದ್ಧ ಜನಪ್ರಿಯ ಕೃತಿ "ಋತು ಸಂಹಾರ"ವನ್ನೂ "ಋತುವಿಲಾಸ"ವೆಂಬ ಹೆಚ್ಚು ಆಕರ್ಷಕ ಹೆಸರಿನಲ್ಲಿ ಅನುವಾದಿಸಿ ಪ್ರಕಟಿಸಿ ಕನ್ನಡ ಕಾವ್ಯ ರಸಿಕರ ಮೇಲೆ ಮಹದುಪಕಾರವನ್ನು ಮಾಡಿದ್ದಾರೆ. ತಮ್ಮ ಕೃತಿಗಳಿಂದ ಈಗಾಗಲೇ ಸಹೃದಯರ ವಿಶಾಲ ಮೆಚ್ಚುಗೆಯನ್ನೂ ವಿಮರ್ಶಕರ ವಿಶೇಷ ಮನ್ನಣೆಯನ್ನೂ ಗಳಿಸಿದ ಈ ಕವಿಯ ತಲೆಗೆ ಈ ಕೃತಿ ಒಂದು ಹೆಮ್ಮೆಯ ಹೊಸ ತುರಾಯಿ.

ಮೇಘದೂತವನ್ನು ಕನ್ನಡದಲ್ಲಿ ಪುನರ್ನವೀಕರಿಸಿದ ವರಕವಿಗಳ ಕರ್ಮಕೌಶಲ್ಯದ ಪಾತಳಿಯಲ್ಲಿಯೇ ವೆಂಕಟೇಶಮೂರ್ತಿಯವರ ಕಲಾಸಿದ್ಧಿ ಕೆಲಸ ಮಾಡಿದೆ-ಭಾವಸುಂದರವೂ ಧ್ವನಿಬಂಧುರವೂ ಆದ ಒಂದು ಅಭಿಜಾತ (Classic) ಸಂಸ್ಕೃತ ಕಾವ್ಯವನ್ನು ಯಥಾವತ್ತಾಗಿ ಅನುವಾದಿಸುವದರಲ್ಲಿ. ಜತೆಗೆ ಇಂಥ ಸಾಹಸದ

ಸಾಧನೆಯಲ್ಲಿ ನಮ್ಮ ಕವಿಕುಲಗುರುಗಳನ್ನು ಸರಿಗಟ್ಟುವವರಲ್ಲಿ ಈ ಕವಿಯು ಬಗೆಗೆ ಉದ್ಗರಿಸಬಹುದು– he has arrived. ನಿಜವಾಗಿಯೂ 'ಋತುವಿಲಾಸ" ಸಿರಿಗನ್ನಡ ವಾಗ್ದೇವಿಗೆ ಅಪೂರ್ವ ಕಂಠಾಭರಣ- "ಇಂದ್ರಗೋಪಗಳ ರನ್ನದೊಡವೆ"

ಕಾಳಿದಾಸನ ಪ್ರಾಸಾದಿಕ ವೈದರ್ಭಶೈಲಿಯು ಮೂಲದ ಆರ್ಜವ, ವರ್ಣನ ಸೌಷ್ಟವಗಳನ್ನು ಕವಿ ತುಂಬ ದಕ್ಷತೆಯಿಂದ ಅಷ್ಟೇ ಪ್ರಸಾದಗುಣದೊಂದಿಗೆ ಕಾಪಾಡಿಕೊಂಡು ಬಂದಿದ್ದಾರೆ. ಬೇಂದ್ರೆಯವರು "ಮೇಘದೂತ"ದ ಮಂದಾಕ್ರಾಂತವನ್ನು ಬಿಟ್ಟು ತಮ್ಮದೇ ಆದ ಹೊಸ ಛಂದಸ್ಸಿನ ವ್ಯಾಪಕವೃತ್ತವನ್ನು ಅರ್ಥವ್ಯಕ್ತನೆಗಾಗಿ ಬಳಸಿಕೊಂಡಿದ್ದಾರೆ. ಆದರೆ "ಋತುವಿಲಾಸ"ದಲ್ಲಿ ಕವಿ ವೆಂಕಟೇಶಮೂರ್ತಿಯವರು ವಿಭಿನ್ನ ವೃತ್ತಗಳನ್ನು ಪ್ರತಿಸರ್ಗಕ್ಕೂ ಪ್ರಯೋಗಿಸಿಯೂ ಮೂಲದ ಮರ್ಮವನ್ನು ಸೆರೆಹಿಡಿದಿದ್ದಾರೆ. ಎಲ್ಲಿಯೂ ಕಾಳಿದಾಸನ ಅರ್ಥಗರ್ಭಿತ ಸಮಸ್ತ ಪದಗಳನ್ನು ಧಾರಾಳವಾಗಿ ಬಳಸಿ ಸಂವಹನಕ್ಕೆ ತೊಡಕು ಒಡ್ಡಿಲ್ಲ. ಮೂಲದ ಭಾವವನ್ನು ಮೊಟಕು ಮಾಡದೆ ವಾಗ್ಧೋರಣೆಯನ್ನು ಮೊಂಡುಗೊಳಿಸದೆ ಸಾಧ್ಯವಿದ್ದಲ್ಲಿ ಯೋಗ್ಯ ಕಂಡಲ್ಲಿ ಅದನ್ನು ಅಲ್ಲಲ್ಲಿ ಒಂದೆರಡು ಸೂಕ್ತ ಸಾಲು ಸೇರಿಸಿ ವಿಶದಗೊಳಿಸಿದ್ದಾರೆ. ಉದಾಹರಣೆಗೆ ಗ್ರೀಷ್ಮವರ್ಣನೆಯ ಮೊದಲ ಪದ್ಯದಲ್ಲಿಯೇ ಬಂದ "ದಿನಾಂತರಮ್ಯೋ ಅಭ್ಯುಪಶಾಂತ ಮನ್ಮಥ"–ಎಂಬ ಸೊಲ್ಲನ್ನು ಕವಿ ಹಿಂಜಿ

ಬಣ್ಣ ಬಣ್ಣದ ಸಂಜೆ ರತಿಯು ಬಯಸದು ಜೀವ
ಬಂತು ಬೇಸಗೆ ಬೇಡ ಪ್ರಿಯೆಯು ತೆಕ್ಕೆ

ಎಂದು ಹೆಚ್ಚು ಕಮ್ಮಗೆ ಹಿಗ್ಗಿಸಿದ್ದಾರೆ. ಇಂಥ ಹಲವಾರು ಮಾದರಿ ಕೊಡಬಹುದು.

ಒಟ್ಟನಲ್ಲಿ ಪದ್ಯಗಳು ಭಾಷಾಂತರವೆಂದು ಭಾಸವಾಗುವದೇ ಇಲ್ಲ. ಕಾಳಿದಾಸ ಕನ್ನಡದಲ್ಲಿಯೇ ಕಾವ್ಯ ಕಟ್ಟಿದಂತಿದೆ. ಇದು ವೆಂಕಟೇಶಮೂರ್ತಿಯವರ ಗೆಲುವು. ಹಾಗೆ ನೋಡಿದರೆ ಎಲ್ಲ ಉತ್ತಮಕಾವ್ಯವೂ "ಅನನುವಾದನೀಯು"– (un translatable) ಅನುವಾದ ಯಶಸ್ವಿಯಾದಲ್ಲಿ ಅದೊಂದು ಸ್ವತಂತ್ರ ನವನಿರ್ಮಿತಿಯೇ ಅನಿಸುತ್ತದೆ. ಇದಕ್ಕೆ ಒಂದು ಉದಾಹರಣೆ:

ಹೊಳೆ ಬಂದಿದೆ ಹೊಸ ನೀರಿನ ಬಗ್ಗಡ
ಕಿವಿಗಡಚಿಕ್ಕುವ ಮೊರೆಯೊಪ್ಪೆ
ಸರ್ಪದಂತೆ ಹರಿಯುತ್ತಿರಲಾ ನದಿ
ನೋಡುತ ಭಯಗೊಂಡಿದೆ ಕಪ್ಪೆ

–ಇಂಥ diction ಹುಟ್ಟ ಕನ್ನಡವಲ್ಲವೆಂದು ಯಾರೆನ್ನಬಹುದು? ಹಗುರಾದ ನವಿರಾದ ಪದಪವಣಿಕೆಯ ಶೈಲಿ ಈ ಕವಿಯ ಭಾಷಾಪ್ರಭುತ್ವದೊಂದಿಗೇ ನಾದನಿಬಿಡ ಲಯಗಾರಿಕೆಗೂ ನಿಚ್ಚಳ ನಿದರ್ಶನ. ಅತ್ಯಂತ ಮೇಲ್ಮಟ್ಟದ ಈ ಅನುವಾದ ಕೃತಿಗಾಗಿ ವೆಂಕಟೇಶಮೂರ್ತಿ ಅಭಿನಂದನಾರ್ಹರು.

ವಾಸನಾಮಯ ಬದುಕಿನ ಆಚೆ ಈಚೆ

ಕಥಾ ಸಂಕಲನ.

ಲೇ. ಕಾ. ತ. ಚಿಕ್ಕಣ್ಣ.

—ಶ್ರೀನಿವಾಸ ಪ್ರಸಾದ್

ವಾಸನಾಮಯ ಬದುಕಿನ ಆಚೆ ಈಚೆ ಕಾ. ತ. ಚಿಕ್ಕಣ್ಣ ಅವರ ಮೂರನೆಯ ಕಥಾ ಸಂಕಲನ. ಅಬ್ಬರವಿಲ್ಲದೆ ಕತೆ ಹೇಳುವ ಚಿಕ್ಕಣ್ಣನವರಿಗೆ ಗ್ರಾಮೀಣ ಭಾಷೆಯ ಮೇಲೆ ಸೊಗಸಾದ ಹಿಡಿತವಿದೆ. ಕಡುಬಡವರ, ದಲಿತರ ಆಸೆ, ನಿರಾಸೆ, ಕನಸುಗಳನ್ನು ಅವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲರು. ವಿದ್ಯೆಗಾಗಿ ಹಾತೊರೆವ ಜವರ, ಕೋಳಿಸಾರಿಗಾಗಿ ಏನೆಲ್ಲಾ ಪಾಡು ಪಡುವ ಹುಚ್ಚೀರಿ, ಅನ್ನ ಮತ್ತು ಪ್ರೀತಿಯ ಹಸಿವಿಗಾಗಿ ಒದ್ದಾಡುವ ಯಲ್ಲ, ಪಶ್ಚಾತ್ತಾಪದಲ್ಲಿ ಬೇಯುವ ಪುಟ್ಟಣ್ಣ, ಪರೀಕ್ಷೆ ಮುಗಿದಾಗ, ಇಡೀ ಬದುಕಲ್ಲೇ ಕತ್ತಲೆ ಕಾಣುವ, ಹೇಳಿಕೆ ಮಾತೊಂದರ ಮೇಲೇ ಇಡೀ ಬದುಕನ್ನು ಭವಿಷ್ಯವನ್ನು ಕಾಣುವ 'ಕಿಡಿ' ಕತೆಯ ನಾಯಕ- ನಮ್ಮ ಕಣ್ಣೆದುರು ಪ್ರತ್ಯಕ್ಷವಾಗಿ ಬಿಡುತ್ತಾರೆ.

ಆದರೆ ಈ ಸಮೃದ್ಧ ಅನುಭವವನ್ನು ಬಳಸಿಕೊಂಡು ಹೊಸದೇನನ್ನಾದರೂ ಚಿಕ್ಕಣ್ಣನವರು ಹೇಳುತ್ತಾರೆಯೇ ಎಂಬ ಪ್ರಶ್ನೆಗೆ 'ಇಲ್ಲ' ಎಂದೇ ಹೇಳಬೇಕಾಗುತ್ತದೆ. ದಲಿತರ ಬದುಕಿನ ಮನಮಿಡಿವ ಚಿತ್ರಣ ನೀಡುವ ಚಿಕ್ಕಣ್ಣನವರ ಕತೆಗಳು, ಬಹಳ ಸಾರಿ ಅಷ್ಟೇ ಆಗಿ ಉಳಿದುಬಿಡುತ್ತವೆ. ಇನ್ನು ಕೆಲವು ಬಾರಿ ಜನಪ್ರಿಯ ಕತೆಗಳ ಸೂತ್ರ ಹಿಡಿದು ಮೂಲವಿಷಯವೇ ಮರೆಯಾಗಿಬಿಡುತ್ತದೆ. ಸಾಮಾನ್ಯವಾಗಿ ಘಟನೆಯೊಂದರ ಸುತ್ತಲೇ ಸುತ್ತುತ್ತಾ ಅಥವಾ ಬೆಳೆಯುತ್ತಾ ಬರುವ ಚಿಕ್ಕಣ್ಣನವರ ಕತೆಗಳು, ಕೆಲವೊಮ್ಮೆ ಪೂರ್ವನಿರ್ಧರಿತವೇನೋ ಎಂಬ ಅಂತ್ಯಕ್ಕೆ ಬಂದು ಮುಟ್ಟಿಬಿಡುತ್ತವೆ. ಉದಾಹರಣೆಗೆ ಸಂಕಲನದ ಮೊದಲ ಕತೆ ದಾವರ. ಅಕ್ಷರ ಕಲಿವ ಆದಮ್ಯ ಆಸೆ ಉಳ್ಳ ಜವರ ಅಪ್ಪನ; ಬಡತನದ ದೆಸೆ

ಯಿಂದ ಶಾಲೆಗೆ ಹೋಗಲು ಸಾಧ್ಯವಾಗುವುದಿಲ್ಲ. ಆಸೆ ತಡೆಯದ ಆತ ಸ್ಲೇಟು ಬಳಪ ಎಲ್ಲಾ ಕದ್ದು ಸಿಕ್ಕಿಕೊಳ್ಳುತ್ತಾನೆ. ನಂತರ ಎಲ್ಲವನ್ನೂ ವಾಪಸು ಕೊಡ ಬೇಕಾಗಿ ಬಂದು ಅವಮಾನಕ್ಕೀಡಾಗುತ್ತಾನೆ. ಜವರ ವಿದ್ಯೆ ಕಲಿಯಲಾಗದ್ದು ಇಲ್ಲಿ ದುರಂತವಾಗಬೇಕಿತ್ತು. ಆದರೆ ಕಳ್ಳತನ ಮಾಡಿ ಸಿಕ್ಕಿಕೊಂಡಾಗಿನ ಅವಮಾನವೇ ಕತೆಯಲ್ಲಿ ದೊಡ್ಡದಾಗಿ ಬಿಡುತ್ತದೆ. ಇಡೀ ಕತೆ ಮೊದಲ ಸಾಲಿನಿಂದಲೇ ಈ ನಿಟ್ಟಿನಲ್ಲಿ ಸಾಗುತ್ತದೆ. ಹುಚ್ಚೀರಿಯ ಎಸರಿನ ಪ್ರಸಂಗವೂ ಇದೇ ತರಹದ ಕತೆ. ಕೋಳಿ ಸಾರಿಗಾಗಿ ತವಕಪಡುವ ಹುಚ್ಚೀರಿ ಅದಕ್ಕಾಗಿ ಪಡುವ ಪಾಡನ್ನು ಅತ್ಯಂತ ಲವಲವಿಕೆಯಿಂದ ಚಿತ್ರಿಸುವ ಚಿಕ್ಕಣ್ಣ. ಅಂತ್ಯವನ್ನು ಮಾತ್ರ ಜನಪ್ರಿಯ ಓದುಗರನ್ನು ಒಲಿಸಿಕೊಳ್ಳುವ ರೀತಿಯಲ್ಲೇ ಬರೆಯುತ್ತಾರೆ. ಅಷ್ಟೆಲ್ಲಾ ಪಾಡುಪಟ್ಟು ಗಳಿಸಿದ ಎಸರಿನ ಪಾತ್ರೆ ಒಡೆದು ಹೋದಾಗ, ಹುಚ್ಚೀರಿಯ ಪ್ರತಿಕ್ರಿಯೆ ಇಡೀ ಕತೆಗೆ ಭಾರವಾಗುತ್ತದೆ. ಅಂದರೆ ಕತೆಯ ಅಂತ್ಯವನ್ನು ಸಮರ್ಥಿಸುವ ರೀತಿಯಲ್ಲಿ ಕತೆಗಳು ಬೆಳೆದು ಬರುವುದಿಲ್ಲ.

ಈ ಸಂಕಲನದಲ್ಲಿ ಶಿಷ್ಟಪ್ರಜ್ಞೆಯೊಂದು ನಿರೂಪಿಸುವ ತಿರಿದುಣ್ಣುವ ಜನರ ನಡುವೆ ನೆನಪುಗಳೇ ಹೀಗೆ ಕತೆಗಳು ಉಳಿದವಕ್ಕೆ ಹೋಲಿಸಿದರೆ ದುರ್ಬಲ. ಬದುಕಿನ ದಾರುಣತೆ, ಕಳೆದುಹೋಗುತ್ತಿರುವ ಮೌಲ್ಯಗಳ ಬಗ್ಗೆ ಈ ಕತೆಗಳಲ್ಲಿ ಹಳಹಳಿ ಇದೆಯಾದರೂ, ಅದಕ್ಕಿಂತ ಹೆಚ್ಚಿನ ಏನನ್ನೂ ಈ ಕತೆಗಳು ಹೇಳುವುದಿಲ್ಲ. "ತಿರಿದುಣ್ಣುವ ಜನರ ನಡುವೆ" ಕತೆಯಲ್ಲಿ ಕಟ್ಟಡವೊಂದರ ಕೆಲಸಗಾರ್ತಿಯೊಬ್ಬಳು, ಕೆಲಸ ಕಳೆದುಕೊಂಡು ಕಾಯುತ್ತಾ ಕೂತಿರುವಾಗ, ಆಕೆಯ ಮೌನದ ಜೊತೆ, ಮಾತನಾಡುತ್ತಾ, ಆಕೆಗೆ ಒದಗಿದ ಸ್ಥಿತಿಯ ಬಗ್ಗೆ ನಿರೂಪಕ ವಿವರಿಸುತ್ತಾ ಹೋಗುತ್ತಾನೆ. ಕಡೆಗೆ ಆಕೆ "ತಿರುಗ ಇಲ್ಲಿ ಕೆಲ್ಸ ಕೊಡ್ತಾರಣ್ಣ" ಎಂದು ಕೇಳುತ್ತಾಳೆ. ಈ ಒಂದು ವಾಕ್ಯ ಸೃಷ್ಟಿಸುವ ವ್ಯಂಗ್ಯದ ಮೇಲೆಯೇ ಇಡೀ ಕತೆ ನಿಂತುಬಿಟ್ಟಿದೆ. ಸಂಕಲನದ ಹೆಸರು ಹೊತ್ತಿರುವ "ವಾಸನಾಮಯ ಬದುಕಿನ ಆಚೆ ಈಚೆ" ಅಂತಸ್ತು, ವ್ಯಾಮೋಹ, ದರ್ಪಗಳನ್ನು ಹೊತ್ತು ಮೆರೆಯುತ್ತಿದ್ದ ಪುಟ್ಟಣ್ಣ, ಊರವರಿಂದ ಬಹಿಷ್ಕಾರಕ್ಕೆ ಈಡಾಗಿ, ಕಡೆಗೆ ಅವರ ಕರುಣೆಯಿಂದ ಮರುಬದುಕು ಪಡೆವ ಕತೆ. ಮನುಷ್ಯ ಪ್ರೀತಿಯ, ಅಂತಃಕರಣದ ಮೇಲ್ಮೆಯನ್ನು ಹೇಳುವ ಕತೆಯ ಧಾಟಿ ಮಾತ್ರ ಅಪ್ಪಟ ಭಾವುಕವಾಗಿದೆ.

ಆದರೆ ವ್ಯವಸ್ಥೆಯ ದಿವ್ಯ ನಿರ್ಲಕ್ಷ್ಯ, ಹೃದಯ ಹೀನತೆಯಲ್ಲಿ ಸಿಕ್ಕಿ ವೈಯಕ್ತಿಕ ಬದುಕು ಮತ್ತು ಕನಸುಗಳು ಹೇಗೆ ಕಮರಿಹೋಗುತ್ತವೆ ಎಂಬುದನ್ನು ಹೇಳು

ವಾಗ ಚಿಕ್ಕಣ್ಣ ಒಳ್ಳೆಯ ಕತೆ ಹೇಳಬಲ್ಲರು. ಈ ಸಂಕಲನದ "ಕಿಡಿ" ಮತ್ತು "ವೃತ್ತಾಂತ" ಇಂತಹ ಕತೆಗಳು. ಕಿಡಿ ಕತೆಯ ನಾಯಕ, ಹೇಳಿಕೆ ಮಾತೊಂದನ್ನು ನಂಬಿ, ತೋಟದಪ್ಪನ ಕೆಲಸ ಬಿಡಲು ತೀರ್ಮಾನಿಸಿ, ರೊಪ್ಪದಪ್ಪನ ಬಳಿ ಕೆಲಸ ಕೇಳಲು ಹೋಗಿ ಅಲ್ಲಿ ಇಲ್ಲ ಎನಿಸಿಕೊಳ್ಳುತ್ತಾನೆ. ಆಗ ತನ್ನೆಲ್ಲಾ ಅಸಹಾಯಕತೆಯೂ ಹೆಪ್ಪುಗಟ್ಟಿ, "ರೊಪ್ಪದಪ್ಪ ಇಲ್ಲ ಅನ್ಬೇಡ ಕನೋ, ನಮ್ಮನ್ನೆಲ್ಲಾ ಅಗ್ಗಿ ಆಳೀಬ್ಯಾಡಿ ಕನೊ" ಎಂದು ಕಲ್ಲು ಬೀರಿ ಅಲ್ಲಿಂದ ಓಡುತ್ತಾನೆ. ನಾಯಕನ, ಆತನ ಕುಟುಂಬದ ಶೋಷಣೆಯ ದಟ್ಟ ವಿವರಗಳನ್ನು ಕತೆಗಾರ ಕಟ್ಟಿಕೊಡುತ್ತಾನೆ. ವ್ಯವಸ್ಥೆಯ ನಿರ್ಮಮತೆಯನ್ನು ಕತೆ ಕಣ್ಣಿಗೆ ಕಟ್ಟುವಂತೆ ಹೇಳುತ್ತದೆ. ಕಿಡಿಯ ನಾಯಕ ತನಗೆ ಆದ ಅನ್ಯಾಯಕ್ಕೆ "ರೊಪ್ಪದಪ್ಪನ ಮನೆಯ ಮೇಲೆ ಕಲ್ಲು ಬೀರಿ ಪ್ರತಿಕ್ರಿಯಿಸಿದರೆ, ಪರೀಕ್ಷೆ ಮುಂದೆ ಹೋಗಿ ತನ್ನ ಇಡೀ ಬದುಕಿನ ಭವಿಷ್ಯವೇ ಕುಸಿದು ಬಿದ್ದಾಗ, ವೃತ್ತಾಂತದ ನಾಯಕ ಸ್ವಾಮಿ ಹೊಸಮ್ಮನ ಗುಡಿಗೆ ಬಂದು ಬಿಕ್ಕಿ ಬಿಕ್ಕಿ ಅಳುತ್ತಾನೆ.

ದಲಿತರ ಬದುಕಿನ, ದಟ್ಟವಾದ ಜೀವನಾನುಭವದ ಪರಿಚಯವಿರುವ, ಗ್ರಾಮೀಣ ಭಾಷೆಯನ್ನು ದಕ್ಕಿಸಿಕೊಂಡಿರುವ ಚಿಕ್ಕಣ್ಣ, ಅನುಭವವನ್ನು ಬರಿದೇ ಹೇಳಿ ಕೈ ತೊಳೆದುಕೊಳ್ಳುವುದಕ್ಕಿಂತ, ಜನಪ್ರಿಯ ಕತೆಗಳನ್ನು ಬರೆಯುವ ಅಪಾಯದಿಂದ ತಪ್ಪಿಸಿಕೊಂಡು, ಕಲಾತ್ಮಕ ಚೌಕಟ್ಟಿನಲ್ಲಿ ತಮ್ಮ ಅನುಭವವನ್ನು ಕತೆಯಾಗಿಸಬಲ್ಲರಾದರೆ ಇನ್ನೂ ಒಳ್ಳೆಯ ಕತೆಗಳನ್ನು ಬರೆಯಬಲ್ಲರು.

ಬರ-

ಸಂಪಾದಕರು : ಸಿ. ಶಿವಲಿಂಗಪ್ಪ ಪ್ರಕಾಶಕರು : ಬಂಡಾಯ ಪ್ರಕಾಶನ ಚಳ್ಳಕೆರೆ ಚಿತ್ರದುರ್ಗ ಜಿಲ್ಲೆ ಪುಟ-86 ಬೆಲೆ 10-00

—ನಾ. ಸುಧೀಂದ್ರ

ನ ಡಿಸ ಕೆಲವು ಹೆಸರಾಂತ ಕವಿಗಳ ಪದ್ಯಗಳಿರುವ ಸಂಕಲನ ಬರ "ನಾವು ಕೊರೆಯುವ ಅಕ್ಷರಗಳು ಭೂಮಿ ಪುತ್ರರ ಮುಖದ ಸಿರಿಗೆಗಳನ್ನು ಸಾಪು ಮಾಡುವುದಿಲ್ಲ/ಗುಡಿಸಲಲಿ ಗುಡುಗು ಮೊಳಗಿಸುವುದಿಲ್ಲ/ಬೆಚ್ಚಗಿನ ಬಂಗಲೆಗಳ ನಡುಗಿಸುವುದಿಲ್ಲ"- ಎಂಬ ಚಂಪಾರ್ಟಿಲರ ಪದ್ಯ ಸೋಲೊಪ್ಪುತ್ತಿರುವ, ಬಿಸಿ ಆರಿರುವ 'ಮಾಧ್ಯಮ'ದ ಬಗ್ಗೆ ಆತಂಕ ಮೂಡಿಸುತ್ತದೆ. "ಹಸಿದ ಹೊಟ್ಟೆಯ ತಟ್ಟೆಯಾದ ಮೊಮ್ಮಕ್ಕಳಿಗೆ " ಎನ್ನುವ ನಾಗವಾರರ ಸಾಲುಗಳು 'ಬರ'ದ ಗ್ರಾಮೀಣ ಚಿತ್ರವನ್ನ ಅಷ್ಟೇ ತೀವ್ರತೆ ತುಂಬಿಕೊಂಡು ತೋರಿಸಿವೆ. ಸಂಕಲನದಲ್ಲಿನ 'ಬರ'ದ ಪ್ರತಿಮೆಗಳು ತರಹೇವಾರಿ, ಮೊಲೆ ಹಾಲಿಲ್ಲದ ತಾಯಿ, ಅಳುವ ಮಗು, ಬಾಯಿ ತೆರೆದ ಭೂಮಿ, ಹಲ್ಲು ಕಿಸಿದ ಬಾನು, ಮುಗಿಲ ಚಿಕ್ಕೆಯ ಬಿತ್ತಿಗಳು, ರಕ್ತದ ಎಣ್ಣೆದೀಪಗಳು, ನೀರಿಲ್ಲದಲೆವ ಗುಬ್ಬಚ್ಚಿಗಳು, ಗರಿಸುಟ್ಟ ನವಿಲು, ಕತ್ತೆ-ಕಪ್ಪೆಗಳ ಮದುವೆ, ಮುಗಿಲ ನೋಡಿ ನೋಡಿ ನೋಯ್ದ ರೈತನ ಕತ್ತು.... ಮುಂತಾಗಿ ಮೂಡಿಬಂದಿವೆ. ಕೆಲವು ಪದ್ಯಗಳಂತೂ ಭಾವಗೀತೆಯ ವೇಷದಿಂದ ಎದೆಯಾಳ ಇಳಿಯುತ್ತವೆ. 'ಮಿದುವೆದೆಯ ಗೂಡಿನಲಿ ಸಿಪ್ಪೆ ತೂಗಿದ ಮರಿಗೆ ಬೇಕಿನಭ್ಯಂಜನವು ಬರಲೆ ಇಲ್ಲ/ಸಾವಿರದ ನಾಳೆಗಳ ತೀರಸೇರಿಯುವ ಮಿಣೆಯು ಕೆಂದಳಿರ ಕೈಗೆ ಸಿಗಲೇ ಇಲ್ಲ' (ಜಿ. ಎಸ್. ಅವಧಾನಿ). ಜನಪದ ಶೈಲಿಯಲ್ಲಿನ 'ಬುಡಕ ಭೂಮಿ, ಮ್ಯಾಲ ಮುಗಲು ಕತ ಕತ ಕುದ್ದಂಗ / ಹಳ್ಳ ಕೊಳ್ಳ ಬತ್ತಿ ಹೋಗ್ಯಾವ್ರಿ' (ಚೆನ್ನಣ್ಣ ವಾಲಿಕಾರ). ಕಾಡಿನ ತುಂಬೆಲ್ಲ ಹದ್ದಿನ ನೆಪರು ಬಿದ್ದು/ಪಕ್ಷಿಗಳ ರಾಶಿ ಹೆಣವೂ ಮಳೆರಾಯು' (ಶಂಕರ ಕಟಗಿ) ಇಂಥವುಗಳು ಕಾವ್ಯಕ್ಕೆ ಒಗ್ಗಿದ ಪ್ರಯೋಗಗಳಾಗಿವೆ. ಈ ಬರ ಕೇವಲ ಪ್ರಾಕೃತಿಕ ವಿಕೋಪವೊಂದೇ ಅಲ್ಲ ಸಾಮಾಜಿಕ ಅನ್ಯಾಯಗಳಿಗೆ ಬಲಿಯಾಗಿ ಮನಸ್ಸುಗಳಿಗೆ ಬಂದ

ನೆಮ್ಮದಿ ಕೆಡಿಸುವ ಕ್ಷಾಮವೂ ಆಗಿ ಕಂಡಿವೆ. ನೊಂದ ಜೀವಿಗಳಿಗೆಲ್ಲ ನೆಮ್ಮದಿಯ ಹೊಸ ಬದುಕು ಕೊಡಲು ಮುಂಗಾರು ನೀ ಬೇಗ ಬಾ (ಬಾನಂದೂರ ಕೆಂಪಯ್ಯ) ಎಂದು ಅಪ್ಪಟ ಮಾನವೀಯತೆಯನ್ನು ಹೊಂದಬೇಕಾದ ಇಂದಿನ ಜರೂರು. 'ನಗರಗಳ ಮಹಲಿನಲಿ ಫ್ಯಾನು ಬೀಸಿದೆ ಗಾಳಿ/ಹಳ್ಳಿಗಳ ಬೀದಿಯಲಿ ಉರಿಯೆದ್ದಿದೆ.' (ಆರ್.ವಿ. ಭಂಡಾರಿ) ಯಲ್ಲಿನ ಸಂಪನ್ಮೂಲದ ಒಡೆತನದ ಅಸಮತೋಲನದ ವಿರುದ್ಧ ಅತೃಪ್ತಿ, ಧಗೆ. 'ಭಾರತ ಇಥಿಯೋಪಿಯಾ ಆದರೂ ಸ[illegible] ನೀಲ ನೀಲಗಿರಿ' ಎಂಬ 'ಪಾಲಿಸಿ'ಯ ವಿಡಂಬನೆ. 'ಮಣ್ಣಿಂದ ಅನ್ನ ತೆಗೆವವನ ಬೆವರ ಹನಿ ನಮ್ಮ ಕಾವ್ಯಕೆ ವಸ್ತು' ಎಂದು ದಂತಗೋಪುರದಿಂದ ಬಿಡುಗಡೆ ಪಡೆದ ನಿಟ್ಟುಸಿರು. 'ನನ್ನ ಜೀವ, ಮಣ್ಣು ಕೊರೆದು ಹೊರಬಿದ್ದ ಬೇರು' ಎಂದು ಬಟಾಬಯಲಾದ ಸಾಮಾನ್ಯರ ಬದುಕಿನ ದುರ್ಭರತೆ. ನಡೆಸಿದ್ದಾರೆ ಪರಿಹಾರ ಕಾಮಗಾರಿ ವೃತ್ತಪತ್ರಿಕೆಗಳ ತುಂಬ' ಎಂಬ ಆಡಳಿತ ಯಂತ್ರದ ಹೆಣಗಾಟ-ಘೋಷಣೆಗಳ ವ್ಯಂಗ್ಯಗಳು ಮುಂತಾದ 'shock' ಗಳು ಬಾದಿವೆ ಒತ್ತೊತ್ತಾಗಿವೆ.

ಬರ'ದ ಒಂದು ಸುತ್ತು ದರ್ಶನ ಇಲ್ಲಿದೆ. ಬರಗೂರರು ಮುನ್ನುಡಿಯಲ್ಲಿ ಬಹಳ ಆಶಯಗಳನ್ನು ಹೇಳಿದ್ದಾರೆ. ಅವರ ನುಡಿಗಳು 'ಹೊಸ ಓದಿ'ಗೆ ಸಹಕಾರಿಯಾಗಿವೆ. ಬಂಡಾಯ ಸಂಘಟನೆಯು ಮಾಡಿದ 'ಅಪೂರ್ವ' ಪ್ರಕಟಣೆ ಅನಿಸುವುದಕ್ಕಿಂತ 'ಬಂದ' ವಸ್ತುವಿಗೆ ಮಿಡಿದ ವಿವಿಧ ಕವಿಗಳ ಆಂಥಾಲಜಿ ಇದು ಎಂದಷ್ಟು ಹೇಳಬಹುದು.

ನೆಲಕೊದ್ದು ಮುಗಿಲ ಜಿಗಿದರೆ

ಕವನ ಸಂಕಲನ

ಜೀವರಸ ಪ್ರಕಾಶನ ಎಚ್. ಟಿ. ಬೋಳಿಗಾಂವಕರ
ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ ತುಮಕೂರು
ಪುಟಗಳು 42 + VII ಬೆಲೆ 8-00

ನಮ್ಮನ್ನು ಥಟ್ಟನೆ ಪರಿಚಯ ಮಾಡಿಕೊಳ್ಳುವ ಸಾಲೊಂದಿದೆ ಅದೇ ಈ ನಕ್ಷತ್ರದ ಬೆಳಕು ನಂದುವ ಮುನ್ನ ಏನಾದರೂ ಉಳಿಸಬೇಕಲ್ಲ, ಕೊನೆಗೊಂದು ನಾಲ್ಕು ಸಾಲಿನ ಕವಿತೆಯಾದರೂ ಸರಿ" ಈ ಆಶಯದ ಕವಿ ಅಪ್ರಯತ್ನವಾಗಿ ಮಾಧ್ಯಮವೊಂದಕ್ಕೆ ಒಲಿದ ಬಗ್ಗೆ ಹೇಳಿದ್ದಾರೆ ಆದರೆ ಅಷ್ಟೇ ನಿಷ್ಠೆಯಿಂದ ಇದೊಂದೇ ಮಹತ್ವದ ಕೊಡುಗೆಯಲ್ಲ ಎಂಬ ನಿಗರ್ವವನ್ನೂ ಹಿನ್ನುಡಿಯಲ್ಲಿ ತಿಳಿಸಿದ್ದಾರೆ. ಸ್ವಂತ ನರಳಾಟ ಬಹಳಷ್ಟು ಕವಿತೆಗಳ ವಸ್ತುವಾಗಿದೆ. ಕವಿತೆ

ಹೆಣವಾಗಿತ್ತು / ನನ್ನ ಕಾಲು ಗೋರಿಯಲ್ಲಿದ್ದವು, ಮೃ ಮುತ್ತುತ್ತಿವೆ ಕಣ್ಣ ಸೆಯ ಮರಳು ಎಂಬಲ್ಲಿನ ಸಾವಿನ ಆತಂಕಗಳು ಬಹಳೆಡೆ ನುಸುಳಿ ಹರಿದಾಡಿವೆ. ನೆಮ್ಮ ನಿಂತ ನನಗಿಲ್ಲ ನೆಲೆ ನಿಲ್ಲುವ ಬಲ'- ವಿಧಿ ನಿನ್ನ ತುಳಿದಂತೆ ನೀನವರ ತುಳಿಯೀಗ, ನನ್ನವೂ ಬೇಕೀಗ ಹಂಚಿಗೊಂಡು ತಿನ್ನವೂ, ನೀನತ್ತರೆ ಬರದುತ್ತರ ಬಾನೆದೆಯಿಂದ, ಗೋರಿಯ ಮೇಲೆ ಮಣ್ಣೊಗೆದ ಕೈಯಿಂದಲೇ ತೊಟ್ಟಿಲನು ತೂಗಬೇಕು, ಇಲ್ಲಿ ಹುಟ್ಟು/ಅಲ್ಲಿ ಸಾವು ಎಲ್ಲ ಹುತ್ತಗಳಲು ಹಾವು, ನೆನಪಿರಲಿ ಇದು ನಿನ್ನದೇ ಕಾಲ, ನನ್ನ ನೆಲೆ ಗುರುತಿಸದೆ ಸುಸ್ತಾಗಿದ್ದೇನೆ.... ಮುಂತಾದ ಉಪದೇಶ+ಉಭಯ ಕುಶಲೋಪರಿಗಳು ಹೇರಳವಾಗಿ ಕಿರಿ ಕಿರಿಯಾಗಿವೆ. ಅಂತಮೂರ್ಖತೆಯಿಂದಾಗಿ ಹಿಂದೆ ಸರಿಯುತ್ತಾನೆ ಕವಿ. ಭರವಸೆಯ ಸಾಲುಗಳು ಇಲ್ಲವೆಂದಿಲ್ಲ. 'ರಾತ್ರಿಯಾಯಿತು ಹಗಲು / ಹಗಲಾಯಿತು ರಾತ್ರಿ/ಕಾಲನರಗಳನು ನೆಲವೆಳೆದು ಹಿಡಿದಿಹುದು ತೊಡೆಗಳಿಗಿಲ್ಲ ನಡೆವ ಖಾತ್ರಿ' ಎಂದು ತಮ್ಮ ಪ್ರಾಮಾಣಿಕತೆಯಿಂದ ಓದುಗನನ್ನು ಹತ್ತಿರಕ್ಕೆಳೆಯುತ್ತಾರೆ. 'ಕರಗದ ಮಂಜು ಹನಿ/ಕೇಳದ ನನ್ನದನಿ/ತುಂಬಿದೆ ಈ ಮುಂಜಾನೆ/ಮನೆಯಂಗಳದಲ್ಲಿ ಎಂದು ಅಮಾಯಕತೆಗೆ ಸಿಲುಕುವ ಮನಸ್ಸಿನ ತೊಳಲಾಟಕ್ಕೆ ನೆಲೆ ಸಿಕ್ಕಿಲ್ಲ. ಇಂತಹ ಪ್ರಯೋಗಗಳ ಕುರಿತು ಓದುಗ ಇವರ ಬಗ್ಗೆ ಕೊಂಚವಾದರೂ ಓದುವ ಸಹನೆ ತೋರಬಹುದು.

ಸಂಪಾದಕರ ಟಿಪ್ಪಣಿಗಳು:

ಒಂದು ಪ್ರಶಸ್ತಿ ಪ್ರಕರಣವು

ಸಂವಾದದ ಮೊದಲ ಸಂಚಿಕೆಯ ಸಂಪಾದಕೀಯದಲ್ಲಿ ನಮ್ಮ ಸಾಹಿತ್ಯದಲ್ಲಿ ನೆಲೆಗೊಂಡಿರುವ ಅನಾರೋಗ್ಯಕರವಾದ ರಾಜಕೀಯ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಕುರಿತು ಪ್ರಸ್ತಾಪಿಸಲಾಗಿತ್ತು. ಈಗ ಮತ್ತೊಮ್ಮೆ ಆ ವಿಷಯಗಳನ್ನು ಕುರಿತು ಪ್ರಸ್ತಾಪಿಸುವ ಸಂದರ್ಭ ಬಂದಿದೆ.

ಕರ್ನಾಟಕದ ಸಾಹಿತ್ಯ ಅಕಾಡೆಮಿಯು 1988 ರ ಪ್ರಶಸ್ತಿಗಳನ್ನು ಕಳೆದ ನವೆಂಬರ್ ತಿಂಗಳಿನಲ್ಲಿ ಘೋಷಿಸಿತು. ಸಣ್ಣ ಕಥೆಯ ಪ್ರಕಾರಕ್ಕೆ ಕಥೆಗಾರ ಎಂ. ಎಸ್. ವ್ಯಾಸರಾವ್ ಅವರ ಮಳೆಯಲ್ಲಿ ನೆನೆದ ಮರಗಳು ಸಂಕಲನಕ್ಕೆ ಪ್ರಶಸ್ತಿ ದೊರಕಿದೆ. ಪ್ರಶಸ್ತಿ ಪಡೆದ ಕಥೆಗಾರರ ಮುಖದ ಮೇಲಿನ ಮುಗುಳು ನಗೆ ಕರಗುವ ಮೊದಲೇ ಅವರಿಗೆ ಪ್ರಶಸ್ತಿ ಸಂದ ಬಗ್ಗೆ ಅನಾರೋಗ್ಯಕರವಾದ ವಾದ ವಿವಾದ ಹುಟ್ಟಿಕೊಂಡಿದೆ.

ಸಾಹಿತ್ಯ ಕೃತಿಗಳಿಗೆ ನೀಡುವ ಪ್ರಶಸ್ತಿಗಳನ್ನು ಕುರಿತು ಎಲ್ಲರಿಗೂ ತೃಪ್ತಿಯಾಗುವಂತಹ ತೀರ್ಮಾನ ಅಸಾಧ್ಯವಾದದ್ದು. ಈ ಹಿನ್ನೆಲೆಯಲ್ಲಿ ಮಳೆಯಲ್ಲಿ ನೆನೆದ ಮರಗಳು ಸಂಕಲನಕ್ಕೆ ಪ್ರಶಸ್ತಿ ದೊರೆತದ್ದರ ಬಗ್ಗೆ ಎದ್ದ ವಾದ ವಿವಾದವನ್ನು ನಿರ್ಲಕ್ಷಿಸಬಹುದಾಗಿತ್ತು. ಆದರೆ ವಿವಾದವನ್ನು ಹುಟ್ಟಿ ಹಾಕುತ್ತಿರುವ ಲೇಖಕ ಮಹನೀಯರುಗಳು ಸೃಷ್ಟಿಸುತ್ತಿರುವ ಸುಳ್ಳುಗಳು ನಮ್ಮ ಸಾಹಿತ್ಯ ಸಂದರ್ಭದ ಒಟ್ಟು ಅನಾರೋಗ್ಯಕರವಾದ ರಾಜಕೀಯದ ದ್ಯೋತಕಗಳಾಗಿವೆ. ಆದ್ದರಿಂದಲೇ ಸಂವಾದ ಈ ವಿಷಯ ಕುರಿತು ವಿಷಾದಿಸುತ್ತಾ ಪ್ರಸ್ತಾಪಿಸುವ ಆವಶ್ಯಕತೆ ಉಂಟಾಗಿದೆ.

ಈ ವಿವಾದದ ಸೃಷ್ಟಿಕರ್ತರ ಗುಂಪಿನ ಕೇಂದ್ರ ವ್ಯಕ್ತಿ ಪ್ರಶಸ್ತಿ ದೊರೆಯದ ಒಬ್ಬ ಅತೃಪ್ತ ಕಥೆಗಾರ. ಈ ಕಥೆಗಾರನ ಅತೃಪ್ತಿಗೆ ಗಾಳಿಹಾಕುತ್ತಿರುವವರು ವಚನ

ಸಾಹಿತ್ಯ ಮತ್ತು ಮಧುರಚೆನ್ನರ ಕಾವ್ಯದಿಂದ ಪ್ರಭಾವಿತರಾದ ಇತ್ತೀಚಿನ ಒಬ್ಬ ಪ್ರಚಲಿತ ಕವಿ ಮತ್ತು ಒಬ್ಬ ಮಹಾ ವಿಮರ್ಶಕರು. ಇವರು ಸೃಷ್ಟಿಸುತ್ತಿರುವ ಸುಳ್ಳುಗಳ ಸರಮಾಲೆ ಹೀಗೆ ಸಾಗುತ್ತದೆ.

ಈ ಗುಂಪು ಮೊದಲಿಗೆ ನಮ್ಮ ಸಂಪಾದಕ ಮಂಡಲಿಯ ಸದಸ್ಯರೊಬ್ಬರನ್ನು ಅಪರಾಧಿಯೆಂದು ಘೋಷಿಸಿತು. ಈ ಘೋಷಣೆಯಂತೆ ನಮ್ಮ ಸಂಪಾದಕ ಮಿತ್ರರು ಅಕಾಡೆಮಿ ಪ್ರಶಸ್ತಿಯ ನಿರ್ಣಾಯಕರಲ್ಲೊಬ್ಬರಾಗಿದ್ದು ಗುಂಪುಗಾರಿಕೆಯ ಉದ್ದೇಶದಿಂದ ವ್ಯಾಸರಾವ್ ಅವರ ಕಥಾ ಸಂಕಲನಕ್ಕೆ ಇಪ್ಪತ್ತೈದು ಅಂಕಗಳಿಗೆ ಇಪ್ಪತ್ತುನಾಲ್ಕು ಅಂಕಗಳನ್ನು ಕೊಟ್ಟಿರುವರಂತೆ. ಈ ಹೇಳಿಕೆ ಸತ್ಯದ ತಲೆಯಮೇಲೆ ಮಟ್ಟುವಂತಹ ಸುಳ್ಳಾಗಿದೆ. ವಾಸ್ತವವೆಂದರೆ ಈ ನಮ್ಮ ಮಿತ್ರರು ಹೆಸರಿಸಿದ್ದ ಸಂಪಾದಕ ಈ ವರ್ಷ ಸಾಹಿತ್ಯದ ಯಾವುದೇ ಪ್ರಕಾರಕ್ಕಾಗಲಿ ಅಕಾಡೆಮಿಯ ನಿರ್ಣಾಯಕರೆಂದು ಕಾರ್ಯ ನಿರ್ವಹಿಸಿಲ್ಲ. ಹೀಗಿರುವಾಗ ಇಂತಹ ಕಟ್ಟುಕಥೆಯನ್ನು ಸೃಷ್ಟಿಸಿ ಮತ್ತೊಬ್ಬ ಸೃಜನಶೀಲ ಸಾಹಿತಿಯ ಬಗ್ಗೆ ತಪ್ಪು ಅಭಿಪ್ರಾಯ ಹರಡುವುದು ಅತ್ಯಂತ ಕ್ರೂರ ವಿನೋದವಾಗಿದೆ. ನಂತರದ ಯಾವ ಹಂತದಲ್ಲಿ ಈ ಮಿತ್ರರಿಗೆ ಕರುಣೆ ಬಂದಿತೊ ಏನೊ. ಇವರು ನಮ್ಮ ಸಂಪಾದಕ ಮಿತ್ರರನ್ನು ಅಪರಾಧಿ ಸ್ಥಾನದಿಂದ ಖುಲಾಸೆ ಮಾಡಿಬಿಟ್ಟರು. ಇವರು ಯಾರನ್ನು ಬೇಕಾದರೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಅದನ್ನು ಪ್ರಚುರ ಪಡಿಸಿ ನಂತರ ಇಷ್ಟಬಂದಲ್ಲಿ ನಿರಪರಾಧಿ ಎಂದು ಅಂದುಕೊಂಡು ಸುಮ್ಮನಾಗಿ ಬಿಡಬಹುದು. ಇಷ್ಟರ ನಡುವೆ ಆ ಇನ್ನೊಬ್ಬ ಬರಹಗಾರ ಅನುಭವಿಸುವ ಮಾನಸಿಕ ಯಾತನೆಯ ಕಲ್ಪನೆ ಈ ಸೃಜನಶೀಲರಿಗೆ ಹೊಳೆಯದೆ ಹೋಗುವುದು ನಮ್ಮ ಸಧ್ಯದ ಸಾಹಿತ್ಯಲೋಕದ ದುರಂತಗಳಲ್ಲೊಂದು.

ಸುಳ್ಳಿನ ಸರಮಾಲೆ ಎಂದು ಹೇಳಿದೆ. ನಮ್ಮ ಸಂಪಾದಕ ಮಿತ್ರರನ್ನು ಖುಲಾಸೆ ಮಾಡಿದ ಮೇಲೆ ಇವರ ದೃಷ್ಟಿ ಕವಿಯೊಬ್ಬನ ಮೇಲೆ ಬಿದ್ದಿತು. ಈಗ ಈ ಅಪರಾಧಿಯು ವ್ಯಾಸರಾವ್ ಅವರ ಸಂಕಲನಕ್ಕೆ ಇಪ್ಪತ್ತೈದು ಅಂಕಗಳಿಗೆ ಇಪ್ಪತ್ತುನಾಲ್ಕು ಅಂಕಗಳನ್ನು ಕೊಟ್ಟುಬಿಟ್ಟ! ಈ ವಾದ ಇಲ್ಲಿಯೇ ನಿಲ್ಲುವುದಿಲ್ಲ. ಈ ಕವಿಯು ಪ್ರಶಸ್ತಿ ಪಡೆದ ಕತೆಗಾರನ ನಿಕಟ ಸ್ನೇಹಿತನೆಂದು ಅಕಾಡೆಮಿಯ ಅಧ್ಯಕ್ಷರಿಗೆ ಗೊತ್ತಿದ್ದಿತಂತೆ. ಆದ್ದರಿಂದಲೇ ತಮಗೆ ಬೇಕಾದವನಾದ ಕಥೆಗಾರನಿಗೆ ಪ್ರಶಸ್ತಿ ದೊರೆಯಲೆನ್ನುವ ಉದ್ದೇಶದಿಂದ ಈ ಕವಿಯನ್ನು ನಿರ್ಣಾಯಕರಾಗಿ ನೇಮಿಸಿದರಂತೆ !

ನಿಜವಾದ ಸಂಗತಿಯೆಂದರೆ ಈ ಸಾಹಸದ ಕವಿಯೂ ಸಹ ಸಣ್ಣ ಕಥೆಯ ಪ್ರಕಾರಕ್ಕೆ ನಿರ್ಣಾಯಕನಾಗಿರಲಿಲ್ಲವಂತೆ. ಅವರು ಮಕ್ಕಳ ಸಾಹಿತ್ಯ ಪ್ರಕಾರಕ್ಕೆ ನಿರ್ಣಾಯಕರಾಗಿದ್ದರಂತೆ. ಸಣ್ಣ ಕಥೆಯ ಪ್ರಕಾರಕ್ಕೆ ನಿರ್ಣಾಯಕರು ಯಾರು ಯಾರು ಆಗಿದ್ದರು ಮತ್ತು ಅವರು ಯಾರು ಯಾರಿಗೆ ಎಷ್ಟು ಎಷ್ಟು ಅಂಕಗಳನ್ನು ಕೊಟ್ಟರು ಎಂಬುದು ಸಾಹಿತ್ಯ ಅಕಾಡೆಮಿಗೇ ಗೊತ್ತು. ಈ ಮಧ್ಯೆ ಇನ್ನೊಂದು ಕುತೂಹಲದ ಅಂಶವೆಂದರೆ, ನಮ್ಮ ಈ ಅತೃಪ್ತ ಕತೆಗಾರ ಮಿತ್ರರ ಸಂಕಲನಕ್ಕೆ ಇನ್ನೊಬ್ಬ ನಿರ್ಣಾಯಕರು ಇಪ್ಪತ್ತೈದು ಅಂಕಗಳಿಗೆ ಇಪ್ಪತ್ತುಮೂರು ಅಂಕಗಳನ್ನು ಕರುಣಿಸಿರುವರಂತೆ. ಇಪ್ಪತ್ತೈದು ಅಂಕಗಳಿಗೆ ಇಪ್ಪತ್ತುಮೂರು ಅಂಕಗಳನ್ನು ನೀಡುವುದು ಅನ್ಯಾಯವಾಗಿ ತೋರದ ಇವರಿಗೆ ಇಪ್ಪತ್ತುನಾಲ್ಕು ಅಂಕಗಳನ್ನು ನೀಡುವುದು ಅನ್ಯಾಯವಾಗಿ ತೋರುತ್ತದೆ. ಇದರ ತಾತ್ಪರ್ಯವೆಂದರೆ ನಮಗೆ ಪ್ರಶಸ್ತಿ ದೊರೆಯದೆ ಬೇರೆಯವರಿಗೆ ದೊರೆಯುವುದು ದೊಡ್ಡ ಅನ್ಯಾಯ. ಬಹುಶಃ ಹಿಂದೆಲ್ಲಾ ಇಂತಹ ವಿಶೇಷ ವ್ಯವಹಾರಗಳ ಮೂಲಕ ತಮ್ಮ ಕೃತಿಗಳಿಗೆ ಪ್ರಶಸ್ತಿ ಗಿಟ್ಟಿಸುತ್ತಿದ್ದ ಈ ಮಿತ್ರ ಬಳಗಕ್ಕೆ ಇಂದು ಅದು ಸಾಧ್ಯವಾಗದೆ ಹೋದದ್ದು ಇವರನ್ನು ಆಘಾತಕ್ಕೊಳಪಡಿಸಿದೆ. ಇಂತಹ ಆಘಾತದ ಪರಿಣಾಮವಾಗಿ ಸ್ವಕಪೋಲ ಕಲ್ಪಿತ ಕತೆಗಳನ್ನು ಕಟ್ಟುತ್ತಿರಬಹುದು.

ಸಂವಾದದ ಮೂಲಕ ನಮ್ಮ ಕನಸು– ಬದುಕಿನ ಚೆಲುವನ್ನು ಹೆಚ್ಚಿಸುವ ಪ್ರಯತ್ನ, ನಮ್ಮ ಭಾಷೆಯಲ್ಲಿ ಸಂಭವಿಸುವ ಘಟನೆಗಳನ್ನು ಗ್ರಹಿಸುವ ರೀತಿ ನಿರೂಪಿಸುವ ಮತ್ತು ನಿರ್ವಹಿಸುವ ಕೆಲಸ ಸಮಗ್ರವಾಗಬೇಕೆನ್ನುವುದು. ಈ ದೃಷ್ಟಿಕೋನದಿಂದಲೇ ಸ್ಥೂಲವಾಗಿ ವೈಯಕ್ತಿಕ ವ್ಯವಹಾರಗಳಂತೆ ತೋರುವ ಮೇಲಿನ ಘಟನೆಯನ್ನು ಅನಿವಾರ್ಯವಾಗಿ ಪ್ರಸ್ತಾಪಿಸಬೇಕಾಗಿದೆ.

ಇನ್ನೊಂದು ದಿಕ್ಕಿನಿಂದಲೂ ಇದರ ಪ್ರಸ್ತಾಪ ಅಗತ್ಯವೆನಿಸುತ್ತದೆ. ಅದೆಂದರೆ ನಮ್ಮ ಈ ಮಿತ್ರರು ತಮ್ಮ ಕಥೆಗಳ ಮೂಲಕ ಮಾಡುತ್ತಿರುವ ಆಪಾದನೆಗಳು ಸಾಹಿತ್ಯ ಅಕಾಡೆಮಿಯು ಕೃತಿಗಳಿಗೆ ಪ್ರಶಸ್ತಿ ನೀಡಲು ಅಳವಡಿಸಿಕೊಂಡಿರುವ ವ್ಯವಸ್ಥೆಯಲ್ಲಿ ಸುಲಭ ಸಾಧ್ಯವಾಗುವಂತಹವುಗಳು. ಬಹುತೇಕ ಹಿಂದೆಲ್ಲಾ ಇಂತಹ ವ್ಯವಹಾರ ನಡೆಯುತ್ತ ಬಂದಿವೆ. ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಮತ್ತು ಕೆಲವು ಪ್ರಭಾವೀ ಸದಸ್ಯರುಗಳು ತಮಗಿಷ್ಟವಾದ ಲೇಖಕನಿಗೆ ಪ್ರಶಸ್ತಿ ದೊರಕಿಸಲು ಸಹಾಯಕವಾಗುವಂತಹ ತೀರ್ಪುಗಾರರನ್ನು ನೇಮಿಸಲು ಈಗಿನ ವ್ಯವಸ್ಥೆಯಲ್ಲಿ ಅವಕಾಶವಿದೆ. ಸಾಹಿತಿಯಲ್ಲದ ಸಾಹಿತ್ಯರಾಜಕಾರಣ ಪೀಡಿತನಾದ

ಅಧ್ಯಕ್ಷನೊಬ್ಬ ಅಕಾಡೆಮಿಗೆ ಬಂದರೆ ಇಂತಹ ಅವಕಾಶದ ಗರಿಷ್ಠ ಪ್ರಮಾಣದ ದುರುಪಯೋಗ ಸಾಧ್ಯವಾಗುತ್ತದೆ. ಆದ್ದರಿಂದ ನಾಡಿನ ಪ್ರಜ್ಞಾವಂತರೆಲ್ಲಾ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿತರಣಾ ವ್ಯವಸ್ಥೆಯನ್ನು ಪುನರ್ ರಚಿಸುವ ಬಗ್ಗೆಯೇ ಯೋಚಿಸುವ ಅಗತ್ಯ ಉಂಟಾಗಿದೆ.

ಪ್ರಾಮಾಣಿಕ ತುಡಿತಗಳುಳ್ಳ ಸೃಜನಶೀಲ ಮನಸ್ಸಿನ ಇಂದಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಹಿಂದೆ ನಡೆದಿರಬಹುದಾದ ಮತ್ತು ಮುಂದೆ ಪುನರಾವರ್ತನೆಗೊಳ್ಳಬಹುದಾದ ದೋಷಪೂರಿತ ನಿರ್ಣಯಗಳಿಗೆ ಅವಕಾಶವಾಗದಂತಹ ವ್ಯವಸ್ಥೆಯೊಂದನ್ನು ರೂಪಿಸಲು ಸಾಧ್ಯವಾದರೆ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ತಟ್ಟಿರುವ ಶಾಪ ವಿಮೋಚನೆಯಾದಂತೆ. ಹಾಗಾಗದಿದ್ದಲ್ಲಿ ನಮ್ಮನ್ನು ಸುತ್ತುವರಿದಿರುವ ಭ್ರಷ್ಟ ರಾಜಕಾರಣ ಸಾಹಿತ್ಯ ಅಕಾಡೆಮಿಯನ್ನು ಪ್ರವೇಶಿಸಲು ಅವಕಾಶ ಮಾಡಿ ಕೊಟ್ಟಂತಾಗುವುದು ಹೇಗೂ ನಮ್ಮಲ್ಲಿ ಇಂತಹ ರಾಜಕಾರಣ ಪೀಡಿತ ಸಾಹಿತಿಗಳು ಇದ್ದೇ ಇದ್ದಾರೆ. ಅವರಿಗೆ ತಂಗುದಾಣವಾಗಿ ಅಂತಹ ಸಾಹಿತ್ಯ ಅಕಾಡೆಮಿ ಹೊಂದಿ ಬರುತ್ತದೆ.

ಹೊಸ ಪುಸ್ತಕಗಳು.

ಅಪರಿಮಿತದ ಕತ್ತಲೊಳಗೆ
(ಕಾದಂಬರಿ) ಲೇ. ಪ್ರ. ಆರ್. ವಿಜಯರಾಘವನ್, ಮೇನೇಜರ್,
ಕೋಲಾರ ಗ್ರಾಮೀಣ ಬ್ಯಾಂಕ್, ಪ್ರಧಾನ ಕಛೇರಿ, ಕೋಲಾರ-563101
ಪುಟ-166. ಬೆಲೆ 15-00

ಒಂದಿಷ್ಟು ಕವಿತೆಗಳು.
(ಕವನ ಸಂಕಲನ) ಲೇ. ಬಿ. ಟಿ. ದೇಸಾಯಿ
ಪ್ರ. ಹೊಸ ಕಾವ್ಯ ಪ್ರಕಾಶನ ಹೈದರಾಬಾದ್,
ಪುಟಗಳು X+52 ಬೆಲೆ 10-00

ನಾನು ಮತ್ತು ನೆರಳು,
(ಕವನ ಸಂಕಲನ) ಲೇ. ಮತ್ತು ಪ್ರ. ಮೋಹನದಾಸ್ ಧಾವಸ್ಕರ್ 91,
ಧರ್ಮಶ್ರೀ, ಶಂಕರಪುರಂ. ಬೆಂಗಳೂರು-560004,
ಪುಟಗಳು 64+XVI. ಬೆಲೆ 15-00

ತಟ್ಟೀರಾಯ ಮತ್ತು ನಾನು.
(ಕವನ ಸಂಕಲನ) ಲೇ. ಎ. ಎಸ್. ಶ್ಯಾನ್‌ಭಾಗ್
ಪ್ರ. ಪ್ರಯೋಗ ಪ್ರಕಾಶನ ಡಿ/8. ಶೀತಲ್, ಶ್ರೀರಾಮ ನಗರ್,
ಎಸ್.ವಿ. ರೋಡ್, ಬೋರಿವ್ಲಿ (ವೆಸ್ಟ್) ಬೊಂಬಾಯಿ-400092

ಒರೆಗಲ್ಲು (ವಿಮರ್ಶಾತ್ಮಕ ಲೇಖನಗಳು)
ಲೇ. ವಿ. ಗ. ನಾಯಕ,
ಪ್ರ. ಸ್ಮೃತಿ ಪ್ರಕಾಶನ, ಅಡ್ಯನಡ್ಕ-574260.
ಪುಟ-115+XIII ಬೆಲೆ-15-00

ಆರ್. ಎಸ್. ಎಸ್. ಅಂತರಂಗ (ಅನುಭವ)
ಲೇ. ಎ. ಕೆ. ಸುಬ್ಬಯ್ಯ.
ಪ್ರ. ಸಂಗಾತಿ ಪ್ರಕಾಶನ, ಪಿ.ಬಿ. ನಂ, 4026.
ವಿಜಯನಗರ, ಬೆಂಗಳೂರು-560040
ಪುಟ- 88 ಬೆಲೆ 10-00

ಸ್ವಾಭಿಮಾನದ ಬೀಡಿಗೆ (ಕವನ ಸಂಕಲನ)
ಲೇ. ವಿ. ಮುನಿವೆಂಕಟಪ್ಪ
ಪ್ರ. ವಿಚಾರವಾದಿ ಪ್ರಕಾಶನ
382, 4 ನೇ ಮೈನ್, ಸರಸ್ವತಿ ಪುರಂ, ಮೈಸೂರು-570009
ಪುಟ- 72. ಬೆಲೆ 10-00

ಶಿಕಾರಿಯ ಸೀಳುನೋಟ.

(ಬಡ್ಡಕ್ಕ ಅಪ್ಪಯ್ಯಗೌಡರ ಸಾಹಸ ಕಥನ)
ಲೇ. ಪ್ರಭಾಕರ ಶಿಶಿಲ.
ಪ್ರ. ಸ್ವಂತಿಕಾ ಪ್ರಕಾಶನ, ಸುಳ್ಯ (ದ.ಕ.) –574246
ಪುಟ, 115. ಬೆಲೆ 18–00

ಬಕಾಲ. (ಕವನ ಸಂಕಲನ)

ಲೇ. ಕೆ. ಬಿ. ಸಿದ್ದಯ್ಯ
ಪ್ರ. ಚಲನ ಪ್ರಕಾಶನ ಸಹಕಾರಿ ತುಮಕೂರು–572101
ಪುಟ. 27+7. ಬೆಲೆ. 7–00

ಜೀವನ ಧರ್ಮ.
ಲೇ. ಸ್ವಾಮಿ ನಿರ್ಮಲಾನಂದ, ಅನುವಾದ - ಶಂಕರನಾರಾಯಣ ಶಿವತಾಳ
ಪ್ರ. ವಿಶ್ವಶಾಂತಿ ನಿಕೇತನ
ಅಂಚೆ ಬಿ. ಆರ್. ಹಿಲ್ಸ್, ಚಾಮರಾಜನಗರ
ಮೈಸೂರು ಜಿಲ್ಲೆ - 571313
ಪುಟ 72 ಬೆಲೆ 10–00

ಪ್ರಾಪ್ತಿ (ಕಥಾ ಸಂಕಲನ)
ಲೇ. ಸಿ. ಎನ್. ರಾಮಚಂದ್ರ.
ಪ್ರ. ಸತೀಶ್ ಪ್ರಕಾಶನ
149/ಬಿ. ಹುಡ್ಕೋ ಕಾಲೋನಿ
ನ್ಯೂಟೌನ್ ಭದ್ರಾವತಿ–1
ಪುಟ. 100+X ಬೆಲೆ–15

ಒಂದು ಕಥಾನಕದ ಮೂಲಕ (ಕಾದಂಬರಿ)
ಲೇ. ಕೆ. ಸತ್ಯನಾರಾಯಣ
ಪ್ರ. ಋಜುವಾತು ಪ್ರಕಾಶನ–849,
ಹೊಸಕಾಂತರಾಜ ಅರಸು ರಸ್ತೆ, ಕುವೆಂಪು ನಗರ,
ಮೈಸೂರು–570023.
ಪುಟ. 220+8 ಬೆಲೆ 20–00

ನಿರೀಕ್ಷೆ (ಕವನ ಸಂಕಲನ)
ಲೇ. ರಾಜಶೇಖರ – ಹನುಮಲಿ
ಪ್ರ. ಯುವ ಹಿರಿಯ ವಿದ್ಯಾರ್ಥಿ ಸಂಘ
ಎಂ. ಬಿ. ಆರ್. ಕಾಲೇಜು ಸಿರಿಗೆರೆ
ಚಿತ್ರದುರ್ಗ ಜಿಲ್ಲೆ–577541
ಪುಟ 55+X1 ಬೆಲೆ 12–00

ಬೇರು–ಬಿಳಲು.
ಸಂ. ತಾಳ್ತಜೆ ವಸಂತಕುಮಾರ್
ಅರವಿಂದ ನಾಡಕರ್ಣಿಯವರ ಸಾಹಿತ್ಯ ಕೃಷಿಯ ಪ್ರಬಂಧಗಳು
ಪ್ರ ಪ್ರಯೋಗ ಪ್ರಕಾಶನ, ಮುಂಬಯಿ
ಪುಟಗಳು. XV1+208 ಬೆಲೆ 25–00

ಈ ಸಂಚಿಕೆಯ ಲೇಖಕರು.

* **ದಿ. ಡಾ॥ ಬಿಟಗೇರಿ ಕೃಷ್ಣಶರ್ಮ** (ಅನುವಾದ)
* **ಜಿ. ಪಿ. ಬಸವರಾಜು,** ಡಿ-14, ವ್ಯಾಸನಗರ ಹೌಸಿಂಗ್ ಕಾಂಪ್ಲೆಕ್ಸ್ ಕರ್ನಾಟಕ ಪಾಲಿಟೆಕ್ನಿಕ್ ಹಿಂಭಾಗ ಬಿಜೈ ಅಂಚೆ ಮಂಗಳೂರು-575004
* **ಈ. ಚಂದ್ರ ತಾಳೀಕಟ್ಟೆ,** ತಾಳೀಕಟ್ಟೆ-577539 ಹೊಳಲ್ಕೆರೆ ತಾ॥ (ಚಿತ್ರದುರ್ಗ ಜಿಲ್ಲೆ)
* **ಕೆ. ಪಿ. ಮೃತ್ಯುಂಜಯ,** ಕಲ್ಕೆರೆ-572221
* **ಲೋಕೇಶ ಅಗಸನಕಟ್ಟೆ,** ಉಪನ್ಯಾಸಕರು, ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು ಚಿತ್ರದುರ್ಗ
* **ನೇರಹಳ್ಳಿ ಬಾಲಸುಬ್ರಹ್ಮಣ್ಯ,** 76, ಎರಡನೇ ಕ್ರಾಸ್, ನಾಗಪ್ಪ ಬ್ಲಾಕ್, ಶ್ರೀರಾಮಪುರಂ ಬೆಂಗಳೂರು-560021
* **ಡಾ॥ ಎಚ್. ಎಸ್. ವೆಂಕಟೇಶಮೂರ್ತಿ,** ನಂ. 101, ಗಣೇಶ ಮಂದಿರ ರಸ್ತೆ, ಎರಡನೇ ಬ್ಲಾಕ್, ತ್ಯಾಗರಾಜನಗರ-ಬೆಂಗಳೂರು-560028
* **ಜಿ. ರಾಜಶೇಖರ್,** ಡಿವಿಜನಲ್ ಆಫೀಸ್, ಜೀವವಿಮಾ ನಿಗಮ ಉಡುಪಿ-576101
* **ಡಿ. ಎಸ್. ನಾಗಭೂಷಣ,** ಆಕಾಶವಾಣಿ, ಬೆಂಗಳೂರು-560001
* **ಸಿ. ಆರ್. ಅಣಜಿ,** ಇಂಗ್ಲೀಷ್ ಉಪನ್ಯಾಸಕರು, ಜೂನಿಯರ್ ಕಾಲೇಜು, ಮಲ್ಲಾಡಿಹಳ್ಳಿ-577531
* **ಎನ್. ಎಸ್. ಚಿದಂಬರ ರಾವ್,** ಬಸವನಗುಡಿ ಬೀದಿ, ಚನ್ನಗಿರಿ-577 213
* **ರಾಘವೇಂದ್ರ ಪಾಟೀಲ,** ಸಂವಾದ ಕುಟೀರ, ಮಲ್ಲಾಡಿಹಳ್ಳಿ-577531
* **ಗೌರೀಶ ಕಾಯ್ಕಿಣಿ,** ಮಣಿಭದ್ರ ರಸ್ತೆ, ಗೋಕರ್ಣ (ಉ. ಕ.) 581326
* **ಶ್ರೀನಿವಾಸ ಪ್ರಸಾದ್,** ಆಕಾಶವಾಣಿ, ಭದ್ರಾವತಿ, 577 301
* **ನಾ. ಸುಧೀಂದ್ರ,** ಆಕಾಶವಾಣಿ, ಭದ್ರಾವತಿ, 577 301
* **ಜಿ. ಎಲ್. ರಾಮಪ್ಪ,** ಮಲ್ಲಾಡಿಹಳ್ಳಿ-577 531

ಚಂದಾದಾರರಿಗೆ ಸೂಚನೆ : ಅನೇಕ ಚಂದಾದಾರರು ವಾರ್ಷಿಕ ಚಂದಾ ಅಥವಾ ಆಜೀವ ಚಂದಾದ ಮುಂದಿನ ಕಂತುಗಳನ್ನು ಕಳಿಸಲು ಮರೆತಂತಿದೆ. ದಯವಿಟ್ಟು ಈಗಲಾದರೂ ನೆನಪಿಟ್ಟು ಚಂದಾ ಕಳಿಸಿ, ಪತ್ರಿಕೆ ಬೇಡವಾಗಿದ್ದರೆ ಎರಡು ಸಾಲುಗಳ ಕಾರ್ಡನ್ನು ಹಾಕುವ ಮೂಲಕ ಪತ್ರಿಕೆಯ ಆರ್ಥಿಕ ಸ್ಥಿತಿ ಹದಗೆಡದಂತೆ ಸಹಕರಿಸಿ.

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೨

ಈ ಸಂಕಲನದ ಸಂಪಾದಕರು :

ವೈ. ಮಂಜಪ್ಪ

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ.

ಈ ಸಂಚಿಕೆಯ ಲೇಖಕರು :

* **ದಿವಂಗತ ಬೆಟಗೇರಿ ಕೃಷ್ಣಶರ್ಮ,** [ಆನಂದಕಂದ]

* **ಹೆಚ್. ಎಸ್. ಪಾರ್ವತಿ,**
ಕಾರ್ಯಕ್ರಮ ನಿರ್ವಾಹಕರು,
ಆಕಾಶವಾಣಿ, ಮೈಸೂರು–2

* **ಡಾ|| ಹೆಚ್. ಎಸ್. ವೆಂಕಟೇಶಮೂರ್ತಿ,**
101, ಗಣೇಶಮಂದಿರ ರಸ್ತೆ,
ಎರಡನೇ ಬ್ಲಾಕ್,
ತ್ಯಾಗರಾಜ ನಗರ, ಬೆಂಗಳೂರು - 560028

* **ಎಂ. ಎಸ್. ಶ್ರೀರಾಮ್,**
ನಂ. 3 ನಾಲ್ಕನೇ ಮುಖ್ಯ ರಸ್ತೆ,
ಚಾಮರಾಜಪೇಟೆ – ಬೆಂಗಳೂರು – 560018

ನನ್ನ ನೆನಪುಗಳು

● ಡಾ|| ಬೆಟಗೇರಿ ಕೃಷ್ಣಶರ್ಮ [ಆನಂದಕಂದ]

ನನ್ನ ತಂದೆ

ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನಲ್ಲಿ ಬೆಟಗೇರಿ ಒಂದು ಇನಾಮು ಹಳ್ಳಿ. ಸಿಂದಿ-ಕುರಬೇಟ ದೇಸಾಯರ ವಶಕ್ಕೆ ಸೇರಿಸುದು. ಅಲ್ಲಿಯ ವತನದಾರ ಗೌಡರ ಮನೆತನದಲ್ಲಿ ಹುಟ್ಟಿದ ನಮ್ಮ ತಂದೆ ಶ್ರೀನಿವಾಸರಾಯರು ನಮ್ಮ ಒಂದು ವತನೀಯ ಹಳ್ಳಿಯ ಕುಲಕರ್ಣಿಕೆಯನ್ನು ಹೊಂದಿದ್ದರು. ನನ್ನ ಚಿಕ್ಕತನದಲ್ಲಿಯೇ ಅವರು ಕಣ್ಮರೆಯಾದರಾದರೂ ಮರೆಯತಕ್ಕ ವ್ಯಕ್ತಿ ಅವರಲ್ಲ. ಇದ್ದ ದಿನಗಳಲ್ಲಿಯೇ ಅವರು ತಮ್ಮ ಅನೇಕ ನೆನಪುಗಳನ್ನು ನಮ್ಮಲ್ಲಿ ಇರಿಸಿ ಹೋಗಿದ್ದಾರೆ.

ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದವರಾದರೂ ನಮ್ಮ ತಂದೆಯವರು ಅನೇಕ ನಾಗರಿಕ ಸಂಸ್ಕಾರಗಳಿಂದ ಕೂಡಿದವರಾಗಿದ್ದರು. ಕನ್ನಡ ಭಾಷೆಯನ್ನು ಓದಲೂ ಬರೆಯಲೂ ಬಾರದ ಆ ಕಾಲದಲ್ಲಿ ನಮ್ಮ ತಂದೆಯವರು ಕನ್ನಡ ಅಕ್ಷರಗಳನ್ನು ಸುಂದರವಾಗಿ ಬರೆಯುತ್ತಿದ್ದರು. ಕನ್ನಡವನ್ನು ಓದುತ್ತಿದ್ದರು. ಆದರೂ ಮರಾಠಿ ಭಾಷೆಯು ಅವರಿಗೆ ಮನೆಮಾತಿನಂತೆ ಸಹಜವಾಗಿತ್ತು. ಜೋತಿಷದಲ್ಲಿ ಅವರು ಹೇಗೆ ಪಾಂಡಿತ್ಯವನ್ನು ಗಳಿಸಿದ್ದರೆಂಬುದನ್ನು ನಾನರಿಯೆ. ಏಕೆಂದರೆ ನಾನು ಚಿಕ್ಕ ಕೂಸಾಗಿದ್ದಾಗ ಅವರು ನಮ್ಮ ತಾಯಿಯ ಮುಂದೆ ಆಗಾಗ ಹೇಳುತ್ತಿದ್ದರಂತೆ-"ಇವನ ಭವಿಷ್ಯ ಬಹಳ ಚೆನ್ನಾಗಿದೆ. ಎಲ್ಲ ಮಕ್ಕಳಂತೆ ಇವನಲ್ಲ. ಇವನಿಂದಲೇ ನಮ್ಮ ಮನೆತನದ ಕೀರ್ತಿ ಬೆಳಗುವದು". ಇದನ್ನು ಕೇಳಿದಾಗ, ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಅರಿತುಕೊಂಡ ನಮ್ಮ ತಾಯಿ "ಏನೋ ಏನೋ, ಎಲ್ಲ ಮಕ್ಕಳಂತೆ ಇವನೊಬ್ಬ ಹುಟ್ಟಿದ್ದಾನೆ. ಹತ್ತರಂತೆ ಹನ್ನೊಂದು" ಎಂದು ಗೇಲಿ ಮಾಡುತ್ತಿದ್ದರಂತೆ. ಸಂಗೀತದಲ್ಲಿ ನಮ್ಮ ತಂದೆಗೆ ಆಸಕ್ತಿ ಹೆಚ್ಚು. ಮನೆಯಲ್ಲಿ ತಂಬೂರಿ-ತಬಲಾಗಳು ಇದ್ದುವು. ತಬಲಾ ಬಾರಿಸುವುದರಲ್ಲಿ ಇವರದು ಎತ್ತಿದ ಕೈ. ಹಳೆಯ ಬಯಲಾಟದಲ್ಲಿ ಆಗಲಿ, ಹರಿಕೀರ್ತನಕಾರರು ಬಂದಾಗ ಆಗಲಿ,

ಸಂಗೀತ ಪ್ರಸಂಗಗಳಲ್ಲಿಯೇ ಆಗಲಿ, ಶಾಸ್ತ್ರೀಯವಾಗಿ ತಬಲಾ ಬಾರಿಸುವವರು ಇವರೇ. ಅಲ್ಲದೆ ನಮ್ಮ ಪ್ರದೇಶದ ಜನರಿಗೆಲ್ಲ ಅವರು ತಾಳ–ರಾಗಗಳಲ್ಲಿ ಪ್ರವೀಣರೆಂದು ಹೆಸರಾಗಿದ್ದರು. ಹಳ್ಳಿಯ ವಾದ್ಯಗಳ ಮೇಳದಲ್ಲಿ ಮುಖ್ಯ ನಿರ್ಣಾಯಕರೆಂದರೆ ಇವರೇ. ತಂಬೂರಿ ಶೃತಿಯನ್ನು ಕೂಡಿಸಿ ತಮಗೆ ಬಂದ ಪದ-ಪದ್ಯಗಳನ್ನು ಸರಾಗವಾಗಿ ಹೇಳುತ್ತಿದ್ದರು.

ಮಣ್ಣಿನಿಂದ ಬೇರೆ ಬೇರೆ ಗೊಂಬೆಗಳನ್ನು ಮಾಡಿ ಅವುಗಳಿಗೆ ಬೇರೆ ಬೇರೆ ಬಣ್ಣಗಳನ್ನು ಕೊಟ್ಟು ಅಣಿಗೊಳಿಸುವ ಕಲೆಯಲ್ಲಿ ಇವರು ಪಳಗಿದವರು. ಗಣಪತಿ ಮಾಡುವುದರಲ್ಲಂತೂ ತಜ್ಞರು. ಪ್ರತಿ ವರ್ಷವೂ ಗಣಪತಿಗೆ ಬೇರೆ ಬೇರೆ ಭಂಗಿ. ಬೇರೆ ಬೇರೆ ಆಕಾರ. ಬಣ್ಣ ಹಚ್ಚುವ ಕೆಲಸದಲ್ಲಂತೂ ಗೋಕಾವಿಯ ಜೀನಗಾರರನ್ನು ಮೀರಿಸಿದವರು.

ಕುಲಕರ್ಣಿಕೆಯ ಕೆಲಸ ಮಾಡುವ ಹಳ್ಳಿಯ ಜನರಿಗೆ ಇವರು ತುಂಬಾ ಪ್ರೀತಿಯವರು. ಸಜ್ಜನಿಕೆ ಇವರಲ್ಲಿ ಮನೆ ಮಾಡಿತ್ತು. ಮೇಲಿನವರ ವೆಚ್ಚಕ್ಕಾಗಿ ಆಗಬಹುದಾದ ಖರ್ಚನ್ನು ರೈತರು ತಾವೇ ಮಾಮೂಲಾಗಿ ಸಂಗ್ರಹಿಸಿ ಕುಲಕರ್ಣಿಗೆ ಕೊಡುತ್ತಿದ್ದರಲ್ಲದೆ ನಮ್ಮ ತಂದೆಯವರು ತಾವಾಗಿಯೇ ಯಾವ ರೈತರಿಂದಲೂ ಲಂಚವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆದುದರಿಂದ ಕುಲಕರ್ಣಿಯವರೆಂದರೆ ರೈತರಿಗೆ ಜೀವಪ್ರಾಣ.

ನಾನು ಚಿಕ್ಕವನಿದ್ದಾಗ ನನ್ನನ್ನು ಮುಂದೆ ಕುಳ್ಳಿರಿಸಿಕೊಂಡು ಅನೇಕ ಸಂಸ್ಕೃತ ಶ್ಲೋಕಗಳನ್ನು ಕನ್ನಡ ಪದ್ಯಗಳನ್ನು ಬಾಯಿಪಾಠ ಮಾಡಲು ಹೇಳುತ್ತಿದ್ದರು. ನನ್ನ ಉಪನಯನವಾದ ವರ್ಷವೇ ಅಂದರೆ 1912 ನೇ ಇಸ್ವಿಯಲ್ಲಿ ವೆಂಕಟರಮಣನ ಗಿರಿಗೆ ಹೋದಾಗ ಅಲ್ಲಿಯೇ ತೀರಿಕೊಂಡರು. ಅವರು ನಮಗೆ ಕಲಿಸಿದ ಕೃಷ್ಣಾಷ್ಟಕ, ಗೋಪಿಗೀತ, ದಾಮೋದರಾಷ್ಟಕ, ವೇಣುಗೀತ, ಭ್ರಮರಗೀತ, ಮಂಗಳಾಷ್ಟಕ, ವೆಂಕಟೇಶ ಸ್ತೋತ್ರ, ವಾಯುಸ್ತುತಿ, ರಾಘವೇಂದ್ರ ಸ್ತೋತ್ರ ಮೊದಲಾದ ಅನೇಕ ಸ್ತೋತ್ರ ಪದ್ಯಗಳು ನಮಗೆ ಬಾಯಿಪಾಠವಾಗಿದ್ದವು. ಎಲ್ಲವನ್ನೂ ಪರಿಶುದ್ಧವಾದ ಸಂಸ್ಕೃತ ಭಾಷೆಯಲ್ಲಿ ನಮಗೆ ಹೇಳಿಕೊಟ್ಟಿದ್ದರು. ಒಂದು ರೀತಿಯಿಂದ ಅವರೇ ನಮ್ಮ ಭಾಷಾಗುರುಗಳೆಂದು ಹೇಳಬಹುದು.

ಅವರ ಕುಲಕರ್ಣಿಕೆಯ ಕಾಲದ ಒಂದು ವಿಲಕ್ಷಣವಾದ ನೆನಪನ್ನು ಈಗ ಹೇಳುತ್ತೇನೆ– 1906 ನೇ ವರ್ಷ. ನಮ್ಮ ಕಡೆಗೆಲ್ಲ ತುಂಬಾ ಬರಗಾಲ. ಹೊಲಗಳಲ್ಲಿ

ನೆಯೇನೂ ಬಂದಿರಲಿಲ್ಲ, ಮಕ್ಕಳೊಂದಿಗಳಾದ ನಮ್ಮ ತಾಯಿ ಆಗಾಗ ಈ ಬರಗಾಲವನ್ನು ಕುರಿತು ಚಿಂತೆ ಮಾತುಗಳನ್ನು ಆಡುತ್ತಿದ್ದಳು. ಆಗೆಲ್ಲ ನಮ್ಮ ತಂದೆಯವರು ಹೇಳುತ್ತಿದ್ದುದು ಒಂದೇ ಮಾತು – "ದೇವರಿದ್ದಾನೆ". ಆದರೂ ಮನದಲ್ಲಿ ಮುಂದಿನ ಬವಣೆಯನ್ನು ಕುರಿತು ನಮಗಾರಿಗೂ ತಿಳಿಯದಂತೆ ಯೋಚಿಸುತ್ತಿದ್ದಿರಬಹುದು. ಆದರೆ ದೇವರ ಮೇಲೆ ಅವರದು ಪೂರ್ಣ ಶ್ರದ್ಧೆ.

ಒಂದು ದಿನ ನಮ್ಮ ಕುಲಕರ್ಣಿಕೆಯ ಹಳ್ಳಿ ಬಗರನಾಳದಿಂದ ಏಳೆಂಟು ಜನ ಪ್ರಮುಖ ರೈತರು ಕೂಡಿ ನಮ್ಮ ಮನೆಗೆ ಬಂದರು. ಯೋಗಕ್ಷೇಮದ ಮಾತುಗಳು ನಡೆದವು. "ಕುಲಕರ್ಣ್ಯಾರ, ಈ ವರ್ಷ ನಿಮ್ಗ ಕಾಳುಕಡಿ ಹೆಂಗ ಬಂದಾವರಿ, ಎಷ್ಟೆಷ್ಟು ಬಂದಾವರಿ" ಎಂದು ಕೇಳಿದರು. ಆಗ ನಮ್ಮ ತಂದೆಯವರು ಅವರನ್ನೆಲ್ಲ ಒಳಮನೆಗೆ ಕರೆದು ತಂದು ಎರಡು ಚಿಮಣಿಯ–ಡಬ್ಬಿ ಗಳಲ್ಲಿ ತುಂಬಿಟ್ಟ ಕಾಳನ್ನು ತೋರಿಸಿ "ಇದು ಈ ವರ್ಷದ ನಮ್ಮ ಬೆಳೆ" ಎಂದು ಹೇಳಿದರು. ರೈತರು ತುಂಬಾ ಕುತೂಹಲಿಗಳಾಗಿ "ಇಷ್ಟೇನೇ" ಎಂದು ಹಣೆ ಬಡಿದುಕೊಂಡು ಕೇಳಿದರು. ಬಳಿಕ "ಮುಂದೆ ಇನ್ಹ್ಯಾಂಗರಿ ಕುಲಕರ್ಣ್ಯಾರ" ಎಂದು ಕೇಳಿದರು. ಅವರಿಗೂ ಅದೇ ಉತ್ತರ– "ದೇವರು ಇದ್ದಾನೆ" ಎಂದು. ಆಗ ರೈತರಲ್ಲಿಯ ಒಬ್ಬ ಪ್ರಮುಖ ರೈತ ಹೇಳಿದ– "ದೇವರೇನ್ರಿ ನಮ್ಮ ನಮ್ಮ ಪಾಪದ ಫಲ ನಮ್ಗ ಉಣ್ಣಾಕ ಹಚ್ಚಾನ್ರಿ. ಈಗ ನಾವು ಮನುಷ್ಯಾರು. ಇಬ್ಬರದೊಬ್ಬರ ಸುಖ-ದುಃಖ ನಾವ ನೋಡಬೇಕ್ರಿ. ನೀವೀಗ ಇನ್ನೇನು ಮಾಡಬೇಡ್ರಿ. ನಮ್ಮ ಹಳ್ಯಾಗ ನಿಮಗಾಗಿ ಒಂದು ಮನಿ ನೋಡ್ತೇನಿ. ನಿಮ್ಮ ಸಾಮಾನ ತಗೊಂಡು ಬರಾಕ ಚಕ್ಕಡಿ ಕಳಿಸ್ತೇವಿ. ಎರಡು ದಿನ್ನದಾಗ ನಮ್ಮೂರಿಗೆ ಬಂದಬಿಡ್ರಿ. ಅಲ್ಲೇ ಇದ್ದು ನಮ್ಮೂರ ತಂದಿತಾಯಾಗಿ ಇದ್ದೀರಂತ." ಎಂದು ಹೇಳಿ ಒತ್ತಾಯದಿಂದ ನಮ್ಮ ತಂದೆಯವರನ್ನು ಒಪ್ಪಿಸಿದರು. ಆಡಿದ ಮಾತಿನಂತೆ ರೈತರು ಮರುದಿನವೇ ಚಕ್ಕಡಿಗಳನ್ನು ಕಳಿಸಿ, ಜೀವನಕ್ಕೆ ಬೇಕಾದ ಎಲ್ಲಾ ಸಾಮಾನುಗಳನ್ನು ತಮ್ಮಲ್ಲಿಗೆ ತರಿಸಿಕೊಂಡರು. ನಮ್ಮನ್ನು ಅಲ್ಲಿಗೆ ಕರೆಯಿಸಿಕೊಂಡರು. ನಮ್ಮದೇನು ಸಣ್ಣ ಸಂಸಾರವಲ್ಲ. ಮನೆಯಲ್ಲಿ ಹದಿನಾಲ್ಕು–ಹದಿನೈದು ಜನರು. ಅಷ್ಟು ದೊಡ್ಡ ಸಂಸಾರದ ಹೊಣೆಯನ್ನು ಅಂದಿನಂಥ ಆ ಬರಗಾಲದಲ್ಲಿ ಆ ರೈತರು ಹೊತ್ತುಕೊಂಡರು. ನಮಗೆ ಯಾವ ಮಾತಿನ ಕೊರತೆಯೂ ಆಗಗೊಡಲಿಲ್ಲ. ನಮ್ಮ ಮನೆಯ ಎಲ್ಲ ಸಂಪ್ರದಾಯಗಳೂ ತಪ್ಪದೇ ನಡೆಯುತ್ತಿದ್ದವು. ಇಷ್ಟೇ ಅಲ್ಲ, ನಮ್ಮ ತುಂಬು ಬಸಿರಿನ ತಾಯಿ ಅಲ್ಲಿಯೇ ಒಬ್ಬ ಹೆಣ್ಣುಮಗುವನ್ನು ಹೆತ್ತರು. ಮುಂದೆ ಅಲ್ಲಿಯೇ ನಮ್ಮ ಅಣ್ಣನೊಬ್ಬನ ಉಪನಯನ ಸಮಾರಂಭವೂ, ಅಕ್ಕ ಒಬ್ಬಾಕೆಯ ವಿವಾಹ ಸಮಾರಂಭವೂ ವಿಜೃಂಭಣೆಯಿಂದ ಜರುಗಿದವು, ಇವೆಲ್ಲ ಹೊಣೆ ನಮ್ಮ

ತಂದೆಯು ಮೇಲಿನದಾದರೂ ಅದನ್ನು ಕಡಿಮೆ ಮಾಡಿ, ರೈತರು ತಾವೇ ಹೊತ್ತು ನಡೆಯಿಸಿದರು. ಅಂದಿನ ಹಳ್ಳಿ ನನಗೆ ಒಂದು ಸ್ವರ್ಗದ ತುಣುಕಾಗಿ ಕಂಡಿತು. "ಸಹನಾವವತು ಸಹನೌ ಭುನಕ್ತು...." ಎಂಬ ಶ್ರುತಿಯ ಅರ್ಥವು ಗೊತ್ತಿರದಿದ್ದರೂ ನಮ್ಮ ರೈತರು ಅದನ್ನು ಜೀವನದೊಂದಿಗೇ ಬೆರೆಸಿಕೊಂಡು ಬೆಳೆದಿದ್ದರು. ಅದನ್ನು ಸತ್ಯ ಮಾಡಿ ತೋರಿಸಿದರು.

ನಮ್ಮ ತಂದೆಯವರೊಂದಿಗೆ ಬಹಳ ದಿನ ಬದುಕಿಕೊಂಡಿರುವ ಸೌಭಾಗ್ಯ ನಮಗೆ ದೊರೆಯಲಿಲ್ಲ. ಬೇಗನೆ ಅವರನ್ನು ಅಗಲಿದೆವು. ಅವರು ನಮ್ಮೊಂದಿಗೆ ಇನ್ನಷ್ಟು ದಿನ ಬದುಕಿದ್ದರೆ ಮಾನವನ ಸಾರ್ಥಕ ಬಾಳು ಅಂದರೇನು ಎಂಬುದು ನಮಗೆ ಇನ್ನಿಷ್ಟು ಹೆಚ್ಚಾಗಿ ಗೊತ್ತಾಗುತ್ತಿತ್ತು. ನಮ್ಮ ದುರ್ದೈವ.

ನನ್ನ ಇನ್ನೊಬ್ಬ ಅಣ್ಣ.

ನನಗೆ ತಿಳಿಯ ತೊಡಗಿದಾಗ ಅಂದರೆ ನನ್ನ ಆರನೆಯ ವರ್ಷ (1906) ಈ ನನ್ನ ಅಣ್ಣ ಇಪ್ಪತ್ತೆರಡು-ಇಪ್ಪತ್ಮೂರು ವಯಸ್ಸಿನವನಿರಬಹುದು. ಮ್ಯಾಟ್ರಿಕ್‌ವರೆಗೆ ಈತನ ಶಿಕ್ಷಣವಾಗಿದ್ದಿತು. ಅಷ್ಟರಲ್ಲಿಯೇ ಇವನ ಮದುವೆಯಾಗಿ ಆರೇಳು ವರ್ಷಗಳು ಕಳೆದಿದ್ದವು. ಯಾದವಾಡದ ಲಕ್ಷಾಧೀಶ ನಾಯಕರ ಮನೆಯ ಹೆಣ್ಣಿನೊಡನೆ ಈತನ ಮದುವೆಯಾಗಿತ್ತು. ಆ ಹೆಣ್ಣಿನ ತವರು ಮನೆಯಲ್ಲಿ ಸಂಪತ್ತಿ ಸಾಕಷ್ಟು ಇರಬಹುದಾದರೂ ಸಂಸ್ಕೃತಿಯು ಅಷ್ಟಕ್ಕಷ್ಟೇ. ಈ ಮಾತು ಆ ಮನೆಯ ಹೆಣ್ಣುಮಗಳಾದ ನಮ್ಮ ಅಣ್ಣನ ಹೆಂಡತಿಯಿಂದ ಗೊತ್ತಾಯಿತು. ಬಹಳ ಸ್ಥೂಲನಾದ ಸ್ವಭಾವದವಳು. ಮನೆಗೆಲಸದ ಜಾಣ್ಮೆಯು ಅಷ್ಟಕ್ಕಷ್ಟೇ. ಸಿಟ್ಟು ಬಂದರೆ ಹಾಸಿಗೆ ಹಿಡಿದು ಮಲಗಿದವಳು ಮೇಲಕ್ಕೆ ಏಳುತ್ತಿರಲೇ ಇಲ್ಲ. ಇವಳ ಈ ಸ್ವಭಾವದ ಮೂಲಕ ನಮ್ಮ ತಾಯಿ ಬೇಸತ್ತು ಹೋಗಿದ್ದಳು. ಗಂಡ-ಹೆಂಡತಿಯನ್ನು ಪ್ರೀತಿಸುತ್ತಿರಬಹುದು. ಆ ಕಾಲದಲ್ಲಿ ಅದು ಪ್ರತ್ಯಕ್ಷವಾಗಿ ಯಾರಿಗೂ ಗೊತ್ತಾಗುವಂತಿರಲಿಲ್ಲ. ಹೊಸ ಬಗೆಯ ಕೋರ್ಟ್‌ಶಿಪ್‌ಗೆ ಆಗ ಎಡೆಯಿರಲಿಲ್ಲ. ಆದರೆ ಆ ಹೆಣ್ಣು ಮಗಳ ಸೊಸೆತನವು ಮನೆತನದಲ್ಲಿ ಸುಖ-ಶಾಂತಿಗಳನ್ನೇನೂ ತರಲಿಲ್ಲ. ಮೇಲೆ-ಮೇಲೆ ತನ್ನ ತವರುಮನೆಗೆ ಹೊರಟು ಹೋಗುತ್ತಿದ್ದಳು. ತವರುಮನೆಯ ಹಿರಿಯರ ಒಂದು ಲೆಕ್ಕಾಚಾರದ ಜೀವನವು ನಮಗೆಲ್ಲ ಆಶ್ಚರ್ಯವನ್ನುಂಟು ಮಾಡಿತ್ತು.

ಮದುವೆಯಲ್ಲಿ ಹಾಕಿದ ಚಿನ್ನ-ಬೆಳ್ಳಿಯ ಒಡವೆಗಳನ್ನು ಅವರು ಮಗಳೊಂದಿಗೆ

ಕೊಟ್ಟು ಕಳುಹಿಸಿರಲಿಲ್ಲ. ಯಾವ ಮುಂದಿನ ಯೋಚನೆಯಿಂದಲೋ ತಮ್ಮ ಮನೆಯಲ್ಲಿಯೇ ಇರಿಸಿಕೊಂಡಿದ್ದರು. ಒಂದು-ಒಂದೂವರೆ ಸೇರಿನಷ್ಟು ಚಿನ್ನದ ಒಡವೆಗಳು ನಮ್ಮವಾದರೂ, ನಮ್ಮ ಮನೆಗೆ ಬಂದಿರಲಿಲ್ಲ. ನಮ್ಮ ತಂದೆಯವರಿಗೆ ಇದೊಂದು ಚಿಂತೆಯ ವಿಷಯವೇ ಆಗಿದ್ದಿತು. ಸಿಟ್ಟು ಬಂದು ಮಲಗಿದಾಗ ನಮ್ಮ ಅಣ್ಣನ ಹೆಂಡತಿ ತನಗೆ ಬೇಕಾಗುವ ಹಸಿವಿನ ನಿವಾರಣೆಯ ಸಾಧನಗಳನ್ನು ತನ್ನ ಕಿರುಮನೆಯ ಟ್ರಂಕಿನಲ್ಲಿಯೇ ವ್ಯವಸ್ಥೆ ಮಾಡಿಕೊಂಡಿದ್ದಳು. ಮಂದಿಯ ಕಣ್ಣಿಗೇನೋ ಇವಳು ಉಪವಾಸಿ. ಆದರೆ ಇನ್ನಾರಿಗೂ ಗೊತ್ತಾಗದಂತೆ ತನಗೆ ಹಸಿವೆಯಾದಾಗ ಟ್ರಂಕಿನೊಳಗಿನ ತಿಂಡಿ-ತಿನಿಸುಗಳನ್ನು ತಿಂದು ತನ್ನ ಹೊಟ್ಟೆಯನ್ನು ತುಂಬಿಕೊಳ್ಳುತ್ತಿದ್ದಳು. ಆದ್ದರಿಂದಲೇ ಆಕೆಯ ಮೂರು-ನಾಲ್ಕು ದಿನಗಳ ಉಪವಾಸ ಸತ್ಯಾಗ್ರಹವು ಮುಂದುವರಿಯುತ್ತಿತ್ತು. ಕಾರಣವಿರದೆ ಹೇಗೆ ಮಲಗಿಬಿಡುತ್ತಿದ್ದಳೋ ಹಾಗೆಯೇ ಒಂದು ದಿನ ಮೇಲಕ್ಕೆದ್ದು ನಗುನಗುತ್ತ ಎಲ್ಲರೊಡನೆ ಆತ್ಮೀಯತೆಯಿಂದ ಮಾತನಾಡ ತೊಡಗುವಳು. ಅಂದು ಏಕೆ ಸಿಟ್ಟು ಬಂದಿತೋ ಇಂದು ಅದೆಲ್ಲ ಸಿಟ್ಟು ಹೇಗೆ ಇಳಿದು ಹೋಯಿತೋ ಎಂಬ ಒಗಟಕ್ಕೆ ಉತ್ತರ ನಮಗಾರಿಗೂ ಗೊತ್ತಾಗುತ್ತಿರಲಿಲ್ಲ. ಅಣ್ಣನಿಗೆ ಮೊದ ಮೊದಲು ಇದೆಲ್ಲ ಸಹಜ ವಿಷಯವೇ ಆಗಿಬಿಟ್ಟದ್ದಿತು. ಹೆಂಡತಿ ಮುನಿಸಿನಿಂದ ಮಲಗಿದರೆ ಆತನಿಗೆ ಚಿಂತೆಯಿಲ್ಲ ಮತ್ತೆ ಮೇಲೆದ್ದು ನಗುನಗುತ್ತ ಇರತೊಡಗಿದುದನ್ನು ಕಂಡು ಸಂತೋಷವಿಲ್ಲ. ಸ್ಥಿತಪ್ರಜ್ಞನಂತೆ ಅವನು ದಿನಗಳನ್ನು ನೂಕುತ್ತಿದ್ದನು.

ಮ್ಯಾಟ್ರಿಕ್‌ವರೆಗೆ ಅಭ್ಯಾಸ ಮಾಡಿದ್ದನಾದರೂ ಅವನು ಮನೆಯಲ್ಲಿಯೇ ಕೆಲಸವಿಲ್ಲದೆ ಇದ್ದನು. ತಾನು ಇಂಗ್ಲೀಷ್ ಕಲಿತಿರುವೆನೆಂದು ಹೆಮ್ಮೆ ಬೇರೆ. ಹೊಲ ಮನೆಯ ಕಾರ್ಯದಲ್ಲಿಯೂ ಹಿರಿಯಣ್ಣನಂತೆ ಪ್ರತ್ಯಕ್ಷವಾದ ಯಾವ ಭಾಗವೂ ಅವನದಿರದು. ಇಂಗ್ಲೀಷ್ ಕಲಿತವರೆಂದರೆ ಅಂದಿನ ಕಾಲದಲ್ಲಿ ಯಾವುದಾದರೊಂದು ಸರ್ಕಾರಿ ನೌಕರಿಯು ಸಿಕ್ಕಬಹುದಾಗಿತ್ತು. ಮನೆಯಲ್ಲಿಯೇ ಕುಳಿತು ನೌಕರಿಗಾಗಿ ಅವನು ಪ್ರಯತ್ನಿಸುತ್ತಲೇ ಇದ್ದನು. ಇನ್ನೂ ಯಾವ ನೌಕರಿಯೂ ದೊರೆತಿರಲಿಲ್ಲ. ಆದರೆ ನಮ್ಮ ತಂದೆಯವರು ಮೇಲಿನ ಅಧಿಕಾರಿಗಳಿಗೆ ತಲೆಬಾಗುವುದಕ್ಕೆ ಬೇಸತ್ತವರಾಗಿ ತಮ್ಮ ಕುಲಕರ್ಣಿಕೆಯ ಕೆಲಸವನ್ನೇ ಈತನಿಗೆ ಒಪ್ಪಿಸಿ ತಾವು ನಿವೃತ್ತರಾಗಬೇಕೆಂದು ನಿರ್ಣಯಿಸಿದರು. ಅದರಂತೆಯೇ ಬೇಗನೆ ಬಗರನಾಳದ ಕುಲಕರ್ಣಿಕೆಯನ್ನು ಆತನ ಕಡೆಗೆ ಒಪ್ಪಿಸಿ ಮನೆಯ ಯಜಮಾನಿಕೆಯನ್ನು ಆತನ ತಲೆಯ ಮೇಲೆಯೇ ಹೊರಿಸಿದರು.

ಈ ಅವಧಿಯಲ್ಲಿ ವಿಶಿಷ್ಟವಾದ ಘಟನೆಯೊಂದು ಘಟಿಸಿತು. ಅದೆಂದರೆ

ಹೀಗಿಪೆ- ನಮ್ಮ ಗೌಡಿಕೆಯ ಮನೆತನದ ನಾಲ್ಕಾಣೆಯ ಭಾಗದ ಮನೆತನವೊಂದು ಸಂತಾನವಿಲ್ಲದೆ ದತ್ತು-ಪುತ್ರನನ್ನು ಯಾರಿಂದಲಾದರೂ ಪಡೆಯಬೇಕೆಂಬ ಯೋಚನೆಯಲ್ಲಿದ್ದಿತು. ಆ ಮನೆತನಕ್ಕೆ ಹೊಣೆಗಾರರಾಗಿದ್ದ ಹಿರಿಯ ಜನರೆಂದರೆ ನಮ್ಮ ತಾಯಿಯ ಪಕ್ಷದವರು. ಇವರು ಸ್ಪಷ್ಟವಾಗಿ- "ನಾವು ರಾಧಾಬಾಯಿಯ ಮನಸ್ಸಿಗೆ ಒಪ್ಪಿತವಾದ ಹುಡುಗನನ್ನೇ ದತ್ತಕ ಮಾಡಿಕೊಳ್ಳುವೆವು. ಬೇರೆ ಹುಡುಗ ನಮಗೆ ಒಪ್ಪಿಗೆಯಿಲ್ಲ" ಎಂದರು. ಅಂತಹ ಆಕರ್ಷಕವಾದ ಆರ್ಥಿಕ ಪರಿಸ್ಥಿತಿಯು ಆ ಮನೆತನಕ್ಕೆ ಇರಲಿಲ್ಲ. ಮನೆಯ ಯಜಮಾನನ ದುರ್ಲಕ್ಷ್ಯತನದಿಂದ ಇದ್ದ ಜಮೀನುಗಳು ಪ್ರಯೋಜನಕಾರಿಯಾಗಿ ಇರಲಿಲ್ಲ. ಕೆಲವು ಜಮೀನುಗಳು ಸಾಲದಲ್ಲಿ ಒತ್ತೆಯಾಗಿ ಸಿಕ್ಕಿಬಿದ್ದಿದ್ದವು. ಇನ್ನು ಕೆಲವು ಜಮೀನುಗಳು ದಾಯಾದಿತನದ ಜಗಳಾಟದ ಮೂಲಕ ಸಾಗುವಳಿ ಇಲ್ಲದೆ ಹಾಳು ಬಿದ್ದಿದ್ದವು. ಅಲ್ಲದೆ ಆ ಮನೆತನಕ್ಕೆ ದತ್ತಕ ಪುತ್ರನಾದವನು ಕೂಡಲೇ ಕೆಲವು ಆರ್ಥಿಕ ಹೊಣೆಗಾರಿಕೆಯನ್ನು ವಹಿಸಬೇಕಾಗಿದ್ದಿತು. ಆದುದರಿಂದಲೇ ನಮ್ಮ ತಂದೆಯವರು ಆ ಮನೆತನಕ್ಕೆ ಮಗನನ್ನು ದತ್ತು ಕೊಡಲು ಉದಾಸೀನರಾಗಿದ್ದರು. ಆದರೆ ಲೆಕ್ಕಕ್ಕಿರುವ ಅವರ ನಾಲ್ಕಾಣೆಯವತನದ ಭಾಗವು ಅನೇಕರ ಬಾಯಲ್ಲಿ ನೀರೂಡಿಸಿತ್ತು. "ನಾನು ದತ್ತಕ ಕೊಡಬೇಕು ತಾನು ದತ್ತಕ ಕೊಡಬೇಕು" ಎಂಬ ಸ್ಪರ್ಧೆ ನಡೆದಿತ್ತು. ಆದರೂ ನಮ್ಮ ತಾಯಿಯ ಕಡೆಗೆ ಕೊನೆಯ ನಿರ್ಣಯ ಇದ್ದುದರಿಂದ ನಮ್ಮಲ್ಲಿಯೇ ಯಾರನ್ನಾದರೂ ಒಬ್ಬರನ್ನು ದತ್ತು-ಪುತ್ರನನ್ನಾಗಿ ಕೊಟ್ಟು ಆ ಮನೆತನವನ್ನು ನಿಲ್ಲಿಸಬೇಕೆಂದು ಅವಳ ಯೋಚನೆಯಾಯಿತು. ಆದರೆ ಯಾವ ಮಗನನ್ನು ಕೊಡಬೇಕು ಎಂಬ ಮಾತು ಬಗೆಹರಿಯಲಿಲ್ಲ.

ಮಂತ್ರಾಲೋಚನೆ ನಡೆಯಿತು. ಕೆಲವು ಜನ ಹಿತಚಿಂತಕರು ನಮ್ಮ ತಾಯಿಗೆ- "ನೀವು ದತ್ತಕ ಕೊಡಬೇಕಾದರೆ ಸಂಪೂರ್ಣ ವಿಚಾರವನ್ನು ಮಾಡಿರಿ. ಬಹಳ ದಿನ ನಿಮ್ಮ ಮನೆತನಕ್ಕೆ ಆ ಆಸ್ತಿಯು ದಕ್ಕುವಂತೆ ಎಚ್ಚರವನ್ನು ಮೊದಲೇ ವಹಿಸಬೇಕಾದುದು ನಿಮ್ಮ ಕರ್ತವ್ಯ. ಆದುದರಿಂದ ಹಿರಿಯ ಮಕ್ಕಳನ್ನು ದತ್ತು ಕೊಡುವುದಕ್ಕಿಂತ ಎಳೆಯರಲ್ಲಿ ಯಾರಾದರೊಬ್ಬರನ್ನು ದತ್ತಕ ಕೊಡುವುದೇ ವಿಹಿತ" ಎಂದು ತಮ್ಮ ಸೂಚನೆಗಳನ್ನು ಮುಂಡಿಸಿದರು. ಆ ಸಂದರ್ಭದಲ್ಲಿ ನಮ್ಮ ಈ ಅಣ್ಣ ಒಂದು ವಿಶೇಷ ಬಗೆಯ ಆಟವನ್ನು ನಡೆಯಿಸಿದನು. ಮುಂಧೋರಣೆ ಇಲ್ಲದ ನಮ್ಮ ತಾಯಿಯನ್ನು ಆತ್ಮೀಯತೆಯ ಮಾತುಗಳಿಂದ ಇಲ್ಲದ ವಿಚಾರವನ್ನು, ಹಿತವನ್ನು ಪ್ರದರ್ಶಿಸಿ, ಹೀಗೆಂದು ಹೇಳಿದನು-

"ನೀವು ದತ್ತಕ ಕೊಡುವುದಾದರೆ ನನ್ನನ್ನೇ ಕೊಟ್ಟುಬಿಡಬಹುದು. ನನಗೆ ಈ ನನ್ನ

ಮನೆಯ ಹಿತದ ಯೋಚನೆ ಯಾವಾಗಲೂ ಇರುವುದು. ದತ್ತಕ ಉತ್ಪನ್ನವು ಈ ಮನೆಗೆ ಬಂದು ಬಿದ್ದರೆ ಮನೆತನದ ಆರ್ಥಿಕ ಪರಿಸ್ಥಿತಿಯು ಹೆಚ್ಚು ಚೆನ್ನಾಗುವುದು. ಆ ಉತ್ಪನ್ನವು ಈ ಮನೆಗೆ ಬಂದು ಬಿದ್ದರೆ ರಾಜ್ಯೈಶ್ವರ್ಯವನ್ನು ನಾವು ಅನುಭವಿಸಬಹುದು. ನನ್ನಲ್ಲಿ ನಿಮಗೆ ವಿಶ್ವಾಸವಿದೆಯಲ್ಲವೆ? ಅದರ ಘಾತವನ್ನು ನಾನೆಂದೂ ಮಾಡುವವನಲ್ಲ. ನಮ್ಮ ಮನೆತನದ ಹಿತವನ್ನೇ ನಾನು ನೋಡುವವನು". ನಮ್ಮ ಅಣ್ಣನ ಮರುಕದ ಈ ಮಾತುಗಳು ನಮ್ಮ ತಾಯಿಯನ್ನು ಮರುಳುಗೊಳಿಸಿದವು. ಯಾವ ಬಗೆಯ ತಪ್ಪು ಕಲ್ಪನೆಗೂ ಅವಕಾಶವುಂಟಾಗದಂತೆ ಮಾಡಿದವು. ಆಯಿತು. ಅವನನ್ನೇ, ಸಂಪ್ರದಾಯದಂತೆ ಹೋಮ-ಹವನಗಳೊಡನೆ ದತ್ತಕ ಮಾಡಿದರು.

ಆ ಮನೆತನದ ಮೇಲಿದ್ದ ಆರ್ಥಿಕ ಹೊಣೆಗಾರಿಕೆಯನ್ನು ನಮ್ಮ ತಂದೆಯವರು ತಮ್ಮ ಬಳಿಯಲ್ಲಿ ಹಣವಿರದೆ ಇದ್ದರೂ ಹಾಗೆ-ಹೀಗೆ ಮಾಡಿ, ತಮ್ಮ ತಲೆಯ ಮೇಲೆ ವಹಿಸಿಕೊಂಡರು. ಆಗಿನ ನಮ್ಮ ಅಣ್ಣನ ಅಂತಃಕರಣದ ನಡವಳಿಕೆಯು ಸ್ಪೃಹಣೀಯವಾಗಿತ್ತು. ಎಲ್ಲರ ಹೃದಯವನ್ನೂ ಕರಗಿ ನೀರಾಗಿಸುವಂತಹದಿತ್ತು. ತಂದೆಯವರಿಗೆ ಆ ಸಂದರ್ಭದಲ್ಲಿ ಬೇಕಾದ ಹಣವನ್ನು ಬಾಲವಿಧವೆಯಾಗಿ ಒಬ್ಬ ಮಗಳೊಂದಿಗೆ ನಮ್ಮ ಮನೆಯಲ್ಲಿಯೇ ಇರುತ್ತಿದ್ದ ನಮ್ಮ ಅಕ್ಕನೊಬ್ಬಾಕೆ ತನ್ನ ಬಳಿಯ ಆಭರಣಗಳನ್ನೆಲ್ಲ ಮಾರಿ ಸಾಲವೆಂದು ಕೊಟ್ಟಳು. ಆ ಸಾಲಕ್ಕೆ ನಮ್ಮ ಅಣ್ಣನೇ ಪತ್ರವನ್ನೂ ಬರೆದುಕೊಟ್ಟ. ಕೆಲಸವು ಸುಸೂತ್ರವಾಗಿ ನಡೆಯಿತು.

ಈಗ ನಮ್ಮ ತಂದೆಯವರ ಹಿರಿಯತನ ತಪ್ಪಿ ನಮ್ಮ ಅಣ್ಣನ ಕಡೆಗೆ ಬಂದಿತು. ಎಲ್ಲವನ್ನೂ ಅವನು ಎಚ್ಚರಿಕೆಯಿಂದಲೇ ನೋಡಿಕೊಳ್ಳುತ್ತಿದ್ದ. ನಮ್ಮ ಮನೆತನ ಬರಗಾಲದ ಬವಣೆಗೆ ಗುರಿಯಾದುದು ಆತನ ಹಿರಿಯತನದ ಪ್ರಾರಂಭದಲ್ಲಿಯೇ. ನಮ್ಮ ತಂದೆಯವರ ಚಾರಿತ್ರ್ಯವು ಆ ಬವಣೆಯ ನಿವಾರಣೆಗೆ ಕಾರಣವಾದರೂ ಅದು ತನ್ನ ಕರ್ತೃತ್ವ- ಶಕ್ತಿಯಿಂದಲೇ ನಿವಾರಣೆಯಾಯಿತೆಂದು ನಮ್ಮ ಅಣ್ಣ ಹೆಮ್ಮೆಯಿಂದ ಹೇಳುತ್ತಲಿದ್ದ.

ದತ್ತಕ ಉತ್ಪನ್ನವು ನಮ್ಮ ಕೈಗೆ ಬಂದಿತೇನೊ ಇಷ್ಟೆ. ಆದರೆ ಈ ಮೊದಲೇ ಹೇಳಿದಂತೆ ಅವುಗಳಲ್ಲಿ ಕೆಲವು ಸಾಲದಲ್ಲಿ ಸಿಕ್ಕಿಬಿದ್ದವುಗಳು, ಇನ್ನು ಕೆಲವು ಸಾಗುವಳಿಯಾಗದ ಬೀಳು-ಭೂಮಿಗಳು. ವರ್ಷಕ್ಕೆ ಒಂದು ನೂರು ರೂಪಾಯಿಗಿಂತಲೂ ಹೆಚ್ಚಿನ ಹಣವೇನೂ ನಮ್ಮ ಕೈಗೆ ದೊರೆಯುತ್ತಿರಲಿಲ್ಲ. ಆದರೆ ನಮ್ಮ ಅಣ್ಣ ದತ್ತು ಹೋದ ಮನೆಯ ಹಿರಿಯರ ಶ್ರಾದ್ಧ ಕಾರ್ಯಕ್ಕಾಗಿಯೂ, ಸಂಪ್ರ

ದಾಯಕ್ಕಾಗಿಯೂ ಆ ನೂರು ರೂಪಾಯಿಗಳು ಸಾಲುತ್ತಿರಲಿಲ್ಲ. ನಮ್ಮ ತಂದೆಯು ವರಿಗೆ ಒಂದು ಬಗೆಯ ಹಟ. ಬೀಳು ಬಿದ್ದ ಭೂಮಿಯನ್ನು ಸ್ವಂತದ ವೆಚ್ಚದಿಂದಲೇ ಸಾಗುವಳಿ ಮಾಡಿಸಿದರು. ಒತ್ತೆ ಬಿದ್ದ ಜಮೀನುಗಳನ್ನು ತಮಗೆ ಅನುಕೂಲವಾದಂತೆಲ್ಲ ಒಂದೊಂದನ್ನೇ ಬಿಡಿಸಿ ವಶಪಡಿಸಿಕೊಂಡರು. ನಮ್ಮ ಮನೆಯ ಆರ್ಥಿಕ ಅಂತಸ್ತು ಹಲವರನ್ನು ಹೊಟ್ಟೆ-ಕಿಚ್ಚಿನಿಂದ ಕುದಿಸಬೇಕಾಯಿತು, ಆಗ ನಮ್ಮ ಅಣ್ಣ ನಡೆದುಕೊಂಡ ರೀತಿಯೇ ಒಂದು ವಿಧವಾಗಿದೆ.

ಆ ಹೆಂಡತಿಯು ಮುನಿಸಿನ ನಾಟಕ ಮನೆಯಲ್ಲಿ ಹೆಚ್ಚು ಹೆಚ್ಚಾಗತೊಡಗಿತು. ಅವಳನ್ನು ಸಮಾಧಾನ ಪಡಿಸಿ ಮೇಲಕ್ಕೆಬ್ಬಿಸುವ ಕೆಲಸವನ್ನು ನಮ್ಮ ಅಣ್ಣನೇ ಮಾಡುತ್ತಿದ್ದನು.

ಬಗರನಾಳ ಹಳ್ಳಿಯ ಕುಲಕರ್ಣಿಕೆಯೊಂದೇ ಅಲ್ಲದೆ ಅವನು ಬೆಟಗೇರಿ, ಗೋಸಬಾಳ ಎಂಬೆರಡು ಹಳ್ಳಿಗಳ ಕುಲಕರ್ಣಿಕೆಯನ್ನು ಮಾಡತೊಡಗಿದನು. ಮೂರು ಹಳ್ಳಿಗಳ ಕುಲಕರ್ಣಿಕೆ ಎಂದರೆ ಬರುವ ಆದಾಯವು ಹೆಚ್ಚಾಯಿತು. ನಮ್ಮ ಮನೆತನದ ಮಟ್ಟವು ಮೇಲಕ್ಕೇರಿ ನಿಂತಿತು. ದಾಯಾದ ಭಾವದ ಜನರಿಗೆ ಇದೆಲ್ಲವೂ ಒಂದು ಅಸಹನೀಯ ಸಂಗತಿಯಾಯಿತು. ಹಿಂದಿನ ಕಾಲದ ಕುಲಕರ್ಣಿಗಳ ಅಧಿಕಾರವೂ, ಆರ್ಥಿಕ ಲಾಭವೂ ಕಡಿಮೆಯಿರಲಿಲ್ಲ. 'ಪೀಕ್ ಪಹಣಿ' ಕಾಲದ ಮೂರು-ನಾಲ್ಕು ತಿಂಗಳಂತೂ ಕುಲಕರ್ಣಿ ಒಂದು ಬಗೆಯ ದೊರೆತನವನ್ನೇ ಅನುಭವಿಸುವನು. ಪೀಕ್ ಪಹಾಣಿಯೆಂದರೆ ಅದೊಂದು ನಾಟಕ ಮಾತ್ರ. ಪ್ರತಿಯೊಂದು ಹೊಲಕ್ಕೆ ಹೋಗಿ ಆ ಹೊಲದಲ್ಲಿ ಯಾವ ಯಾವ ಬೆಳೆಯನ್ನು ಬಿತ್ತಿದ್ದಾರೆ ಎಂಬುದರ ಎಕರೆವಾರು ಲೆಕ್ಕವನ್ನು ಬರೆಯುವುದು ಕುಲಕರ್ಣಿಯ ಕೆಲಸ. ಇದು ಸರಕಾರಕ್ಕೆ ಯಾವುದೇ ಪ್ರಕಾರದ ಲಾಭವನ್ನುಂಟು ಮಾಡುವ ಕೆಲಸವಾಗದೆ ಇದ್ದರೂ ಕುಲಕರ್ಣಿಗೆ ತುಂಬಾ ಲಾಭಕರವಾದ ಕೆಲಸ. ಪೀಕ್‌ಪಹಾಣಿಯ ನೆಪ ಮಾಡಿ ಕುಲಕರ್ಣಿ ತನ್ನ ಓಲೆಕಾರರೊಂದಿಗೆ ಪ್ರತಿಯೊಂದು ಹೊಲಕ್ಕೂ ಹೋಗುವನು. ಅದು ಬೆಳೆಯ ತಪಾಸಣೆಗೆಂದು ನೆಪವಾದರೂ ಆ ಹೊಲದಲ್ಲಿ ಬೆಳೆದ ಪದಾರ್ಥಗಳಲ್ಲಿಯ ಕಾಯಿ, ಪಲ್ಯ, ಕಬ್ಬು, ಬಾಳೆಹಣ್ಣು, ಹೆಸರು, ಆಲಸಂದಿ, ಅವರಿ, ಇವುಗಳ ಬೆಳೆಯನ್ನು ಮನೆಗೆ ತಂದು ತುಂಬಿಕೊಳ್ಳುವುದು. ಆಗ ಮನೆಯ ದನಗಳಿಗೆ ಬೇಕಾಗುವ ಹಸಿಯ ಮೇವೂ ಪುಕ್ಕಟೆಯಾಗಿ ಮನೆಗೆ ಬಂದು ಬೀಳುತ್ತಿತ್ತು. ಕುಲಕರ್ಣಿಕೆಯ ನಿಯಮಿತ ಆದಾಯವು ತೀರ ಕಡಿಮೆಯಾದರೂ ಇಂತಹ ನೈಮಿತ್ತಿಕ ಆದಾಯಗಳಿಗಾಗಿಯೇ ಮರುಳಾಗಿ ಅನೇಕ ಜನರು ಈ ಕುಲಕರ್ಣಿಕೆಯ ಕೆಲಸಕ್ಕೆ ಒಪ್ಪುತ್ತಿದ್ದರು. ಮೂರು ಹಳ್ಳಿಯ ಕುಲಕರ್ಣಿಕೆಯ

ಕಲಸನೀದ ಮೇಲೆ ನಮಗೆ ಯಾವ ಮಾತಿನ ಕೊರತೆಯಿದ್ದೀತು? ಎಲ್ಲವೂ ಸಮೃದ್ಧಿ.

ಹತ್ತೊಂಬತ್ತು ನೂರಾ ಒಂಬತ್ತು-ಹತ್ತನೆಯ ವರ್ಷ ಇರಬಹುದು. ಅಕ್ಟೋಬರ್ ತಿಂಗಳಲ್ಲಿ ನವರಾತ್ರಿಯ ಹಬ್ಬವು ಬಂದಿತು. ನಮ್ಮ ವೈಭವದ ಬಿಂದುವು ಮೇಲ ಕ್ಕೇರಿತು. ಆದುದರಿಂದಲೇ ನವರಾತ್ರಿಯ ಸಂಪ್ರದಾಯವು, ಪೂಜಾ-ಪುರಸ್ಕಾರ ಗಳು ಪ್ರತಿ ವರ್ಷಕ್ಕಿಂತ ಹೆಚ್ಚಿನದಾಗಿ ಕಂಡುಬಂದವು. ಹತ್ತು ದಿನದ ಹಬ್ಬವದು. ದಿನದಿನವೂ ಹೊಸ ಹೊಸ ಬಗೆಯ ಪಕ್ವಾನ್ನ. ದೇವರ ಪೂಜೆಗಾಗಿ ಒಬ್ಬ ಪಂಡಿತ ಆಚಾರ್ಯರನ್ನು ನೇಮಿಸಲಾಗಿತ್ತು. ಅವರು ವಿಧಿವತ್ತಾಗಿ ಪೂಜೆಯನ್ನು ನಡೆಸಿ ಪಕ್ವಾನ್ನದ ಊಟದಿಂದ ತೃಪ್ತರಾಗಿ ಮನೆಯ ಯಜಮಾನನನ್ನು ಹೊಗಳಿದುದೇ ಹೊಗಳಿದುದು. ಈ ಹೊಗಳಿಕೆಯಿಂದ ನಮ್ಮ ತಂದೆಯವರು ಹೆಮ್ಮೆ ಪಡುತ್ತ ಇರಲೂ ಬಹುದು. ಪೂಜೆಯ ಆಚಾರ್ಯರೇ ಸಾಯಂಕಾಲ ಸಾರ್ವಜನಿಕವಾಗಿ 'ವೆಂಕಟೇಶ ಮಹಾತ್ಮ್ಯ' ಎಂಬ ಪುರಾಣವನ್ನು ವಿವರಿಸುವರು. ಅದನ್ನು ಕೇಳ ಲೆಂದು ಊರಲ್ಲಿಯ ಅನೇಕ ಜನರು ನಮ್ಮ ಮನೆಗೆ ಒಟ್ಟಾಗಿ ಬರುತ್ತಿದ್ದರು. ಅದು ಪುರಾಣ ಕೇಳುವುದಕ್ಕೋ, ನಮ್ಮ ಮನೆಯ ವ್ಯವಸ್ಥೆಯನ್ನು ನೋಡಿ ಕರುಬುವುದಕ್ಕೋ ಎಂಬುದನ್ನು ಹೇಳುವುದೇ ಕಷ್ಟವಾಗಿತ್ತು. ಈ ಹಬ್ಬದ ಫಲ ವಾಗಿ ನಮ್ಮ ಮನೆಯಲ್ಲಿ ನಾರದ ಋಷಿಯ ಸಂಚಾರವಾದಂತಾಯಿತು.

ನಮ್ಮ ದಾಯಾದಿಗಳಲ್ಲಿ ನಮ್ಮ ಮೇಲ್ಮೆಯನ್ನು ಕಂಡು ಮತ್ಸರಿಸುವ ಜನರು ಕೆಲವರಿದ್ದರು. ಅವರಿಗೆ ಈ ನಮ್ಮ ಅಣ್ಣನು ತುಂಬ ಹಿತದವನಾದ. ಅವರು ಪ್ರಸಂಗ ಬಂದಾಗಲೆಲ್ಲ ಅವನ ಕಿವಿಯನ್ನು ಕಚ್ಚತೊಡಗಿದರು. ಅದರಿಂದ ಮನೆ ಯಲ್ಲಿ ಅವನ ಹೆಂಡತಿಯ ನಾಟಕಗಳು ಹೆಚ್ಚತೊಡಗಿದವು. ಈ ನಾಟಕದಲ್ಲಿ ತಾನು ಪಾತ್ರಧಾರಿಯೊಬ್ಬ ಎಂಬುದು ನಮಗೆ ಗೊತ್ತಾಗದೇ ಇರಬೇಕೆಂಬುದು ನಮ್ಮ ಅಣ್ಣನ ಅಪೇಕ್ಷೆ.

ಒಂದು ಸಲ ನಮ್ಮ ಅಣ್ಣನ ಹೆಂಡತಿ ಮುಸುಕು ಬಿಗಿದು ಮಲಗಿಕೊಂಡಳು. ನಾಲ್ಕು ದಿನ ಮೇಲಕ್ಕೇಳಲಿಲ್ಲ. ಆಗ ನಮ್ಮ ಅಣ್ಣ ನಮ್ಮ ತಾಯಿಯ ಬಳಿಗೆ ಬಂದು "ನೋಡಿ, ತಿಳಿಯದ ಕೆಲಸ. ಇದನ್ನು ನಾವು ಒಳಗೊಳಗೇ ಬಗೆಹರಿಸಿ ಕೊಳ್ಳುವುದು ನಮ್ಮ ಜಾಣತನದ ಕೆಲಸ. ಏನೋ ಹುಚ್ಚುತನ. ನನ್ನ ಹೆಂಡತಿಗೆ ಬೇರೆಯಾಗುವ ಹುಚ್ಚು ಹಿಡಿದಿದೆ. ನಾವು ಸದ್ಯದಮಟ್ಟಿಗೆ ಹೇಗಾದರೂ ಮಾಡಿ ಆ ಹುಚ್ಚನ್ನು ಬಿಡಿಸಬೇಕು. ಆದುದರಿಂದ ನಾನು ಕೆಲವು ವರ್ಷ ಆಕೆಯ

ಅಪೇಕ್ಷೆಯಂತೆ ಬೇರೆ ಮನೆ ಮಾಡಿಕೊಂಡು ಜೀವಿಸುತ್ತೇನೆ. ಆದರೆ ಅದೊಂದು ನೆಪ. ಈ ಮನೆಯ ಮೇಲಿನ ನನ್ನ ಅಭಿಮಾನ ಎಂದೂ ಕಡಿಮೆಯಾಗದು. ಎರಡೂ ಮನೆಯ ಹೊಣೆಗಾರಿಕೆಯನ್ನು ನಾನೇ ಹೊರುತ್ತೇನೆ, ಯಾವ ಮಾತಿಗಾಗಿಯೂ ನೀವು ಚಿಂತೆ ಮಾಡಕೂಡದು." ಎಂದು ತಾಯಿಯೊಡನೆ ಮರುಕದ ಮಾತುಗಳನ್ನು ಆಡಿದನು. ಆ ಮಾತು ಒಪ್ಪಿಗೆಯಿರಲಿಲ್ಲ. ಆದರೂ ಒಂದು ದಿನ ಹೆಂಡತಿಯೊಂದಿಗೆ ನಮ್ಮ ಈ ಅಣ್ಣ ಬೇರೆ ಮನೆ ಮಾಡಿದ. ಬೇರೆ ಮನೆಯೊಂದಿಗೆ ಅವನ ಸ್ವಭಾವವೂ ಬೇರೆಯೇ ಆಯಿತು. ದಿನದಿನಕ್ಕೆ ನಮ್ಮ ಮನೆತನದ ಆಕರ್ಷಣೆ ಅವನಿಗೆ ಕಡಿಮೆಯಾಯಿತು. ನಮ್ಮ ತಂದೆಯವರಿಗೆ ಇದೊಂದು ಸಂತಾಪದ ಸಂಗತಿ. ಈ ದತ್ತಕ ಕೊಟ್ಟ ಉತ್ಪನ್ನವು ತಮಗೆ ಉಪಯೋಗವಾಗುವದೆಂದು ಅನೇಕ ಸಾಲ-ಕೈಗಡಗಳನ್ನು ಮಾಡಿ ಆ ಹೊಲಗಳನ್ನೆಲ್ಲ ಸಾಗುವಳಿ ಮಾಡಿದ್ದರು. ಆದರೆ ಮಾಡಿದ ಸಾಲ ಮಾತ್ರ ನಿಜವಾಯಿತು. ಹೊಲಗಳು ಅಣ್ಣನ ಪಾಲಿಗೆ ಹೋಗಿ ಅವನು ಸುಖದಿಂದ ಉಪಜೀವಿಸುತ್ತಿದ್ದ. ವ್ಯಾವಹಾರಿಕ ಬುದ್ಧಿಯ ಮನುಷ್ಯ ನಮ್ಮ ಅಣ್ಣ ಭಾವನಾತ್ಮಕ ಅಂತಃಕರಣ ಬುದ್ಧಿಯ ಮನುಷ್ಯರು ನಮ್ಮ ತಂದೆ-ತಾಯಿ. ಲೋಕದಲ್ಲಿ ವ್ಯವಹಾರಕ್ಕೇ ಗೆಲುವಿದೆ ಎಂಬುದನ್ನು ನಮ್ಮ ಅಣ್ಣ ನಮಗೆಲ್ಲ ಪ್ರತ್ಯಕ್ಷವಾಗಿ ತೋರಿಸಿಕೊಟ್ಟ. ಈತನ ಚರಿತ್ರೆ ತುಂಬಾ ದೊಡ್ಡದು. ಸಂದರ್ಭಾನುಸಾರ ಅದನ್ನು ಆಗಾಗ ವಿವರಿಸಿ ಹೇಳಿ, ಆ ಮನುಷ್ಯ ಸ್ವಭಾವದ ರೀತಿಯನ್ನು ತಿಳಿಸಿಕೊಡುವೆನು.

ಕನ್ನಡ ಕಾದಂಬರಿಕಾರ್ತಿಯರು

● ಎಚ್. ಎಸ್. ಪಾರ್ವತಿ

ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದ ಕನ್ನಡದಲ್ಲಿ ಹುಟ್ಟಿಕೊಂಡ ಹೊಸ ಹೊಸ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯೂ ಒಂದು. ಇಂಗ್ಲೀಷಿನ Novel ಗೆ ಕಾದಂಬರಿ ಸಮಾನಾರ್ಥಕ ಶಬ್ದವೇನಲ್ಲ. ಇದರಲ್ಲಿ ಕಥೆ ಹೆಣೆಯುವ ರೀತಿ ಸಂಸ್ಕೃತದ ಬಾಣಭಟ್ಟನ ಕಾದಂಬರಿಯನ್ನು ಹೋಲುತ್ತಿದ್ದುದರಿಂದ ಇರಬಹುದು; ಕನ್ನಡದಲ್ಲಿ ಈ ಪ್ರಕಾರಕ್ಕೆ ಕಾದಂಬರಿಯೆಂದೇ ಹೆಸರಾಯಿತು. (ಈ ಹೆಸರನ್ನು ತಮ್ಮ ಪುಸ್ತಕಕ್ಕೆ ಮೊದಲು ಇಟ್ಟವರಾರು ಎನ್ನುವುದು ನಿಜಕ್ಕೂ ಕುತೂಹಲಕರವಾದ ಅಂಶ. ಯಾಕೆಂದರೆ ಎಂ. ಎಸ್. ಪುಟ್ಟಣ್ಣನವರ ಕಾದಂಬರಿಯಲ್ಲಿ ಈ ಹೆಸರಿಲ್ಲವಂತೆ)

ಒಮ್ಮೆ ಆರಂಭವಾದಷ್ಟೇ ತಡ ಈ ಕಾದಂಬರಿಯ ಪ್ರವಾಹ ತಡೆಯಿಲ್ಲದೆ ಮುಂದುವರಿಯಿತು. ವಸ್ತು ವಿಸ್ತಾರವಾದಾಗ, ಹೇಳುವ ವಿಷಯ ಸಾಕಷ್ಟಿದೆ ಎನ್ನಿಸಿದಾಗ ಲೇಖಕನಿಗೆ ಮಿಕ್ಕ ಮಾಧ್ಯಮಕ್ಕಿಂತ ಕಾದಂಬರಿ ಹೆಚ್ಚು ಉಪಯುಕ್ತ ಎನ್ನಿಸುವುದೂ ಸಹಜವೇ. ಕ್ರಮೇಣ ಲೇಖಕಿಯರೂ ಈ ಮಾಧ್ಯಮವನ್ನು ತಮ್ಮದಾಗಿಸಿಕೊಂಡರು.

ಕನ್ನಡದಲ್ಲಿ ಮಹಿಳೆಯರಲ್ಲಿ ಮೊದಲ ಕಾದಂಬರಿಕಾರ್ತಿ ಎನ್ನುವ ಹೆಗ್ಗಳಿಕೆ ನಂಜನಗೂಡು ತಿರುಮಲಾಂಬಾ ಅವರಿಗೆ ಸಲ್ಲುತ್ತದೆ. ಇವರು ಸುಮಾರು 16 ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಸಮಕಾಲೀನರೇ ಆದ ಆರ್. ಕಲ್ಯಾಣಮ್ಮನವರು ಹನ್ನೆರಡು ಕಾದಂಬರಿಗಳನ್ನು ರಚಿಸಿದ್ದಾರೆ. ಸರಿಸುಮಾರು ಇದೇ ಕಾಲದಲ್ಲಿ ಬರೆಯಲಾರಂಭಿಸಿದ ಗಿರಿಬಾಲೆ (ಸರಸ್ವತಿ ರಾಜವಾಡೆ) ಅವರೂ ಒಂದು ಕಾದಂಬರಿಯನ್ನು ಬರೆದಿದ್ದಾರೆ. ನಂಜನಗೂಡು ತಿರುಮಲಾಂಬಾ ಮತ್ತು ಕಲ್ಯಾಣಮ್ಮ

ನವ ಕಾದಂಬರಿಗಳ ಭಾಷೆ ಮತ್ತು ಶೈಲಿಯ ಮೇಲೆ ಬಿ. ವೆಂಕಟಾಚಾರ್ಯರ ಅನುವಾದಿತ ಕಾದಂಬರಿಗಳ ನೇರ ಪ್ರಭಾವವನ್ನು ಕಾಣಬಹುದು. ಆದರೆ ವಸ್ತು ಮತ್ತು ಪಾತ್ರಗಳ ದೃಷ್ಟಿಯಿಂದ ಈ ಇಬ್ಬರೂ ವೆಂಕಟಾಚಾರ್ಯರಿಗಿಂತ ಭಿನ್ನರಾಗಿದ್ದಾರೆ. ಐತಿಹಾಸಿಕ, ಹಾಗೂ ಪತ್ತೇದಾರಿ ಕಾದಂಬರಿಗಳನ್ನು ಇವರೂ ಬರೆದಿದ್ದರೂ ಇವರು ಸಾಮಾಜಿಕ ಕಾದಂಬರಿಗಳನ್ನು ರಚಿಸುವ ಕಡೆ ಹೆಚ್ಚಿನ ಗಮನ ಕೊಟ್ಟರು. ಅದಕ್ಕಿಂತ ಮುಖ್ಯವಾಗಿ, ಪುರುಷರು ಬರೆದ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಪುರುಷನದೇ ಪ್ರಧಾನ ಪಾತ್ರ. ಅವನ ಸಮಸ್ಯೆಗಳಿಗೇ ಮೊದಲ ಸ್ಥಾನ. ಸ್ತ್ರೀ ಪಾತ್ರ ಪುರುಷ ಪಾತ್ರಕ್ಕೆ ಪೂರಕವಾಗಿ, ಸಹಾಯಕವಾಗಷ್ಟೇ ಬರುತ್ತದೆ. (ಈ ಮಾತು ಈವತ್ತಿಗೂ ನಿಜ. ಎಲ್ಲೋ ಕೆಲವು ಕಾದಂಬರಿಗಳು ಮಾತ್ರ ಈ ಮಾತಿಗೆ ಅಪವಾದವಾಗಿ ನಿಲ್ಲಬಹುದು) ಆದರೆ ಈ ಇಬ್ಬರು ಮೊದಲ ಕಾದಂಬರಿಕಾರ್ತಿಯರು ತಮ್ಮ ಕಾದಂಬರಿಗಳಿಗೆ ವಸ್ತುವಾಗಿ ಆಯ್ದುಕೊಂಡಿದ್ದು ಸ್ತ್ರೀ ಸಮಸ್ಯೆಗಳನ್ನು. ಆದ್ದರಿಂದ ಸಹಜವಾಗಿಯೇ ಇವರ ರಚನೆಗಳಲ್ಲಿ ಸ್ತ್ರೀ ಪಾತ್ರಗಳಿಗೇ ಪ್ರಾಧಾನ್ಯತೆ ದೊರೆಯಿತು. ಎಪ್ಪತ್ತು ವರ್ಷಕ್ಕೂ ಹಿಂದೆ ರಚಿತವಾದ ಇವರ ಕೃತಿಗಳಲ್ಲಿ ಕಂಡುಬರುವ ಪ್ರಗತಿಪರ ದೃಷ್ಟಿಯನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಸ್ತ್ರೀ ಶಿಕ್ಷಣದ ಅವಶ್ಯಕತೆ, ಸ್ತ್ರೀ ಸ್ವತಂತ್ರ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎನ್ನುವ ಬಗ್ಗೆ ಒತ್ತು ಇತ್ಯಾದಿಗಳ ವಿಚಾರ ಇವರ ಕಾದಂಬರಿಗಳು ಮಾತನಾಡಿವೆ. ಇವರ ಸ್ತ್ರೀ ಪಾತ್ರಗಳು ಅಳುಮುಂಜಿಗಳಲ್ಲ. ಎಂತೆಂತಹ ಕಷ್ಟಕರವಾದ ಸನ್ನಿವೇಶದಲ್ಲೂ ತಮ್ಮ ಬುದ್ಧಿವಂತಿಕೆಯಿಂದ, ಧೈರ್ಯ ಸ್ಥೈರ್ಯಗಳಿಂದ ಈ ಮಹಿಳೆಯರು ಗುರಿ ಮುಟ್ಟುವುದನ್ನು ಕಾಣುತ್ತೇವೆ. ಕನ್ನಡ ಲೇಖಕಿಯರ ಕಾದಂಬರಿಗಳ ಮೂಲ ಸ್ರೋತವನ್ನು ಈ ಇಬ್ಬರು ಲೇಖಕಿಯರಲ್ಲಿ ಗುರುತಿಸಬಹುದು.

ಈ ಶತಮಾನದ ಮೊದಲ ಮೂರು-ನಾಲ್ಕು ದಶಕಗಳಲ್ಲಿ ಅನೇಕ ಕಾದಂಬರಿಗಳು ರಚಿತವಾದದ್ದು ನಿಜ. ಡಾ॥ ಶಿವರಾಮ ಕಾರಂತರಂತಹ ಪ್ರತಿಭಾವಂತರ ಕಾದಂಬರಿಗಳು ಈಗಾಗಲೇ ಬೆಳಕಿಗೆ ಬಂದಿದ್ದವು. ಇಷ್ಟರಲ್ಲಿ ಕಾದಂಬರಿಯ ವಸ್ತು, ಶೈಲಿ, ನಿರೂಪಣೆಗಳಲ್ಲೂ ಸಾಕಷ್ಟು ಬದಲಾವಣೆ ಆಗಿದ್ದವು. ಆದರೂ ಆ ಕಾಲದಲ್ಲಿ ಸಣ್ಣ ಕತೆಗಳಿಗೆ, ಭಾವಗೀತೆಗಳಿಗೆ, ಲಲಿತ ಪ್ರಬಂಧಗಳಿಗೆ ಇದ್ದ ಜನಪ್ರಿಯತೆಯನ್ನು ಕಾದಂಬರಿ ಪಡೆದುಕೊಂಡಿರಲಿಲ್ಲ. ಕಾದಂಬರಿ ಸಾಮ್ರಾಟರೆಂದೇ ಹೆಸರಾದ ಅ. ನ. ಕೃ ಅವರ ಕಾದಂಬರಿಗಳಿಂದ ಹಾಗೂ ಪಾಕೆಟ್ ಬುಕ್ ಆವೃತ್ತಿಗಳು ಪ್ರಕಟವಾದ ಮೇಲೆ ಕಾದಂಬರಿಯ ಜನಪ್ರಿಯತೆ ಒಮ್ಮೆಲೇ ಹೆಚ್ಚಿತು. ಇದುವರೆಗೆ ಸಣ್ಣ ತೊರೆಯಂತೆ ಹರಿಯುತ್ತಿದ್ದ ಕಾದಂಬರಿ ನದೀ ಪ್ರವಾಹದಂತೆ ಹರಿಯ

ಲಾರಂಭಿಸಿತು. ವರ್ಷದಿಂದ ವರ್ಷಕ್ಕೆ ಕಾದಂಬರಿಕಾರರ ಸಂಖ್ಯೆ ಬೆಳೆಯಿತು. ಸಾಹಿತಿ ಎಂದ ಮೇಲೆ ಒಂದಾದರೂ ಕಾದಂಬರಿ ಬರೆಯಲೇ ಬೇಕು ಎನ್ನುವ ಮಟ್ಟಿಗೆ ಇದರ ಲೋಕ ಪ್ರಿಯತೆ ಹೆಚ್ಚಿತು. ಲೇಖಕಿಯರೂ ಹೆಚ್ಚಿನ ಸಂಖ್ಯೆ ಯಲ್ಲಿ ಈ ರಂಗದಲ್ಲಿ ಕಾಲಿಟ್ಟರು. ವಾಣಿ, ಎಂ. ಕೆ. ಜಯಲಕ್ಷ್ಮೀ, ಜಯಲಕ್ಷ್ಮೀ ಶ್ರೀನಿವಾಸನ್ ಮುಂತಾದವರು ಈ ಪ್ರವಾಹದ ಮೊದಲ ಅಲೆಗಳು. ಆದರೆ ತ್ರಿವೇಣಿಯವರ ಆಗಮನದೊಂದಿಗೆ ಲೇಖಕಿಯರ ಕಾದಂಬರಿಗಳಿಗೆ ಹೊಸ ಆಯಾಮ ದೊರೆಯಿತೆನ್ನಬಹುದು. ತ್ರಿವೇಣಿ ಹೊಸ ಆಸೆ, ಭರವಸೆಗಳನ್ನು ಮೂಡಿಸುವಂತೆ ಈ ರಂಗಕ್ಕೆ ಕಾಲಿಟ್ಟರು. ಈಕೆ ಅಲ್ಪಾಯುಸ್ಸಿನಲ್ಲಿಯೇ ಕೇವಲ 34 ವರ್ಷದವರಾಗಿದ್ದಾಗಲೇ ತೀರಿಕೊಂಡರು. ಅಷ್ಟರಲ್ಲೇ ಅವರು ಮಹಿಳಾ ಕಾದಂಬರಿಗೆ ಹೊಸ ರೂಪವನ್ನು ಕೊಟ್ಟು ಆ ದಿಕ್ಕಿನಲ್ಲಿ ಎತ್ತರದ ಮೈಲಿಗಲ್ಲು ಎನ್ನಿಸಿಕೊಂಡರು. ಇವರು ಬರೆದದ್ದು 21 ಕಾದಂಬರಿಗಳು. ಇವುಗಳಲ್ಲಿ ನಾಲ್ಕು ಮನೋ ವೈಜ್ಞಾನಿಕ. ಇವರ ಜನಪ್ರಿಯತೆಗೆ ಕಾರಣ ಲಲಿತವಾದ ಭಾಷೆ, ಆಕರ್ಷಕ ಶೈಲಿ, ನವಿರಾದ ಹಾಸ್ಯ, ವಸ್ತು ವೈವಿಧ್ಯ ಹಾಗೂ ಪಾತ್ರಗಳ ಜೀವಂತತೆ. ಇವರ ಕೆಲವು ಕಾದಂಬರಿಗಳು ಚಲನ ಚಿತ್ರಗಳಾದ ಮೇಲಂತೂ ಇವರ ಕೀರ್ತಿ ಇನ್ನಷ್ಟು ಹೆಚ್ಚಿತು.

ತ್ರಿವೇಣಿಯವರ ನಂತರ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಕಾದಂಬರಿಕಾರ್ತಿಯರ ಮಹಾಪೂರವೇ ಹರಿದು ಬಂತು ಎಂದರೂ ಅತಿಶಯೋಕ್ತಿಯಲ್ಲ. ವರ್ಷದಿಂದ ವರ್ಷಕ್ಕೆ ಈ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ನೂರಾರು ಸಂಖ್ಯೆಯಲ್ಲಿ ಕಾದಂಬರಿಗಳು ಪ್ರಕಟವಾದವು. ಒಂದು ಸಣ್ಣ ಪ್ರಬಂಧ, ಕವಿತೆ ಅಥವಾ ಕಥೆ ಬರೆಯಲು ಅಸಮರ್ಥರಾದವರೂ ಕಾದಂಬರಿ ಬರೆದು ಪ್ರಸಿದ್ಧರಾದರು. ಅವರ ರಚನೆಗಳಿಗೆ ಮಾರುಕಟ್ಟೆಯೂ ದೊರೆಯಿತು. ಲೇಖಕಿಯರ ಕಾದಂಬರಿಯನ್ನು ಪ್ರಕಟಿಸಲು ಪ್ರಕಾಶಕರೂ ಮುಂದಾದರು.

1982 ನೆಯ ವರ್ಷದಲ್ಲಿ ಸಾಹಿತ್ಯ ಪರಿಷತ್ತು ಪ್ರಕಟಿಸಿದ ನಮ್ಮ ಲೇಖಕಿಯರು ಪುಸ್ತಕದಲ್ಲಿ ದಾಖಲಾಗಿರುವ ಅಂಕಿ ಅಂಶಗಳ ಪ್ರಕಾರ 82 ರವರೆಗೆ ಸುಮಾರು 92 ಜನ ಲೇಖಕಿಯರ 770 ಕಾದಂಬರಿಗಳು ಪ್ರಕಟವಾಗಿರುವುದು ಕಂಡುಬರುತ್ತದೆ. ಅಲ್ಲಿಂದೀಚಿನ ಏಳು ವರ್ಷಗಳಲ್ಲಿ ಕಾದಂಬರಿಕಾರ್ತಿಯರ ಹಾಗೂ ಕಾದಂಬರಿಗಳ ಸಂಖ್ಯೆಯಲ್ಲಿ ಸಾಕಷ್ಟು ಹೆಚ್ಚಳ ಆಗಿರುವುದು ಸಹಜ. (ಈ ಪಟ್ಟಿಯಲ್ಲಿ ಅನುವಾದಿತ ಕಾದಂಬರಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎನ್ನುವುದು ಗಮನಾರ್ಹ) ಸಂಖ್ಯೆ ಅತಿಯಾದಾಗ ಗಟ್ಟಿ ಕಾಳುಗಳಿಗಿಂತ ಜೊಳ್ಳೇ ಹೆಚ್ಚಾಗುವುದು

ಸ್ವಾಭಾವಿಕ. ಈ ಸಂದರ್ಭದಲ್ಲಿ ಆಗಿರುವುದಾದರೂ ಹೀಗೆಯೇ. ಆದರೆ ಈ ಕಾದಂಬರಿಗಳಲ್ಲಿ ಗಟ್ಟಿಯಾದವು ಕೆಲವಾದರೂ ಇವೆ ಎನ್ನುವುದು ಸಂತೋಷದ ವಿಷಯ.

ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಳನ್ನು ರಚಿಸಿದವರಲ್ಲಿ ಕೆಲವರು. ಡಾ॥ ಅನುಪಮಾ ನಿರಂಜನ, ಆರ್ಯಾಂಬಾ ಪಟ್ಟಾಭಿ, ಎಂ. ಕೆ. ಇಂದಿರಾ, ಉಷಾ ನವರತ್ನ ರಾಂ, ಪುಷ್ಪಾ ಎನ್. ರಾವ್, ಎ. ಪಂಕಜಾ, ಪ್ರೇಮಾ ಭಟ್, ಮಂಗಳಾ ಸತ್ಯನ್, ಎಸ್. ಚಿತ್ರಲೇಖಾ, ರಾಧಾ ಮೂರ್ತಿ, ಕೆ. ಆರ್. ಪದ್ಮಜಾ, ವಿಶಾಲಾಕ್ಷಿ ದಕ್ಷಿಣಾಮೂರ್ತಿ, ಸಾಯಿಸುತೆ, ಈಚನೂರು ಶಾಂತಾ, ವಿಜಯಶ್ರೀ, ಕಾಕೋಳು ಸರೋಜಾರಾವ್, ಮುಂತಾದವರು.

ಇದುವರೆಗೆ ಪ್ರಕಟಿತವಾಗಿರುವ ಮಹಿಳೆಯರ ಎಲ್ಲ ಕಾದಂಬರಿಗಳನ್ನು ವಿಮರ್ಶಿಸುವುದು ಈ ಲೇಖನದ ಉದ್ದೇಶವೂ ಅಲ್ಲ. ಅದರ ಅವಶ್ಯಕತೆಯೂ ಇಲ್ಲ. ವಸ್ತು, ಭಾಷೆ, ನಿರೂಪಣೆ ಇತ್ಯಾದಿಗಳಲ್ಲಿ ಭಿನ್ನವಾಗಿ ಕಾಣುವ ಅಥವಾ ಬೇರೆ ಕಾರಣಗಳಿಂದ ವಿಶಿಷ್ಟವಾಗಿ ನಿಲ್ಲುವ ಕೆಲವು ಕಾದಂಬರಿಯ ಬಗ್ಗೆ ಮಾತ್ರ ಪಕ್ಷಿನೋಟ ಹರಿಸೋಣ.

ದಿವಂಗತ ವಾಣಿಯವರು ಸುಮಾರು 40 ವರ್ಷಗಳಷ್ಟು ಹಿಂದೆಯೇ ಕಾದಂಬರಿಯನ್ನು ರಚಿಸಲಾರಂಭಿಸಿ ತೀರಾ ಇತ್ತೀಚಿನವರೆಗೂ ಬರೆಯುತ್ತಿದ್ದರು. ಇವರ ಭಾಷೆ ಸರಳ, ಸುಲಲಿತ. ವಸ್ತು ಸಾಮಾನ್ಯವಾಗಿ ಶ್ರೀಮಂತ ಹಾಗೂ ಉಚ್ಚ ಮಧ್ಯಮ ವರ್ಗಕ್ಕೆ ಸಂಬಂಧಪಟ್ಟವು. ಇವರ ಕಾದಂಬರಿಗಳಲ್ಲಿ ಆಧುನಿಕತೆ ಮತ್ತು ಸಂಪ್ರದಾಯಗಳ ನಡುವಿನ ಘರ್ಷಣೆಯನ್ನು ಕಾಣಬಹುದು. ಇವರ ಪುರುಷ ಪಾತ್ರಗಳೂ ಸ್ತ್ರೀ ಪಾತ್ರಗಳಷ್ಟೇ ಜೀವಂತಿಕೆಯಿಂದ ಕೂಡಿವೆ. ಮುಖ್ಯವಾಗಿ ಇವರು ಹಳೆ ತಲೆಮಾರಿನ ಮತ್ತು ಹೊಸ ತಲೆಮಾರಿನ ಲೇಖಕಿಯರ ಮಧ್ಯೆ ಕೊಂಡಿಯಂತಿದ್ದಾರೆ.

ಸಂಖ್ಯೆ ಮತ್ತು ಧೋರಣೆ ಎರಡೂ ದೃಷ್ಟಿಗಳಿಂದ ಡಾ॥ ಅನುಪಮಾ ನಿರಂಜನ ಕನ್ನಡ ಕಾದಂಬರಿಕಾರ್ತಿಯರಲ್ಲಿ ವಿಶಿಷ್ಟವಾಗಿ ನಿಲ್ಲುವಂಥವರು. ಇವರ ಮೊದಲ ಕಾದಂಬರಿ 'ಅನಂತ ಗೀತ' ಪ್ರಕಟವಾದದ್ದು 1954 ರಲ್ಲಿ. 1975 ರವರೆಗೆ ಇವರು ರಚಿಸಿದ ಕೃತಿಗಳಲ್ಲಿ 'ಸಂಕೋಲೆಯೊಳಗಿಂದ', 'ಋಣ' 'ಕಣಿವೆಗೆ ಬಂತು ಬೇಸಿಗೆ' ಮುಂತಾದವು ವಿಶೇಷವಾಗಿ ಉಲ್ಲೇಖನಾರ್ಹವಾದವುಗಳು ಮಿಕ್ಕವು ಹೆಚ್ಚಾಗಿ ಜನಪ್ರಿಯತೆಯತ್ತಲೇ ಮುಖ ಮಾಡಿದವುಗಳು. ಅನಂತರದ ರಚನೆಗಳಲ್ಲಿ ಬರವ

ಣಿಗೆಯ ಶೈಲಿ, ವಸ್ತುವಿನ ಆಯ್ಕೆ, ಸಮಸ್ಯೆಯ ನಿರೂಪಣೆ ಇವುಗಳಲ್ಲಿ ಸ್ಪಷ್ಟ ಬದಲಾವಣೆಯನ್ನು ಗುರುತಿಸಬಹುದು. ಉದಾಹರಣೆಗೆ, 'ಮಾಧವಿ' 'ಏಳಿ' 'ಕೊಳಚೆ ಕೊಂಪೆಯ ದಾಸಿಗಳು' 'ಘೋಷ' 'ಆಳ' ಇತ್ಯಾದಿ.

ಬರೆಯುವುದನ್ನು ಆರಂಭಿಸಿದ್ದು ಇಳಿವಯಸ್ಸಿನಲ್ಲಾದರೂ (46 ನೇ ವರ್ಷದಲ್ಲಿ) ಹತ್ತು ವರ್ಷಗಳಲ್ಲಿ ಪ್ರಮುಖ ಲೇಖಕಿಯೆನ್ನಿಸಿಕೊಂಡು ಜನಪ್ರಿಯತೆಯ ಶಿಖರವನ್ನೇರಿದವರು ಎಂ. ಕೆ. ಇಂದಿರಾ. ಇವರ ಮೊದಲ ಕಾದಂಬರಿ ತುಂಗ–ಭದ್ರ ಓದುಗರ, ವಿಮರ್ಶಕರ ಗಮನ ಸೆಳೆಯಿತು. ಆನಂತರ ಪುಂಖಾನುಪುಂಖವಾಗಿ ಇವರ ಬತ್ತಳಿಕೆಯಿಂದ ಕಾದಂಬರಿಗಳು ಹೊರಬಿದ್ದವು. ಐವತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿರುವ ಎಂ. ಕೆ. ಇಂದಿರಾ ಅವರ ಜನಪ್ರಿಯತೆಗೆ ಮುಖ್ಯ ಕಾರಣ ಇವರ ಸ್ವಂತಿಕೆ. ಮಲೆನಾಡಿನ ನುಡಿಕಟ್ಟುಗಳನ್ನು, ಗಾದೆ ಒಗಟುಗಳನ್ನು ಬಳಸಿಕೊಂಡು ಇವರು ಕತೆ ಹೇಳುವ ರೀತಿ. ಸ್ವಾನುಭವದಿಂದ ಮೂಡಿಬಂದ ಇವರ ಕಾದಂಬರಿಗಳಲ್ಲಿ ಜೀವಂತಿಕೆ ಇದೆ. ಉದಾಹರಣೆಗೆ ತುಂಗಭದ್ರ, ಸದಾನಂದ, ಟು–ಲೆಟ್, ತಗ್ಗಿನಮನೆ ಸೀತೆ, ಫಣಿಯಮ್ಮ ಮುಂತಾದವು. ಕೂಚುಭಟ್ಟ, ಗುಂಡ ಇವುಗಳಲ್ಲಿ ಹಾಸ್ಯಕ್ಕೆ ಪ್ರಾಧಾನ್ಯತೆ ಇದೆ. 'ನೂರೊಂದು ಬಾಗಿಲು' 'ಮುಸುಕು' ಕಾದಂಬರಿಗಳನ್ನೋದಿದಾಗ ಇವರು ಪತ್ತೇದಾರಿ ಶೈಲಿಯಲ್ಲಿ ಬರೆಯಬಲ್ಲರೆಂಬುದು ಸ್ಪಷ್ಟವಾಗುತ್ತದೆ.

ಸಿ. ಎನ್. ಜಯಲಕ್ಷ್ಮಿದೇವಿಯವರು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ ಅಪರೂಪದ ಕಾದಂಬರಿಕಾರ್ತಿ ಎನ್ನಿಸಿಕೊಂಡರೆ ಮ್ಯಾತೆ ಮಹಾದೇವಿ, ಅಕ್ಕಮಹಾದೇವಿಯ ಜೀವನವನ್ನಾಧರಿಸಿದ ತರಂಗಿಣಿಯೆಂಬ ಬೃಹತ್ಕಾದಂಬರಿ ರಚಿಸಿದ್ದಾರೆ. ಇನ್ನುಳಿದವರಲ್ಲಿ ಉಷಾನವರತ್ನರಾಂ ಜನಪ್ರಿಯತೆಯ ಶಿಖರದ ಮೇಲಿರುವ ಲೇಖಕಿ. ವಿಮರ್ಶಕರು ಇವರ ಕಾದಂಬರಿಗಳಲ್ಲಿ ಇಂಗ್ಲೀಷ್ ಕಾದಂಬರಿಗಳ ಛಾಯೆಯನ್ನು ಕಾಣುತ್ತಾರಾದರೂ ಇವರ ಕೃತಿಗಳಲ್ಲಿನ ವಸ್ತು ವೈವಿಧ್ಯ ಮೆಚ್ಚುವಂತಹುದು. ಚಲನ ಚಿತ್ರಗಳಾಗಿಯೂ ಇವರ ಕೃತಿಗಳು ಯಶಸ್ವಿಯಾಗಿವೆ.

ಪ್ರೇಮಾಭಟ್ ಅವರ ಕಾದಂಬರಿಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಮಧ್ಯಮ ವರ್ಗದವರ ಸಹಜ ಚಿತ್ರಣವಿದೆ. ಇದೇ ಪ್ರದೇಶದ ಹಿರಿಯ ಲೇಖಕಿ ಪದ್ಮಾ ಶೆಣೈ ಅನೇಕ ಕಾದಂಬರಿಗಳನ್ನು ಬರೆದಿದ್ದಾರಾದರೂ ಅವರ ಪ್ರಣಾಳ ಶಿಶುವಿನ ಬಗ್ಗೆ ಬರೆದಿರುವ 'ಅನಿಶ್ಚಿತ' ಕಾದಂಬರಿ ವಿಶಿಷ್ಟವಾಗಿದೆ. ಇದೇ ಪ್ರದೇಶದ ಇನ್ನೊಬ್ಬ

ಸಮರ್ಥ ಲೇಖಕಿ ಎ. ಪಿ. ಮಾಲತಿ. ಇವರ 'ನೂಪುರ ಗಾನ', 'ತಿರುಗಿದ ಚಕ್ರ' 'ಮಂದಾರ', 'ದೇವ' ಮುಂತಾದವು ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡಿರುವ ಒಳ್ಳೆಯ ಕಾದಂಬರಿಗಳು.

ಹೈದರಾಬಾದು ಕರ್ನಾಟಕದ ಗೀತಾನಾಗಭೂಷಣ ಮತ್ತು ಬಿ.ಟಿ. ಲಲಿತಾನಾಯಕ ಕೇವಲ ಮಧ್ಯಮ ವರ್ಗದ ಕಥೆಯನ್ನು ಬರೆಯುತ್ತಾರೆ ಎಂಬ ಆಪಾದನೆಯಿಂದ ಲೇಖಕಿಯರನ್ನು ಮುಕ್ತಗೊಳಿಸಿದ್ದಾರೆ. ಗುಲ್ಬರ್ಗಾದ ಆಡನುಡಿಯ ಸೊಗಡನ್ನು ಮೈಗೂಡಿಸಿಕೊಂಡಿರುವ ಗೀತಾ ನಾಗಭೂಷಣ ಅವರ 'ಹಸಿಮಾಂಸ ಮತ್ತು ಹದ್ದುಗಳು' ಹಾಗೂ 'ಮಾಪುರ ತಾಯಿಯ ಮಕ್ಕಳು' ಆ ಪ್ರದೇಶದ ದಲಿತ ಹೆಣ್ಣು ಮಕ್ಕಳ ನೋವಿಗೆ ನುಡಿಕೊಟ್ಟಿವೆ. ಯಾವುದೇ ವರ್ಗವಾಗಲೀ, ಸ್ತ್ರೀ ಪುರುಷರ ಶೀಲದ ಮೌಲ್ಯಮಾಪನದಲ್ಲಿ ಎಂತಹ ಅಂತರ ಇದೆ ಎಂಬುದನ್ನು 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲೂ ದೇವದಾಸಿ ಪದ್ಧತಿಯಿಂದ ನರಳುವ ಹೆಣ್ಣುಗಳ ಬಗ್ಗೆ 'ಮಾಪುರ ತಾಯಿಯ ಮಕ್ಕಳ'ಲ್ಲೂ ಮನ ಮಿಡಿಯುವಂತೆ ಚಿತ್ರಿಸಿದ್ದಾರೆ. ಬಿ. ಟಿ. ಲಲಿತಾ ನಾಯಕ ಅವರ 'ನೆಲೆ-ಬೆಲೆ' 'ಗತಿ' ಮುಂತಾದ ಕಾದಂಬರಿಗಳು ಲಂಬಾಣಿ ಜನಾಂಗದ ಜೀವನದ ಮೇಲೆ ಬೆಳಕು ಚೆಲ್ಲುತ್ತವೆ. ಚಿತ್ರದುರ್ಗದ ಅನಸೂಯ ರಾಮರೆಡ್ಡಿಯವರು 'ಪಂಜರ' ಕಾದಂಬರಿಯಲ್ಲಿ ದಲಿತವರ್ಗದ ಸಮಸ್ಯೆಯನ್ನು ಪ್ರಭಾವಶಾಲಿಯಾಗಿ ನಿರೂಪಿಸಿದ್ದಾರೆ.

ಎಲೆಮರೆಯ ಕಾಯಿಯಂತೆ ಹೆಚ್ಚಿನ ಪ್ರಸಿದ್ಧಿಗೆ ಬರದಿದ್ದರೂ ನಮ್ಮ ಉತ್ತಮ ಕಾದಂಬರಿಕಾರ್ತಿಯರಲ್ಲಿ ನೀಳಾದೇವಿ ಒಬ್ಬರು. ಇವರು ಅನೇಕ ಒಳ್ಳೆಯ ಕಾದಂಬರಿಗಳನ್ನು ರಚಿಸಿದ್ದಾರೆ. 'ಹುಲ್ಲು ಹಸಿರಾಯಿತು' ಮುಂತಾದ ಕಾದಂಬರಿಗಳಲ್ಲಿ ಮಧ್ಯಮವರ್ಗದ ಮಾಮೂಲು ಜಾಡನ್ನು ಬಿಟ್ಟು ಕೆಳವರ್ಗದವರ ಸಮಸ್ಯೆಯನ್ನು ಎತ್ತಿಕೊಂಡಿದ್ದಾರೆ.

ಸರೋಜಾ ನಾರಾಯಣರಾವ್ ಮತ್ತು ಎಚ್. ಎಸ್. ಪಾರ್ವತಿ ವಿಭಿನ್ನ ವಸ್ತುವಿನಿಂದಾಗಿ ಗಮನ ಸೆಳೆಯುತ್ತಾರೆ.

ಸರೋಜಾ ನಾರಾಯಣರಾವ್ ತಮ್ಮ 'ವಾನಪ್ರಸ್ಥ' ಕಾದಂಬರಿಗೆ ಆರಿಸಿಕೊಂಡಿರುವುದು ಇದುವರೆಗೂ ಯಾರೂ ತೆಗೆದುಕೊಂಡಿಲ್ಲದ ವೃದ್ಧರ ಸಮಸ್ಯೆಯನ್ನು ಶಾಂತಾ ನಾಗರಾಜ್ ಅವರು ಇತ್ತೀಚಿಗೆ ಇದೇ ವಸ್ತುವನ್ನು ಕುರಿತು ಬರೆದ

ಕಾದಂಬರಿ 'ಕಿತ್ತು ತಿನ್ನುವ ಮುಪ್ಪು'-ಪ್ರಕಟವಾಗಿದೆ. ಸರೋಜಾ ಅವರ 'ಮನೆ' ವರದಕ್ಷಿಣೆಯ ವಿಷಯನ್ನು ಕುರಿತದ್ದಾದರೂ ಅದನ್ನು ಅವರು ನಿರೂಪಿಸಿರುವ ರೀತಿ ಹೊಸದಾಗಿದೆ, ವಿಚಾರಪೂರ್ಣವಾಗಿದೆ.

ಎಚ್. ಎಸ್. ಪಿ. ಯವರು 'ಜಬಾಲಾ' ಕಾದಂಬರಿಗೆ ಆಯ್ದುಕೊಂಡಿರುವ ವಿಷಯವೂ ವಿಶಿಷ್ಟವಾದುದು. (ಗಂಡಸಿನ ಬಂಜೆತನದಿಂದಾಗುವ ಪರಿಣಾಮವನ್ನು ಕುರಿತದ್ದು) ಇವರ ಇನ್ನೊಂದು ಕಾದಂಬರಿ 'ಜೀವನ ಜಾಲ'ದ ಬಗ್ಗೆ ಕನ್ನಡದ ಪ್ರಸಿದ್ಧ ವಿಮರ್ಶಕ ಶೇಷಗಿರಿರಾವ್ ಮುನ್ನುಡಿಯಲ್ಲಿ ಬರೆದಿರುವ ಕೆಲವು ಅಂಶಗಳು: 'ಜೀವನ ಜಾಲ' ಓದಿದರೆ ಮುಕ್ತಾಯ ಅಚ್ಚರಿಯನ್ನು ಉಂಟು ಮಾಡುತ್ತದೆ. ಬಾಳಿನ ಜಟಿಲತೆ ಕಾದಂಬರಿಯಲ್ಲಿ ವ್ಯೈತಾಳಿ ಬಂದಿದೆ. ಈ ಕಾದಂಬರಿ ಒಂದು ವಿನ್ಯಾಸವನ್ನು, ಅರ್ಥವನ್ನು ಸಾಧಿಸಿದೆ.

ಯುವ ಲೇಖಕಿಯರಲ್ಲಿ ರೇಖಾ ಕಾಖಂಡಕಿ ತಮ್ಮ 'ಕೋಟೆ' ಕಾದಂಬರಿಯ ಮೂಲಕ ಹೆಚ್ಚಿನ ಭರವಸೆಯನ್ನು ಮೂಡಿಸಿದ್ದರು. ಸಂಪ್ರದಾಯ ಮತ್ತು ಕೋಟೆಯ ಸಮನ್ವಯ ಕಾದಂಬರಿಯಲ್ಲಿ ಚೆನ್ನಾಗಿ ಒಡಮೂಡಿತ್ತು. ಇತ್ತೀಚೆಗೆ ಅವರಿಂದ ಈ ಮಟ್ಟದ ಕಾದಂಬರಿ ಬರದಿರುವುದು ವಿಷಾದಕರ.

ದಿವಂಗತ ಲೀಲಾವತಿ ತೋರಣಗಟ್ಟೆಯವರು ಸ್ವಾತಂತ್ರ್ಯೋತ್ತರ ರಾಜಕೀಯವನ್ನು ತಮ್ಮ 'ಚಕ್ರ' ಕಾದಂಬರಿಯಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ.

ಈಚಿನ ದಿನಗಳಲ್ಲಿ ಜನರ ಗಮನ ಸೆಳೆದ ಮತ್ತೊಬ್ಬ ಲೇಖಕಿ ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿಯ ತೀರದಲ್ಲಿ', 'ಸಹನಾ' 'ವಜ್ರ' ಕಾದಂಬರಿಗಳು ಭಾರತೀಯ ಮುಸ್ಲಿಂ ಮಹಿಳೆಯ ಒಳತೋಟಿಯನ್ನು ಸಮರ್ಥವಾಗಿ ಚಿತ್ರಿಸಿವೆ.

ನಮ್ಮ ಹಿರಿಯ ಲೇಖಕಿ ಎಚ್. ವಿ. ಸಾವಿತ್ರಮ್ಮನವರು ಅನೇಕ ದಶಕಗಳಿಂದ ಸಾಹಿತ್ಯ ಸೇವೆ ಮಾಡುತ್ತ ಬಂದಿರುವವರು. ಅವರ ಇತ್ತೀಚಿನ ಕಾದಂಬರಿ 'ಸೀತೆ ರಾಮ ರಾವಣ'ದ ಸ್ತ್ರೀ ಪಾತ್ರಗಳು ತೀರಾ ವಿಶಿಷ್ಟವಾದವುಗಳು. ದಶರಥ ಒಬ್ಬರ ನಂತರ ಒಬ್ಬರು ಸವತಿಯರನ್ನು ತರುವಾಗ ಕೌಸಲ್ಯ ಅನುಭವಿಸುವ ನೋವನ್ನು ಸಾವಿತ್ರಮ್ಮ ಮೊದಲ ಬಾರಿಗೆ ಗುರುತಿಸಿದ್ದಾರೆ. ಹಾಗೆಯೇ ಸೀತೆಯ ಪಾತ್ರ. ಸೀತೆ ಪತಿವ್ರತೆಯೇ ಇರಬಹುದು. ಆದರೆ ಸದಾ ತನಗೆ ಎರಡನೆಯ ಸ್ಥಾನವನ್ನು ನೀಡುವ ಶ್ರೀರಾಮನಿಗಿಂತ, ತನ್ನನ್ನು ಗೌರವದಿಂದ ನಡೆಸಿಕೊಂಡ, ತನಗಾಗಿ

ಏನನ್ನಾದರೂ ತ್ಯಾಗ ಮಾಡಲು ಸಿದ್ಧನಾದ ರಾವಣನ ಬಗ್ಗೆ ಅವಳ ಮನಸ್ಸಿನಲ್ಲಿ ಅಭಿಮಾನ ಮೂಡಿದ್ದರೆ ಆಶ್ಚರ್ಯವೇನು ? ಎನ್ನುತ್ತಾರೆ ಲೇಖಕಿ. ವಿಚಾರವಂತಳಾದ ಮಹಿಳೆ ಸ್ತ್ರೀ ಪಾತ್ರದ ವಿಶ್ಲೇಷಣೆಯನ್ನು ಹೇಗೆ ಮಾಡಬಹುದು. ಪುರುಷನ ದೃಷ್ಟಿಗಿಂತ ಅವಳ ದೃಷ್ಟಿ ಹೇಗೆ ಭಿನ್ನವಾಗಿರಬಲ್ಲುದು ಎಂಬುದಕ್ಕೆ ಈ ಕೃತಿ ಸಾಕ್ಷಿಯಾಗಿದೆ.

ಕನ್ನಡ ಮಹಿಳಾ ಕಾದಂಬರಿಕಾರರಲ್ಲಿ ತ್ರಿವೇಣಿ ಒಂದು ಮೈಲಿಗಲ್ಲಾದರೆ ವೀಣಾ ಶಾಂತೇಶ್ವರ ಮತ್ತೊಂದು ಮೈಲಿಗಲ್ಲು. ಸಣ್ಣ ಕತೆಗಳಂತೆಯೇ ಕಾದಂಬರಿ ರಚನೆಯಲ್ಲೂ ಇವರು ತಮ್ಮತನವನ್ನು ತೋರಿದ್ದಾರೆ. ಕೊಂಚ ಎಚ್ಚರಿಕೆ ತಪ್ಪಿದ್ದರೂ ಕೇವಲ ವರದಿ ಆಗಬಹುದಾಗಿದ್ದ 'ಗಂಡಸರು' ಕಾದಂಬರಿ ವೀಣಾ ಅವರ ಜಾಣ್ಮೆಯಿಂದ ಕಲಾತ್ಮಕವಾಗಿ ಮೂಡಿ ಬಂದಿದೆ. ಸ್ತ್ರೀ ಶೋಷಣೆಯನ್ನೇ ವಸ್ತುವಾಗಿ ತೆಗೆದುಕೊಂಡರೂ ಕಲೆಗೆ ಕುಂದಿಲ್ಲದಂತೆ ಬರೆಯುವುದು ವೀಣಾ ಅವರ ವೈಶಿಷ್ಟ್ಯ. 'ದಲಿತ ಬಂಡಾಯ ಇತ್ಯಾದಿ....' ಅವರ ಮತ್ತೊಂದು ಮಹತ್ವದ ಕಾದಂಬರಿ.

'ಓ ಗಂಡಸೇ ನೀನೆಷ್ಟು ಒಳ್ಳೆಯವನು' 'ತಾರ್ಕಿಕ ಪ್ರೇಮ' ಮುಂತಾದ ರಂಜನೀಯ ಕಾದಂಬರಿಗಳನ್ನು ರಚಿಸಿದ್ದ ಎಂ. ಪಿ. ಉಮಾದೇವಿ ಇತ್ತೀಚೆಗೆ' ಬದುಕಲಾರದ ಬಲವಂತರು' ಎನ್ನುವ ಸತ್ವಪೂರ್ಣ ಕಾದಂಬರಿಯನ್ನು ನೀಡಿದ್ದಾರೆ. ಎರಡು ಕುಟುಂಬಗಳ ಚಿತ್ರಣದ ಸುದೀರ್ಘ ಕತೆ ಈ ಕಾದಂಬರಿಯ ವಸ್ತು. ಪರಿಸರಕ್ಕೆ ಅನುಕೂಲವಾದ ಭಾಷೆ, ಜೀವನಶ್ರದ್ಧೆಯಿಂದ ಕೂಡಿದ ಸ್ತ್ರೀಪಾತ್ರಗಳಿಂದಾಗಿ ಈ ದೀರ್ಘ ಕಾದಂಬರಿ ಶ್ರೇಷ್ಠ ಕಾದಂಬರಿಗಳ ಪಂಕ್ತಿಯಲ್ಲಿ ಸ್ಥಾನಗಳಿಗೆ ಬಲ್ಲುದಾಗಿದೆ.

ಹೆಸರಿಸಬಹುದಾದ ಇತರ ಕಾದಂಬರಿ ಕಾರ್ತಿಯರು : ದಿವಂಗತ ಗೀತಾಕುಲಕರ್ಣಿ, ಅಶ್ವಿನಿ, ಉಷಾದೇವಿ, ದೇವಕೀ ಮೂರ್ತಿ, ನಿರುಪಮಾ, ಎನ್. ಪಂಕಜಾ, ಶಾರದೆ, ಎಂ. ಸಿ. ಪದ್ಮಾ , ಈಚನೂರು ಜಯಲಕ್ಷ್ಮೀ ಮುಂತಾದವರು.

ಲೇಖಕಿಯರ ಕಾದಂಬರಿಗಳ ಅತಿ ಸಂತಾನದಿಂದಾಗಿ ಅವರು ವಿಮರ್ಶಕರ ಕಟುಟೀಕೆಗೆ ಒಳಗಾಗಬೇಕಾಯಿತು. ವಿಮರ್ಶೆಯ ಬಗ್ಗೆ ಆಲೋಚನೆ ಮಾಡುವುದಕ್ಕೆ ಮುಂಚೆ ಲೇಖಕಿಯರ ಕಾದಂಬರಿಗಳು ಇಷ್ಟೊಂದು ಜನಪ್ರಿಯವಾದುದಕ್ಕೆ ಏನು ಕಾರಣ ಎಂದು ಯೋಚಿಸೋಣ.

೧) ಲೇಖಕಿಯರು ಸಾಮಾನ್ಯವಾಗಿ ಬಳಸುವ ಭಾಷೆ ಸರಳವಾಗಿ, ಶುದ್ಧವಾಗಿ ಇದ್ದು ಓದಿಸಿಕೊಂಡು ಹೋಗುವ ಶಕ್ತಿಯನ್ನು ಪಡೆದಿದ್ದುದು.

೨) ಪುರುಷರ ಅನೇಕ ಕಾದಂಬರಿಗಳೊಂದಿಗೆ ಹೋಲಿಸಿದಾಗ ಮನಸ್ಸಿಗೆ ಮುಜುಗರ ಎನ್ನಿಸುವ 'ಅಶ್ಲೀಲತೆ'ಯ ಅಂಶ ಕಡಿಮೆ ಇರುವುದು.

೩) ಕಾದಂಬರಿಗಳಲ್ಲಿ ವೈಚಾರಿಕತೆ ಎಷ್ಟೇ ಮುಖ್ಯವಾದರೂ ಅದರ ಮೊದಲ ಗುರಿ ಮನರಂಜನೆ. ಹೀಗಾಗಿ ಕಥೆ ಹೇಳುವ ಕಲೆ ಅರಗಿಸಿಕೊಂಡ ಮಹಿಳೆಯರು ಸರಾಗವಾಗಿ ಕಥೆ ಹೆಣೆಯುತ್ತಿದ್ದುದು.

೪) ನನಗನ್ನಿಸುವ ಇನ್ನೊಂದು ಮುಖ್ಯ ಕಾರಣ.... ಐದು ಆರನೆಯ ದಶಕಗಳಲ್ಲಿ ಕಾದಂಬರಿ ರಚನೆಗೆ ತೊಡಗಿದವರೆಲ್ಲ ಹೆಚ್ಚಾಗಿ ಮಧ್ಯಮ ಹಾಗೂ ಉಚ್ಚಮಧ್ಯಮ ವರ್ಗದ ವಿದ್ಯಾವಂತ ಮಹಿಳೆಯರು. ಇವರು ತಮ್ಮ ಕತೆ ಕಾದಂಬರಿಗಳಿಗೆ ಆರಿಸಿಕೊಳ್ಳುತ್ತಿದ್ದುದೂ ಅದೇ ಸಮಾಜದ ಚಿತ್ರಣವನ್ನು. ಅಲ್ಲದೆ ಕಾದಂಬರಿಗಳನ್ನು ಹೆಚ್ಚಾಗಿ ಓದುತ್ತಿದ್ದವರೂ ಅದೇ ವರ್ಗದವರಾದ್ದರಿಂದ ಈ ಪಾತ್ರಗಳಲ್ಲಿ ಅವರು ತಮ್ಮನ್ನು ತಾವು ಗುರುತಿಸಿಕೊಳ್ಳುವುದು ಸಾಧ್ಯವಾಯಿತು.

ಒಟ್ಟಾರೆ ಕಾದಂಬರಿಗಳ ಬಾಹುಳ್ಯಕ್ಕೆ ಪತ್ರಿಕೆಯವರ ಕೊಡುಗೆಯೂ ಕಡಿಮೆಯೇನಲ್ಲ. ಧಾರಾವಾಹಿಗಳಿಂದ ಪತ್ರಿಕೆಯ ಪ್ರಚಾರ ಹೆಚ್ಚುವುದೆಂಬ ಗುಟ್ಟು ತಿಳಿದೊಡನೆಯೇ ಪ್ರತಿ ವಾರಪತ್ರಿಕೆ, ಮಾಸಪತ್ರಿಕೆ ಕೆಲವೊಂದು ದಿನಪತ್ರಿಕೆಗಳಲ್ಲೂ ಎರಡು, ಮೂರು, ಕೆಲವು ಪತ್ರಿಕೆಗಳಲ್ಲಿ ನಾಲ್ಕು ಧಾರಾವಾಹಿ ಬರಲಾರಂಭಿಸಿದವು. ನಮ್ಮಲ್ಲಿ ಪುಸ್ತಕಗಳನ್ನು ಕೊಳ್ಳುವವರಿಗಿಂತ ಪತ್ರಿಕೆ ಕೊಳ್ಳುವವರು ಹೆಚ್ಚು, ಕೊಳ್ಳದಿದ್ದಾಗಲೂ ಓದುವವರು ಇನ್ನೂ ಹೆಚ್ಚು. ಒಂದು ವಾರದಿಂದ ಇನ್ನೊಂದು ವಾರದವರೆಗೆ ಕತೆಯನ್ನು ನೆನಪಿನಲ್ಲಿಡಬೇಕಾದ ಸಂದರ್ಭ ಇರುವುದರಿಂದ ಇಂಥ ಕಾದಂಬರಿಗಳಲ್ಲಿ ಮನರಂಜನೆಗೇ ಪ್ರಥಮ ಸ್ಥಾನ (ಕೆಲವೊಂದು ಕಾದಂಬರಿಗಳು ಈ ಮಾತಿಗೆ ಅಪವಾದವಾಗಿ ನಿಲ್ಲುತ್ತವೆ. ಉದಾಹರಣೆಗೆ ನಾ. ಡಿಸೋಜ ಅವರ 'ಕುಂಜಾಲು ಕಣಿವೆಯ ಕೆಂಪು ಹೂ', ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಅನುಪಮಾ ಅವರ 'ಆಳ' ಮುಂತಾದವು) ಈ ಧಾರಾವಾಹಿಗಳಲ್ಲೂ ಮಹಿಳೆಯರ ಕಾದಂಬರಿಗಳೇ ಹೆಚ್ಚಾಗಿ ಪ್ರಕಟವಾದ್ದರಿಂದ ಆ ಮೂಲಕವೂ ಅವರ ಜನಪ್ರಿಯತೆ ಹೆಚ್ಚಿತು.

ಇಷ್ಟೆಲ್ಲ ಜನಪ್ರಿಯತೆ ಗಿಟ್ಟಿದ ಮೇಲೆ ವಿಮರ್ಶೆ ಬರದಿರುವುದು ಸಾಧ್ಯವೇ? ಮಹಿಳೆಯರ ಕಾದಂಬರಿಗಳು ಕೇವಲ ವಿಮರ್ಶೆಯನ್ನಲ್ಲ ಕಟು ಟೀಕೆಯನ್ನೇ ಇದಿರಿಸಿದವು.

ವಿಮರ್ಶೆ ಒಳ್ಳೆಯದೇ. ಸಾಹಿತ್ಯದ ಬೆಳವಣಿಗೆಗೆ ಇದು ಅತ್ಯಗತ್ಯ. ಆದರೆ ಸುಮಾರು ಏಳನೆಯ ದಶಕದ ವಿಮರ್ಶಕರು ಸಾರಾ ಸಗಟಾಗಿ, ಎಲ್ಲ ಲೇಖಕಿಯರ ಕಾದಂಬರಿಗಳನ್ನು ಒಂದೇ ತಕ್ಕಡಿಯಲ್ಲಿಟ್ಟು (ಎಷ್ಟೋ ಸಲ ಓದಿಯೂ ನೋಡದೆ) ತೂಗಿದುದು ಮಾತ್ರ ವಿಷಾದಕರ. (ತಾವು ವಿಚಾರವಂತರು ಎನ್ನಿಸಿಕೊಳ್ಳಬೇಕೆಂಬ ಅತಿ ಉತ್ಸಾಹದಿಂದ ಅದೇ ತಾನೇ ಸಾಹಿತ್ಯ ರಂಗದಲ್ಲಿ ಕಾಲಿಡುತ್ತಿದ್ದ ಅನೇಕ ಯುವ ಲೇಖಕಿಯರೂ ಇದೇ ರಾಗ ಹಾಡಿದ್ದುಂಟು.)

ಈ ವಿಮರ್ಶೆಗೆ ಕೆಲವೊಂದು ಸಮಾಧಾನಗಳನ್ನು ಮಾತ್ರ ನೀಡಬಯಸುತ್ತೇನೆ.

ಸಾಹಿತ್ಯ ಬರವಣಿಗೆಯು ಮಟ್ಟದಲ್ಲಂತೂ ತೀರಾ ವೈಯಕ್ತಿಕ. ಆದ್ದರಿಂದ ಇಡೀ ಗುಂಪನ್ನು ಒಂದು ರೀತಿಯ ಟೀಕೆಗೆ ಒಳಪಡಿಸುವುದು ತಪ್ಪು. ಸರಿಯಾದ ಸಾಹಿತ್ಯ ಸಮೀಕ್ಷೆ ನಡೆಸಬೇಕಾದಾಗ ಸಾಧ್ಯವಾದಷ್ಟು ಅದುವರೆಗೆ ಪ್ರಕಟವಾದ ಕೃತಿಗಳನ್ನೆಲ್ಲ ಓದಲೇಬೇಕು. ಆನಂತರವೇ ಸಮತೋಲನದ ವಿಮರ್ಶೆ ಸಾಧ್ಯ.

೨) ಸಾಹಿತ್ಯಕ್ಕೆ ಪ್ರತಿಭೆಯಷ್ಟೇ ಅನುಭವ, ಪರಿಸರಗಳು ಮುಖ್ಯವೆಂಬುದನ್ನು ಮರೆತದ್ದು ಸರಿಯಲ್ಲ. ಒಬ್ಬ ಕೃತಿಕಾರನ ರಚನೆಯನ್ನು ಅವನ ಪರಿಸರ, ಸಮಯದ ಹಿನ್ನಲೆಯಲ್ಲಿಟ್ಟೇ ಪರೀಕ್ಷಿಸಬೇಕು. ಹೆಚ್ಚಿನ ವಿದ್ಯೆ, ಅನುಭವಗಳಿಲ್ಲದ, ಸಂಪ್ರದಾಯದ ಬೇಡಿಗಳಿಂದ ಬಂಧಿತಳಾಗಿದ್ದ ಮಹಿಳೆಯಿಂದ ಒಂದೇ ಸಲಕ್ಕೆ ಅತಿ ಹೆಚ್ಚಿನದನ್ನು ನಿರೀಕ್ಷಿಸುವುದು ಹೇಗೆ ?

೩) ವಸ್ತು ಕೌಟುಂಬಿಕ ಆದ ಮಾತ್ರಕ್ಕೆ ತಪ್ಪೇನಿಲ್ಲ. ವೈಯಕ್ತಿಕ ಅನುಭವ ಸಾರ್ವಜನಿಕ ಆದಾಗಲೇ ಅದು ಉತ್ತಮ ಸಾಹಿತ್ಯ ಎನ್ನಿಸಿಕೊಳ್ಳುವುದು. ಆದ್ದರಿಂದ ಲೇಖಕಿ ಸಾಂಸಾರಿಕ ವಸ್ತುವಿನ ಬಗ್ಗೆಯೇ ಕಾದಂಬರಿ ರಚಿಸಿದಳು ಎನ್ನುವುದು ಆಕ್ಷೇಪಣೆಯ ವಿಚಾರ ಆಗಬೇಕಿಲ್ಲ.

೪) ಎಲ್ಲದಕ್ಕಿಂತ ಹೆಚ್ಚಾಗಿ, ಕಾದಂಬರಿ ಬರೆದಿರುವ ಪುರುಷರ ಸಂಖ್ಯೆ ಸ್ತ್ರೀಯರದಕ್ಕಿಂತ ಕಡಮೆಯೇನಲ್ಲ. ಅವರಲ್ಲೂ ಸತ್ವಶಾಲಿಯಾದ ಕಾದಂಬರಿಗಳನ್ನು ಬರೆದು ವಿಮರ್ಶಕರಿಂದ 'ಭೇಷ್' ಎನ್ನಿಸಿಕೊಂಡವರು ಎರಡು ಬೆರಳೆಣಿಕೆಗೆ ನಿಲುಕುವಷ್ಟು ಇಲ್ಲ. ಆದರೆ ನಮ್ಮ ವಿಮರ್ಶಕರು ಗಂಡಸರ ಕೃತಿಯನ್ನು ಎತ್ತಿಕೊಂಡಾಗ ಬಿಡಿಬಿಡಿಯಾಗಿ, ಸ್ತ್ರೀಯರ ಕೃತಿಗಳನ್ನು ಒಟ್ಟಾಗಿ ಟೀಕಿಸುವುದು ಎಷ್ಟರಮಟ್ಟಿಗೆ ಉಚಿತ !

ಲೇಖಕಿಯರು ಹೇಗೆ ಬರೆದರೂ ಅವರನ್ನು ಮೆಚ್ಚಿ ಪ್ರೋತ್ಸಾಹಿಸಬೇಕಾಗಿತ್ತು ಎಂದು ನಾನು ಹೇಳುತ್ತಿಲ್ಲ. ಆದರ ಲೇಖಕಿಯರ ಬರಹಗಳನ್ನೆಲ್ಲ ಒಟ್ಟಾಗಿ ತೂಕ ಮಾಡ ಹೊರಟಿದ್ದರ ಬಗ್ಗೆ ಮಾತ್ರ ನನ್ನ ಅಸಮಾಧಾನ ಅಷ್ಟೆ.

ಔಷಧಿ ಅತಿಯಾದಾಗಲೂ ವಿರುದ್ಧ ಪರಿಣಾಮವೇ ಬೀರುತ್ತದೆ. ಇಲ್ಲಾದದ್ದೂ ಹಾಗೆಯೇ. ಕೆಲವರು ಲೇಖಕಿಯರಂತೂ ಈ ವಿಮರ್ಶೆಯನ್ನು ಅತಿ ಉದಾಸೀನ ದೃಷ್ಟಿಯಿಂದ ನೋಡಿದರು. ನನಗೆ ಜನಪ್ರಿಯತೆ ಇದೆ. ಯಾರು ಏನಂದರೆ ನಮಗೇನು ? ಎನ್ನುವ ಧೋರಣೆ ತಳೆದರು.

ಆದರೂ ಈ ವಿಮರ್ಶೆಯಿಂದ ಪ್ರಯೋಜನವೇ ಆಗಲಿಲ್ಲ ಎನ್ನುವಂತಿಲ್ಲ. ಕೆಲವರು ಲೇಖಕಿಯರಾದರೂ ಆತ್ಮ ವಿಮರ್ಶೆಗೆ ತೊಡಗಿದರು. ಬರವಣಿಗೆಯನ್ನು ಗಂಭೀರವಾಗಿ ತೆಗೆದುಕೊಂಡರು. ಕಾದಂಬರಿಗಳ ಪ್ರವಾಹಕ್ಕೆ ಅಣೆಕಟ್ಟು ನಿರ್ಮಿತವಾಯಿತು. ಎಂಟನೆಯ ದಶಕದಲ್ಲಿ ಲೇಖಕಿಯರ ಕಾದಂಬರಿಗಳ ಸಂಖ್ಯೆ ಗಮನಾರ್ಹವಾಗಿ ಇಳಿಮುಖವಾಗಿರುವುದು ಅನುಭವಕ್ಕೆ ಬರುತ್ತಿದೆ. ಅಲ್ಲದೆ ಹಿಂದಿನಂತೆ ಈಗ ಕೇವಲ ಮಧ್ಯಮ ವರ್ಗದಿಂದ ಬಂದ ಮಹಿಳೆಯರು ಮಾತ್ರ ಕಾದಂಬರಿ ರಚಿಸುತ್ತಿಲ್ಲ. ಇಂದು ವಿವಿಧ ವರ್ಗಗಳ, ವಿವಿಧ ಜಾತಿಗಳ, ವಿಭಿನ್ನ ಪ್ರಾದೇಶಿಕ ಹಿನ್ನೆಲೆಯಿಂದ ಬಂದಿರುವ ಅನೇಕ ರಂಗಗಳಲ್ಲಿ ದುಡಿಯುತ್ತಿರುವ ಲೇಖಕಿಯರ ಸಂಖ್ಯೆ ಹೆಚ್ಚುತ್ತಿದೆ. ಅವರಿಂದ ಉತ್ತಮ ಕೃತಿಗಳು ರಚಿತವಾಗುತ್ತಿವೆ. ಮುಂದಿನ ದಿನಗಳಲ್ಲಿ ಲೇಖಕಿಯ ಕಾದಂಬರಿ ಎನ್ನುವ ತಲೆಬರಹದ ಅವಶ್ಯಕತೆಯಿಲ್ಲದೆ ಕನ್ನಡದ ಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ ನಿಲ್ಲಬಲ್ಲ ಶ್ರೇಷ್ಠ ಕಾದಂಬರಿಗಳು ಲೇಖಕಿಯರ ಲೇಖನಿಯಿಂದ ಖಂಡಿತ ಹೊರಬರುತ್ತವೆ ಎನ್ನುವ ಭರವಸೆ ನನಗಿದೆ.

ಕನ್ನಡ ರಘುವಂಶ

ಎರಡನೆ ಸರ್ಗ

ಎಚ್. ಎಸ್. ವೆಂಕಟೇಶಮೂರ್ತಿ

ಮೂಲ : ಮಹಾಕವಿ ಕಾಳಿದಾಸ

ದಿಲೀಪ ಸೂರ್ಯವಂಶದ ಅರಸ. ಸುದಕ್ಷಿಣೆ ಆತನ ರಾಣಿ. ಬಹುಕಾಲ ಅವರಿಗೆ ಮಕ್ಕಳಾಗದ ಕಾರಣ, ದಿಲೀಪ ತನ್ನ ರಾಣಿ ಮತ್ತು ಮಿತ ಪರಿವಾರದೊಂದಿಗೆ ಕುಲಗುರು ವಸಿಷ್ಠರ ಆಶ್ರಮಕ್ಕೆ ವ್ರತಾಚರಣೆಗೋಸ್ಕರ ಬರುತ್ತಾನೆ. ಗುರುಗಳು ತಮ್ಮ ದಿವ್ಯಜ್ಞಾನದಿಂದ ಒಮ್ಮೆ ದಿಲೀಪ ಸ್ವರ್ಗದಿಂದ ಭೂಮಿಗೆ ಬರುವಾಗ ಕಾಮಧೇನುವನ್ನು ಉಪೇಕ್ಷಿಸಿದ್ದೇ ಆತನು ಸಂತಾನ ಪಡೆಯದಿರಲು ಕಾರಣವೆಂದೂ, ಈಗ ತಮ್ಮ ಆಶ್ರಮದಲ್ಲಿಯೇ ಇರುವ ಕಾಮಧೇನು ವಿನ ಕುವರಿಯಾದ ನಂದಿನಿ ಎಂಬ ಹಸುವನ್ನು ಸೇವಿಸುವುದರಿಂದ ಆವನು ಸಂತಾನ ಪಡೆಯ ಬಹುದೆಂದೂ ಸೂಚಿಸುತ್ತಾರೆ, ದಿಲೀಪ ಆ ರಾತ್ರಿ ಕುಶತಲ್ಪದಲ್ಲಿ ಮಲಗಿ ವ್ರತಾಚರಣೆಗೆ ತೊಡಗುತ್ತಾನೆ.

ಮಾರನೆಯ ದಿನ.....

1

ಹೀಗೆ ಕಳೆಯಿತು ರಾತ್ರಿ. ನಸುಕಿನಲ್ಲೀ ರಾಜ
ಕರು ಬಿಟ್ಟುಕೊಂಡದರ ತಾಯಿಯನ್ನು
ಕಾಡಿಗೊಯ್ಯಲು ಸಿದ್ಧನಾದ. ರಾಣಿಯು ಗಂಧ
ಪುಷ್ಪದಿಂದರ್ಚಿಸಿದಳಾ ಗೋವನು.

2

ಹಿಂದೆ ಹಿಂದೇ ರಾಣಿ. ಮುಂದೆ ಹಸು. ಧೇನುವಿನ
ಕಾಲುಧೂಳಿನಿಂದ ಪರಿಪೂತವಾದ
ಹಾದಿಯಲಿ ಹಸುವನನುಸರಿಸಿದಳು –'ಶ್ರುತಿ'ಯನ್ನು
ಅನುಸರಿಸುವಂತೆ 'ಸ್ಮೃತಿ' ಶ್ರದ್ಧೆಯಿಂದ.

3

ಆಕಳಲ್ಲೀಕೆ, ಭೂಮಾತೆಯೇ ನಾಲಕ್ಕು
ಕಡಲ ಕೆಚ್ಚಲನಮಾಡಿ ರೂಪ ಮರೆಸಿ
ಗೋವಾದಳೆಂಬಂತೆ ಇರುವ ನಂದಿನಿಯು ದೊರೆ
ಪೊರೆಯೆ ನಡೆದನು –ಸತಿಯು ಹಿಂದೆ ಕಳಿಸಿ.

4

ಮೃಗಾವಲವರ ಬೇಡೆಂದು ನಿಲ್ಲಿಸಿ ರಾಜ
ನೊಬ್ಬನೇ ಆ ಪುಣ್ಯ ಧೇನುವನ್ನು
ಅನುಚರಿಸಿದನು ಶ್ರೇಷ್ಠ ಮನುವಂಶದರಸರಿಗೆ,
ಸ್ವಸಹಾಯರಿಗೆ ಬೇಕೆ ಬೇರೆ ನೆರವು ?

5

ಭೂಮಂಡಲಾಧೀಶ ಹಸುವನೋಲಗಿಸಿದನು
ಹಸುರಿನೆಳೆಗರಿಕೆಗಳ ನೀಡುತೊಲಿದು
ಕಾಡನೊಣಗಳ ಓಡಿಸುತ್ತ, ಮೈತುರಿಸುತ್ತ
ಹಸು ನಡೆದ ಕಡೆಗದರ ಜೊತೆಗೆ ನಡೆದು.

6

ಕೂತಿತೋ ಕೂತು, ಹಸು ನಿಂತಿತೋ ನಿಂತು, ಅದು
ನಡೆದಾಗ ನಡೆದು ಎಡೆಬಿಡದ ಹಾಗೆ
ನೀರು ಕುಡಿಯಿತೊ ಪುಣ್ಯಧೇನು ತಾನೂ ಕುಡಿದು
ಹಿಂಬಾಲಿಸಿದನದನು ನೆರಳಿನಂತೆ.

7

ರಾಜಲಾಂಛನವೇನು ಇರದಿದ್ದರೂ ಕೂಡ
ಮೆರೆದ ರಾಜನು ಸ್ವಪ್ರಕಾಶದೊಳಗೆ
ಮದಜಲವು ಹೊರ ಸೂಸದಿದ್ದರೂ ಮದಕರಿಯು
ಮದವನೊಳಗೊಂಡು ಶೋಭಿಸುವ ಹಾಗೆ.

8

ಮುಡಿಗಟ್ಟಿ ಬಳ್ಳಿನಾರಿಂದ ಆ ವಂದನೀ–
ಯನ ಹೋಮಧೇನುವನು ಕಾಯ್ವುದೊಂದು

ನೆಪವಮಾಡಿಕೊಂಡಂತೆ ಕಾಡುಮೇಡಲ್ಲಲೆದು
ಕ್ರೂರ ಮೃಗಗಳ ದರ್ಪವಡಗಿಸಿದನು

9

ಅನುಚರರ ಬಿಟ್ಟು ತಾನೊಬ್ಬನೇ ಬರುತಿರುವ
ವರುಣನಂತಿರುವ ನರಪತಿ ಕಾಣಲು
ಹಕ್ಕಿಗೊರಳಿಂದುಕ್ಕಿ ಬರುವ ಕಲರವದಿಂದ
ಜಯಘೋಷ ಮಾಡಿದವು ಹೆಮ್ಮರಗಳು.

10

ಪುರಕನ್ನೆಯರು ನಗರದಲ್ಲಿ ಅರಳಿನ ಧಾರೆ
ಧಾರಿಣೀಕನ ಮೇಲೆ ಸುರಿಯುವಂತೆ
ಗಾಳಿ ಬೀಸಿಗೆ ಎಳೆಯ ಬಳ್ಳಿ ಹೂ ಚೆಲ್ಲಿದವು
ಬರಲರಸ ಪ್ರಜ್ವಲಿಸುವಗ್ನಿಯಂತೆ.

11

ಬಿಲ್ಲಿದ್ದರೂ ಮೇಲೆ, ಕಣ್ಣಲ್ಲಿ ಕರುಣೆ ತುಂ-
ಬಿರಲು, ಹೆಣ್ಣೆರಳೆ ನಿರ್ಭೀತಿಯಿಂದ
ನಿಟ್ಟಿಸುತ ಆ ಭವ್ಯ ಮೂರ್ತಿಯನು ಇಷ್ಟಗಲ
ಕಂಗಳಿಗೆ ತಕ್ಕಫಲ ಪಡೆದುವಾಗ!

12

ವನದೇವಿಯರು ದಟ್ಟ ಪೊದೆಗಳೆಡೆಯಿಂದ ಸ್ವರ-
ವೆತ್ತಿ ಹಾಡಲು ತನ್ನ ಕೀರ್ತಿಯನ್ನು
ಮಾರುತನು ವೇಣುವನದಲ್ಲಿ ಸುಳಿದಾಡುತ್ತ
ಕೊಳಲು ನುಡಿಸುವುದರಸ ಆಲಿಸಿದನು.

13

ಶ್ವೇತಾತ ಪತ್ರವಿರದಾತನನು ಆತಪಾ-
ಘಾತನನು ಆಚಾರ ಪೂತನನ್ನು
ಗಿರಿ ಝರಿಯ ಶೀಕರವ ತರುವ ತರುಪುಷ್ಪ ಸೌ-
ರಭ ಬೆರೆತ ತಂಗಾಳಿ ಸೇವಿಸಿತ್ತು

14

ರಾಜನಿರುವಾಗ ರಕ್ಷಕನಂತೆ ಕಾಡೊಳಗೆ
ಮಳೆ ಬರದೆಯೂ ಕಿಚ್ಚು ತಣ್ಣಗಾಯ್ತು
ಹೂ ಹಣ್ಣು ಹೆಚ್ಚಿದವು ದುಷ್ಟ ಮೃಗಗಳು ವೃಥಾ
ಕಾಡದಿದ್ದುವು ಸಾಧು ಪ್ರಾಣಿಗಳನು.

15

ಸೂರ್ಯ ಚಾಂದಳದಲ್ಲಿ, ಕೆಂದಾವು ನೆಲದಲ್ಲಿ,
ದಿನವೆಲ್ಲ ಅಲೆದೆಡೆಯು ಶುದ್ಧಗೊಳಿಸಿ
ಕೆಂದಳಿರಿನಂತೆ ಥಳಥಳಿಸುತ್ತ ಸಂಜೆಯಲಿ
ಬೆಟ್ಟವಿಳಿದವು ಮನೆಯ ಸೇರಬಯಸಿ.

16

ಪಿತರು, ದೇವತೆ, ಅತಿಥಿಗಳ ಸೇವೆಗಿರುವಂಥ
ನಂದಿನಿಯು ಬರುತಿರಲು ರಾಜನ ಜೊತೆ
ಕಾಣುತಿದ್ದಳು ಮಧ್ಯಲೋಕದಧಿಪತಿಯೊಡನೆ
'ಆಚರಣೆ'ಯೊಡನಿರುವ 'ಶ್ರದ್ಧೆ'ಯಂತೆ.

17

ಕೆಸರು ಹೊಂಡಗಳಿಂದ ಬರುತಿರಲು ಹಂದಿಗಳು
ಕೃಷ್ಣ ಮೃಗಗಳು ಹಸಿರು ಬಯಲೊಳಿರಲು
ಹಾರಿ ಮರ ಕೈತರಲು ನವಿಲುಗಳು, ಆ ದೊರೆಯು
ನೋಡಿದನು ಕಾಡು ಕಪ್ಪಾದುದನ್ನು.

18

ಮೆಲ್ಲ ಮೆಲ್ಲಗೆ ಬರಲು ತುಂಬು ಕೆಚ್ಚಲಿನ ಆ
ಒಂದೆ ಸೂಲಿನ ಆವು ಕಾಡನಲೆದು
ಆಜಾನುಬಾಹು ಉತ್ತುಂಗ ದೇಹಿಯ ಜೊತೆಗೆ
ಆಶ್ರಮದ ಹಾದಿಯದು ಚೆಲುವಾದುದು.

19

ವನಿತೆ ವನದಂಚಿನಲಿ ನಿಂತು ಆ ನಂದಿನಿಯ
ಹಿಂದೆ ಹಿಂದೇ ಬರುವ ರಾಜನನ್ನು

ಕಂಡವಳೆ ಎನೆಬಡಿಯದಂತೆ ನೀರನ ರೂಪ
ಹೀರಿದಳು ಬಾಯೂರಿದಂತೆ ಕಣ್ಣು.

20

ಹಿಂದೆ ನೃಪ. ನಡುವೆ ಹಸು. ಮುಂದೆ ರಾಜನ ಪತ್ನಿ
ಬರುತಿರಲು ನಂದಿನಿಯನೆದುರುಗೊಳಲು
ಹಗಲು ಇರುಳಿನ ನಡುವೆ ಹೊಳೆವ ಸಂಜೆಯ ಹಾಗೆ
ಕಾಣುತಿತ್ತಾಗ ಆ ಕೆಂದಾಕಳು.

21

ರಾಣಿ, ನಂದಿನಿಗೆ ಬಲವಂದು, ವಂದಿಸಿ, ಕೈಯ
ಬಟ್ಟಲಲ್ಲಿರುವ ಅಕ್ಷತೆಗಳಿಂದ
ಅರ್ಥಸಿದ್ಧಿಯ ಬಾಗಿಲಂತಿರುವ ಕೋಡನಡು
-ವರ್ಚಿಸಿದಳೊಮ್ಮನದ ಶ್ರದ್ಧೆಯಿಂದ.

22

ಎಳೆಗರುವಿನತ್ತ ಮನವೆಳೆದರೂ ನಂದಿನಿಯು
ತಮ್ಮ ಪೂಜೆಯ ಹೀಗೆ ಸ್ವೀಕರಿಸಲು
ಸಂತೃಪ್ತರಾದರಾ ದಂಪತಿಗಳಿದು ಶುಭದ
ಸಂಕೇತ, ಸತ್ಫಲವು ಸನಿಯವೆಂದು

23

ಆ ಬಳಿಕ ಪತ್ನಿಯೊಡನಿರುವ ಗುರುವರ್ಯನಿಗೆ
ಪಾದವಂದನ ಮಾಡಿದರಸ ತಾನು
ಹಾಲು ಕರೆದಾಗಿ ವಿಶ್ರಮಿಸುತಿರವಾ ತುರುವ
ಪರಿಚರ್ಯೆಯನ್ನಾಗ ಕೈಗೊಂಡನು.

24

ಅರಸ ತನ್ನರಸಿಯೊಡ ನಾನಂದಿನಿಯ ಸನಿಯ
ಕುಳಿತಿದ್ದ. ಬಳಿಯೆ ಇವೆ ಧೂಪ ದೀಪ
ಗೋವು ಮಲಗಿದ ಮೇಲೆ ತಾನು ಮಲಗಿದ ನಸುಕ-
ಲದು ಏಳಲೊಡನೆದ್ದನಾ ದಿಲೀಪ.

25

ಹೀಗೆ ಸತಿಯೊಡನೆ ವ್ರತ ನಿಷ್ಠನಾದರಸ ಮೂ-
ರೇಳು ದಿನ ನಂದಿನಿಯ ಸೇವಿಸಿದನು
ಆರ್ತ ಜನರರ್ತಿಯನು ತೀರಿಸುವ ಸತ್ಕೀರ್ತಿ-
ವಂತನಾದಂಥ ಆ ಭೂಪಾಲನು.

26

ಮೂರನೆಯ ದಿನ ತನ್ನ ಅನುಚರನ ಶ್ರದ್ಧೆಯನು
ಒರೆದು ನೋಡುವೆನೆಂದು ಆ ಆಕಳು
ದೇವಗಂಗೆಯು ನೀರಬೀಳ ಸನಿಯದಲಿರುವ
ಎಳೆಗರಿಕೆ ಬೆಳೆದೊಂದು ಗವಿಯ ಹೊಗಲು

27

ದುಷ್ಟ ಮೃಗಗಳು ದಿವ್ಯ ಧೇನುವನು ಎಂದಿಗೂ
ಮುಟ್ಟಲಾರವು ಎಂದು ಈ ಧರಾಣ್ಮ
ಗಿರಿವನದ ಚೆಲುವಲ್ಲಿ ಮುಳುಗಿರಲು, ಒಮ್ಮೆಗೇ
ಹಾರಿ ಹಿಡಿಯಿತು ಹಸುವನೊಂದು ಸಿಂಹ !

28

ಹಸುವಿನಂಬಾ ಎಂಬ ಒರಲು ಅನುರಣಿಸುತ್ತ
ಕರುಣಾಳು ನೃಪವರನ ನೋಟವನ್ನು
ಸೆಳೆಯಿತೊಮ್ಮೆಗೆ ಕುಣಿಕೆ ಹಾಕಿ ಜಗ್ಗಿದ ಹಾಗೆ
ಗಿರಿಯ ಚೆಲುವಲಿ ಕೀಲಿಸಿರಲು ಕಣ್ಣ

29

ಲೋಹಿತಾದ್ರಿಯ ಶಿಖರದಲ್ಲಿ ಬೇರುಗಳೂರಿ
ಹೂಗಿಡಿದು ಜಕ್ಕಿಸುವ ಲೋಧ್ರದಂತೆ
ಕೆಂದಾಕಳಿನ ಮೇಲೆ ಜಿಗಿದು ಕುಳಿತಿತ್ತೊಂದು
ಕೇಸರಿಯು–ಎದೆಯು ಝಲ್ಲೆನ್ನುವಂತೆ

30

ತಕ್ಷಣವೆ ಶರಣ ರಕ್ಷಕನಾದ ಆ ದೊರೆಯು
ಶಿಕ್ಷಾರ್ಹವಾದ ಆ ಸಿಂಹವನ್ನು

ಕೊಲ್ಲಲೆಳಸುತ ಕ್ರೋಧದಿಂದ ಉಜ್ಜುಗಿಸಿದನು
ಬತ್ತಳಿಕೆಯಿಂದೆಳೆಯೆ ಬಾಣವನ್ನು

31

ಬಾಣಕೊಡ್ಡಿದ ಕೈಯಿ ಹಾಗೆ ಇದೆ. ಬೆರಳುಗಳು
ಅಂಟಿಹೋಗಿವೆ ಹಿಡಿದ ಶರ ಮೂಲಕೆ
ಉಗುರು ಹೊಳಪಿಗೆ ಬೆಳಗುತಿರಲು ಮಾರ್ಗಣದಗಂ,
ತೋಳಿಹುದು ಚಿತ್ರದಲಿ ಬರೆದ ಹಾಗೆ

32

ಹೀಗೆ ಉಂಟಾಗೆ ಆ ರಾಜನಿಗೆ ಅಪರಾಧಿ
ಎದುರಿಗಿದ್ದರು ಹೊಡೆಯದಸಮರ್ಥತೆ
ತನ್ನ ತೇಜಸ್ಸಿಂದ ತಾನೇ ಬೇಯುತ್ತಿದ್ದ
ಗಾರುಡಿಗೆ ವಶವಾದ ಸರ್ಪದಂತೆ

33

ಮೊದಲೆ ತನ್ನ ಅವಸ್ಥೆಯಿಂದ ಬೆರಗಾಗಿದ್ದ
ಆ ಸಿಂಹಸಮನು ಮನುಕುಲ ತಿಲಕನು
ಮತ್ತಷ್ಟು ಸಂಭ್ರಾಂತಗೊಳ್ಳುವಂತಾ ಸಿಂಹ
ನರ ಮನುಷ್ಯರ ಹಾಗೆ ಮಾತಾಡಿತು !

34

“ಸಾಕು ಬಿಡು ರಾಜನೇ ಏತಕುಬ್ಬಸಪಡುವೆ ?
ಬಿಟ್ಟರೂ ಫಲವಿಲ್ಲ ಬಾಣವನ್ನು
ಹೆಮ್ಮರವನುರುಳಿಸುವ ಬಿರುಗಾಳಿ, ರವೆಯಷ್ಟು
ಜರುಗಿಸಲು ಸಾಧ್ಯವೇ ಪರ್ವತವನು ?”

35

“ಯಾರೆಂದು ತಿಳಿದೆ ನೀನೆನ್ನ ? ಕೈಲಾಸಪತಿ
ಧವಳಗಿರಿಯಂತಿರುವ ನಂದಿಯನ್ನು
ಏರುವಾಗೆನ್ನ ಬೆನ್ನನು ಮೆಟ್ಟಿ ಏರುವನು
ನಾನೆ ಕುಂಭೋದರ, ನಿಕುಂಭಪ್ರಿಯನು”

36

"ಮುಂದೆ ಇದೆಯಲ್ಲ ಆ ದೇವದಾರುವ ನೋಡು !
ಶಿವನು ಕಾಣುವನದನು ಸ್ಕಂದನಂತೆ.
ಸ್ಕಂದ ಮಾತೆಯು ತನ್ನ ಹೊನ್ನಗೊಡದಿಂದ ಸೊದೆ
ಗರೆದು ಪೊರೆದಳದನ್ನು ಕಂದನಂತೆ !"

37

"ಒಂದು ದಿನ ಕಾಡಾನೆಯೊಂದು ತೀಟೆಗೆ ತನ್ನ
ಕೆನ್ನೆಯುಜ್ಜಲು ಮರದ ತೊಗಟೆ ಹರಿಯೆ
ತಾರಕಾಘಾತಕ್ಕೆ ಗಾಯಗೊಂಡ ಕುಮಾರ
ಕಂಡಂತೆ ಗೌರಿ ಕಣ್ಣೀರುಗರೆಯೆ"

38

"ನೇಮಿಸಿದ ಶಂಭು ಕಾಡಾನೆಗಳ ಬೆದರಿಸಲು
ರಕ್ಷಿಸಲು ಈ ದೇವದಾರುವನ್ನು
ಸನಿಯಕ್ಕೆ ಬರುವಂಥ ಪ್ರಾಣಿಗಳ ಭಕ್ಷಿಸಲು
ಕೊಟ್ಟನೀ ಬಗೆಯ ಸಿಂಹತ್ವವನ್ನು"

39

"ಚಂದ್ರಮನ ಹಿಡಿದು ಸಂತೃಪ್ತನಾಗುವ ತನಕ
ರಾಹು ಹೀರುವ ಹಾಗೆ ಚಂದ್ರಿಕೆಯನು
ಶಿವನೆ ನೇಮಿಸಿ ಬಳಿಗೆ ಬಂದೊದಗಿದಾಕಳಿನ
ನೆತ್ತರನು ಹೀರಿ ಪಾರಣೆಗೊಳುವೆನು"

40

"ಲಜ್ಜೆಗೆಡೆಗೊಡದೆ ಆಶ್ರಮಕಿನ್ನು ಹಿಂದಿರುಗು
ನಿನ್ನ ಗುರುಭಕ್ತಿ ನೀ ತೋರಿಸಿರುವೆ
ರಕ್ಷಣೆಯು ರಕ್ಷಕನ ಅಳವು ಮೀರಿರುವಾಗ
ಕುಂದೊದಗದೆಂದಿಗೂ ಸತ್ಕೀರ್ತಿಗೆ"

41

ಹೀಗೆ ನುಡಿಯೆ ಮೃಗೇಂದ್ರನಾನರೇಂದ್ರನು ತನ್ನ
ಅಳವುಗೆಡುವಿಕೆಗರಿತು ಕಾರಣವನು

ದೈವೀ ಪ್ರಭಾವದಿಂದಾದುದೀ ಗತಿಯೆಂದು
ಅವಮಾನವನ್ನೆಂತೊ ಸೈರಿಸಿದನು

42

ಇನ್ನೇನು ಹೊಡೆಯುಬೇಕೆಂದು ಎತ್ತಿದ ಕೈಯು
ವಜ್ರಧರ, ಶಿವನೊಂದೆ ನೋಟದಿಂದ
ಸ್ತಬ್ಧನಾದಂತಿದೇ ಮೊದಲ ಬಾರಿಗೆ ಹುರುಳು
ಗೆಡಲು ದೊರೆ ಮೃಗರಾಜಗಿಂತು ನುಡಿದ.

43

"ಕೈಸಾಗದವನು ತಾನೇನೊಂದನಾಡಿದರು
ನಗೆಗೇಡು ಎನ್ನುವುದು ತಿಳಿದಿದ್ದರೂ
ಸರ್ವಾತ್ಮಗಳ ಮನೋಗತವನರಿತವ ನೀನು
ಎನುವ ಕಾರಣ ಮಾತನಾಡುತಿಹೆನು"

44

"ಜಗದ ಜಂಗಮದ ಸ್ಥಾವರದ ಹುಟ್ಟಳಿವು ಪಾ-
ಲನೆಗೆ ಹೊಣೆಯಾದ ಶಿವನೆನಗೆ ಮಾನ್ಯ
ನನ್ನ ಕಣ್ಣೆದುರಿಗೇ ಗುರುವಿನೀ ಗೋಧನದ
ನಾಶವನುಪೇಕ್ಷಿಸುವುದೂ ಅಸಾಧ್ಯ."

45

"ಸಂಜೆಯಾಯಿತು ತಾಯಿ ಬರುವಳೀಗೆಂದು ಜಿಗಿ-
ಜಿಗಿವ ಕರುವಿನಲಿಟ್ಟು ಕರುಣೆಯನ್ನು
ಬಿಡು ತಾಯಿ ಹಸುವನ್ನು ಮುನಿವರನ ಧೇನುವನು
ಬದಲು ಸ್ವೀಕರಿಸೆನ್ನ ದೇಹವನ್ನು"

46

ಗಿರಿಯು ಗಹ್ವರದ ಕಗ್ಗತ್ತಲೆಯುು ತನ್ನ ದಂ-
ಷ್ಟ್ರದ ಹೊಳಪಿನಿಂದ ಹೋಳಾಗುವಂತೆ
ಸ್ವಲ್ಪವೇ ನಕ್ಕು ಆ ಭೂತನಾಥನ ಭೃತ್ಯ
ರಾಜನನು ಕುರಿತಾಡಿತಿಂತು ಮತ್ತೆ.

47

"ಒಂದೆ ಕೊಡೆಯಡಿಯ ಜಗದೊಡೆತನದ ಜೊತೆಗೆ ಹೊಸ
ಹರಯ, ಸುಂದರವಾದ ದಿವ್ಯ ದೇಹ!
ಈ ಎಲ್ಲ ಉತ್ತಮವನೊಂದು ಅಲ್ಪಕ್ಕಾಗಿ
ತೊರೆಯ ಬಯಸುವೆ! ನಿನಗಿದೇನು ಮೋಹ?!"

48

"ಭೂತಾನುಕಂಪೆಯಿಂದಾತ್ಮ ಬಲಿ ನೀಡಿದರೆ
ಬದುಕಿ ಉಳಿಯುವುದು ಈ ಒಂದೆ ಗೋವು!
ನೀನು ಉಳಿದರೆ ಜೀವರಾಶಿಯನೆ ಪಿತನಂತೆ
ಕಷ್ಟಕೋಟಲೆಯಿಂದ ಕಾಯಬಹುದು!"

49

"ನಂದಿನಿಯ ಬಗೆಗಿನಪರಾಧದಿಂದಗ್ನಿ ಸನು
–ನಾದ ಗುರು ಕೋಪಿಸುವನೆಂಬ ಭಯವೆ?
ಒಂದು ಹಸುವಿಗೆ ಬದಲು ಕೋಟಿ ಹಸುಗಳ ಕೊಟ್ಟು
ಮುನಿಯ ಮುನಿಸನ್ನಿಳಿಸಬಹುದಲ್ಲವೇ?"

50

"ಆದ ಕಾರಣ ಮೊದಲು ದೇಹವನು ಕಾಯ್ದುಕೋ
ಮುಂದೆಷ್ಟೊ ಸುಖವನನುಭವಿಸಬಹುದು.
ಸ್ವರ್ಗಕ್ಕು ಈ ನಿನ್ನ ರಾಜ್ಯಕ್ಕು ಅಂತರವ
–ದೊಂದೆ – ರಾಜ್ಯವು ಮಣ್ಣಿಗಂಟಿರುವುದು."

51

ಹೀಗೆ ನುಡಿಯೆ ಮೃಗೇಂದ್ರ, ಆ ಮಾತು ಗುಹೆಯಲ್ಲಿ
ಮಾರ್ದನಿಸುತಿರಲು ಅನುರಣಿತಗೊಂಡು
ಪರ್ವತವು ಕೂಡ ಸಂತೋಷದಿಂದಾಮಾತ
–ನೊಪ್ಪಿ ನಿನದಿಸುವಂತೆ ತೋರುತ್ತಿತ್ತು.

52

ಶಿವನ ಸೇವಕನು ಹೀಗೆಂದು ಹೇಳಿದ ಬಳಿಕ
ಜೀವ ಭಯದಿಂದ ಗದಗುಡುವ ಹಸುವು

ಬೆದರುಗಣ್ಣುಗಳಿಂದ ತನ್ನನೇ ನೋಡುತಿರೆ
ಮತ್ತಷ್ಟು ಕರುಣಾರ್ದ್ರನಾದ ನೃಪನು.

53

"'ಕ್ಷತ' ದಿಂದ ರಕ್ಷಣೆಯ ನೀಡುವವನೇ 'ಕ್ಷತ್ರ'
ಈ ಮಾತು ಲೋಕ ಪ್ರಸಿದ್ಧವಿರಲು
ಹಾಗೆ ಬದುಕದೆ ನಿಂದೆಗೀಡಾಗುವಂತೆ ಬದು
-ಕೇನು ಫಲ? ಯಾತಕೀ ಅರಸುತನವು?"

54

"ಬೇರೆ ಯಾವುದೋ ಹಸುವ ನೀಡಿ ಗುರುವನು ನಾನು
ಸಂತೈಸುವುದು ತಾನೆ ಹೇಗೆ ಸಾಧ್ಯ?
ಈ ಧೇನು ಸುರಭಿಗಿಂತೇನು ಕಡಿಮೆ? ಇದನ್ನು
ಹರನ ವರವಿರದೆ ಮುಟ್ಟುವುದಸಾಧ್ಯ."

55

"ಆವ ಕಾರಣ ನನ್ನ ದೇಹವನು ಬಲಿಗೊಟ್ಟು
ಹಸುವನುಳಿಸುವುದೇ ಸರಿಯಾದುದು!
ನಿನ್ನ ಪಾರಣೆಯೂಟ ಎಂದಿನಂತಾಗುವುದು
ಮುನಿಯನುಷ್ಠಾನಕೂ ಲೋಪಬರದು."

56

"ನೀನು ನನ್ನಂತೆಯೇ ಆಳು, ಒಡೆಯನ ಒಡವೆ
-ಯನ್ನು ದಕ್ಷತೆಯಿಂದ ಕಾಯುತಿರುವೆ!
ಕಾಯಬೇಕಾದ್ದನ್ನು ಕಾಯದಕ್ಷತ ಕಾಯ
ದೊಡನೆ ಒಡೆಯನ ಎದುರು ನಿಲ್ಲಬಹುದೆ?

57

"ಅಷ್ಟಕ್ಕು ನಿನಗೆ ನನ್ನೊಡಲ ಮೇಲಷ್ಟೊಂದು
ಕರುಣೆಯಿದ್ದರೆ ಉಳಿಸು 'ಕೀರ್ತಿಕಾಯ'
ಮಣ್ಣಿನಿಂದಾಗಿ ಮಣ್ಣಾಗುವೊಡಲಿನ ಬಗ್ಗೆ
ಎಳ್ಳಷ್ಟು ಮೋಹವೆನಗಿಲ್ಲವಯ್ಯ"

58

"ಮಾತುಕತೆಯಿಂದ ಮಿತ್ರತ್ವ ಮಾಡುವುದೆಂದು
ತಿಳಿದವರು ಹೇಳುವರು ಲೋಕವನ್ನು
ಕಾಡಿನಲಿ ಕೂಡಿ ಮಾತಾಡಿದೆವು ಮಿತ್ರನೇ!
ಕಡೆಗಣಿಸದಿರು ನನ್ನ ಮನವಿಯನ್ನು !"

59

"ಇನ್ನು ನಿನ್ನಿಷ್ಟ"ವೆನ್ನಲು ಸಿಂಹ ಸ್ಥಗಿತಗೊಂ-
ಡಿದ್ದ ತೋಳಿಗೆ ಜೀವ ಮರುಕಳಿಸಿತು
ಅರಸ ಶಸ್ತ್ರವ ನೆಲದೊಳಿರಿಸಿ ದೇಹವನೊಂದು
ಮಾಂಸದುಂಡೆಯ ಮಾಡಿ ಅರ್ಪಿಸಿದನು

60

ಈಗ ಇನ್ನೇನು ಕೇಸರಿಯು ಹಾರುವುದೆಂದು
ತಲೆಬಾಗಿ ಕುಳಿತರಸ ಕಾಯುತಿರಲು
ನಿಶಿತ ನಖ ದಂಷ್ಟ್ರದಾಘಾತಕ್ಕೆ ಬದಲಾಗಿ
ಮಳೆಯಂತೆ ಸುರಿಯುತಿವೆ ಬಿಡಿ ಹೂಗಳು !

61

"ಏಳುಮಗು ಏಳಿ"ನುವ ಜೇನಿನಂತಿನಿದಾದ
ದನಿಯು ಕೇಳಲು ರಾಜ ಮೇಲೆದ್ದನು
ಸಿಂಹವೆಲ್ಲಿದೆ ಅಲ್ಲಿ ? ವಾತ್ಸಲ್ಯಮಯಿಯಾದ
ಧೇನುನಿಂತಿದೆ ! ಕರೆಯುತಮೃತವನ್ನು !

62

"ಗುರು ಮಹಿಮೆಯಿಂದೆನ್ನ ಮುಟ್ಟುವುದು ಯಮನಿಗೂ
ಅರಿದು. ಹರಿಗಿರಿಗಿನ್ನು ಸಾಧ್ಯವೇನು ?
ನಾನೆ ಮಾಯೆಯನೊಡ್ಡಿ ಒರೆದು ನೋಡಿದೆ"ನೆಂದು
ಅರಸನಿಗೆ ಹೇಳಿತಾ ದಿವ್ಯಧೇನು.

63

"ಪುತ್ರನೇ ! ನಿನ್ನ ಗುರುಭಕ್ತಿಗೂ ಭೂತಾನು-
ರಕ್ತಿಗೂ ಮೆಚ್ಚಿರುವೆನಿಂದು ನಾನು !

ಬರಿಯ ಹಾಲ್ಗರೆವ ಹಸುವಲ್ಲ, ಒಲಿದರೆ ಬಯಕೆ-
ಗರೆವವಳು! ಕೇಳು. ಬೇಕಾದುದೇನು ?"

64

ಬೇಡಿದರೆ ಬೇಡಿದ್ದ ಕೊಡುವ ಕೊಡುಗೈಯದೊರೆ
ಕೈಯಾರೆ ವೀರಪದ ಗಳಿಸಿದವನು
ಕೈಮುಗಿದು ಬೇಡಿದನು, ತನಗೆ ತನ್ನರಸಿಯಲಿ
ಕುಲ ಪ್ರವರ್ತಕ ಕುವರನಾಗಲೆಂದು!

65

"ಅಷ್ಟೆ ತಾನೆ? ನಿನ್ನ ಇಷ್ಟ ನೆರವೇರುವುದು"
ಎಂದು ನಂದಿನಿ ಸುಪ್ರಸನ್ನತೆಯೊಳು
"ಎಲೆದೊನ್ನೆಯಲಿ ನನ್ನ ತನಿವಾಲ ಕರೆದು ಕುಡಿ
ಕಂದ" ಎಂದವನಿಗಾಜ್ಞಾಪಿಸಿದಳು.

66

"ಕರು ಕುಡಿದ ಮೇಲೆ, ಹೋಮಕ್ಕೆ ಬಳಸಿದ ಬಳಿಕ
ಗುರುವಿನಪ್ಪಣೆ ಪಡೆದು, ಉಳಿದ ಹಾಲ
ಕುಡಿಯ ಬಯಸುವೆ ತಾಯಿ, ಅಳುವಿಳಿಯಿಂದರಸ
ಸ್ವೀಕರಿಸುವಂತೆ ಅರನೆಯ ಪಾಲ"

67

ಹೀಗೆ ಬಿನ್ನವಿಸಲಾರಾಜ ಮುನಿಪನಧೇನು
ದೊರೆಯ ಬಗೆಗಿನ್ನಷ್ಟು ಪ್ರೀತಳಾಗಿ
ಕುಡಿದ ನೀರಲುಗದಂತಾಶ್ರಮಕೆ ಬರುತಿರಲು
ಹಿಂದೆಯೇ ಬಂದನಾ ರಾಜಯೋಗಿ.

68

ಧೇನು ತನಗೊಲಿದುದನು ತನ್ನ ಹಿಗ್ಗಿದ ತುಂಬು
ತಿಂಗಳಂದದ ಮುಖವೆ ಹೇಳಿದ್ದರೂ
ಮತ್ತೊಮ್ಮೆ ಹೇಳಿದನು ಕುಲಗುರುವಿಗಾ ಬಳಿಕ
ಹರ್ಷದಿಂದರಸಿಗೂ ವಿವರಿಸಿದನು.

69

ನಂದಿನಿಯು ಹಾಲನಾನಂದದಿಂದವನಿಪನು
ಕರು ಕುಡಿದು ಹೋಮವಿಧಿಯಾದ ಮೇಲೆ
ಗುರುವಿನನುಮತಿ ಪಡೆದು ಕುಡಿದ ದ್ರವಗೊಂಡಿರುವ
ತನ್ನಮಲಕೀರ್ತಿಯನೆ ಕುಡಿಯುವಂತೆ.

70

ಮರು ದಿವಸ ವ್ರತದ ಪಾರಣೆಯ ನಂತರ ಮುನಿಪ
ಒಲವಿನಿಂದಾರಾಜ ರಾಣಿಯರನು
ಸ್ವಸ್ತಿವಾಚನ ಮಾಡಿ ಹರಸಿ ಆಶ್ರಮದಿಂದ
ಶುಭವಾಗಲೆನ್ನುತ್ತ ಬೀಳ್ಕೊಟ್ಟನು.

71

ಹೋಮಾಗ್ನಿಯನ್ನು, ಗುರುವನ್ನು, ಗುರುಪತ್ನಿಯನು,
ಎಳೆಗರುವಿನೊಡನಿರುವ ನಂದಿನಿಯನು,
ಕ್ರಮವಾಗಿ ಬಲವಂದು ಹರಕೆಗೊಂಡನು ಮಂಗ-
ಳಾಚರಣೆಯಿಂದ ಕಳೆಗೊಂಡರಸನು.

72

ಕಿವಿಗೆ ಇನಿದಾಗಿ ದನಿಗೊಡುತಿರುವ-ರಥವೇರಿ
ಧರ್ಮಪತ್ನಿಯ ಜೊತೆಗೆ ಇಳೆಯರಸನು
ಅಡೆತಡೆಗಳಿರದಂಥ ದಾರಿಯಲಿ ಸಾಗಿದನು
ಏರಿದೊಲು ಫಲಿಸಿದ ಮನೋರಥವನು.

73

ವ್ರತದಿಂದ ನವೆದವನ, ಬಹುಕಾಲದಿಂದಗಲಿ-
ದವನಿಪನ ಕಾಂಬ ಕಾತರತೆಯಿಂದ
ನೆರೆದ ಜನ ಆಗಷ್ಟೆ ಮೂಡಿರುವ ಚಂದ್ರಮನ
ಕಂಡಂತೆ ಹೀರಿದರು ಕಂಗಳಿಂದ.

74

ಅಮರೇಂದ್ರನಂತಿರುವ ಆ ನರೇಂದ್ರನು ಧ್ವಜಗ-
ಳೇರಿಸಿದ ಪಟ್ಟಣಕೆ ಆಗಮಿಸಿದ.

ಜನರ ಮನ್ನಣೆಗೊಂಡ. ಭೂಭಾರವನು ಮತ್ತೆ
ಭುಜಗದಂದದ ಭುಜದೊಳಳವಡಿಸಿದ.

75

ಅಂಬರವು ಅತ್ರಿಯಿಂದೊಗೆದಿಂದು ಬಿಂಬವನು,
ಆಕಾಶಗಂಗೆ ರುದ್ರಾಂಶವನ್ನು,
ತಳೆದಂತೆ ಕುಲದೊಳಿತಿಗಾಗಿ ಧರಿಸಿದಳರಸಿ
ದಿವ್ಯ ತೇಜಸ್ಸುಳ್ಳ ಗರ್ಭವನ್ನು.

ಗೆಬೋರ್ ಗೆಬೋರ್....

ಜೆಕ್ ಮೂಲ : ಲುಡ್ವಿಕ್ ಅಶ್ಕೆನ್ಜಿ

ಕನ್ನಡಕ್ಕೆ : ಎಂ. ಎಸ್. ಶ್ರೀರಾಮ್

ಮೂಲತಃ ಇಬ್ಬರು ಗೆಬೋರ್‌ಗಳಿದ್ದರು. ಹಿರಿಯ ಗೆಬೋರ್ ಮತ್ತು ಕಿರಿಯ ಗೆಬೋರ್. ಕಿರಿಯನಾದ ಗೆಬೋರ್ ಲಕಟೋಸ್‌ನ ಅಪ್ಪ ಹಿರಿಯ ಗೆಬೋರ್. ನಿಜ ಹೇಳುವುದಾದರೆ ಹಿರಿಗೆಬೋರ್‌ನ ಹಿರಿತನ ಈ ಒಂದು ಅಂಶದಲ್ಲಿ ಮಾತ್ರ ಇತ್ತು.

ಅವರಿಬ್ಬರೂ ನಡೆದು ಹೋಗುತ್ತಿದ್ದರೆ, ನೀವು ನಿಂತು ಅವರನ್ನು ದಿಟ್ಟಿಸುವುದಿಲ್ಲ. ಬದಲಿಗೆ ತಿರುಗಿ ತಿರುಗಿ ನೋಡಲು ಪ್ರಯತ್ನ ಮಾಡುತ್ತೀರಿ. ಅವರು ಒಂದೇ ಚಕ್ರದ ಎರಡು ಮರಿಗಳೆಂಬ ಹಾಗೆ ಒಂದು ವಿಚಿತ್ರ ರೀತಿಯಲ್ಲಿ ಒಬ್ಬರನ್ನೊಬ್ಬರು ಹೋಲುತ್ತಿದ್ದರು. ಅವರನ್ನು ನೋಡಿದಾಗ ಪ್ರಕೃತಿ ಇಬ್ಬರು ಭಿನ್ನ ವ್ಯಕ್ತಿಗಳನ್ನು ನಿರ್ಮಿಸಿರುವಂತೆಯೂ ಭಾಸವಾಗುತ್ತಿತ್ತು.

ಅವರುಗಳ ನಡುವಿನ ಸಂಬಂಧ ಬಹಳ ಸರಳವಾಗಿತ್ತು. ಕರಿ ಕುದುರೆಯೊಂದು ಕರಿ ಕುದುರೆ ಮರಿಗೆ ಮಾರ್ಗದರ್ಶನ ಕೊಟ್ಟು ನಡೆಸುವ ಹಾಗೆ; ತಲೆತಲಾಂತರದಿಂದ ಬಂದ ಪಿತೃತ್ವದಂತೆ ಕಂಡುಬರುತ್ತಿತ್ತು. ಅವರುಗಳ ಸಂಬಂಧದಲ್ಲಿ ಸೈಬೀರಿಯಾದ ಜಿಂಗಾಡಿನ ವಾಸನೆಯೂ ಇತ್ತು. ಆರಂಭದಿಂದಲೂ ಅವರಿಬ್ಬರೂ ಪೂರ್ಣಪ್ರಮಾಣದ ವ್ಯಕ್ತಿಗಳಾಗಿದ್ದದ್ದು ಸ್ಪಷ್ಟವಿತ್ತು: ಕಿರಿಗೆಬೋರ್ ದೊಡ್ಡವನಾದಾಗ ಹಿರಿಗೆಬೋರ್ ಆಗುತ್ತಿದ್ದ. ಹಿರಿಗೆಬೋರ್ ಜಾಗರೂಕನಾಗಿ ಉಳಿಯದಿದ್ದರೆ ಅವನು ಸಾಕಷ್ಟು ಸಣ್ಣವನಾಗಿಯೇ ಉಳಿಯುತ್ತಿದ್ದ. ಹಿರಿಗೆಬೋರನ ಕಣ್ಣಕಿಡಿಗಳು ಜೀವಂತವಾಗಿದ್ದು, ಕೋಚುಕೋಚಾದ ಕಾಲ್ದಾರಿಯನ್ನು ಮಿಂಚು ಕತ್ತರಿಸಿದಂತೆನ್ನಿಸುತ್ತಿತ್ತು. ಕಿರಿ ಗೆಬೋರನಿಗೆ ಸಣ್ಣ ಹಸಿರು ಬಣ್ಣದ ಕಿಡಿಕಂಗಳಿದ್ದು ಅವೂ ಸಹ ಲಘುವಾಗಿ ಮಿಂಚುತ್ತಿದ್ದವು.

ಕೊಶಿಟ್ಸ್ ನಗರದ ಒಂದು ಜಿಪ್ಸಿ ಕೊಳಗೇರಿಯಲ್ಲಿ ಇಬ್ಬರ ಜನನವೂ ಆಗಿತ್ತು. ಹಿರಿಗೆಬೋರ್‌ಗೆ ಮುವತ್ತೈದು ಮತ್ತು ಕಿರಿಗೆಬೋರ್‌ಗೆ ಹದಿಮೂರು ವರ್ಷ ವಯಸ್ಸಾಗಿತ್ತು.

ಹಿರಿಗೆಬೋರ್‌ನ ಸಣ್ಣಂದಿನ ಕಷ್ಟದ ದಿನಗಳನ್ನು ಹೆಚ್ಚಿನಂಶ ಓದುಗನಿಂದ ಮರೆ ಮಾಚಿ ಇಡಲಾಗುತ್ತದೆ. ಈ ಬಗ್ಗೆ ಹೆಚ್ಚಿದ ವಿವರಗಳನ್ನು ತಿಳಿಯಬೇಕಾದರೆ– ಕೊಶಿಟ್ಸ್ ನಗರದ ಜನರ ಆತ್ಮಗಳ ವಿಷಯದಲ್ಲಿ ಪರಿಣಿತನಾದ, ಪೂರ್ವ ಸ್ಲೊವಾಕ್ಯದಲ್ಲಿ ಅತ್ಯಂತ ಆರೋಗ್ಯವಂತ ಪಿಂಚನಿದಾರನಾದ ಪೋಲೀಸ್ ಸಾರ್ಜೆಂಟ್ ಜೆಹ್ರಾಡಿಂಚಿಕ್‌ನನ್ನು ಕೇಳಬೇಕಾಗುತ್ತದೆ.

ಸಾರ್ಜೆಂಟ್ ಜೆಹ್ರಾಡಿಂಚಿಕ್‌ಗೆ ಬಹಳಷ್ಟು ವಿಷಯಗಳು ನೆನಪಿರುತ್ತವೆಂಬುದು ನಿಜವಾದರೂ ಎಲ್ಲವನ್ನೂ ಖಂಡಿತವಾಗಿ, ನಿಖರವಾಗಿ ನೆನಪಿಟ್ಟುಕೊಳ್ಳಲು ಸಾಧ್ಯವಿಲ್ಲವಷ್ಟೆ.

ಆಗಿನ ದಿನಗಳಲ್ಲಿ ಪ್ರಪಂಚ ಬೇರೆಯೇ ರೀತಿಯಿತ್ತು. 'ಸ್ಯಾಡ್ ಸಂಡೇ' ಹಾಡನ್ನು ಹಾಡಿದಾಗಲೆಲ್ಲ ಗಾಯಕರು ಗಂಭೀರವಾಗಿ, ಭಾವಪೂರ್ಣವಾಗಿ ಕಣ್ಣೀರು ಸುರಿಸುತ್ತಿದ್ದಂತಹ ಬಂಗಾರದ ದಿನಗಳವು. ಅಂದಿನ ಕಾಲದಲ್ಲಿ ದೊಡ್ಡ ಜಮೀನುದಾರರೆಲ್ಲಾ ಅಂಗಡಿಯಲ್ಲಿದ್ದ ಮಾಣಿಗಳನ್ನೂ ಅವರ ಎಳೆ ಹೆಣ್ಮಕ್ಕಳನ್ನೂ ಸೇರಿಸಿ ಪ್ರತೀ ವ್ಯಕ್ತಿಗೂ ಪಾನ ಕೊಡಿಸುತ್ತಿದ್ದ ದಿನಗಳವು. ಟ್ರೆಬಿಶೋವ್ ಸ್ಟಡ್ ಫಾರ್ಮಿನ ಮಾಲೀಕನೂ ಕೆಂಚ್‌ಎಷ್ಟರ್ ಹೇಜಿ ಮಾದಕ ದ್ರವ್ಯ ತಯಾರಿಕಾ ಸಂಸ್ಥೆಯ ಪಾಲುದಾರನೂ ಆದ ಖ್ಯಾತ ವ್ಯಕ್ತಿ ಫೊಲೊಡೋಸ್ ಬೇಲಾ ಕೊಶಿಟ್ಸ್ ನಗರಕ್ಕೆ ಸಿಂಸುಮಿತನಾಗಿ ಬರುತ್ತಿದ್ದ ದಿನಗಳವು.

ಹಾಗೆ ನೋಡಿದರೆ ಫೊಲೊಡೋಸ್ ಬೇಲಾಗೂ ನಮ್ಮ ಕತೆಗೂ ಯಾವ ಸಂಬಂಧವೂ ಇಲ್ಲ. ಆದರೆ ಒಂದೇ ಒಂದು ಸಂಜೆಯಲ್ಲಿ ಜಿಪ್ಸಿಗಾಯಕನೊಬ್ಬನ ಹಣೆಗೆ ಅಷ್ಟೊಂದು ನೂರು ಕ್ರೌನ್‌ಗಳ ನೋಟುಗಳನ್ನು ಹಚ್ಚುತ್ತಿದ್ದ ವ್ಯಕ್ತಿಯ ಪ್ರಸ್ತಾವನೆಯಾದರೂ ಮಾಡಬೇಕಲ್ಲ. ಆವನಿಗೂ ಈ ಕತೆಗೂ ಒಂದು ಥರದ ಸಂಬಂಧವನ್ನೂ ಹುಡುಕಬಹುದೆನ್ನಿ. ಹಿರಿ ಗೆಬೋರ್ ಕಿರಿಯನಾಗಿದ್ದಾಗ ಶಾಂತವಾದ ಕೊಶಿಟ್ಸ್ ಮಾರುಕಟ್ಟೆಯಲ್ಲಿನ ಹೆಂಗಸರಿಗಾಗಿ ಹೊತ್ತು ಹಾಕುತ್ತಿದ್ದ ತರಕಾರಿಗಳು ಫೊಲೊಡೋಸ್ ಬೇಲಾನ ಜಮೀನಿನಲ್ಲಿ ಬೆಳೆದವುಗಳಾಗಿರುತ್ತಿದ್ದುವು. 'ಅತ್ಯುತ್ತಮ ಬನ್‌ಗಳು' ಎಂಬ ಜಾಹೀರಾತು ಹೊತ್ತ ಲಾರಿಯಿಂದ

ಆಗಾಗ (ಕಳ್ಳತನದಿಂದಾಗಿ) ಅದೃಶ್ಯವಾಗುತ್ತಿದ್ದ ಹಿಟ್ಟಿನ ಸುರಳಿಗಳು – ಯಂತ್ರ ಚಾಲಿತ ಸ್ಲೋವನ್ ಬೇಕರಿಯಲ್ಲಿ ಉತ್ಪಾದನೆಗೊಳ್ಳುತ್ತಿದ್ದುವು. (ಫ್ಲೋರೊಡೋಸ್ ಬೇಲಾ ಅದರ ಗಂಭೀರ ಪಾಲುದಾರನಾಗಿದ್ದ)

ಇಷ್ಟಾದರೂ ಫ್ಲೋರೊಡೋಸ್ ಬೇಲಾಗೂ, ಗೆಬೋರ್ ಲಕಚೊಸ್‌ಗೂ ಪರಸ್ಪರ ಪರಿಚಯವಿರಲಿಲ್ಲ. ಅದನ್ನು ದುರಾದೃಷ್ಟ ಎನ್ನಲೂ ಬಹುದೇನೋ. ಫ್ಲೋರೊಡೋಸ್ ಬೇಲಾನಿಗೆ ಜಿಪ್ಸಿಗಳು ಕದಿಯುತ್ತಾರೆಂಬ ಸತ್ಯ ಗೊತ್ತಿದ್ದರೂ ಎಂದಿಗೂ ಅದನ್ನು ಅವರುಗಳ ಹಿತಾಸಕ್ತಿಗೆ ವಿರುದ್ಧವಾಗಿ ಉಪಯೋಗಿಸಿಕೊಂಡಿದ್ದಿಲ್ಲ.

'ನಾನು ಮಾತ್ರ ಕದಿಯೋದಿಲ್ವೇ.. ಹೇಳು ?' ಎಂ[illegible] ಯು ನೋಡಿ ಹೆಂಡತಿಯೆದುರು ಹೇಳುತ್ತಿದ್ದುದುಂಟು.

ಪೋಲೀಸ್ ಸಾರ್ಜೆಂಟ್ ಜೆಹ್ರಾಡಿಂಚೆಕ್ ಮಾತ್ರ ಅಪರಾಧಗಳನ್ನು ಬೇರೆಯೇ ಒಂದು ದೃಷ್ಟಿಕೋನದಿಂದ ನೋಡುತ್ತಿದ್ದ. ಅಪರಾಧಗಳ ಅಧ್ಯಯನ ಭಾಗಶಃ ಅವನ ವೃತ್ತಿಯಾಗಿತ್ತು ಮತ್ತೆ ಭಾಗಶಃ ವ್ಯಸನ ಎನ್ನಲಾಗದಿದ್ದರೂ ಅವನ ಆಸಕ್ತಿಯಂತೂ ಆಗಿತ್ತೆಂಬುದು ನಿಜ. ಇದರ ಫಲವಾಗಿಯೇ, ಕಿದ್ದಲಸಾಧ್ಯವಾದ ಜಿಪ್ಸಿ ಕುಲದ ಬಗ್ಗೆ ಮಹಾ ಪ್ರಬಂಧವೊಂದು ತಯಾರಾಗಿ, ಪೋಲೀಸ್ ಸಾರ್ಜೆಂಟ್ ಜಹ್ರಾಡಿಂಚೆಕ್‌ಗೆ ತನ್ನ ವೃತ್ತಿವಲಯದಲ್ಲೊಂದಿಷ್ಟು ಖ್ಯಾತಿಯೂ ಪ್ರಾಪ್ತವಾಯಿತು. ಪೋಲೀಸ್ ಪೋಸ್ಟ್‌ನಲ್ಲಿ ಮೊದಲಬಾರಿಗೆ ಮುದ್ರಿತವಾದ ಆ ಪ್ರಬಂಧವನ್ನು ಸ್ಟೂರ್ಮರ್ ಪತ್ರಿಕೆ ಮರುಮುದ್ರಿಸಿದಾಗ ಶಾಸನ ಸಭೆಯಲ್ಲದು ಚರ್ಚಿಸಲ್ಪಟ್ಟ ವಿಷಯವೂ ಆಯಿತು.

ಮೊದಲ ಬಾರಿಗೆ ಆ ಲೇಖನ 1935 ರಲ್ಲಿ ಮುದ್ರಣಗೊಂಡಿತ್ತು.

ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರ್ ಪಾಲಿಸುತ್ತಿರುವ ಕುಟುಂಬ ನಿಯಂತ್ರಣಾ ನೀತಿಯ ಬಗ್ಗೆ ನಮ್ಮಲ್ಲಿ ಯಾವುದೇ ಉತ್ಸಾಹವಿಲ್ಲದಿದ್ದರೂ ಆ ಆಲೋಚನೆಯನ್ನಂತೂ ತೆಗೆದುಹಾಕುವಂತಿಲ್ಲ (ಎಂದು ಲೇಖನ ಹೇಳಿತ್ತು) ಜಿಪ್ಸಿಗಳು ಈ ಹಿಂದೆಯೂ ಈಗಲೂ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಒಂದು ದೊಡ್ಡ ಪಿಡುಗಾಗಿದ್ದಾರೆ. ಅವರುಗಳು ಕಳ್ಳತನ, ಮೋಸ, ಡಕಾಯಿತಿಗಳಿಂದ ಜೀವನ ನಿರ್ವಹಿಸುತ್ತಾರೆ. ಇದರಿಂದಾಗುವ ಲುಕ್ಸಾನು ಮಿಲಿಯಾಂತರ ದಾಟುತ್ತದೆ. ಕಾನೂನು ಪಾಲನೆ, ನ್ಯಾಯ ವ್ಯವಸ್ಥೆ ಕೇಂದ್ರ, ಪೋಲೀಸ್ ಠಾಣೆಯಲ್ಲಿ ಜಿಪ್ಸಿಗಳ ಚರಿತ್ರೆಗಳನ್ನೊಳಗೊಂಡ ಕಡತಗಳ ಪಾಲನೆ. ಇತ್ಯಾದಿಗಳೂ ಸರಕಾರದ ವಾರ್ಷಿಕ ವೆಚ್ಚಕ್ಕೆ- ದೊಡ್ಡ ಮೊತ್ತದಲ್ಲಿ ಒಂದು ಸೇರಿಕೊಳ್ಳುತ್ತವೆ.

ಈಚೆಗೆ ನ್ಯಾಯಾಲಯಗಳ ದೃಷ್ಟಿಕೋನವೂ ಬದಲಾಗುತ್ತಿದ್ದು ಜಿಪ್ಸಿಗಳ ಹಾವಳಿ ಕಡಿಮೆಯಾಗುವುದಕ್ಕೆ ಬದಲು ವಿಪರೀತಕ್ಕೇರಿಬಿಟ್ಟಿದೆ. ಆಸ್ಟ್ರಿಯಾದಲ್ಲಿ ಅವರ ರಾಜ್ಯಾಂಗದನುಸಾರ. ಜಿಪ್ಸಿಗಳ ಮನಸೋಇಚ್ಛೆ ವರ್ತನೆಗೆ ಅವರನ್ನು ಯಾವಾಗಲಾದರೂ ಬಂಧಿಸಬಹುದಾಗಿದೆ. ಆದರೆ ನಮ್ಮ ಕಾನೂನಿನನ್ವಯ ನಮ್ಮ ನ್ಯಾಯಾಲಯಗಳು ಎಷ್ಟೋಬಾರಿ ಅಪರಾಧಿ ಜಿಪ್ಸಿಗಳನ್ನೂ ಬಿಟ್ಟುಬಿಡುವುದುಂಟು. ಅದಕ್ಕವರು ನೀಡುವ ಕಾರಣ- ಮನಸೋಇಚ್ಛೆ ವರ್ತನೆಗೆ, "ಅಲೆಮಾರಿಗಳಾದ ಜಿಪ್ಸಿಗಳ ಸಹಜ ವರ್ತನೆ" ಎಂಬ ವ್ಯಾಖ್ಯೆ ! ಜೆಕ್ ದೇಶದ ಹೆಚ್ಚಿನಂಶ ಜಿಪ್ಸಿಗಳ ಜೀವನ- ಬಂದೀಖಾನೆ, ಬಿಡುಗಡೆಯ ಮಧ್ಯೆ ಎಡತಾಕುತ್ತಿರುತ್ತದೆ, (ಪೋಲೀಸ್ ಸಾರ್ಜೆಂಟ್ ಜೆಪ್ರಡಿಂಚೆಕ್ ಬರೆದದ್ದು) ಆದ್ದರಿಂದ ಅವರುಗಳ ಜನಸಂಖ್ಯಾ ನಿಯಂತ್ರಣ ಅಗತ್ಯವೆನ್ನಿಸುತ್ತದೆ. ಅದಕ್ಕೆ ತಾಂತ್ರಿಕ ಕಾರಣಗಳೂ ಪೂರಕವಾಗಿವೆ. ಎಲ್ಲ ಜಿಪ್ಸಿಗಳಿಗೂ ಜನಸಂಖ್ಯಾ ನಿಯಂತ್ರಣದ ಶಸ್ತ್ರ ಚಿಕಿತ್ಸೆ ಮಾಡಿದರೆ, ಕೆಲ ವರ್ಷಗಳಲ್ಲಿ ಕ್ರಮೇಣ ಎಲ್ಲರೂ ಮಾಯವಾಗಿ ಹೋಗುತ್ತಾರೆ.

ಪೋಲೀಸ್ ಪ್ರೋಸ್ಟ್‌ನ ವಿಷಯ ಹಾಗಿರಲಿ ಬಿಡಿ.

ಈ ಲೇಖನದ ವಿಚಾರಗಳನ್ನು ಕುತೂಹಲ ಭರಿತ, ಲಾಭದಾಯಕ ವಿಷಯವೆಂಬಂತೆ ಸಂಸತ್ತಿನ ಒಣಿಗಳಲ್ಲಿ ಚರ್ಚಿಸಲಾಯಿತು. ಒಂದು ಮಂಗಳವಾರ ಫ್ಯಾಸಿಸ್ಟ್ ತತ್ವ ಬೆಂಬಲಿಸುವ ಆರು ಜನ ಜನತಾ ಪ್ರತಿನಿಧಿಗಳು ಒಂದೆಡೆ ಸೇರಿ ಪೂರ್ತ ದಿನ ಚರ್ಚೆಯಲ್ಲಿ ಕಳೆದರು. ಕಡೆಗೂ ಜೆಕ್ ಸರ್ವಾಧಿಕಾರತ್ವಕ್ಕೂ ಹಿಟ್ಲರನ ಜಾತಿವಾದಿ ತತ್ವಕ್ಕೂ ಯಾವುದೇ ಸಾಮ್ಯ ಇಲ್ಲವೆಂಬ ಕಾರಣಕ್ಕಾಗಿ ಇದನ್ನು ಚರ್ಚೆಗೆಂದು ಸಂಸತ್ತಿಗೊಯ್ಯುವುದು ಸರಿಯಲ್ಲವೆಂದು ನಿರ್ಧರಿಸಲಾಯಿತು. ಕೆಲ ನಾಯಕರಿಗೆ ಹಾಗೂ ಒಂದು ಪಕ್ಷದ ಎಲ್ಲ ಸಂಸತ್ಸದಸ್ಯರಿಗೂ (ಕಮ್ಯುನಿಸ್ಟ್) ಆಗಲೇಬೇಕಾದ ಸಂತಾನ ಶಕ್ತಿಹರಣ ಶಸ್ತ್ರಕ್ರಿಯೆಯ ಬಗ್ಗೆ ನಗೆಚಟಾಕಿಗಳನ್ನು ಬಹಳ ದಿನಗಳ ಕಾಲ ಸಂಸತ್ತಿನ ಆಚೀಚೆ ಹಾರಿಸಲಾಗುತ್ತಿತ್ತು. ಈ ಎಲ್ಲ ಸುದ್ದಿಯೂ ಕಡೆಗೆ ಜಿಪ್ಸಿ ಸಂಗೀತಗಾರನಾದ ಜೋಜ್ಕಾಲಾಕಾತ ದಿನವೂ ಹಾಡುತ್ತಿದ್ದ ರೊಮಾನಾ ಕ್ಲಬ್ಬಿಗೂ ತಲುಪಿತು.

ಹೀಗಿರುತ್ತಿರಲು ಕಿರಿ ಗೆಬೋರ್ ಹಿರಿಗೆಬೋರನ ಮಗನಾಗಿ ಜನ್ಮಿಸಿದ.

ಈ ಸುದ್ದಿ ಪೋಲೀಸ್ ಸಾರ್ಜೆಂಟ್ ಜೆಪ್ರಾಡಿಂಚೆಕ್‌ನ ಕಿವಿಗೆ ಬಿದ್ದಾಕ್ಷಣ ಆತ ನಿಟ್ಟುಸಿರು ಬಿಟ್ಟ. "ಅವನ ಮಗನಿಗೆ ಮೂರು ವರ್ಷ ಆಗೋದಕ್ಕೆ ಮೊದಲೇ ಅವನು ಕಳ್ಳತನ ಪ್ರಾರಂಭ ಮಾಡಿದ್ರೆ ಏನೂ ಮಾಡೊಕ್ಕಾಗಲ್ಲ. ಆದ್ರೆ ಆಮೇಲೆ ಕದಿಯೋಕೆ ಶುರು ಮಾಡಿದ್ರೆ ಹಿರಿ ಗೆಬೋರ್ ಲಕ್ಪೋಸನನ್ನ 'ಮಗನನ್ನ ನಿರ್ಲಕ್ಷ್ಯ ಮಾಡಿದ ಕಾರಣ' ಎಂದು ಬಂಧಿಸಲು ಸಾಧ್ಯ" ಎಂದು ತೀರ್ಮಾನ ಕೊಟ್ಟು ಬಿಟ್ಟ.

ಅವನು ಕಾನೂನಿನಲ್ಲಿ ನುರಿತವನಷ್ಟೇ ಅಲ್ಲ.... ಜಿಪ್ಸಿ ಆತ್ಮಗಳ ಬಗ್ಗೆಯೂ ಅಧಿಕಾರಯುತವಾಗಿ ಹೇಳಬಲ್ಲವನಾಗಿದ್ದ. ಆದರೇನು ಮಾಡುವುದು ? ನುರಿತ ಮಾಲಿಯೂ ಒಮ್ಮೊಮ್ಮೆ ತನ್ನ ಅಜಾಗರೂಕತೆಯಿಂದ ಹೂವರಳುವುದನ್ನು ತಡೆಗಟ್ಟುತ್ತಾನೆ. ಇಲ್ಲಿಯೂ ಹಾಗೆಯೇ ಆಯಿತು. ಹಿರಿ ಗೆಬೋರ್‌ಗೆ ಸಾ ಮಿಲ್ಲಿನಲ್ಲಿ ಒಂದು ಕೆಲಸ ಸಿಕ್ಕಿತು. [ಭಾಗಶಃ ಮಾಲೀಕ ಫೊಲೊಡೋಸ್ ಬೇಲಾ] ಕಿರಿ ಗೆಬೋರ್ ಎಂದಿಗೂ ಏನನ್ನೂ ಕದಿಯಲಿಲ್ಲ– ಕಾರಣ ಅದಕ್ಕೆ ಅವನಿಗೆ ಯಾರೂ ಮಾರ್ಗದರ್ಶಿಯಾಗಿರಲಿಲ್ಲ.

ಅವರಿಬ್ಬರೂ ಒಳ್ಳೆಯ ಹೊಂದಾಣಿಕೆಯಿಂದಿರುತ್ತಿದ್ದರು.... ಸರಿಯಾದ ಹೊಂದಾಣಿಕೆ ಎಂದರೇನು ? ಒಬ್ಬರಿಗಾಗಿ ಇನ್ನೊಬ್ಬರು ಹೆಚ್ಚು ಹೆಚ್ಚು ನಿರೀಕ್ಷಿಸಿದರೆ, ಅವರುಗಳ ಆಕಾಂಕ್ಷೆಗಳು ಆಗೀಗ ಪೂರ್ಣಗೊಂಡರೆ ಹೊಂದಾಣಿಕೆ ಎನ್ನಬಹುದೇ ?

ಕಿರಿ ಗೆಬೋರ್ ಜಾಣ ಹುಡುಗನಾಗಿದ್ದ. ವಿಪರೀತ ಬೇಸರದಿಂದಿದ್ದರೂ ನಿರ್ಭೀತಿಯಿಂದ ಒಂಟಿಯಾಗಿ ಸಮಯ ಕಳೆವ ದೈವಕೃಪೆಯಿದ್ದ ಹುಡುಗನಾಗಿದ್ದ. ಇಂಥೊಂದು ಗುಣವನ್ನು ಅನೇಕರು ತಡವಾಗುವವರೆಗೂ, ಅಥವಾ ಎಂದೆಂದೂ ಗಮನಿಸದೇ ಇರಬಹುದು. ಒಂದರಿಂದ ಇನ್ನೊಂದು ಅಷ್ಟೇನೂ ದೂರವಿಲ್ಲದ ನಾಲ್ಕು ಗೋಡೆಗಳ ಮಧ್ಯೆ ಅವನು ಬದುಕಲಾರಂಭಿಸಿದ. ಆ ಗೋಡೆಗಳು ಮಾತ್ರ ಕರಿಛಾಯೆಯ ನಡುವಿನಲ್ಲಿ ಉದ್ಭವವಾಗಿ ಎದ್ದು ನಿಂತಂತಿತ್ತು.

ಕಿರಿ ಗೆಬೋರನ ಬಳಿ ಎರಡು ಗಾಜಿನ ಚೂರುಗಳಿದ್ದುವು. ಕೆಂಪು ಹಾಗೂ ನೀಲಿ. ಮರಗಳ ಮೇಲಿಂದ ಹರಿದು ಬರುವ ಹಸಿರು ವರ್ಣದ ಮಳೆಯಂತಹ ಜೀವನವನ್ನು ಅವನು ಆ ಗಾಜುಗಳ ನಡುವಿನಲ್ಲಿ ಹಿಡಿದಿಡಲು ಪ್ರಯತ್ನ ಮಾಡುತ್ತಿದ್ದ. ಅವನ ಬಳಿ ಪಟ್ಟೆಗಳ ಜರ್ಸಿ, ಕಂದು ಬಣ್ಣದ ಚೆಡ್ಡಿ ಮತ್ತು ಲಾಜೋಸ್ ಎಂದು ಹೆಸರಿಟ್ಟಿದ್ದ ಹರಿದ ಬೊಂಬೆ- ಇವಿಷ್ಟೂ ಇದ್ದುವು. ಎಲ್ಲಕ್ಕಿಂತ ಮಿಗಿಲಾಗಿ ಅವನಿಗೆ ತಂದೆ ಬೇರೆ ಇದ್ದ. ಅವನ ತಾಯಿ ಮಾತ್ರ ಕೆಲ ವರ್ಷಗಳ ಹಿಂದೆ ಅಂದರೆ ಕಿರಿ ಗೆಬೋರ್‌ನಿಗೆ ಒಂದು ವರ್ಷ ವಯಸ್ಸಾಗಿದ್ದಾಗ ಸತ್ತು ಹೋಗಿದ್ದಳು. ಅದಕ್ಕೇ ಬಹಳ ದಿನ ಕಾಡಿನ ಗುಡಿಸಲುಗಳ ಮಗನಾದ ಕಿರಿ ಗೆಬೋರನಿಗೆ 'ಅಮ್ಮ' ಎಂಬ ಪದವೇ ತಿಳಿದಿರಲಿಲ್ಲ. ಬಹಳ ಕಾಲದವರೆಗೆ ಅವನು ಮಕ್ಕಳಿಗೆ ತಂದೆ ಮಾತ್ರವೇ ಇರುತ್ತಾನೆಂದು ಭಾವಿಸಿದ್ದ. ಮಕ್ಕಳನ್ನು ಅವರವರಪ್ಪಂದಿರು ಮೃದು ಮರದಿಂದ ಕೆತ್ತಿ ತೆಗೆದು ನಂತರ ಅವರಿಗೆ ಈಜಲು ಕಡೆಗೆ ತಿನ್ನಲೂ ಕಲಿಸಿಕೊಡುತ್ತಾರೆಂದು ಅವನು ತಿಳಿದಿದ್ದ. ಅಂದಿನ ದಿನಗಳಲ್ಲಿ ಹಿರಿ ಗೆಬೋರ್

ಜಾಕುನೋವಿಸ್‌ನಲ್ಲಿ ಒಂದು ಕಟ್ಟಿಗೆಯ ಕೋಣೆ ಮಾಡಿಕೊಂಡು ಅಲ್ಲಿ ಜೀವಿಸು ತ್ತಿದ್ದ. ಅವನ ಕೆಲಸ ಕಾಡಿನ ಸಾ ಮಿಲ್ಲಿನಲ್ಲಿ ಮುಂದುವರೆದಿತ್ತು. ಹಳೇ ಓಕ್ ಮರದ ಕೊಂಬೆಗಳಿಂದ ಹೆಣೆದಿದ್ದ ಆ ಕೋಣೆ ಈಗ ಕಪ್ಪಾಗಿ ಕಾಣುತ್ತಿತ್ತು. ಕೋಣೆಯ ಒಂದು ಕಿಟಕಿಯಿಂದ ಕಾಡಿನ ಝರಿಯೊಂದು ಕಾಣಿಸುತ್ತಿತ್ತು. ಮ ತ್ತೊಂದು ಕಿಟಕಿಯಿಂದ ಫರ್ನ್ ಗಿಡಗಳ ಹಾಸೊಂದು ಕಂಡುಬರುತ್ತಿತ್ತು. ಕಿರಿ ಗೆಬೋರ್ ಒಂದಲ್ಲದಿದ್ದರಿನ್ನೊಂದು ಕಿಟಕಿಯಿಂದ ಇಣುಕಿ ನೋಡುತ್ತಿದ್ದ. ಝರಿ ಯಾವಾಗಲೂ ಒಂದೇ ಕಿಟಕಿಯಡಿಯಲ್ಲಿ ಕಂಡು ಬರುವುದನ್ನೂ ಬೇರೊಂದು ಕಿಟಕಿಯಿಂದ ಇಣುಕಿದಾಗೆಲ್ಲಾ ಬಂಗಾರ ಬಣ್ಣದ ಫರ್ನ್ ಹಾಸು ಕಂಡು ಬರು ವುದು ಸ್ಥಿರ ಸತ್ಯವೆಂದು ಕಿರಿ ಗೆಬೋರ್‌ಗೆ ಬೇಗನೇ ಮನವರಿಕೆಯಾಯಿತು.... ಬೆಳಗಿನ ಹಾಲಿನಂಥ ಮಸಕಿನಲ್ಲಿಯೇ ಹಿರಿ ಗೆಬೋರ್ ಕೆಲಸಕ್ಕೆಂದು ಅದೃಶ್ಯನಾ ಗುತ್ತಿದ್ದ. ಆಗಿನಿಂದಲೇ ಕಿರಿ ಗೆಬೋರ್‌ಗೆ ಕಾಯುವುದು, ನಿರೀಕ್ಷಿಸುವುದು ಎಲ್ಲ ವೂ ಅಭ್ಯಾಸವಾಗತೊಡಗಿತು. ಕಿರಿ ಗೆಬೋರ್‌ಗೆ ಈ ಕಲೆ ಚೆನ್ನಾಗಿ ಅಭ್ಯಾಸವಾ ಗುವ ವೇಳೆಗೆ ಹಿರಿ ಗೆಬೋರ್‌ಗೆ ಇದು ಮರೆತೇ ಹೋಗಿತ್ತು.

ಹಿರಿ ಗೆಬೋರ್ ಸಂಜೆಗೆ ಮನೆಗೆ ಹಿಂದಿರುಗುತ್ತಿದ್ದ. ಅವನು ಮನೆಯಲ್ಲಿಲ್ಲದಾಗ ನಡೆದುದೆಲ್ಲವನ್ನೂ ಕಿರಿ ಗೆಬೋರ್ ವರದಿ ಒಪ್ಪಿಸುತ್ತಿದ್ದ. ವಿಶೇಷವೇನೂ ಘಟಿಸ ದಿದ್ದಾಗ್ಯೂ ಮಗು ಮಾತ್ರ ಅದನ್ನು ಹೇಗೆ ಹೇಳುತ್ತಿತ್ತು?

'ಅಪ್ಪಾ ನೀರಿನ ಹತ್ರ ಇದ್ದ ಕಲ್ಲು ಇದ್ದಕ್ಕಿದ್ದ ಹಾಗೆ ತಾನೇತಾನಾಗೆ ಎದ್ದು ನಿಂತು ನದಿಗೆ ಹಾರಿಕೊಳ್ತು' ಕಿರಿ ಗೆಬೋರ್ ಹೇಳುತ್ತಿದ್ದ.

'ಹೌದು ಅದು ನೀರಲ್ಲಿ ಮುಳುಗಿ ಆತ್ಮಹತ್ಯೆ ಮಾಡ್ಕೋತೀನೀಂತ ನಿನ್ನೇನೇ ನಂಗೆ ಹೇಳಿತ್ತು' ಹಿರಿ ಗೆಬೋರನ ಉತ್ತರ– 'ಕಲ್ಲು ಏನಾದ್ರೂ ಹೇಳಿದ್ರೆ ಖಂಡಿ ತವಾಗಿ ಮಾಡೇ ಮಾಡುತ್ತೆ'.

'ಅಪ್ಪಾ ಕಿಟಕಿ ಹತ್ರ ಒಂದು ಜಿಂಕೆ ಬಂದಿತ್ತು. ಅದರ ಕೊಂಬಿಂದ ಗಾಜಲ್ಲಿ ಒಂದು ತೂತು ಕೊರೀಬೇಕೂಂತ ಇತ್ತು. ಆದ್ರೆ ನಾನೇ ಗಾಜಿನ ಮೇಲೆ ನನ್ನ ಹೆಬ್ಬೆರಳಿಟ್ಟು 'ಬಡ ಜಿಪ್ಸಿಗಳ ಜತೆ ಹೀಗೇನಾ ವರ್ತಿಸೋದು? ಅಂತ ಕೇಳ್ದೆ.. ಆದ್ರೆ ಅಷ್ಟರಲ್ಲಿ ಒಂದು ಕಣಜದ ಹುಳು ಬಂದು ಅದರ ಬೆನ್ನು ಕಚ್ಚಿಬಿಡ್ತು'.

'ಕಣಜದ ಹುಳೂನ ನಾನೇ ಕಳಿಸಿದ್ದು' ಹಿರಿ ಗೆಬೋರ್ ಹೇಳಿದ.

'ಓ ಅಪ್ಪಾ.... ಎಂಥ ಬುದ್ಧಿವಂತ' ಕೀರಲು ದನಿಯಲ್ಲಿ ಕಿರಿಗೆಬೋರ್ ಕೂಗಿದ 'ನೀನು ತುಂಬಾ ಬುದ್ಧಿವಂತ ಅಪ್ಪಾ.... ತುಂಬಾ....'

'ಪ್ರಪಂಚದಲ್ಲೆಲ್ಲಾ ನಾನೇ ಅತೀ ಬುದ್ಧಿವಂತ ಗೊತ್ತಾ?' ಹಿರಿಗೆಬೋರ್ ಘೋಷಿಸಿದ. ಕೆಲಕ್ಷಣಗಳ ವರೆಗೆ ಇಬ್ಬರೂ ಅದನ್ನ ನಂಬಿದರು. 'ಒಂದಾನೊಂದು ಕಾಲದಲ್ಲಿ ಒಬ್ಬ ಸಂಗೀತದವನಿದ್ದ. ನಂಗೆ ಪಿಟೀಲು ಕೊಟ್ಟಿದ್ದಾನಲ್ಲಾ ಅವನು. ಅವನೂ ಬಹಳ ಬುದ್ಧಿವಂತ ಆಗಿದ್ದ. ಸ್ಲೊವಾಕ್‌ನಲ್ಲಿ ಅವನ ಹೆಸರು ಓಲಾ ಅಂತ.... ಬೊಹೇಮಿಯದಲ್ಲಿ ಅವನನ್ನ ರೋಜಾ ಅಂತ ಕರೀತಿದ್ರು.'

'ಯಾರಾದ್ರೂ ಯಾರನ್ನೇ ಆಗ್ಲಿ ರೋಜಾಂತ ಯಾಕೆ ಕರೀತಾರೆ?' ಕಿರಿಗೆಬೋರ್ ನಗುತ್ತಾ ಕೇಳಿದ. 'ಯಾರಿಗೋ ಸೇಬು ಅಂತ ಹೆಸರಿಟ್ಟ ಹಾಗಾಗುತ್ತೆ.... ಯಾರಿಗಾದ್ರೂ ಸೇಬೂಂತ ಹೆಸರಿಡಬಹುದಾಪ್ಪಾ?'

ಹಿರಿಗೆಬೋರ್ ಈ ಬಗ್ಗೆ ದೀರ್ಘವಾಗಿ ಆಲೋಚಿಸಿ ಕಡೆಗೆ ಗಂಭೀರವಾಗಿ ಘೋಷಿಸಿದ. 'ಓ.. ಇಡಬಹುದು.. ಯಾರನ್ನಾದ್ರೂ ಬೇಕಿದ್ರೆ ಸೇಬೂಂತನೂ ಕರೀಬೌದು'

ನಂತರ ಹಿರಿಗೆಬೋರ್ ನುರಿತ ಸಂಗೀತಗಾರನಂತೆ ಕಮಾನಿನ ಮೇಲೆ ಅಂಟನ್ನು ಜಜ್ಜಲು ಪ್ರಾರಂಭಿಸಿದ. ಆ ಪ್ರಕ್ರಿಯೆಯೇ ಸಂಗೀತವನ್ನು ಹೊರಹೊಮ್ಮಿಸಿತು. ಕಿರಿಗೆಬೋರ್ ಬ್ರೆಡ್ಡಿನ ಒಂದು ತುಣುಕಿನ ಮೇಲೆ ಹಂದಿ ಕೊಬ್ಬನ್ನು ಹಚ್ಚಿಕೊಂಡ. ತನ್ನ ಹೊಟ್ಟೆಯನ್ನು ನೆಲದ ಮೇಲೆ ಚಾಚಿ ಚಟಪಟ ಶಬ್ದದೊಂದಿಗೆ ಬ್ರೆಡ್ಡನ್ನು ಮೆಲ್ಲುತ್ತಾ, ಪಿಟೀಲಿನಿಂದ ಹೊಮ್ಮುತ್ತಿದ್ದ ಸಂಗೀತದ ತರಂಗಗಳನ್ನು ಕೇಳುತ್ತಾ ಮಲಗಿದ.

ಇನ್‌ಕ್ಲಿಯಾನ್ ನ್ಯಾಚ್ಟ್ ಮ್ಯೂಸಿಕ್.... ಪ್ರಾರಂಭವಾಗಿತ್ತು.

ಈ ಜೀವನದಲ್ಲಿ ಎಲ್ಲವೂ ಅದೃಷ್ಟವಶಾತ್ ಸಾಪೇಕ್ಷ ಅಷ್ಟೇ. ನಾವು ಪಿಟೀಲು ಹೇಗೆ ನುಡಿಸುತ್ತೇವೆಂಬುದು ಮುಖ್ಯವಲ್ಲ. ಯಾರಿಗಾಗಿ ನುಡಿಸುತ್ತೇವೆಂಬುದು ಮುಖ್ಯವಾಗುತ್ತದೆ. ಹಾಗೆ ನೋಡಿದರೆ ಕಿರಿಗೆಬೋರ್ ಒಳ್ಳೆಯ ಕೇಳುಗ. ಅಸೂಯೆ ಪಡುವಂತಹ ವ್ಯಕ್ತಿ. ಹಾಗೇ ನಿಮ್ಮನ್ನು ಗೋಳಾಡಿಸುವಂತಹ ವ್ಯಕ್ತಿಯೂ ಸಹ.

ಬಹುಶಃ ಹೊಟ್ಟೆಯ ಮೇಲೆ ಮಲಗಿ ಚಟಪಟ ಶಬ್ದದೊಂದಿಗೆ ತಿನ್ನುತ್ತಿದ್ದುದರಿಂದಲೇನೋ ಅವನಿಗೆ ಚಪ್ಪಾಳೆ ತಟ್ಟಲು ಸಾಧ್ಯವಾಗುತ್ತಿದ್ದಿಲ್ಲ. ಆದರೆ ಕಲಾವಿದನಾದವನು ತನ್ನ ಕೇಳುಗನನ್ನು ಕಣ್ಣಿಗೆ ನೇರವಾಗಿಟ್ಟುಕೊಂಡು ತನ್ನ ದೃಷ್ಟಿಯ ಪರಿಧಿಯನ್ನು ಅವನಿಂದಲೇ ತುಂಬಿಸಿಕೊಂಡು ಅವನಲ್ಲುಂಟಾದ ಹೊಳಪಿನ ರುಚಿ ನೇರವಾಗಿ ಕಂಡುಬರುತ್ತಿರುವಾಗ ಚಪ್ಪಾಳೆಯ ಅವಶ್ಯಕತೆ ಆದರೂ ಏನು ?

'ಅಪ್ಪಾ ಪಿಟೀಲನ್ನು ಕಂಡುಹಿಡಿದವರು ಯಾರು ?' ಕಲಾವಿದ ಒಂದು ಕ್ಷಣ ನಿಲ್ಲಿಸಿದಾಗ ಕಿರಿ ಗೆಬೋರ್ ಕೇಳಿದ.

'ಪಿಟೀಲನ್ನು ಕಂಡು ಹಿಡಿದದ್ದಾ ?....ನಾನೇ !' ಹಿರಿ ಗೆಬೋರ್ ಹೇಳಿದ. ಕೆಲ ಕಾಲದವರೆಗೆ ಇಬ್ಬರೂ ಅದನ್ನ ನಂಬಿದರು.

ಹಚ್ಚ ಹಸಿರು ಬಣ್ಣದ ಲಕಟೊಸ್ ಕಿಡಿಗಳು ಮೆಲುವಾಗಿ ಚಟಪಟಗುಟ್ಟಿದವು.

'ಅಪ್ಪ ನೀನೂ ಹೊಟ್ಟೆ ಕೆಳಗೆ ಮಾಡಿ, ನೆಲದ ಮೇಲೆ ಮಲಗು.' ಕಿರಿಗೆಬೋರ್ ಹೇಳಿದ– "ಸ್ವಲ್ಪ ಹೊತ್ತಿಗೆ ಮೊದಲು ನೀನು ಆಚೆ ಹೋದಾಗ ಏನಾಯ್ತುಂತ ಹೇಳ್ಲಾ ? ಒಂದು ಕೋಗಿಲೆ ತನ್ನ ಕೊಕ್ಕಿಂದ ಕಿಟಕಿಯ ಮೇಲೆ ಬಡಿಯಿತು. ನಾನು –"ಬಾ ಕೋಗಿಲೆ, ನಾವು ಬಡ ಜಿಪ್ಸಿಗಳು ಆದರೂ ಅತಿಥಿಗಳನ್ನು ಚೆನ್ನಾಗಿ ನೋಡ್ಕೊಳ್ತೀವೆ." ಅಂದೆ'.... ಎಂದು ಹೇಳುತ್ತಾ ಅವನು ನಿದ್ದೆ ಮಾಡಿಬಿಟ್ಟ.

ಹಿರಿ ಗೆಬೋರ್ ತನ್ನ ಮಗನ ಮೃದುವಾದ ಕೂದಲು ತನ್ನ ಗಲ್ಲಕ್ಕೆ ತಾಕುವಂತೆ ಅವನ ಪಕ್ಕದಲ್ಲೇ ಮಲಗಿದ. ತನ್ನ ತಣ್ಣನೆಯ ದೊಡ್ಡ ಪಾದಗಳನ್ನು ಮಗನ ಬೆಚ್ಚನೆಯ ಪಾದಗಳ ಮೇಲಿರಿಸಿದ.

ಇದೆಲ್ಲಾ ಬಹಳ ಹಿಂದೆ ನಡೆದದ್ದು. ಬಹಳ ಬಹಳ ಹಿಂದೆ.... ಅನಾನಸ್ ಅಂಟಿನ ವಾಸನೆ ಈಗ ಬರುತ್ತಿಲ್ಲ. ಓ ಚಾಕುಬೋವಿಸ್ ಚಾಕುಬೋವಿಸ್ !

ಈಗ ಹಿರಿಗೆಬೋರ್ ಉಕ್ಕಿನ ಗಿರಣಿಯೊಂದರ ಕಟ್ಟಡ ಕಟ್ಟುವ ಕೆಲಸದಲ್ಲಿದ್ದಾನೆ. ಕೇಂದ್ರೀಕೃತ ಶಾಖೋತ್ಪನ್ನ ಪರಿಕರ ಅಳವಡಿಸಿದ ಬಿಳಿ ಬಣ್ಣದ ಮನೆಯೊಂದರಲ್ಲಿದ್ದಾನೆ. ದಿನವೂ ಮಸಿಯನ್ನು ಉಸಿರಾಡುತ್ತಾನೆ. ಫೋರ್‌ಮನ್ ಜೋಸೆಫ್ ಟೆರಬಾನ ಕೆಲಸದ ಗುಂಪಿನಲ್ಲಿದ್ದಾನೆ. ಕಾರ್ಮಿಕ ಸಂಘದ ಸದಸ್ಯತ್ವವೂ ಇದೆ.

ಒತ್ತಡವಿದ್ದಾಗ್ಯೂ ಚೆನ್ನಾಗಿ ಕೆಲಸ ಮಾಡುತ್ತಾನೆ. ಅವನ ಛಾಯಾಚಿತ್ರವನ್ನು ಓಸ್ಟ್ರಾವಾದ ಅತೀ ದೊಡ್ಡ ಡಿಪಾರ್ಟ್‌ಮೆಂಟಲ್ ಸ್ಟೋರಿನ ಗಾಜಿನ ಕಿಟಕಿಯಲ್ಲಿ ಈಗಾಗಲೇ ಎರಡು ಬಾರಿ ಅಂಟಿಸಿಯಾಗಿದೆ. ಒಂದು ದಿನ ಅದನ್ನು ನೋಡಲು ಗುಟ್ಟಾಗಿ ಕಿರಿ ಗಿಬೋರ್ ಹೋಗಿ ಬಂದದ್ದೂ ಉಂಟು. ಮನೆಗೆ ಬಂದ ನಂತರ ಅವ ಹೇಳಿದ್ದ– "ಅಪ್ಪ ಅಲ್ಲೊಬ್ಬ ಹೆಂಗಸು ಹೇಳಿದ್ದು ನಂಗೆ ಕೇಳಿಸ್ತು 'ಆ ಚಿತ್ರದಲ್ಲಿರೋದು ಚೆಂದದ ಸ್ಫುರದ್ರೂಪಿ ಜಿಪ್ಸಿ ಅಲ್ವೇ ಪೆಪಿಕ್ ?'

'ಇನ್ನೂ ಏನೇನು ಕೇಳಿಸ್ತೋ ?' ಹಿರಿ ಗೆಬೋರ್ ಕೇಳಿದ.

'ರೆನ್ ಪಕ್ಷಿ ಹಾಡಿದ್ದು ಕೇಳಿಸ್ತು'

'ರೆನ್ ?' ಹಿರಿ ಗೆಬೋರ್ ಆಶ್ಚರ್ಯದಿಂದ ಕೇಳಿದ – ಓಸ್ಟ್ರಾವಾದಲ್ಲಿ ರೆನ್ ? ಯಾರ ಹತ್ರ ತಮಾಷೆ ಮಾಡ್ತಾ ಇದ್ದಿಯೋ ಮಂಗ ? ನಿನ್ನ ಅಪ್ಪಂಗೇ ಮೋಸ ಮಾಡ್ತೀಯ ?

ಇಷ್ಟೆಲ್ಲಾ ಆದರೂ, ಇಬ್ಬರು ಗೆಬೋರ್‌ಗಳೂ ಒಳ್ಳೇ ಹೊಂದಾಣಿಕೆಯಿಂದಲೇ ಜೀವನ ಮಾಡುತ್ತಿದ್ದರು. ತಮ್ಮ ಕೈಗೆಟುಕಿದ ಎಲ್ಲ ವ್ಯವಹಾರಗಳಲ್ಲೂ ತಮ್ಮನ್ನವರು ತೊಡಗಿಸಿಕೊಳ್ಳುತ್ತಿದ್ದರು. ಕೈಗೆಟುಕದ ಯಾವುದೇ ವಿಷಯವಿದ್ದಲ್ಲಿ ಅದರ ಬಗ್ಗೆ ಮಾತನಾಡುವುದರಲ್ಲಿ ತೃಪ್ತಿ ಹೊಂದುತ್ತಿದ್ದರು. ಒಬ್ಬ ಗೆಬೋರ್ ಇನ್ನೊಬ್ಬನನ್ನು ಸಮಾಧಾನ ಪಡಿಸುತ್ತಿದ್ದ. ಅದು ಹಾಗಿರಬೇಕಾದ್ದು ಸಹಜ. ಈಚೆಗೆ ಊಟದ ನಂತರ ಹಿರಿಗೆಬೋರ್ ತೇಗುತ್ತಿರಲಿಲ್ಲ. ಕಿರಿ ಗೆಬೋರ್ ಮೂಗು ಸೀದುವಾಗ ಕೈವಸ್ತ್ರ ಉಪಯೋಗಿಸುತ್ತಿದ್ದ.

ಕಿಟಕಿಯಿಂದ ಓಸ್ಟ್ರಾವಾದ ಕೆಂಪನೆ ಉರಿ ಕಾಣುತ್ತಿತ್ತು. ಸ್ವಲ್ಪ ಮಟ್ಟಿಗದು ನರಕದ ಹಾಗೆ ಕಂಡರೂ, ಕೆಲವೊಮ್ಮೆ ಇದ್ದಕ್ಕಿದ್ದ ಹಾಗೆ ಹಬ್ಬದ ವಾತಾವರಣವನ್ನೂ ಉಂಟು ಮಾಡುತ್ತಿತ್ತು. ಹಬ್ಬದ ಸಾಲಿನಲ್ಲಿ ಕಂಡುಬರುವ ಅಡುಗೆ ಒಲೆಗಳ ಹಾಗೆ ! ಕಾಡಿನ ಎಲ್ಲ ಪ್ರಾಣಿಗಳ ಹಾಗೆ ಈಚೀಚೆಗೆ ನಗರದ ನಿರರ್ಥಕತೆ ಭಾಸವಾಗತೊಡಗಿತ್ತು. ತಾನು ಆ ನಗರ ಸಾಗರದಲ್ಲಿ ಒಂದು ಬಿಂದು ಮಾತ್ರವೆಂಬ ಭಾವನೆಯೂ ಉಂಟಾಗುತ್ತಿತ್ತು. ಮುಂಜಾನೆ ಕೂಗುತ್ತಿದ್ದ ಕೋಳಿಯ ಕೂಗೂ ಸಹ ಅವನಿಗೆ ಈಚೀಚೆಗೆ ಕೇಳಿಬರುತ್ತಿರಲಿಲ್ಲ. ಕೆಲ ದಿನಗಳ ಕಾಲ ಅವನೇ ಮುಂಜಾನೆದ್ದು ಕೋಳಿಯ ಹಾಗೆ ಕೂಗುತ್ತಿದ್ದ. ಆ ನಂತರ ಅವನೊಂದು ಅಲಾರಂ

ಗಡಿಯಾರ ಕೊಂಡರು. ಅದಕ್ಕೆ ಕಾರಣೀಭೂತಳಾದವಳು ಜಿಪ್ಸಿ ಶಾಲೆಯ ಸ್ಥಾಪಕಿಯಾದ ಸ್ಲಾವ್ಕಾ ಮಾರಿನ್ಕೋವಾ.

ಸ್ಲಾವ್ಕಾ ಮಾರಿನ್ಕೋವಾ ತನ್ನ ಕಾಲೇಜು ಅಧ್ಯಯನ ಮುಗಿಸುವುದಕ್ಕೆ ಮೊದಲೇ ಕಾಲೇಜು ಬಿಟ್ಟಿದ್ದ ಹುಡುಗಿ. ಅವಳ ತಂದೆ ಪ್ರೇಗ್‌ನ ಖ್ಯಾತ ಸಂಸಾರವೊಂದರಲ್ಲಿ ಹುಟ್ಟಿ ವಕೀಲನಾಗಿದ್ದ. ಸ್ಲಾವ್ಕಾಗೆ ಪಿಂಗಾಣಿಯೆಂದರಾಗುತ್ತಿರಲಿಲ್ಲ. ಆದ್ದರಿಂದಲೇ ಅವಳು ಪ್ಯೂಟರ್‌ನಿಂದ ಮಾಡಿದ ಬೂದು ಬಣ್ಣದ ಲೋಟವೊಂದನ್ನಿಟ್ಟುಕೊಂಡು ಅದರಲ್ಲೇ ಮುಂಜಾನೆ ಕಾಫಿ, ಸಂಜೆ ಚಹಾ ಕುಡಿಯುತ್ತಿದ್ದಳು. ಅವಳು ಕಡೆಗೆ ಬಲ್ಗೇರಿಯನ್ ವಿದ್ಯಾರ್ಥಿಯೊಬ್ಬನನ್ನು ಪ್ರೀತಿಸತೊಡಗಿದಳು. ಆದರೊಂದು ದಿನ ಮುಂಜಾನೆ ಆ ಬಲ್ಗೇರಿಯನ್ ವಿದ್ಯಾರ್ಥಿ ಅವರ ಮನೆಯ ಬಚ್ಚಲು ಮನೆಯನ್ನಾಕ್ರಮಿಸಿದ್ದೇ ಅಲ್ಲದೇ ಖುದ್ದು ವಕೀಲನ ಟೂತ್‌ಬ್ರಷ್‌ನಲ್ಲೇ ಹಲ್ಲುಜ್ಜಿದ ಕಾರಣ ಅವನನ್ನು ಮನೆಯಿಂದ ಡಾ. ಮಾರಿನೆಕ್ ಒದ್ದೋಡಿಸಿದರು.

ಆ ಘಟನೆಯ ನಂತರ ಸ್ಲಾವ್ಕಾ ಮಾರಿನ್ಕೋವಾ ತನ್ನ ಬೂರ್ಜ್ವಾ ಹಿನ್ನೆಲೆಯನ್ನು, ಶಿಕ್ಷಕರ ಶಾಲೆಯನ್ನು, ಪ್ರೇಗ್ ನಗರವನ್ನು ಎಲ್ಲವನ್ನೂ ಶಪಿಸುತ್ತಾ ನೀಲಿ ಅಂಗಿ ಧರಿಸಿ ಒಪ್ಪವಾದ ಚೆಕೊಸ್ಲವಾಕ್ ಯುವಕ ಸಂಘಕ್ಕೆ, ಸಂಪೂರ್ಣವಾಗಿ ಭಿನ್ನ ಜೀವನವನ್ನು ಜೀವಿಸಲೆಂದು ಹೊರಟುಹೋದಳು.

ಪ್ರಸ್ತುತ ಅವಳು ಸಂಪೂರ್ಣ ಭಿನ್ನ ಬದುಕು ಬದುಕುತ್ತಿದ್ದಳು. ಚಾಗಲ್ ಪುನರ್ರಚಿಸಿದ ಹೆಮಿಂಗ್‌ವೇನ ಮುದ್ರಿತ ಚಿತ್ರ ಹೊತ್ತ ಕೋಣೆಯಲ್ಲಿ ಅವಳ ಹೊಸ ಬದುಕು ಪ್ರಾರಂಭಿಸಿದಳು. ಮಲಗುವುದಕ್ಕೆ ಮೊದಲು ಎಷ್ಟೋ ಬಾರಿ ಅವಳು ತನ್ನಲ್ಲೇ ಹೇಳಿಕೊಂಡದ್ದುಂಟು- ಅವಶ್ಯವೆನಿಸಿದರೆ ಬೇರೊಬ್ಬರಿಗೆ ಅಡುಗೆ ಮಾಡಿ ಹಾಕುವ ಅಡುಗೆಯವಳ ಕಾಯಕ ಮಾಡಲೂ ತಾನು ಹೇಸುವುದಿಲ್ಲ. ಅಷ್ಟೇಕೆ. ತನ್ನ ಸೂಟ್‌ಕೇಸ್‌ನಲ್ಲಿ ಹೊಸ ಏಪ್ರನ್ ಸಹ ಇದೆ.... ಆದರೆ ಈ ರೀತಿಯ ಭಾವ ತೀವ್ರತೆಯ ನಂತರ, ಈ ರೀತಿಯ ಪುರಾತನ ಯೋಚನೆಗಳನ್ನು ಬೇಗನೇ ಮನದಿಂದ ತೆಗೆದೂ ಹಾಕುತ್ತಿದ್ದಳು. ಕಡೆಗೆ ಅವಳ ಜಿಪ್ಸಿಗಳಿಗಾಗಿಯೇ ಒಂದು ಪ್ರತ್ಯೇಕ ಶಾಲೆಯನ್ನು ಸ್ಥಾಪಿಸಲು ನಿರ್ಧರಿಸಿದಳು.

ಶಾಲೆ ಸ್ಥಾಪಿಸಲು ಅನುಮತಿ ನೀಡುವ, ಸಹಾಯ ಮಾಡುವ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರ ವರ್ಗದವರು ವಿಶಾಲ ಮನೋಭಾವದವರಾಗಿದ್ದರು.

ಅವಳು ಮೊದಲಿಗೆ ಭೇಟಿಯಾದ ಕಾರ್ಖಾನೆಯ ನಿರ್ದೇಶಕ ಹೋಲಬ್‌ಗೆ ತನ್ನ ನಿತ್ಯದ ಕೆಲಸಗಳಿಂದ ಹೊರತಾದ ಈ ಆಲೋಚನೆ ಮುದ ನೀಡಿತು. ಚಂದದ ಹುಡುಗಿಯರನ್ನ ನೋಡುವುದು ಅವನಿಗೆ ಇಷ್ಟದ ಸಂಗತಿ. ಆಗಾಗ ಅವರ ಕೋರಿಕೆ ತೀರಿಸುವುದರಲ್ಲಿ ಅಪಾಯವೇನೂ ಇಲ್ಲವಲ್ಲ. ಅವಳು ಆತನನ್ನು ಭೇಟಿ ಮಾಡಿದಾಗ ಅವಳೆದುರಿನಲ್ಲೇ ಆತ ಕೆಲ ಫೋನ್ ಕರೆಗಳಿಗೂ ಕೆಲ ಟ್ರಂಕಾಲ್‌ಗಳಿಗೂ ಉತ್ತರ ನೀಡಿದ, ಬದಿ ಬದಿಯಲ್ಲಿ ಕಾರ್ಖಾನೆಯ ಉತ್ಪಾದನಾ ಹಾಗೂ ಕಟ್ಟಡ ವಿಭಾಗಗಳಿಗೆ ಲೌಡ್ ಸ್ಪೀಕರಿನ ಮೂಲಕ ನಿರ್ದೇಶನ ಕೊಟ್ಟ. ಮಧ್ಯೆ ಮಧ್ಯೆ ಸ್ಲಾವ್ಕಾಗಳನ್ನು ನೋಡುತ್ತಿದ್ದ. ಅವಳಾದರೋ– ವಿಶೇಷ ಉತ್ಸಾಹ ತುಂಬಿಕೊಂಡು ಜಿಪ್ಸಿ ಶಾಲೆ ತೆರೆಯಬೇಕಾದ ತುರ್ತು ಆವಶ್ಯಕತೆಯ ಬಗ್ಗೆ ಮಾತನಾಡುತ್ತಿದ್ದಳು. ಬೇಟೆಗಾರ ಬೇಟೆ ಮುಗಿಸಿ ಬಂದೂಕನ್ನು ಹೆಗಲಿಗೇರಿಸಬೇಕೆಂದಿರುವಾಗ ತನ್ನ ಹೆಗಲ ಮೇಲೆ ಬಂದು ಕುಳಿತ ಹೆಣ್ಣು ಹಕ್ಕಿಯನ್ನು ನೋಡುವಂತೆ ಹೋಲಬ್ ಯೋಚನಾಗ್ರಸ್ತನಾಗಿ ಅವಳೆಡೆಗೆ ಕರುಣಾಪೂರಿತ ದೃಷ್ಟಿ ಬೀರಿದ.

'ಸರಿ.... ಮುಂದೆ ?' ನಿರ್ದೇಶಕ ಹೋಲಬ್ ಮಾತನಾಡಿದ.

'ಮುಂದೆ ಅಂದ್ರೆ.... ಇನ್ನೇನು ?' ಕಾಮ್ರೇಡ್ ಮಾರಿನ್ಕೋವಾ ಉತ್ತರಿಸಿದಳು. ಅಷ್ಟರಲ್ಲಿ ಅವನಿಗೆ ಬ್ರನೋದಿಂದ ಫೋನ್ ಕರೆ ಬಂತು– ಹೋಲಬ್ ರಿಸೀವರ್ ಕೈಗೆತ್ತಿಕೊಂಡ– 'ನೀವು ನಮಗೆ ಕೊಡೋಲ್ಲಾಂತಿದ್ದೀರಾ ?.... ಹಾಗಾದ್ರೆ ಅದನ್ನ ನಮಗೆ ಕೊಡೊಕ್ಕಾಗಲ್ಲ ?.... ಸರಿ.... ನಿಮ್ಮಿಷ್ಟ.'

'ಕಾಮ್ರೇಡ್ ಶೈಮೆಕ್ ನಂಗೆ ಗೊತ್ತಿರೋ ಮಟ್ಟಿಗೆ– ಕ್ಷಮಿಸಿ–ನಂಗೆ ಗೊತ್ತಿರೋ ಮಟ್ಟಿಗೆ ನೀವು ಕೆಲಸಗಾರರ ವರ್ಗಕ್ಕೆ ಸೇರಿದೋರು. ಆ ಮಾಲೀಕರ ಹಾಗೆ ಆಗಿದ್ದೀರಿ. ನಿಮಗೆ ತಲೆ ಕೆಟ್ಟಿದೆ. ನಿಮ್ಮನ್ನ ಕಾಮ್ರೇಡ್ ಅಂತ ಕರೆಯೋಕ್ಕೂ ನಂಗೆ ನಾಚಿಕೆ ಆಗುತ್ತೆ. ನಾನು ಈ ವಿಷಯದ ವರದಿ ಪ್ರೇಗ್‌ಗೆ ಕಳಿಸ್ತೀನೆ....'

'ನಾನು ಪುನಃ ಏನು ಹೇಳಬೇಕು ? ನಿಮಗೆ ತಲೆ ಕೆಟ್ಟಿದೇಂತಾ ? ನಾನು ಹಾಗಂತ ಹೇಳಿದ್ನಾ ? ಇಲ್ಲಿ ನನ್ನೆದುರಿಗೇ ಒಂದು ಸಾಕ್ಷಿ ಇದೆ.. ನಾನೇನೂ ಹಾಗೆ ಹೇಳಿಲ್ಲ....

'ಸರಿ ಹಾಗಾದ್ರೆ ಕಳಿಸಿ. ಕಳಿಸ್ತೀರಾತಾನೆ ? ಒಳ್ಳೇದು. ಸರಿ.... ನಾನಿನ್ನು ಬರಲಾ ಕಾರಲ್ !'

ಆನಂತರ ಸ್ಲಾವ್ಕಾ ಮಾರಿನ್ಕೋವಾ, ಹೊಲಬ್ ತನ್ನ ಗ್ಲಾಸಿನಿಂದ ಕೊಟ್ಟ ಬೆಚ್ಚನೆಯ ಬೀರ್ ಕುಡಿಯಬೇಕಾಯ್ತು. ಅವಳು ಮಾತು ಮುಂದುವರಿಸಬೇಕೋ ಅಥವಾ ಅಲ್ಲಿಗೇ ನಿಲ್ಲಿಸಬೇಕೋ ಎಂಬುದನ್ನೂ ನಿರ್ಧರಿಸಬೇಕಾಗಿತ್ತು.

'ಎಲ್ಲದಕ್ಕೂ ಸಮಯ ಕೂಡಿಬರಬೇಕು' ನಿರ್ದೇಶಕ ಹೋಲಬ್ ಹೇಳಿದರು- 'ಮತ್ತೆ ಎಲ್ಲಕ್ಕೂ ಅದರದರ ಸ್ಥಾನವಿದೆ. ಈಗ ಈ ಸರಪಣಿಯ ಮುಖ್ಯ ಕೊಂಡಿ ಇನ್ನೂ ತಯಾರಾಗುತ್ತಾ ಇದೆ. ಇನ್ನೂ ಸ್ವಲ್ಪ ಬೀರ್ ಬೇಕಾ ?'

ಸ್ಲಾವ್ಕಾ ಮತ್ತೊಂದು ಬೀರ್ ತೆಗೆದುಕೊಂಡಳು. ನಂತರ ನಿಧಾನವಾಗಿ ಹೇಳಿದಳು. 'ಮನುಷ್ಯನನ್ನ ಮತ್ತೆ ಅಚ್ಚಿನೊಳಕ್ಕೆ ಹಾಕಿ, ಉಕ್ಕಿನ ಪ್ರತಿಮೆಯಾಗಿ ಪುನರ್ನಿರ್ಮಿಸಬೇಕಾಗಿದೆ'

ನಿರ್ದೇಶಕ ಹೋಲಬ್ ನಕ್ಕು ಬಿಟ್ಟ- 'ಹುಡುಗೀ ನನ್ಹತ್ರ ಸುತ್ತೀ ಬಳಸೀ ಮಾತಾಡೋದ್ರಿಂದ ಪ್ರಯೋಜನ ಇಲ್ಲ. ನಿನ್ನ ನಾಲಿಗೆಯಿಂದ ಹರಿದು ಬಂದಂತೆಯೇ ನೇರವಾಗಿ ಏನು ಹೇಳಬೇಕೋ ಅದನ್ನ ಹೇಳ್ಬಿಡು. ಅಚ್ಚಿನಲ್ಲಿ ಹಾಕಿ ಪುನರ್ನಿರ್ಮಾಣ ಮಾಡೋ ವಿಷಯ ಹೇಳ್ತಿದ್ದೆ.. ನಿಜ ಅದಕ್ಕೆ ಯಾರು ಆಕ್ಷೇಪಣೆ ವ್ಯಕ್ತಪಡಿಸ್ತಾರೆ ? ಮಾಡು.. ನಿನಗೆ ಹೇಗೆ ಬೇಕೋ ಹಾಗೆ, ಎಷ್ಟು ಬೇಕೋ ಅಷ್ಟು ಪುನರ್ನಿರ್ಮಾಣ ಮಾಡು. ಆದರೆ ನಂಗೆ ಸರ್ಕಾರಿ ಕೆಲಸ ಇದೆ. ತುಂಬಾ ದೊಡ್ಡ ಕೆಲಸ. ನಾನು ಆ ಕೆಲಸ ಮಾಡ್ತಾ ಇದ್ರೆ ಇಲ್ಯಾರೋ ಬಂದು ಪುನರ್ನಿರ್ಮಾಣ ಅಂತ ನನ್ನ ತಲೆ ತಿಂತಾ ಇದಾರೆ ! ಆದರೂ ಪರವಾಗಿಲ್ಲ. ಹುಡುಗೀಗೆ ಒಳ್ಳೇ ಕಣ್ಣುಗಳಿದ್ರೆ ನಾನು ಇದನ್ನೆಲ್ಲಾ ತಡಕೊಳ್ತೀನಿ. ಏನು ? ಅಳ್ತಾ ಇದ್ದೀಯ ? ಏನಾಯ್ತು ? ಏನು ವಿಷಯ ? ನೋಡು.. ಸುಮ್ನೆ ಅಳಬೇಡ. ನಿಂಗೇನು ಬೇಕು ? ಜಿಪ್ಸಿ ಶಾಲೆ ತಾನೇ ? ಅದು ಒಳ್ಳೇ ಸಲಹೆ. ನಿನ್ನ ಕರ್ತೃತ್ವ ಶಕ್ತಿಯ ದ್ಯೋತಕ. ನಮ್ಮ ಕೆಲಸಗಾರರಿಂದ ಈ ಥರದ ಪ್ರಸ್ತಾವನೆ ಬಂದಾಗ ನಾವು ಎಳ್ಳಷ್ಟೂ ಹಿಂದೆಗೆಯಬಾರದು.'

ಸ್ಲಾವ್ಕಾ ಅಳು ನಿಲ್ಲಿಸಿದಳು. ಅವಳಿಗೆ ನಿರಾಳವಾದ ಹಾಗಾಯ್ತು. ಆದರೂ ಸಮಾಧಾನವಾಗಲಿಲ್ಲ. ನಿರ್ದೇಶಕ ಹೋಲಬ್ ಅವಳನ್ನು ಅಲ್ಲಿಂದ ತಕ್ಷಣ ಕಳುಹಿಸುವುದು ಸಾಧ್ಯವಿಲ್ಲವೆನಿಸಿತು. ಇಂಟರ್ನಲ್ ಟೆಲಿಫೋನ್‌ನ ಗುಂಡಿ ಒತ್ತಿ ಎರಡು ನಂಬರ್ ತಿರುಗಿಸಿದ. 'ಹಲೋ ಕಾಡರ್ ತರಬೇತಿ ವಿಭಾಗಾನಾ ?' ಒಮ್ಮೆ ಅರಚಿ ಮುಂದುವರಿಸಿದ– 'ಮಾಲಿನಾ ನಾನು ನಿಂಗೆ ಆ ಜಿಪ್ಸಿ ಶಾಲೆಯ ಬಗ್ಗೆ ಎಷ್ಟು ಸರ್ತಿ

ಕೇಳಿಲ್ಲ ? ಪ್ರೇಗ್‌ನವರು ನನ್ನ ಪ್ರಾಣ ತಿಂತಾ ಇದಾರೆ.... ಯಾಕೆ ? ನಾನು ನಿಂಗೆ ಇಷ್ಟೆಲ್ಲಾ ಸಹಾಯ ಮಾಡಿದ್ದು ಇದಕ್ಕೇನಾ ? ಇಲ್ಲ.... ಇನ್ನು ನಿನ್ನ ನಾನು ಉಳಿಸೊಕ್ಕೆ ಸಾಧ್ಯ ಇಲ್ಲ. ನಂಗೇ ಯಾರೂ ಸಹಾಯ ಮಾಡೊಲ್ಲ !.... ಸರಿ ಮಿಕ್ಕ ಕೆಲಸ ಎಲ್ಲಾ ಬದಿಗಿಟ್ಟು ನಮ್ಮ ಜಿಪ್ಸಿ ಸಹೋದರರಿಗೆ ಶಾಲೆ ಏರ್ಪಾಟು ಮಾಡೋ ಕೆಲಸ ನೋಡು.... ಏನು ?.... ಏನು ಇಲ್ಲ ?.... ಶಿಕ್ಷಕರೇ!? ಸರಿ ಏರ್ಪಾಟು ಮಾಡ್ತೀನೆ, ಕಡೆಗೆ ಆ ಜಿಪ್ಸಿ ಶಾಲೆಗೆ ಮೇಷ್ಟ್ರುಗಳನ್ನೂ ನಾನೇ ಹುಡುಕಬೇಕು.... ನೀನು ಬಹಳ ಕಿರಿ ಕಿರಿ ಮಾಡ್ತಿದ್ದೀ ಮಾಲಿನಾ.... ಸರಿ ಸರಿ.. ಬರಲೇ....'

ಆ ಸಮಯಕ್ಕಾಗಲೇ ಸ್ಲಾವ್ಕಾ ಮಾರಿನ್ಕೋವಾ ಶಿಕ್ಷಣ ತಜ್ಞರೊಬ್ಬರ ಬಳಿ ಮಾತನಾಡಿದ್ದಳು. ಅವರ ಹೆಸರನ್ನು ನಾವು ರಹಸ್ಯವಾಗಿಡೋಣ. ಈ ಶಿಕ್ಷಣ ತಜ್ಞರು ಶಾಲೆಗಾಗಿ ಇತರ ಶಿಕ್ಷಕರನ್ನು ನಿಯಮಿಸಬೇಕಿತ್ತು. ಆದರೆ ಅದಕ್ಕೆ ಬದಲಾಗಿ ಆತ ಸ್ಲಾವ್ಕಾಳೆದುರಿಗೆ ಒಂದು ಪ್ರೌಢ ಗಂಭೀರ ಭಾಷಣವನ್ನೇ ಬಿಗಿದ. 'ಮನುಷ್ಯನಲ್ಲಿನ ಅತ್ಯಮೂಲ್ಯ ವಸ್ತುವೆಂದರೆ ಚೈತನ್ಯ' ಸಿಗರೇಟಿನ ಹೊಗೆಯ ತೆರೆಯಮರೆಯಿಂದ ಶಿಕ್ಷಣತಜ್ಞರ ಮಾತು ಕೇಳಿಸುತ್ತಿತ್ತು– 'ನಾವುಗಳು ಆಹಾರ, ವಿದ್ಯುತ್, ನೀರು ಇದ್ದಿಲುಗಳನ್ನು ಹಾಳು ಮಾಡದೇ ಇರೋದಕ್ಕೆ ಪ್ರಯತ್ನಿಸುತ್ತೇವೆ. ಆದರೆ ಮಾನವ ಚೈತನ್ಯವನ್ನ ಉಳಿಸೋದು ಹೇಗೆ ಅನ್ನೋದನ್ನ ಮಾತ್ರ ಕಲಿತಿಲ್ಲ. ಈಗ ನಿನ್ನನ್ನೇ ಒಂದು ಉದಾಹರಣೆಯಾಗಿ ತೆಗೋಬಹುದು. ನೀನು ಎಂತಹ ಒಳ್ಳೆಯ, ಉತ್ಸಾಹ ತುಂಬಿದ ಕ್ರಿಯಾಶೀಲ ವ್ಯಕ್ತಿ.. ಇಂಥ ನೀನು, ನಿನ್ನಲ್ಲಿನ ಅತ್ಯಮೂಲ್ಯ ವಸ್ತುವನ್ನು ಹಾಳು ಮಾಡೋದಕ್ಕೆ ಹೊರಟಿದ್ದೀಯ.. ಏನು ಗೊತ್ತಾ ? ನಿನ್ನ ಚೈತನ್ಯ– ಅದೂ ಯಾಕೆ ? ಫಲಕೊಡದ, ಕೆಲಸಕ್ಕೆ ಬಾರದ ಪ್ರಯೋಗಕ್ಕೋಸ್ಕರ - ನಾನು ಇದ್ದದ್ದು ಇದ್ದ ಹಾಗೆ ಹೇಳಿದರೆ ನಿಂಗೆ ಕಟುವಾಗಿ ತೋರಬಹುದು. ಆದರೂ ಚಿಂತಿಲ್ಲ. ಒಬ್ಬ ಶಿಕ್ಷಣ ತಜ್ಞನಾಗಿ ನನಗೆ ಗೊತ್ತು. ಜಿಪ್ಸಿಗಳು ಸೋಮಾರಿತನದ ಅಂಶಗಳು. ಅವರನ್ನು ಶಾಲಾ ಮೇಜುಗಳಿಗೆ ಸರಪಣಿ ಹಾಕಿಯೂ ಬಂಧಿಸೋಕ್ಕೆ ಆಗಲ್ಲ.'

'ಸರಪಣಿಗಳಿಂದಲ್ಲ'

'ಹಾಗಾದರೆ ಮತ್ತೇತರಿಂದ ? ಕರುಣೆಯ ಮಾತಿನಿಂದ್ಲೇ ? ನೋಡು, ನೇರವಾಗಿ ನನ್ನನ್ನ ನೋಡಿ ಹೇಳು– ಏನು ಮಾಡ್ಬೇಕೊಂತ ಇದೀಯ ?'

‘ಜಿಪ್ಸಿಗಳನ್ನ ವಿದ್ಯಾವಂತರನ್ನಾಗಿ ಮಾಡಬೇಕೂನ್ನೋದೇ ನನ್ನ ಉದ್ದೇಶ.’

‘ನಾನು ನನ್ನ ಅಭಿಪ್ರಾಯ ನೇರವಾಗಿ ಹೇಳ್ತೇನೆ. ನೀನು ಜಿಪ್ಸಿಗಳಿಗೆ ಶಿಕ್ಷಣ ಕೊಡೋದು ಮಾತ್ರ ನಿನ್ನ ಉದ್ದೇಶಾಂತ ಹೇಳಿಕೊಂಡ್ರೆ ನಾನು ನಂಬೋದಿಲ್ಲ. ಅದು ಬಹಳ ಸರಳ ಆಗಿ ಹೋಗುತ್ತೆ. ಬಹಳ ಉದಾತ್ತವಾದ ಉದ್ದೇಶವೂ ಆಗುತ್ತೆ. ಮೇಲಾಗಿ ನೀನಂತೂ ಶಿಕ್ಷಕಿಯ ಹಾಗೆ ಕಾಣೋದೇ ಇಲ್ಲ.

‘ಮತ್ತೆ ಹೇಗೆ ಕಾಣಿಸ್ತೀನಿ’ ಸ್ಲಾವ್ಕಾ ಕೇಳಿದಳು.’

‘ರೂಪದರ್ಶಿ ಆಗಬಾರದೇಕೆ ?’ ಶಿಕ್ಷಣ ತಜ್ಞ ಉಪದೇಶವಿತ್ತ.

ಒಂದು ಮುಂಜಾನೆ ಸ್ಲಾವ್ಕಾ ಮಾರಿನ್ಕೋವಾ ಅಲ್ಲಿನ ಕಪ್ಪು ಜನರನ್ನೆಲ್ಲಾ ಶಾಲೆಯ ಕಟ್ಟಡ ಕಟ್ಟಬೇಕಿದ್ದ ಖಾಲಿ ಜಾಗದಲ್ಲಿ ಸೇರಿಸಿದಳು. ಅಲ್ಲೇ ಇದ್ದ ಕೆಲ ಬಲ್ಗೇರಿಯನ್‌ಗಳನ್ನೂ ಪ್ರೇಗ್‌ನ ಇಂಜಿನಿಯರ್ ಆದ ಡಮಾರ್ಟಿನಿ ಎಂಬುವನನ್ನೂ ಕರೆಸಿದಳು. ತನ್ನ ತಪ್ಪಿಗಾಗಿ ಅವರಲ್ಲಿ ನಂತರ ಕ್ಷಮೆಯಾಚಿಸಿದರೂ ಇದು ಶಾಲೆ ನಡೆಸುವುದಕ್ಕೆ ಪೂರ್ವಯೋಜನೆಯಾಗಿತ್ತು. ಇಷ್ಟಾದರೂ ಅವಳು ಜಿಪ್ಸಿಗಳೊಂದಿಗೆ ಮಾತ್ರ ಸ್ವಲ್ಪ ಒರಟಾಗಿಯೇ ವರ್ತಿಸುತ್ತಿದ್ದಳು. ಯಾರಿಗೂ ತಿಳಿಯದಂತಹ- ‘ತಗ್ಗು ಪ್ರದೇಶಕ್ಕೆ ಮೈದಾನ ಪ್ರದೇಶಕ್ಕೆ ಇರುವ ವ್ಯತ್ಯಾಸ ಏನು?’ ಎಂಬಂತಹ ಕಿರಿ ಕಿರಿಯ ಪ್ರಶ್ನೆಗಳನ್ನು ಕೇಳುತ್ತಿದ್ದಳು.

‘ಚಾವಟಿ ಅನ್ನೋ ಪದ ಸರೀನೋ ಅಥವಾ ಅದನ್ನು ಚಾಟಿ ಅನ್ನಬೇಕೋ?’ ಸ್ಲಾವ್ಕಾ ತನ್ನ ಪುಸ್ತಕ ತೆರೆಯುತ್ತಾ ಕೇಳಿದಳು.

‘ಚಾಟಿ ?’ ಜಿಪ್ಸಿಗಳು ಆಲೋಚಿಸಿದರು–“ಈಗ್ಯಾಕೆ ಚಾಟಿಯ ಬಗ್ಗೆ ಪ್ರಶ್ನೆ ?’

ನಂತರ ಸ್ಲಾವ್ಕಾ ಮಾರಿನ್ಕೋವಾ ಅವರುಗಳ ಹೆಸರುಗಳನ್ನೆಲ್ಲಾ ತನ್ನ ಪುಸ್ತಕದಲ್ಲಿ ಬರೆದುಕೊಳ್ಳುತ್ತಾ ‘ಶಾಲೆ ಮಾರ್ಚ್ ಒಂದನೇ ತಾರೀಖು ಮುಂಜಾನೆ 9ಕ್ಕೆ ಪ್ರಾರಂಭವಾಗುತ್ತೆ. ಆ ದಿನ ಭಾನುವಾರ’ ಜಿಪ್ಸಿಗಳಿಗೆ ಹೇಳಿದಳು. ‘ನೀನು ಕಿಟಕಿಯ ಬದಿಯಲ್ಲಿನ ಎರಡನೇ ಕುರ್ಚಿಯಲ್ಲಿ ಕೂತ್ಕೋ’ ಮೋಲ್ನಾರೋವಾಳಿಗೆ ಹೇಳಿ ‘ಅವಳ ಬದಿಯಲ್ಲಿ ಯಾರು ಕೂತ್ಕೋತೀರಿ ?’ ಎಂದು ಕೇಳಿದಳು.

ಎಲ್ಲರೂ ಆರಂಕಾ ಮೋಲ್ನಾರೋವಾಳ ಪಕ್ಕದಲ್ಲಿ ಕುಳಿತುಕೊಳ್ಳಲು ಆಸಕ್ತರೇ.

ಆದರವಳು ಮುಂದೆ ಫೆಬ್ರುವರಿ 28 ರಂದೇ ಪ್ರಸೂತಿಗೃಹ ಸೇರಿದ್ದರಿಂದ ಶಾಲೆಗೆ ಬರಲು ಸಾಧ್ಯವಾಗಲೇ ಇಲ್ಲ.

ಬೇರೆ ಬೇರೆ ವಯೋಮಾನದ ನಲವತ್ತು ಜನ ವಿದ್ಯಾರ್ಥಿಗಳು ಈ ಶಾಲೆಯಲ್ಲಿ ತಮ್ಮ ಹೆಸರು ನೊಂದಾಯಿಸಿದ್ದರು. ಎಲ್ಲರಿಗಿಂತ ಸಣ್ಣವನಾದ 'ಫೆರೆನ್ಸ್'ಗೆ ಎಂಟು ವರ್ಷ ವಯಸ್ಸು. ಎಲ್ಲರಿಗಿಂತ ಹಿರಿಯನೆಂದರೆ ಫ್ರಾಂಕ್ ಜೋಸೆಫ್. ಅಲ್ಲಿನ ಕುಖ್ಯಾತ ಚಕ್ರವರ್ತಿಯನ್ನು ಬಹಳವಾದ ಹೋಲುತ್ತಿದ್ದುದೇ, ಅವನಿಗೆ ಈ ಅಡ್ಡ ಹೆಸರು ಬರಲು ಕಾರಣವಾಗಿತ್ತು. ಜಿಪ್ಸಿಗಳ ಫ್ರಾಂಕ್ ಜೋಸೆಫ್‌ಗೆ 63 ವರ್ಷಗಳಾಗಿದ್ದುವು; ಅವನು ಯಹೂದ್ಯರ ದೀಪಸ್ಥಂಭದಿಂದ ತನ್ನ ಹೆಂಡತಿಯನ್ನು ಇರಿದು ಕೊಂದಿದ್ದನೆಂಬ ವದಂತಿಯೂ ಇತ್ತು. ಆದರೆ ಆನಂತರ ಅವನು ಮತ್ತೆ ಮದುವೆಯಾಗಿರಲಿಲ್ಲ.

ಶಾಲೆಯನ್ನು ವಿಶೇಷ ರೀತಿಯ ಸಮಾರಂಭವೊಂದರಲ್ಲಿ ಉದ್ಘಾಟಿಸಲಾಯಿತು. ವೇದಿಕೆಯ ಮೇಲಿದ್ದ ವಿಶೇಷ ಆಹ್ವಾನಿತರಲ್ಲಿ ಸ್ಲಾವ್ಕಾ ಮಾರಿನ್ಕೋವಾಳನ್ನೇ ದಿಟ್ಟಿಸಿನೋಡುತ್ತಿದ್ದ ಶಿಕ್ಷಣವೇತ್ತ ಹಾಗೂ ಕಾರ್ಖಾನೆಯ ನಿರ್ದೇಶಕ ಹೋಲಬ್ ಸಹ ಇದ್ದರು. ತನ್ನನ್ನು ಪುಸಲಾಯಿಸುವ ಯಾರ ಬಗ್ಗೆಯೇ ಆಗಲಿ ಹೋಲಬ್‌ಗೆ ಒಂದು ವಿಶೇಷ ಆಸಕ್ತಿಯ ಭಾವನೆ ಮೂಡುತ್ತಿತ್ತು.

ಅಂದು ಭಾನುವಾರ. ಮುಂಜಾನೆಯ ಹವೆ ಮಾರ್ಚ್‌ನ ಲಘು ಮಂಜಿನಿಂದಾವೃತ ವಾಗಿ ತಂಪಾಗಿತ್ತು. 'ಆತ್ಮ ವಿಶ್ವಾಸದ ದನಿಯ ಮಹಾಮಾನವ' ಎಂದು ಕೆಂಪು ಬಟ್ಟೆಯ ಮೇಲೆ ಬಂಗಾರದಕ್ಷರಗಳಲ್ಲಿ ಬರೆದು ದೊಡ್ಡದಾಗಿ ಪತಾಕೆ ಕಟ್ಟಿದ್ದರು.

ಅದು ಒಳ್ಳೇ ಉದ್ದೇಶದ, ಗಂಭೀರ ಪದಗಳು ನಿಜ. ಆದರೆ ಆ ಮಹಾಮಾನವ ನನ್ನು ಭಾನುವಾರದ ದಿನ ಆರಾಮವಾಗಿ ಮಲಗೋಕ್ಕೆ ಯಾಕೆ ಬಿಡೋದಿಲ್ವೋ ಶಿಕ್ಷಣ ತಜ್ಞ ಕಹಿಯಾಗಿ ಕೇಳಿದ.

'ಹೌದು.. ನೀನಂತೂ ಆರಾಮವಾಗಿ ಮಲಗೇ ಇರ್ಬಹುದಾಗಿತ್ತು.' ನಿರ್ದೇಶಕ ಹೋಲಬ್ ವ್ಯಂಗ್ಯವಾಗಿ ನುಡಿದ. 'ಹೇಗಿದ್ರೂ ವರ್ಷಪೂರ್ತ ನಿದ್ದೇ ಮಾಡ್ತೀಯ. ನಿಂಗೆ ಇದೊಂದು ದಿನ ಏನು ಭಾರಿ ಅಗ್ತಿರ್ಲಿಲ್ಲ. ಆ ಸಂತ ಥಾಡ್ಡಸ್ ಬಿಟ್ರೆ ಪವಿತ್ರ ಅನ್ನೊಂಥಾದ್ದು ಬೇರೆ ನಿಂಗೇನಾದ್ರೂ ಹೊಳೆಯುತ್ತಾ ? ನಂಗೊತ್ತು.. ಈ ಮಧ್ಯೆ ಯಾವಾಗಲೋ ಹೋಗಿ ಅವನಿಗಾಗಿ ಒಂದಿಷ್ಟು ದಪ್ಪದ ಕ್ಯಾಂಡಲ್

ಅಂಟಿಸಿ ಬಂದಿರ್ತೀಯ' ಮೇಣದ ಬತ್ತಿಯ ಗಾತ್ರ ತೋರಿಸುತ್ತಾ ಹೋಲಬ್ ಹೇಳಿದ.

ಸ್ಲಾವ್ಕಾ ಮಾರಿನ್ಕೋವಾ ವೇದಿಕೆಯ ಮೇಲೆ ಬಂದು ನಿಂತಳು. ಅವಳು ತಲೆಗೆ ಸ್ಫಟಿಕದ ಹೂವು ಮುಡಿದುಕೊಂಡಿದ್ದಳು. ತನ್ನ ಭಾಷಣದಲ್ಲಿ ಅವಳು ಅಕ್ಷರಗಳ ಮಹತ್ತ್ವ ಅದರಿಂದಾಗುವ ಚಮತ್ಕಾರ, ನದಿ ಮೂಲವನ್ನು ತಿಳಿಯಬೇಕಾಗಿರುವ ಅವಶ್ಯಕತೆ. ನಕ್ಷತ್ರಗಳ ಅಸ್ತಿತ್ವ. ಮರಗಳು ಹಸಿರಾಗಿರುವುದಕ್ಕೆ ಕಾರಣ ಹಾಗೂ ಪ್ರತಿದಿನದಂತ್ಯದಲ್ಲಿ ಕತ್ತಲೆ ಏಕೆ ಮೂಡುತ್ತದೆ ಎಂಬುದನ್ನೆಲ್ಲಾ ತಿಳಿದುಕೊಳ್ಳುವ ಅವಶ್ಯಕತೆಯ ಬಗ್ಗೆ ಮಾತನಾಡಿದಳು.

ಎಲ್ಲರೂ ಜೋರಾಗಿ ಚಪ್ಪಾಳೆ ತಟ್ಟಿದರು. ಅದರಲ್ಲೂ ಮುಖ್ಯವಾಗಿ ಶಿಕ್ಷಣತಜ್ಞ. ಆನಂತರ ಎಲ್ಲರೂ ಅಂದಿನ ಭಾನುವಾರವನ್ನು ಆರಾಮವಾಗಿ ಕಳೆಯಲೆಂದು ಹೊರಟು ಹೋದರು. ಸ್ಲಾವ್ಕಾ ಮಾರಿನ್ಕೋವಾ ಕಪ್ಪು ಹಲಗೆಯ ಮೇಲೆ ದೊಡ್ಡದಾಗಿ 'ಅ' ಬರೆದಳು.

ಹಿರಿಗೆಬೋರ್ ಮತ್ತು ಕಿರಿಗೆಬೋರ್ ಶುಭ್ರ ಬಟ್ಟೆ ಧರಿಸಿ ಚೊಕ್ಕವಾಗಿ ತಲೆ ಬಾಚಿಕೊಂಡು ಮುಂದಿನ ಸಾಲಿನಲ್ಲಿ ಒಬ್ಬರ ಪಕ್ಕದಲ್ಲೊಬ್ಬರು ಕುಳಿತಿದ್ದರು.

ಅಂದು ಮುಂಜಾನೆ ಹಿರಿ ಗೆಬೋರ್ ಕಿರಿ ಗೆಬೋರ್‌ಗೆ ಸ್ನಾನ ಮಾಡಿಸಿದ ಸಮಯದಲ್ಲಿ ಇಬ್ಬರೂ ಹಾಡಿದ್ದರು. 'ಚಾಟ್‌ನಾಯ್ರೆ' ಸುಗಂಧವನ್ನು ಒಬ್ಬರ ಮೇಲೊಬ್ಬರು ಎರಚಿಕೊಂಡಿದ್ದರು. ಈ ಸುಗಂಧ ಹಾಗೂ ನಿರ್ದೇಶಕ ಹೋಲಬ್ ಸ್ವತಃ ತನ್ನ ಉದ್ಯಾನದಿಂದ ತಂದ ಬಿಳಿ ಸೇವಂತಿಗೆಯ ವಾಸನೆ ಎರಡೂ ಕೋಣೆಯಲ್ಲಿ ಚೆನ್ನಾಗಿ ಹಬ್ಬಿತ್ತು.

ಮೊದಲ ತರಗತಿಯ ನಂತರ ಸ್ವಲ್ಪ ವಿರಾಮವಿತ್ತು. ಆಗ ಹಿರಿಗೆಬೋರ್, ಕಿರಿಯನಿಗೊಂದು ಕಿವಿಮಾತು ಹೇಳಿದ. 'ಕೂತಿರೋವಾಗ ಗಂಭೀರವಾಗಿರು, ಯೋಚನೇ ಮಾಡೋವಾಗ ಕಣ್ಣನ್ನು ಚಿಕ್ಕದು ಮಾಡು. ಮೇಡಂಗೆ ನೀನು ಯೋಚನೆ ಮಾಡ್ತಾ ಇರೋದು ತಿಳೀಲಿ– ಗೊತ್ತಾಯ್ತಾ?'

'ಅಪ್ಪ. ಅದೇನೋ ಸರಿ. ಆದ್ರೆ ನಾನು ಯೋಚ್ನೇನೇ ಮಾಡ್ತಾ ಇರ್ಲಿಲ್ವಲ್ಲಾ!'
'ನಂಗೊತ್ತೋ ಯಾವನಾದ್ರೂ ಯಾವಾಗ್ಲೂ ಯೋಚ್ನೇ ಮಾಡ್ತಾ ಇರೊಕ್ಕಾ

ಗುತ್ತಾ- ಸುಮ್ಮನೆ ಕಣ್ಣನ್ನ ಚಿಕ್ಕದು ಮಾಡಬಹುದಲ್ಲಾ' ಹಿರಿ ಗೆಬೋರ್ ಹೇಳಿದ.

'ಸರಿ ಅಪ್ಪ' ಕಿರಿ ಗೆಬೋರ್ ಉತ್ತರಿಸಿದ. ಸ್ವಂತ ತಂದೆಯೊಟ್ಟಿಗೆ ಶಾಲೆಗೆ ಹೋಗುವುದು ಹೂವಿನ ಸುಪ್ಪತ್ತಿಗೆಯ ಮೇಲೆ ಉರುಳಾಡಿದ ಹಾಗಲ್ಲ ಎಂದವನಿಗೆ ಆಗ ಮನವರಿಕೆಯಾಯ್ತು.

ಶಾಲೆ ಪ್ರಾರಂಭವಾದಾಗಿನಿಂದಲೇ, ಕಿರಿ ಗೆಬೋರ್, ಬುದ್ಧಿವಂತಿಕೆ ಮತ್ತು ಪಾಠ್ಯ ಗ್ರಹಣದಲ್ಲಿ ಎಲ್ಲರನ್ನೂ ಮೆಟ್ಟನಿಲ್ಲುತ್ತಾನೆಂದು ವೇದ್ಯವಾಗಿತ್ತು. ಇದ್ದಕ್ಕಿದ್ದಂತೆ ದೊಡ್ಡ ನಕ್ಷತ್ರವೊಂದರಂತೆ ಅವನು ಮಿಂಚುತ್ತಿದ್ದ. ಹಿರಿಗೆಬೋರ್ ಆ ಮಿಂಚಿನ ಬೆಚ್ಚನೆಯ ತಾಪದಡಿ ತಾನೂ ನಮ್ರನಾಗಿ ಒಂದಿಷ್ಟು, ಮೈ ಕಾಯಿಸಿಕೊಳ್ಳುತ್ತಿದ್ದ. ಅವನಿಗೇನೂ ಹೊಗಳಿಕೆಯ ಬಗ್ಗೆ ಆಸಕ್ತಿ ಇರಲಿಲ್ಲ. ಏಕೆಂದರೆ ಈ ರೀತಿಯ ಹೊಗಳಿಕೆಗಳು ಎಷ್ಟು ವ್ಯರ್ಥ ಎಂಬುದನ್ನ ಅವನು ಆಗಲೇ ಮನಗಂಡಿದ್ದ. ಆದರೆ ಜಿಪ್ಸಿಗಳ ನಂಬಿಕೆಯಂತೆ, ಬುದ್ಧಿವಂತ ಮಗನ ತಂದೆಯಾಗುವುದು ಸಹ ಒಂದು ಚಿರ ಆಶೀರ್ವಾದ ಎಂಬ ಭಾವನೆ ಪ್ರಚಲಿತವಿತ್ತು.

ಆದರೆ ಒಮ್ಮೊಮ್ಮೆ ಅದೂ ತನಗೆ ಗ್ರಾಹ್ಯವಾಗದ ಅತೀ ಆಳದ ಗಹನ ಗಂಭೀರ ಬುದ್ಧಿವಂತಿಕೆಯನ್ನು ಕಿರಿ ಗೆಬೋರ್ ತೋರಿದಾಗ ಮಾತ್ರ, ಹಿರಿ ಗೆಬೋರನಿಗೆ ಏನೋ ಮೊನಚಾದ ವಸ್ತುವೊಂದು ಕ್ಷಣಿಕವಾಗಿ ತನ್ನನ್ನು ಇರಿದು, ಅದರ ಪ್ರಖರತೆಗೆ ತಾನು ತತ್ತರಿಸಿದಂತೆ ಒದ್ದಾಡುತ್ತಿದ್ದ. ಅದು ಭಯವೋ, ಅಸೂಯೆಯೋ, ಅಥವಾ ಅತೀ ಸಂತೋಷವೋ....ಏನೆಂದು ಗುರುತಿಸಲಾಗಲಿಲ್ಲ. ಆಗೆಲ್ಲಾ ತನ್ನ ಮಗನ ಕಂಗಳು ತನ್ನನ್ನು ಕರುಣೆಯಿಂದ, ಕೊಂಚ ಮುಜುಗರದಿಂದ ನೋಡುತ್ತಿದ್ದುವು. ಹಿರಿ ಗೆಬೋರನಿಗೆ, ಇಷ್ಟು ವರ್ಷಗಳಿಂದ ಬೆಳೆಸಿಕೊಂಡು ಬಂದಿದ್ದ ಈ ಪ್ರೀತಿಯ ಬಾಂಧವ್ಯದಲ್ಲಿ ಯಾವುದೋ ಒಂದಂಶ, ವಸಂತ ಕಾಲದಲ್ಲಿ ಕರಗಿ ಹರಿದು ಹೋಗುವ ತಣ್ಣನೆಯ ಮಂಜಿನ ತೊಟ್ಟುಗಳ ಹಾಗೆ ಕರಗಿಹೋದಂತೆ ಭಾಸವಾಗತೊಡಗಿತು.

ಆ ರಾತ್ರಿ ಹಾಸಿಗೆಯಲ್ಲಿ ಮಲಗಿದಾಗ ಅವನ ಲಕಟೋಸ್ ವಂಶದ ಮೂಗಿನತ್ತ ಮೃದುವಾಗಿ ನೋಡಿದ. ತನ್ನ ಕೆನ್ನೆಯನ್ನು ಮಗನ ಕೆನ್ನೆಯ ಬಳಿಗೊಯ್ದ. ಕಿರಿ ಗೆಬೋರ್ ಮತ್ತೊಮ್ಮೆ ಹೊರಳಿದ. ಅಲ್ಲಿ ಅವನಿಗೆ ಸಾಕಾಗುವಷ್ಟು ಸ್ಥಳ ಇರಲಿಲ್ಲ.

'ಅವನ ಪಾದಗಳು ಆಗ್ಲೇ ಎಷ್ಟು ದೊಡ್ಡದಾಗಿ ಹೋಗಿದೆ' ಹಿರಿ ಗೆಬೋರ್ ತನ್ನ

ಲ್ಲೇ ಹೇಳಿಕೊಂಡ. ನಂತರ ಒಂದು ರೀತಿಯ ಬೇಸರದಿಂದಲೇ ಸಿದ್ದ ಮಾಡಿದ.

'ಅಯ್ !' ಏನೋ ನೆನಪು ಮಾಡಿಕೊಂಡು ಮತ್ತೊಮ್ಮೆ ಮನದಲ್ಲೇ ಅಂದು ಕೊಂಡ– 'ಅಯ್ !'

ಕಟ್ಟಡ ಕಟ್ಟುತ್ತಿದ್ದ ಜಾಗದಲ್ಲಿ ಲಕಟೂಸ್ ವಂಶದ ಕೀರ್ತಿ ನಿಯಮಿತವಾಗಿ ಹಬ್ಬತೊಡಗಿತು. ಅದೂ ಹೇಗೆ ? ಯಾವ ಅಡಚಣೆಯೂ ಇಲ್ಲದೇ, ತಾನೇತಾನಾಗಿ, ಕವಿಯ ಸ್ವನಿರ್ಮಿತ ಕೀರ್ತಿಯ ಶಿಖರದಂತೆ, ಏಕ ಪ್ರಕಾರವಾಗಿ ಹಬ್ಬತೊಡಗಿತು. ಒಬ್ಬ ಪ್ರತಿಭಾವಂತ ಮಗನನ್ನು ಹೆತ್ತ ತಂದೆ ತನ್ನ ಶಂಖ ಊದಿಕೊಳ್ಳದೇ ಇನ್ನೇನು ತಾನೇ ಮಾಡಬಲ್ಲ ? ಯಾರೂ ಮತ್ತೇನೂ ಮಾಡಲಾರರಲ್ಲಾ.

'ಲಕಟೊಸ್ ವಂಶಸ್ಥರು ಯಾವಾಗಲೂ ಜೀವನದ ಯಾವುದೇ ಒಂದು ಅಂಶದಲ್ಲಿ ಮಹಾನ್ ವ್ಯಕ್ತಿಗಳಾಗಿರ್ತಾರೆ.' ಅವನು ತನ್ನ ಶಂಖ ಪ್ರಾರಂಭಿಸುತ್ತಿದ್ದ–'ಅವರು ಸಂಗೀತಗಾರರೇ ಇರ್ಬಹುದು, ಅಥವಾ ಕುದುರೆಕಳ್ಳರೂ ಇರಬಹುದು. ಏನೇ ಆದರೂ ಆ ರಂಗದಲ್ಲಂತೂ ಅತ್ಯುತ್ತಮರು. ನನ್ನ ತಾತ ಪಿಟ್ರೊಕ ಲಕಟೂಸ್ ನೇ ತೆಗೊಳ್ಳಿ. ಆತ ತಾಮ್ರದ ಕೆಲಸ ಮಾಡ್ತಿದ್ದ. ನೀವು ಯಾರೂ ನೋಡ್ದೇ ಇರೋಷ್ಟು ದೊಡ್ಡ ಗಾತ್ರದ ಹೆಂಚನ್ನ ಒಂದು ಸರ್ತಿ ತಯಾರು ಮಾಡಿದ್ದ. ಆ ಹೆಂಚಿನಲ್ಲಿ ಮಾಡಿದ್ದ ಅದೂ, ದೊಡ್ಡ ಮೆಣಸಿನ ಕಾಯಿ, ಮಸಾಲೆ ಎಲ್ಲ ಹಾಕಿದ್ದ ಆ ದೊಡ್ಡ ಹಂಗೇರಿಯನ್ ದೋಸೇನ ತಿನ್ನೋ ಅದೃಷ್ಟ ನಿಂಗಂತೂ ಇಲ್ಲ ಕಾಮ್ರೇಡ್ ಟೆರೇಬಾ. ಎಲ್ರಿಗೂ ಆ ಅದೃಷ್ಟ ಇರ್ಬೇಕಿತ್ತೂಂತ ನಾ ಹೇಳೊಲ್ಲ- ಇನ್ನೇನಿಲ್ದಿದ್ರೂ ಕನಿಷ್ಠ ಪಕ್ಷ ನಿಂಗಂತೂ ಆ ಅದೃಷ್ಟ ಇರ್ಲೇಬೇಕಿತ್ತು ಬಿಡು.' ಟೆರೆಬಾ ಜಾಗರೂಕನಾದ– 'ನನಗೇ ಯಾಕೆ ? ನಾನು ನಿನ್ನ ಅಧಿಕಾರೀಂತಲ್ಲ ಅಥವಾ ನನ್ನ ಕಂಡ್ರೆ ನಿಂಗೆ ಇಷ್ಟಾಂತಲ್ಲೋ ?'

'ನೀನೊಬ್ಬ ದೊಡ್ಡ ಮನುಷ್ಯಾಂತ ನನ್ನ ಭಾವನೆ. ಯಾಕೇಂದ್ರೆ ನಿನ್ನನ್ನ ನೋಡಿದ್ರೆ ಆ ಕುದುರೆ ಚಾವಟಿ ಮಾಡ್ತಿದ್ದ ಲಕಟೂಸ್‌ನ ಜ್ಞಾಪಕ ಬರುತ್ತೆ.... ಆಹಾ ಎಂಥಾ ಚಾವಟಿಗಳೂಂತೀ ?' ಹಿರಿ ಗೆಬೋರ್ ಅಲ್ಲೂ ಬಡಾಯಿ ಕೊಚ್ಚಿಕೊಂಡ. 'ಹುಂ..ಹುಂ.. ಆಮೇಲೆ ನಾನು ಕುದುರೆ ಚಾವಟಿ ಹಿಡಿದು ಈ ಕಟ್ಟಡದ ಸುತ್ತೂ ಅಟ್ಟಿಸಿಕೊಂಡು ಓಡಾಡಬೇಕಾಗುತ್ತೆ ಅಷ್ಟೇ.' ಫೋರ್‌ಮನ್ ಟೆರೆಬಾ ಕೋಪದಿಂದ ಹೇಳಿದ. ಟೆರೆಬಾಗೆ ಬಾಯಿಗೆ ಬಂದ ಹಾಗೆ ಬಡಾಯಿಕೊಚ್ಚುವವ

ರೆಂದರೆ ಮೈಯೆಲ್ಲಾ ಉರಿಯುತ್ತಿತ್ತು. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ- ಅವನ ಹೆಚ್ಚಿನ ಆಸಕ್ತಿ ತಾನೇ ತನ್ನ ಬಡಾಯಿ ಕೊಚ್ಚಿಕೊಳ್ಳುವುದರಲ್ಲಿತ್ತು 'ಆಹಾಹಾ ಲಕಟೂಸ್ ವಂಶ ! ಹ್ಞ !' ಒಮ್ಮೆ ತನ್ನಲ್ಲೇ ಗುರುಗುಟ್ಟಿದ. 'ನಂಗೇನಾದ್ರೂ ಸ್ಕೂಲ್ನಲ್ಲಿ ಮಗಂಗಿಂತ ಕಡಿಮೆ ಬುದ್ಧಿ ಇದೇಂತ ತಿಳಿದಿದ್ರೆ ನಾನು ಮೋರಿ ಕೆಳಗೆ ತಲೆ ಮರೆಸಿಕೊಂಡು ಅಲ್ಲೇ ಖಾಯಂ ಆಗಿ ಇದ್ದುಬಿಡ್ತಿದ್ದೆ'

ಒಂದು ವಿಕೃತ ಸಮಾಧಾನ ಪಡೆದವನಂತೆ ಟೆರೆಬಾ ಮಾತನಾಡಿ ಹಿರಿ ಗೆಬೋರ ನತ್ತ ತಿರುಗುವ ವೇಳೆಗೆ ಆ ಜಿಪ್ಸಿ ಇದ್ದಕ್ಕಿದ್ದಂತೆ ಮೌನವಾದ. ನಂತರ ತಲೆ ತಗ್ಗಿಸಿ ತನ್ನ ಕೆಲಸ ಪ್ರಾರಂಭಿಸಿಬಿಟ್ಟ.

ಇದ್ದಕ್ಕಿದ್ದಂತೆ ತನ್ನ ಹೃದಯವನ್ನು ತುಂಬಿ, ತನ್ನನ್ನು ಪರೀಕ್ಷಿಸುತ್ತಿದ್ದ ಈ ಅಣಕದ ಮಾತುಗಳು ಮೊನಚಾಗುತ್ತಾ ಬಂದು ತನ್ನ ಹೃದಯವನ್ನೇ ಇರಿದಂತೆ ಅವನಿಗೆ ಭಾಸವಾಗತೊಡಗಿತು. ಈ ಆಲೋಚನೆ ದುಃಖಕರ ವಾತಾವರಣದ ಪೊರೆಯನ್ನು ತನ್ನಲ್ಲಿ ಬಿಟ್ಟು ಹೋಯಿತು.

ನಿಟ್ಟುಸಿರಿಡುತ್ತಾ ಹಿರಿ ಗೆಬೋರ್ ತನ್ನ ಕೆಲಸ ಮುಂದುವರೆಸಿದ. ತಮ್ಮ ಮಕ್ಕಳ ಜತೆಯಲ್ಲೇ ಶಾಲೆಗೆ ಹೋಗಬೇಕಾದ ಪರಿಸ್ಥಿತಿ ಉಂಟಾಗದ ಅದೃಷ್ಟವಂತ ತಂದೆ ತಾಯಿಗಳ ಬಗ್ಗೆ ಕೆಲಕಾಲ ಯೋಚಿಸಿದ. ತಾನು ತರಗತಿಯಲ್ಲಿ ಕಪ್ಪು ಹಲಗೆಯ ಬಳಿ ಹೋಗಿ ಏನೂ ಕೈಲಾಗದೇ ಮೂರ್ಖನಂತೆ ಅಲ್ಲಿಂದ ಕಿವಿ ಕೆಂಪಾಗಿಸಿಕೊಂಡು ಹಿಂದಿರುಗುತ್ತಿದ್ದ ದೃಶ್ಯವನ್ನೊಮ್ಮೆ ಕಲ್ಪಿಸಿಕೊಂಡ. ಹಾಗೆಯೇ ಕಿರಿ ಗೆಬೋರ್ ಉತ್ತರಕೊಡಲು ಮುಂದಾದಂತೆ, ತಾನು ಬೆಂಚಿನ ಮೇಲೆ ಭಾರವಾಗಿ ಕುಸಿದಂತೆ ಭ್ರಮೆಗಳು ಉಂಟಾದುವು.

ಯಾವುದೇ ಮಗು ತನ್ನ ಕಲಿಯುವಿಕೆಯ ದಾಹವನ್ನು ತೀರಿಸುವ ನಿರಂತರ ಝರಿ ಎಂದು ತನ್ನ ತಂದೆಯ ಬಗೆಗೆ ಆಲೋಚಿಸಬೇಕು. ಅದೇ ಭಾವನೆಯಿಂದ ಮಗು ಮತ್ತೆ ಮತ್ತೆ ತಂದೆಯ ಬಳಿ ಬರಬೇಕು. ತಂದೆ, ತನ್ನ ಮಗನ ಜಗತ್ತನ್ನು ತನ್ನ ಜ್ಞಾನ ದೀವಿಗೆಯಿಂದ ಬೆಳಗಿಸಬೇಕು.
'ಅಯ್ !'

ಹಿಂದೆಂದೋ ತಾವು ಸಣ್ಣವರಿದ್ದಾಗ ಪುಸ್ತಕಗಳಲ್ಲಿ ನೋಟ್ಸ್ ಬರೆದುಕೊಂಡು, ಅದನ್ನು ಜೋಪಾನ ಮಾಗಿರಿಸಿದ ತಂದೆ ತಾಯಿಗಳು ಎಷ್ಟು ಅದೃಷ್ಟವಂತರು !

ಅದೇ ಹಳದಿ ಬಣ್ಣಕ್ಕೆ ತಿರುಗಿರಬಹುದಾದ ಚಿಂದಿಯ ಪುಸ್ತಕದಿಂದಲೇ ತಮ್ಮ ಮಕ್ಕಳ ಜಗತ್ತಿನಲ್ಲಿ ಜ್ಞಾನದೀವಿಗೆಯನ್ನು ಸರಳವಾಗಿ ಬೆಳಗಿಸಬಹುದು! ಆಕಸ್ಮಾತ್ ತಂದೆ ಎನ್ನಿಸಿಕೊಂಡವನು ತರಗತಿಯಲ್ಲಿ ಚೆನ್ನಾಗಿ ಓದಿರದಿದ್ದರೆ? ತನ್ನಪ್ಪನ ಅಂಕಪಟ್ಟಿಯನ್ನು ನೋಡುವುದು, ಮಗನ ದೃಷ್ಟಿಯಿಂದ ಎಷ್ಟು ಸಮಂಜಸ?!

ಹಿರಿ ಗೆಬೋರ್ ಈ ಭಾವನಾತ್ಮಕ ನೆನಪುಗಳೊಂದಿಗೆ ಕೆಲ ಹೊತ್ತು ಗುದ್ದಾಡಿದ. ತಾವು ಯಾರಿಗೂ ಒಳ್ಳೆಯ ಅಂಕಗಳನ್ನು ಒಳ್ಳೆಯ ವರದಿಗಳನ್ನೂ ತೋರಿಸುವ ಅವಶ್ಯಕತೆ ಇಲ್ಲದ ಆ ತಂದೆಗಳನ್ನು ನೆನಪಿಸಿಕೊಂಡು ಅಸೂಯೆಪಟ್ಟ. ಇಲ್ಲಿ, ವಾಸ್ತವದಲ್ಲಿ ತಾವಿಬ್ಬರೂ, ತಾನು, ತನ್ನ ಮಗ, ಇಬ್ಬರೂ ಒಂದೇ ಶಾಯಿಯ ಶೀಷೆಯಲ್ಲಿ ಲೇಖನಿ ಅದ್ದಿ, ಒಂದೇ ಪಾಠ್ಯಪುಸ್ತಕದಿಂದ ಓದಿ, ಯಾವಾಗಲೂ ತರಗತಿಯಲ್ಲಿ ಕಾಣಿಸುತ್ತಿದ್ದ ಅದೇ ಹುಡುಗಿಯ ದನಿಯಲ್ಲಿ ಪದೇ ಪದೇ ಒಂದೇ ಮಾತನ್ನು ಕೇಳುತ್ತಿದ್ದರು- 'ಹಿರಿ ಗೆಬೋರ್‌ಗೆ ಗೊತ್ತಿಲ್ವ?.... ಸರಿ ಹಾಗಾದ್ರೆ.... ಕಿರಿ ಗೆಬೋರ್....'

ಕಿರಿ ಗೆಬೋರ್‌ಗೆ ಆ ವಿಷಯ ಖಚಿತವಾಗಿ ತಿಳಿದಿರುತ್ತಿತ್ತು.

ಎಷ್ಟೇ ಆಗಲೀ 'ಮೊರಾವಿಯನ್ ಸಂದಿ ಓಡರ್‌ನ ಉತ್ತರಕ್ಕಿದೆ. ಬೆಕ್ವಾ ದಕ್ಷಿಣ ಪಶ್ಚಿಮದಲ್ಲಿದೆ' ಎನ್ನುವಂತಹ ವಿಷಯಗಳನ್ನು ತಿಳಿಯದೆಯೇ ಹಿರಿ ಗೆಬೋರ್ ಹುಟ್ಟಿದ್ದ. ಮದುವೆಯೂ ಆಗಿದ್ದ. ಅದನ್ನು ತಿಳಿಯದೆಯೇ ಸಾಯಲೂ ಬಹುದಿತ್ತು. ಯಾರಿಗಾದರೂ ಈ ವಿಷಯಗಳು ತಿಳಿಯದಿದ್ದರೆ ಏನಾಗುತ್ತಿತ್ತು? ಏನೂ ಇಲ್ಲ. ಓಡರ್ ಉತ್ತರಕ್ಕೆ ಓಡುತ್ತಿತ್ತೇ?... ಓಡುತ್ತಿತ್ತು. ಬೆಕ್ವಾ ದಕ್ಷಿಣ ಪಶ್ಚಿಮದಲ್ಲಿರುತ್ತಿತ್ತೇ? ಇರುತ್ತಿತ್ತು! ಖಂಡಿತವಾಗಿಯೂ ಹಾಗೇ ಇರುತ್ತಿತ್ತು.... ಇದೊಂದು ಸರಳ ವಿಷಯ.

ಪುಸ್ತಕದ ತೆರೆದ ಪುಟಗಳತ್ತ ಹಿರಿ ಗೆಬೋರ್ ಮೌನವಾಗಿ, ಬೇಸರದಿಂದ ದೃಷ್ಟಿ ಹಾಯಿಸಿದ. ತಾನು ಓದಲೆತ್ನಿಸುತ್ತಿದ್ದ ಹಾಗೆ, ಅಕ್ಷರಗಳು ಕುರಿಮಂದೆ ಚದುರಿ ಹೋದಂತೆ ಚೆದುರಿ ಹೋದುವು; ಅವನ ಹಣೆಯ ಮೇಲೆ ಗೋಚರಿಸುತ್ತಿದ್ದ ನೀಲಿ ನರಗಳು ಸ್ವಲ್ಪ ಅಲುಗಾಡಿದುವು. ಅವನ ಕಡುಗಪ್ಪು ಕಂಗಳು ಶೂನ್ಯದತ್ತ ದಿಟ್ಟಿಸುತ್ತಿದ್ದುವು. ಗಡಿಯಾರ ತನ್ನಷ್ಟಕ್ಕೆ ತಾನು ಮುಂದೆ ಸಾಗುತ್ತಿತ್ತು. ಹಿರಿ ಗೆಬೋರ್ ದಾರಿಯಲ್ಲಿ ಕಾಲ್ಚಾಚಿ ಕುಳಿತ. ಮೂಳೆಗಳು ಒಮ್ಮೆ ಲಟಕ್ಕೆಂದು

ಮುಲುಕಿದುವು. ಆಗಾಗ ಅವನ ಕಣ್ರೆಪ್ಪೆಗಳು ಮುಚ್ಚಿದಂತಾಗಿ ಖೈದಿಗಳ ಹಾಗೆ ಚುಟುಕು ನಿದ್ರೆಯನ್ನೊಂದಿಷ್ಟು ಹೊತ್ತು ಅವನು ಮಾಡಿದ. ಅದು ಕುಡಿದು ಬಂದ ತರಲೆಗಳು ಮೀಟಿಂಗುಗಳಲ್ಲಿ ಮಾಡುವಂತಹ ನಿದ್ರೆ! ಒಬ್ಬರನ್ನೊಬ್ಬರು ಅತಿಯಾಗಿ ಪ್ರೀತಿಸುವ ಪ್ರೇಮಿಗಳಂತೆ ಅಥವಾ ಏನೋ ರುಚಿಕರವಾದುದನ್ನು ತಿಂದವನಂತೆ ತುಟಿಯನ್ನು ಒರೆಸಿಕೊಂಡ. ಆದರೆ ಕ್ಷಣಗಳಲ್ಲಿ ಕರಗುವ ಕನಸುಗಳಲ್ಲಿ ಯಾವುದರ ರುಚಿ ತಾನೇ ನೋಡಬಲ್ಲ?

ಇರಲಿ, ಮೊರಾವಿಯನ್ ಸಂದು ಇದೆ. ಜಾರ್ನ್ಸಿಕ ಹೈಟ್ಸ್‌ನಲ್ಲಿರುವ ಅತೀ ಎತ್ತರದ ಶಿಖರದ ಹೆಸರು ನೈನ್‌ರಾಕ್ಸ್. ಸರಿ. ಹಿರಿ ಗೆಬೋರ್ ಪರ್ವತಾರೋಹಿಯೇ? ಖಂಡಿತವಾಗಿಯೂ ಅಲ್ಲ.

ಕಿರಿ ಗೆಬೋರ್ ಅವನ ಮೊಣಕೈ ಎಳೆದು ಏನೂ ಅರಿಯದವನಂತೆ ಅವನತ್ತ ನೋಡಿದ.

'ಏನಾಯ್ತು' ಹಿರಿ ಗೆಬೋರ್ ಕೇಳಿದ.

'ಅಪ್ಪ, ತೂಕಡಿಸಬೇಡ' ಕಿರಿ ಗೆಬೋರನ ಉತ್ತರ!

'ಛೆ... ನಿಂಗೆ ನಾಚ್ಕೆ ಆಗೊಲ್ವಾ? ನಾನೇನು ನಿದ್ದೆ ಮಾಡ್ತಿದ್ನಾ? ನೀನು.... ನೀನು....' ಹಿರಿ ಗೆಬೋರ್ ಕಾರಣ ಹುಡುಕಿದ.

ಇವೆಲ್ಲಕ್ಕಿಂತ ಹೆಚ್ಚಿನ ಬೇಸರ ತರಿಸುತ್ತಿದ್ದುದೆಂದರೆ ಪರೀಕ್ಷೆಗಳು.

'ಹಿರಿ ಗೆಬೋರ್ ಬೋರ್ಡಿನ ಹತ್ತಿರ ಹೋಗ್ತೀಯಾ?' ಸ್ಲಾವ್ಕ ಮಾರಿನ್ಕೋವಾ ಆಕರ್ಷಕವಾಗಿ ಕೇಳುತ್ತಿದ್ದಳು.

ಆ ಕ್ಷಣಕ್ಕೆ ಅನಾಮಧೇಯ ಕೈಯೊಂದು ಹಿರಿಗೆಬೋರನ ಜ್ಞಾನ ಪರಿಧಿಯ ಮೇಲೆ ಅಗೋಚರ ಪರದೆಯನ್ನೆಳೆದು ಬಿಡುತ್ತಿತ್ತು. ಅವರಿಗೆ ಗೊತ್ತಿದ್ದದ್ದು ಹೆಚ್ಚೇನೂ ಇರಲಿಲ್ಲವಾದ್ದರಿಂದ ಅಲ್ಲಿ ಸಣ್ಣ ಪರದೆ ಎಳೆದರೆ ಸಾಕಾಗುತ್ತಿತ್ತು.

ನಂತರ ಗೆಬೋರನಿಗೆ ತನ್ನ ತಲೆಯೊಳಗೆ ಕತ್ತಲೆ, ಶೀತಲತೆ, ಖಾಲೀತನ ಎಲ್ಲವೂ ಬಂದು ಸೇರಿಕೊಂಡಂತೆ ಭಾಸವಾಗುತ್ತಿತ್ತು. ಸೀಮೆ ಸುಣ್ಣ ಕೈಯಲ್ಲೇ ಚೂರಾಗುತ್ತಿತ್ತು. ಅದರಲ್ಲೇನೂ ಆಶ್ಚರ್ಯವಿಲ್ಲ ಬಿಡಿ.

ಶುಭ್ರವಾಗಿ ಬಂದಿದ್ದ ಸ್ಲಾವ್ಕಾ ಮಾರಿನ್ಕೋವಾ ತನ್ನ ಪ್ರಶ್ನೆಯನ್ನು ಅವನ ಮುಂದೆ ಒಡ್ಡುತ್ತಿದ್ದಳು. 'ಅನೀಕಾಳ ಬ್ಯಾಂಕ್ ಖಾತೆಯಲ್ಲಿ 50 ಕ್ರೌನ್‌ಗಳಿದ್ದುವು. ಅವಳ ತಾತ ಅವಳಿಗೆ 40 ಕ್ರೌನ್‌ಗಳನ್ನು ಕೊಟ್ಟ. ಅನೀಕಾ ಅದನ್ನೂ ಖಾತೆಗೆ ಹಾಕಿದಳು. ಈಗ ಅವಳ ಖಾತೇಲಿ ಎಷ್ಟು ದುಡ್ಡಿದೆ?'

"ಅದನ್ನು ಅವನ ಖಾತೆಗೆ ಹಾಕಿದ್ದು ಯಾವಾಗ?' ಹಿರಿ ಗೆಬೋರ್ ಕೇಳಿದ. ಸ್ಲಾವ್ಕಾ ಮಾರಿನ್ಕೋವಾ ಕೋಪದಿಂದ ಉತ್ತರಿಸಿದಳು– 'ಗೆಬೋರ್, ಸುಮ್ನೆ ಸಮಯ ಹಾಳು ಮಾಡಬೇಡ. ಅವಳು ಯಾವಾಗ ದುಡ್ಡು ಹಾಕಿದ್ರೇನು? ಹೇಳಿದ ಲೆಕ್ಕ ಮಾಡು ಅಷ್ಟೇ.'

ಹಿರಿಗೆಬೋರ್ ಆಲೋಚಿಸತೊಡಗಿದ. ಅನೀಕಾಳ ತಾತ ಇನ್ನೂ ಬದುಕಿದ್ದಾನೆಂದರೆ ಅವಳಿನ್ನೂ ಚಿಕ್ಕವಳೇ ಆಗಿರಬೇಕು. ಜತೇಗೆ ಅವಳಿಗೆ ನಲವತ್ತು ಕ್ರೌನ್ ಕೊಟ್ಟಿದ್ದಾನೆಂದರೆ ಅವಳು ನೋಡೊಕ್ಕೂ ಚೆನ್ನಾಗಿಯೇ ಇರ್ಬೇಕು.

ಕೋಶಿಟ್ಸ್‌ನಲ್ಲಿ ತನಗೆ ಪರಿಚಯವಿದ್ದ ಅನೀಕಾ ಎಂಬ ಹುಡುಗಿಯ ನೆನಪು ಗೆಬೋರನನ್ನಾವರಿಸಿತು. ಅವಳು ನೊಶೆಲ್ಸ್ ಎಂಬ ಮಂತ್ರವಾದಿ ಪುರೋಹಿತನ ಹತ್ತಿರ ಕೆಲಸಕ್ಕಿದ್ದಳು. ಅವಳು ಯಹೂದ್ಯರ ಮತಕ್ಕೆ ಮತಾಂತರಗೊಂಡ ಮೇಲೆ ರುಚಿಕರವಾದ ವಾಲ್ನಟ್ ಕ್ಯಾಂಡಿ ಮಾಡುವುದನ್ನು ಕಲಿತಿದ್ದಳು. ಅದರ ಹೆಸರೇನು? ಹಾಂ. ಅದನ್ನು ಮಕಾಗಿಗಿ ಎಂದು ಕರೀತಾ ಇದ್ದರು. ಗೆಬೋರನಿಗೆ ಇನ್ನೂ ನೆನಪುಗಳು ಬಂದುವು. ಅವಳು ಅವನಿಗೆ ಹಿಂದಿನ ಬಾಗಿಲಿನಿಂದ ಆಹ್ವಾನವಿತ್ತು ಮಕಾಗಿಗಿ ಕೊಟ್ಟು ಪ್ರಶ್ನಿಸುತ್ತಿದ್ದುದು ನೆನಪಾಯಿತು– 'ನಾನು ಯಹೂದ್ಯ ಮತದವ್ಳು ಅಂದ್ರೆ ನಿಂಗೇನೂ ಅನ್ಸೋದಿಲ್ವೇ?'

ನಂತರ ಹಿರಿ ಗೆಬೋರ ಮಕಾಗಿಗಿಯ ರುಚಿಯನ್ನು ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದ.

'ಗೆಬೋರ್.. ದಯವಿಟ್ಟು ಹಾಗೆ ಮೈಮರೆತು ನಿಂತ್ಕೋಬೇಡ' ಸ್ಲಾವ್ಕಾ ಮಾರಿನ್ಕೋವಾ ಅವನನ್ನು ವಾಸ್ತವಕ್ಕೆ ಎಳೆದು ತರುತ್ತಿದ್ದಳು. 'ಅನೀಕಾಳ ಖಾತೇಲಿ 50 ಕ್ರೌನ್‌ಗಳಿದ್ದುವು. ಅವಳ ತಾತ ಅವಳಿಗೆ ಇನ್ನೂ ನಲವತ್ತು ಕ್ರೌನ್ ಕೊಟ್ಟ. ಸರೀನಾ?.... 50, 40 ಕೂಡಿದ್ರೆ ಎಷ್ಟು?'

ಮಿಕ್ಕ ವಿದ್ಯಾವಂತ ಜಿಪ್ಸಿಗಳು, ಮತ್ತು ಕಿರಿ ಗೆಬೋರ್ ತಾವು ಕುಳಿತಲ್ಲಿಂದಲೇ ಪಿಸುಗುಟ್ಟಿದರು.

ಅಧ್ಯಾಪಕಿ ಆವನಿಗೆ ಆದೇಶ ಕೊಟ್ಟಳು- 'ಕಿರಿ ಗೆಬೋರ್ ಉತ್ತರ ಏನೂಂತ್ನೋದ ನ್ನ ಅವನಿಗೆ ಹೇಳ್ಬೇಡ. ಹಿರಿ ಗೆಬೋರ್, ನಿಂಗೆ ನಾಚ್ಕೆ ಆಗೊಲ್ವಾ ?'

ಕಪ್ಪು ಹಲಗೆಯ ಬಳಿ ನಿಂತಿದ್ದ ಸ್ಥೂಲಕಾಯದ ವ್ಯಕ್ತಿ ಇದ್ದಕ್ಕಿದ್ದ ಹಾಗೆ ಒಂದು ಕರುಣಾಜನಕ ನಗೆ ಬೀರಿದ. ಮತ್ತೆ ಎಂದಿನಂತೆಯೇ ಆಯಿತು. ಹಿರಿ ಗೆಬೋರ್ ತಲೆ ತಗ್ಗಿಸಿ ತನ್ನ ಸ್ಥಾನಕ್ಕೆ ವಾಪಸಾದ. ಸ್ಲಾವ್ಕಾ ಮಾರಿನ್ಕೋವಾ ಜೋರಾಗಿ ಹೇಳಿದಳು- 'ಸರಿ. ಹಿರಿ ಗೆಬೋರ್‌ಗೆ ಗೊತ್ತಿಲ್ಲ.... ಈಗ, ಕಿರಿ ಗೆಬೋರ್?'

ಆ ಕ್ಷಣಕ್ಕೆ ಹಿರಿ ಗೆಬೋರನಿಗೆ ತನ್ನ ಸೋಲಿನ ಕಹಿ ಮರೆತುಹೋಯಿತು. ಬೆರಗಿನ ಕಂಗಳೊಂದಿಗೆ ಕಿರಿ ಗೆಬೋರನ ಗೆಲುವಿನ ಕೈಗಳು ಬಿಳಿಯ ಸೀಮೆಸುಣ್ಣವನ್ನು ಕಪ್ಪು ಹಲಗೆಯ ಮೇಲೆ ಚಾಕ ಚಕ್ಯತೆಯಿಂದ, ಹುರುಪಿನಿಂದ ಲಘುವಾಗಿ ಆಡಿಸುತ್ತಿದ್ದುದನ್ನು ನೋಡಿದ. ಒಂದೇ ಕ್ಷಣದಲ್ಲಿ ಎಲ್ಲರಿಗೂ ಉತ್ತರ ಮನವರಿಕೆ ಆಗಿತ್ತು. ಅನೀಕಾಳ ಬಳಿ 50 ಕ್ರಾನ್‌ಗಳಿದ್ದು ಅವಳ ತಾತ ಅವಳಿಗೆ 40 ಕ್ರಾನ್ ಕೊಟ್ಟರೆ ಸಹಜವಾಗಿ ಅವಳ ಹತ್ತಿರ........

ಹಿರಿ ಗೆಬೋರ್ ಹೆಮ್ಮೆಯಿಂದ ನೋಡಿದ. ಎಷ್ಟಾದರೂ ಇವನೂ ಲಕಟೂಸ್ ವಂಶಸ್ಥನಲ್ಲವೇ ! ಇವನೂ ಒಂದು ದಿನ ಮಹಾ ಬುದ್ಧಿಜೀವಿಯಾಗುತ್ತಾನೆ. ಹಿರಿ ಗೆಬೋರನ ಕಲ್ಪನೆಯಲ್ಲಿ ಮುದಿ ಟಿರೆಬಾ ಬೋರ್ಡಿನ ಬಳಿ ನಿಂತಿರುವ, ಮೇಜಿನ ಹಿಂದೆ ಗೆಬೋರ್ ಲಕಟೂಸ್ (ಕಿರಿಯ) ಕುಳಿತು ಪಾಠಮಾಡುತ್ತಿರುವ ಚಿತ್ರ ಮೂಡಿ ಬಂತು.

'ಕಲಿಯಪ್ಪಾ ಟಿರೆಬಾ ಕಲಿ' ಮುದಿಯನಿಗಾತ ಮೃದುವಾಗಿ ಹೇಳಿದ– 'ಮ್ಯಾಕ್ಸ್ ಎಂಜಲ್ಸ್ ಈ ಮಾತು ಹೇಳಿದ್ದಾನೆ'

ಆನಂತರ ಕಿರಿ ಗೆಬೋರ್ ಮತ್ತೆ ತನ್ನ ಬೆಂಚಿನಲ್ಲಿ ಬಂದು ಕುಳಿತು ತನ್ನ ತಂದೆಯತ್ತ ನೋಡಿದ. ಆಹಾ ಆ ನೋಟ !....ಎಂಥ ನೋಟ....!

ಮಗನೆದುರಿಗೆ ತಂದೆಯ ಮುಖ ಕೆಂಪೇರಿತು. ಮಗ ಮುಗುಳ್ನಕ್ಕ. ಎಲ್ಲರೂ ಮಗ ನಕ್ಕಿದ್ದನ್ನೂ ತಂದೆ ತಲೆ ತಗ್ಗಿಸಿದ್ದನ್ನೂ ನೋಡಿದರು.

ಹಿಂದಿನ ಸಾಲುಗಳಲ್ಲಿ ಸ್ವಲ್ಪ ಹೊತ್ತು ಚಡಪಡಿಕೆಯ ಶಬ್ದ ಇರುತ್ತಿತ್ತು. ಆನಂ

ತರ ಮೌನ.. ತಡೆಯಲಸಾಧ್ಯವಾದ ಮೌನ.

ಈ ಇಬ್ಬರಲ್ಲಿ ನಿಜವಾಗಿ ಹಿರಿಯನಾರು ? ಕಿರಿಯನಾರು ?

ನಂತರ ಒಂದು ದಿನ ಹಿರಿ ಗೆಬೋರನ ಚಿತ್ರವನ್ನು ಒಸ್ಟ್ರಾವಾದ ಅತೀ ದೊಡ್ಡ ಅಂಗಡಿಯ ಗಾಜಿನ ಷೋಕೇಸಿನಲ್ಲಿ ಪ್ರದರ್ಶಿಸಲಾಯಿತು. ವಾರ್ತಾ ಪತ್ರಿಕೆಗಳು 'ಕಾಮ್ರೇಡ್ ಲಕಟೂಸ್ ಅವರೊಂದಿಗೆ ಮಾತುಕತೆ' ಎಂಬ ಶೀರ್ಷಿಕೆಯಡಿ ಅವನ ಸಂದರ್ಶನವನ್ನು ಪ್ರಕಟಿಸಿದುವು.

....ಕಾಮ್ರೇಡ್ ಲಕಟೂಸ್ ನಮ್ಮನ್ನೆಲ್ಲಾ ತಮ್ಮ ಬೆಚ್ಚನೆಯ ಮನೆಯೊಳಕ್ಕೆ ಆಹ್ವಾನಿಸಿದ್ದರು ಅವರ ಮೇಜಿನ ಮೇಲೆ ಹೆಚ್ಚಾಗಿ ಖಾಲಿ ಸ್ಥಳ ಇರಲಿಲ್ಲ. ಅದರ ಮೇಲೆಲ್ಲಾ ತಾಂತ್ರಿಕ ಪುಸ್ತಕಗಳು, ಪ್ರಾಂತೀಯ ಕಾರ್ಮಿಕ ಸಂಘಟನೆಯವರು ಕೊಟ್ಟಿದ್ದ ಮಾರ್ಕ್ಸಿಸಂ ಮತ್ತು ಲೆನಿನಿಸಂ ಬಗ್ಗೆ ಕೆಲವು ಉತ್ತಮ ಪುಸ್ತಕಗಳು, ಮತ್ತು ಅವರು ತಮ್ಮ ಬಿಡುವಿನ ಸಮಯದಲ್ಲಿ ತಮ್ಮ ಕೈಗಳಿಂದಲೇ ಕೊರೆದು ಮಾಡಿದ್ದ ಚಿತ್ತಾಕರ್ಷಕವಾದ ಟೇಬಲ್ ಲ್ಯಾಂಪು, ಇತ್ಯಾದಿಗಳು ಇದ್ದುವು. ಎಷ್ಟು ಬಾರಿ ಆ ದೀಪ ಕಾಮ್ರೇಡ್ ಲಕಟೂಸರ ಮೇಜನ್ನು ರಾತ್ರಿಯಿಡೀ ಬೆಳಗಿಸಿರಬಹುದು ? ಲಕಟೂಸ್ ತಮ್ಮ ಸಂಜೆಯನ್ನು ಓದಿಗೆಂದೇ ಪ್ರತ್ಯೇಕಿಸಿಕೊಂಡಿದ್ದಾರೆ. ನಾವು ಅಲ್ಲಿಗೆ ಹೋದಾಗ, ಅವರು ತಮ್ಮ ಶಾಲೆಯ ಪಾಠಗಳನ್ನೇ ಓದುತ್ತಿದ್ದರು. ಅಷ್ಟೇ ಅಲ್ಲದೇ ಅನಕ್ಷರಸ್ಥರಿಗಾಗಿ ತೆರೆದ ಶಾಲೆಯಲ್ಲಿ ತಾವು ಅಭ್ಯಾಸ ಮಾಡುತ್ತಿರುವ ವಿಷಯವನ್ನೂ ಒಪ್ಪಿಕೊಂಡರು. ನಾವು ಅವರ ಕೆಲಸದ ಬಗ್ಗೆ ಕೇಳಿದಾಗ– 'ಎಲ್ಲವೂ ಯೋಜನೆಯನ್ವಯ ನಡೆಯುತ್ತಿದೆ. ಖಂಡಿತವಾಗಿ ನಡೆಯುತ್ತೆ' ಎಂದು ವಿನಯದಿಂದ ಹೇಳಿದರು. ಕಾಮ್ರೇಡ್ ಟಿರೆಬಾರ ಗುಂಪು ಪೂರ್ವನಿರ್ಧಾರಿತ ಮಟ್ಟಕ್ಕಿಂತ ಶೇಕಡ 160 ಕಡಿಮೆ ಅಂಶದಲ್ಲಿರುವುದನ್ನು ಮಾತ್ರ ಅವರು ನಮಗೆ ಹೇಳಲೇ ಇಲ್ಲ........

ಹಿರಿ ಗೆಬೋರ್ ಎಂದರೇನು ಸಾಮಾನ್ಯನೇ ? ಹಾಗಾದರೆ ಕಿರಿ ಗೆಬೋರ್ ?

ಮನೆಯಲ್ಲಿ ಕಿರಿ ಗೆಬೋರನ ಬಳಿ ಒಂದು ಹರಕಲು ಬೊಂಬೆಯಿತ್ತು. ಅವನು ಯಾವಾಗಲೂ ಅದರೊಂದಿಗೆ ಗುಪ್ತವಾಗಿ ಆಡುತ್ತಿದ್ದ. ಅದನ್ನವನು ಲಾಕೋಸ್ ಎಂದು ಕರೆಯುತ್ತಿದ್ದ. ಕಾರಣ ಆ ಬೊಂಬೆಯನ್ನು ಜಾಕು ಬೋವಿಸ್‌ನಿಂದ ತರಲಾಗಿತ್ತು. ಆ ಬೊಂಬೆಯನ್ನು ಅಲ್ಲೇ ಸ್ಥಳದಲ್ಲೇ ಹೊಲೆದು, ಹತ್ತಿ ತುರುಕಿ ಎರ್ಜಿಕಾ ಲಾಕಾಟೋಸಾವಾ ತಯಾರು ಮಾಡಿದ್ದಳು. ಅವಳದೂ ಒಂದು ಕತೆ.

ಅವಳಿಗೆ ಜೀವನದಿಂದ ಎಷ್ಟು ಅಲ್ಪ ಕಾಣಿಕೆ ಸಿಕ್ಕಿತ್ತೆಂದರೆ, ಅವಳು ಎಂದೂ ಒಂದು ಮಾತನ್ನೂ ಆಡದೇ ಸರಳವಾಗಿ, ಸ್ವಯಂ ಪ್ರೇರಿತಳಾಗಿ ಜೀವನವನ್ನು ಆಕೆ ತ್ಯಾಗ ಮಾಡಿಬಿಟ್ಟಿದ್ದಳು.

ಹಿರಿ ಗೆಬೋರ್ ಈ ಎಲ್ಲದರ ಬಗೆಗೂ ಯೋಚಿಸಿದ. ಜಾಕುಬೋವಿಸ್ ಹತ್ತಿರ ಕಾಡಿನ ತಮ್ಮ ಮನೆಯಲ್ಲಿ ತನಗಾಗಿ ಕಿರಿ ಗೆಬೋರ್ ಕಾದಿದ್ದದ್ದು. ಸೂರಿನ ಮೇಲೆ ನೊಣಗಳನ್ನು ನೋಡಿ, ಅವು ತಲೆಕೆಳಗಾಗಿ ನಡೆದಾಡುತ್ತಿದ್ದವೆಂದು ಅವ ರಿಬ್ಬರೂ ನಕ್ಕಿದ್ದದ್ದು. ಎಲೆಕೋಸಿನ ಸಾರನ್ನೂ ಬೇಯಿಸಿದ ಬಟಾಟೆಗಳನ್ನೂ ಹೇಗೆ ತಿನ್ನಬೇಕೆಂಬುದರ ಬಗ್ಗೆ ಯೋಚಿಸದೇ ಆರಾಮವಾಗಿ ಇರುತ್ತಿದ್ದುದನ್ನೂ, ಎಲ್ಲವನ್ನೂ ನೆನಪಿಸಿಕೊಂಡ. ಆಗ ಹಿರಿ ಗೆಬೋರ್ ನಿಜವಾಗಿಯೂ ಹಿರಿಯವನಾ ಗಿದ್ದ. ಕಿರಿ ಗೆಬೋರ್ ನೆಲದ ಮೇಲೆ ನಿಂತು ತಲೆಯೆತ್ತಿ ಅವನತ್ತ ನೋಡುತ್ತಿದ್ದ. ಅವನ ಪಿತೃಬುದ್ಧಿ ಅನಂತವಾಗಿದ್ದು ಅದರ ವೈಭವ ಚರ್ಚಾತೀತವಾಗಿತ್ತು. ಕೆನ್ನೆ ಗೊಂದು ಏಟು ಬಿಗಿದರೆ ಅದು ನಿಜವಾಗಿ ಏಟೇ ಆಗಿರುತ್ತಿತ್ತು. ಕೆನ್ನೆ ಸವರಿದರೆ ಅದೂ ಸಹಜವಾಗಿಯೇ ಇರುತ್ತಿತ್ತು. ಏಕೆಂದರೆ ಸಹಜವಾಗಿರುವುದೇ ಸತ್ಯ. ಯಾವುದೇ ವಿಷಯ ಅದರ ಸಹಜತೆ ಕಳೆದುಕೊಂಡರೆ ಅದು ತಾನೇತಾನಾಗಿ ಕುಸಿಯತೊಡಗುತ್ತದೆ.

ಹಿರಿ ಗೆಬೋರನಿಗೆ ಇದ್ದಕ್ಕಿದ್ದಂತೆ ಹೃದಯ ಹಿಂಡಿದಂತಾಯಿತು. ತನ್ನ ಎದೆಯ ಮೇಲೆ ಕೈಇಟ್ಟುಕೊಂಡು ನೆಲವನ್ನೇ ನೋಡುತ್ತಿದ್ದ. ಇಬ್ಬರೂ ಆ ಕ್ಷಣಕ್ಕೆ ಒಂದೇ ವಿಷಯವನ್ನು ನೆನಪುಮಾಡಿಕೊಳ್ಳಲು ಯತ್ನಿಸುತ್ತಿದ್ದರು. ಆದರೆ ಇಬ್ಬ ರೂ ಬೇರೆ ಬೇರೆ ರೀತಿಯಲ್ಲಿ ಅದನ್ನು ನೆನಪಿಸಿಕೊಂಡರು.

ಸಂಜೆಗೆ ಹಿರಿ ಗೆಬೋರ್ ಗೋಲಾಷ್ ಅಥವಾ ಪಾಪ್ರಿಕಾಷ್ ಬೇಯಿಸುತ್ತಿದ್ದ. ಇಲ್ಲವೇ ಕೋಳಿ ಸಾರು ಮಾಡುತ್ತಿದ್ದ. ಈ ಅಡುಗೆ ಇಬ್ಬರಿಗೂ ಹೊಂದುತ್ತಿತ್ತು. ಹಿರಿಯನಿಗೆ ಅದನ್ನು ಮಾಡುವ ವಿಧಾನ ತಿಳಿದಿತ್ತು. ಕಿರಿಯನಿಗದು ಇಷ್ಟವಿತ್ತು. ಆ ನಂತರ ಹಿರಿ ಗೆಬೋರ್ ಮೇಜನ್ನು ಸ್ವಚ್ಛ ಮಾಡುತ್ತಿದ್ದ. ಇಬ್ಬರೂ ಸೇರಿ ಪಾತ್ರೆ ತೊಳೆಯುತ್ತಿದ್ದರು. ನಂತರ ಜಾಕುಬೋವಿಸ್‌ನ ಜಿಪ್ಸಿ ಸಂಗೀತಗಾರ ರಚಿಸಿದ್ದ ಹಾಡನ್ನು ಹಾಡುತ್ತಿದ್ದರು. ಸಂಗೀತಗಾರ ತನ್ನ ಚರ್ಮದ ಬೂಟು ಪ್ಯಾಂಟು ಕೋಟು, ಬಿಳಿ ಅಂಗಿ ಎಲ್ಲವನ್ನೂ ಮಾರಿ ಕುಡಿದರೂ, ತನ್ನ ಪಿಟೀಲ ನ್ನು ಮಾತ್ರ ಹೇಗೆ ತನ್ನಲ್ಲೇ ಇರಿಸಿಕೊಂಡ ಎಂದು ಆ ಹಾಡು ಹೇಳುತ್ತಿತ್ತು.

'ನಿಂಗೆ ಆ ಸಂಗೀತಗಾರನ ಪರಿಚಯ ಇತ್ತಾ ಅಪ್ಪಾ ?' ನೂರಾರು ಬಾರಿ ಕೇಳಿದ್ದ

ಪ್ರಶ್ನೆಯನ್ನೇ ಕಿರಿ ಗೆಬೋರ್ ಕೇಳಿದ.

'ಮತ್ತೆ?! ಖಂಡಿತವಾಗೂ ಅವನ ಪರಿಚಯ ಇತ್ತು. ನಾವು ಒಟ್ಟಿಗೆ ಕೂಡಿದಾಗ ಮೊದಲು ನಾನು ಅವನಿಗೊಂದಿಷ್ಟು ಶರಾಬು ಕೊಡಿಸುತ್ತಾ ಇದ್ದೆ. ಆಮೇಲೆ ಅವ ಕೊಡಿಸ್ತಾ ಇದ್ದ. ಅಲ್ಲಿ ತೂಗು ಹಾಕಿರೋ ಪಿಟೀಲು ಅವಂದೇ' ಹಿರಿ ಗೆಬೋರ್ ಉತ್ತರಿಸಿದ.

ಕಿರಿ ಗೆಬೋರ್ ಮತ್ತೆ ಪ್ರಶ್ನೆ ಕೇಳಲೇ ಇಲ್ಲ. 'ಅಪ್ಪಾ ನಾವು ನಮ್ಮ ಪಾಠ ಓದ್ಕೋಬೇಕಲ್ವಾ? ಎಂದಷ್ಟೇ ಹೇಳಿದ.

ಅಯ್! ಅಪ್ಪಾ ನಾವು ನಮ್ಮ ಪಾಠ ಓದ್ಕೋಬೇಕಲ್ವಾ?! ಯಾರು ತಾನೇ ಈ ಥರದ ಮಾತುಗಳನ್ನು ಕೇಳಿದ್ದಾರೆ?! ಇದೂ ಒಂದು ವಿಚಿತ್ರ ಪ್ರಪಂಚ.

ಬಿಸಿ ಪಾಯಸವನ್ನ ಕುಡಿಯಲು ಹಿಂದುಮುಂದು ನೋಡುವವರ ಹಾಗೆ ಹಿರಿ ಗೆಬೋರ್ ಕಿರುಗುಟ್ಟುತ್ತಿದ್ದ ನೆಲದ ಮೇಲೆ ನಿಧಾನವಾಗಿ ಹೆಜ್ಜೆ ಹಾಕಲು ಪ್ರಾರಂಭಿಸಿದ. ಕೈಯಲ್ಲಿ ತಯಾರಿಸಿದ ಲ್ಯಾಂಪಿನ ಬೆಳಕಿನಲ್ಲಿ ಕಿರಿ ಗೆಬೋರ್ ತನ್ನ ಪಾಠಗಳನ್ನು ಬರೆದುಕೊಳ್ಳುತ್ತಿದ್ದ.

ಈಗ ಅವನು ಬರೆದದ್ದನ್ನ ಭಟ್ಟಿ ಇಳಿಸಲು ನಾನು ಅನುಮತಿ ಕೇಳ್ತೀನಿ. ಹಿರಿ ಗೆಬೋರ್ ಮನದಲ್ಲೇ ಯೋಚಿಸಿದ. ಅಥವಾ ಅವನಿಗೆ ಹೇಳೋದೇ ಇಲ್ಲ. ನೇರವಾಗಿ ನಾನೇ ಭಟ್ಟಿ ಇಳಿಸ್ತೀನಿ. ಅವನಿಗ್ಯಾಕೆ ಹೇಳ್ಬೇಕು?- ಅವನಿಗೆ ಅನ್ನ ಹಾಕೋರು ಯಾರು? ಬೆಳೆಸ್ತಾ ಇರೋದು ಯಾರು? ಭಟ್ಟಿ ಇಳಿಸೋ ಅವಶ್ಯಕತೆ ಇಲ್ದೆ ಇದ್ದಿದ್ರೆ ನಾನು ಹಾಗೆ ಮಾಡ್ತಿದ್ನೇ? ಈ ಪಾಠ ಬರೆಯೋಕ್ಕೆ ನಂಗೇನು ಇಷ್ಟ ಇದೆಯೇ?.... ಇಲ್ಲ! –ನನಗೆ....

ಮೊದಮೊದಲು ಎಲ್ಲವೂ ಚೆನ್ನಾಗಿಯೇ ಇತ್ತು. ಹಿರಿ ಗೆಬೋರ್ ಕಿರಿ ಗೆಬೋರನ ಪುಸ್ತಕವನ್ನು ಕಸಿದುಕೊಂಡು ಅದರಲ್ಲಿದ್ದುದನ್ನೆಲ್ಲಾ ಅನಾಯಾಸವಾಗಿ ನಗೆಯೊಂದಿಗೆ ತನ್ನ ಪುಸ್ತಕದಲ್ಲಿ ಇಳಿಸಿಕೊಂಡು ಬಿಟ್ಟ. ಆದರೆ ಮುಂದೆ?

'ನಿಂಗೆ ಇನ್ನೂ ಸ್ವಲ್ಪ ಹುಳಿ ಬೇಕಾ?' ಅವ ಕೇಳಿದ.

ಮನಸ್ಸಿನಲ್ಲಿ ಈ ಪರಿಸ್ಥಿತಿ ಯಾವ ಶತ್ರುವಿಗೂ ಬರಬಾರದು ಎಂದು ಕೊಂಡ-

ಮೊದಲು ಆ ಸಣಕಲು ಬೆನ್ನು ಪುಸ್ತಕದ ಮೇಲೆ ಬಗ್ಗಿರುವುದನ್ನು ನೋಡಬೇಕು ಅವರ ಹಿಂದೆಯೇ ಭಿಕ್ಷುಕನ ಹಾಗೆ ಸಿಂತಿರಬೇಕು. ನಂತರ ಹೊಸಬನ ಮನೆಯ ಬಾಗಿಲನ್ನು ತಟ್ಟುವಂತೆ ಮೃದುವಾಗಿ, ಅದೂ ಭಯದಿಂದ ಅವನ ಭುಜದ ಮೇಲೆ ತಟ್ಟಿ ಕೇಳಬೇಕು. 'ಗೆಬೋರ್, ಒಳ್ಳೆಯ ಸ್ನೇಹಿತನ ಹಾಗೆ ನೀನ್ಯಾಕೆ ನಿಮ್ಮಪ್ಪಂಗೆ ನಿನ್ನ ಪುಸ್ತಕ ಕೊಡಬಾರ್ದು?' ಛಿ! ಏನಿದು ತನ್ನ ಗತಿ, ಛೆ! ಛೆ!! ಮುಂದೊಂದು ದಿನ ಕಿರಿ ಗೆಬೋರ್ ಹೇಳಿಯೇ ಬಿಟ್ಟ 'ಅಪ್ಪಾ ಭಟ್ಟಿ ಇಳಿಸೋದು ಮೋಸಾಂತ ಸ್ಲಾವ್ಸಾ ಮಾರಿನ್ಸ್ಕೋವಾ ಹೇಳಿದ್ಲು. ಈ ರೀತಿ ಮಾಡೋದಕ್ಕೆ ನಿಂಗೆ ನಾಚಿಕೆ ಆಗ್ಬೇಕಂತೆ. ನಿಂಗಾಗದಿದ್ರೆ ನಂಗಂತೂ ಖಂಡಿತ ನಾಚಿಕೆ ಆಗ್ಬೇಕಂತೆ ಗೊತ್ತಾ?'

'ಅವಳು ನಿನ್ಹತ್ರ ಹಾಗಂತ ಹೇಳಿದ್ಲಾ?' ಹಿರಿ ಗೆಬೋರ್ ಉರಿಯುತ್ತಾ ಕೇಳಿದ. "ಅದೂ ಕಾಪ್ರೇಡ್ ಮಾರಿನ್ಸ್ಕೋವಾ? ಅವಳೇನು ನಿನ್ನ ಪಕ್ಕಕ್ಕೆ ಕರ ಕೊಂಡು ಹೋಗಿ ಹೇಳಿದ್ಲಾ ಅಥವಾ?....'

'ಇಲ್ಲ, ತರಗತೀಲಿ ಎಲ್ರೂ ಕೂತಿರೋವಾಗ ಮುಂದೇನೇ ಹೇಳಿದ್ಲಲ್ಲಾ. ಆಗ ನೀನೂ ಅಲ್ಲೇ ಇದ್ಯಲ್ಲಪ್ಪಾ!'

'ಮಂಗಮುಂಡೇದೇ, ನೀನೇ ಅವಳ ಹತ್ರ ಏನೋ ಒದರಿರ್ಬೇಕು.' ಹಿರಿಗೆಬೋರ್ ಕೋಪದಿಂದ ನಿರ್ಣಯವಿತ್ತ. 'ಇಲ್ದಿದ್ರೆ ನಾನು ನಿನ್ನಿಂದ ಇಳಿಸ್ತೀನೋ ಅಥವಾ ನೀನೇ ನನ್ನಿಂದ ಕಾಪಿ ಹೊಡೀತೀಯೋ ಅವಳಿಗೆ ಹೇಗೆ ಗೊತ್ತಾಗಬೇಕು? ನೀನು ಈವತ್ತು ನಿಜ ಹೇಳ್ಲೇಬೇಕು. ಹೇಳು– ನೀನೇ ಒದರಿದ್ಯೋ ಇಲ್ವೋ. ನನ್ನ ಮಗ ಎಂಥಾವ್ನೂಂತ ನಂಗೆ ಗೊತ್ತಾಗ್ಲೇಬೇಕು. ಮಾತಾಡು. ಯಾಕೆ ಸುಮ್ನಿದ್ದೀಯ– ನೀನೇನು ಮಫ್ತಿಲಿರೋ ಪೋಲೀಸನೋನ್ನಾ? ಶಾಲೇಲಿ ಯಾಕೆ ತೆಪ್ಪಗಿರ್ಲಿಲ್ಲಾ? ಒಪ್ಕೋ– 'ಅಪ್ಪಾ ನಾನೊಬ್ಬ ಇಲೀಂತ' ಒಪ್ಕೋ ನಾನೂ ನಿನ್ನ ಕೆನ್ನೇಗೊಂದು ಬಿಗೀತೀನಿ ಅಷ್ಟೇ ಅಲ್ಲಿಗದು ಮುಗಿಯುತ್ತೆ."

ಹಿರಿಗೆಬೋರ್ ಇಷ್ಟೆಲ್ಲಾ ಹೇಳುತ್ತಿದ್ದಂತೆ, ತನ್ನ ಮಗನ ಕಂಗಳಲ್ಲಿ ಯಾವಾಗಲೂ ಕಂಡುಬರುವ ಹಸಿರು ಕಿಡಿಗಳ ಬದಲಾಗಿ ದುಃಖ ಹೆಚ್ಚಾದಾಗ ಹೊರ ಹೊಮ್ಮುವ, ಕಿಡಿಗಳನ್ನು ತೊಳೆಯಲು ಕಣ್ಣಿಂದ ಬರುವ ವಿಚಿತ್ರ ನೀರಿನ ಎರಡೇ ತೊಟ್ಟುಗಳು ಹೊರಬಂದುವು.

ಅಲ್ಲಿಂದ ಮುಂದೆ ಹಿರಿ ಗೆಬೋರ್ ಕೆಟ್ಟ ಜೀವನವನ್ನು ಸಾಗಿಸಲು ಪ್ರಾರಂಭಿಸಿದ. ದೀಪದ ಬೆಳಕಿನಲ್ಲಿ ಕಂಡುಬಂದ ಪುಟ್ಟ ತಲೆ ಅವನಿಗೆ ಹೊಸದಾಗಿ ಕಂಡಿತು. ಅಸೂಯೆಯಿಂದ ಆ ಕಡೆ ನೋಡಿದ. ಅವನ ಚಡಪಡಿಕೆಗೆ ಅಲ್ಲಿದ್ದ ಯಾವುದಾದರೂ ವಸ್ತುವನ್ನು ಎತ್ತಿ ಆ ತಲೆಯ ಮೇಲೆ ಕುಕ್ಕಬೇಕೆನಿಸಿತು. ಕುರ್ಚಿಯನ್ನು ಒಡೆಯಬೇಕೆನಿಸಿತು. ಅಥವಾ ತನ್ನ ಕೈಯಿಂದ ಸ್ವತಃ ತಯಾರಿಸಿದ ದೀಪವನ್ನು ಚೂರು ಚೂರು ಮಾಡಬೇಕೆನಿಸಿತು. ಅಂತೂ ಹೇಗೋ ತನ್ನ ಚಡಪಡಿಕೆಯನ್ನು ವ್ಯಕ್ತಪಡಿಸಬೇಕಿತ್ತು. ಆದರೆ ವಾಸ್ತವದಲ್ಲಿ ತಾನು ಹಿರಿಯನಾದ ಹಿರಿಗೆಬೋರ್ ಎಂಬುದರ ಅರಿವು ಸ್ವಲ್ಪಮಟ್ಟಿಗೆ ತನ್ನಲ್ಲಿರುವುದರಿಂದ ಹಾಗೆ ಮಾಡಲು ಸಾಧ್ಯವಿಲ್ಲ. ಅವನಿಗೆ ತನ್ನ ಸಣ್ಣತನಕ್ಕೆ ತನ್ನ ಮೇಲೆಯೇ ದ್ವೇಷ ಉಕ್ಕಿತು. ಆ ದಿನ ಅವನು ಚಿಂತಾಕ್ರಾಂತನಾಗಿದ್ದ.

ಕೋಣೆಯಲ್ಲಿ ಬೆಳಕು ಚೆನ್ನಾಗಿ ಹಬ್ಬಿತ್ತು. ಮೌನ ಆವರಿಸಿತ್ತು. ಕಿರಿ ಗೆಬೋರ್ ಓದುತ್ತಿದ್ದ.

'ಏನು ಓದ್ತಾ ಇದೀಯೋ ?' ಹಿರಿಯ ಕೇಳಿದ.

'ಬೆಟ್ಟಗಳ ವಿಷಯ' ಕಿರಿ ಗೆಬೋರ್‌ನ ಉತ್ತರ.

'ಬೆಟ್ಟದ ವಿಷಯಾನಾ ? ಏನು ಬೆಟ್ಟದ ವಿಷಯ ?' ಹಿರಿ ಗೆಬೋರ್ ಅಸೂಯೆಯಿಂದ ಕೇಳಿದ.

'ಬೆಟ್ಟಗಳು ರೂಪುಗೊಳ್ಳೋದು ಹೇಗೇಂತ.'

'ನಿಂಗೆ ಆ ಪುಸ್ತಕ ಎಲ್ಲಿ ಸಿಕ್ತು ?' ಹಿರಿಯ ಪ್ರಶ್ನಿಸಿದ.

'ಶಾಲೆಯ ಗ್ರಂಥಾಲಯದಿಂದ.'

'ಶಾಲೇಲಿ ಗ್ರಂಥಾಲಯನೂ ಇದೆಯಾ ?' ಹಿರಿ ಗೆಬೋರ್ ಆಶ್ಚರ್ಯಪಟ್ಟ.

ಕಿರಿ ಗೆಬೋರ್ ದೈನ್ಯದಿಂದ ಕೇಳಿದ– 'ನನ್ನನ್ನ ಓದೋಕ್ಕೆ ಬಿಡು ಅಪ್ಪಾ – ನೀನೂ ಯಾಕೆ ಓದ್ಬಾರ್ದು ?'

ಆಯ್ !

'ಹುಂ.. ಬೆಟ್ಟಗಳು ಹೇಗೆ ರೂಪುಗೊಂಡದ್ದು ?' ಕೆಲ ಕ್ಷಣಗಳ ನಂತರ ಕೇಳಿದ. 'ಭೂಮಿಯ ಮೇಲ್ಪದರ ಕಾಲಾಂತರದಿಂದ ಬದಲಾಗುತ್ತಾ ಬಂದಿದೆ.' ಕಿರಿ

ಗೆಬೋರ್ ವಿವರಿಸಹತ್ತಿದ– 'ಅದು ಈ ಕ್ಷಣಕ್ಕೂ ಬದಲಾಗ್ತಾ ಇದೆ. ನಮ್ಮ ಮನೆಯ ಕೆಳಗಿನ ಭೂಮಿ ಕೂಡಾ ಬದಲಾವಣೆ ಹೊಂದುತ್ತಿದೆ.'

ಹಿರಿ ಗೆಬೋರನಿಗೆ ಕೋಪ ಬಂತು. 'ನಮ್ಮ ಮನೇ ಕೆಳಗಿನ ಭೂಮಿ ಏನೂ ಬದಲಾಗ್ತಾ ಇಲ್ಲ. ನೀನು ಸುಮ್ನೆ ಈ ಥರದ ಉತ್ತರ ನಂಗೆ ಹೇಳ್ಬೇಡ. ನಿಂಗೆ ಸಾಧ್ಯವಿದ್ರೆ ಪ್ರಾಮಾಣಿಕವಾದ ಉತ್ತರ ಹೇಳು. ಇಲ್ಲಾ ಒಂದು ತೆಗೆದು ಬಿಗಿದಾಂದ್ರೆ ಹಲ್ಲುದುರುತ್ತೆ. ಎಷ್ಟೋ ದಿನದಿಂದ ನಿಂಗೆ ಏಟು ಬೀಳ್ಲೇ ಬೇಕಾಗಿದೆ. ತಂದೆಯಾದೋನು ಪ್ರಶ್ನೆ ಕೇಳ್ದಾಗ, ಮಗು ಉತ್ತರ ಕೊಡಬೇಕು. ಗೊತ್ತಾ ?'

ತನ್ನ ಕಿಡಿಕಾರುವ ಕಂಗಳಿಂದ ಕಿರಿಗೆಬೋರ್ ಅವನತ್ತ ನೋಡಿದ. ದೀಪದ ಬಲ್ಬು ನೇರವಾಗಿ ಅವನ ತಲೆಯ ಮೇಲೆ ಪ್ರಭಾ ವಲಯ ಸೃಷ್ಟಿಸಿದಂತೆ ಉರಿಯುತ್ತಿತ್ತು. ಮಳೆಯ ಹನಿಗಳು ಕಿಟಕಿ ಗಾಜಿನ ಮೇಲೆ ತಮಟೆ ಬಾರಿಸುತ್ತಿದ್ದುವು. ಹಿರಿಗೆಬೋರನ ಹೃದಯದಲ್ಲಿ ಒಂದು ವಿಚಿತ್ರ ಅನುಕಂಪದ ಭಾವನೆ ಜಾಗೃತವಾಯಿತು. ತನ್ನ ಬಗೆಗೇ ಒಂದು ರೀತಿಯ ಅನುಕಂಪ. ಬಿಳಿಯ ಹಿಮದ ಹರಳುಗಳು ನಿಧಾನವಾಗಿ ಭೂಮಿಯ ಮೇಲೆ ಇಳಿದ ಹಾಗೆ ಅನುಕಂಪದ ಭಾವನೆ ತನ್ನ ಹೃದಯದ ಮೇಲೆ ಕುಳಿತುಕೊಳ್ಳತೊಡಗಿತು.

'ಆಹ್ !' ಹಿರಿಗೆಬೋರ್ ತನ್ನನ್ನೇ ಹಳಿದುಕೊಂಡ– 'ನಾನೊಬ್ಬ ಹುಚ್ಚ ಅಲ್ಲಾ ಇವ ಎಂಥ ಬುದ್ಧಿವಂತ ಹುಡುಗ.. ಅವನಿಂದ ನನಗೇಕೆ ಹೊಟ್ಟೇ ಕಿಚ್ಚು. ಅವನನ್ನ ನಾನು ಹೊಡೀಬೇಕಾ ? ನಾನು ಮೂರ್ಖ.. ನನಗೇ ಒಂದೆರಡು ಏಟು ಬಿಟ್ಟರೆ ಎಲ್ಲ ಸರಿಹೋದೀತು.' 'ನೀನು ನಿದ್ದೆ ಮಾಡೊಲ್ವೇನು ?' ಆತ ಕಿರಿಗೆಬೋರನನ್ನು ಕೇಳಿದ.

'ಇಲ್ಲ' ಹುಡುಗ ಉತ್ತರಿಸಿ ಓದು ಮುಂದುವರಿಸಿದ.

ಹಿರಿ ಗೆಬೋರ್ ಶಾಂತವಾಗಿ ಹಾಸಿಕೆಯ ಮೇಲೆ ಕುಳಿತಿದ್ದ. ಅವನಿಗೆ ತಲೆ ಸುತ್ತಿದಂತಾದಾಗ ಮಂಚದ ಅಂಚನ್ನ ಹಿಡಿದುಕೊಂಡ. ಬಹಳ ಪ್ರಯಾಸಪಟ್ಟು ತನ್ನಲ್ಲೇ ಸಂಯಮ ತಂದುಕೊಂಡ. ತನ್ನಲ್ಲಿ 'ಗೆಬೋರ್ ಗೆಬೋರ್' ಎಂದು ಜೋರಾಗಿ ಅರಚಬೇಕೆಂದು ಉಂಟಾದ ತುಡಿತವನ್ನು ತಡೆಯಲು ಯತ್ನಿಸಿದ.

ನಂತರ ಗೋಡೆಯ ಮೇಲೆ ನೇತಾಡುತ್ತಿದ್ದ ಪಿಟೀಲನ್ನು ಗಮನಿಸಿ ತನ್ನಲ್ಲೇ ಆಶ್ಚರ್ಯದ ನಿಟ್ಟುಸಿರೊಂದನ್ನು ಬಿಟ್ಟು 'ಆಹ್' ಎಂದುಕೊಂಡ. ಒಬ್ಬ ಜಿಪ್ಸಿ

ಸಂಗೀತದ ಮೊರೆ ಹೋಗುವುದು ಏಕೆ ? ಏಕೆಂದರೆ ವೈದ್ಯನಾಗಲೀ, ವಕೀಲನಾಗಲೀ, ಶಿಕ್ಷಕನಾಗಲೀ, ಆ ವ್ಯಕ್ತಿಗೆ ಮಾತನಾಡುವುದು ಗೊತ್ತು.- ಜಿಪ್ಸಿಗೆ ಅದು ತಿಳಿದಿಲ್ಲವಾದ ಕಾರಣ ಅವನು ಸಂಗೀತದಲ್ಲಿ ಶರಣು ಹೊಂದುತ್ತಾನೆ- ಪಿಟೀಲು ಬಾರಿಸುತ್ತಾನೆ.

ಹಿರಿ ಗೆಬೋರ್ ನಿಧಾನವಾಗಿ ಕಿರಿ ಗೆಬೋರನ ಬಳಿ ಬಂದ; ಪ್ರತಿಭಟಿಸುವ ಅಣಬೆಯಂತೆ ಅವನ ತಲೆ ಬಲ್ಬಿನ ಪ್ರಭಾವಲಯದಿಂದ ಹೊರಬಂತು. ಇದ್ದಕ್ಕಿದ್ದ ಹಾಗೆ ತನ್ನ ಮಗ ಕಿವಿಗೆ ಝುಮ್ಕಿ ತೊಟ್ಟು ಸುವರ್ಣದ ಹೊಳಪಿಗೆ ತನ್ನ ಸಂಗೀತವನ್ನು ಅರ್ಪಿಸಿಬಿಟ್ಟಂತೆ ಅವನಿಗೆ ಭಾಸವಾಯಿತು. ಗೆಬೋರ್ ಗೆಬೋರ್, ನನ್ನ ಪ್ರೀತಿಯ ಮಗನೇ, ನೋಡು ನಿನ್ನಪ್ಪ ನೋವಿನಲ್ಲಿದ್ದಾನೆ....

ಈ ಎಲ್ಲ ಭಾವನೆಗಳನ್ನೂ ಕಿರಿ ಗೆಬೋರ್ ತನ್ನ ಸಂಗೀತದಲ್ಲಿ ತುಂಬಿದ. ಅಂಟಿನ ಮರದ ಗೋಂದು ರಕ್ತದಂತೆ ಹೊರಬಂದು ಮಾಯವಾದ ಹಾಗೆ ಅಲ್ಲಿನ ಕೊಳವೂ ಅದೃಶ್ಯವಾದಂತೆ ಅನ್ನಿಸಿತು. ಕೊಳದ ಬದಿಯ ಕಲ್ಲಿಗೆ ಹಾಗೂ ಜ್ವರದಿಂದ ನರಳುತ್ತಿದ್ದ ಕಿರಿಗೆಬೋರನ ಮಂಚದ ಬಳಿ, ಗುಲಾಬಿ ಹೂಗಳ ಗೊಂಚಲನ್ನು ಇಟ್ಟಂತೆ, ಕಾಡಿನ ಎಲೆಗಳ ಸಂಕೀರ್ಣತೆಯನ್ನೆಲ್ಲಾ ಅತೀ ತೆಳುವಾದ ಈ ಪಿಟೀಲಿನ ತಂತಿಯ ಮೇಲೆ ನುಡಿಸಿದ ಹಾಗೆ; ಏನೇನೋ ಭ್ರಮೆಗಳು ! ಪಿಟೀಲಿನ ತಂತಿ ಎಂದರೇನು ಪ್ರಿಯಾ ?.... ಅದೂ ಯಾವುದೋ ಪ್ರಾಣಿಯ ಕರುಳಷ್ಟೆ !!

ನಿನ್ನ ತಲೆಯ ಮೇಲೆ ಮನುಷ್ಯಾಕೃತಿಯೊಂದು ಎದ್ದು ನಿಂತಿದೆ ! ಆ ಆಕೃತಿಯ ಅಂತರಂಗ ನಡುಗುತ್ತಾ, ತಿರುಗುತ್ತಾ, ಕುಣಿದಾಡುತ್ತಿದೆ. ನೀನಾದರೊ ಆ ವ್ಯಕ್ತಿಗೇ ಬೆನ್ನು ಹಾಕಿ ಕುಳಿತಿದ್ದೀಯ ! ಎಲೈ ಅಣಬೆ ನಿನಗೆ ಓದು ? ! ಓದು ಬೇರೆ ಕೇಡು !!

ಹಿರಿ ಗೆಬೋರ್ ನುಡಿಸಿದ, ನುಡಿಸಿದ, ನುಡಿಸಿಯೇ ನುಡಿಸಿದ. ಅಯ್ ! ಅವನೇನೂ ದೊಡ್ಡ ಸಂಗೀತಗಾರನಲ್ಲ !

ಗೆಬೋರ್ ನನ್ನ ಪುಟ್ಟ ಪುತ್ರ ಗೆಬೋರ್. ಸ್ವಲ್ಪ ಇತ್ತ ತಿರುಗಿ ನೋಡು.

ಕಿರಿ ಗೆಬೋರ್ ಓದಿನಲ್ಲಿ ಮಗ್ನನಾಗಿದ್ದ. ಒಂದೆಡೆ ಸಪಾಟು ನೆಲದ ಪ್ರಾಂತ ಹೇಗೆ ರಚಿತವಾಗಿದೆ. ಅದೇ ಸಮಯಕ್ಕೆ ಬೇರೊಂದೆಡೆ ಭೂಮಿ ಕೊರೆದು ಕೊರಕಲು

ಗಳು ಹೇಗಾಗುತ್ತವೆ. ಭೂಮಿಯ ಮೇಲ್ಪದರ ಬದಿಯಿಂದ ಒತ್ತಲ್ಪಟ್ಟು ಹೇಗೆ ಸುಕ್ಕು ಸುಕ್ಕಾಗಿದೆ. ಅಲ್ಲಲ್ಲಿ ಭೂಮಿ ಬಿರುಕು ಬಿಡುವುದರ ಕಾರಣವೇನು ? ಈ ಬಿರುಕುಗಳು ಭೂಮಿಯ ಪದರದ ಅಡಿಯ ಲಾವಾರಸಕ್ಕೆ ಹೊರಬರಲು ದಾರಿ ಹೇಗೆ ಮಾಡಿಕೊಡುತ್ತವೆ. ಲಾವಾರಸ ಕುದಿಯುವ ಪ್ರಕ್ರಿಯೆ ಏನು ? ಇತ್ಯಾದಿ ಗಳ ಬಗೆಗೆ ಕಿರಿ ಗೆಬೋರ್ ಓದುತ್ತಲೇ ಇದ್ದ.

ಹಿರಿ ಗೆಬೋರ್ ಹೇಳಿಕೊಳ್ಳುವಂತಹ ಸಂಗೀತಗಾರನೇನೂ ಅಲ್ಲ.

'ಅಪ್ಪಾ ಅದನ್ನ ಬಿಡಬಾರ್ದೇ– ಆ ಬಾರಿಸುವಿಕೆ ಕೇಳೊಕ್ಕಾಗಲ್ಲ' ಕಿರಿ ಗೆಬೋರ್ ಹೇಳಿದ.

ಹಿರಿ ಗೆಬೋರ್ ನಡುಗುವ ದನಿಯಲ್ಲಿ ಪ್ರಶ್ನಿಸಿದ– 'ಏನಾದೆ ನೀನು ? ಏನಾದ್ರೂ ಹೇಳಿದ್ಯೇನು ?'

'ನೀನದನ್ನ ಬಾರಿಸಬೇಡಾಂದೆ' ಕಿರಿ ಗೆಬೋರ್ ಉತ್ತರಿಸಿದ.

'ಸರಿ ಬಿಡು ನಿಲ್ಸಿದ್ರಾಯ್ತು' ಹಿರಿ ಗೆಬೋರ್ ಪಿಟೀಲನ್ನು ಅದರ ಪೆಟ್ಟಿಗೆಗೆ ಸೇರಿಸಿದ. ಪೆಟ್ಟಿಗೆಯ ಮುಚ್ಚಳ ಮುಚ್ಚುತ್ತಿದ್ದಾಗ ಅವನಿಗೆ ಎರ್ಜಿಕಾ ಲಕಟೊಸೋವಾಳ ಶವದ ಪೆಟ್ಟಿಗೆ ಮುಚ್ಚುತ್ತಿದ್ದಂತೆ ಭಾಸವಾಯಿತು. ಅವನ ಕೈಗಳು ನಡುಗುತ್ತಿದ್ದುವು.

ಈ ಎಲ್ಲ ಘಟನೆಗಳಿಂದಲೂ ಹಿರಿ ಗೆಬೋರನಿಗೆ ಶಾಲೆಯ ಬಗ್ಗೆ ಕೋಪ ಉಂಟಾಗಲು ಪ್ರಾರಂಭವಾಯಿತು. ಪ್ರತೀ ಚರ್ಯೆಯೂ ಅವನಿಗೆ ಕಿರಿಕಿರಿ ಉಂಟುಮಾಡುತ್ತಿತ್ತು. ಮೇಜಿನ ಮೇಲಿನ ಕಂದು ಬಣ್ಣ, ಸ್ಲಾವ್ಕಾ ಮಾರಿನ್ಸ್ಕೋವಾಳ ಬಟ್ಟೆಯ ಮೇಲಿನ ದೊಡ್ಡ ಕಪ್ಪು ಬಟನ್ಗಳು ಎಲ್ಲವೂ. ಕಡೆಗೆ ಯಾವ ಹಂತಕ್ಕೆ ಈ ಕಿರಿಕಿರಿ ಹೋಯಿತೆಂದರೆ, ತನಗೂ ಮಾಕ್ಸಿಂಗಾರ್ಕಿಗೂ ಒಂದೇ ಬಗೆಯ ಗಡ್ಡವಿದೆ ಎಂದು ಹೆಮ್ಮೆ ಪಡುತ್ತಿದ್ದವನಿಗೆ, ಅಲಂಕಾರದ ರಿಬ್ಬನ್ ಇದ್ದ ಟೋಪಿ ಧರಿಸಿದ್ದ ಯುವ ಮಾಕ್ಸಿಂಗಾರ್ಕಿಯ ಚಿತ್ರವೂ ಕೋಪ ಉಕ್ಕಿಸಲು ಕಾರಣವಾಯಿತು.

ಮೇಜಿನ ಕೆಳಗಿದ್ದ ತನ್ನ ಪಾದಗಳನ್ನೇ ಕೆಲ ಹೊತ್ತು ದಿಟ್ಟಿಸಿದ. ಅವು ನಿಧಾನವಾಗಿ ಚಲಿಸಿದಂತೆ, ಭೂಮಿಯನ್ನು ಹಿಂದೆ ಹಾಕಿದ ರೀತಿ ನೋಡಿ ಬೆರಗಾದ.

ಮನೆಯಲ್ಲಿ ಬೇರಾರಿಗೂ ವರ್ತಿಸುವುದಿಲ್ಲವೆಂಬಂತೆ ತನ್ನಲ್ಲೇ ಸಿಳ್ಳುಹಾಕಲು ಪ್ರಾರಂಭಿಸಿದ.

ಕಿರಿ ಗೆಬೋರ್ ಕಪ್ಪು ಹಲಗೆಯ ಮೇಲೆ ಏನಾದರೂ ಬರೆದು ಎಲ್ಲರಿಂದ ಮೆಚ್ಚುಗೆ ಗಳಿಸಿದರೆ ಮಚ್ಚೆಯ ಹಾಗಿದ್ದ ಹಿರಿ ಗೆಬೋರನ ಬಾಯಿ ಸೊಟ್ಟಗಾಗುತ್ತಿತ್ತು. ಅವನು ತಕ್ಷಣ ಕಿಟಕಿಯಾಚೆಯ ದಿಗಂತದೆಡೆಗೆ ಓರೆನೋಟ ಬೀರುತ್ತಿದ್ದ. ಕೆಲ ದಿನಗಳ ಮಟ್ಟಿಗಂತೂ ಹಿರಿ ಗೆಬೋರ್ ಇದೆಲ್ಲಾ ನಿರಂತರವಾಗಿ ಹೀಗೇ ಮುಂದು ವರೆಯುವುದೆಂದು ಭಾವಿಸಿದ್ದ.

ಅಯ್ !

'ನಾನು ನಾಳೆ ಶಾಲೆಗೆ ಹೋಗೊಲ್ಲ' ಕಿರಿ ಗೆಬೋರನನ್ನು ಪ್ರೀತಿಸಿ ಅವನೊಂದು ದಿನ ಹೇಳಿದ. 'ನಾನು ಬರೋಕ್ಕಾಗೊಲ್ಲಾಂತ ಅವಳಿಗೆ ಹೇಳ್ಬಿಡು. ನನ್ನ ಪರ ವಾಗಿ ಒಂದು ಕ್ಷಮಾಪತ್ರ ಬರೆದು ಬಿಡು. ನಾನು ಸಹಿ ಮಾಡ್ತೇನೆ. ಆಯ್ತಾ ? ನಾನು ಈಗ ಆಲೂಗಡ್ಡೆ ಸಿಪ್ಪೆ ಬಿಡಿಸಬೇಕು- ಸಿಪ್ಪೆ ಬಿಡಿಸೋದು ಪತ್ರ ಬರೆ ಯೋದು ಒಟ್ಗೆ ಆಗೊಲ್ಲಾಂತ ನಿಂಗೊತ್ತಲ್ಲ !'

'ನಿಂಗೆ ನಿನ್ನ ಪಾಠ ಬರೊಲ್ವಾ ಅಪ್ಪಾ ?' ಕಿರಿ ಗೆಬೋರ್ ನಿರ್ವಿಕಾರವಾಗೆಂಬಂತೆ ಕೇಳಿದ. ಅದೇ ಹಳೆಯ ಹಸಿರು ಕಿಡಿಗಳು ಕಿರಿ ಗೆಬೋರನ ಕಂಗಳಿಂದ, ಹಿರಿ ಗೆಬೋರನ ಕಂಗಳತ್ತ ಪಯಣಿಸಿದುವು. ಅವು ವಿಷದ ಹಾಗೆ ಹಚ್ಚ ಹಸಿರು ಬಣ್ಣ ದ್ದಾಗಿದ್ದುವು.

ಅವನ ಚೆಡ್ಡಿ ಎಳೆದ್ಹಾಕ್ಬೇಕು ಮಗಂದು. ಹಿರಿ ಗೆಬೋರ್ ಮನಸ್ಸಿನಲ್ಲೇ ಆಲೋ ಚಿಸಿದ. ಅಂಡಿನ ಮೇಲೆ ನಾಲ್ಕು ಬಾರಿಸಿದರೆ ಸರಿ ಹೋಗ್ತಾನೆ. ಅದರಿಂದ ಅವ ನಿಗೆ ಬೇಜಾರಾದ್ರೂ ನಂಗಂತೂ ಸಮಾಧಾನವಾಗುತ್ತೆ. ಎರಡೂ, ಇಬ್ಬರಿಗೂ ಒಳ್ಳೇದು.

ಆದರೆ ಅವನು ಹುಡುಗನನ್ನು ಬಡಿಯಲಿಲ್ಲ. ಸಾಲದೆಂಬಂತೆ ಮಾರನೆಯ ದಿನ ಶಾಲೆಗೂ ಹೋದ.

ಸ್ಲಾವ್ಕಾ ಮಾರಿಸ್ಕೋವಾ ಈ ಗೆಬೋರುಗಳ ನಡುವಿನ ವೈಮನಸ್ಯವನ್ನು 'ಜೀವನ ಣಗೆಯ ಸಂದಿಗ್ಧ' ಎಂದು ಕರೆದಳು. ಅವಳು ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ಓದಿ ಎಷ್ಟೋ ಸಾಲುಗಳನ್ನು ಕೆಂಪು ಪೆನ್ಸಿಲ್‌ನಿಂದ

ಗುರುತು ಮಾಡಿದ್ದಳು. 'ಮಾನವ ಮನಸ್ಸಿನ ವಿಶ್ಲೇಷಣೆಯ ಪರಿಚಯ' ಎಂಬ ಪುಸ್ತಕವನ್ನು ಅವಳು ಓದಿದಾಗ, ಇಡಿಪಸ್ ಕಾಂಪ್ಲೆಕ್ಸ್ ಏನನ್ನೂ ನಿರೂಪಿಸುವುದಿಲ್ಲ ಎಂಬುದು ಅವಳಿಗೆ ಖಾತ್ರಿಯಾಯಿತು. ಅವಳ ಕೆನ್ನೆ ಕೆಂಪಾಯಿತು. ಪ್ರಾಯ್ಡನನ್ನು ಅವಳು ಏನೂ ಅರ್ಥ ಮಾಡಿಕೊಳ್ಳದೆಯೇ ಬದಿಯಲ್ಲಿಟ್ಟಳು.

ಮಾರನೆಯ ದಿನ ಮೇಜಿನ ಬಳಿ ನಿಂತು, ಹಿರಿಗೆಬೋರನ ಭಾವರಹಿತ ಮುಖದತ್ತ ಓರೆನೋಟ ಬೀರಿದಳು. ಅವನು ಜಿಯಾರ್ಗಿಜ್ ಡಾನ್ಜುಕೋನ್‌ನ ಹಾಗೆಯೇ ಕಾಣಿಸಿದ. ಇಬ್ಬರು ವ್ಯಕ್ತಿಗಳು ಹೀಗೆ ಒಂದೇ ರೀತಿ ಇರುವುದು ಸಾಧ್ಯವೇ ? ಜಿಯಾರ್ಗಿಜ್ ಬಹಳ ಕಾಲ ವಾರ್ಸಾದಲ್ಲಿದ್ದ. ಆದ್ದರಿಂದ ಆ ಪ್ರಶ್ನೆಯೇ ಉದ್ಭವಿಸಲಾರದು.

ಅವಳು ಹಿರಿಗೆಬೋರನತ್ತ ನೋಡಿದಾಗೆಲ್ಲ ಅವಳ ಬೆನ್ನ ಹುರಿಯಲ್ಲಿ ತಂಪಾದ ಮಂಜು ಹರಿದಂತಾಗುತ್ತಿತ್ತು.

ಖಂಡಿತವಾಗಿಯೂ ಅವನನ್ನ ಕಂಡರೆ ನಂಗಾಗೋದಿಲ್ಲ. ಹೌದು. ಆದರೆ.. ಅದು ಒಳ್ಳೇದಲ್ಲ- ನಾನ್ಯಾಕೆ ಅವನನ್ನು ದ್ವೇಷಿಸಬೇಕು ? ಅವನೆಂದರೆ ನನಗೇನು ಭಯವೇ ? ಯಾಕೆ ? ನಾನು ವ್ಯಕ್ತಿಗತ ಸ್ಥರದಲ್ಲಿ ಸಂಬಂಧಗಳ ವಿಶ್ಲೇಷಣೆ ಮಾಡುತ್ತಿದ್ದೇನೆಯೇ ? ಹಾಗೆ ನೋಡಿದರೆ ನನಗೆ ಎಲ್ಲರೂ ಭಯ ಹುಟ್ಟಿಸುವವರೇ- ಆ ಕಿರಿಗೆಬೋರನನ್ನೊಬ್ಬನನ್ನು ಬಿಟ್ಟು. ಆದರೆ ನಾನು ವೈಯಕ್ತಿಕವಾಗಬಾರದು. ಹಿರಿಗೆಬೋರನ ಮುಖದಲ್ಲಿ ಹೊಮ್ಮುತ್ತಿದ್ದ ಆತ್ಮಾಭಿಮಾನದ, ಅವಿದ್ಯಾವಂತನ ಒಂದಿಷ್ಟು ಅಣಕದ ಭಾವನೆಗಳನ್ನು ಅವಳು ಕಂಡಾಗಲೆಲ್ಲಾ ಅವಳಿಗೆ ಅವನನ್ನು ಅವಮಾನಿಸಬೇಕೆಂದೆನಿಸುತ್ತಿತ್ತು. ಅದು ಸರಳವೂ ಆಗಿತ್ತು. ಅವಳು ಅದಕ್ಕಾಗಿ ಮಾಡಬೇಕಾಗಿದ್ದುದಿಷ್ಟೇ- ಅವನನ್ನು ಏನಾದರೂ ಪ್ರಶ್ನೆ ಕೇಳುವುದು.

ಆ ನಂತರ ಅವನು ಉತ್ತರ ತಿಳಿಯದೇ ಚಡಪಡಿಸಿ, ಚಕಿತನಾಗಿ ಯಾಕೆ ದೇವರೇ ಈ ಜಂಜಾಟ ಎಂಬ ಭಾವನೆ ಹೊಮ್ಮಿಸುವುದನ್ನು ಕಂಡು ತನ್ನನ್ನೇ ತಾನು ಶಪಿಸಿಕೊಳ್ಳುತ್ತಿದ್ದುದೂ ಉಂಟು. ಆದರೆ ಅದೇ ಕಾಲಕ್ಕೆ ಹಿರಿಗೆಬೋರ ಅತೀ ಚಾಣಾಕ್ಷನಂತೆ, ಚತುರನಂತೆಯೂ ಕಂಡುಬರುತ್ತಿದ್ದ. ಸಂಜೆಗೆ ಸ್ಲಾವ್ಕಾ ಅವರುಗಳ ಪಾಠವನ್ನು ತಿದ್ದುತ್ತಿದ್ದಾಗ ಅಲ್ಲಿನ ನೋಟ್‌ಪುಸ್ತಕಗಳ ರಾಶಿಯಲ್ಲಿ ಅವಳ ದೃಷ್ಟಿ ಕೇಂದ್ರೀಕೃತವಾಗುತ್ತಿದ್ದುದು ಒಂದೇ ಪುಸ್ತಕದತ್ತ- ಅದು ಹಿರಿಗೆಬೋರನದ್ದು. ಯಾವಾಗಲೂ ಅವಳದನ್ನು ಕಡೆಯುವರೆಗೂ ನೋಡುತ್ತಲೇ ಇರಲಿಲ್ಲ.

ನಂತರ ಎಲ್ಲವನ್ನೂ ನೋಡಿದ ಮೇಲೆ ಏನೋ ಹುಡುಕುವವಳಂತೆ ಅವನ ಪುಸ್ತಕವನ್ನೇ ಬಹಳ ಹೊತ್ತು ನೋಡುತ್ತಿದ್ದಳು. ಆದರೆ ಆ ಪುಸ್ತಕ ಮಿಕ್ಕವಕ್ಕಿಂತ ಹೆಚ್ಚು ಕೊಳೆಯಾಗಿದ್ದು ಬಿಟ್ಟರೆ ಮಿಕ್ಕಂತೆ ವಿಶೇಷ ಭಿನ್ನವಾಗೇನೂ ಕಾಣಿಸುತ್ತಿರಲಿಲ್ಲ.

ನಾನು ಅವರಿಗೆ ಸಮೀಪಳಾಗುತ್ತಿದ್ದೇನೆಯೇ ? ಎಂದು ಆಲೋಚಿಸಿದಳು. ಅವರಿಗೆ ಎಂದುಕೊಂಡಳೇ ಹೊರತು ಅವನಿಗೆ ಎಂದುಕೊಳ್ಳಲಿಲ್ಲ.

ಬಹುಶಃ ನಾನು ಅವರುಗಳಿಗೆ ಕೇವಲ.... ಬಹುಶಃ ಏನು ? ನಾನು ಅವರುಗಳೊಂದಿಗೆ ವೈಯಕ್ತಿಕ ಸಂಬಂಧ ಬೆಳೆಸಬೇಕು. ಅದನ್ನು ಬೆಳೆಸುವುದು ಹೇಗೆ ? ವೈಯಕ್ತಿಕ ಸಂಬಂಧ ಅಂದರೆ ?.... ನಾನವನಿಗೆ ಹೇಳಲೇ ?.... ಉಹುಂ ಅದನ್ನವನಿಗೆ ಹೇಳಲಾರೆ. ನಾನವನಿಗೆ ಏನು ಹೇಳ್ತೀನೀಂತ ಕಾದು ನೋಡೋಣ. ಆದರೆ ಅಲ್ಲಿ ಶಾಲೆಯ ನನ್ನ ವರ್ತನೆಗಿಂತ ಸಂಪೂರ್ಣ ಭಿನ್ನವಾಗಿ ವರ್ತಿಸುತ್ತೇನೆ.... ಹೌದು ! ಶಾಲೆಯಲ್ಲಿ ನಾನು ಹೇಗೆ ವರ್ತಿಸುತ್ತೇನೆ ?.... ಅದೇ ನನಗೆ ಗೊತ್ತಿಲ್ಲವಲ್ಲಾ....

ಅವಳು ಗೆಬೋರನ ಪುಸ್ತಕ ಕೈಗೆತ್ತಿಕೊಂಡಳು. ಜೀವಶಾಸ್ತ್ರದ ಪ್ರಬಂಧ ಅದು– ರಕ್ತದ ಬಗ್ಗೆ ಹಿರಿಗೆಬೋರ್ ಬರೆದಿದ್ದ– 'ರತ್ತವನ್ನ ನರಗಳು ದೇಹದಲ್ಲಿ ಹರಿಸುತ್ತದೆ.' ಹಿರಿಗೆಬೋರ್‌ನ ಕೆಟ್ಟ ಕೈ ಬರಹ ಅದು– 'ರತ್ತವನ್ನ ರುದಯ ಹೊರ ಆಕುತ್ತೆ. ಅದನ್ನ ನಾಡಿ ಅಂತಾರೆ. ರತ್ತವನ್ನ ರುದಯಕ್ಕೆ ಮತ್ತೆ ವಾಪಸ್ ನರಗಳೇ ಕರಕೊಂಡು ಬರ್ತವೆ.'

ರಕ್ತವನ್ನ ರತ್ತ ಎಂದೇಕೆ ಬರೆಯಬಾರದು ? ಸ್ಲಾವ್ಕಾ ಮಾರಿನ್ಕೋವಾ ತನ್ನನ್ನೇ ಕೇಳಿಕೊಂಡಳು. ರತ್ತ ಎನ್ನುವುದೇ ಸರಳವಲ್ಲವೇ ? ಹೊಸ ವ್ಯಾಕರಣದ ಪುಸ್ತಕ ತೆರೆದು ಈಚೆಗೆ ರಕ್ತವನ್ನು ರತ್ತ ಎನ್ನುತ್ತಾರೇನೋ ಎಂದು ನೋಡಿದಳು. ಇನ್ನೂ ಇಲ್ಲ. ಸದ್ಯಕ್ಕಂತೂ ಹಾಗೆ ಕರೀತಿಲ್ಲ.

ಅವಳು ತನ್ನ ತಿಳಿಗುಲಾಬಿ ಬಣ್ಣದ ಪೈಜಾಮ ಹಾಕಿಕೊಂಡು ಕನ್ನಡಿಯ ಮುಂದೆ ನಿಂತು ತುಂಟತನದ ನಗೆ ಬೀರಿದಳು. ಅವಳ ಮೊಲೆಗಳು ತುಂಬಾ ಸಣ್ಣವು ಎಂದವಳಿಗನಿಸಿತು. ಪಾಠ ತಿದ್ದುವ ಸಮಯದಲ್ಲಿ ಈ ರೀತಿ ಆಲೋಚಿಸಿದ್ದಕ್ಕೆ ತನ್ನನ್ನು ತಾನೇ ಶಪಿಸಿಕೊಂಡಳು.

ನಾನು ನಾಳೆ ಅಲ್ಲಿಗೆ ಹೋಗಿ ಅವರ ಸ್ನೇಹ ಬೆಳೆಸುತ್ತೇನೆ. ಅವರ ಮನೆಯ ಪರಿಸರದ ಬಗ್ಗೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ ಬಹುಶಃ ಅವನಿಗಿರುವ ಯಾವುದೋ ಪೂರ್ವಾಗ್ರಹದ ಬಗ್ಗೆಯೂ ತಿಳಿದು ಬಂದೀತು.

ಲಕಟೂಸ್ ಸಂಸಾರವನ್ನು ನೋಡಲು ಅವಳು ಮಾರನೆಯ ದಿನ ಹೋಗಲಿಲ್ಲ. ಗುರುವಾರದಂದೂ ಹೋಗಲಿಲ್ಲ. ಕಡೆಗೆ ಶುಕ್ರವಾರದಂದೂ.. ಉಹುಂ ಹೋಗ ಲಿಲ್ಲ. ಶನಿವಾರದಂದು ಬರುವುದಾಗಿ ಹೇಳಿದ್ದಳು. ಆದ ಕಾರಣ ಹಿರಿ ಗೆಬೋರ್ ಒಂದು ಸೀಸೆ ವೈನ್ ತಂದುಕೊಂಡ.

ಆದರೆ ಶನಿವಾರದಂದು ಇದ್ದಕ್ಕಿದ್ದಂತೆ ಸ್ಲಾವ್ಕಾ ಮಾರಿನ್ಕೋವಾ ತನ್ನ ಹಳೆಯ ಸಹಪಾಠಿ ಜಾನ್ ಕ್ಲಿಮ್ಸ್ಲಾಳನ್ನು ಅನಿರೀಕ್ಷಿತವಾಗಿ ಭೇಟಿಯಾದಳು. ಕಾಫಿ ಕುಡಿ ಯುತ್ತಾ, ಇಬ್ಬರೂ ತಮ್ಮ ಹಳೆಯ ನೆನಪುಗಳನ್ನು ಬಗೆಯತೊಡಗಿದರು. ಈ ಎಲ್ಲವೂ ಕಾಲಾತೀತವಾದಂತಹ ಅನುಭವ ನೀಡಿದಂತಾಗಿ, ತಮ್ಮ ಶಾಲಾ ದಿನ ಗಳು ನಿಜವಾಗಿಯೂ ಅದ್ಭುತವಾಗಿದ್ದವು ಎಂದು ಸ್ಲಾವ್ಕಾಳಿಗನ್ನಿಸಿತು. ಅವಳು ಇಬ್ಬರು ಗೆಬೋರ್‌ಗಳ ಬಗ್ಗೆ ಸಂಪೂರ್ಣ ಮರೆತಿದ್ದಳು. ಅಷ್ಟೇ ಏಕೆ, ಒಂದಳತೆ ಯವರೆಗೂ ಅವಳಿಗೆ ಬಾಕೀ ಪ್ರಪಂಚವೇ ಮರೆತುಹೋಗಿತ್ತು.

'ನಾನು ಸೋಮವಾರ ಶಾಲೇಗೆ ಹೋಗೊಲ್ಲ' ಹಿರಿ ಗೆಬೋರ್ ದೃಢವಾಗಿ ತೀ ರ್ಮಾನಿಸಿದವನಂತೆ ಹೇಳಿದ. 'ಗೆಬೋರ್ ನಿನಗೆ ವಿಷಯ ಮಾತ್ರ ನೆನಪಿರಲಿ. ಎಲ್ಲರೂ ಯಾವಾಗಲೂ ಜಿಪ್ಸಿಗಳಿಗೆ ಎಲ್ಲವನ್ನೂ ಮಾಡುವುದಾಗಿ ಮಾತು ಕೊ ಡ್ತಾರೆ. ಆದರೆ ಯಾರೂ ತಮ್ಮ ಮಾತನ್ನ ಉಳಿಸಿಕೊಳ್ಳೋದಿಲ್ಲ. ಆಮೇಲೆ ನಾವಿ ರೋ ಪರಿಸ್ಥಿತಿಗೆ ನಮ್ಮನ್ನೇ ದೂಷಿಸುತ್ತಾರೆ. ಕಾಮ್ರೆಡ್ ಸ್ಲಾವ್ಕಾ ಮಾರಿನ್ಕೋವಾ ನಮ್ಮ ಕೈ ಬಿಟ್ಲು. ನಾನು ಸೋಮವಾರ ಶಾಲಿಗೆ ಹೋಗೊಲ್ಲ. ಮಂಗಳವಾರಾ ನೂ.... ಬುಧವಾರ ಸಹಿತ ಹೋಗೊಲ್ಲ'

'ಗುರುವಾರ ?' ಅತೀ ಸಹಜವೆಂಬಂತೆ ಕಿರಿ ಗೆಬೋರ್ ಕೇಳಿದ.

'ನಂಗಿಷ್ಟ ಬಂದ ಹಾಗೆ ಮಾಡ್ತೇನೆ. ನಾನು ನನ್ನ ಪಾಪಗಳನ್ನ ಯಾರ ಹತ್ರಾ ನೂ ಹೇಳ್ಕೊಳ್ಳೊಲ್ಲ' ಹಿರಿ ಗೆಬೋರ್ ಉತ್ತರಿಸಿದ.

ನಂತರ ಅವನು ವೈನ್ ಶೀಷೆಯನ್ನು ತೆರೆದು ಅದರಿಂದ ಒಂದು ಗುಟುಕು ಕುಡಿದ. ಮೋದ್ರಾದಿಂದ ತಂದ ಕೆಂಪು ವೈನ್ ಅದು. ಆದರ ರುಚಿಯೂ ಚೆನ್ನಾಗಿತ್ತು.

ಸೋಮವಾರ ಮುಂಜಾನೆ, ಗೆಬೋರ್‌ಗಳ ಸಮಸ್ಯೆ ಚರ್ಚಿಸಲು ಸ್ಲಾವ್ಕಾ ಮಾರಿನ್ಕೋವಾ 'ತಾಯಿ ಮಗು ಚಿಕಿತ್ಸಾಲಯ'ಕ್ಕೆ ಹೋಗಿ ಶಿಕ್ಷಣ ತಜ್ಞನನ್ನು ಭೇಟಿಯಾದಳು. 'ಮನೋ ವೈಜ್ಞಾನಿಕ ವಿಶ್ಲೇಷಣೆ ಮಾಡೋವಾಗ ಪ್ರತೀ ಕೃತ್ಯವನ್ನೂ ಮೂರು ಅಂಶಗಳ ಆಧಾರವಾಗಿ ಗಮನಿಸಬೇಕಾಗುತ್ತೆ'. ಮಾರಿನ್ಕೋವಾಳತ್ತ ನೋಡುತ್ತಾ ಆತ ಹೇಳಿದ. 'ಎಲ್ಲ ಮಾನಸಿಕ ಚರ್ಯೆಗಳ ಮುಖ್ಯ ಅಂಶ ಗಮನವನ್ನ ಕೇಂದ್ರೀಕರಿಸೋದು. ಅದರ ಜತೆಗೆ ತಂತ್ರ. ತಂತ್ರ ಅಂದ್ರೆ ಎಲ್ಲವನ್ನೂ ಸರಿಯಾಗಿ ಮೊದಲೇ ಯೋಜಿಸಿಟ್ಟ ಹಾಗೆ ನೇರವಾಗಿ ನಡೆಸೋ ಸಂಪೂರ್ಣ ಕ್ರಿಯೆ. ಇವೆಲ್ಲವನ್ನೂ ಸೇರಿಸಿದ್ರೆ ತಾಂತ್ರಿಕತೆ ಆಗುತ್ತೆ. ಅರ್ಥವಾಯ್ತೇ ?'

'ಹುಂ ಅರ್ಥ ಆಯ್ತು.. ಆದರೆ ಗೆಬೋರ್ ವಿಷಯದಲ್ಲಿ ನಾನೇನು ಮಾಡ್ಲಿ ?' ಸ್ಲಾವ್ಕಾ ಮಾರಿನ್ಕೋವಾ ಕೇಳಿದಳು.

'ನಾನು ಇಷ್ಟೊತ್ತೂ ಹೇಳಿದ್ದೇನು ? ಅದೇ ಅಲ್ವಾ ?' ಶಿಕ್ಷಣ ತಜ್ಞ ಕೇಳಿದ.

ಸ್ಲಾವ್ಕಾ ಮಾರಿನ್ಕೋವಾ ಗೆಬೋರ್ ಲಕಟೂಸನ ಸಂಸಾರವನ್ನು ಅವರ ಮನೆಯಲ್ಲೇ ಸಂದರ್ಶಿಸುವ ವಿಷಯ ಹೇಳಿದಾಗ ಶಿಕ್ಷಣ ತಜ್ಞ ತನ್ನ ಕೈ ಹಿಸುಕಿಕೊಂಡ. 'ಆ ದಾರೀಲಿ ಯಾವ ಪ್ರತಿಭಟನೇನೂ ಇಲ್ಲ.... ಅದು ನಿನ್ನನ್ನ ಎಲ್ಲಿಗೂ ಒಯ್ಯುವುದಿಲ್ಲ. ನೀನು ಆದಷ್ಟು ದೂರದಲ್ಲಿ ನಿಲ್ಲಬೇಕು. ಶಿಕ್ಷಣದಲ್ಲಿ ಎಲ್ಲಕ್ಕಿಂತ ಮುಖ್ಯ ವಿಷಯವೆಂದರೆ ಭಾವರಹಿತವಾಗಿ ದೂರ ನಿಲ್ಲುವುದು.' ಕೋಪದಿಂದಲೇ ಅವ ತನ್ನ ಮಾತು ಮುಗಿಸಿದ.

'ಹಾಗಾದ್ರೆ ನಾನೇನು ಮಾಡ್ಲಿ ?' ಸ್ಲಾವ್ಕಾ ಮಾರಿನ್ಕೋವಾ ಗೋಳಾಡಿದಳು.

ಶಿಕ್ಷಣ ತಜ್ಞ ಉತ್ತರಿಸಿದ... 'ಎಲ್ಲಕ್ಕೂ ನಾನೇ ಜವಾಬು ಹೇಳೊಕ್ಕೆ ಸಾಧ್ಯ ಇಲ್ಲ. ನೀನೇ ಯೋಚಿಸಿ ನೋಡು. ಆದರೆ ನಾನು ನಿಂಗೆ ಒಂದೇ ಸಲಹೆ ಕೊಡಬಲ್ಲೆ. ಅದೊಂದು ಕ್ರಾಂತಿಕಾರಕ ಚರ್ಯೆ. ಕಾಡು ಜನರಿಗೆ ಈ ಥರದ ಕ್ರಾಂತಿಕಾರಕ ಚರ್ಯೇನೇ ಪ್ರಭಾವ ಬೀರೋದು.... ಸಿರಿಂಜ್ ರಿಯನ್ನಿನ ಹಾಗೆ !

ಗುರುವಾರ ಮುಂಜಾನೆ ಸ್ಲಾವ್ಕಾ ಮಾರಿನ್ಕೋವಾ ಹಿರಿ ಗೆಬೋರನನ್ನು ಕಪ್ಪು ಹಲಗೆಯ ಬಳಿ ಕರೆದಳು. ಅಂದಿನ ಪ್ರಸಂಗವೂ ಹಿಂದಿನಂತೆಯೇ ಆಯಿತು.

'ಹೆಬ್ಬಾತುಗಳ ಒಂದು ತಂಡ ಆಕಾಶದಲ್ಲಿ ಹಾರಾಡುತ್ತಿದ್ದುವು. ಮೊದಲಿಗೆ ಒಂದು

ನಂತರ ಜೆಣೆಯ ಬದಿಯಲ್ಲಿ ಏಳು ಹೆಬ್ಬಾತುಗಳು ಒಂದರ ಹಿಂದೆ ಒಂದು. ಆ ಕಡೆ ಏಳು ಹೆಬ್ಬಾತುಗಳು.' ಸ್ಲಾವ್ಕಾ ಮಾರಿನ್ಕೋವಾ ವಿವರಿಸಿದಳು- 'ಒಟ್ಟು ಎಷ್ಟು ಹೆಬ್ಬಾತುಗಳಿದ್ದುವು ?'

'ಹೆಬ್ಬಾತುಗಳು' ಹಿರಿಗೆಬೋರ್ ಮನಸ್ಸಿನಲ್ಲೇ ಅಂದುಕೊಂಡ. ಮೊದಲಿಗೆ ಒಂದು ಅದರ ಹಿಂದೆ ಬಣೆಯಲ್ಲಿ ಹಾರಾಡುತ್ತಾ ಇನ್ನೂ ಎಂಟು ಒಂದರ ನಂತರ ಒಂದು ... ಇದ್ದಕ್ಕಿದ್ದಂತೆ ಜಾಕುಬೋವಿಸ್‌ನ ಬಂಬೂ ತೋಟದಲ್ಲಿ ಗಾಯಗೊಂಡಿದ್ದ ಹೆಬ್ಬಾತನ್ನು ನೋಡಿದ ನೆನಪಾಯ್ತು. ಆದರೆ ಅಲ್ಲಿ ಬಣೆ ಅಲ್ಲ, ಬಂಬೂ ತೋಟವಿತ್ತು ! 'ಹೆಬ್ಬಾತುಗಳು ಹಾರಾಡುತ್ತಿವೆ'– ಹಿರಿ ಗೆಬೋರ್ ಯೋಚಿಸಿದ. ಮೊದಲಿಗೆ ಒಂದು........

ಕಡೆಗೆ ಅನಾಮಧೇಯ ಕೈಯೊಂದು ಗೆಬೋರನಿಗೆ ತಿಳಿದಿದ್ದ ಮತ್ತು ತಿಳಿಯದಿದ್ದ ಎಲ್ಲ ವಿಷಯಗಳ ಮೇಲೂ ಅಗೋಚರ ತೆರೆಯನ್ನೆಳೆದು ಬಿಟ್ಟಿತು. ಗೆಬೋರನಿಗೆ ತನಗೀ ವಿಷಯ ಗೊತ್ತಿಲ್ಲ ಎಂಬ ಅಂಶ ಮನದಟ್ಟಾಯಿತು. ಅವನ ತಲೆಯಲ್ಲಿ ಅಂಧಕಾರ ಹಬ್ಬಿತು.

ನಂತರ ಅವನು ಕಿರಿ ಗೆಬೋರನತ್ತ ನೋಡಿದ. ಕಿರಿಗೆಬೋರ ತನ್ನ ಅಗಲವಾದ ಕಣ್ಣು ಬಿಟ್ಟು ಕುರ್ಚಿಯ ಮೇಲೆ ಹಾರಾಡುತ್ತಿದ್ದ. 'ಹದಿನಾರು' ಅವ ಜೋರಾಗಿ ಪಿಸುಗುಟ್ಟಿದ.

ನಂತರ ಎಲ್ಲವೂ ಎಂದಿನಂತೆಯೇ ಆಯಿತು. ಕಿರಿ ಗೆಬೋರ್ ಉತ್ತರ ಹೇಳಿದ. ಸ್ಲಾವ್ಕಾ ಮಾರಿನ್ಕೋವಾ ಹಿರಿಗೆಬೋರನನ್ನು ಸಮಾಧಾನಪಡಿಸುತ್ತಲೇ ಕಟುವಾಗಿ ಬೈದಳು. ಹಿರಿಗೆಬೋರ್ ಬೆವರಿದ್ದ ತನ್ನ ಕೈಗಳನ್ನು ಪ್ಯಾಂಟಿಗೆ ಉಜ್ಜಿಕೊಂಡ. ಕೈಯಲ್ಲಿದ್ದ ಸೀಮೆಸುಣ್ಣ ಚೂರಾಯಿತು. ಅದರಿಂದ ಹೊರಟ ಬಿಳಿ ಬಣ್ಣದ ಪುಡಿ ಗಾಳಿಯಲ್ಲಿ ತೇಲಾಡಿತು. ಅದು ನೋಡಲು ಹಿಮಪಾತದಂತಿತ್ತು. ಹಿರಿ ಗೆಬೋರ್ ತಡವರಿಸುತ್ತಲೇ ತನ್ನ ಆಸನದೆಡೆಗೆ ಹೆಜ್ಜೆಯಿರಿಸಿದ. ಸ್ಲಾವ್ಕಾ ಮಾರಿನ್ಕೋವಾ ಮತ್ತೆ ಹಳೆಯ ರಾಗವನ್ನು ಹಾಡಿದಳು- 'ಏನು ಹಿರಿ ಗೆಬೋರ್‌ಗೆ ಗೊತ್ತಿಲ್ಲವೇ ?.... ಸರಿ ಹಾಗಾದರೆ– ಕಿರಿಗೆಬೋರ್ ?'

ಸೀಮೇಸುಣ್ಣದ ಧೂಮ ಸುರುಳಿಸುರುಳಿಯಾಗಿ ಮೇಲೆದ್ದಿತು. ಕಪ್ಪು ಹಲಗೆಯ ಪಕ್ಕ ನಿಂತಿದ್ದ ತನ್ನ ಸಣ್ಣ ಆಕೃತಿ ನಿಧಾನವಾಗಿ ಕರಗಿ ಕರಗಿ ಅದೃಶ್ಯವಾಗುತ್ತಿ

ದ್ದಂತೆ ಹಿರಿಗೆಬೋರನಿಗೆ ಭಾಸವಾಯಿತು. ಅವನು ತನ್ನ ತಲೆ ನೋಯುವವರೆಗೂ ಬೆರಳುಗಳಿಂದ ಹಣೆಯನ್ನು ಉಜ್ಜುತ್ತಲೇ ಇದ್ದ. ಇದ್ದಕ್ಕಿದ್ದಂತೆ, ಅಷ್ಟೇನೂ ಚತುರವಲ್ಲದ ಆದರೆ ಚುರುಕಾದ ಆ ಪಾಪದ ತಲೆಗೆ ಈ ಅವಮಾನ ತಡೆದುಕೊಳ್ಳಲು ಆಗದಷ್ಟು ವಿಪರೀತ ಎನ್ನಿಸಿತು. ಹೌದು, ಪ್ರಿಯ ಓದುಗ.... ವಿಪರೀತ ! ಏಕೆಂದರೆ.... ತಲೆ ಎಷ್ಟಾದರೂ ತಲೆಯಲ್ಲವೇ ?

ಈ ಕ್ಷಣದಲ್ಲಿಯೇ ಸ್ಲಾವ್ಕಾ ಮಾರಿನ್ಕೋವಾ 'ಸಿರ್ಯೋರಿಯನ್' ಎಂದು ಕರೆಯಲ್ಪಡುವ ಆ ಕ್ರಾಂತಿಕಾರಕ ನಿಲುವನ್ನು ತಾಳಲು ನಿರ್ಧರಿಸಿದಳು. ಈ ನಿಲುವು ಹಿರಿಗೆಬೋರನ ಆತ್ಮ ಸಾಕ್ಷಿಯನ್ನು ಚೂರು ಚೂರು ಮಾಡುವುದಿತ್ತು. ಹಿರಿಗೆಬೋರ ಅವಳಿಗೆ ಅವಿಧೇಯ ವಿದ್ಯಾರ್ಥಿಯಂತೆ ಕಂಡ. ಅವಳ ಬೆನ್ನ ಹುರಿಯಲ್ಲಿ ಜಿರಳೆ ಚಲಿಸಿದಂತಾಯಿತು. ಏನೋ ಮುಜುಗರ. ತಲೆ ತಗ್ಗಿಸಿ ತನ್ನ ರವಿಕೆಯ ಗುಂಡಿಗಳನ್ನು ದೀರ್ಘವಾಗಿ ಗಮನಿಸಿದಳು; ಅವಳು ಎಲ್ಲ ಗುಂಡಿಗಳನ್ನೂ ಹಾಕಿಕೊಂಡಿದ್ದಳು.

ನಂತರ ಅವಳು ಕಿರಿಗೆಬೋರನ ಸೀಟಿನ ಬಳಿ ಹೋಗಿ ಅವನ ತಲೆ ಸವರಿದಳು. ಹಾಗೆಯೇ ಅವಳು ಕೆಲ ಮಾತುಗಳನ್ನೂ ಹೇಳಿದಳು– "ಗೆಬೋರ್ 'ಎಲ್ಲಿ 'ಅಪ್ಪ, ಅಪ್ಪ, ನಿಂಗೇನಾಗಿದೆ ಮಗೂ' ಅಂತ ನಿನ್ನ ತಂದೆಯನ್ನ ಕೇಳು ನೋಡೋಣ"

ಕಿರಿಗೆಬೋರ್ ನಕ್ಕ. ಮತ್ತೆ ಹಸಿರು ಬಣ್ಣದ ಕಿಡಿಗಳು ಅವನ ಕಣ್ಣಿಂದ ಹಾರಿ ಹಿರಿಗೆಬೋರನ ಕೆನ್ನೆಯನ್ನು ತಮ್ಮ ಜ್ವಾಲೆಯಿಂದ ಸುಟ್ಟುವು. ಕಿರಿಗೆಬೋರನ ಮುಖ ಮಗುವಿನ ಮುಖದ ಹಾಗೆ ತೆಳುವಾಗಿತ್ತು. ಅವನ ಹಲ್ಲುಗಳು ಫಳ ಫಳ ಹೊಳೆದುವು.

ಆ ಕ್ಷಣಕ್ಕೆ ತರಗತಿಯಲ್ಲಿದ್ದವರೆಲ್ಲಾ ನಕ್ಕರು. ಗಟ್ಟಿಯಾಗಿ, ಕರುಣೆಯಿಲ್ಲದೇ ನಕ್ಕರು. ನಕ್ಕು ನಕ್ಕು ಸುಸ್ತಾದರು; ಅವರು ನಕ್ಕ ರೀತಿ ಯಾರಿಗಾದರೂ ಮುಜುಗರ ಉಂಟುಮಾಡುತ್ತಿತ್ತು. ಒಬ್ಬ ಜಿಪ್ಸಿ ಮತ್ತೊಬ್ಬ ಜಿಪ್ಸಿಯನ್ನು ನೋಡಿ ನಗುವುದು ಸರಿಯಲ್ಲವೆಂದು ಅವರುಗಳಿಗೆ ತಿಳಿದಿತ್ತು. ಅವರು ವಾಸ್ತವದಲ್ಲಿ ಕಿರಿಗೆಬೋರನ ಗುಂಡುಕಂಗಳು, ಸುಕ್ಕಾದ ಮುಖ, ವಕ್ರಮೂಗಗಳನ್ನ ನೋಡಿ ನಗುತ್ತಿದ್ದರು !

ಹಿರಿಗೆಬೋರನಿಗೆ ಗೋಡೆ ಸೀಳಿ ಕುಸಿಯುತ್ತಿರುವ ಶಬ್ದ ಕೇಳಿಸಿತು. ಅವನ

ಕಾಲು ನೆಲಕ್ಕೆ ಅಂಟಿಕೊಂಡಿತ್ತು. ಹೆಗಲ ಮೇಲಿಂದ ತಣ್ಣನೆಯ ಬೆವರು ತೊಟ್ಟಿಕ್ಕತೊಡಗಿತ್ತು.

ಅಯ್ !

ನಂತರ ಹಿರಿ ಗೆಬೋರನ ಬಿಗಿ ಮುಷ್ಟಿ ಸೀಳಿದ್ದ ಮೇಜಿನ ಮೇಲೆ ಜೋರಾಗಿ ಬಂದು ಇಳಿಯಿತು. ಶಾಯಿಯ ಶೀಷೆ ಮೇಜಿನಿಂದ ಹಾರಿ, ನೆಲದ ಮೇಲೆ ಜಾರಿ ನೇರ ಸ್ಲಾವ್ಕಾ ಮಾರಿನ್ಕೋವಾಳ ಪಾದಗಳ ಬಳಿ ಬಂದು ಬಿತ್ತು. ಅವಳ ಪೂನ ಮೇಲೆ ಶಾಯಿಯ ಕೆಟ್ಟ ಕಪ್ಪು ಕಲೆ ಉಂಟಾಯಿತು. ಮುರಿದ ಗಾಜಿನ ಶಬ್ದ ಇನ್ನೂ ಹೊಮ್ಮುತ್ತಿದ್ದ ನಗುವಿನಲೆಗಳನ್ನು ಭೇದಿಸಿ ಕತ್ತರಿಸಿತ್ತು; ಎಲ್ಲಿಯೋ ಅಲಾರಂ ಬಾರಿಸಿದಂತೆ ಆಗಿತ್ತು.

ಹಿರಿ ಗೆಬೋರ್ ಎದ್ದು ನಿಲ್ಲುವ ವೇಳೆಗೆ ಕೋಣೆಯನ್ನು ನಿಶ್ಶಬ್ದ ಆವರಿಸಿತ್ತು. ಅವನು ಉಗುಳು ನುಂಗುವ ವೇಳೆಗೆ ಅಲ್ಲಿ ಸ್ಮಶಾನ ಮೌನದ ತಾಂಡವ. 'ಕಳ್ಳ ಸೂಳೆ ಮುಂಡೆ' ಎಂದು ಅವ ಅರಚಿದಾಗ ಇದ್ದ ನಿಶ್ಶಬ್ದಕ್ಕೆ ಏನನ್ನೂ ಹೋಲಿಸಲು ಸಾಧ್ಯವಿಲ್ಲ.

ವಿಶೇಷ ಗತ್ತಿನಲ್ಲಿ ಅವನು ಬಾಗಿಲಕಡೆ ನಡೆದ. ನೆಲ ಬಿರಿದ ಶಬ್ದ ಕೇಳಿಸಿದಂತಾಯಿತು. ಕ್ಷಣ ಮಾತ್ರದಲ್ಲಿ ಗೆಬೋರ್ ಅಲ್ಲಿಂದ ನಾಪತ್ತೆಯಾಗಿದ್ದ.

ಕಿರಿ ಗೆಬೋರ್ ಅವನ ಹಿಂದೆ ಓಡಿದ. 'ಅಪ್ಪಾ' ಎಂದು ಭೀತ ದನಿಯಲ್ಲಿ ಮೃದುವಾಗಿ ಕರೆದೂ ಕರೆದ. ಆದರೆ ಹಿರಿ ಗೆಬೋರ್ ಅಲ್ಲಿರಲಿಲ್ಲ.

ಹಿರಿ ಗೆಬೋರ್ ಮುಂದೆ ಮುಂದೆ ಹೆಜ್ಜೆ ಹಾಕುತ್ತಲೇ ಇದ್ದ. ಗಾಯಗೊಂಡ ಗೂಳಿಯೋಪಾದಿಯಲ್ಲಿ ತಲೆ ಆಡಿಸುತ್ತಾ ಸಾಗಿದ. ದಾರಿಯಲ್ಲಿ ಯಾರೂ ಅವನಿಗೆ ಅಡ್ಡ ಬರದೇ ಇದ್ದುದು ಒಳ್ಳೆಯದೇ ಆಯಿತೇನೋ. ಅವನ ರಕ್ತ ಕುದಿಯುತ್ತಿತ್ತು. ಹಿರಿ ಗೆಬೋರನಿಗೆ ಆ ಕುದಿಯುವ ಶಬ್ದವೂ ಕೇಳಿಸುತ್ತಿತ್ತು. ನೀರಿನ ಹಾಗೆ ಕುದ್ದ ರಕ್ತ, ಉಕ್ಕುತ್ತಿತ್ತು. ಹಿರಿ ಗೆಬೋರನಿಗೆ ದಾಹವಾಗಿತ್ತು. ಹೌದು. ತುಂಬಾ ದಾಹವಾಗಿತ್ತು. ತನ್ನ ಒಣಗಿದ ಗಂಟಲಿಗೆ ತಂಪಾದ ಹುಳಿ ವೈನ್‌ನ ಒಂದು ತೊಟ್ಟು ಬಿದ್ದೀತೇನೋ ಎಂದು ಅವನು ತಹತಹಿಸಿದ್ದ! ಇದ್ದಕ್ಕಿದ್ದಂತೆ ಕುಡಿಯಬೇಕೆಂಬ ತೀವ್ರತೆ ಹೆಚ್ಚಾಗಿ ಅವನ ಕೈಗಳು ನಡುಗುತ್ತಿದ್ದುವು.

ಅವನು ಓಸ್ತ್ರಾವಾಗೆ ಬರುವ ವೇಳೆಗಾಗಲೇ ಸಂಜೆಯಾಗಿತ್ತು. ಹಳ್ಳ ದಿಣ್ಣೆಗಳನ್ನು

ದಾಟಿ ಸಿಂತಾಗ ರಸ್ತೆ ಇಳಿಜಾರಾಗಿ ಹರಿದು ನೇರವಾಗಿ ಅದರಂತ್ಯದಲ್ಲಿರುವ ಭದ್ರ ಬುನಾದಿಯ 'ಗೋಲ್ಡನ್ ಜಗ್ ಟಾವ್ರನ್'ನಲ್ಲಿ ಪರ್ಯವಸಾನಗೊಂಡಿತ್ತು.

ಕತ್ತಲಲ್ಲಿ ಹಸಿರು ದ್ರಾಕ್ಷಿಗಳ ಗೊಂಚಲಿನ ಚಿತ್ರದ ಒಳಗಿಂದ ಬಲ್ಬು ಪ್ರಖರವಾಗಿ ಉರಿಯುತ್ತಿತ್ತು. ಆ ಗೊಂಚಲನ್ನು ನೋಡಿದಾಗ 'ಬಾ ನನ್ನನ್ನು ಕುಯ್ದು ತಿನ್ನು' ಎಂದು ಆಹ್ವಾನಿಸುತ್ತಿರುವಂತೆ ಭಾಸವಾಗುತ್ತಿತ್ತು. ಆದರೆ ಈ ಬಲ್ಬಿನ ದ್ರಾಕ್ಷಿಗಳು ಕುಯ್ಯುವುದಕ್ಕಾಗಿ ಇರಲಿಲ್ಲ.

'ಮಾನಸಿಕವಾಗಿ ಆಘಾತಗೊಂಡ ಕಾರ್ಮಿಕ ಹೇಗೆ ಕುಡಿಯುತ್ತಾನೇಂತ ನಾನು ಅವರಿಗೆ ತೋರಿಸ್ತೇನೆ, ಹಿರಿಗೆಬೋರ್ ಮನಸ್ಸಿನಲ್ಲೇ ಅಂದುಕೊಂಡ. ಒಂದು ಮೇಜಿನ ಎದುರಿಗೆ ಒಂಟಿಯಾಗಿ ಕುಳಿತು ಆರು ಶೀಷೆ ವೈನ್ ತರುವುದಕ್ಕೆ ಹೇಳಿದ. 'ತಿನ್ನೋದಕ್ಕೆ ಏನಾದ್ರೂ ಬೇಕಾ?' 'ಬೇಡ ಧನ್ಯವಾದ.... ತಿನ್ನೋದಕ್ಕೆ ಏನೂ ಬೇಡ'.

'ಯಾರಾದ್ರೂ ಬರ್ತಾರೇನು?'

'ಇಲ್ಲ ಯಾರೂ ಬರೋದಿಲ್ಲ'. ಮಾಣಿ ಮೊದಲ ಶೀಷೆಯ ಬಿರಡೆ ತೆಗೆಯುತ್ತಿದ್ದಂತೆ, ಹಿರಿಗೆಬೋರ್ ಉತ್ತರಿಸಿದ.

ಇತರೆ ಮೇಜುಗಳ ಬಳಿ ಕುಳಿತಿದ್ದವರ ಬಿಳಿಯ ಗಡುಸು ಮುಖಗಳು ಇವನತ್ತ ಆಸಕ್ತಿಯಿಂದ ನೋಡುತ್ತಿದ್ದುವು. ಅವರುಗಳಲ್ಲಿ ಯಾರೂ ಜಿಪ್ಸಿಯೊಬ್ಬನ ದುರಂತವನ್ನು ಗಂಭೀರವಾಗಿ ಪರಿಗಣಿಸುವವರಾಗಿರಲಿಲ್ಲ.

ಅವನು ಮೇಜಿನ ಮೇಲಿಟ್ಟ 50 ಕ್ರೌನ್‌ಗಳನ್ನು ಎಲ್ಲಿಂದ ಸಂಪಾದಿಸಿದ? ಎಂದು ಅವರು ಯೋಚಿಸತೊಡಗಿದರು. ಹೆಂಗಸರು ಮಾತ್ರ ಅವನ ಕಂಗಳಲ್ಲಿದ್ದ ತೆಳು ನೀಲಿ ಬಣ್ಣದ ಬೆಳಕನ್ನು ಗ್ರಹಿಸಲು ಯತ್ನಿಸಿದರು. ಇದೊಂದು ದುರಂತ ಪ್ರೇಮ ಪ್ರಕರಣದ ಕತೆ ಇರಬಹುದೆಂದು ಅವರು ಯೋಚಿಸಿದರು. ಅಷ್ಟೇ ಅಲ್ಲ- ಈ ರೀತಿಯ ನೋವನ್ನು ಉಂಟುಮಾಡುವ ಚತುರ ವಿದ್ಯೆ ತಿಳಿದ ಅವನಾಯ್ಕೆಯ ಹುಡುಗಿಯ ಬಗ್ಗೆಯೂ ಅಸೂಯೆ ಪಟ್ಟರು.

ದುರಂತದ ಈ ಅತಿಥಿ ಮೇಜಿನ ಬಳಿ ಒಂಟಿಯಾಗಿ ಕುಳಿತು ಕುಡಿದ- ಕುಡಿದ.... ಕುಡಿಯುತ್ತಲೇ ಇದ್ದ. ಅವನ ದೇಹ ಶಕ್ತಿ ಹೀನವಾಗಿತ್ತು- ತಲೆ ಭಾರವಾಗಿತ್ತು.

ಹಿರಿ ಗೆಬೋರ್ ಗಲ್ಲಾವತ್ತ ಓರೆನೋಟ ಬೀರಿದ. ಅಲ್ಲಿ ಹೊಳಪಿನ ಮೇಲ್ಮೈಯಿದ್ದ ಕಪ್ಪು ಬುಟ್ಟಾಗಳ ಬಟ್ಟೆ ತೊಟ್ಟಿದ್ದ ಸ್ಲಾವ್ಕಾ ಮಾರಿನ್ಕೋವಾಳ ಪ್ರತಿಬಿಂಬ ಕಾಣಿಸಿತು.

'ಹೆಬ್ಬಾತುಗಳ ಒಂದು ಗುಂಪು ಹಾರುತ್ತಿತ್ತು- ಮೊದಲಿಗೆ ಒಂದು, ಅದರ ಹಿಂದೆ ಇನ್ನೊಂದೆಂಟು' ಅವಳು ಲೆಕ್ಕ ಹೇಳುತ್ತಿದ್ದಳು.

ನಂತರ ಅವನಿಗೆ ಗಲ್ಲಾದ ಮೇಲೆ ಹೆಬ್ಬಾತುಗಳ ಪ್ರತಿಬಿಂಬ ಕಂಡಂತಾಗಿ ಅವನು ಹಾಡತೊಡಗಿದ:

ಓ ಹೆಬ್ಬಾತುಗಳೇ
ಹಾರಾಡುವ ಬಾತುಗಳೇ
ನಿಮಗೇಕೆ ಬರುವುದು ಹಾರಾಟ
ನಾನೇಕೆ ತಿಳಿದಿಲ್ಲ ಈ ಗುಟ್ಟ ?

ಹಾರುವುದ ನೀವು ಕಲಿತದ್ದು ಹೇಗೆ ?
ಹಾರಾಡುವ ಬಾತುಗಳೇ
ಯಾರು ನಿಮಗೆ ಶಿಕ್ಷಕರು
ಈ ವಿದ್ಯೆ ಕಲಿಸಿದೋರು ಯಾರು ?

ಕಲಿಸಿದವರ್‍ಯಾರು ದಯವಿಟ್ಟು ಹೇಳಿ.
ಸ್ಲಾವ್ಕಾಳೆಂಬ ಹೆಣ್ಣು ಹೌದೇ ?
ಆಹಾ ಹೆಬ್ಬಾತುಗಳೇ
ನೀವೇಕೆ ಹೋದಿರಿ ಶಾಲೆಗೆ-

ಆನಂತರ ಹಿರಿಯ ಮಾಣಿ ಗಲಾಟೆ ಮಾಡಿ ಬೇರೆಯವರಿಗೆ ತೊಂದರೆ ಕೊಡಬಾರದೆಂದು ಗೆಬೋರನನ್ನು ಕೇಳಿಕೊಂಡ.

"ಏನು ಬೇಕು ನಿಂಗೆ ? ನಿಂಗೇನು ಆಗಿರೋ ತೊಂದ್ರೆ ? ಇಲ್ಲಿ ಹಾಡ್ತಾ ಇರೋದು ಒಬ್ಬ ಜಿಪ್ಸಿ ಅನ್ನೋದು ಜ್ಞಾಪಕ ಇರಲಿ. ನಾನು ಒಬ್ಬ ಕಾರ್ಮಿಕ.... ಕಷ್ಟಪಟ್ಟು ಕೆಲಸ ಮಾಡೋ ಹಿರಿಯ ಕಾರ್ಮಿಕ. ನಾನು ಕೆಲಸ ಮಾತ್ರ ಮಾಡಬೇಕಾ ? ಹಾಡಬಾರದಾ ? ? ಆ....?"

ಆ ಮಾಣಿಗೆ ಕುದುರೆಯ ಹಾಗೆ ಉದ್ದನೆ ಮುಖವಿತ್ತು: ಅವನಿಗೆ ಕೆನೆಯಲೂ ಗೊತ್ತಿದ್ದಿರಬಹುದು! ಆದರೆ ಅದನ್ನು ಅವನು ಯಾರಲ್ಲಿಯೂ ಹೇಳಿರಲಿಲ್ಲ. ಅವನು ಮಾತನಾಡಲಿಲ್ಲ. ಅನಿರೀಕ್ಷಿತವಾಗಿ ಅವನು ಗೆಬೋರನ ಮೇಜಿನ ಮೇಲಿದ್ದ ಬಿಳಿಯ ಬಟ್ಟೆಯನ್ನು ಎಳೆದು ಹಾಕಿದ.

'ಶಾರ್ವಿಕರೋ ಅಲ್ವೋ.... ನಾನಂತೂ ಅಂಗಡಿ ಮುಚ್ಚೋ ಹೊತ್ತಾಯ್ತು. ಈಗ ಬಾಗಿಲು ಹಾಕದೇ ಇದ್ರೆ ಇನ್ನು ಸ್ವಲ್ಪ ಹೊತ್ನಲ್ಲಿ ಆ ಪೋಲೀಸರೆಂಬೋ ಸೂಳೇ ಮಕ್ಳು ಇಲ್ಲಿಗೆ ಬರ್ತಾರೆ.' ಮಾಣಿ ನಿರ್ವಿಕಾರವಾಗಿ ತಣ್ಣಗೆ ಹೇಳಿದ.

ಹಿರಿ ಗೆಬೋರ್ ಅವನನ್ನೇ ಪ್ರಶ್ನಿಸಿದ– 'ಸೂಳೇಮಕ್ಳು?....ನಾನಿದ್ದೀನೀಂತ ಆ ಸೂಳೇಮಕ್ಳನ್ನ ಕರೆಸ್ತೀಯಾ? ನೋಡು ಮಗೂ... ಲಕಟೂಸ್ ಅಂದ್ರೆ ಯಾರು ಗೊತ್ತಾ? ಅಹಂ?.... ಗೊತ್ತಿಲ್ಲದಿದ್ರೆ ಆಚೆ ಬಾ, ತೋರಿಸ್ತೀನಿ."

ಹಿರಿ ಗೆಬೋರ್ ಕಷ್ಟಪಟ್ಟು ತೂರಾಡುತ್ತಾ ಎದ್ದ. ಒಂದೆರಡು ಹೆಜ್ಜೆ ಮುಂದಿಟ್ಟು ಅಲ್ಲೇ ಕುಸಿದ. ಅಲ್ಲೇ ಅವನು ಗಾಢವಾಗಿ ನಿದ್ರಿಸಲೂ ತೊಡಗಿದ. ಗಡುಸುಮುಖ ಹೊತ್ತವನೊಬ್ಬ ಮತ್ತು ಅವನ ಜತೆಗೆ ಕಾಂತಿ ಹೀನ ಮುಖದವನೊಬ್ಬ ಅವನನ್ನು ಪಬ್‌ನಿಂದಾಚೆಗೆ ಹೊತ್ತೊಯ್ದು ಅಲ್ಲಿಯೇ ಹಳ್ಳವೊಂದರಲ್ಲಿ ಮಲಗಿಸಿದರು. ಹೆಂಗಸರಿಗೆ ಈ ವೇಳೆಗೆ ಅವನಲ್ಲಿ ಆಸಕ್ತಿ ಕಡಿಮೆ ಆಗಿತ್ತು; ಅವನು ಬಫೂನನ ಹಾಗೆ ವಿಚಿತ್ರವಾಗಿ ಕಾಣುತ್ತಿದ್ದ.

ಹೊರಗೆ ಹುಲ್ಲಿನ ವಾಸನೆ ಚೆನ್ನಾಗಿತ್ತು. ರಾತ್ರಿಯ ಆಕಾಶ ಮೋಡರಹಿತವಾಗಿದ್ದು ಎಲ್ಲವೂ ಶಾಂತವಾಗಿತ್ತು. ಹಿರಿ ಗೆಬೋರನಿಗೊಂದು ಕನಸು ಬಿತ್ತು. ತಾನು ಕರಿಬಣ್ಣದ ಸೂಟು ಧರಿಸಿ, ತನ್ನದೇ ಶವಪೆಟ್ಟಿಗೆಯ ಹಿಂದೆ ನಡೆಯುತ್ತಿದ್ದ ಹಾಗೆ ಕನಸು. ನಾನು ಈ ಶವಪೆಟ್ಟಿಗೆಯನ್ನು ಹಿಂಬಾಲಿಸುವಷ್ಟು ಹೊತ್ತೂ ನನ್ನ ಜೀವಕ್ಕೇನೂ ಅಪಾಯವಿಲ್ಲ ಎಂದು ತನ್ನಲ್ಲೇ ತಾನು ಹೇಳಿಕೊಂಡ. ಆದರೆ ನನ್ನನ್ನು ಹೂತಾಗ ನಾನೇನು ಮಾಡಲಿ? ಹಿರಿಯ ಗೆಬೋರ್ ಲಕಟೂಸನ ಶವದ ಅಂತಿಮ ಸಂಸ್ಕಾರ ಮಾಡುತ್ತಿರುವಾಗ, ನಾನು ಶವದ ಪೆಟ್ಟಿಗೆಯಲ್ಲಿಲ್ಲ ಎಂದು ಹೇಳುವುದಾದರೂ ಹೇಗೆ? ಶವ ಪೆಟ್ಟಿಗೆಗಾಗಿ ಹೇಳಿಕಳಿಸಿದವನೂ ನಾನೇ ಅಲ್ಲವೇ?! ಓಹ್ ದೇವರೇ ಶಾಲೆಗೆ ನಾನು ಕ್ಷಮಾಪಣಾ ಪತ್ರವನ್ನೂ ಬರೆದಿಲ್ಲವಲ್ಲಾ.... ನನ್ನ ಅಂತಿಮ ಸಂಸ್ಕಾರಕ್ಕೆ ನಾನು ಇಲ್ಲಿ ಹಾಜರಿರಬೇಕಾದ್ದರಿಂದ ಅಲ್ಲಿ ಗೈರುಹಾಜರಿ ಎಂದೂ ಅವರಿಗೆ ಗೊತ್ತಿಲ್ಲ ಪಾಪ....!

ಅವನು ತನ್ನ ಕೈಯಲ್ಲೊಂದು ಉದ್ದನೆ ಬಿಳಿಯ ಮೇಣದ ಬತ್ತಿ ಹಿಡಿದಿದ್ದ ಹಿಂದೆ ಬರುತ್ತಿದ್ದ ಹೆಂಗಸು ಹೇಳುತ್ತಿದ್ದ ಮಾತುಗಳು ಅವನಿಗೆ ಸ್ಪಷ್ಟವಾಗಿ ಕೇಳಿಸುತ್ತಿದ್ದುವು- 'ಪ್ಚ... ಈಗ ಸತ್ತ ಮನುಷ್ಯ ಬಹಳ ಪ್ರಖ್ಯಾತನಾಗಿದ್ದ. ಲಕಟೂಸ್ ವಂಶದಲ್ಲೇ ಅತ್ಯುತ್ತಮ ವ್ಯಕ್ತಿ ಅನ್ನಬಹುದು. ಅವನ ಶವ ಸಂಸ್ಕಾರಕ್ಕೆ ಕಾವ್ರೇಡ್ ಟೆರೆಬಾ ತಂದಿರೋ ರೇಷ್ಮೆ ಹೊದಿಕೆ ನೋಡಿ! ಅವನೊಬ್ಬ ಆದರ್ಶ ಕೆಲಸಗಾರನಾಗಿದ್ದ ಪಾಪ!'

ಹಿರಿ ಗೆಬೋರ್ ಮನೆಗೆ ಬಂದಾಗ ಕಿರಿ ಗೆಬೋರ್ ಇನ್ನೂ ನಿದ್ದೆ ಮಾಡುತ್ತಿದ್ದ, ಅವನನ್ನು ಎಬ್ಬಿಸಿದ್ದಲ್ಲದೇ ಹೆಂಡದ ಹುಳಿವಾಸನೆಯ ಬಿಸಿಯುಸಿರನ್ನು ಅವನ ಮೂಗಿನೊಳಕ್ಕೆ ತೂರಿದ. ಹುಡುಗನ ತಲೆ ತಿರುಗಿತಾದರೂ ಅವನು [illegible] ಏನೂ ಹೇಳಲಿಲ್ಲ.

'ಎಲ್ಲಿಗ್ಹೋಗಿದ್ದೆ ಅಪ್ಪಾ?' ಅವನು ಅರೆ ನಿದ್ರೆಯಲ್ಲೇ ಪೂರ್ಣ ಪ್ರಜ್ಞೆಯೊಂದಿಗೆ ಕೇಳಿದ.

ಹಿರಿಗೆಬೋರ್ ಉತ್ತರಿಸಿದ– 'ಗೆಬೋರ್... ಗೆಬೋರ್ ಗೆಬೋರ್ ನಂಗೆ ಭಾಳ ದುಃಖ ಆಯ್ತು.'

'ಈಗ ಹೇಗಿದ್ದೀ ಅಪ್ಪಾ? ಸರಿಯಾಗಿದ್ದೀಯಾ?'

"ಇಲ್ಲ.. ಇಲ್ಲ ಮಗನೇ ಇಲ್ಲ' ಕಿರಿ ಗೆಬೋರನ ಮಂಚದ ಬಳಿ ಮಂಡಿಯೂರಿ ಮುಂದುವರೆಸಿದ– 'ಗೆಳೆಯ ಗೆಬೋರ್, ನಾವು ಮತ್ತೆ ಶಾಲೆಗೆ ಹೋಗೋದಿಲ್ಲ ಅಲ್ಲಾ? ನಾವೇನೂ ಮೂರ್ಖರಲ್ಲ. ನಮಗೆ ದುಡಿಯೋದು ಗೊತ್ತು. ನಾವು ಈ ಪ್ರಪಂಚದಲ್ಲಿ ಓದಿಲ್ಲದೇ ಬದುಕೋದು ಸಾಧ್ಯ."

ಹಿರಿ ಗೆಬೋರ್ ಕಿರಿ ಗೆಬೋರನನ್ನು ದಿಟ್ಟಿಸಿ ನೋಡಿದ. ನಂತರ ಕಟುವಾಗಿ ಹೇಳಿದ– 'ಅಪ್ಪಾ ನೀನು ತುಂಬಾ ಕುಡಿದಿದ್ದೀಯ'

'ಒಂದು ತೊಟ್ಟೂ ಕುಡಿದಿಲ್ಲ' ಹಿರಿ ಗೆಬೋರ್ ಉತ್ತರಿಸಿದ– 'ನಾನು ಸಂಗೀತಗಾರನೊಬ್ಬನ ಜತೆ ಮಾತಾಡ್ತಾ ಇದ್ದೆ. ಅವನು ನಮ್ಮನ್ನ ಕೋಶಿಟ್ಸ್‌ಗೆ ಆಹ್ವಾನಿಸಿದ್ದಾನೆ. ಅವನ ಗುಂಪಿಗೆ ಒಬ್ಬ ಹಾಡುಗಾರನ ಅವಶ್ಯಕತೆ ಇದೆಯಂತೆ. ಅದೂ ತಾರಸ್ವರದಲ್ಲಿ ಹಾಡುವವ! ಕೋಶಿಟ್ಸ್‌ನಿಂದ ಅವರು ಬುಡಪೆಸ್ಟ್‌ಗೆ, ಬಾಲ್ಟನ್‌ಗೆ

ಹೋಗುತ್ತಾರಂತೆ. ಹಾಡುಗಾರನಿಗೆ ಹಾಕಿಕೊಳ್ಳೋಕ್ಕೆ ಸಮವಸ್ತ್ರ ಹಾಗೂ ಬಿಳಿ ಬಣ್ಣದ ಏಪ್ರನ್ ಕೊಡ್ತಾರಂತೆ. ಹಾಡುಗಾರನೊಬ್ಬ ಒಳ್ಳೆ ಸಂಗೀತಗಾರ ಹೇಗಾಗಬಹುದೂಂತ ಕಲೀಬೌದಂತೆ. ಏನಂತೀ ಗೆಬೋರ್ ?.... ನಾವುಗಳು ಪಾತ್ರೆ ತೊಳೆಯೋವಾಗ ನೀನೆಷ್ಟು ಚೆಂದ ಹಾಡ್ತೀ'

ಅವನು ಮತ್ತೆ ನಿಟ್ಟುಸಿರು ಬಿಟ್ಟ– 'ಓಹ್ ತಾಳವಾದ್ಯದವನೇ.... ಓಹ್ ತಾಳಗಾರ. ಆ ಸಂಗೀತ ಪ್ರಪಂಚದಾದ್ಯಂತ ಪ್ರಖ್ಯಾತವಾಗಿದೆ ಕಣೋ !'

'ಏನಂದ್ಯಪ್ಪಾ?' ಕಿರಿ ಗೆಬೋರ್ ಅರೆನಿದ್ರೆಯಲ್ಲೇ ತೊದಲಿದ. ಆದರವನ ಪ್ರಜ್ಞೆ ಸಂಪೂರ್ಣವಾಗಿ ಜಾಗೃತವಾಗಿತ್ತು. ನಂತರ ಹೆಂಗಸರಿಗೆ ಮತ್ತು ಮಕ್ಕಳಿಗೆ ಮಾತ್ರ ಜಾಗೃತವಾಗುವಂತೆ ಸುಪ್ತ ಪ್ರಜ್ಞೆ ಜಾಗೃತವಾಗಿ, ಇವನೊಂದಿಗೆ ಮಾತಾಡಲು ಸಂಜೆಗಿಂತ ಮುಂಜಾನೆಯೇ ಸೂಕ್ತ ಸಮಯ ಎಂದು ನಿರ್ಧರಿಸಿ ನಿದ್ದೆ ಮಾಡಿಬಿಟ್ಟ.

ದಟ್ಟ ಕಪ್ಪು ಬಣ್ಣದ ತಲೆಗೂದಲುಗಳು ದಿಂಬಿನ ಮೇಲೊರಗಿದ್ದಷ್ಟು ಹಿರಿ ಗೆಬೋರ್ ಅಸಹಾಯಕನಾಗಿ ನೋಡಿದ. ಅಯ್ಯೋ ದೇವರೇ ಇವ ಮತ್ತೆ ನಿದ್ದೆ ಮಾಡಿಬಿಟ್ನಲ್ಲಾ ಎಂದು ತನ್ನಲ್ಲೇ ಹೇಳಿಕೊಂಡು ಅವನನ್ನು ಎಬ್ಬಿಸಲು ಪ್ರಾರಂಭಿಸಿದ.

'ಗೆಬೋರ್, ನಾವು ಇನ್ನು ಮುಂದೆ ಶಾಲೆಗೆ ಹೋಗೋದಿಲ್ಲಾಂತ ಹೇಳು ಗೆಬೋರ್'

ಕಿರಿ ಗೆಬೋರ್ ಉತ್ತರಿಸಿದ– 'ಖಂಡಿತವಾಗಿ ಹೋಗ್ತೀನಿ. ನನ್ನನ್ನ ನನ್ನ ಪಾಡಿಗೆ ಬಿಟ್ಟು ನೀನು ನಿದ್ದೆ ಮಾಡಪ್ಪಾ. ನಾಳೆಯಿಂದ ನಾನು ನಿಂಗೆ ಸಹಾಯ ಮಾಡ್ತೀನಿ. ನಿನಗೆ ಕಲಿಸಿಕೊಡಬೇಕು ಅಂತ ಸ್ಲಾವ್ಕಾ ಮಾರಿನ್ಸೋವಾ ನನಗೆ ಹೇಳಿದ್ದಾಳೆ. ಅಲ್ಲಾ.... ನನ್ನನ್ನ ಯಾಕೆ ಸುಮ್ನೆ ತಳ್ತಾ ಇದ್ದೀ ?

ಹಿರಿ ಗೆಬೋರ್ ತನ್ನಲ್ಲೇ ಆಲೋಚಿಸಿದ- ಅಯ್ಯೋ ಗ್ರಹಚಾರವೇ ! ನನ್ನ ಹತ್ತಿರ ಇದ್ದದ್ದು ಈಗಾಗಲೇ ಕಳೆದು ಹೋಗಿದೆ. ನಾನು ಮುಂದೆ ಏನೂ ಇಟ್ಟುಕೊಳ್ಳದೇ ಇರೋದೇ ವಾಸಿ.

ಅವನು ಕಿರಿ ಗೆಬೋರನನ್ನು ಮೃದುವಾಗಿ ಸವರಿ, ಹೊದಿಕೆ ಹೊದಿಸಿದ- ಒಳ

ಕೋಣೆಯಲ್ಲಿ ಕೊಡಲಿಗಾಗಿ ಹುಡುಕಾಡಿದ. ನಂತರ ಸ್ಲಾವ್ಕಾ ಮಾರಿನ್ಕೋವಾಳಿಗಾಗಿ ತಂದಿದ್ದ ವೈನ್ ಕುಡಿದು ಮುಗಿಸಿ ಶಾಲೆಯ ಕಡೆಗೆ ಹೊರಟ.

ಶಾಲೆಯ ಗೇಟ್ ತೆರೆದಿತ್ತು: ಒಳ ಹೋಗಿ ಸ್ವಿಚ್ ಹುಡುಕಿ ಎಲ್ಲ ದೀಪಗಳನ್ನೂ ಬೆಳಗಿಸಿದ- ಮುಂದಿನ ಬೆಂಚನ್ನು ಕೋಪದಿಂದ ಒದ್ದ. ನಂತರ ಶೀತಲ ಭಾವದಿಂದ ಯಾವ ಉದ್ರೇಕವೂ ಇಲ್ಲದವನಂತೆ, ವೇದಿಕೆ, ಒರಗುವ ಮೇಜು, ಕಪ್ಪು ಹಲಗೆ, ಎಲ್ಲವನ್ನೂ ಕೊಡಲಿಯಿಂದ ಕೊಚ್ಚತೊಡಗಿದ.

ಕಿರಿ ಗೆಬೋರನ ಪಕ್ಕದಲ್ಲಿ ತಾನು ಕುಳಿತುಕೊಳ್ಳುತ್ತಿದ್ದ ಬೆಂಚನ್ನು ಚೂರು ಚೂರು ಮಾಡಿದ. ನಂತರ ಎಲ್ಲವನ್ನೂ ಒಲೆಯ ಬಳಿ ಕುಪ್ಪೆ ಹಾಕಿದ.

ಒಂದು ಹಳದಿ ಬಣ್ಣದ ಹಲಗೆ ಮಾತ್ರ ನೆಲದ ಮೇಲೇ ಬಿದ್ದುಕೊಂಡಿತ್ತು, ಆ ಬೆಂಚಿನ ಕೆಲಸ ಇನ್ನೂ ಅಪೂರ್ಣ ಎಂದು ಆವನಿಗೆ ಅನ್ನಿಸಿತು. ಅದು ಯಾವ ಕ್ಷಣದಲ್ಲಾದರೂ ಜೀವ ತಾಳಿ ಬರಬಹುದು ಎಂಬಂತೆ ಅವನಿಗನ್ನಿಸಿತಾದ್ದರಿಂದ ಅದನ್ನು ಕೊಡಲಿಯ ಹಿಡಿಯಿಂದ ಒಮ್ಮೆ ಬಡಿದ.

ನಂತರ ಯುವ ಮಾಕ್ಸಿಂ ಗಾರ್ಕಿಯ ಚಿತ್ರದತ್ತ ಕೆಲಹೊತ್ತು ದಿಟ್ಟಿಸಿ ನೋಡಿದ. ಅದರ ಸಮೀಪ ನಡೆದ. 'ಇಲ್ಲ ಇವ ಮಾವ ಪಿಟ್ಯುಕಾ ಲಕಟೂಸನ ಹಾಗೆ ಕಾಣಿಸುತ್ತಾನೆ. ಇವನಿಗೆ ನಾನು ತೊಂದರೆ ಕೊಡಬಾರದು' ಎಂದುಕೊಂಡ.

ತನ್ನ ನಿರ್ಮಾಣ ಕಾರ್ಯವನ್ನು ವಿಜಯಭಾವದೊಂದಿಗೆ ಒಮ್ಮೆ ಅವಲೋಕಿಸಿದ. ಆ ನಂತರ ಅಲ್ಲೇ ನೆಲದ ಮೇಲೆ ಮಲಗಿ ನಿದ್ದೆ ಮಾಡಿದ. ಆವನಿಗೆ ಮತ್ತೆ ಹಿರಿ ಗೆಬೋರ್ ಲಕಟೂಸನ ಶವ ಸಂಸ್ಕಾರದ ಕನಸು ಬಿತ್ತು. ಅವನ ಪಕ್ಕದಲ್ಲಿ ರೇಷ್ಮೆ ಟೋಪಿಯ ಮಾಕ್ಸಿಂ ಗಾರ್ಕಿ ಮೇಣದ ಬತ್ತಿ ಹಿಡಿದು ಹೆಜ್ಜೆ ಹಾಕುತ್ತಿದ್ದ.

'ಓಹ್ ನೀನು ಬಾದ್ಯಾ ಪಿಟ್ಯುಕಾ ಮಾವಾ? ತುಂಬಾ ಒಳ್ಳೇದೇ ಆಯ್ತು. ಒಂದ್ನಿಮ್ಷ ಈ ಮೇಣದ ಬತ್ತಿ ಹಿಡಕೊಳ್ತೀಯಾ?' ಗೆಬೋರ್ ಗಾರ್ಕಿಯನ್ನು ಕೇಳಿದ.

'ನೀನೆಲ್ಲಿಗೆ ಹೋಗ್ತಾ ಇದೀಯ ಗೆಬೋರ್' ಪಿಟ್ಯುಕಾ ಮೇಣದ ಬತ್ತಿ ಕೈಗೆ ತೆಗೆದುಕೊಳ್ಳುತ್ತಾ ಕೇಳಿದ.

'ಶಾಲೆಗೆ ಹೋಗ್ತಾ ಇದೀನಿ. ನಂಗೆ ಕ್ಷಮಾ ಪತ್ರ ಬರೆಯೋದು ಮರೆತುಹೋಯ್ತು. ನಾನು ಸತ್ತಿರೋ ವಿಷಯ ನಮ್ಮ ಮೇಡಂಗೆ ಗೊತ್ತಿಲ್ಲಾ ನೋಡು'.

'ಹೋಗು ಗೆಬೋರ್ ಹೋಗು ಪರವಾಗಿಲ್ಲ. ನಿನ್ನ ಬದಲಾಗಿ ನಾನು ಶವದ ಪೆಟ್ಟಿಗೇಲಿ ಮಲಕ್ಕೊಳ್ತೀನಿ. ನಂಗೆ ಶವದ ಪೆಟ್ಟಿಗೇಲಿ ಮಲಗಿ ಅಭ್ಯಾಸ ಇದೆ. ನಂಗದು ಹೊಂದಿಯೂ ಹೊಂದುತ್ತೆ'. ಪಿಟ್ಯ್ಯಕಾ ಮಾಮ ಹೇಳಿದ.

ಮುಂಜಾನೆ ಶ್ರೀಮತಿ ಸೋವಾಕೋವಾ ಕೋಣೆ ಗುಡಿಸಲು ಬಂದಾಗ ಹಿರಿ ಗೆಬೋರನನ್ನು ಕಂಡಳು. ಅವಳಿಗೆ ಎಲ್ಲ ರೀತಿಯ ಪೂರ್ವಾಗ್ರಹಗಳೂ ಇತ್ತು. ಅದರಲ್ಲೂ ಈ ಹರಡಿದ ಅವಶೇಷಗಳ ನಡುವೆ ಬಿದ್ದಿದ್ದ ಜಿಪ್ಸಿಯನ್ನು ಕಂಡೊಡನೆಯೇ ಅವಳ ನಾಗರೀಕ ಭಾವ ಜಾಗೃತಗೊಂಡಿತು. ಒಂದು ಪೊರಕೆಯಿಂದ ಅವನನ್ನು ಗುಡಿಸಿಹಾಕಲು ಪ್ರಯತ್ನಿಸಿದಳು.

'ಮೂರ್ಖ ಸೂಳೇ ಮಗನೇ.... ಹೋಗಾಚೆ' ಅವಳು ಕೂಗಿದಳು– 'ಹಂದಿ ನನ್ನ ಮಗನೇ ಏಳೋ... ನಿನ್ನ ತಲೆ ಒಡೆದ್ಹೋಗ, ದರಿದ್ರ ಕುಡುಕು.. ಏನೋ ನೀ ನಿಲ್ಲಿ ಮಾಡಿರೋ ರಾದ್ಧಾಂತ? ಕುಡುಕ ಸೂಳೇ ಮಗ!'

ಅಯ್!

ಹಿರಿ ಗೆಬೋರ್ ತನ್ನ ಕಂಗಳನ್ನ ಅಗಲವಾಗಿ ತೆರೆದ. ಬೆಳಕಿನ ತೀವ್ರತೆಯನ್ನು ಅವನ ಕೈಲಿ ತಡೆಯಲಾಗಲಿಲ್ಲ. ನಿಧಾನವಾಗಿ ಅವನಿಗೆ ಶ್ರೀಮತಿ ಸೋವಾಕೋವಾಳ ನೀಲಿ ಸಮವಸ್ತ್ರ ಮತ್ತು ಅಗಲವಾದ ನಿತಂಬಗಳು ಕಂಡುವು. ಆ ನಂತರ ತಾನು ಚೂರು ಚೂರು ಮಾಡಲು ಮರೆತಿದ್ದ ಕಪಾಟಿನ ಬಾಗಿಲ ಮೇಲಿದ್ದ ಪ್ರಪಂಚದ ಭೂಪಟವನ್ನು ನೋಡಿದ. ಅವನ ಮುಂದೆ ಪ್ರಪಂಚವೇ ತೆರೆದಿಟ್ಟಂತಿತ್ತು,

'ಆಗ್ಲೇ ಎದ್ದು ಬಿಟ್ಯಾ.... ಇನ್ನೂ ಸ್ವಲ್ಪ ಹೊತ್ತು ಆರಾಮವಾಗಿ ಮಲಗಿರಬೇಕಿತ್ತು..' ಜಾಡಮಾಲಿ ಹೆಣ್ಣು ಹೇಳಿದಳು.

ತನ್ನ ಅಮಲಿನೊಂದಿಗೆ ಹಿರಿಗೆಬೋರ್ ಎದ್ದು ನಿಂತ. ಶ್ರೀಮತಿ ಸೋವಾಕೋವಾಳ ಕಂಗಳಲ್ಲಿ ತನ್ನ ಪ್ರತಿಬಿಂಬ ಕಾಣಿಸಿತು. ಅವಳ ಕಣ್ಣುಗುಡ್ಡೆಗಳಲ್ಲಿ ಗೆಬೋರ್ ತೂರಾಡುತ್ತಿದ್ದ. ಮತ್ತೊಂದು ನಿಮಿಷದಲ್ಲಿ ಸಿನೇಮಾದಲ್ಲಾಗುವ

ಹಾಗೆ, ದೀಪಗಳು ಒಂದೇ ಬಾರಿಗೆ ಹೊತ್ತಿಕೊಂಡು 'ಶುಭಂ' ಎಂಬಕ್ಷರಗಳು ಅವಳ ಕಣ್ಣುಗುಡ್ಡೆಗಳಲ್ಲಿ ಕಂಡಾತೆಂದು ಅವನಿಗನ್ನಿಸಿತು. ಒಂದು ಹೆಣ್ಣಿನ ಕಂಗಳು ಸಿನೇಮಾದ ಪರದೆಯಂತೆ ಇಷ್ಟು ಭಾವ ಹೀನವಾಗಿ, ಖಾಲಿ ಖಾಲಿಯಾಗಿ ಇರಲೂ ಬಹುದು ಎಂದು ಅವನಿಗೆ ತಿಳಿದಾಗ ಅಳು ಉಕ್ಕಿ ಬಂತು. ಕಡೆಗೆ ನಮ್ಮೆಲ್ಲರಂತೆಯೇ ಅವನಿಗೂ ತನ್ನ ಮೇಲೆ ಕರುಣೆ ಉಂಟಾಯಿತು. ಏಟು ತಿಂದ ನಾಯಿಯ ಹಾಗೆ, ತಿಂದ ಏಟಿಗಾಗಿ ಹೆಮ್ಮೆ ಪಡುತ್ತಾ ಅವನು ಹೊರಟುಬಿಟ್ಟ.

ಅಲ್ಲಿಯೇ ಇದ್ದ ಒಂದು ಬಕೆಟ್ ನೀರನ್ನು ಎಡವಬಾರದೆಂದು ಪ್ರಯಾಸದಿಂದ ಅದಕ್ಕೊಂದು ಪ್ರದಕ್ಷಿಣೆ ಹಾಕಿದ. ಆದರೆ ಮನದಂತರಾಳದಲ್ಲಿ ಅದಕ್ಕೊಂದು ಕ್ರೂರವಾದ ಒದೆತ ನೀಡಿದ್ದ.

ನಿರ್ದೇಶಕ ಹೋಲಬ್ ಖುದ್ದಾಗಿ ತಿಳಿಸಿದಾಗಲೇ ಸ್ಲಾವ್ಕಾ ಮಾರಿಸ್ಕೋವಾಳಿಗೆ ನಡೆದ ಸಂಗತಿ ಗೊತ್ತಾದದ್ದು. ಕೂಡಲೇ ಅವಳು ತನ್ನ ತರಗತಿ ನಡೆಯುತ್ತಿದ್ದ ಕೋಣೆಗೆ ಬಂದಳು. ಯುವ ಮ್ಯಾಕ್ಸಿಂ ಗಾರ್ಕಿ ಅವಳತ್ತ ಆಸಕ್ತಿಯಿಂದ ದಿಟ್ಟಿಸಿ ನೋಡಿದರೂ, ಏನೂ ಮಾತಾಡಲಿಲ್ಲ.

'ನಿನಗಾಗಿ ಎಲ್ಲವನ್ನೂ ಸ್ವಚ್ಛ ಮಾಡಿದ್ದೇನೆ, ಕಾಮ್ರೇಡ್ ಮಾರಿಸ್ಕೋವಾ' ಭೂಭಾರವನ್ನು ತನ್ನ ತಲೆಯ ಮೇಲೇ ಹೊತ್ತು ನಿಂತ ಜವಾಬ್ದಾರಿಯುತ ದನಿಯಲ್ಲಿ ಶ್ರೀಮತಿ ಸೋವಾಕೋವಾ ಹೇಳಿದಳು- 'ನೀನು ನಿನ್ನ ಶಿಕ್ಷಣವನ್ನು ಆರಾಮವಾಗಿ ಮುಂದುವರೆಸಬಹದು.

ಅದೇ ಸಮಯಕ್ಕೆ ಅಲ್ಲಿನ ಉಗ್ರಾಣದ ಉಸ್ತುವಾರಿ ವಹಿಸಿದ್ದ ಜೋಸೆಫ್ ಕಾನಿಚೆಕ್_ಲೆಕ್ಕ ನೋಡಿಕೊಳ್ಳುವ ಸಲುವಾಗಿ ಅಲ್ಲಿಂದ ಬಂದ. ಅವನಿಗೂ ಕಾರ್ಖಾನೆಯ ನಿರ್ದೇಶಕರೇ ವಿಷಯ ತಿಳಿಸಿದ್ದರು.

'ಈಗಾಗಿರೋ ನಷ್ಟನೆಲ್ಲ ಪಟ್ಟಿ ಮಾಡಬೇಕಂತೆ. ಅದನ್ನ- ಏನವನ ಹೆಸ್ರು ?.... ಅವನ ಲೆಕ್ಕಕ್ಕೇ ಬರೀಬೇಕಂತೆ. ಹೋಲಬ್ ಸಾಹೇಬ್ರು ಹೇಳಿದ್ರು ನೀವೇನೂ ಅಳಬೇಡಿ ಸ್ಲಾವ್ಕಾ ಅವರೇ, ಉಗ್ರಾಣದಲ್ಲಿ ಬೇರೆ ಕಪ್ಪು ಹಲಗೆ ಇದೆ.' ಅವನು ಘೋಷಿಸಿದ.

"ಕಾಮ್ರೇಡ್ ಕಾನಿಚೆಕ್.. ನೀನು ಇಷ್ಟ ಬಂದ ಹಾಗೆ ಮಾತಾಡೊಲ್ಲ. ನೀನು ತುಂಬಾ ಒಳ್ಳೆಯವ" ಸ್ಲಾವ್ಕಾ ವಟಗುಟ್ಟಿದಳು.

ಅವಳು ಮರದ ಚೂರುಗಳ ರಾಶಿಯ ಪಕ್ಕದಲ್ಲಿ ನೆಲದ ಮೇಲೆ ಕುಳಿತು, ತನ್ನ ಸುಂದರವಾದ ತಲೆ ಅಲ್ಲಾಡಿಸಿದಳು. ಅವಳಿಗೆ ಆಗತಾನೇ ಒಪ್ಪಿಗೆ ಸಿಕ್ಕಿದ್ದರಿಂದ ಅವಳು ಲಕಟೂಸ್ ಸಂಸಾರವನ್ನು ಸಂದರ್ಶಿಸಿ ತನ್ನ ಹೊಸ ಶಿಕ್ಷಣ ರೀತಿಯನ್ನು ಅವರ ಮೇಲೆ ಪ್ರಯೋಗಿಸಬೇಕಿತ್ತು.

ಇತ್ತ ಹಿರಿ ಗೆಬೋರ್ ಹಾಸಿಗೆಯ ಮೇಲೆ ಮಲಗಿ ಸೂರಿನತ್ತ ನೀಲಿ ಬಣ್ಣದ ಧೂಮ ಸುರಳಿಗಳನ್ನು ಉಗುಳತೊಡಗಿದ್ದ.

'ಅಯ್ !' ಹಿರಿ ಗೆಬೋರನಂದುಕೊಂಡ– 'ಮೂರ್ಖರಲ್ಲಿ ಮೂರ್ಖನೇ ಏಳು–ಕಟ್ಟು ನಿನ್ನ ಸಾಮಾನು, ದುಡಿಯುವ ಕಾರ್ಮಿಕನೇ ಹೀಗೇಕೆ ಸುಮ್ಮನೆ ಬಿದ್ದುಕೊಂಡಿದ್ದೀಯ ?'

ತನ್ನನ್ನು ತಾನೇ ಪ್ರೋತ್ಸಾಹಿಸಿಕೊಳ್ಳುತ್ತಾ ಅವನು ಎದ್ದ. ಲಕಟೂಸ್ ವಂಶದ ಚರ್ಮದ ದೊಡ್ಡ ಸೂಟ್‌ಕೇಸ್ ಹೊರಗೆಳೆದ. ಅದರಲ್ಲಿ ತನ್ನ ಅಂಗಿ, ಸಾಕ್ಸುಗಳು, ಪಿಟೀಲು, ರೇಜರ್, ಸಾಬೂನು, ಭಾನುವಾರಗಳಂದು ತೊಡುವ ಷರಾಯಿ ಎಲ್ಲವನ್ನೂ ತುಂಬಿದ. ಅದರ ಪಕ್ಕದ ಬೀಗ ಕೆಲಸ ಮಾಡದ್ದರಿಂದ ಆ ಸೂಟ್‌ಕೇಸನ್ನು ಹುರಿದಾರದಿಂದ ಭದ್ರವಾಗಿ ಕಟ್ಟಿದ. ನಂತರ ಮರದಲ್ಲಿ ಕೊರೆದು ಮಾಡಿದ್ದ ದೀಗಂಬವನ್ನು ಖಾಲಿಯಿದ್ದ ಕೈನಲ್ಲಿ ಹಿಡಿದು ಹೊರಟೇ ಬಿಟ್ಟ.

ಕಿರಿ ಗೆಬೋರನಿಗಾಗಿ ಸ್ವಲ್ಪ ಆಲೂಗಡ್ಡೆಯ ಹುಳಿಯನ್ನು ಒಲೆಯ ಮೇಲಿರಿಸಿ ತನ್ನ ಪಾಸ್ ಪುಸ್ತಕವನ್ನು ತಲೆದಿಂಬಿನ ಕೆಳಗೆ ಹುದುಗಿಸಿದ. ನಂತರ ಸಣ್ಣ ಮಕ್ಕಳು ಬರೆದುಕೊಳ್ಳಲೆಂದು ಇಟ್ಟಿದ್ದ ಕರಡಿಯ ಚಿತ್ರವಿದ್ದ ಕಾಗದವನ್ನು ತೆಗೆದುಕೊಂಡು, ತನ್ನ ಜೀವನದಲ್ಲಿನ ಮೊದಲ ಪತ್ರ ಬರೆದ.

ಆತ್ಮೀಯ ಗೆಬೋರ್,
ನಾನು ಹೋಗುತ್ತಿದ್ದೇನೆ. ನನಗಾಗಿ ಹುಡುಕಾಡಬೇಡ. ನಾನು ಇಲ್ಲಿ ಇಲ್ಲ. ಇಲ್ಲಿರುವುದೆಲ್ಲವೂ ನಿನ್ನದೇ, ಸೈಕಲ್ ಕೂಡಾ ! ನೀನು ಒಂಟಿಯಾಗಿ ಬೆಳೆಯುತ್ತೀಯ. ಚಿಂತಿಲ್ಲ. ನಾನೂ ಒಂಟಿಯಾಗೇ ಬೆಳೆದೆ. ಬೆಳೆದು ಒಳ್ಳೆಯ ಮನುಷ್ಯನೂ ಆದೆ.

ನಾನು ಮಾಡಿದ್ದಕ್ಕೆ ಶಾಲೆಗೆ ಹಣ ಕಟ್ಟಲು ನನ್ನಿಂದ ಸಾಧ್ಯವಿಲ್ಲ. ಕಟ್ಟುವ ಬಲವೂ ನನಗಿಲ್ಲ. ನಾನು ಏನೇನು ಮುರಿದಿದ್ದೇನೋ ಅದೆಲ್ಲಾ ಮುರಿದ ಹಾಗೆಯೇ.

ಅದು ಬೇರೊಬ್ಬರ ಆಸಕ್ತಿಯ ವಿಷಯ ಅಲ್ಲ. ಹಾಗೆ ಯಾರಾದರೂ ಅದರಲ್ಲಿ ಆಸಕ್ತಿ ತೋರಿದರೆ, ಅವರ ದವಡೆ ಹಲ್ಲು ಉದುರೀತು. ಎಲ್ಲರಿಗೂ ನನ್ನ ವಿಶ್ವಾಸ ತಿಳಿಸು. ಕಾಮ್ರೇಡ್ ಮಾರಿಸ್ಕೋವಾಳಿಗೂ. ಪಾತ್ರೆಯಲ್ಲಿ ಆಲೂಗಡ್ಡೆ ಹುಳಿ ಯಿದೆ. ನಾನು ರುಚಿ ನೋಡಿದ್ದೇನೆ. ಚೆನ್ನಾಗಿದೆ. ನಾನು ಈ ಪತ್ರ ಇಲ್ಲಿಗೇ ನಿಲ್ಲಿಸುತ್ತೇನೆ. ನನ್ನ ಕೈ ನೋಯುತ್ತಿದೆ. ನನ್ನ ಹೃದಯಕ್ಕೂ ನೋವುಂಟಾಗಿದೆ. ಎಲ್ಲಕ್ಕಿಂತ ಮಿಗಿಲಾದದ್ದೆಂದರೆ, ನನ್ನ ಮಗನನ್ನೂ ದಕ್ಕಿಸಿಕೊಳ್ಳಲಾಗದ ಮಾನ ವೀಯ ದುಃಖ ನನ್ನನ್ನು ನೋಯಿಸುತ್ತಿದೆ.

ಅಪ್ಪ.

ಅಲ್ಲಿಂದ ಹಿರಿಗೆಜೋರ್ ಓಸ್ಟ್ರಾವಾದ ದೊಡ್ಡ ಅಂಗಡಿಯಲ್ಲಿ ತನ್ನ ಚಿತ್ರ ನೋಡ ಲು ಹೋದ. ಆ ಚಿತ್ರ ಇನ್ನೂ ಅಲ್ಲೇ ಇತ್ತು. ಅದನ್ನಂಟಿಸಿದ್ದ ಗಾಜನ್ನು ಈಚೆ ಬದಿಯಿಂದ ಚೆನ್ನಾಗಿ ತೊಳೆದಿದ್ದರು. ಅವನ ಕತ್ತಿನ ಟೈ ಮೇಲೆ [illegible] ಕಲ್ಲಿದ್ದ ಟೈಪಿನ್ ಇತ್ತು. ಅವನ ಅಚ್ಚ ಬಿಳಿಯ ಬಣ್ಣದ ಅಂಗಿ ಗಂಜಿಯಿಂದ ಖಡಕ್ಕಾಗಿತ್ತು. ತಲೆಗೂದಲನ್ನು ಆಗಲೇ ಸಣ್ಣದಾಗಿ ಕತ್ತರಿಸಲಾಗಿದ್ದು ಅದಕ್ಕೆ ಅಂದು ಬಳೆದಿದ್ದ ಸುಗಂಧಪೆಣ್ಣೆಯಿಂದಾಗಿ ಅದು ಫಳ ಫಳ ಹೊಳೆಯುತ್ತಿತ್ತು.

ಅದನ್ನು ನೋಡುತ್ತಿದ್ದ ಹಾಗೇ ಹಿರಿಗೆಜೋರನಿಗೆ ನೆನಪಾಯಿತು– 'ಅರೇ ನಾನು ಸುಗಂಧಪೆಣ್ಣೆ ತರುವುದು ಮರೆತೆ' ಎಂದುಕೊಂಡ– ನಂತರ ಅವರಿಬ್ಬರೂ (ಚಿತ್ರದ ಗೆಜೋರ್ ಮತ್ತು ನಿಜಗೆಜೋರ್) ಒಬ್ಬರ ಕಣ್ಣಿನೊಳಗೊಬ್ಬರು ದಿಟ್ಟಿಸಿ ನೋ ಡಿದರು. ನೀಟಾಗಿ ಮುಖಕ್ಷೌರ ಮಾಡಿಕೊಂಡ ಗೆಜೋರ್ ಲಕಟೂಸ್ ಮತ್ತು ಗಡ್ಡಧಾರಿ ಗೆಜೋರ್ ಲಕಟೂಸ್. ಅವರಿಬ್ಬರ ನಡುವೆ ಶುಭ್ರವಾಗಿ ತೊಳೆದಿದ್ದ ಗಾಜಿನ ಗೋಡೆಯೊಂದಿತ್ತಷ್ಟೇ.

'ಅವನೇನು ನಿನ್ನ ತಮ್ಮನೇ ?' ಅಂಗಡಿಯ ಬಾಗಿಲ ಬಳಿ ವಿಚಿತ್ರವಾಗಿ ನಿಂತಿದ್ದ ಹುಡುಗಿ ಕೇಳಿದಳು.

'ಹೌದು. ತಮ್ಮ. ಈಗ ಪ್ರೇಗ್‌ನಲ್ಲಿ ಓದ್ತಾ ಇದ್ದಾನೆ. ಬೇಗನೇ ಇಂಜಿನಿಯರ್ ಆಗ್ತಾನೆ. ಬಹಳ ಪ್ರತಿಭಾವಂತ' ಗೆಜೋರ್ ಉತ್ತರಿಸಿದ.

'ಒಳ್ಳೇ ಸ್ಫುರದ್ರೂಪಿ.... ಅವನಿಗೆ ಮದುವೆ ಆಗಿದ್ಯಾ ?' ಹುಡುಗಿ ಪ್ರಶ್ನಿಸಿದಳು.
'ಮದುವೆ ಆಗಿದೆ. ಅಲ್ಲೇ ಪ್ರೇಗ್‌ನಲ್ಲೇ ಗ್ರಾಮರ್ ಸ್ಕೂಲಿನ ಶಿಕ್ಷಕಿಯೊಬ್ಬಳ

ಜತೆ. ಅವಳು ವಕೀಲರ ಮಗಳು. ಹೆಸರು ಸ್ಲಾವ್ಕಾ ಮಾರಿನ್ಕೋವಾಂತ.' ಹಿರಿಗೆಬೋರ್ ಬೇಗ ಬೇಗ ಹೇಳಿದ.

'ಸ್ಲಾವ್ಕಾ' ನಿಟ್ಟುಸಿರಿನೊಂದಿಗೆ ಒಮ್ಮೆ ಉಸುರಿ ಹುಡುಗಿ ರಸ್ತೆ ದಾಟಿದಳು. ಹಿರಿಗೆಬೋರನ ದೃಷ್ಟಿ ಅವಳನ್ನು ಹಿಂಬಾಲಿಸಿತು. ಅವಳು ಸಣ್ಣಗೆ ನಾಜೂಕಾಗಿದ್ದಳು. ಬಹುಶಃ ಜೀವನ ಪರ್ಯಂತ ಯಾವುದಕ್ಕೋ ಹೆದರಿ ನಡೆಯುತ್ತಿದ್ದಳೆಂದು ಕಾಣಿಸುತ್ತದೆ. ಹಿರಿಗೆಬೋರನಿಗೆ ಕೋಶಿಟ್ಸ್‌ನಲ್ಲಿ ಉರುಳಿ ಬಿದ್ದ ಮನೆಯು ನೆನಪಾಯಿತು. ಎರ್ಜಿಕಾ ಲಕಟೋಸೋವಾ ಆ ಮನೆಯಿಂದಲೇ ಒಂದು ದಿನ ಓಡಿ ಹೋಗಿದ್ದಳು. ಅವಳು ಅರಿಯದೇ ನೇರವಾಗಿ ಮಾರ್ಕೆಟ್ಟಿಗೆ ಓಡಿದ್ದಳು, ಅಲ್ಲಿ ಹಿರಿಗೆಬೋರ್ ಯಾರ ಕಣ್ಣಿಗೂ ಬೀಳದೇ ಅಂಗಡಿಗಳತ್ತ ತನ್ನ ಕಳ್ಳನೋಟ ಬೀರುತ್ತಿದ್ದ.

'ಗೆಬೋರ್ ನನ್ನ ಕೆಮ್ಮಿನಲ್ಲಿ ರಕ್ತ ಬಂತು!' ಅವಳು ಅವನನ್ನುದ್ದೇಶಿಸಿ ಹೇಳಿದ್ದಳು

ನಂತರ ಅವನು ಸ್ಟೇಷನ್‌ಗೆ ಹೋಗಿ ತನ್ನ ಸೂಟ್‌ಕೇಸ್ ಮತ್ತು ದೀಗಂಬವನ್ನು ಲಗೇಜಿಗೆ ಹಾಕಿಸಿದ. ಕೋಶಿಟ್ಸ್‌ಗೆ ಹೊರಡುವ ಎಕ್ಸ್‌ಪ್ರೆಸ್ ಎಷ್ಟು ಹೊತ್ತಿಗೆಂದು ಕೇಳಿ, ಹವಾ ಸೇವನೆಗೆಂದು ಆಚೆ ಹೊರಟು ಬಿಟ್ಟ.

ಲೆವೆಲ್ ಕ್ರಾಸಿಂಗ್ ಬಳಿ ಬಂದು ರೈಲೊಂದು ಹಾದು ಹೋಗುವವರೆಗೂ ಕಾದು ನಿಂತ. ಅದು ಗುಡುಗುತ್ತಾ ಬದಿಯಿಂದ ಸುಲಭವಾಗಿ ಹಾಯ್ದು ಹೋಯಿತು. ರೈಲಿನಲ್ಲಿ ಊಟದ ಮನೆಯಾಗಿದ್ದ ಡಬ್ಬಿ ಕಂಡು ಬಂತು. ಆದರೆ ಅದರ ವೇಗಕ್ಕೆ ಜನರ ಬಿಳಿ ಮತ್ತು ಗುಲಾಬಿ ಮುಖಗಳು ಒಂದರೊಳಗೊಂದು ಬೆರೆತು ಕರಗಿ ಹೋದುವು; ಅವರುಗಳೆಲ್ಲಾ ಆರಾಮವಾಗಿ ಊಟ ಮಾಡುತ್ತಿದ್ದ ದೃಶ್ಯ ಒಂದು ಹೊಳಪಿನಂತೆ ಬಂದು ಮಾಯವಾಯಿತು. ಸ್ಲೀಪರ್ ಕಾರ್‌ಗಳಲ್ಲಿ ಎಳೆದಿದ್ದ ನೀಲಿ ಪರದೆಗಳು ಕೂಡಾ ಒಂದು ವಿಶೇಷ ಹೊಳಪನ್ನು ಹೊಂದಿದ್ದುವು.

ಬೂದು ಮಿಶ್ರಿತ ಹಳದಿ ಬಣ್ಣದ ಹೊಗೆ ಬಹಳ ಹೊತ್ತು ಗಾಳಿಯಲ್ಲಿ ತೇಲಾಡುತ್ತಾ ನಿಧಾನವಾಗಿ ವಾತಾವರಣದಲ್ಲಿ ಲೀನವಾಗುತ್ತಾ ಹೋಗುತ್ತಿದ್ದ ಹಾಗೆ ಗೆಬೋರನಿಗೆ ಪವಾಡವೆಂದು ಕರೆಯಬಹುದಾದಂತಹ ದೃಶ್ಯ ಕಾಣಿಸಿತು. ಈಗಿನ ಪರಿಸ್ಥಿತಿಗನುಸಾರವಾಗಿ ಅದನ್ನು ಪವಾಡವೆನ್ನದೇ ಬೇರೇನೂ ಹೇಳಲೂ ಸಾಧ್ಯವಿಲ್ಲ. ಅಥವಾ ಅದೊಂದು ವಿಶಿಷ್ಟ ಜಿಪ್ಸಿ ಮ್ಯಾಜಿಕ್ ಇರಬೇಕು.

ಹೆದ್ದಾರಿಯ ಆಚೆ ಬದಿಯಲ್ಲಿ ಒಂದು ತೋಪಿತ್ತು. ಗ್ರೀಷ್ಮ ಋತುವಿನ ದುಃಖ ತೋಪನ್ನು ಆವರಿಸಿತ್ತು- ಅನೇಕ ಮರಗಳ ಎಲೆಗಳು ಸುತ್ತಲೂ ಉದುರಿ ಕೊಳೆಯುತ್ತಿದ್ದುವು. ತೋಪು, ತನ್ನ ಬಗ್ಗೆಯೇ ಸುಸ್ತಾಗಿ ಹೋದ ತುಂಬಾ ಹಳೆಯ ಕಾಲದ ಬೆಂಕಿಯಂತೆ. ಹಳದಿ ಬಣ್ಣಕ್ಕೆ ತಿರುಗಿತ್ತು- ಒಂದು ಮರದ ಮೇಲೆ ಕರೀ ಟೋಪಿಯೊಂದು ನೇತಾಡುತ್ತಿತ್ತು. ಆದರದು ಆ ಚಿತ್ರದಲ್ಲೇ ಬೆರೆತುಹೋದಂತೆ ಸಹಜವಾಗಿ ಕಾಣುತ್ತಿತ್ತು.

ಮತ್ತೊಂದು ಮರದಡಿ ಚಿಟಪಟ ಶಬ್ದ ಮಾಡುತ್ತಾ ಸಾಧಾರಣ ಬೆಂಕಿ ಉರಿಯುತ್ತಿತ್ತು. ಟೋಪಿಯ ಮಾಲೀಕ ಬೆಂಕಿಯ ಬದಿಯಲ್ಲಿ ಕುಳಿತಿದ್ದ. ಆತನೂ ಒಬ್ಬ ಜಿಪ್ಸಿ. ಸಾಕಷ್ಟು ಮುದಿಯಾಗಿದ್ದ. ಸಾರಿನ ಕಿಟ್ಲೆಯ ಮೇಲೆ ಆಗಾಗ ಉಫ್ ಎಂದು ಊದುತ್ತಿದ್ದ. ಆವನನ್ನು ನೋಡಿದರೆ ಆತ, ಗಂಭೀರವಾಗಿ ಪ್ರಾರ್ಥಿಸುತ್ತಿದ್ದಂತೆ ಭಾಸವಾಗುತ್ತಿತ್ತು.

ಒಂದು ಸಣಕಲು ಕುದುರೆಮರಿ ಬೆಂಕಿಯ ಬದಿಯಲ್ಲಿ ನಿಂತು ತನ್ನ ಮೈ ಕಾಯಿಸಿಕೊಳ್ಳುತ್ತಿತ್ತು, ಆ ಕುದುರೆಗೂ ಜಿಪ್ಸಿಯ ಕಣ್ಣುಗಳೇ ಇದ್ದುವು. ಹೆದ್ದಾರಿಯ ಅಂಚಿನಲ್ಲೊಂದು ಕಂದು ಬಣ್ಣದ ವ್ಯಾಗನ್ ನಿಂತಿತ್ತು. ಅದರ ಮೇಲೆ ಬಣ್ಣ ಕಳೆದ ಬೂದು ಬಣ್ಣದ ಕ್ಯಾನ್‌ವಾಸನ್ನು ಹರವಲಾಗಿತ್ತು. ಆ ಬಟ್ಟೆಯೂ ರೈಲಿನ ಹೊಗೆಯಿಂದ ಒದ್ದಾಡುತ್ತಿತ್ತು. ಗೆಬೋರನಿಗೆ ಈ ಸಂಪೂರ್ಣ ದೃಶ್ಯ ನೀರಿನ ಮೇಲೆ ಹರಿವ ದೋಣಿಯ ಹಾಗೆ ಸ್ಪಷ್ಟವಾಗಿ ಕಾಣಿಸಿತು.

ಹಿರಿಗೆಬೋರ್ ಆಲೋಚಿಸಿದ- ನಾನು ಹೋಗಿ ಅವನ ಜತೆ ಮಾತಾಡ್ತೇನೆ. ಅವ ನನ್ನ ಏನಾದ್ರೂ ಕೇಳ್ತೇನೆ. ಆದರೆ ಅವನೇ ನಂಜತೆ ಮಾತಾಡೋದಿಲ್ವೇ....

ಸರಿ. ಗೆಬೋರ್ ಅವನ ಬಳಿ ಹೋದ. ಜಿಪ್ಸಿ ಭಾಷೆಯಲ್ಲಿ ಮುದುಕನಿಗೆ ನಮಸ್ಕಾರ ಹೇಳಿದ. ಮುದುಕ ಹಲ್ಲು ಕಿಸಿದ. ಗೆಬೋರನಿಗೊಂದು ಸಿಗರೇಟ್ ಕೊಟ್ಟು ಸುಸಂಸ್ಕೃತನಂತೆ ತಾನೇ ಅದನ್ನು ಬೆಳಗಿಸಿದ.

'ತಾತ, ನೀನು ಒಬ್ನೇ ತಿರುಗಾಡ್ತೀಯೋ ಅಥವಾ ನಿನಗೊಂದು ಗುಂಪಿದೆಯೋ' ಗೆಬೋರ್ ಲಕಟೂಸ್ ಕೇಳಿದ.

'ನಾನು ಒಬ್ನೇ.... ನಾನು ಮತ್ತು ನನ್ನ ಕುದುರೆ.'

'ನಿನ್ನ ಹೆಸರೇನು ? ಈಗ ನೀನೆಲ್ಲಿಗೆ ಹೋಗ್ತಾ ಇದ್ದೀಯ''? ಗೆಬೋರ್ ಕೇಳಿದ

'ನಾನೆಲ್ಲಿ ಹೋಗ್ತಾ ಇದ್ದೀನೀನ್ನೋದು ನಂಗೇನು ಗೊತ್ತು ? ಈಗ ನೀನೆಲ್ಲಿಗೆ ಹೋಗ್ತಾ ಇದ್ದೀಯಾಂತ ನಿಂಗೆ ಗೊತ್ತೇನು ? ಮುಂದೆ ಏನಾಗುತ್ತೇಂತ ಯಾರಿಗಾದ್ರೂ ಗೊತ್ತಿರುತ್ತಾ ? ನನ್ನ ಹೆಸರು ಅಲಡಾರ್ ಅಂತ. ಸ್ವಲ್ಪ ಸಾರು ಕುಡೀತೀಯಾ ?'

'ಹುಂ....' ಹಿರಿಗೆಬೋರ್ ತಲೆಯಾಡಿಸಿದ

ಸಾರು ಮಸಾಲೆ ತುಂಬಿದ್ದು ರುಚಿಕರವಾಗಿತ್ತು. ದನದ ಮಾಂಸದಲ್ಲಿ ಸಾರು ಮಾಡಿದರದು ನಿಜವಾದ ಜಿಪ್ಸಿ ಸಾರು !

'ಅಲಾಡರ್ ನಾನು ತೊಂದ್ರೇಲಿದ್ದೀನಿ' ಹಿರಿಗೆಬೋರ್ ದೈನ್ಯದಿಂದ ಹೇಳಿದ.

'ಯಾರಿಗೆ ತಾನೆ ತೊಂದ್ರೆ ಇಲ್ಲ ? ಈ ಕುದುರೆಗೂ ತೊಂದರೆಗಳಿವೆ.' ಅಲಾಡರ್ ನಿರ್ಲಿಪ್ತವಾಗಿ ಉತ್ತರಿಸಿದ.

'ಇಲ್ಲಿ ಕೇಳು ಅಲಾಡರ್' ಇಲ್ಲೇ ಸ್ಟೇಷನ್‌ನಲ್ಲಿ ನನ್ನ ಸೂಟ್‌ಕೇಸ್ ಇದೆ. ನೀನು ನನ್ನನ್ನು ನಿಂಜತೆ ಕರಕೊಂಡು ಹೋಗ್ತೀಯಾ ? ನಿಂಗೊಬ್ಬ ಮಗ ಬೇಡ್ವೇ ಅಲಾಡರ್?'

ಮುದುಕ ಉತ್ತರಿಸಿದ– 'ಮಗ ಯಾರಿಗೆ ತಾನೇ ಬೇಡ' ನೀನೂ ಬರೋದಾದ್ರೆ ಯಾಕಾಗಬಾರ್ದು ? ಬಾ. ಆದರೆ ಒಂದು ಮಾತು ಈಗ್ಲೇ ಹೇಳ್ತೀನೆ ಗೆಬೋರ್. ಆ ಸೂಟ್‌ಕೇಸ್‌ನಲ್ಲಿ ಏನಿದೆ ? ಅದರಲ್ಲಿ ಅಮೂಲ್ಯವಾದದ್ದೇನಾದರೂ ಇದ್ರೆ ನಾನದನ್ನ ತೆಗೊಂಡು ಓಡಿ ಹೋಗ್ತೇನೆ. ನಂಗೆ ಆ ತುಡಿತ ತಡೆಯೊಕ್ಕೆ ಆಗಲ್ಲ'.

'ಆ ಸೂಟ್‌ಕೇಸನ್ನ ತಂದು ನಿಂಗೇ ಕೊಟ್ಬಿಡ್ತೀನಿ. ಅದರ ಜತೆ ಒಂದು ಅಂದವಾದ ಎಲೆಕ್ಟ್ರಿಕ್ ದೀಗಂಬ ಕೂಡಾ ಇದೆ!'

ಅಲಾಡರ್ ಕರುಣೆಯಿಂದೊಮ್ಮೆ ನಕ್ಕ.

ಹಿರಿಗೆಬೋರ್ ತನ್ನ ಸೂಟ್‌ಕೇಸ್ ತರಲು ಓಡಿದ. ಅದರ ಜತೆಗೆ ವಿದ್ಯುತ್

ನೀಗಂಬವನ್ನೂ ತಂದು ಎರಡನ್ನೂ ಅಲಾಡರ್‌ಗೆ ಕೊಟ್ಟ. ನಂತರ ಕುದುರೆಯ ಲಗಾಮು ಕಟ್ಟಲು ಅವನಿಗೆ ಸಹಾಯ ಮಾಡಿದ.

ಹಣೆಯ ಮೇಲಿದ್ದ ಹಳೆಯ ಸುಕ್ಕೊಂದನ್ನು ಅಲಾಡರ್ ಒಮ್ಮೆ ಸವರಿದ. ನಂತರ ತನ್ನ ಸುತ್ತಲೂ ಒಂದು ಅರಿವೆಯನ್ನು ಸುತ್ತಿಕೊಂಡ; ಅರಿವೆ ಹಳೆಯದಾಗಿತ್ತು. ಆದರಿಂದ ಹೊಗೆಯ ಹಾಗೂ ಕಾಡಿನ ವಾಸನೆ ಹಮ್ಮುತ್ತಿತ್ತು. ಇದ್ದಕ್ಕಿದ್ದಂತೆ ಅಲಾಡರ್ ಬಾಯಿ ಬಡುಕ ಕವಿಯಂತೆ ಕಾಣತೊಡಗಿದ. ಅಲಾಡರ್‌ನಲ್ಲಿದ್ದ ಒಳ್ಳೆಯ ಅಂಶವೆಂದರೆ ಅವನು ತನ್ನನ್ನೇ ನೋಡಿ, ಗೇಲಿ ಮಾಡಿಕೊಂಡು ನಿರಂತರವಾಗಿ ನಗಬಲ್ಲವನಾಗಿದ್ದ.... ಅಥವಾ ಎಲ್ಲರೆದುರಿನಲ್ಲೂ ಹಾಗೆ ತೋರಿಸಿಕೊಳ್ಳುತ್ತಿದ್ದ. ನಗು ಎಂಬುದು ಅವನ ಅರೆಬಿರಿದ ತುಟಿಗಳಿಂದ ನೇರವಾಗಿ ಸ್ಫೋಟಿಸುತ್ತಿತ್ತು.

ವ್ಯಾಗನ್ ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದ ಹಾಗೆ ಹಿರಿಗೆಬೋರ್ ಮಾತನಾಡತೊಡಗಿದ. 'ಅಲಾಡರ್, ಇಲ್ಲಿ ಕೇಳು. ಮನುಷ್ಯನಿಗೆ ಏನು ಮಾಡಬೇಕೆಂಬುದು ತಿಳಿಯದಾದಾಗ ಏನು ಮಾಡಬೇಕು?'

ಅಲಾಡರ್‌ನ ಉತ್ತರ ಸರಳವಾಗಿತ್ತು– 'ನಿನಗೆ ಏನು ಮಾಡಬೇಕೆಂದು ತಿಳಿಯದಿದ್ದಾಗ ಏನೂ ಮಾಡಬೇಡ. ಮೊದಲ ಬಾರಿ ಏನಾದರೂ ಅನ್ನಿಸಿದ್ರೆ ಅದನ್ನ ಮಾಡಬೇಡ. ಎರಡನೇ ಬಾರಿ ಅನಿಸಿದಾಗ.... ಉಹುಂ.... ಸುಮ್ಮನಿದ್ದು ಬಿಡು. ಮೂರನೆಯ ಅನಿಸಿಕೆಯವರೆಗೂ ಏನೂ ಮಾಡದಿರುವುದು ಒಳ್ಳೇದು, ಆ ನಂತರ ಯಾವಾಗಲಾದರೂ....'

'ಅಲಾಡರ್ ನೀನು ಲಕಟೂಸ್ ವಂಶಸ್ಥನೇ ?' ಹಿರಿಗೆಬೋರ್ ಪ್ರಶ್ನಿಸಿದ.

'ಈ ಬಗ್ಗೆ ಅನುಮಾನವೇ ಬೇಡ' ಮುದುಕ ಉತ್ತರಿಸಿ ಚಾವಟಿಯನ್ನು ಒಮ್ಮೆ ರ್ಝಾಡಿಸಿದ.

ನಂತರ ಇದ್ದಕ್ಕಿದ್ದ ಹಾಗೆ ಶೂನ್ಯದಿಂದ ಜಾಯಿಕಾಯಿಯ ವಾಸನೆ ಬಂದಿತು. ನಂತರ ರಾತ್ರಿಯ ನೆರಳು, ಬಿಸಿಲಿನ ತಾಪಕ್ಕೆ ಒಣಗಿದ್ದ ಭೂಮಿಯ ಮೇಲಿನ ಜೆಳೆ ಕಂಡಿತು. ಜೆಕೋಸ್ಲಾವಾಕ್ಯದ ಕಟ್ಟಕಡೆಯ ಅಲೆಮಾರಿ ಶೀವಿಯಿಂದ

ಈ ಸಂಚಿಕೆಯ ಲೇಖಕರು :

* ದಿವಂಗತ ಬಿಟಗೇರಿ ಕೃಷ್ಣಶರ್ಮ, [ಆನಂದಕಂದ]

* ಹೆಚ್. ಎಸ್. ಪಾರ್ವತಿ,
ಕಾರ್ಯಕ್ರಮ ನಿರ್ವಾಹ...,
ಆಕಾಶವಾಣಿ, ಮೈ...-2

* ಡಾ|| ಹೆಚ್. ಎಸ್. ...ಶಮೂರ್ತಿ,
101, ಗಣೇಶಮಂದಿರ
ಎರಡನೇ ಬ್ಲಾಕ್,
ತ್ಯಾಗರಾಜ ನಗರ, ಬೆಂಗಳೂ... 560028

* ಎಂ. ಎಸ್. ಶ್ರೀರಾಮ್,
ನಂ. 3 ನಾಲ್ಕನೇ ಮುಖ್ಯ ರಸ್ತೆ,
ಚಾಮರಾಜಪೇಟೆ – ಬೆಂಗಳೂರು – 560018

ಹೆದ್ದಾರಿಯ ಮೇಲೆ ಪೂರ್ಣಪಿಡಿಗೆ ಸವಾರಿ ಮಾಡಿದ. ಅವನ ಹಸಿರು ಅರಿವೆ ಗಾಳಿಯಲ್ಲಿ ಹಾರಾಡುತ್ತಿತ್ತು.

ಬಹಳ ದೂರ ಹೋದ ನಂತರ ಮುದುಕ ಹಿಂದಿರುಗಿ ನೋಡಿ ಕೂಗಿದ- 'ಮನೆಗೆ ಹೋಗೋ ಗೆಬೋರ್, ಮನೆಗೆ ಹೋಗೊಲೋ ಮೂರ್ಖ'

ಆ ಮುದಿ ಲಕಟೂಸನ ಸೂಟಕೇಸು ವ್ಯಾಗನ್ನಿನಿಂದ ಆಚೆಗೆ ತೇಲಿ ದೊಡ್ಡ ಕಮಾನಿನಾಕಾರದಲ್ಲಿ ಮೇಲೇರಿ ನಂತರ ಕೆಳಜಾರಿ ಬಂದು ಭೂಮಿಯ ಮೇಲೆ ಬಿತು ಆದರೂ ಆ ದೀಗಂಬವನ್ನು ಎಸೆದ್ದು ಆ [illegible]

ಹಿರಿ ಗೆಬೋರ್ ತಲೆಯೆತ್ತಿ ನೋಡಿದ. ಆಗಲೇ ಮಳೆಯ ಹನಿಗಳು ಬೀಳಲು ಪ್ರಾರಂಭವಾಗಿತ್ತು. ಶರತ್ಕಾಲದಲ್ಲಿ ಪ್ರಾರಂಭವಾಗಿ ವಸಂತದವರೆಗೂ ತಡಮಾಡಿ ಒಮ್ಮೊಮ್ಮೆ ಇನ್ನೂ ಹನಿಯುತ್ತಿದ್ದ, ಸಾಧಾರಣ ಮಳೆಗಾಲದ ಮೊದಲ ಹನಿಗಳು ಎನ್ನಬಹುದು.

ಅವನು ಸಂಜೆ ಮನೆಗೆ ಹೋದ. ಮೊದಲಿಗೆ ಕಿಟಕಿಯ ಮೂಲಕ ಇಣುಕಿ ನೋಡಿದ, ಮೇಜಿನ ಮೇಲಿದ್ದ ವೈನ್ ಶೀಷೆಯಲ್ಲಿ ಹಳದಿ ಬಣ್ಣದ ಹೂವೊಂದನ್ನು ಸಿಕ್ಕಿಸಿದ್ದುದು ಕಂಡುಬಂತು.

ಕುರ್ಚಿಯ ಮೇಲೆ ಸ್ಟ್ಯಾನ್ಯಾ ಮಾರಿನ್ಕೋವಾ ನಿದ್ರಿಸುತ್ತಿದ್ದಳು.